1953

ಶಾರದಾ ಪ್ರಕಟಣಾಲಯ
ಬೆಂಗಳೂರು

ಬಸವರಾಜ ಕಟ್ಟೀಮನಿ

ರತಾರಿ ಜಗದ್ಗುರು



ಬಸವರಾಜ ಕಟ್ಟೀಮನಿಯವರ ಕಾದಂಬರಿ

ಜರತಾರಿ ಜಗದ್ಗುರು

My way of joking is to tell the truth.
It is the funniest joke in the world.

— Bernard Shaw

ಮುದ್ರಣ ಮತ್ತು ಪ್ರಕಾಶನ

ಶಾರದಾ ಪ್ರಕಟನಾಲಯ

ಅರಳೇಪೇಟೆ, :: ಬೆಂಗಳೂರು ೨

ಮುಖಚಿತ್ರ :
ಜಿ. ಕೆ. ಮೂರ್ತಿ

ರಕ್ಷಾಪತ್ರದ ಮುದ್ರಣ:
ಶ್ರೀ ರಾಮಕೃಷ್ಣ ಪ್ರೆಸ್

ಬೆಲೆ:
೧ ರೂ. ೮ ಆಣೆ.

ಪ್ರಥಮ ಮುದ್ರಣ: ಜುಲೈ ೧೯೫೪
ದ್ವಿತೀಯ ಮುದ್ರಣ: ಡಿಸೆಂಬರ್ ೧೯೫೫

ಚಂದಾ ವಿವರ:
ಆರು ತಿಂಗಳಿಗೆ: ಐದೂವರೆ ರೂಪಾಯಿ
ಒಂದು ವರ್ಷಕ್ಕೆ: ಹನ್ನೊಂದು ರೂಪಾಯಿ

ಎರಡನೆಯ ಮುದ್ರಣದ ಮುನ್ನುಡಿ

ಎರಡು ವರ್ಷಗಳ ಹಿಂದೆ ಪ್ರಕಟವಾದ ಈ ಕಾದಂಬರಿಯ ಪ್ರತಿಗಳೆಲ್ಲವೂ ಮುಗಿದುಹೋದುದರಿಂದ ಈಗ ಎಗಡನೆಯ ಮುದ್ರಣ ಹೊರಬಿದ್ದಿದೆ. ಈ ವಿಡಂಬನಾತ್ಮಕ ಕಾದಂಬಗಿಯನ್ನು ಉತ್ಸಾಹದಿಂದ ಬರನಾಡಿಕೊಂಡ ಸಹೃದಯರಿಗೆ ನನ್ನ ಧನ್ಯವಾದಗಳು.

ಮಲಾಮರಡಿ
೧೪-೯-೧೯೫೫

ಬಸವರಾಜ ಕಟ್ಟೀಮನಿ

No. 13

ಈ ಲೇಖಕರ ಇತರ ಕೃತಿಗಳು

ಕಾದಂಬರಿ—

ಸ್ವಾತಂತ್ರ್ಯದೆಡೆಗೆ
ಮಾಡಿ ಮಡಿದವರು
ಜ್ವಾಲಾಮುಖಿಯ ಮೇಲೆ
ಮೋಹದ ಬಲೆಯಲ್ಲಿ
ಬೀದಿಯಲ್ಲಿ ಬಿದ್ದವಳು
ಮಣ್ಣು ಮತ್ತು ಹೆಣ್ಣು
ಖಾನಾವಳಿಯ ನೀಲಾ
ನೀ ನನ್ನ ಮುಟ್ಟಬೇಡ
ಜನಿವಾರ ಮತ್ತು ಶಿವದಾರ
ನಾನು ಪೋಲೀಸನಾಗಿದ್ದೆ
ಬಲೆಯ ಬೀಸಿದರು
ಬಂಗಾರದ ಜಿಂಕೆಯ ಹಿಂದೆ
ಗೋವಾದೇವಿ
ಪಾತರಗಿತ್ತಿ
ಬೆಳಗಿನ ಗಾಳಿ

ಕಥಾಸಂಗ್ರಹ—

ಕಾರವಾನ್
ಗುಲಾಬಿ ಹೂ
ಆಗಸ್ಟ್ ಒಂಭತ್ತು
ಸೆರೆಯಿಂದ ಹೊರಗೆ
ಜೋಳದ ಬೆಳೆಯ ನಡುವೆ

ನಾಟಕ—

ಪಟ್ಟಣದ ಹುಡುಗಿ

ಆತ್ಮೀಯ
ಪಾಟೀಲ ಪುಟ್ಟಪ್ಪನವರಿಗೆ

This book is an imaginative representation of Kannada life intended solely as a work of fictiion and all the characters are imaginary. If the names of any actual persons are used, such a coincidence is one of pure accident.

ಜರತಾರಿ ಜಗದ್ಗುರು

ಬರಿಯ ಜಾಳು ಬೋಳರೆಲ್ಲ ಜಂಗಮವೆ?
ವೇಷಧಾರಿಗಳೆಲ್ಲ ಜಂಗಮವೆ?
ಪಾಶಬದ್ಧ ಪಶುಮತದ ವಿವರಗೇಡಿಗಳೆಲ್ಲ ಜಂಗಮವೆ?
ಆಚಾರಭ್ರಷ್ಟರಾದ, ಅನಾಚಾರ ಬದ್ಧರಾದ ಅಪಸ್ಮಾರಿಗಳೆಲ್ಲ ಜಂಗಮವೆ?
ತಾನು ವಿಷಯದೊಳಗೆ ಸಿಕ್ಕಿ, ಅಹಂ ನಾನು ನನ್ನದೆಂದು,
ಮುಂದುವರಿವವರೆಲ್ಲ ಜಂಗಮವೆ?
ನೀತಿಯ ನಿಜವ ಬಿಟ್ಟು, ಸತ್ಯ ಸದಾಚಾರವನೊತ್ತಿ,
ನ್ಯಾಯ ಮಾಡುವವರು ಜಂಗಮವೆ?
ಜಂಗಮ ಜಂಗಮವೆಂದೊಡೆ ನಾಮರೂಪಿಗಳೆಲ್ಲ ಜಂಗಮವೆ?
ನಿಜ ಜಂಗಮವೆಂತೆಂದೊಡೆ ಹೇಳಿಹೆನು ಕೇಳಿರಣ್ಣಾ.
ನಿಜೈಕ್ಯನಾದ ನಿಸ್ಸೀಮನೆ ಜಂಗಮ.
ಅರಿವು, ಆಚಾರ, ಸತ್ಕ್ರಿಯೆಯುಳ್ಳೊಡೆ ಜಂಗಮ.

—ಶ್ರೀ ಚೆನ್ನಬಸವಣ್ಣನವರು

“ಲಿಂಗಮುಂಡಿಗೆಯ ಪಶುವಾನಯ್ಯಾ. ವೇಷಧಾರಿಯಾನಯ್ಯಾ.” —ಶ್ರೀ ಬಸವಣ್ಣನವರು



೧

ಸಿದ್ಧವೀರಸ್ವಾಮಿ

[೧]

ಕಿಟಕಿಯಲ್ಲಿ ನಿಂತು ನೋಡುತ್ತಿದ್ದೆ. ಏನನ್ನು? ಇಂಥದನ್ನೇ ಎಂದು ಹೇಳುವಂತಿಲ್ಲ. ನೋಡುವಂಥದು ಇದೆಯಾದರೂ ಏನು ಈ ನಗರದಲ್ಲಿ? ಮೃತ್ಯುವಿನ ಉಸಿರಿನಂಥ ಬಿಸಿಲು. ಕಾಯ್ದ ಬೀದಿಯಿಂದ ಕ್ಷಣಕ್ಕೊಮ್ಮೆ ಹಾರಿ ಮನೆಗಳಿಗೆ ದಾಳಿಯಿಡುವ ದೂಳಿ. ಕಟ್ಟೆಗಳ ಮೇಲೆ ಹುಕ್ಕಾ ಸೇದುತ್ತ ಕಚಿವಿಚಿ ಹರಟುತ್ತ ಕುಳಿತ ಜನರು. ಅವರ ಚಿತ್ರ ವಿಚಿತ್ರ ಉಡುಗೆ ತೊಡುಗೆ. ನಮ್ಮತ್ತ ಕಡೆಯ ಹಾಗೆ ಸುಂದರವಾದ ಮುಖ ಗಳೇನೂ ಈ ಬೀದಿಗಳಲ್ಲಿ ಕಾಣಿಸುವಂತಿಲ್ಲ. ಮುಖಗಳನ್ನು ನೋಡಬೇಕಾದರೆ **ಆ ಬೀದಿಗೇ ಹೋಗಬೇಕು.**

ಇನ್ನು ಅಲ್ಲಿಗೂ ಹೋಗುವಂತಿಲ್ಲ ನಾನು. ಹೋಗಲು ಸಾಧ್ಯವೂ ಇಲ್ಲ. ಹಾಗೆಯೇ ಬರಿಗೈಯಿಂದ ಹೋದರೆ ಬರಿಗಾಲಿನಿಂದ ಒದೆದು ದಬ್ಬುವ ಜನ ಅದು. ಒಂದು ಸಲ ಅವರ ಪಾದಸ್ಪರ್ಶವನ್ನೂ ಅನುಭವಿಸಿಯಾಯಿತು ನನ್ನ ಬೆನ್ನು. ಅಷ್ಟು ಸಾಕು. ಅಷ್ಟೇ ಸಾಕು.

—ಅಷ್ಟೇ ಸಾಕೇ?

ಹೂಂ, ಸಾಕು ಎಂದೂ ಎನ್ನಿಸುತ್ತದೆ, ಒಮ್ಮೊಮ್ಮೆ. ಇದೆಲ್ಲ ಸಾಕು, ಈ ವೇಶೀನಗರದ ವಾಸ, ವೇಶ್ಯೆಯರ ಸಹವಾಸ, ಈ ವೈದ್ಯಮಾರ್ತಾಂಡ ವೀರರಾಜಾಚಾರ್ಯನ ಸಂಗ, ಅವನ ಈ ಕೊಳಕು ಕೋಣೆಯ ಸಂಬಂಧ, ಈ ದೂಳಿ, ಈ ಬೆಂಕಿಯಂಥ ಬಿಸಿಲು, ಈ ಭೀಕರ ಬೇಗೆ, ಈ ಭಿಕಾರಿತನ, ಈ ನರಳಾಟ – ಎಲ್ಲ ಎಲ್ಲ ಸಾಕು ಎನ್ನಿಸುತ್ತದೆ, ಒಮ್ಮೊಮ್ಮೆ. ಈ ತುಚ್ಛ ಪ್ರಪಂಚದಿಂದ ಬಿಡುಗಡೆ ಹೊಂದಿ ದೂರ ದೂರ ಯಾವುದಾದರೊಂದು ಪರ್ವತಕ್ಕೆ ಹೊರಟುಬಿಡಬೇಕೆಂದೂ ಆಶಿಸುತ್ತದೆ ಮನಸು.

ಇಲ್ಲಿಂದ ಸನಿಹದಲ್ಲೇ ಇದೆ ಹಿಮಾಲಯ ; ಅಷ್ಟೇನೂ ದೂರವಿಲ್ಲ. ಕೈಲಾಸ, ಮಾನಸಸರೋವರ, ಕಾಂಚನಗಂಗಾ, ಗೌರೀಶಂಕರ. ಮೋಡ ಗಳಿಲ್ಲದ ಆಕಾಶದಲ್ಲಿ ಬಹಳ ಎತ್ತರದಲ್ಲಿ ಹಾರಾಡುತ್ತಿರುವ ಹಕ್ಕಿಯೊಂದನ್ನು ಕಂಡಾಗಲೆಲ್ಲ ನನ್ನ ಮನಸೂ ಅದರ ಹಾಗೇ ಎತ್ತರದಲ್ಲಿ ಹಾರಬೇಕೆಂದು

ಬಯಸುತ್ತದೆ. ಟ್ರಂಕಿನಲ್ಲಿರುವ ಕಾವಿಬಟ್ಟೆಗಳನ್ನು ತೆಗೆದು ಮತ್ತೆ ಧರಿಸಿಕೊಂಡು ಬೆಟ್ಟಗಳಿಗೆ ಹೊರಟುಬಿಡೋಣವೇ ಎಂದೂ ಯೋಚನೆ ಬರುತ್ತದೆ.

ಯೋಚನೆ ಬರುವುದೆಷ್ಟೊ ಅಷ್ಟೆ. ಆಕಾಶದಲ್ಲಿ ಸುಮ್ಮನೆ ಮೋಡ ಕವಿದು ಮತ್ತೆ ಮಾಯವಾಗುವ ಹಾಗೆ. ಕೇವಲ ಯೋಚನೆಯೆ; ಕೃತಿಗಿಳಿಯುವುದಿಲ್ಲ. ಐದು ನಿಮಿಷಗಳಲ್ಲಿಯೆ ಮನಸು ಬಣ್ಣ ಬದಲಾಯಿಸುತ್ತದೆ. ಹಿಮಾಲಯ, ಅಲ್ಲಿನ ಕಟು ಚಳಿ, ಜನಶೂನ್ಯ ಏಕಾಂತವಾಸ, ಗಡ್ಡೆ ಗೆಣಸುಗಳ ಆಹಾರ, ಒರಟು ಜೀವನ....ಎದೆ ನಡಗುತ್ತದೆ. ಇದೆಲ್ಲವನ್ನೂ ಸಹಿಸುವುದು ಸಾಧ್ಯವೇ ನನ್ನಿಂದ? ನನ್ನಂಥವನಿಂದ? ತೀರ ಬಡತನದಲ್ಲಿ ಬೆಳೆದವನಾದರೂ ಹೇಗೋ ಏನೋ ಸುಖವಾಗಿ ಬದುಕಿದವ ನಾನು. ಎಲ್ಲಿಂದಲೋ ದುಡ್ಡು ಸಿಗುತ್ತಿತ್ತು, ಹೇಗೂ ನೆಮ್ಮದಿಯಿಂದ ಬದುಕು ಸಾಗುತ್ತಿತ್ತು. ಒಂದು ಸಲವೂ ಕಷ್ಟಪಟ್ಟವನಲ್ಲ, ಬೆವರಿಳಿಸಿ ದುಡಿದವನಲ್ಲ, ತೊಂದರೆಗಳನ್ನೆದುರಿಸಿದವನಲ್ಲ. ಹಚ್ಚಗೆ ಮೇಯ್ದು ಬೆಚ್ಚಗೆ ಮಲಗಿದ ಭಾಗ್ಯಶಾಲಿ ನಾನು. ನನ್ನಂಥ ಸುಖಜೀವಿ ಹಿಮಾಲಯಕ್ಕೆ? ಛೆ. ಛೆ. ಎಂಥ ಮಾತು....ಅಶಕ್ಯ. ಅಸಾಧ್ಯ. ಅಸಹಜ—ಎಂದೂ ಎನ್ನಿಸುತ್ತದೆ.

ಮರುಕ್ಷಣವೆ ಆ ಕೋಣೆಯನ್ನು ಕಂಡು ಮತ್ತೆ ಮನಸು ಹೇಸಿಕೊಳ್ಳುತ್ತದೆ. ಇಲ್ಲಿಯ ಕಸ! ಕಿಟಕಿಯಿಂದ ಗಾಳಿ ನುಗ್ಗಿ ಬಂದಾಗಲೆಲ್ಲ ಇಲ್ಲಿ ಬಿರುಗಾಳಿಯೆ ಬೀಸಿದಂತಾಗುತ್ತದೆ. ವೀರಯ್ಯನಿಗೆ ಅದರ ಕಡೆ ಗಮನವೇ ಇರುವುದಿಲ್ಲ. ನಾನಾದರೂ ಕಸ ಗುಡಿಸೋಣವೇ ಎಂದರೆ ನನ್ನ ಮನಸೂ ಒಪ್ಪದು. ಹುಟ್ಟಿದಂದಿನಿಂದ ಇದುವರೆಗೆ ಒಮ್ಮೆಯೂ ಕಸಬರಿಕೆಯನ್ನು ಕೈಯಲ್ಲಿ ಹಿಡಿದವನಲ್ಲ ನಾನು. ಇನ್ನು, ಈಗ ಈ ವೀರಯ್ಯನ ಕೋಣೆಯನ್ನು ಗುಡಿಸುವುದಾದರೂ ಹೇಗೆ? ಈ ಕೊಳೆ, ಈ ತಿಗಣೆಗಳು, ಹರಕು ಚಾಪೆಗಳು, ಹೊಲಸು ನಾರುವ ಜಮಖಾನ ಚಾದರಗಳು, ಎಣ್ಣೆ ತಿಂದು ಕಮಟಿದ ತಲೆದಿಂಬುಗಳು, ಉತ್ತರ ದಿಕ್ಕಿನ ಗೋಡೆಗಿರುವ ಹಲಗೆಯ ಮೇಲೆ ದೂಳಿಯಲ್ಲಿ ಮುಖ ಮುಚ್ಚಿಕೊಂಡು ಕುಳಿತಿರುವ ಸೀಸೆಗಳು! ಇವನೊಬ್ಬ ವೈದ್ಯ. ವೈದ್ಯಮಾರ್ತಾಂಡ! ಮಾರ್ತಾಂಡನೂ ನಾಚಿಕೊಳ್ಳಬೇಕು ಇವನ ಪ್ರತಾಪವನ್ನು ಕಂಡು. ಯಾವ ಸಾಲೆಯಲ್ಲಾಗಲಿ ಕಾಲೇಜಿನಲ್ಲಾಗಲಿ ಈತ ವೈದ್ಯಕಿಯನ್ನು ಕಲಿಯಲಿಲ್ಲ. ಇವನಿಗೆ ಈ ಪದವಿಯನ್ನೂ ಯಾರೂ ಕೊಡಲಿಲ್ಲ. ಯಾವುದೋ ಹಳೆಯ ಆಯುರ್ವೇದ ಗ್ರಂಥವನ್ನು ಅಲ್ಲಿ ಇಲ್ಲಿ ತಿರುವಿಹಾಕಿ ಸಣ್ಣ ಪುಟ್ಟ

ಔಷಧ ತಯಾರಿಸಲು ಕಲಿತುಕೊಂಡ; 'ಜ್ವರಮಾಲಿ', 'ಪಿಡುಗುಹಾರಿ' ಮಾತ್ರೆಗಳನ್ನು ತಯಾರಿಸಿ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟ. ಅದರ ಖರ್ಚೂ ಹುಟ್ಟಲಿಲ್ಲ, ಈ ವೈದ್ಯ ಮಾರ್ತಾಂಡನ ಹತ್ತಿರ ಯಾರೂ ಸುಳಿಯಲಿಲ್ಲ. ಸರಿ. ಇನ್ನೇನು ಮಾಡಬೇಕು? ಉದರಂಭರಣಕ್ಕಾಗಿ ಏನಾದರೊಂದು ಸೋಗು ಹಾಕಲೇಬೇಕಲ್ಲ? ವೀರ್ಯವರ್ಧಕ 'ಪೌರುಷವೀರ', ಮೇಹನಾಶಕ 'ಪರಮಾಕುಠಾರ'ಗಳನ್ನು ತಯಾರಿಸುವ ಧನ್ವಂತರಿಯಾದ ನಮ್ಮ ವೀರಯ್ಯ!

ಇಂದು ಆತ ವೀರಯ್ಯನಲ್ಲ. ನನಗೊಬ್ಬನಿಗೆ ಮಾತ್ರ ವೀರಯ್ಯ, ಅಷ್ಟೆ. ಇನ್ನಿತರರಿಗೆಲ್ಲ ವೈದ್ಯಮಾರ್ತಾಂಡ ವೀರರಾಜಾಚಾರ್ಯ ಆತ. ದಕ್ಷಿಣ ಭಾರತದಲ್ಲೆಲ್ಲ ಆತನ ಕೀರ್ತಿಯೇ ಕೀರ್ತಿ. ಅಲ್ಲಿನ ದಿನಪತ್ರಿಕೆಗಳಲ್ಲೆಲ್ಲ ಇವನ 'ಸಂತಾನ ಸಂಪದ್', 'ಪೌರುಷವೀರ' 'ಪರಮಾಕುಠಾರ', 'ಸಂತಾನ ಬಂದ್'ಗಳ ಜಾಹೀರಾತು ಪ್ರಕಟವಾಗುತ್ತದೆ. ದಿನವೂ ಒಂದೆರಡು ಆರ್ಡರುಗಳೂ ಬರುತ್ತವೆ, ಹತ್ತು ಹನ್ನೆರಡು ರೂಪಾಯಿಗಳೂ ದೊರೆಯುತ್ತವೆ. ಜಾಹೀರಾತಿನ ಖರ್ಚು ಹೋದರೂ ತಿಂಗಳಿಗೆ ನೂರಿನ್ನೂರು ರೂಪಾಯಿ ಸಹಜವಾಗಿ ಉಳಿಯುತ್ತವೆ. ಅಷ್ಟರಲ್ಲಿಯೆ ಸುಖದಿಂದ ಇರಬಹುದು ವೀರಯ್ಯ, ಅಷ್ಟಿಷ್ಟು ಹಣವನ್ನೂ ಉಳಿಸಬಹುದು.

ಹಣ ಉಳಿಸುವುದು? ಅವನಿಂದ ಅದೊಂದು ಮಾತ್ರ ಅಸಾಧ್ಯ. ಗುರುವಿನಂತೆ ಶಿಷ್ಯ; ನನ್ನಂತೆ ವೀರಯ್ಯ. ಯಾವ ದುಷ್ಟ ಗಳಿಗೆಯಲ್ಲಿ ಆತ ನನ್ನ ದೋಸ್ತಿ ಮಾಡಿದನೋ ಏನೊ, ನನ್ನ ಸುಗುಣಗಳೆಲ್ಲಾ ಆತನಿಗೂ ಅಂಟಿಕೊಂಡುವು. ಆತನೂ ನನ್ನಂತೆಯೆ ಆಗಿಬಿಟ್ಟ. ಎಷ್ಟು ಹಣ ಕೈಗೆ ಬಂದರೂ ಬಂದಂತೆಯೆ ಹೊರಟುಹೋಗುವುದು; ಒಂದು ಕಾಸೂ ಉಳಿಯುವುದಿಲ್ಲ. ನನ್ನಲ್ಲೂ ಉಳಿಯುವುದಿಲ್ಲ, ಅವನಲ್ಲೂ ಉಳಿಯುವುದಿಲ್ಲ.

ವೈದ್ಯಕಿಯ ಜತೆಯಲ್ಲೇ ವೀರಯ್ಯ ಪಂಡಾ ಕೆಲಸವನ್ನೂ ಮಾಡುತ್ತಾನೆ. ಉತ್ತರ ಹಿಂದೂಸ್ಥಾನದ ದೊಡ್ಡ ಪವಿತ್ರ ಕ್ಷೇತ್ರವಲ್ಲವೆ, ಈ ವೇಶೀ ನಗರ? ಇಲ್ಲಿನ ದೇವರುಗಳ ಗೊಂಬೆಗಳನ್ನು ಕಂಡು, ಇಲ್ಲಿನ ಹೊಳೆಯ ರಾಡಿನೀರಲ್ಲಿ ಮುಳುಗಿ ಪಾಪ ಕಳೆದುಕೊಂಡು ಪುಣ್ಯ ಗಳಿಸಲೆಂದು ಇಲ್ಲಿಗೆ ಬರುವ ಯಾತ್ರಿಕರನ್ನು ರೈಲು ನಿಲ್ದಾಣದಲ್ಲಿಯೆ ಸಂಧಿಸಿ ಅವರನ್ನು ತನ್ನೀ ಮನೆಗೆ ಕರೆದು ತಂದು ಪಕ್ಕದ ಕೋಣೆಗಳಲ್ಲಿ ಬಿಡಾರ ಮಾಡಿಸುತ್ತಾನೆ. ಒಂದು ಕೋಣೆಗೆ ಒಂದು ದಿನಕ್ಕೆ ಐದು ರೂಪಾಯಿ ಬಾಡಿಗೆಯನ್ನೂ

ಕೇಳುತ್ತಾನೆ. ದಿನಕ್ಕೊಂದು ದೇವರ ಗುಡಿಗೆ ಕರೆದೊಯ್ಯುವುದು, ಪೂಜೆ ಮಾಡಿಸುವುದು, ಕಾಣಿಕೆ ವಸೂಲು ಮಾಡುವುದು, ಅವರಿಗಾಗಿ ಕೊಂಡ ಅಕ್ಕಿ ಬೇಳೆ ಕಾಯಿಗಳಲ್ಲಿ ಅಷ್ಟಿಷ್ಟು ಉಳಿಸಿಕೊಳ್ಳುವುದು. ಈ ವ್ಯವಹಾರ ದಲ್ಲೂ ಸಾಕಷ್ಟು ಲಾಭವಾಗುತ್ತದೆ. ಈ ಹಣವನ್ನೆಲ್ಲ ಉಳಿಸಿದ್ದರೆ ಈ ಮನೆಯನ್ನೇ ಕೊಂಡುಕೊಳ್ಳಬಹುದಾಗಿತ್ತು ವೀರಯ್ಯ. ಆದರೆ – ಮುಖ್ಯ ವಾಗಿ ಆತನಲ್ಲಿ ಉಳಿಸುವ ಗುಣವಿಲ್ಲ.

ಹೆಂಡಿರು ಮಕ್ಕಳನ್ನು ಕರೆದು ತರದೆ ಒಂಟಿಗರಾಗಿ ಬಂದ ಗೃಹಸ್ಥರ ಬೇಸರವನ್ನು ನೀಗಿಸಿ ಅವರ ವೇಶೀವಾಸ ಸುಖದಾಯಕವಾಗುವಂತೆ ಮಾಡಲೂ ವೀರಯ್ಯ ನೆರವಾಗುತ್ತಾನೆ. ವೇಶ್ಯೆಯರ ಬೀದಿಯಲ್ಲಿ ಎಲ್ಲ ನಾರಿಯರೂ ಆತನಿಗೆ ಪರಿಚಿತರೇ. ಈ ಗೃಹಸ್ಥರನ್ನು ಅಲ್ಲಿಗೆ ಕರೆದೊಯ್ದು ಬಿಟ್ಟು ಅದರಲ್ಲೂ ಅಲ್ಪ ಸ್ವಲ್ಪ ಕಮಿಷನ್ ಗಿಟ್ಟಸುತ್ತಾನೆ. ಪಾಪ, ಅದೂ ಅವನಿಗೆ ದಕ್ಕುವುದಿಲ್ಲ. ಆ ಬೀದಿಯಲ್ಲಿ ದೊರೆತದ್ದು ಆ ಬೀದಿಯವರಿಗೇ ಹೊರಟು ಹೋಗುತ್ತದೆ. ಇವನ ಕಾಯಂ ಪ್ರೇಯಸಿ ಆ ನೀರಬಾಲಾ – ಅದೊಂದು ಧನಪಿಶಾಚಿ. ಇವನ ಕಿಸೆಯಲ್ಲಿ ಒಂದು ಕಾಸನ್ನೂ ಬಿಡದೆ ಸುಲಿಯುತ್ತಾಳೆ. ಅವಳ ಪಕ್ಕದ ಮನೆಯ ಜಹಾನಾರಾ ನನ್ನನ್ನು ಸುಲಿದ ಹಾಗೆ. ಸುಲಿಯು ವುದೇ ಅವರ ವ್ಯವಸಾಯಧರ್ಮ. ಅವರಾದರೂ ಏಕೆ ಬಿಟ್ಟಾರು?

ಶಿ ಶಿ ಶ್ಶಿ....ಏನು ದೂಳಿ! ಏನು ಗಾಳಿ....ಏನು ಬೇಗೆ. ಒಂದು ಬೀಸಣಿಗೆಯೂ ಇಲ್ಲ ಈ ಹಾಳು ಕೋಣೆಯಲ್ಲಿ. ಟವಲಿನಿಂದಲೇ ಗಾಳಿ ಹಾಕಿ ಕೊಳ್ಳಬೇಕು. ಶಿವನ ಜಡೆಯಿಂದುರುಳುವ ಗಂಗೆಯಂತೆ ತಲೆಯಿಂದ ಬೆವರು ಸುರಿಯುತ್ತಾ ಇದೆ. ಮಲಗಿಕೊಂಡು ಒಂದು ನಿದ್ದೆ ತೆಗೆಯೋಣವೆಂದರೆ ನೊಣಗಳ ಕಾಟ, ತಿಗಣೆಗಳ ಉಪಟಳ. ಕುಳಿತುಕೊಂಡರೆ ಮಾಡ್ಲಲು ಕೆಲಸವಿಲ್ಲ. ಕಿಟಕಿಯಲ್ಲಿ ನಿಂತುಕೊಂಡರೆ ದೂಳಿ. ಸಾಕಪ್ಪ, ಸಾಕಾಗಿ ಹೋಯಿತು. ಈ ಜನ್ಮ. ಜಹಾನಾರಳ ಮನೆಗೆ ಹೋಗಿ ಅವಳ ಮಂಚದ ಮೇಲೆ ಮಲಗಿ ನಿದ್ದೆ ತೆಗೆಯಬಹುದು. ಆದರೆ ಎಂಟು ದಿನ ಕಳೆಯಿತು. ಕಿಸೆ ಖಾಲಿ. ಟ್ರಂಕಿನಲ್ಲಿನ ಹಣವೆಲ್ಲ ತೀರಿದೆ. ಇನ್ನು ಜಹಾನಾರಳ ಮಂಚ ವನ್ನು ಕನಸಿನಲ್ಲೇ ಕಾಣಬೇಕು, ಅಷ್ಟೆ.

ಕನಸು....ಹಗಲುಗನಸು....

ಬಾಗಿಲು ತೆರೆಯಲಾಯಿತು. ಬಂದ ನಮ್ಮ ವೈದ್ಯ ಮಾರ್ತಾಂಡ. ನಗು

ನಗುತ್ತ ಬರುತ್ತಿದ್ದಾನೆ....ದಿನಕ್ಕಿಂತಲೂ ಹೆಚ್ಚಾಗಿಯೇ ನಗುತ್ತಿದಾನೆ. ಅಂಥ ದೇನಾದರೂ ವಿಶೇಷ ಕಾರಣವಿದೆಯೇನೋ....

"ಏನು ವೀರೂ, ಏನು ಬಹಳ ಸಂತೋಷ?"

ಆತ ಕಣ್ಣುಗಳನ್ನರಳಿಸಿದ, ಗುಬ್ಬಿಯ ಚಂಚುವಿನಂತೆ ಬಾಯಿ ಸಂಕುಚಿತಗೊಳಿಸಿ 'ಚ್ ಚ್' ಎಂದ. ಅದೊಂದು ದುರಭ್ಯಾಸ ಅವನದು; ಬಾಯಿ ಸಂಕುಚಿತಗೊಳಿಸುವುದು, 'ಚ್ ಚ್' ಎನ್ನುವುದು.

"ಭಾರಿ ಸಾವುಕಾರರೊಬ್ಬರು ಬಂದಾರೆ, ಇದೇ ಈಗ. ಕರಡೆಪ್ಪ ಸೆಟ್ಟರು ಅಂತ. ಗಟ್ಟಿಯಾಗಿ ಮಾತಾಡುವಂತಿಲ್ಲ."

"ಎಲ್ಲಿದಾರೆ ವೀರೂ? ಇಲ್ಲಿಗೇ ಕರೆದು ತಂದೆಯಾ?"

"ಬೆಳಗ್ಗೆ ಎದ್ದು ಯಾರ ಮುಖ ನೋಡಿದ್ದೆನೋ ಏನೊ. ಸ್ಟೇಶನ್ನಿಗೆ ಹೋಗುತ್ತಲೂ ಇವರ ಭೆಟ್ಟಿಯಾಯ್ತು."

"ಬೆಳಗ್ಗೆಯೆ? ಇನ್ನಾರ ಮುಖ ನೋಡುವುದು ನೀನು? ಇದಾಳಲ್ಲ ನಿನ್ನ ಆ ರಂಭೆ—ಆ ನೀರಬಾಲಾ...."

ವೀರಯ್ಯ ಮತ್ತೆ 'ಚ್ ಚ್' ಎಂದ. ಭುಜದ ಮೇಲಿನ ಟವಲನ್ನು ತೆಗೆದು, ಮುಖದ ಮೇಲಿನ ಬೆವರನ್ನೆಲ್ಲ ಒರೆಸಿಕೊಂಡ.

"ಅವರಲ್ಲಿ ಇರುವವರೆಗೆ ಯಾವ ಬಾಲಾ ಹೆಸರೂ ಎತ್ತುವಂತಿಲ್ಲ ಸ್ವಾಮಿ. ಸೆಟ್ಟರು ಬಹಳ ಸನಾತನ ಪ್ರವೃತ್ತಿಯವರು. ನಾನು ಒಳ್ಳೆಯವನೆಂದು ನಂಬಿ ಬಂದಿದ್ದಾರೆ. ಅಲ್ಲದೆ ಅವರ ಜತೆಯಲ್ಲಿ...."

"ಹೆಂಡಿರು ಮಕ್ಕಳೂ ಇರಬಹುದು?"

"ಸೆಟ್ಟರಿಗೆ ಮಕ್ಕಳಿಲ್ಲವಂತೆ."

"ಹೆಂಡತಿಯಂತೂ ಇದಾಳೆ ತಾನೆ?"

"ಇದಾಳೆ ನಾರಾಯರೆ. ಅವಳೇ ಬಂದಾಳೆ ಜತೆಗೆ."

"ಒಬ್ಬಳೇ?"

"ಇನ್ನಾರು ಬರಬೇಕು? ಗಂಡ ಹೆಂಡತಿ ಇಬ್ಬರೇ ಬಂದಾರೆ."

"ಅವರು ಯಾವೂರವರಂತೆ ವೀರೂ?"

"ಊರ ಸುದ್ದಿ ನಾನಿನ್ನೂ ಸರಿಯಾಗಿ ಕೇಳಲಿಲ್ಲ. ಅಂತೂ ನಮ್ಮ ಕಡೆಯವರು, ವ್ಯಾಪಾರಸ್ಥರು, ದೊಡ್ಡ ಶ್ರೀಮಂತರು ಅನ್ನುವದಂತೂ ನೋಡಿದ ಕೂಡಲೆ ಗೊತ್ತಾಗುತ್ತದೆ. ಪ್ರಯಾಗ, ದಿಲ್ಲಿ, ಆಗ್ರಾ, ಗಯಾ ಎಲ್ಲಾ ನೋಡಿ

ಕೊಂಡು ಬಂದರಂತೆ. ಕರಡೆಪ್ಪ ಸೆಟ್ಟರಿಗೆ ಈ ಕಡೆಯ ಹವೆ ಸರಿಹೋಗಿಲ್ಲ. ಹುಗುಳು ನೆಗಡಿ ಆಗಿ ಸ್ವಲ್ಪ ಜ್ವರ ಬರುತ್ತಾ ಇದೆ. ಔಷಧ ಒಯ್ದು ಕೊಡ ಬೇಕು," ಎಂದು ನುಡಿದು ವೀರಯ್ಯ ಸೀಸೆಗಳ ಮೇಲಿನ ದೂಳಿಯನ್ನು ಹಾರಿಸ ತೊಡಗಿದ.

ನನಗೆ ನಗು ಬಂದಿತು. ಬರದೆ ಇರುತ್ತದೆಯೆ? ವೀರಯ್ಯನ ಔಷಧಗಳ ವಿಷಯ ಹೊರಟಾಗಲೆಲ್ಲ ನನಗೆ ನಗು ಬಂದೇ ಬರುತ್ತದೆ.

"ಹಾಗೆಲ್ಲ ಗಟ್ಟಿಯಾಗಿ ನಗಬೇಡಿ ಸ್ವಾಮಿಾ."

"ಇಲ್ಲ ಮಾರಾಯಾ," ಎಂದು ನಾನೇನೋ ಹೇಳಿದೆ. ಆದರೂ ನಗುವನ್ನು ತಡೆಯಲಾಗಲಿಲ್ಲ.

"ಈ ಮಾತ್ರೆಗಳಿಂದ ಅವರ ಜ್ವರ ಇಳಿಯುವದೋ, ಬೆಳೆಯುವದೋ, ವೀರೂ?"

ಸೀಸೆಯೊಂದರಿಂದ ಮಾತ್ರೆಗಳನ್ನು ತೆಗೆದು ಕಾಗದದಲ್ಲಿ ಹಾಕುತ್ತ ವೀರಯ್ಯನೆಂದ:

"ನೀವು ಹಾಗೆಲ್ಲ ನನ್ನನ್ನು ವೀರೂ ಅಂತ ಕರೆಯಬೇಡಿ ಸ್ವಾಮಿಾ. ಅವರೆಲ್ಲಾದರೂ ಕೇಳಿಸಿಕೊಂಡರೆ?"

"ಏನಾಗುತ್ತದೆ?"

"ನಾನು ದೊಡ್ಡ ಪಂಡಿತ, ಪ್ರಸಿದ್ಧ ವೈದ್ಯ ಎಂದೆಲ್ಲಾ ಅವರೆದುರಿಗೆ ಕೊಚ್ಚಿಕೊಂಡಿದ್ದೇನೆ. ನೀವು ಹೀಗೆ ಹಗುರವಾಗಿ ನನ್ನನ್ನು ಕರೆದರೆ...." ಎಂದು ನೊಂದ ದನಿಯಲ್ಲಿ ನುಡಿದ ವೀರಯ್ಯ.

"ಇರಲಿ ಬಿಡು ವೀರಯ್ಯ. ಇನ್ನು ನಿನ್ನನ್ನು ಪಂಡಿತಜಿ ಎಂದೇ ಕರೆದರಾಯಿತು," ಎಂದು ನಾನೂ ಕೊಂಚ ನೊಂದುಕೊಂಡೇ ಹೇಳಿದೆ.

ಸೀಸೆಯನ್ನು ಮತ್ತೆ ಅದರ ಸ್ಥಾನದಲ್ಲಿಟ್ಟು, ಕಾಗದದ ಪುಡಿಕೆಯನ್ನು ಹಿಡಿದುಕೊಂಡು ವೀರಯ್ಯ ಅವಸರದಿಂದ ಹೊರಟು ಹೋದ. ನನಗೂ ಕುತೂಹಲವನ್ನು ತಡೆಯಲಾಗಲಿಲ್ಲ. ಮೆಲ್ಲಗೆ ಹೆಜ್ಜೆಯಿಡುತ್ತ ಕೋಣೆಯಿಂದ ಹೊರಬಿದ್ದು ಪಕ್ಕದ ಕೋಣೆಯ ಮುಂದೆ ಹಾದುಹೋದೆ. ಅರ್ಧ ತೆರೆದಿದ್ದ ಬಾಗಿಲಿನಿಂದ ಒಳಗಿನ ದೃಶ್ಯವೆಲ್ಲ ಕಾಣುವಂತಿತ್ತು.

ನಮ್ಮ ಕೋಣೆಗಿಂತ ಕೊಂಚ ದೊಡ್ಡದೇ ಆದ ಕೋಣೆ ಅದು. ಅದಕ್ಕೆ ಹೊಂದಿಕೊಂಡು ಹಿಂಭಾಗದಲ್ಲಿ ಅಡುಗೆಮನೆ, ಬಚ್ಚಲುಮನೆಗಳೂ ಇವೆ.

ಮುಂದಿನ ಕೋಣೆಯಲ್ಲಿ ಎರಡು ಸ್ಪ್ರಿಂಗ್ ಕಾಟುಗಳು, ಮೆತ್ತೆಯ ಗಾದಿ, ತಲೆದಿಂಬು, ಒಂದು ಹಳೆಯ ಕಾಲದ ಮೇಜು, ಎರಡು ಕಬ್ಬಿಣದ ಕುರ್ಚಿ ಇವೆ. ಬಾಗಿಲ ಬಳಿ ನಾನು ಸುಳಿದಾಗ ಒಂದು ಮಂಚದ ಮೇಲೆ ಇಳಿ ವಯಸ್ಸಿನ ವ್ಯಕ್ತಿಯೊಂದು ಕಾಲುಗಳೆರಡನ್ನೂ ಉದ್ದವಾಗಿ ಚಾಚಿ, ತಲೆದಿಂಬು ಗಳಿಗೊರಗಿ ಕುಳಿತುಕೊಂಡಿದ್ದುದು ಕಾಣಿಸಿತು. ಕಪ್ಪುಬಣ್ಣದ ಮುಖದ ಮೇಲೆ ನರೆತ ಕೂದಲು, ಒಳಸೇರಿದ ಕಣ್ಣು, ಸಣ್ಣ ಬದನೇಕಾಯಿಯಂಥ ಮೂಗು, ದಪ್ಪ ತುಟಿ, ಒಣಗಿದ ಕಟ್ಟಿಗೆಯಂಥ ಕೈ – ಕಾಲು; ಅವರೇ ಸೆಟ್ಟಿ ರೆಂಬುದು ಸ್ಪಷ್ಟವಾಯಿತು.

ಹತ್ತಿರದಲ್ಲಿದ್ದ ಇನ್ನೊಂದು ಮಂಚದ ಮೇಲೆ ಕುಳಿತು ಟವಲಿನಿಂದ ಮುಖವನ್ನೊರೆಸುವುದರಲ್ಲಿ ತೊಡಗಿದ್ದವಳೇ ಅವರ ಹೆಂಡತಿಯಾಗಿರಬೇಕೆಂದು ತಿಳಿದುಕೊಂಡೆ. ಒಂದು ಪಕ್ಕಕ್ಕೆ ತಿರುಗಿ ಕುಳಿತಿದ್ದಳಾದುದರಿಂದ ಅವಳ ರೂಪವನ್ನೆಲ್ಲ ಕಂಡುಕೊಳ್ಳಲಾಗಲಿಲ್ಲ. ಒಂದು ಭಾಗದ ನೋಟವಷ್ಟೆ ಕಾಣಿಸಿತು. ಗೌರವರ್ಣ, ತುಂಬಿದ ಮೈ, ಹೊಳೆಯುವ ತೋಳು, ಕೊಂಚ ಉದ್ದವಾದುದೇ ಆದ ಮೂಗು, ಕೊಂಚ ದಪ್ಪಗಿನದೇ ಆದ ತುಟಿ, ಕೊಂಚ ವಿಶಾಲವಾದ ಕಣ್ಣು, ಉದ್ದುದ್ದ ಕಣ್ಣೆವೆಗಳು, ತೆಳ್ಳಗೆ ಗೆರೆಯಂತಿದ್ದ ಹುಬ್ಬು, ದಟ್ಟವಾಗಿ ಬೆಳೆದಿದ್ದ ತಲೆಗೂದಲು, ದೊಡ್ಡ ತೆಂಗಿನಕಾಯಿಯಂತಿದ್ದ ತುರುಬು. ಕೈಗಳಲ್ಲಿ ಎರಡು ಜತೆ ಹೊಂಬಳೆ. ಕೊರಳಲ್ಲಿ ಚಿನ್ನದ ಸರ. ಮುಖವನ್ನೊರಸಿ ಕೊಳ್ಳುತ್ತಿದ್ದಳಾದುದರಿಂದ ಸೆರಗು ತಲೆಯಮೇಲಿರಲಿಲ್ಲ, ಎಡಭುಜದ ಮೇಲಿ ನಿಂದಿಳಿದು ಬೆನ್ನ ಹಿಂದೆ ನೇತಾಡುತ್ತಿತ್ತು. ಸೆರಗು ಹೊಸ ಫ್ಯಾಷನ್ನಿನದು. ಸಿಲ್ಕು ಸೀರೆ. ಬಹಳ ಮಾಡಿ ಮೈಸೂರು ಸಿಲ್ಕಿನದಿರಬಹುದು–ಎಂದುಕೊಂಡೆ. ಸೀರೆಗಳ ವಿಷಯ ನನಗೆ ಅಪರಿಚಿತವಾದುದೇನೂ ಅಲ್ಲ. ಯಾವ ಹೆಂಗಸಿಗೆ ಎಂಥ ಸೀರೆ ಶೋಭಿಸುತ್ತದೆ, ಒಳ್ಳೆಯ ಸೀರೆ ಹೇಗಿರುತ್ತದೆ—ಎಲ್ಲಾ ಗೊತ್ತು ನನಗೆ.

[೨]

ಒಂದು ಸಲ ಹಾಗೆ ಬಾಗಿಲಿನ ಮುಂದೆ ಹಾಯ್ದವನು ನೇರವಾಗಿ ನಮ್ಮ ಕೋಣೆಗೆ ಬಂದು ಹಾಸಿದ್ದ ಚಾಪೆಯ ಮೇಲೆ ದೇಹವನ್ನೊರಗಿಸಿದೆ.

ಪಕ್ಕದ ಕೋಣೆಯಲ್ಲಿ ನಡೆಯುತ್ತಿದ್ದ ಸಂಭಾಷಣೆ ಅಸ್ಪಷ್ಟವಾಗಿ ಕೇಳ ಬರುತ್ತಿತ್ತು.

"ಶಂಕರಲಿಂಗನ ದರ್ಶನವಾಗುವದಕ್ಕೆ ಮೊದಲೇ ಹೀಗೆ ಹಾಸಿಗೆ ಹಿಡಿಯು ಬೇಕಾಯಿತಲ್ಲ ಪಂಡಿತರೆ!" ಸಣ್ಣಗಿನ ಕೀರಲು ಧ್ವನಿಯಲ್ಲಿ ಮಾತು ಹೊರ ಟಿತು. ಅದು ಸೆಟ್ಟರ ಧ್ವನಿಯೆಂಬುದು ಸ್ಪಷ್ಟವಿದ್ದಿತು.

"ಏನು ಬಿಡಿರಿ ಸೆಟ್ಟರೆ, ಇದೆಂಥ ಜಡ್ದು. ನನ್ನ ಈ ಜ್ವರಹಾರಿ ಮಾತ್ರೆ ಗಳು ಒಂದು ದಿನದಲ್ಲಿಯೆ ನಿಮ್ಮ ಆಲಸ್ಯವನ್ನೆಲ್ಲ ತೆಗೆದುಹಾಕದಿದ್ದರೆ ಹೇಳಿರಿ."

"ಬಸವಾ, ನಿನ್ನ ಮರ್ಜಿ, ನೀನು ಮನಸು ಮಾಡದಿದ್ದರೆ ಒಂದು ಕಡ್ಡಿಯೂ ಅಲುಗಾಡುವುದಿಲ್ಲ. ನಾನು ಹೀಗೆ ಜಡ್ದಾಗಿ ಬೀಳುವುದೂ ನಿನ್ನ ಸಂಕಲ್ಪವೇ ಆಗಿರಬೇಕು. ಬಸವಾ, ಬಸವಾ, ನೀನೇ ಕಾಪಾಡು."

"ನಾ ಹೇಳಿದೆ ನಿಮಗೆ ಪ್ರಯಾಗದಲ್ಲಿ. ನಾ ಹೇಳಲಿಲ್ಲವೆ? ನಾ ಹೇಳಿದರೆ ನೀವೆಲ್ಲಿ ಕೇಳುತ್ತೀರಿ? ನಾ ಹೇಳಿದ್ದೆಲ್ಲ ನಿಮಗೆ ಕ್ಷುಲ್ಲಕ. ಇಳಿ ಹೊತ್ತಿನಲ್ಲಿ ನದೀಸ್ನಾನ ಬೇಡಾಂತ ನಾ ಹೇಳಿದೆ. ಆದರೂ ನೀವು ನದಿಗಿಳಿದು ಬಿಟ್ಟರಿ. ಆಗಲೇ ನನಗೆ ಗೊತ್ತಿತ್ತು, ನಿಮಗೆ ನೆಗಡಿಯಾಗುವದೂಂತ. ನಿಮ್ಮದೆಂಥ ನಾಜೂಕು ಪ್ರಕೃತಿ ಅನ್ನುವದು ಗೊತ್ತಿಲ್ಲವೇ ನನಗೆ? ಸ್ವಲ್ಪ ಗಾಳಿ ಬಡಿದರೆ ನೆಗಡಿ, ಧೂಳಿ ಬಡಿದರೆ ಕೆಮ್ಮು, ನೆಗಡಿಯಾದರೆ ಜ್ವರ, ಕೆಮ್ಮು ಬಂದರೆ ದಮ್ಮು. ಪ್ರವಾಸಕಾಲ. ಬಹಳ ಹುಷಾರಾಗಿರಬೇಕು ಅಂತ ಸಾವಿರ ಸಲ ಆದರೂ ಹೇಳಿದ್ದೇನು ನಾನು. ನನ್ನ ಮಾತು ಎಂದು ಕೇಳಿದ್ದೀರಿ ನೀವು?"

ಅರ್ಥಾತ್ ಅದು ಸೆಟ್ಟರ ಶ್ರೀಮತಿಯ ಧ್ವನಿ—ಕೋಮಲತೆ ಕರ್ಕಶತೆ ಗಳೆರಡೂ ಬೆರೆತ ಧ್ವನಿ.

"ಬಸವಾ, ಬಸವಾ, ನೀನೇ ಕಾಪಾಡು."

"ಬಸವ ಏನು ಕಾಪಾಡುತ್ತಾನೆ? ನಮ್ಮನ್ನು ನಾವೇ ಕಾಪಾಡಿಕೊಳ್ಳ ಬೇಕು. ನಿಮಗೆ ಅದೇ ತಿಳಿಯದು. ಎಲ್ಲ ಭಾರವನ್ನೂ ಬಸವನ ಮೇಲೆ ಹಾಕಿ ಮಾಡಬಾರದ್ದನ್ನೆಲ್ಲ ಮಾಡುತ್ತೀರಿ. ಹೀಗಾಗಿಬಿಡುತ್ತದೆ. ಈ ಪರ ಊರಿನಲ್ಲಿ ಇನ್ನೂ ಎಷ್ಟು ತೊಂದರೆಯಾಗುತ್ತದೆಯೊ. ನಾನೊಬ್ಬಾಕೆಯೇ ಏನು ಮಾಡಬೇಕು?"

"ಚ್....ಚ್....ಚ್....ಚ್...." ಅದು ಅರ್ಥಾತ್ ವೀರಯ್ಯನ ಧ್ವನಿ. "ಹಾಗೆಲ್ಲ ತಿಳಿದುಕೊಳ್ಳಬೇಡಿ ತಾಯಿಾ. ಇದು ಪರವೂರೆಂದೂ ಭಾವಿಸಬೇಡಿ. ನಿಮ್ಮದೇ ಊರು, ನಿಮ್ಮದೇ ಮನೆಯೆಂದು ತಿಳಿದುಕೊಳ್ಳಿ. ನಿಮಗೆ ಸ್ವಲ್ಪವೂ

ತೊಂದರೆಯಾಗದಂತೆ ನಾನೆಲ್ಲ ವ್ಯವಸ್ಥೆ ಮಾಡುತ್ತೇನೆ. ನೀವು ಕೈಕಾಲು ಸಹ ಅಲುಗಾಡಿಸಬೇಕಾಗಿಲ್ಲ."

"ಊಟಕ್ಕೇನು ಮಾಡೋಣ ಈಗ?"

"ಹೊತ್ತು ಬಹಳವಾಯಿತು. ಇದೊಂದು ಹೊತ್ತು ಹೋಟಲಿನಿಂದ ಡಬ್ಬಿ ತರಿಸಿದರೆ ಆದೀತೇ?"

"ಹೋಟಲಿನಿಂದ? ಒಳ್ಳೆ ಮಾತೇ ಹೇಳಿದಿರಿ. ನಾನು ಹಾಗೆಲ್ಲ ಅವರಿವರ ಹೋಟಲಿನ ಊಟ ಉಣ್ಣುವವಳಲ್ಲ."

"ಚ್....ಚ್....ಹಾಗಲ್ಲ ತಾಯಿ. ಇಲ್ಲಿಯೂ ವೀರಶೈವರದೊಂದು ಹೋಟಲು ಇದೆ. ನಾನೂ ಅಲ್ಲಿಯೇ ಊಟ ಮಾಡುವುದು...."

"ಎಂಥ ವೀರಶೈವರೊ ಏನೊ. ಲಿಂಗವನ್ನಾದರೂ ಕಟ್ಟುವರೊ ಇಲ್ಲವೊ."

"ಕಟ್ಟುತ್ತಾರೆ ತಾಯಿ. ದಿನವೂ ಎರಡಾವರ್ತಿ ಪೂಜೆಯನ್ನೂ ಮಾಡುತ್ತಾರೆ. ಅವರೂ ನಮ್ಮ ಜಾತಿಯ ಜನರೇ. ಆರಾಧ್ಯ ಜಂಗಮರು."

"ನೀವೂ ಆರಾಧ್ಯ ಜಂಗಮರೇನು?"

"ಹೌದು ತಾಯಿ. ನಾವು ವೇದಮೂರ್ತಿಗಳು. ಶುದ್ಧ ವೀರಶೈವರು. ಪಂಚಾಚಾರ್ಯರ ಸಂಪ್ರದಾಯದವರು."

"ಆಚಾರ್ಯರು?" ಸೆಟ್ಟರ ಮಾತಿನಲ್ಲಿ ಆಶ್ಚರ್ಯವಿದ್ದುದು ಗೊತ್ತಾಗುವಂತಿದ್ದಿತು.

"ಹೌದು, ಆಚಾರ್ಯರು. ಆರಾಧ್ಯರೆಂದರೇನು, ಆಚಾರ್ಯರೆಂದರೇನು ಎಲ್ಲ ಒಂದೇ. ಸೃಷ್ಟಿಯ ಉಗಮದಿಂದಲೂ ನಮ್ಮ ಕುಲ ಬೆಳೆದುಬಂದಿದೆ. ಬಸವನ ಕಾಲಕ್ಕೆ ಲಿಂಗ ಕಟ್ಟಿಕೊಂಡು ವೀರಶೈವರಾದ ಜನ ಬೇರೆ, ನಾವು ಬೇರೆ. ನಾವು ಅನಾದಿಕಾಲದಿಂದಲೂ ಶುದ್ಧರಕ್ತದ ಶಿವಭಕ್ತರು."

"ಶುದ್ಧ ರಕ್ತವೋ ಅಶುದ್ಧ ರಕ್ತವೋ ದೇವರೇ ಬಲ್ಲ. ಮೊದಲು ಊಟದ ವ್ಯವಸ್ಥೆಯಾಗಬೇಕು ಪಂಡಿತರೆ," ಎಂದು ಎಚ್ಚರಿಸಿದಳು ಶ್ರೀಮತಿ.

"ನನಗೇನೂ ಬೇಡ ಪಂಡಿತರೆ. ಇವಳಿಗೊಬ್ಬಳಿಗಾದರೆ ಸಾಕು."

"ಬಂದೆ, ಬಂದೆ. ಈಗ ಬಂದೆ. ಅಷ್ಟರೊಳಗಾಗಿ ನೀವು ಸ್ನಾನ ಮುಗಿಸಿಕೊಂಡು ಬಿಡಿರಿ. ಬಚ್ಚಲಮನೆಯಲ್ಲಿ ನೀರು ಗೀರು ಎಲ್ಲಾ ಇದೆ."

ಇಷ್ಟು ಹೇಳಿದವನೆ ವೀರಯ್ಯ ಕೋಣೆಗೆ ಬಂದ. ನಾನು ಕಣ್ಣು ಮುಚ್ಚಿಕೊಂಡು ನಿದ್ದೆ ಹೋದವನಂತೆ ನಟಿಸುತ್ತಿದ್ದೆ.

"ಊಟ ಮಾಡುವಿರೋ ಇಲ್ಲವೋ ?" ಎಂದನಾತ.

ನಿದ್ದೆಯಿಂದ ಎಚ್ಚತ್ತುಕೊಂಡವನಂತೆ ಕಣ್ಣು ಬಿಡುತ್ತ ನಾನು—"ಏನೆಂದೆ ವೀರೂ ?" ಎಂದು ಕೇಳಿದೆ.

"ಹೊಟ್ಟೆ ಏನನ್ನುತ್ತಾ ಇದೆ? ಇವೊತ್ತು ಏನೂ ಬೇಡವಂತೇನು ?"

ನಾನು ಮೈ ಮುರಿಯುತ್ತ ಮೇಲಕ್ಕೆದ್ದು ಹೆಗಲ ಮೇಲೆ ಟವಲು ಹಾಕಿಕೊಂಡು ಹೋಟಲಿಗೆ ಹೊರಡಲು ಸಿದ್ಧನಾದೆ.

ಕೊಂಚ ದೂರ ಹೋದ ಬಳಿಕ,

"ಆ ಹೆಣ್ಣುಮಗಳ ಹೆಸರೇನೋ ವೀರೂ ?" ಎಂದು ಕೇಳಿದೆ.

"ಮಹಾದೇವಮ್ಮ ಅಂತೆ."

"ವಯಸ್ಸೆಷ್ಟಿರಬಹುದು ಆಕೆಗೆ ?"

"ಅವರ ವಯಸ್ಸು ತೆಗೆದುಕೊಂಡು ನೀವೇನು ಮಾಡುವಿರಿ ?"

"ಏನು ಮಾಡುವೆನೊ. ಹೇಳಿದರೆ ನಿನ್ನ ಗಂಟೇನು ಹೋಗುತ್ತದೆ ?"

"ಬರುವ ಗಂಟೂ ಹೋದೀತು. ಹೆಸರು ವಯಸ್ಸು ಕೇಳಿಕೊಂಡು ನೀವು ಮೆಲ್ಲಗೆ ಏನಾದರೂ ಮಂಗತನಕ್ಕಾರಂಭಿಸಿದರೆ ಸೆಟ್ಟರು ಇಲ್ಲಿಂದ ಕೂಡಲೆ ಹೊರಟು ಬೇರೆಲ್ಲಾದರೂ ಛತ್ರ ಗಿತ್ರಕ್ಕೆ ಹೋಗಿಬಿಡಬಹುದು. ಮನುಷ್ಯ ಬಹಳ ಗಂಭೀರ ಪ್ರಕೃತಿಯವರು."

"ಸೆಟ್ಟರು ಗಂಭೀರ ಪ್ರಕೃತಿಯವರಾದರೆ ಅವರ ಹೆಂಡತಿ ಹಾಗಲ್ಲವಲ್ಲ ? ಆಕೆಗೆ ಮಾತೆಂದರೆ ಬಹಳ ಪ್ರೀತಿಯೆಂದು ಕಾಣುತ್ತದೆ."

"ನಿಮಗೆ ಹೇಗೆ ಗೊತ್ತಾಯಿತು ?"

"ಖೋಲಿಯಲ್ಲಿ ವಿರಮಿಸಿದ್ದಾಗ ಆವಳ ದನಿ ಕಿವಿಗೆ ಬೀಳುತ್ತಿತ್ತು."

"ಹೌದು. ಸ್ವಲ್ಪ ಹೆಚ್ಚೇ ಅನ್ನಿಸುವಂತೆ ಮಾತಾಡುತ್ತಾರೆ. ಆದರೆ ಅಷ್ಟರಿಂದ ಆವರ ಬಗ್ಗೆ ಏನೇನಾದರೂ ಕಲ್ಪನೆ ಮಾಡಿಕೊಳ್ಳಬೇಡಿ. ಸಾಧಾರಣವಾಗಿ ಹೆಂಗಸರಿಗೆ ಮಾತು ಅಂದರೇನೇ ಪ್ರೀತಿ. ಇವರಿಗೂ ಹಾಗಿರಬಹುದು, ಅಷ್ಟೆ."

"ಇದ್ದರೂ ಇರಬಹುದು," ಎಂದು ನಾನು ನಗುತ್ತ ನುಡಿದೆ.

"ಯಾಕೆ ನಕ್ಕಿರಿ ?"

"ಯಾಕೂ ಇಲ್ಲ."

“ ಏನೋ ಇರಬೇಕು.”

“ ಏನೂ ಇಲ್ಲ ಮಾರಾಯ.”

“ ಚ್....ಚ್....ಇದೆ. ಏನೋ ಇದೆ. ಬಚ್ಚಿಡುತ್ತಿದ್ದೀರಿ.”

“ ಹೇಳಲೇ ?”

“ ಬಿಡಿ ಗಾಡಿ.”

“ ಅಜ್ಜಿಗೆ ಮೊಮ್ಮಗಳು ಕೆಮ್ಮು ಕಲಿಸಲು ಬಂದಳಂತೆ.”

“ ಅಜ್ಜಿ ಯಾರು ?”

“ ನೀನೇ ಯೋಚಿಸು. ಗೊತ್ತಾಗುತ್ತದೆ. ಹೆಂಗಸರ ವಿಷಯದಲ್ಲಿ ಪ್ರಪಂಚದಲ್ಲೆಲ್ಲ ಪಟಾಯಿತ – ಹಿಂದೆ ಒಬ್ಬ ಆಗಿಹೋದ. ಹದಿನಾರು ಸಾವಿರ ಹೆಂಡರನ್ನಾಳಿದ ಕೃಷ್ಣ. ಆತ ಸತ್ತ ನಂತರ ಇದುವರೆಗೂ ಅವನಂಥವನು ಇನ್ನೊಬ್ಬ ಹುಟ್ಟಿರಲಿಲ್ಲ.”

“ ಅಂದರೆ ?”

“ ಶ್ರೀಕೃಷ್ಣನ ತರುವಾಯ ಅವನ ಪಟ್ಟಕ್ಕೆ ಬಂದವನೆಂದರೆ ಒಬ್ಬನೇ ಒಬ್ಬ – ಈ ಸಿದ್ಧವೀರ ಸ್ವಾಮಿ,” ಎಂದು ನುಡಿದು ನಾನು ಮತ್ತೆ ನಗತೊಡಗಿದೆ.

“ ಬಿಡಿರಿ, ಬಿಡಿರಿ. ಏನು ಮಹಾ ಅನುಭವ ಅಂತ ಹೇಳುತ್ತೀರಿ ? ಬಹಳವಾದರೆ ಎಂಟು ಹತ್ತು ಜನ ಹೆಂಗಸರ ಸಂಗ ಮಾಡಿರಬಹುದು, ಅಷ್ಟೆ.”

“ ನಿನ್ನ ಹಾಗೆ ನಾನು ವೇಶೀಪಟ್ಟಣದಲ್ಲೇ ಕಾಯಂ ಆಗಿ ನಿಂತಿರುವೆನೇನು, ಎಂಟು ಹತ್ತು ಜನರಲ್ಲೇ ತೃಪ್ತಿಪಟ್ಟುಕೊಳ್ಳುವುದಕ್ಕೆ ? ನಾನು ಹುಟ್ಟಿದ್ದೆಲ್ಲಿ, ಬೆಳೆದಿದ್ದೆಲ್ಲಿ, ಅಲೆದದ್ದು ಎಲ್ಲಿ ಎಲ್ಲಿ ಎಲ್ಲಾ ಲೆಕ್ಕ ಹಾಕು. ಹೋದ ವರ್ಷವೆಲ್ಲಾ ಪ್ರವಾಸದಲ್ಲೇ ಕಳೆಯಲಿಲ್ಲವೆ ? ಊರಿಂದ ಹೊರಟ ಬಳಿಕ ಮಿರಜ ಆಯಿತು, ಪುಣೆಯಾಯಿತು. ಮುಂಬಯಿಯಲ್ಲಿ ಎರಡು ತಿಂಗಳು. ಅಹಮ್ಮದಾಬಾದದಲ್ಲಿ ಒಂದು ತಿಂಗಳು. ಅಹಮ್ಮದನಗರ, ಸುರತ, ಬಡೋಚ, ಜಯಪುರ, ಜೋಧಪುರ, ನಾಗಪುರ, ಜಬ್ಬಲಪುರ, ಕಾನಪುರ, ಅಲಹಾಬಾದ, ಆಗ್ರಾ, ದಿಲ್ಲಿ, ಶ್ರೀನಗರ, ಕಲ್ಕತ್ತಾ, ಪಾಟ್ನಾ, ಒಂದೇ ಎರಡೇ ? ಲೆಕ್ಕವಿಲ್ಲದಷ್ಟು ನಗರಗಳನ್ನು ಸುತ್ತಿದೆ. ಸಣ್ಣ ಸಣ್ಣ ಊರುಗಳನ್ನೂ ನೋಡಿದೆ. ಹಳ್ಳಿಗಳಲ್ಲೂ ಸುತ್ತಿದೆ. ಬಂಗಾಲಿ, ಬಿಹಾರಿ, ಓರಿಯಾ, ಲಖನವೀ, ಮಣಿಪುರೀ, ಕಾಶ್ಮೀರೀ – ಎಲ್ಲ ಸ್ತ್ರೀಯರನ್ನೂ ಕಂಡೆ. ಜಪಾನೀ, ಚೀನೀ, ಇಂಗ್ಲಿಷ್, ಅಮೇರಿಕನ್ ಮಂಗೋಲಿಯನ್, ಅರಬ್ಬೀ ಮಾದರಿಗಳನ್ನೂ ನೋಡಿದೆ ಕಲ್ಕತ್ತಾದಲ್ಲಿ.

ಕೊನೆಗೆ ಈ ವೇಶೀಪಟ್ಟಣಕ್ಕೆ ಬಂದು ಇಲ್ಲಿನ ನಮೂನೆಗಳನ್ನೂ ರುಚಿ ನೋಡಿದೆ. ಈ ಪ್ರವಾಸಕ್ಕೆ ಮೊದಲು ಧಾರವಾಡ, ಬೆಳಗಾವಿ, ಬಿಜಾಪುರ, ಕಾರವಾರ, ಬಳ್ಳಾರಿ, ಮಂಗಳೂರು, ಮೈಸೂರು, ಮದರಾಸುಗಳತ್ತಕಡೆಯ ಚೆಲುವೆಯರನ್ನೆಲ್ಲ ಕೈ ನೋಡಿದ್ದಾಗಿತ್ತು."

"ಇಷ್ಟೆಲ್ಲ ಮೋಜು ಮಾಡಿದರೂ ನಿಮ್ಮ ಪ್ರಕೃತಿ ಇಷ್ಟು ಚೆನ್ನಾಗಿ ಉಳಿದಿದೆಯಲ್ಲಾ ಅಂತ ಸೋಜಿಗ ನನಗೆ."

"ಅದರಲ್ಲಿ ಸೋಜಿಗದ ಮಾತೇನು ಬಂತು? ಮೋಜು ಮಾಡುವ ಹಾಗೆ ಊಟವನ್ನೂ ಚೆನ್ನಾಗಿಯೆ ಮಾಡುತ್ತೇನಲ್ಲ ನಾನು? ಹಣ್ಣು ಹಂಪಲು ಹಾಲು ಬೆಣ್ಣೆ ತುಪ್ಪ ಯಾವುದಕ್ಕೆ ಏನು ಕೊರತೆ? ಒಂದು ವಾರದಿಂದ ತಾನೆ ಈ ಭಿಕಾರಿತನ ಬಂದಿರೋದು?"

"ನಿಮ್ಮನ್ನು ನೋಡಿದಾಗಲೆಲ್ಲ ನನಗನ್ನಿಸುತ್ತದೆ—ಎಂಥ ಭಾಗ್ಯಶಾಲಿಗಳು ನೀವು ಅಂತ. ಯಾವಾಗಲೂ ಸುಖದಿಂದ ಸಂತೋಷದಿಂದ ಇರುತ್ತೀರಿ. ಕೊಂಚವೂ ಕಷ್ಟಪಡಬೇಕಾಗಿಲ್ಲ."

"ಕಷ್ಟ ಅಂದರೆ ಬರಿಯ ಶರೀರ ಕಷ್ಟನಲ್ಲ ವೀರೂ. ಬುದ್ಧಿಯನ್ನೋಡಿಸಿ ನೂರಾರು ಉಪಾಯ ಹುಡುಕಿ ಬಹಳ ಕಷ್ಟಪಡಬೇಕಾಗುತ್ತದೆ ನಾನೂ ಸಹ. ಈಗಲೂ ಅದೇ ಕಷ್ಟದಲ್ಲಿದ್ದೇನೆ."

"ಏನಾದರೂ ದಾರಿ ತೆಗೆದಿರಾ?"

"ತೆಗೆಯಲೇಬೇಕಲ್ಲ? ಇಲ್ಲವಾದರೆ ಆಟ ನಡೆಯುವಂತಿಲ್ಲ. ಇನ್ನೆಷ್ಟು ದಿನ ಹೀಗೇ ಇರುವದು? ಜೈ ಅಲಖ್ ನಿರಂಜನ್ ಅಂದುಬಿಟ್ಟು ಹಿಮಾಲಯಕ್ಕೆ ಹೊರಟುಬಿಡಲೇ ಎಂದೂ ಅನ್ನಿಸುತ್ತದೆ ಆಗಾಗ."

"ಅದು ಮಾತ್ರ ನಿಮ್ಮಿಂದ ಅಸಾಧ್ಯ."

"ಬರಾಬರಿ. ಅದು ಮಾತ್ರ ನನ್ನಿಂದ ಅಸಾಧ್ಯ. ಬೈರಾಗಿಯಾಗುವದು ನನ್ನ ಸ್ವಭಾವದಲ್ಲೇ ಬಂದಿಲ್ಲ. ನಾನಾದರೂ ಏನು ಮಾಡಲಿ?"

"ಈಗ ಏನು ಮಾಡಬೇಕೆಂಬುದನ್ನು ಮೊದಲು ಲೆಕ್ಕ ಹಾಕಿರಿ."

"ಅದೇ ಲೆಕ್ಕ ಹಾಕುತ್ತಿದ್ದೇನೆ. ಈ ಸೆಟ್ಟರು, ಈ ಮಹಾದೇವಮ್ಮ ಇವರಿಂದ ಏನಾದರೂ ಸಾಧಿಸೀತೋ ಏನೊ. ಸೆಟ್ಟರಿಗೆ ವಯಸ್ಸಾಗಿದೆ. ಮೈಯಲ್ಲಿ ಶಕ್ತಿಯೂ ಇದ್ದಂತಿಲ್ಲ. ಆಕೆ ಮಾತ್ರ ಇನ್ನೂ ತರುಣಿಯಿರಬೇಕು."

"ನಿಮಗೆ ಹ್ಯಾಗೆ ಗೊತ್ತಾಯಿತು?"

"ಹ್ಯಾಗೋ ಗೊತ್ತಾಯಿತು ಅನ್ನು. ಅವಳಿಗೆಷ್ಟು ವಯಸ್ಸಿರಬಹುದು ವೀರೂ? ಮೂವತ್ತೈದು?"

"ಅಷ್ಟೆ."

"ಹಾಗಾದರೆ ನನ್ನ ವಯಸ್ಸಿನವಳೇ ಆದಂತಾಯಿತು. ಗಂಡನ ಬಗ್ಗೆ ಅವಳಲ್ಲಿ ಸ್ವಲ್ಪವೂ ಆದರವಿಲ್ಲವೆಂಬುದಂತೂ ನನಗೆ ಗೊತ್ತಾಗಿ ಹೋಗಿದೆ. ಆದರವೇ ಇಲ್ಲನೆಂದಾಗ ಇನ್ನು ಪ್ರೀತಿಯೆಲ್ಲಿಂದ ಬಂದೀತು? ಮಕ್ಕಳೂ ಆದಂತಿಲ್ಲ."

"ಇಲ್ಲ. ಇವರಿಗೆ ಮಕ್ಕಳಿಲ್ಲ."

"ಆ ವಿಷಯವೂ ಅಸಹಜವಲ್ಲ. ಇಂಥ ಗಂಡನಿಂದ ಮಕ್ಕಳಾದರೂ ಹೇಗಾಗಬೇಕು? ಪಾಪ. ಆಕೆ ಎಷ್ಟು ನರಳುತ್ತಿರುವಳೋ ಏನೊ. ಹೆಂಗಸರಿಗೆ ಮಕ್ಕಳೆಂದರೆ ಬಹಳ ಆಸೆ. ಮಕ್ಕಳನ್ನು ಪಡೆಯುವುದಕ್ಕಾಗಿ ಅವರು ಯಾವುದಕ್ಕೂ ತಯಾರಾಗಬಲ್ಲರು?"

"ಅದಕ್ಕಾಗಿಯೇ ಈ ತೀರ್ಥಯಾತ್ರೆಗೆ ಬಂದಿರುವರಂತೆ."

"ಹೀಗೇನು? ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿ ಬೇರೆ ಬೇರೆ ದೇವರುಗಳ ದರ್ಶನ ಮಾಡಿದರೆ ಮಕ್ಕಳಾದರೂ ಆಗಬಹುದು ಎಂಬ ಹುಚ್ಚು ಆಸೆಯಿರಬೇಕು ಆ ಸೆಟ್ಟರಿಗೆ."

"ಅವರು ಬಹಳ ಹಳೆಯ ಕಾಲದವರಂತೆ ಕಾಣುತ್ತಾರೆ. ಅವರ ವಿಚಾರ ಹಾಗಿರಲು ಸಾಕು."

"ಅದೂ ನನಗೆ ಅನುಕೂಲವೇ ಆಯಿತೇಳು."

ವೀರಯ್ಯ ಬೆಚ್ಚಿಬಿದ್ದು, ಕೇಳಿದ:

"ಏನ ಸ್ವಾಮಿ? ಏನೆನ್ನುತ್ತೀರಿ ನೀವು?"

"ಎಂಥ ಬೆಪ್ಪನೋ ನೀನು? ನಿನಗಿನ್ನೂ ತಿಳಿಯಲಿಲ್ಲವೆ?"

ಊಟ ಮುಗಿಸಿಕೊಂಡು ಹಿಂತಿರುಗಿ ಬರುವಾಗ ನಾನು ಮತ್ತೆ ಆ ವಿಷಯವನ್ನೆತ್ತಿದೆ.

"ಆವಷ್ಟು ಬೇಗ ಅವರೊಂದಿಗೆ ನನ್ನ ಪರಿಚಯ ಮಾಡಿಸು ವೀರೂ."

"ನೀವು ಯಾರೆಂದರೆ ಏನು ಹೇಳುವುದು?"

"ಕರ್ನಾಟಕದಿಂದ ಬಂದ ದೊಡ್ಡ ಸ್ವಾಮಿಗಳು, ವೇದಾಂತದ ಅಭ್ಯಾಸಕ್ಕೆ ಬಂದು ಕೊನೆಯ ಪರೀಕ್ಷೆ ಮುಗಿಸಿ ಪದವಿ ಪಡೆದು ಊರಿಗೆ ಹೋಗಲು ಸಿದ್ಧತೆ

ನಡೆಸಿದ್ದಾರೆ ಎಂದು ಹೇಳಿಬಿಡು. ಹಿಮಾಲಯದ ಬೆಟ್ಟಗಳನ್ನು ಸುತ್ತಿ ಸಾಧನೆಯನ್ನೂ ಮಾಡಿದ್ದಾರೆಂದೂ ಹೇಳಬಹುದು."

"ಇಂಥವರು ಈ ಕೋಣೆಯಲ್ಲೇಕೆ ಇರುತ್ತಾರೆ, ವಿದ್ಯಾರ್ಥಿನಿಲಯದಲ್ಲೇಕೆ ಇರುವುದಿಲ್ಲ, ಅಂತ ಕೇಳಿದರೆ!"

"ಇವರು ಬಹಳ ಸ್ವತಂತ್ರಮನೋವೃತ್ತಿಯ ಸ್ವಾಮಿಗಳು, ಯಾರ ಹಂಗಿಗೂ ಒಳಗಾಗುವವರಲ್ಲ, ನಿಷ್ಠುರ ಸ್ವಭಾವದವರು, ವಿದ್ಯಾರ್ಥಿನಿಲಯದ ಮ್ಯಾನೇಜರಾಗಿರುವ ಘನಗರ್ಜದ ಮಠಿಗೂ ಇವರಿಗೂ ಹೊಂದುವುದಿಲ್ಲ, ಇವರನ್ನು ಕಂಡರೆ ಆ ಮಠಿಗೆ ಅಸೂಯೆ ಎಂದೆಲ್ಲಾ ಪರಿಣಾಮವಾಗುವಂತೆ ಹೇಳಿಬಿಡು. ಮಾತು ಕಲಿಸಿಕೊಡಬೇಕೇ ನಿನಗೆ ನಾನು?"

"ಅದೆಲ್ಲ ಸರಿ. ಇದರಿಂದ ನನಗೇನು ಲಾಭ?"

"ಏನು ಲಾಭವೋ ನಿನಗೇ ನಿಧಾನವಾಗಿ ಗೊತ್ತಾಗುತ್ತದೆ. ನನಗೆ ಲಾಭವಾದಾಗ ನಿನ್ನನ್ನು ಮರೆಯುತ್ತೇನೆಯೆ?"

"ಇಲ್ಲ. ಮರೆಸುತ್ತೀರಿ! ಎರಡು ವರ್ಷಗಳ ಹಿಂದೆ ಆ ದೊಡ್ಡ ಮಠಕ್ಕೆ ಸ್ವಾಮಿಯಾಗಿ ಆರು ತಿಂಗಳು ಇಂದ್ರನ ಹಾಗೆ ದರಬಾರು ಮಾಡಿದಿರಿ. ನನ್ನ ನೆನಪಾಯಿತೇನು ನಿಮಗೆ ಆಗ?"

"ಹಾಗಲ್ಲ ವೀರೂ. ನಿನ್ನ ವಿಳಾಸವೇ ಗೊತ್ತಾಗಲಿಲ್ಲ ನನಗೆ. ನಾನಾದರೂ ಏನು ಮಾಡಲಿ?"

"ಕನ್ನಡ ಪತ್ರಿಕೆಗಳಲ್ಲೆಲ್ಲ ದಿನವೂ ಜಾಹೀರಾತು ಬರುತ್ತವಲ್ಲ? ನನ್ನ ವಿಳಾಸ ಕನ್ನಡಿಗರಿಗೆಲ್ಲ ಗೊತ್ತು, ನಿಮಗೆ ಗೊತ್ತಾಗಲಿಲ್ಲ."

"ಉಳಿದವರಂತೆ ನನಗೇನು ಪೌರುಷವೀರದ ಬಾಟಲು ಬೇಕಾಗುವದೇನು?"

"ನಿಮಗೇಕೆ ಬೇಕಾದೀತು, ನೀವೇ ಪೌರುಷವೀರರಾಗಿರುವಾಗ? ಎರಡು ಮೂರು ಪತ್ರ ಬರೆದಿದ್ದೆ, ನನ್ನ ಅಡಚಣೆಗಳನ್ನೆಲ್ಲ ತೋಡಿಕೊಂಡಿದ್ದೆ. ಉತ್ತರ ಹಾಕುವಷ್ಟು ಸೌಜನ್ಯ ಸಹ ನಿಮ್ಮಲ್ಲಿರಲಿಲ್ಲ."

"ಪ್ರವಾಸದಲ್ಲಿದ್ದೆನಾರಾಯ. ನಿನ್ನ ಪತ್ರಗಳು ನನಗೆ ಮುಟ್ಟಲೇ ಇಲ್ಲ."

"ಬಿಡಿ. ಬಿಡಿ. ಪ್ರವಾಸವೊಂದು ನೆಪ ನಿಮಗೆ. ನಿಮ್ಮ ಸ್ವಭಾವವೇ ಹೀಗೆ. ಕೆಲಸ ಮಾಡಿಕೊಡುವ ತನಕ ವೀರೂ ವೀರೂ ಅಂತ ಪ್ರೀತಿ ತೋರಿಸುವದು. ಕೆಲಸವಾಯಿತೋ ಮುಗಿಯಿತು. ವೀರೂ ಬದುಕಿರುವನೋ ಸತ್ತಿರು

ವನೋ ಎಂಬುದನ್ನೂ ವಿಚಾರಿಸುವಂತಿಲ್ಲ. ಕಿಸೆಯಲ್ಲಿನ ಹಣವೆಲ್ಲ ತೀರುತ್ತ ಬಂದಾಗ ಈ ಊರಿಗೆ ಬಂದಿರಿ. ಈಗ ನೆನಪಾದ ವೀರೂ! ಅಲ್ಲವೆ?"

"ಹಿಂದೆ ಏನೇನೋ ಆಗಿಹೋಯಿತಯ್ಯ. ಅದನ್ನೆಲ್ಲ ಕಟ್ಟಿಕೊಂಡು ಮಾಡುವುದೇನು? ಮುಂದಿನ ವಿಚಾರ ಮಾಡೋಣ. ಇನ್ನು ಮುಂದೆ ನಿನ್ನನ್ನು ಖಂಡಿತವಾಗಿಯೂ ಮರೆಯುವುದಿಲ್ಲ. ಮೊದಲು ಇವರೊಂದಿಗೆ ಪರಿಚಯ ಮಾಡಿಸಿಕೊಡು. ನನ್ನ ಬಗ್ಗೆ ಸೆಟ್ಟರಿಗೆ ಪೂಜ್ಯಭಾವನೆ ಬರುವಂತೆ ವರ್ಣನೆ ಮಾಡು. ಉಳಿದುದನ್ನು ನಾನು ಸಾಧಿಸುತ್ತೇನೆ."

"ಮೊದಲು ಖೋಲಿಯೊಳಗಿನ ಕಸ ಗುಡಿಸಿ ಸ್ವಚ್ಛ ಮಾಡಬೇಕು. ನೀವೇನು ಕಾವಿ ಹಾಕುವಿರೋ, ಇಲ್ಲಾ ಈ ಬಿಳಿಯ ಅರಿವೆಗಳಲ್ಲೇ ಇರುವಿರೋ?"

"ಇವೇ ಇರಲಿ ಬಿಡು. ಸ್ವಾಮಿಗಳು ಇನ್ನೂ ಈಗ ತಾನೆ ವಿದ್ಯಾಭ್ಯಾಸ ಮುಗಿಸಿದವರು, ಸಾದಾ ಉಡುಗೆಯನ್ನೇ ಧರಿಸುತ್ತಾರೆ ಅಂತ ಹೇಳಿಬಿಡು."

[೩]

ಮಹಾದೇವಮ್ಮ ಊಟ ಮಾಡುತ್ತ ಕುಳಿತಿದ್ದಾಗ ವೀರಯ್ಯ ನನ್ನ ವಿಷಯ ತೆಗೆದು ಪತಿಪತ್ನಿಯರೆದುರಿಗೆ ರಸವತ್ತಾಗಿ ಬಣ್ಣಿಸಿದ. ನಾನು ಕೊಟಡಿಯಲ್ಲೊರಗಿಕೊಂಡು ಆ ಮಾತುಕತೆಗಳನ್ನು ಕೇಳುತ್ತಲಿದ್ದೆ.

"ಹಿಮಾಲಯಕ್ಕೆ ಹೋಗಿ ಬಂದವರೇ? ಅಲ್ಲಿ ಎಷ್ಟು ದಿನ ಇದ್ದರು?" ಎಂದು ಮಹಾದೇವಮ್ಮ ಕೇಳಿದಳು.

"ಆರು ತಿಂಗಳವರೆಗೆ, ಅಲ್ಲೇ ತಪಸ್ಸು ಮಾಡುತ್ತ ಇದ್ದುಬಿಡೋಣವೆಂದು ಮನಸ್ಸು ಬಂದಿದ್ದಿತಂತೆ. ಆದರೆ ಜನರನ್ನು ಬಿಟ್ಟು ದೂರ ಅಡವಿಯಲ್ಲಿ ಕುಳಿತಿರುವದಕ್ಕಿಂತ ಜನತೆಯ ನಡುವೇ ಇದ್ದು ಅವರ ಸೇವೆ ಮಾಡುವದು ಮೇಲೆಂದು ತಿಳಿದು ಹೊರಳಿ ಬಂದರು."

"ಪರೀಕ್ಷೆಗಳೆಲ್ಲ ಮುಗಿದವೇ?" ಎಂದು ಸೆಟ್ಟರು ಕೇಳಿದರು.

"ಇವರ ಪಾಂಡಿತ್ಯದೆದುರಿಗೆ ಇವೆಲ್ಲಾ ಎಂಥ ಪರೀಕ್ಷೆಗಳು ಸೆಟ್ಟರೆ? ಬೇರೆಯವರು ಐದೈದು ವರ್ಷ ತಿಣಿಕಿದರೂ ದಾಟಲಾರದ ಪರೀಕ್ಷೆಗಳನ್ನು ನಮ್ಮ ಸ್ವಾಮಿಗಳು ಒಂದೊಂದು ವರ್ಷದಲ್ಲೇ ಮುಗಿಸಿಬಿಟ್ಟರು."

“ಬಸವಾ, ನಿನ್ನ ಮಹಿಮೆ? ಸ್ವಾಮಿಗಳದು ಯಾವೂರು ಪಂಡಿತರೇ?”

“ಧಾರವಾಡ ಜಿಲ್ಲೆಯಲ್ಲಿ ಒಂದು ಹಳ್ಳಿ. ಚಿಕ್ಕ ವಯಸ್ಸಿನಲ್ಲೇ ಅವರಲ್ಲಿ ವೈರಾಗ್ಯದ ಭಾವನೆ ಅಂಕುರಿಸಿತು. ಅದನ್ನು ಕಂಡು ಅವರ ತಂದೆಯವರು ಮಠವೊಂದಕ್ಕೆ ಮರಿದೇವರನ್ನಾಗಿ ಮಾಡಿದರು. ಆ ಮಠದ ಸ್ವಾಮಿಗಳೇ ಅವರನ್ನು ವಿದ್ಯಾಭ್ಯಾಸಕ್ಕಾಗಿ ಈ ಪಟ್ಟಣಕ್ಕೆ ಕಳಿಸಿದ್ದು.”

“ಅಂದಿನಿಂದಲೂ ಇಲ್ಲೇ ಇದ್ದಾರೇನು?” ಎಂದು ಕೇಳಿದಳು ಮಹಾದೇವಮ್ಮ.

“ಹತ್ತು ವರ್ಷ ವಯಸ್ಸಿನವರಿದ್ದಾಗ ಮೊದಲನೆಯ ಸಲ ಇಲ್ಲಿಗೆ ಬಂದರು. ಹತ್ತು – ಹನ್ನೆರಡು ವರ್ಷಗಳವರೆಗೂ ಸಂಸ್ಕೃತ ಅಭ್ಯಾಸ ಮಾಡುತ್ತಿದ್ದರು. ಅಷ್ಟರಲ್ಲಿ ಅವರ ಮಠದ ಸ್ವಾಮಿಗಳು ಸಮಾಧಿಸ್ಥರಾದ್ದರಿಂದ ಇವರು ಊರಿಗೆ ಹೋಗಬೇಕಾಯಿತು. ವಿದ್ಯಾಭ್ಯಾಸವನ್ನು ನಡುವೆಯೆ ನಿಲ್ಲಿಸಿ ಹೋಗಲು ಮನಸ್ಸಿರಲಿಲ್ಲ. ಆದರೇನು ಮಾಡುವುದು? ಮಠಕ್ಕೊಂದು ವ್ಯವಸ್ಥೆ ಮಾಡಬೇಕಲ್ಲವೆ? ಸರಿ. ಅಲ್ಲಿಗೆ ಹೋಗಿ ನಿಂತರು. ಪೀಠಾಧಿಕಾರವೂ ಆಯಿತು. ಎಂಟು ಹತ್ತು ವರ್ಷಗಳವರೆಗೂ ಮಠ ಬಿಟ್ಟು ಹೊರಡಲಾಗಲಿಲ್ಲ. ಅಷ್ಟರಲ್ಲಿ ಘನಗರ್ಜದ ಜಗದ್ಗುರುಗಳಿಗೂ ಇವರಿಗೂ ಘರ್ಷಣೆಯಾಯಿತು. ಸ್ವಾಮಿಗಳು ಆ ಮಠವನ್ನೇ ತ್ಯಜಿಸಿ ಇಲ್ಲಿಗೆ ಬಂದುಬಿಟ್ಟರು.”

“ಬಸವಾ....ಬಸವಾ....ಹೀಗೂ ಆಯಿತೇ? ಆ ಘನಗರ್ಜದ ಜಗದ್ಗುರು ಬಹಳ ಜಗಳಗಂಟ ಅಂತ ಸುದ್ದಿಯಿದೆ ನಿಜವೇ?”

“ನಿಜ, ನೂರಕ್ಕೆ ನೂರರಷ್ಟು ನಿಜ. ತಾನು ಜಗದ್ಗುರು, ತನ್ನ ಪೀಠದ ಅಧೀನದಲ್ಲಿ ನಾಲ್ಕೈದುನೂರು ಚಿಕ್ಕ ಪುಟ್ಟ ಮಠಗಳಿವೆ, ಅವುಗಳಿಗೆಲ್ಲ ತನ್ನದು ಹಿರಿಯ ಮಠ, ಅಷ್ಟೆ. ಅಂದ ಮಾತ್ರಕ್ಕೆ ಈ ನಾಲ್ಕೈದುನೂರು ಮಠಗಳೂ ಈತನ ಆಸ್ತಿಯೇ ಆದಂತಾಗಲಿಲ್ಲ. ಚಿಕ್ಕ ಪುಟ್ಟ ಮಠಾಧಿಕಾರಿಗಳೂ ಸ್ವಾಮಿಗಳೇ. ಇವನೂ ಸ್ವಾಮಿಯೇ. ಅವರೊಂದಿಗೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕೋ ಬೇಡವೋ? ಮೊಗಲ್ ಬಾದಷಹರು ಆಶ್ರಿತ ರಾಜರೊಂದಿಗೆ ನಡೆದುಕೊಳ್ಳುತ್ತಿದ್ದ ಹಾಗೆ ಈತ ಸ್ವಾಮಿಗಳೊಂದಿಗೆ ನಡೆದುಕೊಳ್ಳುತ್ತಾನೆ. ಅವರೆಲ್ಲ ಈತ ಹೇಳಿದ ಹಾಗೆ ಕೇಳಬೇಕು, ಈತ ಹಾಕಿದ ಗೆರೆ ದಾಟ ಕೂಡದು, ಈತ ಪಶ್ಚಿಮಕ್ಕೆ ಪೂರ್ವ ಎಂದರೂ ‘ಹೌದು ಜೀಯಾ’ ಅನ್ನಬೇಕು. ಮೊದಲಿನಿಂದಲೂ ಸ್ವತಂತ್ರ ಮನೋವೃತ್ತಿಯವರಾದ ನಮ್ಮ ಸಿದ್ಧವೀರ ಸ್ವಾಮಿ

ಗಳಿಗೆ ಈತನ ಗುಲಾಮಗಿರಿಯನ್ನು ಸಹಿಸಲಾಗಲಿಲ್ಲ. ನಿನ್ನ ಮಠ ನೀನು ತೆಗೆದುಕೋ ಅಂತ ಹೇಳಿ ಹೊರಟುಬಿಟ್ಟವರು ಮತ್ತೆ ಅವರನ್ನು ಭೆಟ್ಟಿಯಾಗಲಿಲ್ಲ. ಊರಿಗೂ ಹೋಗಲಿಲ್ಲ."

"ಬಸವಾ, ಬಸವಾ. ಇಷ್ಟೆಲ್ಲಾ ಆಯಿತೇ? ಪಾಪ....ಪಾಪ....ಸ್ವಾಮಿಗಳು ಎಷ್ಟು ನೊಂದುಕೊಂಡರೊ ಏನೊ. ಆ ಘನಗರ್ಜದ ಜಗದ್ಗುರುವಿನ ಬಗ್ಗೆ ಇಂಥ ಎಷ್ಟೋ ಸಂಗತಿ ನಾನೂ ಕೇಳಿದ್ದೇನೆ. ನಮ್ಮ ಜಗದ್ಗುರುಗಳು ಮಾತ್ರ ಇಂಥವರಲ್ಲ. ಬಲು ಒಳ್ಳೆಯವರು. ಇವರಂಥ ಗುರುಗಳು ಬಹಳ ಕಡಿಮೆ ನಮ್ಮ ಕರ್ನಾಟಕದಲ್ಲಿ."

ಕೇಳುತ್ತಲಿದ್ದ ನನ್ನ ಕುತೂಹಲ ಕೆರಳಿ ನಿಂತಿತು. ಅವರ ಜಗದ್ಗುರುಗಳು....ಅಂದರೆ? ಇವರ ಊರಲ್ಲೂ ಒಂದು ಜಗದ್ಗುರು ಪೀಠವಿದೆಯೊ ಏನೊ.

ಸೆಟ್ಟರು ಹೇಳುತ್ತಿದ್ದರು: "ನಮ್ಮ ಜಗದ್ಗುರುಗಳಿಗೂ ವಯಸ್ಸಾಗುತ್ತ ಬಂತು. ಮನುಷ್ಯ ಮಾತ್ರರೆಲ್ಲಾ ಮುದುಕರಾಗಲೇಬೇಕಲ್ಲ? ನಮ್ಮ ಜಗದ್ಗುರು ಪೀಠ ಬಹಳ ದೊಡ್ಡ ಪೀಠ. ಘನಗರ್ಜಕ್ಕೆ ಯಾವ ರೀತಿಯಲ್ಲೂ ಕಡಿಮೆಯದಲ್ಲ. ಘನಗರ್ಜದ ಅಧೀನದಲ್ಲಿ ನಾಲ್ಕೈದು ನೂರು ಮಠಗಳಿದ್ದರೆ ನಮ್ಮ ಪೀಠದ ಅಧೀನವಲ್ಲಿ ಏಳುನೂರು ಮಠಗಳಿವೆ. ಏಳೆಂಟುಸಾವಿರ ಎಕರೆಗಳಷ್ಟು ಜಮಿಾನು ಮಠಕ್ಕೆ ಸೇರಿದೆ. ಸಾವಿರಾರು ರೂಪಾಯಿ ಬೆಲೆ ಬಾಳುವ ಮುತ್ತು ರತ್ನಗಳ ಆಭರಣಗಳಿವೆ. ಅನೇಕ ಸಂಸ್ಥಾನಗಳ ರಾಜಮಹಾರಾಜರು ಪೀಠದ ಭಕ್ತರಾಗಿದ್ದು ವರ್ಷವರ್ಷವೂ ಕಾಣಿಕೆ ಒಪ್ಪಿಸುತ್ತಾರೆ."

"ಇಷ್ಟೆಲ್ಲಾ ಇದ್ದರೂ ಏನಂತೆ. ಅದನ್ನೆಲ್ಲ ನೋಡಿಕೊಂಡಿರಲು ಸರಿಯಾದ ಸ್ವಾಮಿಯೆ ಇರದಿದ್ದರೆ ಏನುಪಯೋಗ? ಮುದುಕ ಗುರುಗಳಿಂದ ಈಚೆಗೆ ಏನೂ ಆಗುವಂತಿಲ್ಲ. ಅವರಿಗೆ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ, ಮಠ ಬಿಟ್ಟು ಹೊರಗೆ ಬರಲೂ ಶಕ್ತಿಯಿಲ್ಲ. ಇಂಥ ಪರಿಸ್ಥಿತಿಯಲ್ಲಿ...." ಎಂದು ಮಹಾದೇವಮ್ಮ ಹೇಳುತ್ತಿದ್ದ ಹಾಗೆ ನಡುವೆಯೇ ವೀರಯ್ಯ ಬಾಯಿ ಹಾಕಿ – "ಇನ್ನೂ ಮರಿದೇವರನ್ನು ನೇಮಿಸಿಲ್ಲವೇ ಅಕ್ಕನವರೇ?" ಎಂದ.

"ಮರಿದೇವರು! ಒಳ್ಳೆ ಮರಿದೇವರೇ. ಹತ್ತು ವರ್ಷಗಳ ಕೆಳಗೆ ಒಬ್ಬರನ್ನು ನಿಯಮಿಸಿದ್ದೆವು – ಆತ ಪೀಠದ ಕೆಲಸವನ್ನೆಲ್ಲ ಸರಿಯಾಗಿ ನೋಡಿಕೊಂಡು ಹೋಗಬಹುದೆಂಬ ನಂಬಿಕೆಯಿಂದ. ಆದರೆ ಆತ ಬಲು ವಿಚಿತ್ರ ಮನುಷ್ಯ. ಯಾರ ಮಾತಿಗೂ ಕಿವಿಗೊಡದೆ ತನ್ನ ಮನಸಿಗೆ ಬಂದಂತೆ ನಡೆಯ

ತೊಡಗಿದ. ಕಾರಭಾರಿಯೂ ಆತನೂ ಒಂದಾಗಿ ಮಠದಲ್ಲಿ ಮಾಡಬಾರದಂಥ ಕೆಲಸಗಳನ್ನೆಲ್ಲ ಮಾಡತೊಡಗಿದರು. ಹಣವೂ ಹಾಳು. ಪೀಠದ ಮರ್ಯಾದೆಯೂ ಹಾಳು. ಹೀಗಾಗಿ ಈಗ ಆವನನ್ನು ತೆಗೆದುಹಾಕಿ ಬೇರೊಬ್ಬರನ್ನು ನಿಯಮಿಸಬೇಕೆಂದು ವಿಚಾರ ಮಾಡಿದ್ದೇವೆ."

ಸೆಟ್ಟರು ಹೇಳತೊಡಗಿದ್ದರು: "ಬಸವಾ, ನಿನ್ನ ಆಟ....ಎಲ್ಲಾ ನಿನ್ನ ಆಟ. ನಿನ್ನ ಇಚ್ಛೆಯಿಂದಲ್ಲದೆ ಒಂದು ಕಡ್ಡಿಯೂ ಅತ್ತಿತ್ತ ಸರಿಯುವುದಿಲ್ಲ. ನಮ್ಮ ಪೀಠಕ್ಕೆ ಇಂಥಾ ಕಠಿಣ ಪ್ರಸಂಗ ಬರಲೂ ದೈವ ಚಿತ್ತವೇ ಕಾರಣ."

"ದೈವ ಏನು ಮಾಡೀತು? ಆ ಕಾರಭಾರಿ ಕರಲಿಂಗ, ಈ ಕರೀಮಾರೀ ಸ್ವಾಮಿ ಸೇರಿ ಎಲ್ಲಾ ಮಾಡಿಟ್ಟಿದ್ದಾರೆ. ಪ್ರವಾಸ ಮುಗಿಸಿಕೊಂಡು ಊರಿಗೆ ಹೋಗುತ್ತಲೂ ಮೊದಲು ಆವರಿಬ್ಬರನ್ನೂ ತೆಗೆದುಹಾಕಿ ಬೇರೆ ಜನರನ್ನು ನಿಯಮಿಸಬೇಕು." ಎಂದು ನುಡಿದು ಮಹಾದೇವಮ್ಮ ಒಂದು ಕ್ಷಣ ತಡೆದು ಮತ್ತೆ ಕೇಳಿದಳು:

"ನಾವು ಬಂದು ಇಷ್ಟು ಹೊತ್ತಾದರೂ ಇಲ್ಲಿಯತನಕ ಸ್ವಾಮಿಗಳ ಭೆಟ್ಟಿಯನ್ನೇಕೆ ಮಾಡಿಸಲಿಲ್ಲ?"

ಅದಕ್ಕೆ ವೀರಯ್ಯ, "ಹಾಗೆಲ್ಲ ಅವರು ಅಪರಿಚಿತರನ್ನು ಭೆಟ್ಟಿಯಾಗುವವರಲ್ಲ ಅಕ್ಕನವರೆ. ಅವರ ದರ್ಶನ ಪಡೆಯುವುದೂ ಬಲು ಪ್ರಯಾಸದ ಕೆಲಸ," ಎಂದು ಹೇಳಿದ. ಅವನ ಬೆನ್ನು ತಟ್ಟಿ 'ಶಹಬ್ಬಾಸ್' ಹೇಳಬೇಕೆಂದು ನನಗೆ ಮನಸ್ಸಾಯಿತು. ವೀರಯ್ಯ ಪಕ್ಕದ ಕೋಣೆಯಲ್ಲಿದ್ದನಾದುದರಿಂದ ಹಾಗೆ ಮಾಡಲು ಸಾಧ್ಯವಿರಲಿಲ್ಲ. ನನ್ನ ಬೆನ್ನನ್ನೇ ವೀರಯ್ಯನ ಬೆನ್ನೆಂದು ಭಾವಿಸಿ ಅದನ್ನೇ ತಟ್ಟಿಕೊಂಡು ಮನಸಿನಲ್ಲೇ 'ಶಹಬ್ಬಾಸ್' ಹೇಳಿದೆ.

"ಹಾ, ಹೀಗೂ ಉಂಟೇ?" ಅದು ಸೆಟ್ಟರ ಧ್ವನಿ.

"ಹೌದು ಸೆಟ್ಟರೆ. ಮೊದಲಿನಿಂದಲೂ ನಮ್ಮ ಸ್ವಾಮಿಗಳು ಹೀಗೆಯೆ. ಬೇರೆ ಸ್ವಾಮಿಗಳಂತೆ ಸಿಕ್ಕ ಸಿಕ್ಕವರನ್ನು ಕಾಣುವುದಿಲ್ಲ. ಆವರಿವರ ಮನೆಗಳಿಗೂ ಹೋಗುವುದಿಲ್ಲ. ಭಕ್ತರ ಮನೆಗಳಿಗೆ ಊಟಕ್ಕೆ ಹೋಗುವುದಂತೂ ಬಹಳ ಕಡಿಮೆ."

"ನನಗೂ ಇಂಥ ಸ್ವಾಮಿಗಳೆಂದರೆ ಬಹಳ ಮೆಚ್ಚಿಗೆ. ವಿರಕ್ತರಾದವರು ವಿರಕ್ತರ ಹಾಗೆ ಇದ್ದರೇನೇ ಚೆಂದ ಅಲ್ಲವೆ? ಬಸವಾ, ಬಸವಾ, ಏನು ನಿನ್ನ

ಆಟ! ಈಚೆಗೆ ವಿರಕ್ತರೆಲ್ಲಾ ಹಾದಿ ತಪ್ಪಿ ನಡೆಯುತ್ತಿದ್ದಾರೆ. ನಮ್ಮ ಮಠದ ಆ ಮರಿಸ್ವಾಮಿಗಳು....ಬಸವಾ....ಬಸವಾ...."

"ಮಠದ ಕೀರ್ತಿಯನ್ನೆಲ್ಲ ಹಾಳು ಮಾಡಿದರು. ಸಾಧ್ಯವಾದಷ್ಟು ಬೇಗ ಅವರನ್ನು ತೆಗೆದುಹಾಕಬೇಕು. ಈ ನಿಮ್ಮ ಸ್ವಾಮಿಗಳೀಗ ಎಲ್ಲಿದ್ದಾರೆ ಪಂಡಿತರೇ? ಕಾಣುವುದಿಲ್ಲವಲ್ಲಾ ?"

"ಇಂಥಲ್ಲಿಯೇ ಇರುತ್ತಾರೆಂದು ಹೇಳುವಂತಿಲ್ಲ ಅಕ್ಕನವರೆ. ಕೈಯಲ್ಲೊಂದು ಪುಸ್ತಕ ಹಿಡಿದುಕೊಂಡು ನದೀತೀರದಲ್ಲಿನ ಗಿಡದ ಕೆಳಗೆ ಕುಳಿತುಬಿಟ್ಟರೆಂದರೆ ಪ್ರಪಂಚವನ್ನೆಲ್ಲ ಮರೆತುಬಿಡುತ್ತಾರೆ. ಊಟ ಉಡಿಗೆಗಳ ಕಡೆಗೂ ಲಕ್ಷ್ಯವಿರುವುದಿಲ್ಲ ಅವರಿಗೆ. ರಾತ್ರಿ ಬಂದರೆ ಬಂದರು, ಇಲ್ಲವಾದರೆ ಇಲ್ಲ."

"ರಾತ್ರಿ ಇಲ್ಲಿಗೇ ಬರುತ್ತಾರೆಯೇ?"

"ಹೌದು. ನನ್ನ ಕೋಣೆಯಲ್ಲೇ ಅವರಿರುವುದು. ಆದರೆ ಒಂದೊಂದು ರಾತ್ರಿ ನದೀತೀರದಲ್ಲೇ ಕಳೆದುಬಿಡುವುದುಂಟು.

"ಹಾಗಾದರೆ ನಿಜವಾಗಿಯೂ ಅವರು ಸಾಧುಗಳೇ ಆದಂತಾಯಿತು. ಇಂಥ ವಿರಕ್ತರು ಬಹಳ ಕಡಿಮೆಯಪ್ಪ ಇಂದಿನ ಕಾಲದಲ್ಲಿ. ಏನಾದರೂ ಮಾಡಿ ಬೇಗ ಅವರ ದರ್ಶನವಾಗುವಂತೆ ಮಾಡಿರಿ ಪಂಡಿತರೇ," ಎಂದರು ಸೆಟ್ಟರು.

[೪]

ಐದು ನಿಮಿಷ ಕಳೆದ ಬಳಿಕ ವೀರಯ್ಯ ಕೋಣೆಗೆ ಬಂದ. ಹರ್ಷಾತಿರೇಕದಿಂದ ನಾನು ಅವನನ್ನು ತಬ್ಬಿಕೊಳ್ಳಲು ಮುಂದಾಗುತ್ತಿದ್ದ ಹಾಗೆ ಆತ 'ಚ್ ಚ್' ಎಂದು ಧ್ವನಿ ತೆಗೆದು, ತುಟಿಗಳ ಮೇಲೆ ಬೆರಳಿಟ್ಟುಕೊಂಡು ಸುಮ್ಮನಿರಲು ಸೂಚಿಸಿದ. ಹಾಸಿದ್ದ ಚಾಪೆಯ ಮೇಲೆ ಮಲಗಿಕೊಂಡು, ನನಗೂ ಮಲಗಿಕೊಂಡಿರಲು ಸನ್ನೆ ಮಾಡಿದ.

"ಇದುವರೆಗೆ ಎಲ್ಲಾ ಬಹಳ ಎಚ್ಚರಿಕೆಯಿಂದ ಬಂದಿದೆ. ಈಗ ಸ್ವಲ್ಪವೂ ಪ್ರಮಾದವಾಗಬಾರದು. ಸೆಟ್ಟರಿಗೆ ನಿಮ್ಮ ಮೇಲೆ ಬಹಳ ಭಕ್ತಿ ಹುಟ್ಟಿದೆ. ಅದು ಹಾಗೇ ಉಳಿದರೆ ಕೆಲಸ ಸಾಧಿಸಬಹುದು." ಎಂದು ನನ್ನ ಕಿವಿಯಲ್ಲಿ ಉಸುರಿದ ವೀರಯ್ಯ.

"ಆ ಮಹಾದೇವಮ್ಮನೂ ಮರುಳಾಗಿರುವಳೇ?" ಎಂದು ನಾನು ಪಿಸುದನಿಯಲ್ಲಿ ಕೇಳಿದೆ.

"ಅವಳ ಮನಸ್ಸಿನ ಮೇಲೂ ಪ್ರಭಾವ ಬಿದ್ದಂತಿದೆ. ಆದರೆ ಸೆಟ್ಟರ ಹಾಗೆ ಆಕೆಯದು ಭೋಳೇ ಸ್ವಭಾವವಲ್ಲ. ಆಕೆ ಒಮ್ಮೆಲೆ ಯಾವುದನ್ನೂ ನಂಬುವವಳಲ್ಲ ಎಂದು ತೋರುತ್ತದೆ. ನಿಮ್ಮನ್ನು ನೋಡಿ ನಿಮ್ಮೊಂದಿಗೆ ಮಾತಾಡಿದ ಮೇಲೇ ಅವಳು ನಿಮ್ಮ ಬಗ್ಗೆ ಯಾವುದೊಂದು ಅಭಿಪ್ರಾಯಕ್ಕೆ ಬಂದಾಳು. ನೀವು ಬಹಳ ಹುಷಾರಾಗಿರಬೇಕು."

ನಿದ್ದೆಯೆಂದರೆ ಬಲು ಪ್ರೀತಿ ವೀರಯ್ಯನಿಗೆ. ಅದರಲ್ಲೂ ನಡುವಗಲಿನ ನಿದ್ದೆಯೆಂದರೆ ಇನ್ನೂ ಪ್ರೀತಿ. ಎಂಥ ಕೆಲಸದಲ್ಲಿದ್ದರೂ ಸಹ ಅದರಲ್ಲೆ ಕೊಂಚ ಪುರಸತ್ತು ದೊರಕಿಸಿಕೊಂಡು ಒಂದರ್ಧ ಗಂಟೆಯಷ್ಟಾದರೂ ನಿದ್ದೆ ತೆಗೆದೇಬಿಡುತ್ತಾನೆ ಆತ. ಮಧ್ಯಾಹ್ನ ನಿದ್ದೆಯಾಗದಿದ್ದ ದಿನವೆಲ್ಲ ಅವನಲ್ಲಿ ಚಟುವಟಿಕೆಯೇ ಇರುವುದಿಲ್ಲ. ಮುಖ ಬಳಲಿದಂತೆ ಕಾಣುತ್ತದೆ, ಧ್ವನಿಯಲ್ಲಿ ಉತ್ಸಾಹವಿರುವುದಿಲ್ಲ, ತುಟಿಗಳಲ್ಲಿ ನಗೆಯಿರುವುದಿಲ್ಲ. ನಿದ್ದೆ ಮಾಡಿ ಎದ್ದಾಗ ಮಾತ್ರ ಇಸ್ತ್ರಿ ಆದ ಬಟ್ಟೆಯಂತೆ ಕಾಣುತ್ತಾನೆ ಆತ.

ಒಂದೆರಡು ನಿಮಿಷಗಳಲ್ಲಿಯೇ ವೀರಯ್ಯನಿಗೆ ನಿದ್ದೆ ಹತ್ತಿತು. ನಾನೂ ಬಲ ಮಗ್ಗುಲಾಗಿ ಮಲಗಿ ನಿದ್ರಿಸಲು ಪ್ರಯತ್ನಿಸತೊಡಗಿದೆ. ಅಂಗವಸ್ತ್ರವನ್ನು ಮುಖದ ಮೇಲೆಳೆದುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡೆ. ನಿದ್ದೆ ಬರುವಂತೆ ಕಾಣಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಯಾವು ಯಾವುವೊ ದೃಶ್ಯಗಳು ಕಣ್ಣೆದಿರು ಸುಳಿಯತೊಡಗಿದುವು. ಮುಖದ ಮೇಲೆ ಅಂಗವಸ್ತ್ರದ ಬದಲು ಸೀರೆಯ ಸೆರಗು ಹರಡಿಕೊಂಡಿದೆಯೆಂದು ಭಾಸವಾಗತೊಡಗಿತು.

[೫]

ಸೀರೆಯ ಸೆರಗು !

ಎಲ್ಲಕ್ಕೂ ಮೊದಲು ನನ್ನ ಮುಖದ ಮೇಲಾಡಿದ ಕಡು ನೀಲವರ್ಣದ ರೇಶಿಮೆಯ ಸೆರಗು! ಆ ಸೆರಗಿನಂತೆ ಅದನ್ನು ಧರಿಸುವ ವ್ಯಕ್ತಿಯೂ ಕೊಂಚ ಭಾರವಾದುದೇ ಆಗಿತ್ತು. ಅವಳು ನನ್ನ ಚಿಕ್ಕತನದ ಗೆಳತಿ ಪಾರ್ವತಿ. ಅವಳದು ದಪ್ಪಗಿನ ದೇಹವಾದರೂ ಚೆಲುವಿಕೆಯಲ್ಲಿ ಬೇರಾರಿಗೂ ಕಡಿಮೆಯವಳಾಗಿರಲಿಲ್ಲ ಈಕೆ. ನಾನು ಹದಿನೆಂಟು ವರ್ಷದವನೂ ಆಕೆ ಹದಿನಾರು

ವರ್ಷದವಳೂ ಆಗಿದ್ದಾಗ ಮೊದಲ ಬಾರಿಗೆ ನನ್ನ ಮುಖದ ಮೇಲಾಡಿತು ಅವಳ ಸೆರಗು. ಅಂದಿನ ಆ ರಸಪೂರ್ಣ ಸನ್ನಿವೇಶ....

ಚೆನ್ನಾಗಿ ನೆನಪಿದೆ ನನಗೆ. ದವನದ ಹುಣ್ಣಿಮೆಯ ರಾತ್ರಿ ಅದು. ಆ ಊರಿನ ಬಸವಣ್ಣ ದೇವರ ಜಾತ್ರೆಯಿತ್ತು. ಅದಕ್ಕೆಂದೇ ಅಲ್ಲಿಗೆ ಬಂದಿದ್ದ ನಾನು ಪಾರ್ವತಿಯ ಮನೆಯಲ್ಲಿಯೆ – ಅವಳ ತವರು ಮನೆಯಲ್ಲಿ – ಉಳಿದು ಕೊಂಡಿದ್ದೆ. ಚಿಕ್ಕಂದಿನಿಂದಲೂ ಅವರ ಮನೆಯಲ್ಲಿ ನನ್ನ ಬಳಕೆ ಬಹಳ. ಅವಳ ತಂದೆತಾಯಿಗಳಿಗೂ ನನ್ನ ಬಗ್ಗೆ ಬಹಳ ಪ್ರೀತಿಯಿತ್ತು.

ಜಾತ್ರೆಯ ಸಿಹಿಯೂಟ ಹೊಡೆದು ತಾಂಬೂಲ ಸವಿದು ನನಗಾಗಿ ಗೊತ್ತುಪಡಿಸಿದ್ದ ಕೋಣೆಯಲ್ಲಿನ ಮಂಚದ ಮೇಲೆ ನಾನು ಪವಡಿಸಿದ್ದೆ. ಮಂಚಕ್ಕೆದುರಾಗಿದ್ದ ಕಿಟಕಿಯ ಮೂಲಕ ಹೊರಗಿನ ಬೆಳದಿಂಗಳಿನ ಶೋಭೆ ಮನಸ್ಸನ್ನು ಮುದಗೊಳಿಸುತ್ತಿತ್ತು. ರಾತ್ರಿ ಬಹಳ ಹೊತ್ತು ಕಳೆದರೂ ನನಗೆ ನಿದ್ದೆ ಬಂದಿರಲಿಲ್ಲ. ಎದೆಯಲ್ಲಿ ಏನೋ ಕಳವಳ, ಏನೋ ಕಾತರ, ಏನೋ ಬಯಕೆ. ಅಂದು ರಾತ್ರಿ ಊಟ ನೀಡುತ್ತಿದ್ದ ಪಾರ್ವತಿಯ ನಗುಮುಖ, ಕಡೆಗಣ್ಣ ನೋಟ, ಒಯ್ಯಾರದ ವರ್ತನೆ ನೆನಪಿಗೆ ಬಂದು ಮನಸ್ಸನ್ನು ಕಲಮಲ ಗೊಳಿಸುತ್ತಿತ್ತು.

ಅದರ ಹಿಂದಿನ ವರ್ಷವೇ ಪಾರ್ವತಿಯ ಮದುವೆಯಾಗಿತ್ತು. ಭಾರಿ ಸಿರಿವಂತರ ಮನೆಗೇ ಅವಳನ್ನು ಕೊಟ್ಟಿದ್ದರಂತೆ. ಗಂಡನೂ ಇನ್ನೂ ಯುವಕ ನಾಗಿದ್ದನಂತೆ. ಮೊದಲನೆಯ ಬಾರಿ ಗಂಡನ ಮನೆಗೆ ಹೋಗಿ, ನಾಲ್ಕು ತಿಂಗಳುಗಳವರೆಗೆ ಸಂಸಾರ ಮಾಡಿ ಜಾತ್ರೆಯ ನಿಮಿತ್ತವಾಗಿ ತವರು ಮನೆಗೆ ಬಂದಿದ್ದಳಾಕೆ.

ನಟ್ಟಿರುಳು ದಾಟಿದರೂ ನಿದ್ದೆ ಬಂದಿರಲಿಲ್ಲ ನನಗೆ. ಮಂಚದಿಂದೆದ್ದು ಮೆಲ್ಲನೆ ಬಾಗಿಲು ತೆಗೆದು ಹೊರಗಡೆ ಹೋಗಿದ್ದೆ. ನನ್ನ ಕೋಣೆಯ ಎದುರಿಗೇ ಪಾರ್ವತಿಯ ಕೋಣೆ. ಅದರೆದುರಿಗೆ ಹಾದು ಹೊರಟಿದ್ದ ಹಾಗೆ ನನ್ನ ಎದೆ ನಡುಗತೊಡಗಿದ್ದಿತು. ಪ್ರಚಂಡ ಮಾದಕತೆಯೊಂದು ನನ್ನ ಶರೀರವನ್ನೆಲ್ಲ ಆವರಿಸಿಕೊಂಡು ನನ್ನನ್ನು ಮೂಢನನ್ನಾಗಿ ಮಾಡುತ್ತಿದ್ದಿತು. ನನ್ನ ಹಾಗೆಯೆ ಪಾರ್ವತಿಯೂ ನಿದ್ದೆಯಿಲ್ಲದೆ ಎಚ್ಚರವಾಗಿರಬಹುದೇ? ನಾನು ಅವಳನ್ನು ನೆನೆಯುತ್ತ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ಹಾಗೆ ಅವಳೂ ನನ್ನನ್ನು ನೆನೆಯುತ್ತ ಮಗ್ಗುಲು ಬದಲಿಸುತ್ತಿರಬಹುದೇ? – ಎಂದು ಯೋಚಿಸಿ ನಾನು

ಅವಳ ಕೋಣೆಯ ಬಾಗಿಲಿಗೆ ಕಿವಿಯಿಟ್ಟು ಆಲಿಸಿದ್ದೆ. ಒಳಗಡೆ ಏನೋ ಸದ್ದಾದ ಹಾಗೆ ಕೇಳಿಬಂದಿದ್ದಿತು. ಪಾರ್ವತಿ ಹೊರಳಾಡುವಾಗ ಆಗುವ ಸದ್ದೇ ಇರಬೇಕು ಅದು – ಎಂದೆನ್ನಿಸಿದ್ದಿತು.

ಬಾಗಿಲನ್ನು ಮೆಲ್ಲನೆ ತಟ್ಟಿ ಅವಳನ್ನೆಬ್ಬಿಸಲೇ – ಎಂದು ಯೋಚಿಸುತ್ತ ಒಂದು ಕ್ಷಣ ಹಾಗೇ ಅಲ್ಲಿಯೇ ನಿಂತುಕೊಂಡಿದ್ದೆ. ತಟ್ಟಲು ಧೈರ್ಯವಾಗಿರಲಿಲ್ಲ. ಬಯಕೆಯನ್ನು ಬಿಗಿಹಿಡಿದುಕೊಂಡು ತುಂಬಾ ಕಷ್ಟದಿಂದ ದೂರ ನಡೆದಿದ್ದೆ. ಹೊರಗಡೆ ತಿಂಗಳ ಬೆಳಕು ಸುಂದರ ಯುವತಿಯ ನಗೆಯಂತೆ ಹರಡಿಕೊಂಡಿತ್ತು. ಹಾಲುಗಲ್ಲದ ಹಾಲುಗಣ್ಣಿನ ಹಾಲುಮುಖದ ಮುದ್ದು ಚಂದ್ರನನ್ನು ದಿಟ್ಟಿಸಿದ ಹಾಗೆಲ್ಲ ನನ್ನ ಕಣ್ಣೆದುರು ಪಾರ್ವತಿಯ ಸುಂದರ ಮುಖವೇ ಬಂದು ನಿಲ್ಲುತ್ತಿತ್ತು. ಮತ್ತೆ ಅವಳ ಕೋಣೆಯ ಬಳಿ ಸುಳಿದಿದ್ದೆ, ಮತ್ತೆ ಹೊರಗಡೆ ಬಂದಿದ್ದೆ. ಜೇಲಿಯನ್ನು ದಾಟಿ ಅವಳ ಕೋಣೆಯ ಕಿಟಕಿಯ ಬಳಿ ಹೋಗಿ ದೃಷ್ಟಿಯನ್ನು ಒಳಗಡೆ ಹರಿಬಿಟ್ಟಿದ್ದೆ. ಪಟ್ಟಿ ಪಟ್ಟಿಯಾಗಿ ಪ್ರವೇಶಿಸಿದ್ದ ಚಂದ್ರ ಕಿರಣಗಳ ಮಂದ ಬೆಳಕಿನಲ್ಲಿ ಮಂಚದ ಮೇಲೆ ಕಾಣುತ್ತಿದ್ದ ಅವಳ ಸುಂದರ ಶರೀರ.... ಬಿಳಿಯ ಮಗ್ಗುಲು ಹಾಸಿಗೆಯ ಮೇಲೆ ಸೂರೆಯಾಗಿದ್ದ ಕಪ್ಪು ಕೂದಲು.... ನಿಧಾನವಾಗಿ ಏರಿ ಇಳಿಯುತ್ತಿದ್ದ ತುಂಬಿದ ಎದೆ....ಅದರ ಮೇಲೊರಗಿಕೊಂಡಿದ್ದ ಎಡಗೈ....

ನೋಡುತ್ತ ನಿಂತಿದ್ದೆ, ಹಾಗೇ ಎಷ್ಟೋ ಹೊತ್ತು ಅಲ್ಲಿಯೇ ನಿಂತಿದ್ದೆ. ಅಲ್ಲಿಂದ ಕದಲಲು ಮನಸ್ಸಾಗುತ್ತಿರಲಿಲ್ಲ.

ಪಾರ್ವತಿಯ ತುಂಬು ಜವ್ವನದ ದೇಹವನ್ನು ಕಂಡು ಸೋಲದಿರಲು ನಾನೇನೂ ವಿರತನಾಗಿರಲಿಲ್ಲ. ಆವೇಳೆಗಾಗಲೆ ನಾನು ಕಾವಿ ಬಟ್ಟೆ ಧರಿಸಿ ಮಠಸ್ವಾಮಿಯಾಗಿದ್ದೆನಾದರೂ ಆ ಕಾರ್ಯದಲ್ಲಿ ನನಗೆ ಕೊಂಚವೂ ಶ್ರದ್ಧೆಯಿರಲಿಲ್ಲ. ನನ್ನ ಅಭಿಪ್ರಾಯವನ್ನು ಕೇಳುವ ಗೊಡವೆಗೇ ಹೋಗದೆ ನನ್ನ ತಂದೆ ನನ್ನನ್ನು ಮಠವೊಂದಕ್ಕೆ ಮರಿ ಬಿಟ್ಟಿದ್ದ. ಒತ್ತಾಯದಿಂದ ನನ್ನ ಇಚ್ಛೆಗೆ ವಿರುದ್ಧವಾಗಿ ನನಗೆ ವಿರಕ್ತಿಯನ್ನು ತೊಡಿಸಲಾಗಿದ್ದಿತು. ನನ್ನ ಸ್ವಭಾವವೇ ವಿಸಂಗತವಾದ ವಿಷಯ ವಿರಕ್ತಿ. ಬಾಲ್ಯದಿಂದಲೂ ಹೆಣ್ಣೆಂದರೆ ವಿಪರೀತ ಹುಚ್ಚು. ಸ್ವಾಮಿಯಾದುದರಿಂದ ನಾನು ಸಂಸಾರಿಯಾಗುವಂತಿರಲಿಲ್ಲ, ನನ್ನ ಮನಸ್ಸಿಗೊಪ್ಪಿದ ಹೆಣ್ಣನ್ನು ಮದುವೆಯಾಗುವಂತಿರಲಿಲ್ಲ. ಇನ್ನೇನು ಮಾಡುವುದು?

ಕಿಟಕಿಯ ಕಂಬಿಗಳ ಬಳಿ ಮುಖವಿಟ್ಟು ನಾನು ತೀರ ಮೆಲ್ಲಗಿನ ಧ್ವನಿಯಲ್ಲಿ ಕೂಗಿ ಕರೆದಿದ್ದೆ: "ಪಾರ್ವತೀ," ಎಂದು.

ಗೋಡೆಯ ಕಡೆ ಮುಖ ತಿರುಗಿಸಿ ಮಲಗಿದ್ದ ಪಾರ್ವತಿ ಬೆಚ್ಚಿಬಿದ್ದು ನನ್ನ ಕಡೆ ಹೊರಳಿದಳು.

"ಪಾರ್ವತೀ....ಪಾರೂ....ಪಾರೀ...."

ಪಾರ್ವತಿ ಧಿಗ್ಗನೆದ್ದು ಮಂಚದ ಮೇಲೆ ಕುಳಿತುಕೊಂಡಿದ್ದಳು.

"ಬಾಗಿಲು ತೆಗೆ ಪಾರೂ...."

ಮೋಹಕವಾದ ಆಲಸ್ಯದಿಂದ ಮೈ ಮುರಿಯುತ್ತ ಆಕೆ ಎದ್ದು ಕಿಟಕಿಯ ಹತ್ತಿರ ಬಂದು ನಿಂತುಕೊಂಡು ಭಯದಿಂದ ಕಂಪಿಸುವ ಧ್ವನಿಯಲ್ಲಿ ನುಡಿದಿದ್ದಳು: "ಅಪ್ಪ ಅವ್ವಗೆ ಗೊತ್ತಾದರೆ?"

ಕಂಬಿಗಳೊಳಗಿನಿಂದ ಕೈ ಹಾಕಿ ಅವಳ ಮುಖವನ್ನು ಸಮೀಪಕ್ಕೆ ಎಳೆದು ಕೊಂಡು ನಾನು ಹೇಳಿದ್ದೆ: "ಹ್ಯಾಗೆ ಗೊತ್ತಾಗುಗ್ತದೆ? ನಡುರಾತ್ರಿ. ಎಲ್ಲರೂ ಮಲಗಿದ್ದಾರೆ. ಬಾಗಿಲು ತೆಗೆ ಪಾರೂ...."

ಬಾಗಿಲು ತೆಗೆದಿದ್ದಳು ಪಾರ್ವತಿ. ಒಳಗಿನಿಂದ ಚಿಲಕ ಹಾಕಿ ಅವಳನ್ನು ಬಿಗಿದಪ್ಪಿಕೊಂಡು ಈ ಲೋಕವನ್ನೇ ಮರೆತುಬಿಟ್ಟದ್ದೆ.

ಆಮೇಲೆ ಅನೇಕ ದಿನಗಳವರೆಗೆ ನನಗೆ ಅವಳ ಸಹವಾಸ ಲಭಿಸಿದ್ದಿತು; ಜಾತ್ರೆ ಮುಗಿದುಹೋದರೂ ಆ ಊರು ಬಿಟ್ಟು ಹೊರಡುವ ಮನಸ್ಸು ಬಂದಿರಲಿಲ್ಲ. ಪಾರ್ವತಿಯೂ ಗಂಡನ ಮನೆಗೆ ಹೋಗುವ ಆತುರ ವ್ಯಕ್ತ ಗೊಳಿಸುತ್ತಿರಲಿಲ್ಲ....

....ಈ ನಗರದ ಪ್ರಖ್ಯಾತ ವೇಶ್ಯಾಮಣಿ ಜಹಾನಾರ!

ಒಂದು ಮಧ್ಯಾಹ್ನ....

ಇಂದು ಹೀಗೆ ಇಲ್ಲಿ ಒರಗಿರುವಂತೆ ಅಂದು ಜಹಾನಾರಳ ಮಂಚದ ಮೇಲೊರಗಿದ್ದೆ. ನನ್ನ ಪಕ್ಕದಲ್ಲಿ ದಿಂಬುಗಳಿಗೊರಗಿ ಕುಳಿತುಕೊಂಡು ಕಾದಂಬರಿಯೊಂದನ್ನೋದುತ್ತಲಿದ್ದಳು ಜಹಾನಾರ.

ಮಧ್ಯಾಹ್ನ ನಿದ್ದೆ ಮಾಡುವ ಚಟ ಜಹಾನಾರಳಿಗಿರಲಿಲ್ಲ. ಕತೆ ಕಾದಂಬರಿಗಳೆಂದರೆ ತುಂಬಾ ಪ್ರೀತಿ. ಅವುಗಳನ್ನು ಹಿಡಿದುಕೊಂಡು ಕುಳಿತ ಳೆಂದರೆ ಬಾಹ್ಯಪ್ರಪಂಚವನ್ನೆಲ್ಲ ಮರೆತುಬಿಡುತ್ತಿದ್ದಳು. ಆ ದಿನವೂ ಹಾಗೇ ಆಗಿತ್ತು. ಅವಳ ಪಕ್ಕದಲ್ಲಿ ನಾನು ಪವಡಿಸಿದ್ದುದು, ನನಗೆ ನಿದ್ದೆ ಬರುತ್ತಿದ್ದುದು

ಅವಳ ಸೀರೆಯ ಸೆರಗಿನ ಹುಡುಗಾಟದಿಂದಾಗಿ ನನ್ನ ನಿದ್ದೆಗೆ ಆತಂಕವೊದಗುತ್ತಿದ್ದುದು – ಇದಾವುದೂ ಅವಳ ಗಮನಕ್ಕೆ ಬಂದಿರಲಿಲ್ಲ.

ನವಿಲುಗರಿಯಂತೆ ನಯವಾಗಿದ್ದ ಆ ಸೆರಗನ್ನು ನಾನು ಕೈಗೆ ತೆಗೆದುಕೊಂಡು ಅದರ ಪರಿಮಳವನ್ನು ಹೀರಿಕೊಂಡಿದ್ದೆ. ಒಡನೆಯೆ ಜಹಾನಾರಳ ಲಕ್ಷ್ಯ ನನ್ನತ್ತ ತಿರುಗಿದ್ದಿತು. ಪುಸ್ತಕವನ್ನು ಕೈಲಿ ಹಿಡಿದುಕೊಂಡಿದ್ದಂತೆಯೆ ಅವಳು ನನ್ನ ಕಡೆ ದೃಷ್ಟಿ ಹೊರಳಿಸಿದ್ದಳು.

"ಏನದು? ಏನು ವಿಚಾರ ನಡೆಸಿದ್ದೀರಿ? ಅರ್ಥಾತ್ ಅವಳು ಮಾತನಾಡಿದ್ದು ಹಿಂದುಸ್ಥಾನಿಯಲ್ಲಿ. ನಾನು ಆ ಭಾಷೆಯಲ್ಲಿಯೆ ಅವಳೊಂದಿಗೆ ವ್ಯವಹರಿಸುತ್ತಿದ್ದೆ. ಉತ್ತರ ಹಿಂದುಸ್ಥಾನದ ಈ ನಗರದಲ್ಲಿ ಕನ್ನಡ ಯಾರಿಗೆ ತಾನೆ ತಿಳಿದೀತು?

"ವಿಚಾರವೇನೂ ಇಲ್ಲ ಪ್ಯಾರೀ. ಹಿಂದಿನ ನೆನಪು ಬಂದಿತ್ತು ಅಷ್ಟೆ."

ಜಹಾನಾರ ನಗುತ್ತಾ ತನ್ನ ಸೆರಗನ್ನೆಳೆದುಕೊಂಡು, ನನ್ನ ಕೆನ್ನೆಯ ಮೇಲೆ ಮೃದುವಾದ ಏಟು ಬಿಟ್ಟು ಕೇಳಿದ್ದಳು:

"ನೆನಪು? ಎಂಥಾ ನೆನಪು?"

"ನಿನ್ನ ಈ ಸೆರಗು ಮುಖದ ಮೇಲಾಡುತ್ತಿದ್ದ ಹಾಗೆ ಈ ಹಿಂದೆ ನನ್ನ ಮುಖದ ಮೇಲಾಡಿದ ಅನೇಕ ಸೆರಗುಗಳ, ಅವುಗಳ ಒಡತಿಯರ ನೆನಪು ಬಂದಿತ್ತು."

"ನೀವು ರಸಿಕರೆಂಬುದನ್ನು ಬಲ್ಲೆ. ನಿಮ್ಮ ಜೀವನವೇ ಒಂದು ಕಾದಂಬರಿಯಾದರೂ ಆಗಬಹುದೇನೊ. ಇಷ್ಟು ದಿನ ನನ್ನೊಡನಿದ್ದರೂ ಒಮ್ಮೆಯೂ ನಿಮ್ಮ ಹಿಂದಿನ ಜೀವನದ ಬಗ್ಗೆ ನನಗೇನೂ ತಿಳಿಸಿಲ್ಲವಲ್ಲ ನೀವು?"

"ಅದನ್ನೆಲ್ಲ ಕೇಳಿ ಏನು ಮಾಡುವೆ ಪ್ಯಾರೀ?"

ಏನು ಮಾಡುವೆನೊ. ಕತೆ ಕಾದಂಬರಿ ಓದಿ ಏನು ಮಾಡುವೆ ಎಂದು ಕೇಳಿದಂತಾಯಿತು ಈ ಪ್ರಶ್ನೆ. ಹೇಳುವುದಿಲ್ಲವೇ ನನಗೆ ನಿಮ್ಮ ಕತೆಯನ್ನು?"

"ನೀನೂ ಒಂದು ಕಾದಂಬರಿ ಬರೆಯುತ್ತೀಯಾ ಪ್ಯಾರೀ, ನನ್ನ ಜೀವನದ ಮೇಲೆ?"

"ಅದೆಲ್ಲ ನನ್ನಿಂದ ಆಗದ ಕೆಲಸ. ಕೇಳಿ, ಓದಿ ಸಂತೋಷಪಡುವುದೆಷ್ಟೋ ಅಷ್ಟೆ."

"ಪಾಪಿಗಳ ಕತೆ ಕೇಳುವುದರಿಂದ ಎಂಥ ಸಂತೋಷವಾಗುತ್ತದೆಯೇ ಪ್ಯಾರೀ?"

"ಜಗತ್ತಿನಲ್ಲಿ ಪುಣ್ಯವಂತರೆಷ್ಟು ಜನರಿದ್ದಾರೆ, ಹೇಳಿ. ಲಕ್ಷಕ್ಕೊಬ್ಬನೋ ಕೋಟಿಗೊಬ್ಬನೋ ಪವಿತ್ರ ವ್ಯಕ್ತಿಯಿದ್ದಾನು. ಉಳಿದವರೆಲ್ಲಾ ಪಾಪಿಗಳೇ. ಒಂದಿಲ್ಲೊಂದು ದೃಷ್ಟಿಯಿಂದ ಪಾಪಿಗಳೇ, ದುರ್ಬಲರೇ, ಪತಿತರೇ. ಜೀವನ ವೊಂದು ನದಿಯಿದ್ದ ಹಾಗೆ ಅಂತ ಹೇಳುತ್ತಾರೆ ಕವಿಗಳು. ದಾರಿ ಒಂದೇ ಸಮನಾಗಿರುವುದಿಲ್ಲ. ಹಳ್ಳ ತಿಟ್ಟುಗಳಿರುತ್ತವೆ, ಏರಿಳಿತಗಳಿರುತ್ತವೆ, ಆಗಾಗ ಎಡಹುವ ಪ್ರಸಂಗಗಳೂ ಬರುತ್ತವೆ. ಹೇಗೂ ನಡೆದು ಸಮುದ್ರವನ್ನು ತಲುಪಿದ ರಾಯಿತು. ಹರಿಯುವ ಹೊಳೆಗೆ ಪಾಪವೇನು, ಪುಣ್ಯವೇನು?"

"ಒಳ್ಳೆ ಕವಯತ್ರಿಯಂತೆ ಮಾತಾಡುವೆಯಲ್ಲ ಪ್ಯಾರೀ!" ಎಂದು ನಾನು ಕೌತುಕದಿಂದ ಹೇಳಿದ್ದೆ.

"ಎಂಥ ಕವಯತ್ರಿಯೊ! ನನ್ನ ದುಡಿತದಲ್ಲಿ ಅದಕ್ಕೆಲ್ಲ ಪುರಸತ್ತು ಸಿಕ್ಕಬೇಕಲ್ಲ? ಈಚೆಗೆ ಕೊಂಚ ವಿರಾಮವಾಗಿದ್ದೇನೆ, ಅಷ್ಟೆ. ಎರಡು ಮೂರು ವರ್ಷಗಳ ಹಿಂದೆ ಪುಸ್ತಕ ಕೈಗೆತ್ತಿಕೊಳ್ಳುವುದಕ್ಕೂ ಬಿಡುವಾಗುತ್ತಿರಲಿಲ್ಲ."

ನಾನು ಕನಿಕರದಿಂದ ಪ್ರಶ್ನಿಸಿದ್ದೆ: "ಬಹಳ ಕಷ್ಟಪಟ್ಟೆಯಾ ಪ್ಯಾರೀ?"

"ಅಂದು ಕಷ್ಟಪಟ್ಟೆನೆಂತಲೇ ಇಂದು ವಿರಾಮವಾಗಿರಲು ಸಾಧ್ಯವಾಗಿದೆ. ಯುದ್ಧಕಾಲದಲ್ಲಿ ಈ ನಗರದ ಹತ್ತಿರದಲ್ಲಿಯೇ ಮಿಲಿಟರಿ ಹೆಡ್ ಕ್ವಾರ್ಟರ್ಸ್ ಇದ್ದಿತಲ್ಲ? ದೊಡ್ಡ ದೊಡ್ಡ ಕ್ಯಾಪ್ಟನ್‌ಗಳು ಜನರಲ್‌ಗಳು ಬ್ರಿಗೇಡಿಯರುಗಳು ನನ್ನಲ್ಲಿಗೆ ಬರುತ್ತಿದ್ದರು. ಕಾಳಸಂತೆಯಲ್ಲಿ ಶ್ರೀಮಂತರಾದ ವರ್ತಕರಂತೂ ನನ್ನ ಮನೆಗೆ ಮುತ್ತಿಗೆ ಹಾಕಿದಂತೆ ಮಾಡುತ್ತಿದ್ದರು. ದಿನಕ್ಕೆ ನೂರಾರು ರೂಪಾಯಿ ಸಂಪಾದನೆಯಿತ್ತು ಆಗ. ಅದಕ್ಕೆ ತಕ್ಕಂತೆ ದುಡಿತವೂ ಇತ್ತು. ಮಿಲಿಟರಿ ಕ್ಯಾಂಪು ವಿಸರ್ಜಿತವಾದಂದಿನಿಂದ ಎಲ್ಲವೂ ಕಡಿಮೆಯಾಗಿದೆ. ಬಲುದಿನಗಳಿಂದ ನಾನು ಬಯಸುತ್ತಿದ್ದ ವಿಶ್ರಾಂತಿಯೂ ದೊರೆತಿದೆ."

"ಕಾಳಸಂತೆಖೋರರೆಲ್ಲ ಏನಾದರು?"

"ಯುದ್ಧ ಮುಗಿದ ಬಳಿಕ ಅವರಿಗೂ ಲಾಭ ಕಡಿಮೆಯಾಯಿತು. ಒಬ್ಬೊಬ್ಬರಾಗಿ ಕಾಲ್ತೆಗೆದರು...."

"ಅನಂತರ ನಾನು ಕಾಲು ಹಾಕಿದೆ...."

“ ನಿಜ ಹೇಳಬೇಕಾದರೆ ಒಂದು ವರ್ಷದವರೆಗೆ ಯಾರ ಸಹವಾಸವನ್ನೂ ಮಾಡಬಾರದೆಂದು ನಾನು ನಿರ್ಧರಿಸಿದ್ದೆ. ಯಾವುದಾದರೊಂದು ಹಳ್ಳಿಗೆ ಹೋಗಿ ಸಂಪೂರ್ಣ ವಿಶ್ರಾಂತಿ ದೊರಕಿಸಿ ಆರೋಗ್ಯ ಸುಧಾರಿಸಿಕೊಳ್ಳಬೇಕೆಂಬ ಯೋಚನೆಯಿತ್ತು. ಊರು ಬಿಟ್ಟು ಹೊರಡುವುದರಲ್ಲಿದ್ದಾಗಲೇ ವೀರಯ್ಯ ಬಂದು ನಿಮ್ಮ ದೋಸ್ತಿ ಮಾಡಿಕೊಟ್ಟದ್ದು. ಅವನಲ್ಲದೆ ಇನ್ನಾರು ಬಂದು ಎಷ್ಟೇ ಹೇಳಿದ್ದರೂ ನಾನು ನಿಮ್ಮನ್ನು ಸೇರಿಸುತ್ತಿರಲಿಲ್ಲ. ನಾ ಹೀಗೆ ಹೇಳುವೆನೆಂದು ಸಿಟ್ಟಾಗಬೇಡಿ.”

“ ಸಿಟ್ಟೇಕೆ ಪ್ಯಾರೀ? ನನಗೆ ಗೊತ್ತು: ಬೇರೆಯವರ ಹಾಗೆ ನೀನು ಸುಳ್ಳಾಡುವುದಿಲ್ಲ. ಮನಸ್ಸಿನಲ್ಲಿರುವುದನ್ನು ಇದ್ದಕ್ಕಿದ್ದಂತೆ ಸ್ಪಷ್ಟವಾಗಿ ಹೇಳಿಬಿಡುತ್ತೀಯೆ. ಈ ಸ್ಪಷ್ಟವಾದಿತ್ವ ಅಂದರೆ ನನಗೂ ಮೆಚ್ಚಿಗೆ,” ಎಂದು ನುಡಿದು ಸ್ವಲ್ಪ ಹೊತ್ತು ಸುಮ್ಮನಿದ್ದು ನಾನು ಕೇಳಿದ್ದೆ: ವೀರಯ್ಯನ ಮಾತಿಗೆ ಅದೇನು ಇಷ್ಟು ಬೆಲೆ ನಿನ್ನ ಹತ್ತಿರ ಪ್ಯಾರೀ?”

“ ಆತ ನನಗೆ ಬಂಧುವಿನ ಹಾಗಿದ್ದಾನೆ ಪ್ಯಾರೇ. ನಿಮಗಿನ್ನೂ ಗೊತ್ತಾಗಿಯೆ ಇಲ್ಲವೆ? ಬಹಳ ವರ್ಷಗಳಿಂದ ಅವನಿಗೂ ನನಗೂ ಪರಿಚಯ. ನಾನು ಮೊತ್ತಮೊದಲ ಬಾರಿ ಈ ನಗರಕ್ಕೆ ಬಂದು ಅಂಗಡಿ ಹೂಡುವ ಯತ್ನದಲ್ಲಿದ್ದಾಗ ವೀರಯ್ಯನೇ ನನಗೆ ನೆರವಾದ. ಅಂದಿನಿಂದ ಇಂದಿನವರೆಗೂ ವಿಶ್ವಾಸದಿಂದ ಸಹಾಯ ಮಾಡುತ್ತ ಬಂದಿದ್ದಾನೆ.”

“ಮಂದಿಗೆ ನೆರವಾಗುವುದು ಆತನ ಸ್ವಭಾವ. ನಾನು ಈ ಊರಿಗೆ ಮೊದಲಸಲ ಬಂದಿದ್ದಾಗ ನನಗೂ ಆತ ನೆರವಾಗಿದ್ದ.”

ಪುಸ್ತಕವನ್ನು ಮುಚ್ಚಿ ಮೇಜಿನ ಮೇಲಿರಿಸಿ ಜಹಾನಾರ ನೆಟ್ಟಗೆ ಕುಳಿತುಕೊಂಡು ಕೇಳಿದ್ದಳು:

“ ಮೊದಲಸಲ ಅಂದರೆ ಯಾವಾಗ?”

“ ಹತ್ತು ಹನ್ನೊಂದು ವರ್ಷವಾಗುತ್ತ ಬಂತು ಆ ಮಾತಿಗೆ.”

“ ಆಗಲೂ ಇಲ್ಲಿದ್ದಿರಾ? ಏನು ಮಾಡುತ್ತಿದ್ದಿರಿ?”

“ ಇಲ್ಲಿಯ ವಿದ್ಯಾಲಯವೊಂದರಲ್ಲಿ ಓದಲು ಬಂದಿದ್ದೆ.”

“ ಓದು? ಎಂಥ ಓದು?”

“ ಸಂಸ್ಕೃತ, ಧರ್ಮಶಾಸ್ತ್ರ, ತರ್ಕಶಾಸ್ತ್ರ. ಓದಿ, ಪರೀಕ್ಷೆ ಪಾಸು

ಮಾಡಿ ಪದವಿ ಪಡೆದು ಊರಿಗೆ ಹಿಂದಿರುಗಬೇಕಾಗಿದ್ದಿತು. ನನ್ನ ತಲೆಗೆ ಮಾತ್ರ ಅದಾವುದೂ ಹಿಡಿಸಲಿಲ್ಲ."

"ಮತ್ತೇನು ಹಿಡಿಸಿತು?" ಎಂದು ಅವಳು ಮುಗುಳ್ನಗೆಯೊಂದಿಗೆ ಪ್ರಶ್ನಿಸಿದಳು.

ಅವಳ ನುಣ್ಣಗಿನ ಗಲ್ಲವನ್ನು ಬೆರಳಿನಿಂದ ತೀಡುತ್ತ ನಾನು ಹೇಳಿದ್ದೆ: "ಹಿಡಿಸಿದ್ದು ಅಂದರೆ ಇದೊಂದೇ. ಇಲ್ಲಿ ನೋಡು ಪ್ಯಾರೀ, ನನ್ನ ಉದ್ಯೋಗ ವೇನು ಅನ್ನುವುದು ಗೊತ್ತೇ ನಿನಗೆ?"

"ಉದ್ಯೋಗ? ವೀರಯ್ಯ ಏನೋ ಅಸ್ಪಷ್ಟವಾಗಿ ಹೇಳಿದ್ದ. ನನಗೆ ಸರಿಯಾಗಿ ಅರ್ಥವಾಗಿರಲಿಲ್ಲ – ಅದನ್ನೆಲ್ಲ ಕಟ್ಟಿಕೊಂಡು ಮಾಡುವುದಾದರೂ ಏನನ್ನು ಎಂದುಕೊಂಡು ನಾನು ಆ ವಿಷಯ ಹೆಚ್ಚು ಯೋಚಿಸಲಿಲ್ಲ. ಅಗತ್ಯ ವಿಲ್ಲದ ವಿಷಯಗಳ ಬಗ್ಗೆ ನಾನೆಂದೂ ಲಕ್ಷ್ಯ ನೀಡುವುದಿಲ್ಲ."

"ನನ್ನದು ಸನ್ಯಾಸಿಯ ಉದ್ಯೋಗ. ನಾನೊಂದು ಮಠದ ಸ್ವಾಮಿ. ಮಹಂತ ಎಂದು ತಿಳಿದರೆ ನಿನಗೆ ಆಶ್ಚರ್ಯವಾಗಬಹುದೋ ಏನೋ."

"ಆಶ್ಚರ್ಯವೇಕಾಗಬೇಕು? ಮಠದ ಮಹಂತಿಕೆಗೂ ಇದಕ್ಕೂ ಏನು ಸಂಬಂಧ?"

"ಅಂಥ ಮಹಂತರಲ್ಲಿ ನಾನೂ ಒಬ್ಬ ನೋಡು ಪ್ಯಾರೀ. ಬ್ರಹ್ಮಚರ್ಯ ದಿಂದಿದ್ದು ಧರ್ಮಪೀಠದ ಅಧಿಪತಿಯಾಗಿರಲೆಂದು ನನ್ನನ್ನು ದೀಕ್ಷೆಗೊಳಪಡಿಸ ಲಾಗಿತ್ತು. ಓದುವುದಕ್ಕಾಗಿ ಇಲ್ಲಿಗೆ ಕಳಿಸಿದರು ಸಮಾಜದವರು. ನನ್ನಿಂದ ಓದಲಾಗುವುದಿಲ್ಲವೆಂಬುದು ನನಗೆ ಮೊದಲೇ ಗೊತ್ತಿದ್ದಿತು. ಆದರೂ ಬರಬೇಕಾಯಿತು."

ಜಹಾನಾರಳ ಕಥಾಪ್ರೇಮಿ ಚಿತ್ತ ಕುತೂಹಲದಿಂದ ಅರಳಿತ್ತು. ಆಕೆ ಕೇಳಿದ್ದಳು: "ನಿಮ್ಮ ಮನಸ್ಸಿನ ವಿರುದ್ಧವಾಗಿ ನಿಮ್ಮನ್ನು ಇಲ್ಲಿಗೆ ಕಳಿಸ ಲಾಗಿದ್ದಿತೇನು?"

"ಹಾಗೆ ಪೂರಾ ನನ್ನಿಷ್ಟಕ್ಕೆ ವಿರುದ್ಧವಾಗಿ ಎಂದೇನೂ ಅಲ್ಲ. ಉತ್ತರ ಹಿಂದೂಸ್ಥಾನವನ್ನೂ, ಗಂಗಾ ಯಮುನಾ ನದಿಗಳನ್ನು, ಅಲಹಾಬಾದು ಆಗ್ರಾ ದಿಲ್ಲಿ ನಗರಗಳನ್ನು, ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿರುವ ಈ ವೇಶೀಪಟ್ಟಣವನ್ನು ನೋಡಬೇಕು, ಇಲ್ಲಿಯ ಜೀವನದ ಅನುಭವ ಪಡೆಯಬೇಕು ಎಂಬ ಆತುರ ನನಗೂ ಇತ್ತು. ವ್ಯಾಸಂಗದ ನಿಮಿತ್ತವಾಗಿ ಈ ಕಡೆ ಬಂದುದಾಗಿತ್ತು.

ಮೊದಲಿನಿಂದಲೂ ನನಗೆ ಅಭ್ಯಾಸವೆಂದರೆ ತಲೆಬೇನೆ. ಶಾಲೆಯಲ್ಲಿ ಒಂದು ಪರೀಕ್ಷೆಯನ್ನೂ ದಾಟಲಾಗಿರಲಿಲ್ಲ ನನಗೆ. ನಾನು ದಾಟಿದ್ದ ಪರೀಕ್ಷೆಗಳೇ ಬೇರೆ."

"ಅದೆಂಥ ಪರೀಕ್ಷೆ ತಾಯಿಾ?"

"ಪ್ರಣಯದ ಪರೀಕ್ಷೆ ಪ್ಯಾರೀ," ಎಂದು ಹೇಳಿ ನಾನು ನಗತೊಡಗಿದ್ದೆ. ಜಹಾನಾರಳಿಗೂ ನಗು ಬಂದಿತ್ತು.

"ನಿಮಗೀಗ ವಯಸ್ಸೆಷ್ಟು ಪ್ಯಾರೇ?" ಎಂದಾಕೆ ಕೇಳಿದ್ದಳು.

"ನನ್ನಂಥ ಎಷ್ಟೋ ಗಂಡಸರನ್ನು ಕಂಡ ಜಾಣೆ ನೀನು. ವಯಸ್ಸು ತಿಳಿದುಕೊಳ್ಳುವುದೊಂದು ಕಷ್ಟವೇ ನಿನಗೆ? ಎಲ್ಲಿ, ಹೇಳು ನೋಡೋಣ, ನನಗೆಷ್ಟು ವಯಸ್ಸಾಗಿರಬಹುದು ಈಗ?"

ನನ್ನ ಆರೋಗ್ಯದ ಬಗೆಗೆ ನನಗೆ ಯಾವಾಗಲೂ ಹೆಮ್ಮೆ. ನನ್ನ ಹೃಷ್ಟ ಪುಷ್ಟ ದೇಹ, ತುಂಬಿದ ತೋಳು ತೊಡೆ, ಹರವಾದ ಎದೆ, ಹೊಳೆಯುವ ಕೆನ್ನೆ ತುಟಿ ಗಲ್ಲ, ಚಕಚಕಿಸುವ ಕಣ್ಣು, ಶಕ್ತಿಪೂರ್ಣ ಕುತ್ತಿಗೆಗಳ ಮೇಲೆಲ್ಲ ಜಹಾನಾರಳ ದೃಷ್ಟಿ ಓಡಿಯಾಡಿತು. ಪ್ರದರ್ಶನಕ್ಕೆ ಬಂದ ಹೋರಿಯನ್ನು ನಿರೀಕ್ಷಿಸುವವರಂತೆ ನನ್ನನ್ನು ನಿರೀಕ್ಷಿಸುತ್ತ ಆಕೆ–"ನಿಮ್ಮ ವಯಸ್ಸು? ಬಹಳ ವಾದರೆ ಮೂವತ್ತೈದು ಆಗಿದ್ದೀತು. ಅಲ್ಲವೇ?" ಎಂದು ಕೇಳಿದ್ದಳು.

ಮಲಗಿದ್ದ ಹಾಗೆಯೆ ಅವಳನ್ನು ಬರಸೆಳೆದುಕೊಂಡು ನನ್ನೆದೆಯ ಮೇಲೆ ಅವಳ ತಲೆಯನ್ನೊರಗಿಸಿಕೊಳ್ಳುತ್ತ–"ನೀನು ಜಾಣೆ ಎಂದು ನಾ ಹೇಳಿದ್ದು ಇದಕ್ಕಾಗಿಯೆ ನನ್ನ ವಯಸ್ಸನ್ನು ಸರಿಯಾಗಿಯೆ ಗುರುತಿಸಿದೆ," ಎಂದು ಹೇಳಿದ್ದೆ.

"ನೀವು ಪ್ರಣಯದ ಪರೀಕ್ಷೆಗೆ ಕೂಡ್ರತೊಡಗಿ ಎಷ್ಟು ವರ್ಷವಾಗಿರ ಬಹುದು ಪ್ಯಾರೇ?"

"ಹದಿನೇಳು ವರ್ಷದ ಹುಡುಗನಾಗಿದ್ದಾಗಿನಿಂದ ಅದರ ಅಭ್ಯಾಸ ನಡೆಸಿದ್ದೇನೆ."

"ಅರೆ ಬಾಪರೆ!" ಎಂದು ಉದ್ಗಾರ ತೆಗೆದಿದ್ದಳು ಜಹಾನಾರ.

"ನಿನಗೆ ಆಶ್ಚರ್ಯವಾಯಿತೇನು ಜಹಾನಾರಾ? ಅದರಲ್ಲಿ ಅಂಥ ವಿಚಿತ್ರವೇನಿದೆ? ವಿಶಾಲವಾದ ಈ ಪ್ರಪಂಚದಲ್ಲಿ ನನ್ನಂಥವರೆಷ್ಟೋ ಜನರಿದ್ದಾರೆ. ಇನ್ನೂ ಹುಡುಗರಾಗಿದ್ದಾಗಲೇ ನಮಗೆ ಹೆಣ್ಣಿನ ಬಗ್ಗೆ ಮೋಹ ಹುಟ್ಟುತ್ತದೆ. ಒಮ್ಮೆ ಆ ಬಲೆಗೆ ಬಿದ್ದೆವೋ, ಮುಗಿಯಿತು. ಅನಂತರ ಅದರಿಂದ ಪಾರಾಗಲು ಸಾಧ್ಯವಾಗುವುದಿಲ್ಲ."

“ಇದುವರೆಗೂ ತೃಪ್ತಿಯೆನ್ನುವುದೇ ದೊರೆತಿಲ್ಲವೇನು ನಿಮಗೆ?” ಎಂದು ಕುತೂಹಲದಿಂದ ಕೇಳಿದ್ದಳು ಜಹಾನಾರ.

“ಅಂತರಂಗವನ್ನು ಬಿಚ್ಚಿ ಹೇಳುವುದೇ ಆದರೆ ಇಲ್ಲವೆಂದೇ ಹೇಳಬೇಕಾಗುವುದು. ನಮ್ಮ ಸೀಮೆಯನ್ನು ಬಿಟ್ಟ ತರುವಾಯ ಅನೇಕ ಸುಂದರಿಯರನ್ನು ಕಂಡದ್ದಾಯಿತು. ಬಗೆಬಗೆಯ ಅನುಭವ ಬಂದಿತೇ ವಿನಾ ತೃಪ್ತಿ ದೊರೆಯಲಿಲ್ಲ. ನಿಜವಾದ ಸುಖ ಲಭಿಸಲಿಲ್ಲ.”

ಜಹಾನಾರ ಮೇಲಕ್ಕೆದ್ದು ಮೇಜಿನ ಮೇಲಿದ್ದ ಸೀಸೆಯಲ್ಲಿದ್ದ ಮದ್ಯವನ್ನು ಬಟ್ಟಲಿಗೆ ಬಾಗಿಸುತ್ತ ಕೇಳಿದ್ದಳು:

“ನನ್ನಲ್ಲಿ?”

ಆ ಮಾತಿಗೆ ಉತ್ತರವೀಯದೆ ನಾನು ನಗುತ್ತ ಮೇಲಕ್ಕೆದ್ದು, ಜಹಾನಾರ ಮುಂದೆ ನೀಡಿದ ಬಟ್ಟಲನ್ನು ತುಟಿಗೆ ತಂದು ಒಂದೇ ಗುಟಕಿಗೆ ಮದ್ಯವನ್ನೆಲ್ಲ ಹೀರಿಬಿಟ್ಟಿದ್ದೆ. ಅನಂತರ ಒಂದು ಸಿಗರೇಟು ಹೊತ್ತಿಸಿ ಹೊಗೆಯನ್ನೆಳೆಯುತ್ತ ಕೊಟಡಿಯಲ್ಲಿ ಅಡಿಯಿಡತೊಡಗಿದ್ದೆ.

“ತೃಪ್ತಿ ಸುಖ ಯಾವುದೂ ಇಲ್ಲದಿದ್ದರೂ ಮತ್ತೆ ಇದರಲ್ಲೇ ಕೊಳೆಯುವುದರ ಗುಟ್ಟೇನು?” ಎಂದು ಕೇಳಿದ್ದಳು ಜಹಾನಾರ.

“ಸೃಷ್ಟಿಕರ್ತನಿಗೇ ಗೊತ್ತು ಆ ಗುಟ್ಟು!”

“ನಿಜ ಹೇಳಲೇ ಪ್ಯಾರೇ? ನನಗೂ ಒಮ್ಮೊಮ್ಮೆ ಅನ್ನಿಸುತ್ತದೆ. ಇದೆಲ್ಲ ವ್ಯರ್ಥ, ಎಲ್ಲ ವ್ಯರ್ಥ, ಎಲ್ಲಿಗಾದರೂ ಹೋಗಿ ಒಂಟಿಯಾಗಿಬಿಡೋಣ ಅನ್ನಿಸುತ್ತದೆ.”

“ಅನ್ನಿಸುತ್ತದೆ ಪ್ಯಾರೀ. ಹಾಗೆ ಎಲ್ಲರಿಗೂ ಒಂದಿಲ್ಲೊಂದು ಸಲವಾದರೂ ಅನ್ನಿಸುತ್ತದೆ. ನನಗೂ ಅಂಥ ವಿಚಾರ ಬಂದಿಲ್ಲವೆಂದೇನೂ ಅಲ್ಲ. ಕಾಶ್ಮೀರದ ನಿಸರ್ಗ ಸೌಂದರ್ಯವನ್ನು ಸವಿಯುತ್ತ ನಾನು ಅಲೆಯುತ್ತಿದ್ದಾಗ ಎಷ್ಟೋ ಸಲ ನನಗನ್ನಿಸಿತ್ತು – ಸೃಷ್ಟಿಯ ಈ ಅಪಾರ ಚೆಲುವಿನ ಎದುರಿಗೆ ಹೆಣ್ಣಿನ ಚೆಲುವು ಎಷ್ಟು ಕ್ಷುಲ್ಲಕ ಎಷ್ಟು ಅಲ್ಪ ಎಂದು. ಎಲ್ಲವನ್ನೂ ತೊರೆದು ಹಿಮಾಲಯಕ್ಕೆ ಹೋಗಿಬಿಡಬೇಕೆಂದೂ ಅನೇಕ ಸಲ ಯೋಚನೆ ಬಂದಿತ್ತು. ಆದರೆ, ನನ್ನ ಸ್ವಭಾವಕ್ಕೇ ವಿಸಂಗತವಾದದ್ದು ಅದೆಲ್ಲಾ. ನಾನಿಳಿದುಕೊಂಡ ಹೋಟಲಿಗೆ ಮರಳಿದೊಡನೆ ಧ್ಯಾನ, ತಪಸ್ಸು ವೈರಾಗ್ಯಗಳ ಯೋಚನೆಗಳೆಲ್ಲ ತಮಗೆ ತಾವೇ ಮಾಯವಾಗುತ್ತಿದ್ದುವು. ಹೋಟಲಿನಲ್ಲಿನ ಚೆಲುವೆಯರ

ಕಟಾಕ್ಷ ನನ್ನನ್ನು ಸೆಳೆಯುತ್ತಿತ್ತು. ಮತ್ತೆ ಆರಂಭವಾಗುತ್ತಿತ್ತು ಮೋಹದಾಟ. ಮಾನವನ ಮನಸ್ಸು ಬಲು ವಿಚಿತ್ರವಾದದ್ದು ಪ್ಯಾರೀ. ಒಮ್ಮೆ ಆಕಾಶಕ್ಕೇರಲು ಬಯಸುತ್ತದೆ, ಆದಕ್ಕೆ ತಕ್ಕ ಶಕ್ತಿಯಿರುವುದಿಲ್ಲವಾದ್ದರಿಂದ ಪಾತಾಳಕ್ಕೆ ಕಡಿದು ಕೊಂಡು ಬೀಳುತ್ತದೆ. ಆ ಪಾತಾಳದ ಕೊಚ್ಚೆಯಲ್ಲೇ ಸುಖಪಡಲು ಯತ್ನಿಸುತ್ತದೆ...." ಎಂದು ಹೇಳುತ್ತ ನಾನು ಸೀಸೆಯಲ್ಲಿನ ಮದ್ಯವನ್ನು ಬಟ್ಟಲಿಗೆ ಬಾಗಿಸಿ ಮತ್ತೆರಡು ಗುಟುಕು ಸೇವಿಸಿದ್ದೆ.

"ಇಷ್ಟು ಮದ್ಯ ಸೇವಿಸಬಾರದು ಪ್ಯಾರೇ. ಆರೋಗ್ಯಕ್ಕೆ ಒಳ್ಳೆಯದಲ್ಲ. ಈ ಚಟವನ್ನು ನೀವು ಕಲಿಯದಿದ್ದರೇನೇ ಚೆನ್ನಾಗಿರುತಿತ್ತು."

"ಕಲಿಯಬಾರದಾಗಿತ್ತು. ಯಾರೋ ಕಲಿಸಿದರು. ಕಲಿತುಕೊಂಡೆ."

"ಯಾರವರು, ಪ್ಯಾರೇ?"

"ಬೆಂಗಳೂರಲ್ಲಿ ಸ್ನೇಹಲತಾ ಎಂಬ ನರ್ತಕಿಯ ಮನೆಯಲ್ಲಿ ಅಂಟಿಕೊಂಡಳು ಈ ಸುರಾಲತಾ."

"ಆಕೆ ಚೆನ್ನಾಗಿ ಕುಣಿಯುವಳೇನು?"

"ಕುಣಿಯುತ್ತಾಳೆ, ಕುಣಿಸುತ್ತಾಳೆ. ಎರಡರಲ್ಲೂ ಪಳಗಿದವಳು."

"ಸಿನಿಮಾದಲ್ಲಿ ಪಾತ್ರ ವಹಿಸಬಲ್ಲಳೇ?"

"ವಹಿಸಬಲ್ಲಳೆಂದೇ ತೋರುತ್ತದೆ. ಆಕೆ ಉತ್ತಮ ತರಗತಿಯ ಕಲಾವಿದೆ."

"ಅವಳು ಹೇಗಿದ್ದಾಳೆ ಪ್ಯಾರೇ? ನನ್ನಂತೆ ಇದ್ದಾಳೆಯೇ?"

ನಾನು ನಗೆ ಬೀರಿ ಆ ಮಾತು ಹಾರಿಸಿದ್ದೆ.

ಆ ಮಾತು ನಡೆದ ಕೆಲದಿನಗಳಲ್ಲಿಯೆ ನನ್ನ ಜೇಬಿನಲ್ಲಿನ ಹಣವೆಲ್ಲ ಮುಗಿದುಹೋಗಿದ್ದಿತು. ಜಹಾನಾರಳೂ ನಗರವನ್ನು ಬಿಟ್ಟು ಹಳ್ಳಿಯೊಂದಕ್ಕೆ ಹೊರಟುಹೋಗಿದ್ದಳು. ಅಂದಿನಿಂದ ಅವಳನ್ನು ಕಂಡಿರಲಿಲ್ಲ. ಅಂದಿನಿಂದ ಹೆಣ್ಣಿನ ಸಂಗವೂ ಲಭಿಸಿರಲಿಲ್ಲ.

ಇಂದು ಮತ್ತೆ ಬಂದಿದೆಯೇನೋ ಆ ಸಂದರ್ಭ?

ಸೆಟ್ಟರ ಯುವಕ ಪತ್ನಿ ಈ ಮಹಾದೇವಮ್ಮ....

ಯೋಚಿಸುತ್ತಿದ್ದ ಹಾಗೆಯೆ. ನನ್ನ ಮುಖದ ಮೇಲಿನ ಅಂಗವಸ್ತ್ರ ಸರಿದು ಬಿತ್ತು. ವೀರಯ್ಯ ನಿದ್ದೆಯಿಂದೆದ್ದು ಕುಳಿತಿದ್ದ.

"ಎದ್ದು ಗಡ್ಡ ಬೋಳಿಸಿಕೊಂಡು ನದಿಗೆ ಹೋಗಿ ಸ್ನಾನ ಮಾಡಿ ಬರ್‍ರಿ. ಮಹಾದೇವನ್ನು ಇನ್ನೂ ಮಲಗಿರಬಹುದು. ಅವರ ಕೋಣೆಯ ಬಾಗಿಲು ಇನ್ನೂ ಮುಚ್ಚಿಕೊಂಡಿದೆಯೊ ಇಲ್ಲವೊ ನೋಡಿ ಬರುತ್ತೇನೆ. ನೀವು ಮೆಲ್ಲನೆ ನುಸುಳಿಕೊಂಡು ಬಿಡಿ. ಸಾಯಂಕಾಲ ಆರು ಗಂಟೆಗೆ ಸರಿಯಾಗಿ ಮರಳಿ ಬನ್ನಿ. ಇಬ್ಬರನ್ನೂ ಭೇಟಿ ಮಾಡಿಸುತ್ತೇನೆ.

[೬]

ನಗರದ ಇಕ್ಕಟ್ಟಾದ ಓಣಿಗಳಲ್ಲಿ ಹಾಯ್ದು ನಾನು ನದೀ ತೀರಕ್ಕೆ ಬರುವ ವೇಳೆಗೆ ಆಕಾಶದಲ್ಲಿ ಮೋಡ ಕವಿದುಕೊಂಡಿದ್ದುವು. ಸೂರ್ಯ ಅವುಗಳ ಹಿಂದೆ ಮುಖ ಮರೆಸಿಕೊಂಡಿದ್ದ. ಯಾರ ಮೇಲೋ ಮುನಿಸಿಕೊಂಡಂತೆ ಮುಖ ಸಿಂಡರಿಸಿಕೊಂಡಿತ್ತು ಮುಗಿಲು. ಒಡನೆಯೆ ತುಂತುರಮಳೆಯೂ ಸುರಿಯಃತೊಡಗಿತು. ಗಿಡವೊಂದರ ಕೆಳಗೆ ನಿಂತು ನಾನು ಸುತ್ತಲೂ ದೃಷ್ಟಿ ಓಡಿಸಿದೆ. ಹಸುರುಡುಗೆಯುಟ್ಟು ನಿಂತ ಭೂದೇವಿಯ ಮೇಲೆ ಬಿಳಿಯ ಜಾಳಿಗೆಯ ತೆರೆಯೊಂದು ಪಸರಿಸುತ್ತಿದ್ದ ಹಾಗೆ ಭಾಸವಾಯಿತು. ಯಾರ ಮೇಲೆ ಮುನಿಸೋ ಈ ಮುಗಿಲರಾಣಿಗೆ! ಮೋಡಗಳನ್ನು ಹಿಡಿದು ಪುಡಿ ಪುಡಿ ಮಾಡಿ ಸುತ್ತಲೂ ಬಿಸುಟುತ್ತಿರುವಳಲ್ಲ, ಎಂದುಕೊಂಡೆ.

ನನ್ನ ಕಲ್ಪನೆಗೆ ನಾನೇ ನಗುತ್ತ ಎದುರಿಗೆ ದೃಷ್ಟಿ ತೂರಿದೆ. ಆ ರಮ್ಯ ನೋಟ ನನ್ನ ಕಣ್ಮನಗಳನ್ನು ಮುಗ್ಧಗೊಳಿಸಿತು. ತಿಳಿ ಹಸುರು ಸೀರೆಯುಟ್ಟು ಸುಖವಾಗಿ ಪವಡಿಸಿದ ಎಳೆ ಹೆಣ್ಣಿನಂತೆ ಈ ಸೃಷ್ಟಿ. ಅವಳ ಸ್ನಾನಕ್ಕೆಂದು ತುಂತುರಮಳೆಗರೆಯುತ್ತಿದೆ ಮುಗಿಲು. ಸೃಷ್ಟಿದೇವಿ ಮಿಂದು ಬಿಟ್ಟ ನೀರು ಹರಿದು ಹೋಗತೊಡಗಿದೆ ಹೊಳೆಯಾಗಿ. ತುಂತುರಮಳೆ ಬೀಳುವಾಗಿನ ಈ ಚೆಲುವೂ ಎಂಥ ಚೆಲುವು! ಅಳುವ ಮುಗಿಲನ್ನು ಸಂತವಿಸಲೆಂದು ಸೂರ್ಯ ತನ್ನ ಕಿರಣಗಳನ್ನು ಕಳಿಸುತ್ತಿದ್ದಾನೆ. ಅವುಗಳ ಸ್ಪರ್ಶವಾಗುತ್ತಲೂ ಮುಗಿಲ ಕನ್ನೆಯ ಕೆನ್ನೆ ಲಜ್ಜೆಯಿಂದ ಕೆಂಪಾಗತೊಡಗಿದೆ. ಆಹಾ, ಅದೇ ಅಲ್ಲವೆ ಕಾಮನ ಬಿಲ್ಲು? ಒಂದು ನಿಮಿಷ....ಐದು ನಿಮಿಷ. ಮತ್ತೆ ಮಾಯವಾದುವು ಸೂರ್ಯಕಿರಣ. ಮತ್ತೆ ಬಣ್ಣಗೆಟ್ಟಿತು ಮುಗಿಲಕನ್ನೆಯ ಮುಖ....

"ಛೆ, ನನಗೇನು ಬಂತು ಧಾಡಿ. ನಾನೇನು ಕವಿಯೇ?" ಎಂದು ಕೊಂಡು, ನಗುತ್ತಾ ಆ ಯೋಚನೆಗಳನ್ನು ಕೊಡಹಿ ನದಿಯ ಕಡೆ ದೃಷ್ಟಿ ತಿರುಗಿಸಿದೆ. ಪುಟ್ಟ ಸಾಗರದಂತೆ ಒಂದು ಫರ್ಲಾಂಗಿನವರೆಗೂ ಹರಡಿಕೊಂಡಿದ್ದ ನದಿ. ಘಟ್ಟದ ಪಾವಟಗೆಗಳ ಮೇಲೆ ನಿಂತುಕೊಂಡು ಎಷ್ಟೋ ಜನರು ನದಿ ಯಲ್ಲಿ ಮುಳುಗು ಹಾಕುತ್ತಿದ್ದರು.

"ಏನು ಹುಚ್ಚು ಈ ಜನಕ್ಕೆ! ಈ ನದಿಯಲ್ಲಿ ಸ್ನಾನ ಮಾಡುವುದರಿಂದ ಏಳೇಳು ಜನ್ಮಗಳ ಪಾಪವೆಲ್ಲ ತೊಳೆದುಹೋಗುವುದೆಂದು ಭಾವಿಸಿ ಇಲ್ಲಿಗೆ ಧಾವಿಸಿ ಬರುತ್ತಾರೆ. ಇದುವರೆಗೆ ಇಂಥ ಎಷ್ಟು ಕೋಟಿ ಪಾಪಿಗಳು ತಮ್ಮ ತಮ್ಮ ಪಾಪಗಳ ಕೊಳೆಯನ್ನು ಈ ಬಡಪಾಯಿ ನದಿಯ ಮೇಲೆ ಹೊರಿಸಿರು ವರೊ ಏನೊ. ಈ ಪಾಪವನ್ನೆಲ್ಲ ಅರಗಿಸಿಕೊಂಡು ಇದು ಇನ್ನೂ ಬದುಕಿರು ವುದೇ ಸೋಜಿಗದ ವಿಷಯ," ಎಂದುಕೊಳ್ಳುತ್ತ ನದಿಯ ಕಡೆ ನಡೆದೆ.

ಸೋಪಿನಿಂದ ಚೆನ್ನಾಗಿ ಮುಖವುಜ್ಜಿಕೊಂಡು ಅರ್ಧ ಗಂಟೆಯವರೆಗೂ ಮೈ ತೊಳೆದುಕೊಂಡೆ. ಟವಲಿನಿಂದ ಬಿರುಸಾಗಿ ಒರೆಸಿಕೊಂಡು, ಬಟ್ಟೆ ಧರಿಸಿ, ಪಾವಟಗೆಗಳನ್ನೇರಿ ಮೇಲೆ ಬರುತ್ತಿದ್ದ ಹಾಗೆ ವೀರಯ್ಯ ನದಿಯ ಕಡೆ ಬರುತ್ತಿ ದ್ದುದು ಕಾಣಿಸಿತು. ಅವನ ಜತೆಯಲ್ಲಿ ಮಹಾದೇವಮ್ಮನೂ ಬರುತ್ತಿದ್ದಳು.

ಹತ್ತಿರ ಬಂದೊಡನೆ ವೀರಯ್ಯ ಬಾಗಿ ನನ್ನ ಅಡಿಗಳನ್ನು ಮುಟ್ಟಿ ನಮಸ್ಕರಿಸಿದ. ನನಗೆ ಮಣಿಯಲೆಂದು ಮಹಾದೇವಮ್ಮ ಮುಂದೆ ಬರುತ್ತಿದ್ದಾಗ ಅವಳ ದೃಷ್ಟಿ ನನ್ನ ದೃಷ್ಟಿಯೊಂದಿಗೆ ಬೆರೆಯಿತು. ಆಗತಾನೆ ಮಿಂದು ಬರುತ್ತಿದ್ದ ನನ್ನ ಮುಖವನ್ನು ಕಂಡೊಡನೆ ಅವಳ ಹೃದಯದಲ್ಲಿ ಕೋಲಾಹಲವಾದಂತೆ ತೋರಿತು.

"ಇವರೇ ನಮ್ಮ ಸ್ವಾಮಿಗಳು...." ಎಂದು ಆರಂಭಿಸಿ ವೀರಯ್ಯ ಅವಳ ಹೆಸರು, ಅವಳ ಗಂಡನ ಹೆಸರು, ಅವರು ಅಂದು ಬೆಳಗ್ಗೆ ಬಂದ ವಿಷಯ ಎಲ್ಲವನ್ನೂ ವಿವರಿಸತೊಡಗಿದ. ಅವರ ಬಗೆಗೆ ನನಗೇನೂ ತಿಳಿಯದೆಂದು ನಟಿಸಬೇಕಿದ್ದಿತಲ್ಲ?

"ಏನು ಈ ಕಡೆ ಬಂದಿರಿ? ಇವರ ಪತಿದೇವರು ಎಲ್ಲಿ ಕಾಣುವುದಿಲ್ಲ ವಲ್ಲ?" ಎಂದು ನಾನು ಕೇಳಿದೆ.

"ಅವರಿಗೆ ಸ್ವಲ್ಪ ದೇಹಾಲಸ್ಯವಾಗಿದೆ, ವಿಶ್ರಾಂತಿ ತೆಗೆದುಕೊಳ್ಳುತ್ತಿ ದ್ದಾರೆ. ಇವರಿಗೆ ಊರು ತೋರಿಸಿಕೊಂಡು ಬರಲು ನನ್ನ ಕಳಿಸಿದರು.

ನಿಮ್ಮನ್ನು ನೋಡಬೇಕೆಂದು ಇವರಿಗೆ ಬಲು ಆತುರತೆಯಿತ್ತು. ನದಿಯ ಹತ್ತಿರ ಸಿಕ್ಕಬಹುದು, ಬನ್ನಿ ಅಂತ ಕರೆದು ತಂದೆ."

"ಸರಿ. ಸರಿ. ಸಂತೋಷ. ಯಾವ ಊರು ಅಮ್ಮ ನಿಮ್ಮದು?"

ಸೀರೆಯ ಸೆರಗನ್ನು ತೀಡುತ್ತ ನಿಂತಿದ್ದ ಮಹಾದೇವಮ್ಮನಿಗೆ ಒಡನೆಯೆ ಉತ್ತರವೀಯಲಾಗಲಿಲ್ಲ. ರಕ್ತವೇರಿದುದರಿಂದ ಅವಳ ಮುಖವೆಲ್ಲ ಕೆಂಪಾಗಿದ್ದಿತು. ನನ್ನೆಡೆಗೆ ಓರೆನೋಟ ಬೀರುತ್ತ ತಡವರಿಸುತ್ತ ನುಡಿದಳು:

"ನಮ್ಮದು ಜರತಾರಿ ನಗರ."

"ಓಹ್ಹೊ. ಸರಿ. ಸರಿ. ನಿಮ್ಮ ಪಟ್ಟಣದ ಕೀರ್ತಿಯನ್ನು ನಾವೂ ಸಾಕಷ್ಟು ಕೇಳಿದ್ದೇವೆ. ಅಲ್ಲೊಂದು ಜಗದ್ಗುರು ಪೀಠವೂ ಇದೆಯಲ್ಲವೆ?"

"ಹೌದು ಬುದ್ಧೀ."

"ಅದು ಬಹಳ ಪ್ರಸಿದ್ಧ ಪೀಠವೆಂದು ಕೇಳಿದ್ದೇವೆ. ಈಗಿರುವ ಸ್ವಾಮಿಗಳಿಗೆ ಬಹಳ ವಯಸ್ಸಾಗಿರಬೇಕಲ್ಲ?"

"ಹೌದು. ಹೌದು."

"ಒಮ್ಮೆ ನಿಮ್ಮ ಊರು ನೋಡಬೇಕು, ಜಗದ್ಗುರುಗಳನ್ನು ನೋಡಬೇಕು ಎಂಬ ಯೋಚನೆಯಿದೆ. ಇದುವರೆಗೂ ಆಗಲಿಲ್ಲ. ಸರಿ. ಸರಿ. ಅಲ್ಲಿ ವೀರಶೈವರು ಬಹುಸಂಖ್ಯಾತರಾಗಿರುವರೆಂದು ಕೇಳಿದ್ದೇವೆ. ವರ್ಷ ವರ್ಷವೂ ಬಸವಜಯಂತಿ ನಡೆಯುತ್ತಿರಬಹುದಲ್ಲ?"

"ನಡೆಯುತ್ತದೆ ಬುದ್ಧೀ. ಒಂದು ಅನುಭವಮಂಟಪವೂ ಇದೆ. ನಮ್ಮವರು ಅದರ ಅಧ್ಯಕ್ಷರಾಗಿದ್ದಾರೆ."

"ಹೀಗೋ? ಬಹಳ ಸಂತೋಷ. ಅಕ್ಕನ ಬಳಗವೂ ಇದ್ದೇ ಇರಬೇಕಲ್ಲ?"

"ಹಿಂದೆ ಇರಲಿಲ್ಲ. ಮೂರು ವರ್ಷಗಳ ಕೆಳಗೆ ನಾನೇ ಸ್ಥಾಪಿಸಿದೆ. ಅಂದಿನಿಂದಲೂ ನಾನೇ ಅಧ್ಯಕ್ಷಿಣಿಯಾಗಿದ್ದೇನೆ ಬುದ್ಧೀ."

"ಬಹಳ ಸಂತೋಷ, ಬಹಳ ಸಂತೋಷ," ಎನ್ನುತ್ತಾ ನಾನು ಅವಳ ದೃಷ್ಟಿಗೆ ನನ್ನ ದೃಷ್ಟಿಯನ್ನು ಬೀಸಿದೆ ಒಡನೆಯೆ ಅವಳ ಮುಖ ಮತ್ತೆ ಚಲವಿಚಲವಾಯಿತು, ತುಟಿಗಳು ಸೂಕ್ಷ್ಮವಾಗಿ ಕಂಪಿಸತೊಡಗಿದುವು.

"ಮಕ್ಕಳೆಷ್ಟು ಜನ ಅಕ್ಕನವರೇ?" ಎಂದು ನಾನು ಬೇಕೆಂತಲೇ ಪ್ರಶ್ನಿಸಿದೆ. ಮತ್ತೆ ಅವಳ ಮುಖಕ್ಕೆ ರಕ್ತವೇರಿತು. ದೃಷ್ಟಿಯನ್ನು ನೆಲಕ್ಕೆ

ತಿರುಗಿಸಿ ಅವಳು ಬಳಲಿದ ಧ್ವನಿಯಲ್ಲಿ ಹೇಳಿದಳು: "ಇನ್ನೂ ಆಗಿಲ್ಲ ಬುದ್ಧೀ."

ವೀರಯ್ಯ "ಚ್ ಚ್" ಎಂದ. ನಾನು ಅನುಕಂಪ ಸೂಚಿಸಿದೆ. "ಶಿವ ಕೊಡುತ್ತಾನೆ. ಯೋಚನೆ ಮಾಡಬೇಡಿ," ಎಂದು ಹೇಳುತ್ತಾ ಅವಳನ್ನು ಅರ್ಥಗರ್ಭಿತ ದೃಷ್ಟಿಯಿಂದ ನಿಟ್ಟಿಸಿದೆ. ನಾಚಿಕೆಯಿಂದ ಅವಳು ತಲೆ ಕೆಳಕ್ಕೆ ಬಾಗಿಸುವಾಗಿನ ಆ ದೃಶ್ಯ ಬಲು ಮೋಹಕವಾಗಿದ್ದಿತು. ಸಂಜೆಯ ಸೂರ್ಯನ ಕಾಂತಿಯಲ್ಲಿ ಅವಳು ಬಹಳ ಮನೋಹರಳಾಗಿ ಕಾಣಿಸಿದಳು.

ಮೂವರೂ ಒಟ್ಟುಗೂಡಿ ನಗರದ ಹಲವು ಓಣಿಗಳಲ್ಲಿ ಸುತ್ತಿ ಕತ್ತಲಾಗುವ ವೇಳೆಗೆ ಮನೆಗೆ ಬಂದೆವು. ಅವರ ಕೋಣೆಯಲ್ಲಿ ದೀಪವುರಿಯುತ್ತಿತ್ತು. ಶೆಟ್ಟರು ಮಂಚದ ಮೇಲೊರಗಿಕೊಂಡಿದ್ದ ಹಾಗೆಯೆ ಪುಸ್ತಕವೊಂದನ್ನು ಓದುತ್ತಿದ್ದವರು, ನನ್ನನ್ನು ಕಾಣುತ್ತಲೂ ಎದ್ದು ಬಂದು ಸಾಷ್ಟಾಂಗ ಹಾಕಿ ನಮಸ್ಕರಿಸಿ:

"ಬಸವಣ್ಣನೇ ತಮ್ಮ ದರ್ಶನ ಮಾಡಿಸಿದ. ಕುಳಿತುಕೊಳ್ಳಬೇಕು." ಎನ್ನುತ್ತಾ ಕುರ್ಚಿಯನ್ನು ತಂದಿರಿಸಿದರು.

ಅದರ ಮೇಲೆ ಅಂಗವಸ್ತ್ರವನ್ನು ಹಾಕಿ ಕುಳಿತುಕೊಂಡೆ. ಸೆಟ್ಟರೂ ಮಹಾದೇವಮ್ಮನೂ ಕೆಳಗಡೆ ನೆಲದ ಮೇಲೆಯೆ ಕುಳಿತರು. ವೀರಯ್ಯ ನಿಂತುಕೊಂಡೇ ಇದ್ದ.

"ಪಂಡಿತರು ತಮ್ಮ ಬಗೆಗೆ ಎಲ್ಲಾ ತಿಳಿಸಿದ್ದಾರೆ ಬುದ್ಧೀ. ತಮ್ಮಂಥ ಶಿವಯೋಗಿಗಳು ಬಹಳ ವಿರಳ ನಮ್ಮಲ್ಲಿ...." ಎಂದರು ಸೆಟ್ಟರು.

ಒಳಗೊಳಗೇ ನಾನು ನಗುತ್ತಲಿದ್ದೆ. ಶಿವಯೋಗಿ! ಒಳ್ಳೆಯ ಶಿವಯೋಗಿಯೆ!

"ನೀವು ಅನುಭವಮಂಟಪದ ಅಧ್ಯಕ್ಷರಾಗಿರುವರೆಂದು ಇದೇ ಈಗ ಅಕ್ಕನವರು ಹೇಳುತ್ತಿದ್ದರು."

"ಅಯ್ಯೊ, ಅದೇನು ಬಿಡಿರಿ. ಬಸವಾ....ಬಸವಾ....ಏನೋ ಅಷ್ಟಿಷ್ಟು ಪರಲೋಕಸಾಧನೆ ಮಾಡುತ್ತಿದ್ದೇನೆ, ಅಷ್ಟೆ. ಇನ್ನೂ ಶಿವನ ಕೃಪೆಯಾಗಲಿಲ್ಲ."

"ಆಗುತ್ತದೆ ಸೆಟ್ಟರೆ. ಇಂದಿಲ್ಲ ನಾಳೆ ಆಗುತ್ತದೆ."

"ತಮ್ಮ ದಯೆಯಿದ್ದರೆ ಎಲ್ಲಾ ಆದೀತು ಬುದ್ಧೀ."

"ತಮಗೆ ಮಕ್ಕಳಿಲ್ಲವೆಂದು ತಿಳಿದು ಬಹಳ ವ್ಯಸನವಾಯಿತು."

"ಏನು ಮಾಡುವುದು ಬುದ್ಧೀ. ಶಿವ ಕಣ್ಣು ತೆರೆಯಲಿಲ್ಲ."

“ತೆರೆದಾನು, ತೆರೆದಾನು, ಆಸೆ ಬಿಡಬೇಡಿ. ಪವಿತ್ರ ಕ್ಷೇತ್ರಗಳ ಯಾತ್ರೆ ವ್ಯರ್ಥವಾಗುವುದಿಲ್ಲ....”

“ತಮ್ಮ ಮಾತು ಸತ್ಯವಾಗಲಿ ಬುದ್ಧೀ,” ಎನ್ನುತ್ತಾ ಸೆಟ್ಟರು ಮತ್ತೊಮ್ಮೆ ನನ್ನ ಅಡಿಗೆರಗಿದರು. ಮಹಾದೇವಮ್ಮನೂ ಅವರನ್ನು ಅನುಕರಿಸಿದಳು. ವೀರಯ್ಯ ಮುಗುಳ್ನಗೆ ಬೀರುತ್ತ ನಿಂತಿದ್ದ.

ಅಂದು ರಾತ್ರಿ ಅಲ್ಲಿಯೇ ಊಟವಾಯಿತು. ಅಕ್ಕಿಯ ಅನ್ನ, ಬೇಳೆಯ ಸಾರು, ಆಲೂಗಡ್ಡೆ ಪಲ್ಯ, ಕೊಬ್ಬರಿ ಚಟ್ನಿ, ಹಾಲು-ತುಪ್ಪ. ನಾನು ಉಂಡು ಎದ್ದ ಬಳಿಕ ಸೆಟ್ಟರು ಒಂದು ತುತ್ತು ಅನ್ನ-ಹಾಲು ಸ್ವೀಕರಿಸಿ ಕೈ ತೊಳೆದುಕೊಂಡು ಎದ್ದುಬಿಟ್ಟರು. ಮತ್ತೊಮ್ಮೆ ಅವರಿಂದ ನಮಸ್ಕರಿಸಿಕೊಂಡ ಬಳಿಕ ನಾನು ನಮ್ಮ ಕೋಣೆಗೆ ಬಂದೆ. ಬರುವಾಗ ಮಹಾದೇವಮ್ಮನ ಕಡೆ ಅರ್ಥಪೂರ್ಣ ಕಟಾಕ್ಷವೊಂದನ್ನೆಸೆಯಲು ಮರೆಯಲಿಲ್ಲ. ಅವಳು ಅದನ್ನು ಅರ್ಥ ಮಾಡಿಕೊಂಡಂತೆ ತೋರಿತು. ಮತ್ತೆ ಅವಳ ಮುಖದ ಮೇಲೆ ನಾಚಿಕೆಯ ನಗೆ ಸುಳಿದಾಡಿತು.

ನಿತ್ಯದಂತೆ ಹತ್ತುಗಂಟೆಯ ವೇಳೆಗೆ ವೀರಯ್ಯ ತನ್ನ ಸಖಿಯ ಮನೆಗೆ ತೆರಳಿದ. “ನಾನು ಮನೆಗೆ ಹೋಗಿ ಬೆಳಿಗ್ಗೆ ಬರುತ್ತೇನೆ, ಅಕ್ಕನವರೆ,” ಎಂದು ಮಹಾದೇವಿಗೆ ಹೇಳಲು ಮರೆಯಲಿಲ್ಲ.

ಆಕೆ ಬಾಗಿಲ ಹೊರಗೆ ಬಂದು-“ಏನು, ನಿಮ್ಮ ಮನೆ ಬೇರೆ ಕಡೆ ಇದೆಯೇ?” ಎಂದು ಕೇಳಿದಳು.

“ಹೌದು ತಾಯಿ. ಇಲ್ಲಿ ಸ್ವಾಮಿಗಳೊಬ್ಬರೇ ಇರುವುದು,” ಎಂದು ಹೇಳಿ ಆತ ಕಟ್ಟೆಯನ್ನಿಳಿದು ಕತ್ತಲೆಯಲ್ಲಿ ಮಾಯವಾದ.

[೭]

ಚಾಪೆಯ ಮೇಲೆ ಜಮಖಾನವನ್ನು, ಅದರ ಮೇಲೊಂದು ಕಂಬಳಿಯನ್ನು, ಅದರ ಮೇಲೊಂದು ಧೋತರವನ್ನು ಹಾಸಿ ನಾನು ಮಲಗಿಕೊಂಡೆ. ಬಾಗಿಲನ್ನು ಮುಚ್ಚಿದರೂ ಚಿಲಕ ಹಾಕಲಿಲ್ಲ. ಸಮಯವುರುಳುವುದನ್ನೇ ಕಾಯತೊಡಗಿದೆ.

ಆ ದಿನ ರಾತ್ರಿಯಲ್ಲೇ ಏನಾದರೂ ನಡೆದೇ ನಡೆಯುವುದೆಂದು ನನಗೆ

ಖಾತ್ರಿಯಾಗಿತ್ತು. ಬೇಟೆಯನ್ನು ಬಲೆಗೆ ಬೀಳಿಸಲು ಹೊಂಚು ಹಾಕಿ ಕುಳಿತ ಬೇಟೆಗಾರನಂತೆ ಕಾತರನಾಗಿ ಕಾದು ಕುಳಿತೆ.

ಹೊರಗಡೆ ಕತ್ತಲೆ ಕ್ರಮೇಣವಾಗಿ ಹೆಚ್ಚುತ್ತ ಹೋಯಿತು. ಬೀದಿಯಲ್ಲಿನ ಜನಗಳ ಅಲೆದಾಟವೂ ಕಡಿಮೆಯಾಗುತ್ತ ಬಂದು ಕೊನೆಗೆ ನಿಂತು ಹೋಯಿತು. ಎಲ್ಲೆಲ್ಲಿಯೂ ನಿಶ್ಶಬ್ದ. ನನ್ನ ಕೊಟಡಿಯಲ್ಲಿ ನನ್ನ ಉಸಿರಿನ ಸದ್ದನ್ನು ಬಿಟ್ಟರೆ ಇನ್ನಾವ ಸದ್ದೂ ಇರಲಿಲ್ಲ. ಪಕ್ಕದ ಕೊಟಡಿಯೂ ಶಾಂತವಾಗಿತ್ತು.

ನಟ್ಟಿರುಳಿನ ವೇಳೆಗೆ ನಾನು ಮೆಲ್ಲನೆದ್ದು ಕೊಟಡಿಯ ಬಾಗಿಲು ತೆಗೆದು ಹೊರಗಡೆ ಅಡಿಯಿರಿಸಿದೆ. ಪಡಸಾಲೆಯಲ್ಲಿ ಕತ್ತಲೆಯೋ ಕತ್ತಲೆ. ಆಕಾಶದಲ್ಲಿ ಮೋಡಗಳು ಕವಿದುಕೊಂಡಿದ್ದುದರಿಂದ ತಾರೆಗಳ ಬೆಳಕಿಗೂ ಆಸ್ಪದವಿರಲಿಲ್ಲ. ನನ್ನ ದೇಹ ನನಗೇ ಕಾಣಿಸುವಂತಿರಲಿಲ್ಲ; ಅಂಥ ಕಾರ್ಗತ್ತಲೆ.

ಪಕ್ಕದ ಕೊಟಡಿಯೆದುರಿಗೆ ಹಾಯ್ದು ಕೊಂಚ ದೂರ ಹೋಗಿ ನಾನು ಹೊರಳಿ ಬರುತ್ತಿದ್ದ ಹಾಗೆ ಏನೋ ಸದ್ದಾದಂತೆ ಕೇಳಿಸಿತು. ನನ್ನ ಎದುರಿನಲ್ಲಿ ಯಾರೋ ನಿಂತುಕೊಂಡು ಉಸಿರಾಡಿಸುತ್ತಿದ್ದುದೂ ತಿಳಿಯಿತು. ನನಗೆ ಒಡನೆಯೇ ಅರ್ಥವಾಯಿತು. ಎದುರಿಗಿದ್ದ ವ್ಯಕ್ತಿಯನ್ನು ತೋಳುಗಳಲ್ಲಿ ಹಿಡಿದುಕೊಂಡು ನನ್ನ ಕೊಟಡಿಗೆ ಬಂದೆ, ಬಾಗಿಲನ್ನು ಮುಚ್ಚಿ ಚಿಲಕ ಹಾಕಿದೆ.

ಅರ್ಧ ಗಂಟೆಯವರೆಗೆ ಇಬ್ಬರೂ ಮೌನವಾಗಿದ್ದೆವು. ಅನಂತರ ನಾನೇ ಪಿಸುದನಿಯಲ್ಲಿ ಕೇಳಿದೆ:

"ಎಷ್ಟು ಧೈರ್ಯ ನಿನಗೆ ಮಹಾದೇವೀ! ಸೆಟ್ಟರು ಆಕಸ್ಮಾತ್ ಎದ್ದುಬಿಟ್ಟರೆ?"

"ಅವರು ಏಳುವಂತಿಲ್ಲ. ರಾತ್ರಿ ಅವರಿಗೆ ಗಡದ್ದಾಗಿ ನಿದ್ದೆ ಹತ್ತುತ್ತದೆ. ಬೆಳಗಾಗುವ ತನಕ ಎಚ್ಚರವಾಗುವುದಿಲ್ಲ."

"ಖಂಡಿತವಾಗಿಯೂ?"

"ಸತ್ಯವಾಗಿ. ಅದೊಂದು ಅವರ ಚಟ. ರಾತ್ರಿ ಮನೆಗೆ ಕಳ್ಳರು ಬಿದ್ದರೂ ಅವರಿಗೆಚ್ಚರವಾಗುವುದಿಲ್ಲ."

"ಸರಿ, ಸರಿ. ಉತ್ತಮವಾಯಿತು. ಇಂಥ ಗಂಡನನ್ನು ಕಟ್ಟಿಕೊಂಡು ಎರಡು ಕೈಗಳಿಂದಲೂ ಸುಖ ಉಣ್ಣುತ್ತಿರಬಹುದಲ್ಲ ನೀನು?"

"ಇಪ್ಪತ್ತು ವರ್ಷಗಳಿಂದ ಉಣ್ಣುತ್ತಿದ್ದೇನೆ, ಸಾಲದೇ?" ಎಂದು ಹೇಳಿ ಆಕೆ ನಕ್ಕಳು.

ನಾನು ಅವಳನ್ನು ತಬ್ಬಿ ಮುದ್ದಿಸುತ್ತ–"ಪಾಪ. ಪಾಪ. ಬಹಳ ಕಷ್ಟಪಟ್ಟಿರಬೇಕು ನೀನು. ಇಂಥವರನ್ನೇಕೆ ನೀನು ಮದುವೆಯಾದೆ?" ಎಂದು ಕೇಳಿದೆ.

"ಏಕೆ ಅಂದರೇನು ಹೇಳುವುದು? ನಾವು ಬೇಡ ಅಂದರೆ ತಂದೆ ತಾಯಿಗಳು ಕೇಳುತ್ತಾರೆಯೆ? ಅದರಲ್ಲೂ ನಮ್ಮ ಸಮಾಜದಲ್ಲಿ? ಇವರ ಶ್ರೀಮಂತಿಕೆಯನ್ನು ಕಂಡು ಮರುಳಾಗಿ ನನ್ನ ತಂದೆ ಮದುವೆ ಮಾಡಿದರು. ನಾನಾಗ ಇನ್ನೂ ಎಳೆಯ ಹುಡುಗಿ. ಏನೂ ತಿಳಿಯುತ್ತಿರಲಿಲ್ಲ. ಆಗಿಹೋಯಿತು."

"ನೀನೆಷ್ಟು ಓದಿದ್ದೀ ಮಹಾದೇವೀ!"

"ಕನ್ನಡ ಸಾಲೆಯ ಕಡೆಯ ಪರೀಕ್ಷೆ ಮುಗಿಸಿದೆ. ಅಷ್ಟರಲ್ಲಿ ಇವರ ಮನೆಗೆ ಬರಬೇಕಾಯಿತು. ಓದುವುದು ನಿಂತುಹೋಯಿತು."

"ಇದುವರೆಗೆ ಮಕ್ಕಳೇಕಾಗಲಿಲ್ಲ?"

"ಆಗುವುದಾದರೂ ಹೇಗೆ?"

"ಎಷ್ಟು ಬೇಗ ನನ್ನ ಸಂಬಂಧ ಬಂದಿತಲ್ಲ!"

"ನನಗೂ ಆಶ್ಚರ್ಯವಾಗುತ್ತದೆ. ಎಲ್ಲಾ ಕನಸಿನಲ್ಲಿ ನಡೆದಂತೆ ನಡೀತಾ ಇದೆ,"

"ನಿನ್ನನ್ನು ಅಲ್ಲಿ ನದೀ ತೀರದಲ್ಲಿ ನೋಡಿದ ಕೂಡಲೆ–ನನ್ನ ಜೀವನದಲ್ಲಿ ನೀನು ಬಲು ಬೇಗ ಪ್ರವೇಶಿಸುತ್ತೀ–ಎಂದೆನ್ನಿಸಿತ್ತು. ಹಾಗೇ ಆಯಿತು."

"ಇದುವರೆಗೆ ಬೇರೆ ಯಾರೂ....?"

ಅವಳು ಕೇಳುತ್ತಿದ್ದ ಪ್ರಶ್ನೆಯನ್ನು ನಾನು ಒಡನೆಯೇ ಅರ್ಥ ಮಾಡಿಕೊಂಡೆ. ಸ್ತ್ರೀಯರ ಸ್ವಭಾವವನ್ನು ಅರಿಯದವನೇನೂ ಅಲ್ಲ ನಾನು. ಅಂತೆಯೆ ನನ್ನ ಚಾರಿತ್ರ್ಯವನ್ನು ಮರೆಮಾಚಿ ಸುಳ್ಳು ಹೊಡೆದುಬಿಟ್ಟೆ.

"ಇದುವರೆಗೆ ಸ್ತ್ರೀಯರನ್ನೇ ಮುಟ್ಟಿಲ್ಲ ನಾನು, ಮಹಾದೇವೀ. ನನ್ನನ್ನು ಸೋಲಿಸಿದವಳೆಂದರೆ ನೀನೊಬ್ಬಳೇ."

"ನನಗಾದರೂ ಹೇಗೆ ಸೋತಿರಿ?"

"ಹೇಗೆ ಎಂದು ಕೇಳಿದರೆ ಏನು ಹೇಳಲಿ? ಪ್ರಪಂಚದಲ್ಲಿ ಎಷ್ಟೋ ವಿಷಯಗಳು ನಮಗೆ ಗೊತ್ತಾಗದಂತೆ ನಡೆದುಹೋಗುತ್ತವೆ. ನಮ್ಮ ಬುದ್ಧಿಗೆ

ನಿಲುಕದ, ಶಕ್ತಿಗೆ ಅಳವಡದ ಸಂಗತಿಗಳೆಷ್ಟೋ ಇವೆ, ಅಂಥವುಗಳಲ್ಲಿ ಇದೂ ಒಂದು ಎಂದು ಭಾವಿಸಿ ಸುಮ್ಮನಾಗಬೇಕಷ್ಟೆ."

"ಇದುವರೆಗೂ ವಿರಕ್ತರಾಗಿಯೇ ಇದ್ದಿರಾ?" ಎಂದು ಅವಳು ಆಶ್ಚರ್ಯದಿಂದ ಕೇಳಿದಳು.

"ಏನು, ಆಶ್ಚರ್ಯವಾಗುತ್ತದೆಯೆ ನಿನಗೆ? ಅದೇಕೆ?"

"ಏಕೆಂದರೆ ಇಂದಿನ ಕಾಲದಲ್ಲಿ ನಿಜವಾಗಿಯೂ ವಿರಕ್ತರಾಗಿರುವವರು ಬಹಳ ವಿರಳ ಅಲ್ಲವೇ?"

"ನಾನೂ ಒಬ್ಬ ಡಾಂಭಿಕನೆಂದು ತಿಳಿದೆಯಾ?"

"ಏನು ತಿಳಿದೆನೊ. ಅದೆಲ್ಲಾ ಈಗ ಯಾಕೆ? ಹೋಗಲಿ ಬಿಡಿ. ನನ್ನ ಬಗ್ಗೆ ನಿಮಗೆ ತಿರಸ್ಕಾರವೇನೂ ಇಲ್ಲವಷ್ಟೆ?"

ಉತ್ತರವಾಗಿ ನಾನು ಅವಳ ತುಟಿಗಳನ್ನು ಚುಂಬಿಸಿದೆ.

[೮]

"ಏನಾಯಿತು?" ಎಂದು ಕೇಳಿದ ವೀರಯ್ಯ.

"ಆಗಬೇಕಾದ್ದು ಆಯಿತು," ಎನ್ನುತ್ತ ನಾನು ಹಾಸುಗೆಯಿಂದ ಮೇಲಕ್ಕೆದ್ದೆ. ಬೆಳಗಾಗಿ ಅರ್ಧಗಂಟೆಯಾಗಿತ್ತು. ರಾತ್ರಿ ನಿದ್ದೆಯಿರಲಿಲ್ಲವಾದುದರಿಂದ ನಾನಿನ್ನೂ ಮಲಗಿಕೊಂಡೇ ಇದ್ದೆ. ವೀರಯ್ಯ ಆಗಲೇ ನೀರಬಾಲಾ ಮನೆಯಿಂದ ಬಂದುಬಿಟ್ಟಿದ್ದ.

"ಏಳಿರಿ. ಸ್ನಾನ ಮಾಡಿಕೊಂಡು ಬರೋಣ."

ಭುಜದ ಮೇಲೆ ಅಂಗವಸ್ತ್ರ ಚೆಲ್ಲಿಕೊಂಡು, ಕೈಯಲ್ಲಿ ಸೋಪಿನ ಡಬ್ಬಿ ಹಿಡಿದುಕೊಂಡು ನಾನು ಅವನೊಂದಿಗೆ ನಡೆದೆ. ಪಕ್ಕದ ಕೊಟಡಿಯ ಬಾಗಿಲು ಇನ್ನೂ ತೆರೆದಿರಲಿಲ್ಲ.

ಕೊಂಚ ದೂರ ಬಂದ ಬಳಿಕ ವೀರಯ್ಯ ಕೇಳಿದ:

"ಇಷ್ಟು ಸುಲಭವಾಗಿ ಇಷ್ಟು ಬೇಗ ಹೇಗೆ ಸಾಧಿಸಿತು ಸ್ವಾಮಿಜಿ?"

"ನಾನಿದುವರೆಗೆ ಎಲ್ಲವನ್ನೂ ಇಷ್ಟೇ ಸುಲಭವಾಗಿ ಇಷ್ಟೇ ಬೇಗ ಸಾಧಿಸಿದ್ದೇನೆ ಕಣಯ್ಯ. ಒಂದೇ ಒಂದು ಕಟಾಕ್ಷ ಸಾಕು. ಹಕ್ಕಿಯನ್ನುರುಳಿಸುವುದಕ್ಕೆ."

"ಅಂತೂ ನೀವು ಪಟಾಯಿತರಪ್ಪ ಈ ವಿದ್ಯೆಯಲ್ಲಿ. ಅವಳೇ ಬಂದಳೇ ಕೋಣೆಗೆ?"

ರಾತ್ರಿ ನಡೆದುದನ್ನೆಲ್ಲ ನಾನು ವರದಿ ಮಾಡಿದೆ.

"ಇನ್ನೇನು, ಆಕೆ ನಿಮ್ಮವಳೇ ಆದಂತಾಯಿತು."

"ಆ ಜರತಾರಿ ಜಗದ್ಗುರು ಪೀಠವೂ ಸಹ."

"ಒಂದು ಹೆಣ್ಣನ್ನು ವಶಪಡಿಸಿಕೊಳ್ಳುವ ಹಾಗೆ ಒಂದು ಮಠಾಧಿಕಾರ ವನ್ನೂ ಇಷ್ಟು ಸುಲಭವಾಗಿ ವಶಪಡಿಸಿಕೊಳ್ಳಬಹುದೆಂದು ತಿಳಿಯಬೇಡಿರಿ. ಅಲ್ಲೊಬ್ಬ ಮರಿಸ್ವಾಮಿ ಇದ್ದೇ ಇರುವನಲ್ಲ ಇನ್ನೂ? ಅವನನ್ನು ಓಡಿಸಿದ ಮೇಲೆ ತಾನೆ ನಿಮಗಲ್ಲಿ ಅವಕಾಶ?"

"ಅದೂ ಅಷ್ಟೇನು ಕಷ್ಟದ ಕಾರ್ಯವಾಗಲಿಕ್ಕಿಲ್ಲ. ಎರಡು ವರ್ಷಗಳ ಹಿಂದೆ ಇಂಥದೇ ಒಂದು ಪ್ರಸಂಗ ಬಂದಿತ್ತು. ಒಂದು ಊರಲ್ಲಿ ಎರಡು ಪಕ್ಷಗಳು. ಒಂದು ಮಠ. ಮುದುಕ ಸ್ವಾಮಿಯೊಬ್ಬನಿದ್ದ. ಆತ ಒಂದು ವಿಲಕ್ಷಣ ವ್ಯಕ್ತಿ. ಮಠದ ಕಡೆಗೆ ಸ್ವಲ್ಪವೂ ಲಕ್ಷ್ಯ ಕೊಡದೆ ಹಳ್ಳಿ ಹಳ್ಳಿ ಸುತ್ತುತ್ತಿದ್ದ, ಒಂದು ಪಕ್ಷದ ಜನರಿಗೆ ಬೇಸರವಾಯಿತು. ಅವರು ಆ ಮುದುಕ ಸ್ವಾಮಿಯನ್ನು ಮಠದಿಂದ ತೆಗೆದು ನನ್ನನ್ನು ಕರೆದೊಯ್ದು ಅಧಿಕಾರಕ್ಕೇರಿಸಿದರು. ಸ್ವಲ್ಪವೂ ಗದ್ದಲವಾಗದೆ ನಡೆಯಿತು ಇದೆಲ್ಲಾ."

"ಮುಂದೆಯೂ ಗದ್ದಲವಾಗಲಿಲ್ಲವೆ?"

"ನಾನು ಸ್ವಲ್ಪ ಹುಷಾರಾಗಿದ್ದಿದ್ದರೆ ಏನೂ ಆಗುತ್ತಿರಲಿಲ್ಲ. ನನ್ನ ಅಜಾಗರೂಕತೆಯಿಂದಲೇ ಪ್ರಮಾದವಾಯಿತು. ಸರಸು ಎಂಬ ನನ್ನ ಪ್ರೇಯಸಿಯ ಬಗ್ಗೆ ನಿನಗಾಗಲೇ ಹೇಳಿದ್ದೇನಲ್ಲ? ಹರಿಹರ ಎಂಬ ತಲೆತಿರುಕ ಪತ್ರಿಕಾ ಸಂಪಾದಕನೊಬ್ಬನಿದಾನೆ. ಆತ ಸರಸುವಿನ ತಲೆಯಲ್ಲಿ ಏನೇನೋ ವಿಚಾರ ತುಂಬಿ ನನ್ನ ವಿರುದ್ಧ ಅವಳನ್ನೆತ್ತಿಕಟ್ಟಿದ. ನನ್ನ ಬಗ್ಗೆ ವಿಪರೀತ ಅಪಪ್ರಚಾರ ವಾಗುವ ಲೇಖನವೊಂದನ್ನು ತಾನೇ ಬರೆದು ತಯಾರಿಸಿ ಅದಕ್ಕೆ ಆ ಸರಸುವಿನ ಸಹಿ ಹಾಕಿಸಿ ಅವಳ ಹೆಸರಿನಲ್ಲೆ ಅದು ಪ್ರಕಟವಾಗಲಿದೆಯೆಂದು ತನ್ನ ಪತ್ರಿಕೆ ಯಲ್ಲಿ ಜಾಹಿರಾತು ಕೊಟ್ಟ. ಆಗ ನಾನು ಬೆಂಗಳೂರಿನಲ್ಲಿದ್ದೆ. ಶಾಸ್ತ್ರಿ ಟೆಲಿಗ್ರಾಂ ಕೊಟ್ಟು ಕರೆಯಿಸಿದ."

"ಯಾವ ಶಾಸ್ತ್ರಿ?"

"ಗಂಗಾಧರ ಶಾಸ್ತ್ರಿ ಅಂತ ಇದಾನೆ. ಕೀರ್ತನ ಕಂಠೀರವ ಗಾನರತ್ನ ಸಾಹಿತ್ಯವಾರಿಧಿ ಅಂತ ಎಷ್ಟೋ ಬಿರುದುಗಳಿವೆ ಅವನಿಗೆ. ಲಿಂಗವೀರ ಅಂತ ಒಂದು ವಾರಪತ್ರಿಕೆಯನ್ನೂ ಹೊರಡಿಸುತ್ತಾನೆ. ನಾನು ಕಳ್ಳೇಕಾಯಿ ನಗರ

ದಲ್ಲಿ ಸ್ಥಾಪಿಸಿದ ಅನಾಥ ಬಾಲ ಬಾಲಿಕಾಶ್ರಮದ ಕಾರ್ಯದರ್ಶಿಯೂ ಅವನೇ. ವೀರಶೈವ ಮಹಾಸಭೆ, ವೀರಶೈವ ವಿದ್ಯಾಭಿವರ್ಧಿನಿ ಸಂಘ, ಕರ್ನಾಟಕ ಏಕೀಕರಣ ಸಭೆ ಮೊದಲಾದ ಎಷ್ಟೋ ಸಂಘ ಸಂಸ್ಥೆಗಳ ಸೂತ್ರಧಾರಿ. ಅವನ ಪರಿಚಯವಿಲ್ಲದ ಜನರೇ ಇಲ್ಲಪ್ಪ ಕರ್ನಾಟಕದಲ್ಲಿ. ಕಾವೀಧಾರಿ ಸ್ವಾಮಿಗಳೆಲ್ಲ ಅವನ ಪತ್ರಿಕೆಯ ಆಶ್ರಯದಾತರು. ಮಂತ್ರಿಗಳನ್ನು ಹಿಡಿದುಕೊಂಡು ಜವಾನರವರೆಗೂ ಅವನ ದೋಸ್ತಿ. ಅದೊಂದು ಅದ್ಭುತ ವ್ಯಕ್ತಿ ಕಣೋ ವೀರೂ. ನಾನು ಇಲ್ಲಿಂದ ಊರಿಗೆ ಹೋದೊಡನೆಯೆ ಅವನ ಪರಿಚಯ ವಾಯಿತು.

"ಆ ಶಾಸ್ತ್ರಿಯ ಕೀರ್ತಿಯನ್ನು ನಾನೂ ತಕ್ಕಮಟ್ಟಿಗೆ ಕೇಳಿದ್ದೇನೆ. ಅವನ ಪತ್ರಿಕೆ ನನಗೂ ಬರುತ್ತದೆ– ಅದರಲ್ಲಿ ನಮ್ಮ ಪೌರುಷವೀರದ ಜಾಹಿರಾತು ಪ್ರಕಟವಾಗುತ್ತದಲ್ಲ!"

"ಏನು ಹೇಳುತ್ತಿದ್ದೆ ? ಹೂಂ. ಆತ ಟೆಲಿಗ್ರಾಂ ಕೊಟ್ಟ. ರಾತ್ರೋ ರಾತ್ರಿ ಬೆಂಗಳೂರಿಂದ ಬಂದೆ. ಆ ಜಾಹಿರಾತಿನಿಂದಾಗಿ ಭಯಂಕರ ಪರಿಣಾಮ ವಾಗಿತ್ತು. ನಾನು ನನ್ನ ಮಠದಲ್ಲಾಗಲಿ ಆ ಊರಲ್ಲಾಗಲಿ ಕಾಲಿಡುವಂತಿರಲಿಲ್ಲ. ಊರಲ್ಲೊಂದು ಸಾರ್ವಜನಿಕ ಸಭೆಯೂ ಸೇರಿ ನನ್ನನ್ನು ಖಂಡಿಸಲಾಗಿದ್ದಿತಂತೆ. ಆ ಜಾಹಿರಾತಿನಲ್ಲಿ ಬಂದ ಅಂಶಗಳೆಲ್ಲ ಸುಳ್ಳೆಂಬುದಾಗಿ ಅದೇ ಪತ್ರಿಕೆಯಲ್ಲಿ ಇನ್ನೊಂದು ಜಾಹಿರಾತು ಪ್ರಕಟವಾಗುವಂತೆ ಮಾಡಿದ್ದರೆ ಮಾತ್ರ ನಾನು ಉಳಿದುಕೊಳ್ಳಬಹುದಾಗಿದ್ದಿತು. ಅದಕ್ಕಾಗಿ ಶಕ್ತಿಮೀರಿ ಪ್ರಯತ್ನಿಸಿದೆ. ಆ ಹರಿಹರ ಒಪ್ಪಲಿಲ್ಲ. ಆ ಹುಡುಗಿ ತಲೆ ತಪ್ಪಿಸಿಕೊಂಡು ಮಾಯವಾಗಿದ್ದಳು. ಅದೇ ದಿನ ಆಕೆ ಭಾವಿಗೆ ಹಾರಿಕೊಂಡು ಸತ್ತುಹೋದಳೆಂದು ಶಾಸ್ತ್ರಿ ನನಗೆ ಪತ್ರದ ಮೂಲಕ ಹಿಂದಿನಿಂದ ತಿಳಿಸಿದ. ಸರಿ. ಆ ಜಿಲ್ಲೆಯಲ್ಲೆಲ್ಲ ನನ್ನ ಬಗ್ಗೆ ಪೂರಾ ಬೊಬ್ಬಾಟವಾಗಿತ್ತು. ಕೆಲ ದಿನಗಳ ಮಟ್ಟಿಗಾದರೂ ನಾನು ಅಲ್ಲಿರು ವಂತಿರಲಿಲ್ಲ. ಕೈಲಿ ಸ್ವಲ್ಪ ಹಣವಿತ್ತು. ಉತ್ತರ ಹಿಂದುಸ್ಥಾನದಲ್ಲಿ ಸಂಚರಿಸಿದ ರಾಯಿತೆಂದುಕೊಂಡು ಇತ್ತ ಹೊರಟುಬಂದೆ.

"ಆ ಹರಿಹರ ಯಾವನು, ಅವನ ಆ ಪತ್ರಿಕೆಯ ಪ್ರಭಾವ ಬಹಳ ಇದೆಯೇನು ಕರ್ನಾಟಕದಲ್ಲಿ?"

"ಹಾಗೆ ಕರ್ನಾಟಕದ ಜಿಲ್ಲೆಗಳಿಗೂ ಆ ಪತ್ರಿಕೆ ಹೋಗುವುದಿಲ್ಲ. ಹೊಸ ದಾಗಿ ಹೊರಟದ್ದು. ಇನ್ನೂ ಸಾಕಷ್ಟು ಪ್ರಚಾರವಾದಂತೆ ತೋರುವುದಿಲ್ಲ.

ಆ ಒಂದು ಜಿಲ್ಲೆಯಲ್ಲೇ ಅದರ ಪ್ರಭಾವ ಬಹಳ. ಗಂಗಾಧರಶಾಸ್ತ್ರಿಯ ಲಿಂಗವೀರ ಹೊರಡುವುದಲ್ಲಾ-ಅಲ್ಲಿಯೆ ಹರಿಹರನ ಜನಪದವೂ ಹೊರಡುತ್ತದೆ."

"ಎರಡು ಪತ್ರಿಕೆಗಳಿಗೂ ಸ್ಪರ್ಧೆಯಿರಬಹುದು?"

"ಸ್ಪರ್ಧೆಯೇನೂ ಇದ್ದಂತಿಲ್ಲ. ಗಂಗಾಧರ ಶಾಸ್ತ್ರಿಯ ಧೋರಣೆಯೇ ಬೇರೆ. ಹರಿಹರನ ದಾರಿಯೇ ಬೇರೆ. ಒಬ್ಬನದು ಲಿಂಗವೀರ. ಇನ್ನೊಬ್ಬನದು ಜನಪದ."

"ಗಂಗಾಧರ ಶಾಸ್ತ್ರಿ ಬಹಳ ಧಾರ್ಮಿಕ ವೃತ್ತಿಯವನೇನು?"

ನಾನು ಗಟ್ಟಿಯಾಗಿ ನಗುತ್ತ ನುಡಿದೆ: "ಧಾರ್ಮಿಕವೃತ್ತಿ! ನಿನ್ನಂಥ ಅನುಭವಿಕನೂ ಇಂಥ ಹುಚ್ಚು ಪ್ರಶ್ನೆ ಕೇಳಬೇಕೇ ವೀರೂ? ಇಂದಿನ ಕಾಲದಲ್ಲಿ ಧಾರ್ಮಿಕವೃತ್ತಿ – ನಿಜವಾದ ಧಾರ್ಮಿಕವೃತ್ತಿ – ಎಲ್ಲಿಂದ ಬರಬೇಕು? ಕಾವಿ ಧಾರಿಗಳೂ ವಿರಕ್ತರೂ ಧರ್ಮಗುರುಗಳೂ ಎಂದುಕೊಳ್ಳುವ ನಮ್ಮಂಥವರ ಧಾರ್ಮಿಕವೃತ್ತಿಯೇ ಇಂಥದಿರುವಾಗ – ಇನ್ನು ಸಂಸಾರಿಯಾಗಿ ಪ್ರಪಂಚದಲ್ಲಿ ತೊಡಗಿರುವ ಶಾಸ್ತ್ರಿಯಂಥವನದು ಎಂಥದಿದ್ದೀತು! ಲಿಂಗ, ಲಿಂಗಪೂಜೆ, ಲಿಂಗವೀರ, ಲಿಂಗಾಯತ ಧರ್ಮದ ಅಭಿಮಾನ ಎಲ್ಲಾ ಒಂದು ಸೋಗು. ಆತ ಪತ್ರಿಕೆ ಹೊರಡಿಸಿರುವುದು ಲಿಂಗಾಯತರ ಉದ್ಧಾರಕ್ಕಲ್ಲ; ತನ್ನ ಉದ್ಧಾರಕ್ಕೆ. ಸುಳ್ಳು ಅಭಿಮಾನ ನಟಿಸಿ ಅಜ್ಞ ಜನರಿಂದಲೂ ಸ್ವಾಮಿಗಳಿಂದಲೂ ಹಣ ಸುಲಿಯಲಿಕ್ಕೆ."

"ಆತ ಸೋಗಲಾಡಿಯೆಂಬುದು ಸ್ವಾಮಿಗಳಿಗೆಲ್ಲ ಗೊತ್ತೇ?"

"ಸೋಗು ಹಾಕುವುದರಲ್ಲಿ ನುರಿತವರಾದ ನಮಗೆ, ಸ್ವಾಮಿಗಳಿಗೆ, ಅದೇ ಕಾಯಕ ಮಾಡುವ ಇನ್ನೊಬ್ಬ ಸೋಗಲಾಡಿಯನ್ನು ಗುರುತಿಸುವುದೇನೂ ಕಷ್ಟವಲ್ಲ. ಆತ ಡಾಂಭಿಕನೆಂಬುದು ಸಾಮಾನ್ಯವಾಗಿ ಎಲ್ಲ ಸ್ವಾಮಿಗಳಿಗೂ ಗೊತ್ತಿದೆ."

"ತಿಳಿದೂ ತಿಳಿದೂ ಅವನಿಗೆ ಪ್ರೋತ್ಸಾಹವೀಯುವರೇ?"

"ಪ್ರೋತ್ಸಾಹವೀಯದಿದ್ದರೆ ನಡೆಯುವಂತಿಲ್ಲ. ನಮ್ಮ ಡಾಂಭಿಕತನವನ್ನು ಮುಚ್ಚಿಕೊಳ್ಳುವುದಕ್ಕಾಗಿ ಇಂಥ ಡಾಂಭಿಕರ ನೆರವು ಪಡೆಯಬೇಕಾಗುವುದು ಸ್ವಾಮಿಗಳು. ನಮ್ಮ ಪ್ರತಿಯೊಂದು ಕೃತಿಯನ್ನೂ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸುತ್ತಿರುವ ಇಂದಿನ ಸಮಾಜದಲ್ಲಿ ನಮ್ಮ ಸ್ಥಾನಮಾನಗಳನ್ನು ಭದ್ರವಾಗಿ ಉಳಿಸಿಕೊಳ್ಳಬೇಕಾದರೆ ಶಾಸ್ತ್ರಿಯಂಥವರನ್ನು ಹಿಂಬಾಲಕರನ್ನಾಗಿ ಇಟ್ಟುಕೊಳ್ಳಲೇಬೇಕಾಗುತ್ತದೆ."

"ಶಾಸ್ತ್ರಿಯ ಹಾಗೆ ಹರಿಹರನನ್ನೂ ಜೇಬಿಗೆ ಸೇರಿಸಲು ಬರುತ್ತಿರಲಿಲ್ಲವೆ?"

"ಅಯ್ಯೋ ಮಾರಾಯ. ಹರಿಹರ ಅಂದರೆ ಎಂಥ ವ್ಯಕ್ತಿಯೆಂಬುದು ನಿನಗೆ ತಿಳಿಯದು. ಮಹಾ ಭಯಂಕರ ಪ್ರಾಣಿ ಅದು. ನಮ್ಮ ಸಮಾಜದಲ್ಲೇ ಅಂಥವರು ತೀರ ವಿರಳ. ಶಾಸ್ತ್ರಿಯ ವಿಚಾರಗಳಿಗೆ ಎಲ್ಲ ರೀತಿಯಿಂದಲೂ ವಿರುದ್ಧವಾದ ವಿಚಾರ ಹರಿಹರನವು. ಯಾವುದೇ ಬಗೆಯ ಡಾಂಭಿಕತನವನ್ನೂ ಆತ ಸಹಿಸುವುದಿಲ್ಲ. ಆಷಾಡಭೂತಿಗಳನ್ನೆಲ್ಲ ನಿರ್ದಯೆಯಿಂದ ಬಯಲಿಗೆಳೆಯ ಬೇಕೆಂದು ವಾದಿಸುತ್ತಾನೆ. ಶ್ರೀಮಂತರು ಮತ್ತು ಸ್ವಾಮಿಗಳೆಂದರೆ ಭಯಂಕರ ಸಿಟ್ಟು ಅವನಿಗೆ. ನನ್ನನ್ನೇ ಪೂರಾ ಫಜೀತಿ ಮಾಡಿಬಿಟ್ಟ. ಇದುವರೆಗೆ ಅಂಥ ಕೆಟ್ಟ ಅನುಭವ ಇನ್ನಾರಿಂದಲೂ ಬಂದಿಲ್ಲ ನನಗೆ. ಮುಖ್ಯವಾಗಿ ಅವನಿಂದಾಗಿಯೇ ನಾನಿತ್ತ ಬರಬೇಕಾಯಿತು."

"ಬೇರೆ ಜಿಲ್ಲೆಗಳಲ್ಲಿ ಅವನ ಪತ್ರಿಕೆಯ ಪ್ರಭಾವವಿಲ್ಲವೆಂದು ಹೇಳುತ್ತೀರಿ. ಅಂದರೆ ಅದಿನ್ನೂ ಸಣ್ಣ ಪತ್ರಿಕೆಯೆಂದೇ ಅರ್ಥವಾಗುತ್ತದೆ. ಅಂಥ ಚಿಲ್ಲರೆ ಪತ್ರಿಕೆಗಳಿಗೆಲ್ಲ ಹೆದರಬೇಕಾದ ಅಗತ್ಯವೇನು ಸ್ವಾಮಿಜಿ? ಇಂಥವು ಎಷ್ಟೋ ಇರುತ್ತವೆ, ಬಗುಳುವ ನಾಯಿಗಳಿದ್ದ ಹಾಗೆ. ಆನೆಯಂತೆ ಗಂಭೀರವಾಗಿರುವುದನ್ನು ಬಿಟ್ಟು ಇಂಥ ಕುನ್ನಿಗಳಿಗೆಲ್ಲ ಅಂಜಿದರೆ ಹೇಗೆ?"

"ಛೆ. ಛೆ. ಹಾಗೆಲ್ಲ ಕುನ್ನಿ ಗಿನ್ನಿ ಅಂದುಬಿಟ್ಟು ಹರಿಹರನನ್ನೂ ಅವನ ಪತ್ರಿಕೆಯನ್ನೂ ಅಲಕ್ಷಿಸುವಂತಿಲ್ಲ ವೀರೂ. ಕತೆ ಕಾದಂಬರಿ ಬರೆಯುತ್ತಾನಲ್ಲ ಆ ಕುಟ್ಟೋಶನಿ ಎಂಬಾತ – ಅವನೂ ಬರೆಯುತ್ತಿರುತ್ತಾನೆ ಜನಪದಕ್ಕೆ. ಇಬ್ಬರೂ ಸೇರಿ ರಾಹುಕೇತು ಜತೆಯಾದಂತೆ ಆಗಿದೆ."

ಸ್ನಾನ ಮಾಡುವಾಗಲೂ ನಮ್ಮ ಸಂಭಾಷಣೆ ಹಾಗೇ ನಡೆದೇ ಇತ್ತು.

"ಅವರೂ ಕಮ್ಯೂನಿಸ್ಟರೋ ಏನೋ," ಎಂದ ವೀರಯ್ಯ.

"ಕಮ್ಯೂನಿಸ್ಟರಾಗಿರಲಾರರು. ಬಸವಣ್ಣ, ಅಂಬಿಗರ ಚೌಡಯ್ಯಗಳ ವಚನಗಳನ್ನು ಪಾಠ ಮಾಡುವುದುಂಟೇ ಕಮ್ಯೂನಿಸ್ಟರು? ಅವರು ಯಾವುದೊಂದು ಪಕ್ಷಕ್ಕೂ ಅಂಟಿಕೊಂಡಿಲ್ಲ. ಆದರೂ ಅವರ ಒಲವು ಮಾತ್ರ ಸಾಮ್ಯವಾದದ ಕಡೆಗೇ ಇರುವುದು ಸ್ಪಷ್ಟವಿದೆ."

"ಈ ಸಾಮ್ಯವಾದದ ಹಾವಳಿ ಬಹಳವಾಯಿತು ಸ್ವಾಮಿಜಿ ಎಲ್ಲೆಲ್ಲೂ ಅದರದೇ ಗದ್ದಲ."

"ಇರಲಿರಲಿ. ಹಾಗೆ ಹೇಳಬೇಕಾದರೆ ನಾನೂ ಸಾಮ್ಯವಾದಿಯೇ.

ಈ ಬಡತನ ಈ ಸಂಕಟ ಎಲ್ಲಾ ತೊಲಗಬೇಕು, ಸಮಾನತೆ ಬರಬೇಕು, ಸರಿಯೆ. ಆದರೆ ಸಾಮ್ಯವಾದಿಗಳು ಅಧಿಕಾರಕ್ಕೆ ಬಂದರೆ ನಮ್ಮಂಥವರನ್ನೆಲ್ಲ ಹಿಡಿದುಕೊಂಡು ಹೋಗಿ ಗುಡ್ಡದಲ್ಲಿ ಕಲ್ಲೊಡೆಯುವ ಒಡ್ಡರನ್ನಾಗಿ ಮಾಡುವುದು ಖಂಡಿತ. ಹರಿಹರನೂ ಹಾಗೇ ಹೇಳುತ್ತಾನೆ."

"ಹೀಗೆ ಹೇಳಿದನೇ? ನಿಮ್ಮೆದುರಿಗೆ?"

"ಯಾರಾದರೇನು ಅವನಿಗೆ? ಯಾರಿಗೂ ಅಂಜದ ವ್ಯಕ್ತಿಗೆ ಅವರಿವರು ಎಂದರೇನು? ಚೆಂದೊಳ್ಳೆ ಹೆಣ್ಣೊಂದನ್ನು ಮದುವೆಯಾಗಿ ಯಾವುದೊಂದು ಹಳ್ಳಿಗೆ ಹೋಗಿ ಕೂಲಿ ಮಾಡಿ ಹೊಟ್ಟೆ ಹೊರೆಯಿರಿ – ಅಂತ ಉಪದೇಶ ಮಾಡಿದ ನನಗೆ!" ಎಂದು ಹೇಳಿ ನಾನು ನೀರು ಮುಕ್ಕಳಿಸುತ್ತ ನಗತೊಡಗಿದೆ.

ವೀರಯ್ಯನಿಗೆ ನಗೆ ಬರಲಿಲ್ಲ. ಆತ ಕೆನ್ನೆಗೆ ಸೋಪು ಸವರುತ್ತಾ ಹೇಳಿದ:

"ಏನು ಸ್ವಾಮಿಜಿ, ಇಂಥ ಮಾತು ಕೇಳಿಸಿಕೊಂಡು ನಗುತ್ತೀರಲ್ಲಾ?"

"ನಗದಿದ್ದರೆ ಇನ್ನೇನು ಮಾಡಬೇಕು? ಅಳಬೇಕೇ? ಆತ ಅಂಥ ಮಾತು ಆಡಿದಾಗ ನನಗೆ ಅಳು ಬರುವ ಹಾಗಾಗಿತ್ತು ಎಂಬುದೇನೋ ನಿಜ. ಆದರೆ ಕೆಲ ದಿನಗಳಲ್ಲೇ ಅದರ ತೀಕ್ಷ್ಣತೆ ಮರೆತುಹೋಯಿತು. ಈ ವೇಶೀ ಪಟ್ಟಣದಲ್ಲಿ – ಈ ನದೀ ತೀರದಲ್ಲಿ ನಿಂತುಕೊಂಡು ಸಾವಿರಾರು ಮೈಲಿ ದೂರ ದಲ್ಲಿರುವ ಆ ಹರಿಹರನನ್ನು ನೆನಪು ಮಾಡಿಕೊಂಡಾಗಲೆಲ್ಲ ನನಗೆ ನಗು ತಡೆಯು ಲಾಗುವುದಿಲ್ಲ. ಎಂಥಾ ವ್ಯಕ್ತಿ! ಅಂತ ನಗೆ."

"ಏನೋ ಸ್ವಲ್ಪ ಹಣ ಕೊಟ್ಟು ಅವನನ್ನೂ ನಿಮ್ಮ ಕಡೆಗೇ ಎಳೆದು ಕೊಳ್ಳಲು ಬರುತ್ತಿರಲಿಲ್ಲವೆ?"

"ಆ ಪ್ರಯತ್ನವನ್ನೂ ಮಾಡಿದೆ. ಅಲ್ಲಿ ಇಲ್ಲಿ ಸಾಲಮಾಡಿ ಅವನೊಂದು ಪ್ರೆಸ್ ಹಾಕಿಕೊಂಡಿದಾನೆ. ಆ ಸಾಲವನ್ನೆಲ್ಲ ನಾನೇ ತೀರಿಸುವುದಾಗಿ ಹೇಳಿದೆ. ಅವನಿಗೆ ಭಯಂಕರ ಕೋಪ ಬಂತು. ಹಾಗೆಲ್ಲ ಲಂಚಕ್ಕೆ ಕೈಯೊಡ್ಡಲು ನಾನೇನೂ ಗಂಗಾಧರ ಶಾಸ್ತ್ರಿಯಲ್ಲ ಅಂದುಬಿಟ್ಟ."

"ಶಾಸ್ತ್ರಿ ನಿಮ್ಮಿಂದ ಸಾಕಷ್ಟು ಹೊಡೆದಿರಬಹುದಲ್ಲ?"

"ಅವನೇನಪ್ಪ, ನನ್ನ ಖಜಾಂಚಿ ಇದ್ದ ಹಾಗಿದಾನೆ. ಅವನು ಕೇಳಿ ದಾಗ ಕೇಳಿದಷ್ಟು ಹಣ ಕೊಡಬೇಕಾಗುತ್ತದೆ."

"ಅದೇನ್ರೀ, ಅಷ್ಟು ಸಲಿಗೆ?"

"ಅದಕ್ಕೆಲ್ಲ ಕಾರಣಗಳಿವೆ. ವೀರೂ. ನಿನಗೆ ಕೊಟ್ಟಿಲ್ಲವೇ? ಹಾಗೇ

ಅಲ್ಲಿ ಶಾಸ್ತ್ರಿಗೆ. ಇಲ್ಲಿದ್ದಾಗ ನೀನು ನನ್ನ ಅನೇಕ ಕಾರ್ಯಗಳನ್ನು ಸಾಧಿಸಿ ಕೊಡುವಂತೆ ಆತ ಅಲ್ಲಿ ಸಾಧಿಸಿಕೊಡುತ್ತಾನೆ."

"ಸರಿ. ಸರಿ. ಅರ್ಥವಾಯಿತು," ಎಂದು ನುಡಿದು, ನೀರಲ್ಲಿ ಒಂದು ಮುಳುಗು ಹಾಕಿ ಮೇಲಕ್ಕೆದ್ದು ಮೈಯನ್ನು ರಭಸದಿಂದ ಉಜ್ಜಿಕೊಳ್ಳುತ್ತ ವೀರಯ್ಯನೆಂದ: "ನಿಮ್ಮ ಹಣವನ್ನೆಲ್ಲ ಆ ಕಳ್ಳ ಶಾಸ್ತ್ರಿಯೇ ಹಾರಿಸಿರಬೇಕು ಹಾಗಾದರೆ! ನನಗೆ ಮಾತ್ರ ಬರೀ ಮಾತಿನ ಉಡುಗೊರೆ!"

"ಏನಯ್ಯ, ನಿನಗೂ ಕೊಟ್ಟಿದ್ದೇನಲ್ಲ ಸಾಕಷ್ಟು?"

"ಏನು ಸ್ವಾಮಿಜಿ, ಏನು ಮಹಾ ಕೊಟ್ಟಿರೋದು ನೀವು?"

"ಇಲ್ಲಿಗೆ ಬಂದ ದಿನವೇ ಎರಡುನೂರು ಕೊಟ್ಟಿದ್ದೇನಲ್ಲೋ?"

"ಏನು, ನನಗೇ ಕೊಟ್ಟ ಹಾಗೆ ಮಾತಾಡುತ್ತೀರಲ್ಲ ಸ್ವಾಮಿಜಿ! ಒಳ್ಳೆಯವರೇ ನೀವೂ! ಅವೊತ್ತು ರಾತ್ರಿ ಆ ಬಂಗಾಲೀ ನರ್ತಕಿಯ ಮನೆಗೆ ಕರೆದುಕೊಂಡು ಹೋಗಿರಲಿಲ್ಲವೇ ನಿಮ್ಮನ್ನು? ಅವಳ ಮನೆ ಬಾಗಿಲು ಕಾಯುವವನಿಗೇ ಐದು ರೂಪಾಯಿ ಕೊಡಬೇಕಾಯಿತು. ಹಾಡುವವಳಿಗೆ ಹತ್ತು ರೂಪಾಯಿ, ಸಾರಂಗಿಯವನಿಗೆ ಹತ್ತು, ತಬಲಜಿಗೆ ಹತ್ತು, ಅವರಿಗೆಲ್ಲ ಬೀರ್ ಸೋಡ ತರಿಸಿಕೊಟ್ಟಿದ್ದಕ್ಕೆ ಇಪ್ಪತ್ತೈದು, ನರ್ತಕಿಯ ಕೈಗೆ ನೂರು ರೂಪಾಯಿಯ ನೋಟು ಇನ್ನು ಅದರಲ್ಲಿ ನನಗೆಷ್ಟು ಉಳಿದಂತಾಯಿತು ನೀವೇ ಹೇಳಿ."

"ಹೋಗಲಿ ಬಿಡಪ್ಪ, ಅದೆಲ್ಲಾ. ಇಂಥ ಎಷ್ಟು ನೋಟುಗಳು ಹೋಗಿವೆಯೊ ಇಲ್ಲಿಯತನಕ! ಇದೇ ಕಷ್ಟ ಬಹು ದಿನ ಇರುವುದಿಲ್ಲ. ದೇವರು ಕಣ್ಣುಬಿಡುವ ಲಕ್ಷಣಗಳಿವೆ. ಸೆಟ್ಟರ ಶ್ರೀಮತಿ ಬೇರೆ ಬುಟ್ಟಿಗೆ ಬಿದ್ದಳು. ಏನೇನಾಗುವುದೋ ನೋಡೋಣ."

ವೀರಯ್ಯ ಧೋತರ ಉಟ್ಟುಕೊಳ್ಳುತ್ತಿದ್ದವನು ತನ್ನ ಉಬ್ಬು ಹಲ್ಲುಗಳನ್ನು ಪ್ರದರ್ಶಿಸುತ್ತ ವಿಚಿತ್ರವಾಗಿ ನಗುತ್ತ ಹೇಳಿದ: "ಇಂಥ ಶ್ರೀಮಂತರ ಹೆಂಡತಿಯೊಬ್ಬಳೊಂದಿಗೆ ನನಗೂ ಸ್ನೇಹವಾದರೆ ಎಷ್ಟು ಚೆನ್ನಾದೀತು! ಇಂಥವರೆಲ್ಲ ನಿಮಗೇ ಸಿಕ್ಕುತ್ತಾರಲ್ಲ!"

"ನಿನ್ನ ಈ ಮುಸುಡಿ ನೋಡಿ ಯಾವ ಹೆಣ್ಣು ಒಲಿದಾಳೋ ನಿನಗೆ!" ಎಂದು ನಾನೂ ನಗುತ್ತ ಹೇಳಿದೆ.

೨

ಮಹಾದೇವಿ

[೧]

ವ್ಯಭಿಚಾರವೊಂದು ಪಾಪ, ಭಯಂಕರ ಪಾಪ ಎಂಬ ಭಯದಿಂದ ಇಷ್ಟು ದಿನ ಪಾತಿವ್ರತ್ಯವನ್ನು ಉಳಿಸಿಕೊಂಡು ಬಂದಿದ್ದೆ ನಾನು. ಈ ಇಪ್ಪತ್ತು ವರ್ಷಗಳ ಕಾಲ ಮನಸ್ಸನ್ನು ಹೇಗೋ ಬಿಗಿ ಹಿಡಿದಿದ್ದೆ. ಅದೊಂದು ತಪಶ್ಚರ್ಯೆ ಯಾದ ಹಾಗೇ ಆಗಿತ್ತು ನನ್ನ ಪಾಲಿಗೆ.

ಅದೆಲ್ಲವೂ ಈಗ ವ್ಯರ್ಥವಾಯಿತು. ಕೊನೆಗೂ ನಾನು ಪಾಪದ ಬಾವಿಗೆ ಬಿದ್ದು ಬಿಟ್ಟೆ.

ಇದು ಹೇಗಾಯಿತು? ಅದೂ ಶೀಘ್ರವಾಗಿ?

ಹೀಗೆ ಏಕಾಏಕಿ ಕಾಲು ಜಾರುವ ಸ್ವಭಾವವೂ ನನ್ನದಲ್ಲ.

ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರುವ ಸ್ವೈರಾಚಾರಿಣಿಯೂ ನಾನಲ್ಲ.

ಇದುವರೆಗೆ ಎಷ್ಟು ಜನ ಪುರುಷರನ್ನು ಕಂಡಿಲ್ಲ ನಾನು? ಎಷ್ಟು ಜನ ರೊಂದಿಗೆ ನನಗೆ ಪರಿಚಯುವಿಲ್ಲ?

ನಮ್ಮವರ ಸ್ನೇಹಿತರಾದ ವ್ಯಾಪಾರಿಗಳೆಷ್ಟೋ ಜನ ನನ್ನನ್ನು ತಮ್ಮ ಜಾಲದಲ್ಲಿ ಸಿಲುಕಿಸಲು ಪ್ರಯತ್ನಪಟ್ಟರಲಿಲ್ಲವೆ? ಯಾರೊಂದಿಗೂ ಸಲುಗೆ ಬೆಳೆಸುವ ಸ್ವಭಾವವಲ್ಲ ನನ್ನ ಪತಿಯದು. ಆದರೂ ಅವರ ಪರಿಚಿತರು ಏನೇನೋ ನೆವ ಮಾಡಿಕೊಂಡು ನಮ್ಮ ಮನೆಗೆ ಬಂದು ನನ್ನೊಂದಿಗೆ ಸಲುಗೆ ಬೆಳೆಸಲು ಪ್ರಯತ್ನಿಸಿರಲಿಲ್ಲವೆ?

[೨]

'ಅನುಭವ ಮಂಟಪ'ದ ಕಾರ್ಯದರ್ಶಿ ಆ ಪುಟ್ಟಲಿಂಗಯ್ಯ ನನಗಾಗಿ ಎಷ್ಟು ಒದ್ದಾಡಿದ. ಅದನ್ನು ನೆನೆದುಕೊಂಡಾಗಲೆಲ್ಲ ನನಗೆ ನಗು ಬರುತ್ತಿತ್ತು. ನಮ್ಮವರಿಗೊಂದು ಹುಚ್ಚು – ಅನುಭವ ಮಂಟಪ, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ ಅಂತ. ಮಠದಲ್ಲಿಯೆ ಈ ಸಂಸ್ಥೆಯನ್ನು ಸ್ಥಾಪಿಸಿದ್ದರು, ಮರಿಸ್ವಾಮಿಯೆ ಅಲ್ಲಮಪ್ರಭುವೆಂದು ಭಾವಿಸಿದ್ದರು. ಅಬ್ಬ, ಈ ಅಲ್ಲಮ

ಪ್ರಭುವೆ! ಆತ ಕಪಟಿಯೆಂಬುದು ಊರವರಿಗೆಲ್ಲ ಗೊತ್ತಿದ್ದರೂ ಭೋಳೇ ಸ್ವಭಾವದವರಾದ ನಮ್ಮವರಿಗೆ ಮಾತ್ರ ಗೊತ್ತಿರಲಿಲ್ಲ. ಕಾವಿ ಬಟ್ಟೆಯವರೆಂದರೆ ಕುರುಡುನಂಬಿಕೆ ಅವರಿಗೆ. ಆ ಸ್ವಾಮಿಯ ಹಸ್ತಕ ಪುಟ್ಟಲಿಂಗಯ್ಯ, ನಿರುದ್ಯೋಗಿ. ಮಾಡಲು ಬೇರಾವ ಕೆಲಸವೂ ಇಲ್ಲದಿದ್ದುದರಿಂದ ನಾಟಕ ಕಾರನ ಸೋಗು ಹಾಕಿದ. ಹಿಂದೀ ಭಾಷೆಯಿಂದ ಕೆಲವು ನಾಟಕಗಳನ್ನು ಅನುವಾದಿಸಿ ಕಂಪನಿಯವರಿಗೆ ಕಟ್ಟಿ ಕವಿಯೆನ್ನಿಸಿಕೊಂಡು ಮೆರೆದಾಡಿದ. ತಾನೂ ಕಲಾಪಿದನೆಂದು ತೋರಿಸುವುದಕ್ಕಾಗಿ ಉದ್ದ ಕೂದಲು ಕಾಯ್ದ. ಅವನ ವೇಷವೊ, ಅವನ ರೂಪವೊ, ಆ ಕಪ್ಪು ಮೈ ಬಣ್ಣವೊ. ಅವನ ಮುಖ ನೋಡಿದಾಗಲೆಲ್ಲ ಹಂದಿಯ ಮೋರೆಯ ನೆನಪಾಗುತ್ತಿತ್ತು ನನಗೆ. ಅದರ ಹಲ್ಲುಗಳಂಥ ಉದ್ದ ಹಲ್ಲು, ಇವನವೂ. ಮೊಂಡ ಮೂಗು, ಸಣ್ಣ ಸಣ್ಣ ಕಣ್ಣು, ಒರಟು ಕೂದಲು, ಬೊಜ್ಜು ಬೆಳೆದ ದೇಹ, ಗುಂಡಗೆ ಮುಂದೆ ಬಂದ ಹೊಟ್ಟೆ. ರೂಪು ಹೇಗಿದ್ದರೂ ವೇಷ ಮಾತ್ರ ಭರ್ಜರಿ: ರೇಶಿಮೆಯ ಅಂಗಿ, ಸರ್ಜ್‌ಕೋಟು, ಜರಿಯಂಚಿನ ಧೋತರ, ಪಂಪ್‌ಶೂ, ಕೈಯಲ್ಲಿ ಬಣ್ಣದ ಬಡಿಗೆ, ಬೆರಳಲ್ಲಿ ಉಂಗುರ, ಕಿವಿಗಳಲ್ಲಿ ಕಡಕ, ಹುಬ್ಬುಗಳ ನಡುವೆ ಚಂದನದ ಬೊಟ್ಟು. ನಾಟಕದ ಪಾತ್ರ ಕಂಡಂತೆಯೇ ಕಾಣುತ್ತಿದ್ದ.

ನನ್ನ ದೋಸ್ತಿ ಮಾಡಲು ಅನುಕೂಲವಾಗಲೆಂದೇ ಆತ ನಮ್ಮವರ ಅನುಭವಮಂಟಪದ ಕಾರ್ಯದರ್ಶಿ ಕೆಲಸ ವಹಿಸಿಕೊಂಡನೆಂದು ತೋರುತ್ತದೆ. ಇಲ್ಲವಾದರೆ, ಅನುಭವಮಂಟಪವೆಲ್ಲಿ, ಅವನೆಲ್ಲಿ! ಕೇವಲ ಧಾರ್ಮಿಕ ವಿಷಯ ಗಳನ್ನು ಚರ್ಚಿಸುವ ಈ ಸಂಸ್ಥೆಯ ಬಗೆಗೆ ಈಗಿನ ಕಾಲದಲ್ಲಿ ಜನರಿಗೆ ಆಸಕ್ತಿ ಎಲ್ಲಿಂದ ಬಂದೀತು? ಸದಸ್ಯರಾದವರೇ ಹತ್ತು ಮಂದಿ. ಅವರಲ್ಲಿ ವ್ಯಾಪಾರಸ್ಥರೇ ಹೆಚ್ಚು ಜನ. ಸೋಮವಾರಕ್ಕೊಮ್ಮೆ ಸಭೆ – ಸಾಯಂಕಾಲ. ಎರಡು ಗಂಟೆಗಳ ಕಾಲ ಮಠದಲ್ಲಿ ಕೂತು, ಹೊತ್ತು ಕಳೆದು ಹೋಗುವವರೇ ಎಲ್ಲರೂ. ಕಾರ್ಯ ದರ್ಶಿಯ ಕೆಲಸ ವಹಿಸಿಕೊಳ್ಳಲು ಒಬ್ಬರಿಗೂ ಉತ್ಸಾಹವಿರಲಿಲ್ಲ. ಪುಟ್ಟ ಲಿಂಗಯ್ಯ ತಾನಾಗಿಯೆ ಮುಂದೆ ಬಂದಾಗ ನಮ್ಮವರಿಗೆ ಆನಂದವಾಗಿರಬೇಕು. ಅಂದಿನಿಂದ ನಮ್ಮ ಮನೆಯಲ್ಲಿ ಅವನ ಓಡಾಟ ಹೆಚ್ಚಿತು. ಬೆಳಗ್ಗೆ ಸಂಜೆ ಎರಡು ಹೊತ್ತೂ ಅಲೆಯತೊಡಗಿದ. ಮೊದಮೊದಲು ನಮ್ಮವರಿದ್ದಾಗ ಬರುತ್ತಿದ್ದವನು ಕೆಲದಿನ ಕಳೆದ ಬಳಿಕ ನಾನೊಬ್ಬಳೇ ಇದ್ದಾಗಲೂ ಬರತೊಡಗಿದ. ಬರಬೇಡ ಎಂದು ಹೇಗೆ ಹೇಳುವುದು? ಸುಮ್ಮನಿದ್ದು ಬಿಟ್ಟೆ.

ಆತ ತಾಸೆರಡು ತಾಸು ಕುಳಿತು ಆ ಕತೆ ಈ ಕತೆ ಹೇಳಿ ನನ್ನ ಮನಸ್ಸನ್ನು ರಂಜಿಸಲು ಪ್ರಯತ್ನಿಸತೊಡಗಿದ. ವ್ಯಭಿಚಾರೀ ಪ್ರಣಯದ ಚಿತ್ರಣವಿರುವ ಕಾದಂಬರಿಗಳನ್ನು ತಂದು ಓದಲು ಕೊಟ್ಟ. ದಿನಗಳುರುಳಿದ ಹಾಗೆ ಅವನ ಸಲಿಗೆ, ಅವನ ಧೈರ್ಯ ಹೆಚ್ಚುತ್ತ ಹೋಯಿತು. ನನ್ನನ್ನು ಓರೆಗಣ್ಣಿನಿಂದ ನೋಡುವುದು, ಸುಳ್ಳು ಸುಳ್ಳೇ ನಗುವುದು, ಅಶ್ಲೀಲ ಮಾತುಗಳನ್ನಾಡುವುದು ಆರಂಭವಾಯಿತು. ಒಂದು ದಿನ ಮಧ್ಯಾಹ್ನ ನಾನು ಮಲಗಿಕೊಂಡಿದ್ದಾಗ ಬಂದವನು ನೇರವಾಗಿ ನನ್ನ ಕೋಣೆಗೇ ಬಂದು ಪಿಸಿಪಿಸಿ ನಗುತ್ತ ಬಾಗಿಲು ಹಾಕತೊಡಗಿದಾಗ ಮಂಚದಿಂದೆದ್ದು ಅವನ ಕೆನ್ನೆಗೊಂದೇಟು ಬಿಟ್ಟು ಹೊರಕ್ಕೆ ತಳ್ಳಿದೆ. ಅಂದಿನಿಂದ ಅವನ ಪೀಡೆ ತಪ್ಪಿತು. ಆತ ಮತ್ತೆ ನಮ್ಮ ಮನೆಯಲ್ಲಿ ಕಾಲಿಡಲಿಲ್ಲ. ಒಂದೆರಡು ತಿಂಗಳು ಕಳೆದ ಬಳಿಕ ಆತ ಅನುಭವ ಮಂಟಪದ ಕಾರ್ಯದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟು ಯಾವ ಊರಿಗೋ ಹೊರಟುಹೋದನೆಂದು ತಿಳಿಯಿತು. ನಾನು ನಕ್ಕು ಸುಮ್ಮನಾದೆ.

[೩]

ಅವನಿಗಿಂತ ಮೊದಲು ಅವನಂಥವನೇ ಒಬ್ಬ ನನ್ನನ್ನೊಮ್ಮೆ ಹೀಗೆಯೆ ಪೀಡಿಸಿದ್ದ. ನಮ್ಮ ಅಂಗಡಿಯಲ್ಲಿ ಲೆಕ್ಕ ಬರೆಯುತ್ತಿದ್ದ ಕಾರಕೂನ ಆತ. ನನ್ನ ಮದುವೆಯಾದುದಕ್ಕೆ ಏಳೆಂಟು ವರ್ಷವಾಗಿತ್ತು, ಅಷ್ಟೆ. ಆಗ ನಾನಿನ್ನೂ ಹೊಸ ಹರಯದ ತರುಣಿ. ಮುಟ್ಟಿದರೆ ಬಾಡುವಂಥ ಸೌಂದರ್ಯವಿತ್ತು. ಆ ಕಾರಕೂನನೂ ಇನ್ನೂ ಯುವಕ. ಇಪ್ಪತ್ತೈದು ವರ್ಷ ವಯಸ್ಸಿನವನಿರ ಬಹುದಷ್ಟೆ. ಎರಡು ವರ್ಷಗಳ ಹಿಂದೆಯೆ ಮದುವೆಯೂ ಆಗಿದ್ದಿತಂತೆ. ಹೆಂಡತಿ ಯಿನ್ನೂ ಚಿಕ್ಕವಳಾದುದರಿಂದ ತವರಿನಲ್ಲೇ ಇದ್ದಳಂತೆ.

ಆತ ನಮ್ಮಲ್ಲಿ ಕೆಲಸಕ್ಕೆ ಸೇರಿ ಆರೇಳು ತಿಂಗಳುಗಳು ಕಳೆದಿದ್ದುವು. ಅಷ್ಟರಲ್ಲಿ ಆತ ನಮ್ಮವರ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡಿರಬೇಕು. ಅಂಗಡಿಯ ಬೀಗದ ಕೈಗಾಗಿ ದಿನವೂ ಎರಡು ಹೊತ್ತೂ ಮನೆಗೆ ಬರುತ್ತಿದ್ದ. ಹಬ್ಬ ಹುಣ್ಣಿಮೆಗಳಲ್ಲಿ ನಮ್ಮಲ್ಲೇ ಊಟ ಮಾಡುತ್ತಿದ್ದ. ಒಂದೊಂದು ದಿನ ನಮ್ಮ ಮನೆಯಲ್ಲೇ ಮಲಗಿಕೊಳ್ಳುತ್ತಿದ್ದುದೂ ಇತ್ತು. ನಮ್ಮವರು ನನಗಿಂತಲೂ ಬಹಳ ಹಿರಿಯರು ವಯಸ್ಸಿನಲ್ಲಿ. ತರುಣಿಯಾದ ನನಗೆ ತಕ್ಕ ಜತೆಯಾಗಿರಲಿಲ್ಲ. ಆ ಧೂರ್ತ ಅದನ್ನೆಲ್ಲ ಕಂಡುಕೊಂಡು ನನ್ನ ಕಡೆಗೆ ಕಟಾಕ್ಷ ಎಸೆಯತೊಡಗಿದ.

ಏನಾದರೊಂದು ನೆವ ಮಾಡಿ ನನ್ನ ಕೈ ಮೈ ಮುಟ್ಟಲು ಬರುತ್ತಿದ್ದ. ಅಂಗಡಿಯ ಕಾರಕೂನನಾದುದರಿಂದ ನಮ್ಮವರು ಅವನಿಗೆ ಮನೆಯಲ್ಲೂ ಸ್ವಾತಂತ್ರ್ಯ ಕೊಟ್ಟಿದ್ದರು. ಅವನ ಬಗ್ಗೆ ಒಮ್ಮೆಯೂ ಸಂಶಯ ಬಂದಿರಲಿಕ್ಕಿಲ್ಲ ಅವರಿಗೆ. ಪಾಪ. ಸಂಶಯಪಟ್ಟುಕೊಳ್ಳುವಂಥ ಸ್ವಭಾವವೂ ಅವರದಲ್ಲ. ಅವರ ಚಿತ್ತವೆಲ್ಲ ಅಂಗಡಿಯ ವ್ಯಾಪಾರದಲ್ಲಿ; ಅದಿಲ್ಲದಾಗ ಲಿಂಗಪೂಜೆಯಲ್ಲಿ. ಯಾವಾಗಲೂ ಬಸವಾ ಬಸವಾ ಎಂಬ ಜಪ. ದೇವರ ಧ್ಯಾನ. ಇಂಥಲ್ಲಿ ತೀರ ಸುಲಭವಾಗಿ ಕಾರ್ಯ ಸಾಧಿಸಬಹುದೆಂದು ಆ ಕಾರಕೂನ ಭಾವಿಸಿದ್ದ ನೇನೊ. ಅವನ ಮುಖ ಕಂಡರೆ ನನಗೆ ಹೇಸಿಕೆಯೆನ್ನಿಸುತ್ತಿತ್ತು. ಎಲೆಯಡಕೆ ತಂಬಾಕು ತಿನ್ನುವ ಚಟ ವಿಪರೀತ ಅವನಿಗೆ. ಅವನು ಮಾತಾಡಲು ಬಾಯಿ ತೆರೆದಾಗಲೆಲ್ಲ ಉಗುಳು ಸಿಡಿಯುತ್ತಿತ್ತು. ಆತ ಅಂಥ ದೃಢಕಾಯನೂ ಆಗಿರಲಿಲ್ಲ. ಅಶಕ್ತ ಪ್ರಕೃತಿ, ಕಳಾಹೀನ ಮುಖ, ತೇಜೋಹೀನ ಕಣ್ಣು. ಮೈ ಬಣ್ಣವೂ ಕಪ್ಪೇ. ಇಂಥವನ ಬಗ್ಗೆ ನನ್ನಂಥವಳಿಗೆ ಮೆಚ್ಚಿಗೆಯಾದರೂ ಹೇಗೆ ಬರಬೇಕು? ಅವನ ಮಂಗಚೇಷ್ಟೆ ಮಿತಿಮೀರುತ್ತ ಬಂದಾಗ ಒಂದು ದಿನ ಕಣ್ಣು ಕೆರಳಿಸಿ ಗದರಿಸಿದೆ. ಅಂದಿನಿಂದ ಆತ ತಣ್ಣಗಾದ. ಆಮೇಲೆ ಆತ ನನ್ನನ್ನು ಕಣ್ಣೆತ್ತಿ ನೋಡಲೂ ಭಯಪಡತೊಡಗಿದ. ಕೆಲ ದಿನಗಳಲ್ಲಿ ಅವನೂ ಅಂಗಡಿಯನ್ನು ಬಿಟ್ಟು ಹೊರಟುಹೋದ.

[೪]

ನಮ್ಮ ಪಕ್ಕದ ಮನೆಯಲ್ಲಿ ಬಾಡಿಗೆಗಿದ್ದ ಆ ಮದರಾಸೀ ಅಯ್ಯರೂ ಕೆಲದಿನ ನನ್ನ ಮೇಲೆ ಕಣ್ಣಿಟ್ಟುಕೊಂಡಿದ್ದ. ಸರಕಾರೀ ಕಚೇರಿಯೊಂದರಲ್ಲಿ ಗುಮಾಸ್ತೆಯಾಗಿದ್ದನಂತೆ ಆತ. ಹೆಂಡತಿ ಹೆರಿಗೆಗಾಗಿ ಊರಿಗೆ ಹೋಗಿದ್ದಾಗ ಆತನ ಉಪಟಳಕ್ಕಾರಂಭವಾಗಿತ್ತು. ಮಧ್ಯಾಹ್ನದ ವೇಳೆ ನಮ್ಮವರು ಅಂಗಡಿಯಲ್ಲಿದ್ದಾಗ ಸೈಕಲ್ ಹಾಕಿಕೊಂಡು ಆಫೀಸಿನಿಂದ ಬರುತ್ತಿದ್ದ. "ಸ್ವಲ್ಪ ನೀರು ಕೊಡುತ್ತೀರಾ ಅಮ್ಮಾ?" ಎಂದು ಕೇಳುತ್ತಿದ್ದ. ಕುಡಿಯಲು ನೀರು ಕೇಳಿದವರಿಗೆ ಇಲ್ಲವೆಂದು ಹೇಳಲಾಗುತ್ತದೆಯೆ? ತಂದು ಕೊಡುತ್ತಿದ್ದೆ. ನೀರು ಕುಡಿದು "ಥ್ಯಾಂಕ್ಸ್ ಥ್ಯಾಂಕ್ಸ್" ಎಂದು ಇಂಗ್ಲಿಷಿನಲ್ಲಿ ಪುಟುಪುಟಿಸಿ ಕಚಕ್ ಪಿಚಕ್ ಎಂದು ನಗುತ್ತ–"ಏನು ಬ್ಯೂಟಿಫುಲ್ ಇದಿರಿ ಅಮ್ಮಾ ನೀವು" ಎಂದು ಹೇಳುತ್ತಿದ್ದ. ಅವನದೂ ಕಪ್ಪು ಬಣ್ಣವೆ. ವಿಚಿತ್ರ ರೂಪು, ವಿಚಿತ್ರ

ಮಾತು, ವಿಚಿತ್ರ ನಡಿಗೆ, ವಿಚಿತ್ರ ನಗೆ. ತಿರಸ್ಕಾರದಿಂದ ನಾನೂ ನಗುತ್ತಿದ್ದೆ. ಅದನ್ನಾತ ಅಪಾರ್ಥ ಮಾಡಿಕೊಳ್ಳುತ್ತಿದ್ದನೇನೊ.

ಎದುರು ಮನೆಯ ಮಂಗಲಾದೇವಿ ತಕ್ಕಮಟ್ಟಿಗೆ ಇಂಗ್ಲೀಷು ಕಲಿತಾಕೆ. "ಬ್ಯೂಟಿಫುಲ್ ಎಂದರೇನರ್ಥ?" ಎಂದು ಒಂದು ದಿನ ಅವರನ್ನು ಕೇಳಿದೆ. ಅವರು ಹೇಳಿದುದನ್ನು ಕೇಳಿದಾಗ ಆಶ್ಚರ್ಯವೇನೂ ಆಗಲಿಲ್ಲ. ಆ ಅಯ್ಯರನ ದುಷ್ಟ ವಾಸನೆಯನ್ನು ನಾನೆಂದೋ ಕಂಡುಹಿಡಿದೆ.

ನಮ್ಮವರಿಗೆ ಅಧ್ಯಾತ್ಮದಲ್ಲಿ ಅಭಿರುಚಿ ಇರುವುದನ್ನು ಆತ ಹೇಗೋ ಪತ್ತೆ ಮಾಡಿ ತನಗೂ ಅದರಲ್ಲಿ ಆಸಕ್ತಿಯಿರುವ ಹಾಗೆ ನಟಿಸುತ್ತ ನೆಮ್ಮಗೆ ನಮ್ಮವರ ದೋಸ್ತಿ ಬೆಳೆಸಿದ. "ನಿಮ್ಮ ಬಸವಣ್ಣ ಅಂದರೆ ನನಗೂ ಬಲು ಭಕ್ತಿ. ಅವರ ವಚನಗಳು ಕೆಲವು ಇಂಗ್ಲೀಷಿನಲ್ಲಿ ಬಂದಿದ್ದು ನಾನೂ ಓದಿದ್ದೇನೆ. ಅವುಗಳನ್ನು ತಮಿಳಿನಲ್ಲಿ ಭಾಷಾಂತರಿಸುವ ಮನಸ್ಸಿದೆ." ಎಂದು ಬುರುಡೆ ಹೊಡೆದು ಅವರನ್ನು ಗೆದ್ದುಕೊಂಡ. ಬೆಳಗ್ಗೆ ಸಾಯಂಕಾಲ ಎರಡು ಹೊತ್ತೂ ಆತ ನಮ್ಮ ಮನೆಗೆ ಬರಹೋಗುವುದು ಆರಂಭವಾಯಿತು. ತಮಿಳುನಾಡಿನ ದೇವರು ದಿಂಡರು, ಸಾಧು ಸಂತರ ಕತೆಗಳನ್ನಾತ ಹೇಳುತ್ತ ಬಂದ. ನಮ್ಮವರಿಗೆ ಅವನ ಬಗ್ಗೆ ಹುಚ್ಚೇ ಹಿಡಿದಂತಾಯಿತು. ಅವನನ್ನು ಊಟಕ್ಕೂ ಕರೆಯತೊಡಗಿದರು. ನನ್ನೊಡನೆಯೂ ಆತ ಸಲುಗೆಯಿಂದ ಸಂಭಾಷಿಸಲು ಯತ್ನಿಸತೊಡಗಿದ. ನಾನು ಮಾತ್ರ ಅವನ ಅಂತರಂಗವನ್ನರಿತು ಅವನಿಂದ ದೂರದಲ್ಲೇ ಇದ್ದೆ.

ಒಂದು ರಾತ್ರಿ ಹತ್ತು ಗಂಟೆಯಾಗುತ್ತ ಬಂದರೂ ಅವರಿಬ್ಬರೂ ಚರ್ಚಿಸುತ್ತ ಕುಳಿತಿದ್ದರು. ಮಲಗುವ ಕೋಣೆಯಲ್ಲಿ ಮಂಚದ ಮೇಲೊರಗಿದ್ದ ನನಗೆ ಅವರ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದುವು.

"ಶಿವನು ಎಲ್ಲರಲ್ಲೂ ಇದ್ದಾನೆ. ನನ್ನಲ್ಲಿರುವವನೂ ಶಿವನೇ, ನಿಮ್ಮಲ್ಲಿರುವವನೂ ಶಿವನೇ. ಆತ್ಮವೊಂದೇ. ದೇಹಗಳು ಮಾತ್ರ ಬೇರೆ ಬೇರೆ ಅಲ್ಲವೇ ಸೆಟ್ಟರೆ?"

"ಹೌದು. ಹೌದು. ಸರಿಯಾಗಿ ಹೇಳಿದಿರಿ."

"ನನ್ನಲ್ಲಿರುವ ಈ ಆತ್ಮ ಗಂಡೋ ಹೆಣ್ಣೋ?" ಎಂದು ಪ್ರಶ್ನಿಸಿದ ಅಯ್ಯರು.

"ಆತ್ಮಕ್ಕೆ ಗಂಡು ಹೆಣ್ಣೆಂಬ ಭೇದವೆಲ್ಲಿಯದು? ಅದು ಪರಮಾತ್ಮನ ಅಂಶ."

" ಎಲ್ಲವೂ ಪರಮಾತ್ಮನ ಅಂಶ. ನಮ್ಮೆಲ್ಲರಲ್ಲೂ ಇರುವವನು ಒಬ್ಬನೇ ಜೀವಾತ್ಮ. ಹೀಗಿರುವಾಗ ಈ ದೇಹ ನನ್ನದು, ಈ ದೇಹ ನಿಮ್ಮದು ಎಂಬ ಭೇದಭಾವಕ್ಕೇನೆನ್ನುವಿರಿ ?"

" ಅದೇ ಮಾಯೆ. ಅದರಿಂದ ಬಿಡುಗಡೆ ಹೊಂದುವುದೇ ಮುಕ್ತಿ. ದೇಹ ಭಾವದಿಂದ ಪಾರಾಗಿ ದೇವ ಭಾವವನ್ನು ಬೆಳಸಿಕೊಂಡಾಗ ಅದು ಸಾಧಿಸುತ್ತದೆ."

ಒಂದೆರಡು ನಿಮಿಷ ಸುಮ್ಮನಿದ್ದು ಅಯ್ಯರು ಹೇಳಿದ:

" ನಾನೊಂದು ಮಾತು ಕೇಳುತ್ತೇನೆ ಸೆಟ್ಟರೆ–ದಯವಿಟ್ಟು ಕೋಪ ಮಾಡಿಕೊಳ್ಳಬಾರದು."

" ಬಸವಾ....ಬಸವಾ....ಕೋಪವೇಕೆ ಸ್ವಾಮಿ ? ನಾನೆಂದೂ ಯಾರ ಮೇಲೂ ಕೋಪಿಸಿಕೊಳ್ಳುವವನಲ್ಲ. ಕೋಪವನ್ನೇ ಜಯಿಸದಿದ್ದರೆ ನಾವು ಈ ಮಹಾಮಹಿಮೆಯನ್ನು ಜಯಿಸುವುದು ಹೇಗೆ ಸಾಧ್ಯ ? ಏನೂ ಸಂಕೋಚ ಬೇಡಿ, ಕೇಳಿ."

ಅಯ್ಯರು ತಡೆತಡೆಯುತ್ತ ನುಡಿದ: " ದೇಹದ ಮೇಲಿನ ಮಮತೆಯನ್ನು ತ್ಯಜಿಸುವುದೇ ಮುಕ್ತಿಯ ಮೊದಲ ಮೆಟ್ಟಲು ತಾನೆ? ನನ್ನಲ್ಲಿರುವುದೂ ಶಿವನ ಅಂಶ, ನಿಮ್ಮಲ್ಲಿರುವುದೂ ಶಿವನ ಅಂಶ. ನಿಮ್ಮ ಪತ್ನಿಯಲ್ಲಿರುವುದೂ ಶಿವನ ಅಂಶ. ಅಂದಮೇಲೆ ಮೂವರೂ ಒಂದೇ ಎಂದಂತಾಯಿತು. ಅವಳು ನಿಮ್ಮ ಹೆಂಡತಿ, ನಿಮ್ಮೊಡನೆ ಮಾತ್ರ ಅವಳು ಸಂಸಾರ ಮಾಡಬೇಕು ಎಂಬುದು ಅವಿವೇಕದ ಮಾತಲ್ಲವೆ?"

ನಮ್ಮವರು ಶಾಂತವಾಗಿಯೆ ಉತ್ತರವಿತ್ತರು.

" ನೀವು ಹೇಳುವುದು ಬರಾಬರಿ. ಇದೂ ಒಂದು ಮಾಯೆಯಾಟ. ಈ ದೇಹವಿರುವ ತನಕ ನನ್ನ ಹೆಂಡತಿಯಾಗಿರುವ ಆಕೆ, ಇದು ಮಣ್ಣಿನಲ್ಲಿ ಬಿದ್ದ ಬಳಿಕ ಅವರ ಹೆಂಡತಿಯೂ ಆಗಿರುತ್ತಾಳೆಯೆ ? ಇಂದು ನಾನು ಅವಳ ಮೇಲೆ ನನ್ನ ಒಡೆತನ ಸ್ಥಾಪಿಸಿದರೆ ನಾನು ಹೆಣವಾದ ಮೇಲೆ ನನ್ನೊಂದಿಗೆ ಆವಳನ್ನೂ ಗೋರಿಗೆ ಕರೆದುಕೊಂಡು ಹೋಗಬೇಕಾಗುವುದು. ಅದೆಲ್ಲಾದರೂ ಸಾಧ್ಯವೇ? ಇದೆಲ್ಲ ಪ್ರಪಂಚದ ಹುಚ್ಚು. ಗಂಡ ಹೆಂಡತಿ ಅಣ್ಣ ತಮ್ಮ ಅಕ್ಕ ತಂಗಿ ಅಂತ ಏನೇನೋ ಭೇದ ಕಲ್ಪಿಸಿಕೊಂಡಿದ್ದಾರೆ. ಈ ಭೇದಭಾವ ಶಿವನದಲ್ಲ, ನಮ್ಮದೇ."

" ಸರಿಯೆ. ಅಂದಬಳಿಕ ನಿಮ್ಮ ಹೆಂಡತಿ ಎಂಬ ಭೇದ ಇಲ್ಲವೇ ಇಲ್ಲವಷ್ಟೆ ?"

"ಬಸವಾ.... ಬಸವಾ...." ಎಂದು ನುಡಿದು ನಮ್ಮವರು ಮೌನ ತಳೆದರು.

ನಾನು ಕೋಪದಿಂದ ಕುದಿಯುತ್ತ ಮಂಚವಿಳಿದು ಹೊರಗಡೆ ಬಂದು "ನಾಲಗೆಯನ್ನು ಇಷ್ಟು ಸಡಿಲು ಬಿಡುತ್ತೀಯಾ ಚಾಂಡಾಲಾ, ನಡೆಯಾಚೆ. ಇನ್ನೊಮ್ಮೆ ಕಾಲು ಹಾಕಬೇಡ ನಮ್ಮ ಮನೆಯಲ್ಲಿ!" ಎಂದು ಆರ್ಭಟಿಸಿದೆ. 'ಹಚೀ' ಎನ್ನಿಸಿಕೊಂಡ ನಾಯಿಯಂತೆ ಆತ ಮುಖ ಕೆಳಕ್ಕೆ ಹಾಕಿಕೊಂಡು ಹೊರಟುಹೋದ. ನಮ್ಮವರು "ಬಸವಾ, ಬಸವಾ," ಎನ್ನುತ್ತ ಕುಳಿತು ಬಿಟ್ಟರು.

ಅಂದಿನಿಂದ ನನ್ನ ಕಡೆ ಹೊರಳಿನೋಡಲಿಲ್ಲ ಅಯ್ಯರು. ಬೇರೊಂದು ಓಣಿಯಲ್ಲಿ ಮನೆ ಹಿಡಿದು ಹೊರಟುಹೋದ.

[೫]

ಆ ಗುರುಶಾಂತಪ್ಪ ಮಾತ್ರ ನನ್ನ ಮೇಲಿನ ಮೋಹವನ್ನು ಇಷ್ಟು ಬೇಗ ತ್ಯಜಿಸಲಿಲ್ಲ. ಮೂರು ನಾಲ್ಕು ವರ್ಷಗಳವರೆಗೂ ಅವರು ನನಗಾಗಿ ಪ್ರಯತ್ನಿಸುತ್ತಲೇ ಇದ್ದರು.

ಅವರು ಊರಲ್ಲಿ ದೊಡ್ಡ ಮನುಷ್ಯರೆಂದು ಹೆಸರಾದವರು. ದೊಡ್ಡ ಜಮೀನುದಾರರು. ಸ್ಕೂಲ್‌ಬೋರ್ಡಿನ ಚೇರ್ಮನ್. ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರು. ಊರಿನ ಜನವೆಲ್ಲ ಅವರೆಂದರೆ ಭಯಪಡುತ್ತಿತ್ತು. ಅವರ ಭೀಮಕಾಯ, ಗಡಸುಧ್ವನಿ, ಜರತಾರಿ ರುಮಾಲು, ಅವರ ಆಳುಕಾಳುಗಳು, ಅವರ ಬಂದೂಕು, ಅವರ ಪಿಸ್ತೂಲು....ಎದುರು ವಾದಿಸಿದ ಆಳುಮಗನೊಬ್ಬನನ್ನು ಅವರು ಬಡಿಗೆಯಿಂದ ಬಡಿದು ಕೊಂಡ ಸಂಗತಿ – ಆ ಪ್ರಸಂಗದಿಂದ ಹೇಗೋ ಉಳಿದುಕೊಂಡಿದ್ದರು – ಊರಲ್ಲಿ ಯಾರಿಗೂ ಅವರ ವಿರುದ್ಧ ಧ್ವನಿಯೆತ್ತುವ ಎದೆಯಿರಲಿಲ್ಲ.

ಜಾತ್ರೆಯೊಂದರ ಕಾಲಕ್ಕೆ ನನ್ನ ಮೇಲೆ ಅವರ ಕಣ್ಣು ಬಿತ್ತು. ಅಂದಿನಿಂದ ನನ್ನನ್ನು ವಶಪಡಿಸಿಕೊಳ್ಳಲು ಬಗೆಬಗೆಯಾಗಿ ಪ್ರಯತ್ನಿಸಿದ್ದರು. ನನಗೋಸ್ಕರವಾಗಿಯೆ ನಮ್ಮವರ ಸ್ನೇಹ ಬೆಳಸಿಕೊಂಡರು. ಅಧ್ಯಾತ್ಮ, ಅಲ್ಲಮಪ್ರಭು, ಬಸವಣ್ಣ, ಲಿಂಗಪೂಜೆ ಮೊದಲಾದುವುಗಳಲ್ಲಿ ಅವರಿಗೆ

ಕೊಂಚವೂ ಆಸಕ್ತಿಯಿರಲಿಲ್ಲವಾದರೂ ನನಗಾಗಿ ನಮ್ಮ ಮನೆಗೆ ಬಂದು ತಾಸು ಗಟ್ಟಲೆ ಕುಳಿತು ನಮ್ಮವರ ಮಾತು ಕೇಳುವ ಬೇಸರದ ಕೆಲಸ ಮಾಡಿದರು.

"ಏನು, ಅಕ್ಕನವರು ಈ ಚರ್ಚೆಯಲ್ಲಿ ಭಾಗ ವಹಿಸುವುದೇ ಇಲ್ಲವಲ್ಲಾ?" ಎಂದು ಅವರೊಮ್ಮೆ ಕೇಳಿದಾಗ ನಮ್ಮವರು – "ಅವಳಿಗೆ ಬಿಡುವೇ ಇರುವುದಿಲ್ಲ. ಮನೆಗೆಲಸ ವಿಪರೀತ," ಎಂದು ಹೇಳಿದ್ದರು. "ಅಡಿಗೆಯಾದ ಬಳಿಕ ಏನು ಕೆಲಸವಿರುತ್ತದೆ? ಅವರೂ ಬಂದು ಮಾತುಕತೆಯಲ್ಲಿ ಭಾಗವಹಿಸಿದರೆ ಚೆಂದ," ಎಂದಿದ್ದರು ಗುರುಶಾಂತಪ್ಪ. ನಮ್ಮವರೇನೋ ನನ್ನನ್ನು ಕರೆದಿದ್ದರು: ನಾನು ಮಾತ್ರ ಹೋಗಿರಲಿಲ್ಲ.

ಒಂದು ಸಾಯಂಕಾಲ ನಮ್ಮವರಿಲ್ಲದಾಗ ಬಂದು ನನಗೊಂದು ಪ್ರಣಯ ಪತ್ರ ಕೊಟ್ಟು ಹೋಗಿದ್ದರು ಗುರುಶಾಂತಪ್ಪ. ಅದನ್ನೋದಿದಾಗ ನನಗೆ ಕೋಪವೂ ಬಂದಿತ್ತು, ನಗೆಯೂ ಬಂದಿತ್ತು. ಆ ಪತ್ರವನ್ನು ಪತಿಗೆ ತೋರಿಸಲೇ – ಎಂದುಕೊಂಡಿದ್ದೆ. ಆದರೆ ಅವರೊಂದು ಸಾಧುಪ್ರಾಣಿ. ಆಕಳಿನಂಥ ಸ್ವಭಾವ. ಅವರಿಗೆ ಪತ್ರವನ್ನು ತೋರಿಸುವುದರಿಂದ ಏನೂ ಪ್ರಯೋಜನವಾಗುವಂತಿರಲಿಲ್ಲ. ಸರಿ. ಅದನ್ನು ಹರಿದು ಒಲೆಗೆ ಬಿಸುಟು ಸುಮ್ಮನಿದ್ದುಬಿಟ್ಟೆ.

ನಾನೇನೋ ಸುಮ್ಮನಾದರೂ ಗುರುಶಾಂತಪ್ಪ ಮಾತ್ರ ಅಲ್ಲಿಗೇ ಸುಮ್ಮನಾಗಲಿಲ್ಲ. ಪೇಟೆಯಲ್ಲಿ ಸಾಮಾನು ಕೊಳ್ಳಲು ನಾನು ಹೋಗಿದ್ದಾಗ ಹಾದಿಯಲ್ಲಿ ಅಕಸ್ಮಾತ್ತಾಗಿ ಎದುರಾದರೆ ಮೆಲ್ಲಗೆ ಹುಬ್ಬು ಏರಿಸಿ ಮುಗುಳ್ನಗುತ್ತಿದ್ದರು. ನಮ್ಮವರ ಬಲವಂತಕ್ಕೊಳಗಾಗಿ ನಾನು ಅಕ್ಕನ ಬಳಗವನ್ನು ಸ್ಥಾಪಿಸಿದ ಬಳಿಕ ನಮ್ಮ ಸಭೆಗಳಿಗೆ ಬಂದು ನಾನು ಮಾತನಾಡುವುದನ್ನು ಆಸಕ್ತಿಯಿಂದ ಕೇಳುತ್ತ ಕೂಡ್ರುತ್ತಿದ್ದರು.

ನಮ್ಮ ಬಳಗದ ಕಾರ್ಯದರ್ಶಿನಿ ಶಿವಲಿಂಗವ್ವನ ಜತೆಗೆ ನಾನೊಮ್ಮೆ ಒಂದು ಸಿನಿಮಾ ನೋಡಲು ಹೋಗಿದ್ದೆ. ಆ ಸುದ್ದಿ ಗುರುಶಾಂತಪ್ಪನವರಿಗೆ ಹೇಗೆ ಗೊತ್ತಾಗಿದ್ದಿತೊ ಏನೊ, ಒಡನೆಯೆ ಥಿಯೇಟರಿಗೆ ಧಾವಿಸಿ ಬಂದು ಕತ್ತಲಲ್ಲಿ ಯಾರಿಗೂ ಗೊತ್ತಾಗದಂತೆ ನನ್ನ ಕುರ್ಚಿಯ ಪಕ್ಕದ ಕುರ್ಚಿಯಲ್ಲೇ ಕುಳಿತುಬಿಟ್ಟಿದ್ದರು. ಯಾರಾದರೂ ನೋಡಿದರೇನು ಗತಿ ಎಂದು ನನ್ನ ಎದೆ ನಡುಗತೊಡಗಿತ್ತು. ಅವರು ಪಿಸುದನಿಯಲ್ಲಿ ಮಾತಗಾರಂಭಿಸಿದ್ದರು.

"ಸಿನಿಮಾ ಬಹಳ ನೋಡುತ್ತೀರಾ ಅಕ್ಕನವರೇ?"

ನನಗೆ ಮನಸ್ಸಿನಲ್ಲೇ ನಗು. ನನ್ನನ್ನಾತ ಸಂಬೋಧಿಸುವುದು 'ಅಕ್ಕನವರೇ' ಎಂದು: ಒಳಗೆ ಮಾತ್ರ ಪ್ರಣಯಭಾವ!

ಉತ್ತರವೀಯದೆ ನಾನು ಮೌನವಾಗಿದ್ದೆ. ಅವರು ಮೌನ ತಳೆದಿರಲಿಲ್ಲ. ಮತ್ತೆ ಕೇಳಿದ್ದರು:

"ಸೆಟ್ಟರೇಕೆ ಬರಲಿಲ್ಲ?"

"ಹೀಗೆಲ್ಲಾ ಯಾರೂ ಇಲ್ಲದಾಗ ಬಂದು ಅಧಿಕಪ್ರಸಂಗ ಮಾಡಬಾರದು. ಹೊರಟುಹೋಗಿರಿ," ಎಂದು ನಾನು ಗದ್ದರಿಸಿದ್ದೆ. ಬೇರೆ ಯಾರಾದರೂ ಆಗಿದ್ದಲ್ಲಿ ಇನ್ನೊಂದು ಮಾತಾಡದೆ ತೆಪ್ಪಗೆ ಹೊರಟುಹೋಗಬಹುದಾಗಿತ್ತು. ಆದರೆ ಗುರುಶಾಂತಪ್ಪ ಹೋದಾರೇ!

"ಅಕ್ಕನ ಬಳಗದ ಅಧ್ಯಕ್ಷರಾಗಿದ್ದೀರಿ. ಸ್ತ್ರೀಸ್ವಾತಂತ್ರ್ಯ, ಸ್ತ್ರೀಸುಧಾರಣೆಯ ಮಾತು ಆಡುತ್ತೀರಿ. ನಿಮ್ಮಂಥವರೂ ಹೀಗೆ ಹಳೆಯ ಕಾಲದವರಂತೆ ಆಚರಿಸಬೇಕೇ?" ಎನ್ನುತ್ತಾ ಅವರು ನನ್ನತ್ತ ಸರಿಯತೊಡಗಿದ್ದರು.

ಇನ್ನು ಅವರು ನನ್ನ ಭುಜದ ಮೇಲೆ ಕೈ ಹಾಕುವರೆಂಬುದು ಗೊತ್ತಾಗುತ್ತಲೂ ಅವರ ಕೆನ್ನೆಗೊಂದು ಏಟು ಬಿಟ್ಟಿದ್ದೆ. ಆ ಸಪ್ಪುಳವನ್ನು ಕೇಳಿ ಥಿಯೇಟರಿನಲ್ಲಿದ್ದ ಜನರೆಲ್ಲ 'ಏನು, ಏನು" ಎಂದು ಹಿಂತಿರುಗಿ ನೋಡುತ್ತಿದ್ದಾಗಲೆ ಗುರುಶಾಂತಪ್ಪ ಸದ್ದಿಲ್ಲದೆ ಜಾರಿಕೊಂಡಿದ್ದರು.

ನಾನವರನ್ನು ಈ ಬಗೆಯಾಗಿ ಫಜೀತಿ ಮಾಡಿದ್ದರೂ ಅವರ ಮೋಹ ಕಡಮೆಯಾಗಿರಲಿಲ್ಲ. ಡಾಕ್ಟರ್ ಸಿಂಗಾರಮ್ಮನ ಮೂಲಕ ಹೇಳಿಕಳಿಸಿದ್ದರು. ಆಕೆ ಕ್ರೈಸ್ತರವಳು. ನಮ್ಮೂರಿನಲ್ಲೆಲ್ಲ ಅವಳೊಬ್ಬಳೇ ಲೇಡೀ ಡಾಕ್ಟರು. ನಲವತ್ತು ವರ್ಷ ವಯಸ್ಸಾಗಿದ್ದರೂ ಇನ್ನೂ ಮದುವೆಯಾಗಿರಲಿಲ್ಲ. ಮದುವೆ ಮಾಡಿಕೊಳ್ಳುವ ಮನಸ್ಸೂ ಅವಳಿಗಿರಲಿಲ್ಲ. "ಮದುವೆಯಾಗಲೇಬೇಕು ಎಂದೇನಿದೆ? ಗಂಡಸರೆಷ್ಟೋ ಜನ ಅವಿವಾಹಿತರಾಗಿಯೇ ಉಳಿಯುವುದಿಲ್ಲವೇ? ಯುರೋಪು ಅಮೇರಿಕಾಗಳಲ್ಲಿ ಎಷ್ಟೋ ಸ್ತ್ರೀಯರು ಅವಿವಾಹಿತರಾಗಿ ಉಳಿದು ಸಮಾಜ ಸೇವೆ ಮಾಡುತ್ತಾರೆ. ಹಾಗೆ ನಮ್ಮ ದೇಶದಲ್ಲೂ ಯಾಕಾಗಬಾರದು? ಮದುವೆಯಾಗಿ ಒಬ್ಬ ಗಂಡಸಿನ ಗುಲಾಮಗಿರಿಯಲ್ಲಿ ಕೊಳೆಯಲು ನನಗಂತೂ ಸ್ವಲ್ಪವೂ ಇಷ್ಟವಿಲ್ಲ," ಎಂದು ಆಗಾಗ ಹೇಳುವಳು ಸಿಂಗಾರಮ್ಮ. ನನಗೆ ಮುಟ್ಟಿನ ತೊಂದರೆಯಾದಾಗಲೆಲ್ಲ ಅವಳ ಹತ್ತಿರ ಔಷಧಿಗಾಗಿ ಹೋಗಬೇಕಾಗುತಿತ್ತು. ನಮ್ಮ ಅಕ್ಕನ ಬಳಗ ಪ್ರಾರಂಭವಾಗುವಾಗ ಅವಳೂ ಬಂದು ಒಂದು ಚಿಕ್ಕ ಉಪನ್ಯಾಸವನ್ನೂ ಕೊಟ್ಟಿದ್ದಳು. ಅಂದಿನಿಂದ ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದಳು. ಈಗಲೂ ಬರುತ್ತಿರುತ್ತಾಳೆ.

ಒಂದು ದಿನ ನಮ್ಮವರು ಊರಲ್ಲಿರಲಿಲ್ಲ; ವ್ಯಾಪಾರದ ನಿಮಿತ್ತವಾಗಿ ಹುಬ್ಬಳ್ಳಿಗೆ ಹೋಗಿದ್ದರು. ಅಂದು ರಾತ್ರಿ ಎಂಟು ಗಂಟೆಯ ವೇಳೆಗೆ ಸಿಂಗಾರಮ್ಮ ಬಂದಿದ್ದಳು. ಮಧ್ಯಾಹ್ನ ಮಾಡಿದ್ದ ಅಡಿಗೆಯಲ್ಲಿ ಇನ್ನೂ ಬಹಳ ಉಳಿದಿದ್ದಿತಾದ್ದರಿಂದ ರಾತ್ರಿ ಅಡಿಗೆ ಮಾಡುವ ಅಗತ್ಯವಿರಲಿಲ್ಲ. ನಾನೊಬ್ಬಳೇ ಕೊಟಡಿಯಲ್ಲಿ ಕುಳಿತು ಕಾದಂಬರಿಯನ್ನೋದುತ್ತಲಿದ್ದೆ.

"ಮಹಾದೇವಿಯಕ್ಕ, ಓ ಮಹಾದೇವಿಯಕ್ಕ!" ಸಿಂಗಾರಮ್ಮ ನನ್ನನ್ನು ಕರೆಯುತ್ತಿದ್ದುದು ಹಾಗೆ.

"ಓ. ಬನ್ನಿ ಬನ್ನಿ, ಸಿಂಗಾರಮ್ಮ."

ಆಕೆ ಬಿಂಕದಿಂದ ಅಡಿಯಿಡುತ್ತ ಕೊಟಡಿಯೊಳಕ್ಕೆ ಬಂದು ಕೈಲಿದ್ದ ಪುಟ್ಟ ಕೊಡೆಯನ್ನು ಮೇಜಿನ ಮೇಲಿರಿಸಿ ಬಲಗಾಲ ಮೇಲೆ ಎಡಗಾಲು ಹಾಕಿ ಒಳ್ಳೆ ಠೀವಿಯಿಂದ ಕುರ್ಚಿಯ ಮೇಲೆ ಕುಳಿತುಕೊಂಡು ನಗುನಗುತ್ತಾ ನನ್ನ ಕಡೆ ನೋಡಿದಳು.

"ಏನು ಓದುತ್ತಿದ್ದೀರಿ ಅಕ್ಕ ?"

"ಕಾದಂಬರಿ."

"ಯಾವುದು ?"

"ಮಾಡಿ ಮಡಿದವರು."

"ಇದೆಂಥ ಹೆಸರು ತಾಯಿೞಾ! ಅದರರ್ಥ ಏನು ?"

"ಕೆಲಸ ಮಾಡಿ ಸತ್ತವರು ಅಂತ."

ಕರವಸ್ತ್ರದಿಂದ ಮುಖಕ್ಕೆ ಗಾಳಿ ಹಾಕಿಕೊಳ್ಳುತ್ತ ಸಿಂಗಾರಮ್ಮ ಕೇಳಿದಳು: "ಸಾವು....ರೋಗ....ನರಳಾಟ....ನನಗಂತೂ ತಲೆ ಕೆಟ್ಟುಹೋಗಿದೆ ನೋಡಿರಿ ಇವುಗಳಿಂದ. ಆಸ್ಪತ್ರೆಯಲ್ಲೂ ಅವುಗಳ ಸಹವಾಸ. ಹೊರಗಡೆಗೂ ಅವುಗಳ ಸಹವಾಸ. ಕತೆ ಕಾದಂಬರಿಗಳಲ್ಲೂ ಅದೇ ಆದರೆ ಇನ್ನು ದೇವರೇ ಗತಿ! ದಿನವಿಡೀ ಆದ ಬೇಸರ ನೀಗಿಸಲು ನೆರವಾಗಬಲ್ಲ ಕತೆ, ಕಾದಂಬರಿ, ಸಿನೀಮಾ, ನಾಟಕ, ನರ್ತನ ಅಂದರೆ ಬಲು ಪ್ರೀತಿ ನನಗೆ. ನಿಮಗೆ?"

"ನಾನೇನು ಹೇಳಲಿ ಡಾಕ್ಟರ್? ನಾನು ನಿಮ್ಮಷ್ಟು ಕಲಿತವಳೂ ಅಲ್ಲ, ನಿಮ್ಮ ಹಾಗೆ ತಲೆ ಕೆಡಿಸುವಂಥ ಕೆಲಸವೂ ನನಗಿರುವುದಿಲ್ಲ. ಬೇಸರವೂ ಆಗುವುದಿಲ್ಲ."

“ಬೇಸರವೇ ಆಗುವುದಿಲ್ಲವೇ? ಆಶ್ಚರ್ಯ....ಆಶ್ಚರ್ಯ....ನಿಮ್ಮ ಸ್ಥಳದಲ್ಲಿ ನಾನಿದ್ದಿದ್ದರೆ ಏನು ಮಾಡುತ್ತಿದ್ದೆ ಗೊತ್ತೇ?”

“ಏನು ಮಾಡುತ್ತಿದ್ದಿರಿ.”

“ಮೇಲಿನ ತೊಲೆಗೆ ಸೀರೆ ಬಿಗಿದು ನೇಣು ಹಾಕಿಕೊಳ್ಳುತ್ತಿದ್ದೆ....”

ಕಾದಂಬರಿಯನ್ನು ಮಂಚದ ಮೇಲೊಗೆದು ನಾನು ಕೊಂಚ ಏರಿಸಿದ ಧ್ವನಿಯಲ್ಲಿಯೇ ನುಡಿದೆ: “ಇದೆಂಥ ಮಾತಾಡುತ್ತೀರಿ ಡಾಕ್ಟರ್? ಇಂಥದೆಲ್ಲಾ ನನಗೆ ಸರಿಬರುವದಿಲ್ಲ ಬಿಡಿರಿ.”

“ಸರಿಬರುವದಿಲ್ಲ? ಏಕೆ?”

ಆ ಪ್ರಶ್ನೆಗೆ ಉತ್ತರವೀಯದೆ ನಾನು ಸುಮ್ಮನಿದ್ದುಬಿಟ್ಟೆ. ಸಿಂಗಾರಮ್ಮನೇ ಹೇಳಿದಳು: “ನನ್ನ ಮಾತಿನಿಂದ ಕೋಪ ಬಂದಿತೇನು ನಿಮಗೆ? ಸತ್ಯವನ್ನೇ ಹೇಳಿದರೆ ಕೇಳುವವರಿಗೆ ಕೋಪ ಬರುವುದು ಸಹಜ.”

“ಅಂಥದೇನು ಸತ್ಯ ಕಂಡಿರಿ.”

“ಎಷ್ಟೋ ದಿನಗಳಿಂದ ನಿಮ್ಮ ಬಾಳುವೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದೇನೆ. ನಿಮ್ಮದೂ ಒಂದು ಬಾಳುವೆಯೇ? ನಿಮ್ಮ ಗಂಡ ನಿಮಗಿಂತ ಇಪ್ಪತ್ತು ವರ್ಷಗಳಿಗೆ ದೊಡ್ಡವರು. ಕುರೂಪಿ, ಅರಸಿಕ, ನಿಶ್ಶಕ್ತ. ಆ ನಿರುಪಯೋಗಿ ಅಧ್ಯಾತ್ಮದ ಹುಚ್ಚು ಬೇರೆ. ನೀವೋ ಸುಂದರಿ, ತರುಣಿ, ರಸಿಕರು. ನಿಮ್ಮಿಬ್ಬರ ಜತೆಯೂ ಒಂದು ಜತೆಯೇ? ಇಂಥ ಗಂಡನಿಂದ ಎಂಥ ಸುಖ ಸಿಕ್ಕೀತು ನಿಮಗೆ? ಮದುವೆಯಾಗುವುದು ಸುಖಕ್ಕಾಗಿ. ಅದೇ ನಿಮಗೆ ಶೂನ್ಯ. ಇದನ್ನೆಲ್ಲ ಸಹಿಸಿಕೊಂಡು ಹಾಗೇ ಕಲ್ಲಿನಂತೆ ದಿನಗಳೆಯುತ್ತಿದ್ದೀರಲ್ಲ?”

ಅವಳು ಹೇಳುವುದೆಲ್ಲ ಸತ್ಯವಾಗಿದ್ದಿತು. ನನಗೆ ಸುಖವಿರಲಿಲ್ಲ, ಸಂತೋಷವಿರಲಿಲ್ಲ, ತೃಪ್ತಿಯಿರಲಿಲ್ಲ, ಸಮಾಧಾನವಿರಲಿಲ್ಲ. ಎಲ್ಲವೂ ನಿಜವೇ ಆಗಿತ್ತು. ಆದರೂ ನನ್ನ ವಿಷಯದಲ್ಲಿ ಅವಳು ಕೈಹಾಕುವುದು ಮಾತ್ರ ನನಗೆ ಸರಿಬರಲಿಲ್ಲ. ಕೊಂಚ ಕಟುವಾಗಿಯೇ ಹೇಳಿದೆ:

“ಅದೆಲ್ಲ ಏನೇ ಇದ್ದರೂ ಆ ಉಸಾಬರಿ ನಿಮಗೇಕೆ?”

“ಒಳ್ಳೆಯ ಮಾತೇ. ಅಂತೆ! ನನಗೇಕಂತೆ! ನಾನೇನು ಅಪರಿಚಿತೆಯೇ ನಿಮಗೆ? ಎಷ್ಟೋ ದಿನಗಳಿಂದ ಸ್ನೇಹಿತೆಯಾಗಿರುವವಳು, ನಿಮ್ಮ ಸುಖವೇ ನನ್ನ ಸುಖ, ನಿಮ್ಮ ದುಃಖವೇ ನನ್ನ ದುಃಖ ಅಂತ ತಿಳಿದಿರುವವಳು. ಏನೋ, ನಿಮ್ಮ ಬಾಳನ್ನು ಕಂಡು ಮನಸ್ಸು ತಳಮಳಗೊಂಡಿತು. ತಡೆಯಲಾಗಲಿಲ್ಲ,

ಆಡಿಬಿಟ್ಟ. ಈಗಲೂ ಹೇಳುತ್ತೇನೆ. ಇಂಥವರನ್ನು ಕಟ್ಟಿಕೊಂಡು ಬಾಳಿಲ್ಲವನ್ನೂ ಹಾಳುಮಾಡಿಕೊಳ್ಳಬೇಡಿ. ಇವರನ್ನು ಪೂರ್ಣವಾಗಿ ಬಿಟ್ಟುಬಿಡಲೇ ಬೇಕೆಂದೇನೂ ಅಲ್ಲ. ಇವರೂ ಇರಲಿ, ಇವರಿಂದ ದೊರೆಯಲಾರದ ಸುಖ ಯಾರಲ್ಲಿ ದೊರೆಯುವುದೋ ಅವರ ಸ್ನೇಹ ಬೆಳಸಿ. ಲೋಕದಲ್ಲಿ ಎಷ್ಟೋ ಜನ ಸ್ತ್ರೀಯರು ಹೀಗೇ ಮಾಡುತ್ತಿರುವಾಗ ನೀವೂ ಯಾಕೆ ಮಾಡಬಾರದು?"

"ಇಶ್ಶಿ," ಎಂದು ನಾನು ಮೂಗು ಮುರಿದೆ.

ಅವಳು ಕುರ್ಚಿಯನ್ನು ಬಿಟ್ಟು ಎದ್ದು ಬಂದು ಸಲುಗೆಯಿಂದ ನನ್ನ ಭುಜದ ಮೇಲೆ ಕೈಹಾಕಿ ಹೇಳಿದಳು:

"ನಿನ್ನನ್ನು ಕಂಡರೆ ನನಗೆ ತುಂಬ ಪ್ರೀತಿ ಮಹಾದೇವೀ. ನಿನ್ನನ್ನು ಕೆಡಿಸಬೇಕೆಂದು ನಾನು ಈ ಮಾತು ಹೇಳುತ್ತಿಲ್ಲ. ನೀನು ಸ್ವಲ್ಪವಾದರೂ ಸುಖ ಪಡೆಯಬೇಕೆಂದೇ ನನ್ನ ಆಸೆ. ಈ ಯೌವನ, ಈ ಸೌಂದರ್ಯ ಇದೆಲ್ಲಾ ಎಷ್ಟು ದಿನದ್ದು ತಂಗೀ? ಇದು ಇರುವುದಾದರೂ ಯಾತಕ್ಕಾಗಿ? ಇರುವವರೆಗೆ ಸುಖ ಪಡೆಯಲಿಕ್ಕಾಗಿಯೆ ತಾನೆ? ಸೆಟ್ಟರಂಥ ಅರಸಿಕರಿಂದ ನಿನ್ನಂಥ ರತಿಗೆ ಏನು ಸುಖ ದೊರೆಯಬೇಕು? ಅಂತೆಯೆ...."

"ನೀವು ಹೇಳುವುದಾದರೂ ಏನು ಡಾಕ್ಟರ್?"

"ನಿನಗೆ ಅನುರೂಪನಾದ ಪುರುಷನೊಬ್ಬನ ದೋಸ್ತಿ ಮಾಡು, ಸುಖವಾಗಿರು ಎಂದೇ ನಾನು ಹೇಳುವುದು," ಎಂದು ನುಡಿದು ಒಂದು ಕ್ಷಣ ಸುಮ್ಮನಿದ್ದು ಸಿಂಗಾರಮ್ಮ ಹೇಳಿದಳು: "ಇವೊತ್ತು ನೀನು ಸ್ವಲ್ಪ ಈ ಕಡೆ ಒಲಿದರೆ ಸಾಕು, ನಿನ್ನ ಪಾದಗಳ ಮೇಲೆ ಹೊರಳಾಡಲು ಸಹ ನೂರಾರು ಜನ ರಸಿಕರು ಕಾದಿದ್ದಾರೆ. ಒಬ್ಬರಂತೂ ನಿನಗಾಗಿ ಹುಚ್ಚನಂತಾಗಿ ಹೋಗಿದ್ದಾರೆ. ದಿನವೂ ನನ್ನಲ್ಲಿಗೆ ಬಂದು ನಿನ್ನ ಹೆಸರಿನ ಜಪ ಮಾಡುತ್ತ ಗೋಳಿಡುತ್ತಿದ್ದಾರೆ. ಅವರನ್ನು ಹೇಗೆ ಸಂತವಿಸುವುದೆಂಬುದೇ ನನಗೆ ತಿಳಿಯದಾಗಿದೆ. ನಿಮ್ಮ ಆ ವಿರಾಗಿಣಿ ಅಕ್ಕಮಹಾದೇವಿಗಾಗಿ ಕೌಶಿಕರಾಜ ಹಲಬುತ್ತಿರಲಿಲ್ಲವೆ, ಹಾಗೆ ನಿನಗಾಗಿ ಹಲಬುತ್ತಿದಾರೆ ಈ ರಾಜ...."

ನಾನು ಹಣೆಗೆ ಕೈಯಿಟ್ಟುಕೊಂಡು ಕುಳಿತಿದ್ದೆ. ಸಿಂಗಾರಮ್ಮ ಮುಂದುವರಿಸಿದಳು:

"ಹಾಗೆಲ್ಲ ಸಾಧಾರಣ ಮನುಷ್ಯರಲ್ಲ ಅವರು. ಭಾರಿ ಶ್ರೀಮಂತರು, ದೊಡ್ಡ ಜಮೀನುದಾರರು, ಸಮಾಜದಲ್ಲೂ ಗಣ್ಯರಾದವರು. ಈ ಊರಲ್ಲೇ

ಎಂಟು ಹತ್ತು ಮನೆಗಳಿವೆ ಅವರವು. ತಿಂಗಳಿಗೆ ಐದುನೂರು ರೂಪಾಯಿ ಬಾಡಿಗೆಯೇ ಬರುತ್ತದೆ. ಒಳ್ಳೆ ರಸಿಕರು. ಪೈಲವಾನರನ್ನು ನಾಚಿಸುವಂಥ ದೇಹ. ಮನಸ್ಸೂ ತುಂಬ ದೊಡ್ಡದು. ನಿನ್ನಂಥ ರೂಪವತಿಯ ಸ್ನೇಹ ಬೆಳಸಲು ಎಲ್ಲಾ ರೀತಿಯಿಂದಲೂ ಯೋಗ್ಯರಾದವರು. ನೀನು ಬಯಸಿದ್ದೆಲ್ಲ ದೊರೆಯುವುದು. ಬಂಗಾರ, ಮುತ್ತು ರತ್ನ...."

"ನನಗೇನು ಕಡಮೆಯಾಗಿದೆಯೆಂದು ಬೇರೆ ಕಡೆ ಆಸೆ ಮಾಡಲಿ ಸಿಂಗಾರಮ್ಮ?"

"ಅಯ್ಯೋ. ನಿನಗೆ ಕಡಮೆಯಾಗಿದೆಯಂಥ ನಾ ಹೇಳಲಿಲ್ಲ. ಗಂಡ ಕೊಟ್ಟದ್ದೂ ಪ್ರಿಯಕರ ಕೊಟ್ಟದ್ದೂ ಒಂದೇಯೇ? ಕದ್ದು ಪ್ರೀತಿಸುವುದರಲ್ಲೂ, ಕದ್ದು ಕಾಣಿಕೆ ಸ್ವೀಕರಿಸುವುದರಲ್ಲೂ ಅದೊಂದು ಮಜಾ ಇರುತ್ತೆ. ಅದಿನ್ನೂ ನಿನಗೆ ತಿಳಿಯದು," ಎಂದು ಹೇಳುತ್ತಾ ಖಹಖಹಾ ಎಂದು ನಗೆ ಎಬ್ಬಿಸಿದಳು ಸಿಂಗಾರಮ್ಮ.

ನಾನು ಅಣಕದ ನಗೆಯೊಂದಿಗೆ–"ನಿಮಗೆ ಗೊತ್ತಿರಬೇಕಲ್ಲ ಆ ಮಜಾ!" ಎಂದು ಕೇಳಿದೆ.

ಆಕೆ ಇನ್ನೂ ಗಟ್ಟಿಯಾಗಿ ನಗುತ್ತ–"ಗೊತ್ತಿಲ್ಲದೇನು? ಚೆನ್ನಾಗಿ ಗೊತ್ತಿದೆ. ಗೊತ್ತಿದೆಯೆಂತಲೇ ನಿನಗೂ ಅದನ್ನು ಸವಿಯಲು ಹೇಳುತ್ತಿರುವುದು. ರಸಿಕತನವನ್ನು ಬಿಟ್ಟರಿನ್ನೇನಿದೆ ಪ್ರಪಂಚದಲ್ಲಿ ಮಹಾದೇವೀ? ಒಂದು ರಾತ್ರಿ ನನ್ನ ಮನೆಗೆ ಬಂದು ನೋಡು. ಜೀವನದ ಮಜಾ ಎಂದರೇನೆಂಬುದು ನಿನಗೆ ಗೊತ್ತಾದೀತು. ಆ ಗೃಹಸ್ಥರಂತೂ ನಿನಗಾಗಿ ಬಾಯಿ ಬಾಯಿ ಬಿಡುತ್ತಿದಾರೆ. ಅವರನ್ನು ಹೆಚ್ಚು ದಿನ ಕೊಸಗಿಸಬಾರದು. ಏನೆನ್ನುತ್ತೀಯ? ಬರುತ್ತೀಯಾ? ಇಂದು ನಿನ್ನ ಯಜಮಾನರೂ ಇಲ್ಲ ಮನೆಯಲ್ಲಿ. ಬೆಳಗಿನ ಜಾವದಲ್ಲಿ ಕರೆತಂದು ಬಿಡುತ್ತೇನೆ."

"ನೀವು ಇಂಥ ಭಂಡ ಮಾತಾಡಬೇಡಿ ಸಿಂಗಾರಮ್ಮ. ನಾನು ಅಂಥವಳಲ್ಲ. ಸುಮ್ಮನೆ ಹೊರಟುಹೋಗಿರಿ."

ಸಿಂಗಾರಮ್ಮ ಕೊಂಚವೂ ಮುನಿದುಕೊಳ್ಳದೆ ನಗುನಗುತ್ತಲೇ ಹೊರಟು ಹೋದಳು. "ಇವೊತ್ತು ನಿನ್ನ ಮನಸು ಸರಿಯಾಗಿದ್ದ ಹಾಗೆ ಕಾಣುವುದಿಲ್ಲ. ಅಂತು ಎಂದಾದರೊಮ್ಮೆ ನನ್ನಲ್ಲಿಗೆ ಬರಲು ಮರೆಯಬೇಡ," ಎಂದು ಹೇಳಲು ಮರೆಯಲಿಲ್ಲ.

ಅಂದಿನಿಂದ ನಾನು ಸಿಂಗಾರಮ್ಮನಿಂದ ದೂರದೂರವೇ ಇರತೊಡಗಿದೆ. ಅವಳಲ್ಲಿಗೆ ಹೋಗುವುದನ್ನೂ ನಿಲ್ಲಿಸಿಬಿಟ್ಟೆ. ಆದರೆ ಅವಳು ಡಾಕ್ಟರು, ಲೇಡೀ ಡಾಕ್ಟರು. ಒಂದು ದಿನ ಸಾಯಂಕಾಲ ಹೊಟ್ಟೆಯಲ್ಲಿ ಬಲು ವೇದನೆಯಾದುದರಿಂದ ನಿರ್ವಾಹವಿಲ್ಲದೆ ಅವಳಲ್ಲಿಗೆ ಹೋಗಲೇಬೇಕಾಯಿತು. ಇನ್ನೂ ಕೊಂಚ ಬೆಳಕಿದ್ದುದರಿಂದ ಕತ್ತಲಾಗುವುದರೊಳಗಾಗಿ ಬಂದುಬಿಡಬಹುದೆಂದುಕೊಂಡು ಗಾಡಿ ಮಾಡಿಕೊಂಡು ಅವಳ ಮನೆಗೆ ಹೋದೆ.

ಊರ ಹೊರಗಿನ ವಿಸ್ತರಣದಲ್ಲಿ ಅವಳ ಮನೆ. ಹೆಬ್ಬಾಗಿಲನ್ನು ದಾಟಿದರೆ ಒಂದು ಕೈಸಾಲೆ. ಅದರ ಒಳಗಡೆ ಅವಳ ಆಫೀಸು ಕೋಣೆ. ಎಡಗಡೆ ಔಷಧಗಳ ಸಂಗ್ರಹಾಲಯ. ಆಫೀಸು ಕೋಣೆಯಲ್ಲಿ ಹಾಯ್ದು ಮುಂದೆ ಹೋದರೆ ದೊಡ್ಡದೊಂದು ಹಾಲ್. ಅಲ್ಲಿ ಹಲವಾರು ಕುರ್ಚಿಗಳು, ಸೋಫಾಗಳು. ಒಂದು ಮೂಲೆಯಲ್ಲಿ ಗ್ರಾಮಫೋನು. ಇನ್ನೊಂದು ಮೂಲೆಯಲ್ಲಿ ರೇಡಿಯೋ ಸೆಟ್.

ಆ ವೇಳೆಗಾಗಲೆ ನಡುಮನೆಯಲ್ಲಿ ವಿದ್ಯುದ್ದೀಪಗಳುರಿಯತೊಡಗಿದ್ದುವು. ಗ್ರಾಮಫೋನು ವಿಚಿತ್ರ ವಾದ್ಯತರಂಗವೊಂದನ್ನು ನುಡಿಸುತ್ತಿತ್ತು. ಅದರ ಹತ್ತಿರ ಸೂಟುಧಾರಿ ಯುವಕನೊಬ್ಬ ಕುಳಿತುಕೊಂಡು ವಿಯೊಲಿನ್ ಬಾರಿಸುತ್ತಿದ್ದ. ಅವನ ಸಮೀಪದಲ್ಲಿಯೆ ಕ್ರೈಸ್ತರಂತೆ ಕಾಣುವ ಯುವತಿಯೊಬ್ಬಳು ನಿಂತುಕೊಂಡು ಉಚ್ಚಸ್ವರದಲ್ಲಿ ಹಾಡು ಹೇಳುತ್ತಿದ್ದಳು. ಬಾಗಿಲಲ್ಲಿ ನಿಂತು ನೋಡುತ್ತಿದ್ದ ನನ್ನ ದೃಷ್ಟಿ ಹಾಲಿನ ತುಂಬ ಹರಿದಾಡಿತು. ಗ್ರಾಮಫೋನಿನ ವಾದ್ಯತರಂಗ, ವಿಯೊಲಿನ್ ಮತ್ತು ಹಾಡುಗಳ ರಾಗಕ್ಕೆ ಸರಿಯಾಗಿ ಎಂಟು ಹತ್ತು ಜನ ಸ್ತ್ರೀಪುರುಷರು ರತ್ನಗಂಬಳಿಯ ಮೇಲೆ ಕುಣಿಯುತ್ತಿದ್ದರು – ಕೈಕೈಗಳನ್ನು ಹಿಡಿದುಕೊಂಡು – ಮೈಮೈಗಳನ್ನು ತಬ್ಬಿಕೊಂಡು. ಅವರಲ್ಲಿ ಯಾರಿಗೂ ಈ ಲೋಕದ ಅರಿವಿದ್ದಂತೆ ಕಾಣುತ್ತಿರಲಿಲ್ಲ.

ಆಫೀಸು ಕೋಣೆಯಲ್ಲಿನ ಕುರ್ಚಿಯೊಂದರಲ್ಲಿ ಕುಕ್ಕರಿಸಿ ಬೆರಗುಗೊಂಡ ದೃಷ್ಟಿಯಿಂದ ಅಲ್ಲಿ ನಡೆಯುತ್ತಿದ್ದುದನ್ನೆಲ್ಲ ನಿಟ್ಟಿಸಿ ನೋಡತೊಡಗಿದೆ. ಕುಣಿಯುತ್ತಿದ್ದವರಲ್ಲಿ ಕೆಲವರ ಪರಿಚಯು ನನಗಿದ್ದಿತು. ಡಾ. ಸಿಂಗಾರಮ್ಮ, ಅವಳ ಜೊತೆಗೆ ನಮ್ಮೂರಿನ ಪೋಲೀಸು ಇನ್ಸಪೆಕ್ಟರು; ಗುರುಶಾಂತಪ್ಪ, ಅವರ ಜತೆಗೆ ಹೆರಿಗೆ ಆಸ್ಪತ್ರೆಯ ನರ್ಸ್; ಇನ್ನುಳಿದವರ ಗುರುತು ಮಾತ್ರ ನನಗಿರಲಿಲ್ಲ. ಮದ್ಯಪಾನ ಮಾಡಿದವರಂತೆ ಮೈಮರೆತು ಅವರೆಲ್ಲ ಕುಣಿಯು

ತ್ತಿದ್ದರು. ವಿಚಿತ್ರ ಕುಣಿತ; ಇಂಗ್ಲೀಷು ಸಿನಿಮಾದಲ್ಲಿ ಕಾಣಿಸುವಂಥ ಕುಣಿತ. ಸಿಂಗಾರಮ್ಮನೇ ಒಂದು ಸಲ ನನ್ನನ್ನು ಒತ್ತಾಯದಿಂದ ಇಂಗ್ಲೀಷು ಸಿನಿಮಾವೊಂದನ್ನು ನೋಡಲು ಕರೆದೊಯ್ದಿದ್ದಳು. ಅದರಲ್ಲಿ ನಾನು ಕಂಡಿದ್ದ ಆ ಕುಣಿತ ನನಗೀಗ ನೆನಪಿಗೆ ಬರುತ್ತಿತ್ತು.

ಹಠಾತ್ತಾಗಿ ಗ್ರಾಮಫೋನ್ ರಿಕಾರ್ಡು ನಿಂತುಹೋಯಿತು. ವಿಯೋಲಿನ್ ಬಾರಿಸುತ್ತಿದ್ದ ಯುವಕನೂ ತಡೆದುನಿಂತ. ಹಾಡುತ್ತಿದ್ದ ಹುಡುಗಿ ಹಾಡು ನಿಲ್ಲಿಸಿ ಸೋಫಾದ ಮೇಲೆ ಕುಳಿತುಕೊಂಡಳು. ಕುಣಿಯುತ್ತಿದ್ದವರು ಕುಣಿತ ನಿಲ್ಲಿಸಿ ಕೈ ಕೈ ಹಿಡಿದುಕೊಂಡೇ ಸೋಫಾಗಳ ಮೇಲೆ ಜತೆಜತೆಯಾಗಿ ಕುಳಿತುಕೊಂಡರು. ಸೇವಕನೊಬ್ಬ ತಟ್ಟೆಯೊಂದರಲ್ಲಿ ಸೀಸೆಗಳನ್ನೂ ಬಟ್ಟಲುಗಳನ್ನೂ ತಂದಿರಿಸಿದ. ಅವು ಮದ್ಯದ ಸೀಸೆಗಳೆಂಬುದನ್ನು ನನಗೆ ಯಾರೂ ಹೇಳಬೇಕಾದ ಆವಶ್ಯಕತೆಯಿರಲಿಲ್ಲ. ಇನ್ನು ಅಲ್ಲಿ ಕೂತಿರುವುದು ತರವಲ್ಲವೆಂದು ಯೋಚಿಸಿ ನಾನು ಕುರ್ಚಿಯಿಂದ ಏಳುತ್ತಿರುವಾಗಲೆ ಗುರುಶಾಂತಪ್ಪನವರ ದೃಷ್ಟಿ ನನ್ನತ್ತ ಹೊರಳಿತು. "ಓಹ್ಹೊ, ಮಹಾದೇವಿ ಬಂದಿದ್ದಾರೆ ಡಾಕ್ಟರ್!" ಎನ್ನುತ್ತಾ ಅವರು ಎದ್ದು ನನ್ನ ಕಡೆ ಬರತೊಡಗಿದರು.

ಮದ್ಯದ ಬಟ್ಟಲನ್ನು ಎಡಗೈಯಲ್ಲಿ ಹಿಡಿದುಕೊಂಡೇ ಸಿಂಗಾರಮ್ಮ ನನ್ನ ಬಳಿ ಬಂದು, ನನ್ನನ್ನು ಹಾಲಿನಲ್ಲಿ ಎಳೆಯುತ್ತ–"ಗ್ಲ್ಯಾಡ್ ಟು ಸೀ ಯೂ. ಇಂದು ನನ್ನ ಹುಟ್ಟಿದ ಹಬ್ಬ. ಅದಕ್ಕೆಂದೇ ನನ್ನ ಸ್ನೇಹಿತರೆಲ್ಲ ಇಲ್ಲಿ ಸೇರಿದ್ದಾರೆ. ನೀವೂ ಬಂದುದರಿಂದ ನಮ್ಮ ಪಾರ್ಟಿಗೆ ಕಳೆ ಬಂದಂತಾಯಿತು. ಬನ್ನಿ, ಬನ್ನಿ," ಎಂದು ದಡಬಡನೆ ನುಡಿದಳು.

"ಬರ್ರಿ ಬರ್ರಿ, ಮಹಾದೇವಮ್ಮ, ನೀವೂ ಒಂದು ಸುತ್ತು ಕುಣಿದೀರಂತೆ," ಎಂದರು ಗುರುಶಾಂತಪ್ಪ. ಅವರ ಮುಖದಿಂದ ಮದ್ಯದ ವಾಸನೆ ಬೀಸಿ ಬರುತ್ತಿತ್ತು. ಸೆರಗಿನಿಂದ ಮೂಗು ಮುಚ್ಚಿಕೊಂಡು ಅಲ್ಲಿಂದ ಕಾಲ್ತೆಗೆಯಲು ಪ್ರಯತ್ನಿಸತೊಡಗಿದೆ. ಅದನ್ನು ಕಂಡು ಸೋಫಾಗಳ ಮೇಲೆ ಕುಳಿತು ಸುರಾಪಾನ ಮಾಡುತ್ತಿದ್ದವರೆಲ್ಲ ಖೊಳ್ ಳ್ ಳ್ ಎಂದು ನಕ್ಕರು.

"ಬಿಡಿರಿ ಬಿಡಿರಿ ಸಾಹುಕಾರರೇ, ಅವರೇನು ಕುಣಿದಾರು? ಅವರು ಕುಣಿಯುವುದು ಅಡಿಗೇಮನೆಯಲ್ಲಿ ಮಾತ್ರ," ಎಂದು ಉಪಹಾಸದಿಂದ ನುಡಿದಳು ನರ್ಸಮ್ಮ.

ಗುರುಶಾಂತಪ್ಪ ಕಣ್ಣು ಕೆರಳಿಸಿ ಅವಳ ಮೇಲೆ ಬೀಳುವಂತೆ ನಟಿಸುತ್ತ- "ಏನು, ಇವರಿಗೆ ಕುಣಿಯಲು ಬರುವದಿಲ್ಲಾಂತ ತಿಳಿದೀರಾ? ನಿಮ್ಮೆಲ್ಲರಿಗಿಂತ ಚೆನ್ನಾಗಿ ಕುಣೀತಾರೆ. ಬರ್ರಿ, ಬರ್ರಿ, ಮಹಾದೇವೀ," ಎಂದು ನನ್ನನ್ನು ಎಳೆಯತೊಡಗಿದರು.

ನನ್ನ ದೇಹದಲ್ಲಿನ ಶಕ್ತಿಯನ್ನೆಲ್ಲ ಉಪಯೋಗಿಸಿ ಅವರಿಂದ ಪಾರಾಗಿ ಬರಬೇಕಾದರೆ ಸಾಕುಸಾಕಾಗಿಹೋಯಿತು. ರಸ್ತೆಯಲ್ಲಿ ನಿಂತಿದ್ದ ಗಾಡಿ ಯೊಂದನ್ನು ಕೂಗಿ ಸಾಧ್ಯವಿದ್ದಷ್ಟು ಜೇಗ ಗಾಡಿ ಹೊಡೆಯುವಂತೆ ಹೇಳಿ ಅದನ್ನೇರಿ ಕುಳಿತು ಮುಖದ ಮೇಲಿನ ಬೆವರನ್ನೊರಸಿಕೊಂಡೆ. ನನ್ನ ಮೈಯೆಲ್ಲವೂ ಬೆವರಿನ ಒರತೆಯಾದ ಹಾಗಾಗಿತ್ತು.

[೬]

ಕೊನೆಗೂ ಗುರುಶಾಂತಪ್ಪ ವಿಫಲರಾದರು. ನನ್ನನ್ನು ಬಲೆಗೆ ಬೀಳಿಸು ವುದಕ್ಕಾಗಿ ಅವರು ನಡೆಸಿದ ಪ್ರಯತ್ನಗಳಾವುವೂ ಯಶಸ್ವಿಯಾಗಲಿಲ್ಲ.

ನಮ್ಮ ಮಠದ ಆ ಮರಿಸ್ವಾಮಿಯೂ ಕೆಲದಿನ ನನಗಾಗಿ ಹೊಂಚು ಹಾಕಿದ್ದ.

ನಮ್ಮ ಮಠಕ್ಕೆ ಆತ ಮರಿಯಾಗಿ ಬಂದ ಹೊಸದರಲ್ಲಿಯೇ ಅವನ ನಡತೆಯ ಬಗೆಗೆ ನನಗೆ ಸಂದೇಹ ಬಂದಿದ್ದಿತು. ನಮ್ಮವರಿಗೆ ಬಹಳ ಭಕ್ತಿ ಯಿತ್ತು ಅವನ ಬಗೆಗೆ. ಕಾವಿ ಬಟ್ಟೆಯನ್ನು ಕಂಡರಾಯಿತು, ಕಾಲಿಗೆರಗುವ ಸ್ವಭಾವ ಅವರದು.

ಮೊದಲು 'ಐದಾರು ತಿಂಗಳುಗಳವರೆಗೆ ಆತ ಪ್ರತಿ ಸೋಮವಾರವೂ ನಮ್ಮಲ್ಲಿಗೆ ಊಟಕ್ಕೆ ಬರುತ್ತಿದ್ದ. ಮನೆಯಲ್ಲಿ ಬೇರಾರೂ ಇರಲಿಲ್ಲವಾದುದ ರಿಂದ ನಾನೇ ಆತನಿಗೆ ಬಡಿಸಬೇಕಾಗುತ್ತಿತ್ತು. ಆತನ ಪಕ್ಕದಲ್ಲಿಯೇ ನಮ್ಮವರೂ ಊಟಕ್ಕೆ ಕೂತಿರುತ್ತಿದ್ದರು, ತಲೆ ತಗ್ಗಿಸಿಕೊಂಡು. ಊಟ ಮಾಡುವಾಗ ಅತ್ತ ಇತ್ತ ನೋಡುವುದು ಉಚಿತವಲ್ಲವೆಂದು ಅವರ ಭಾವನೆ. ಆ ಮರಿಗೆ ಮಾತ್ರ ಅಂಥ ವಿಚಾರವೇನೂ ಇರಲಿಲ್ಲ. ಬಡಿಸಲೆಂದು ನಾನು ದೇವರ ಕೋಣೆಗೆ ಅಡಿಯಿರಿಸುತ್ತಲೂ ಅವನ ದೃಷ್ಟಿ ನನ್ನ ದೇಹದ ಮೇಲೆಲ್ಲಾ ಹರಿದಾಡುವುದು; ಆ ದೃಷ್ಟಿಯಲ್ಲಿ ಕಾಮಭಾವ ಅತಿಸ್ಪಷ್ಟವಾಗಿ ಕಂಡು ಬರುವುದು. ಅವನ ತಟ್ಟೆಯಲ್ಲಿ ಪದಾರ್ಥಗಳನ್ನು ಬಡಿಸಲು ನಾನು ಬಾಗಿ

ದಾಗಲೆಲ್ಲ ಆತ ಬೇಕೆಂತಲೇ ತನ್ನ ತಲೆಯನ್ನೂ ಬಾಗಿಸುತ್ತಿದ್ದ. ಒಡನೆಯೆ ನನ್ನ ತಲೆ ಅವನದಕ್ಕೆ ತಾಕುತ್ತಿತ್ತು. ಆತ ನಗುತ್ತಾ ದಿಟ್ಟತನದಿಂದ ನನ್ನ ಮುಖವನ್ನು ದಿಟ್ಟಿಸುತ್ತಿದ್ದ. "ಸಾಕು ಸಾಕು ತಾಯಿ," ಎಂದು ಅನಾವಶ್ಯಕ ವಾಗಿ ಹೇಳುತ್ತಾ ಬೇಕೆಂತಲೇ ಕೈ ಮುಂದೆ ಚಾಚಿ ನನ್ನ ಕೈಯನ್ನು ಮುಟ್ಟು ತ್ತಿದ್ದ. ಒಂದು ಸಲ ನಾನು ತುಪ್ಪ ನೀಡುತ್ತಿದ್ದಾಗ–"ಬಹಳವಾಯಿತು.... ಬಹಳವಾಯಿತು...." ಎಂದು ಗಡಿಬಿಡಿ ಮಾಡಿ ಹಠಾತ್ತನೆ ಕೈ ಚಾಚಿದ. ಬಾಗಿದ್ದ ನನ್ನ ಎದೆಗೆ ಆ ಕೈ ಬಡಿಯಿತು. ಆತ ನಿರ್ಲಜ್ಜತನದಿಂದ ನಗುತ್ತ ನನ್ನ ದೃಷ್ಟಿಗೆ ದೃಷ್ಟಿ ಕೂಡಿಸಿ ಎಡಗಡೆಯ ಹುಬ್ಬು ಏರಿಸಿದ. ನಾನು ಅಲ್ಲಿ ನಿಲ್ಲದೆ ಅಡುಗೆಮನೆಗೆ ಹೊರಟುಹೋದೆ. ನಮ್ಮವರಿಗೆ ಮಾತ್ರ ಆತನ ಕೋತಿ ಯಾಟವೊಂದೂ ತಿಳಿದಿರಲಿಲ್ಲ. ಮುಖವೆತ್ತಿ ನೋಡಿದರೆ ತಾನೆ ತಿಳಿದೀತು?

ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ನಾನು ಮಠಕ್ಕೆ ಹೋದಾಗಲೆಲ್ಲ ಮುದುಕ ಜಗದ್ಗುರುವಿಗೆ ಸಾಷ್ಟಾಂಗ ಹಾಕಿದ ಬಳಿಕ ಆ ಮರಿಸ್ವಾಮಿಗೂ ನಮಸ್ಕಾರ ಮಾಡಬೇಕಾಗುತ್ತಿತ್ತು. ಆಗಲೂ ಆತ ನನ್ನನ್ನು ಎವೆಯಿಕ್ಕದೆ ದಿಟ್ಟಿಸುತ್ತಿದ್ದ. ಕೈಯನ್ನು ನನ್ನ ತಲೆಯ ಮೇಲಾಡಿಸಿ ಆಶೀರ್ವಾದದ ನಟನೆ ಮಾಡುತ್ತಿದ್ದ. ಅಕ್ಕನ ಬಳಗದ ಸಭೆ ನಡೆದಾಗಲೂ ಹಾಗೆಯೆ. ಬಳಗ ಕ್ಕೊಂದು ಕಟ್ಟಡವಿರಲಿಲ್ಲವಾದ್ದರಿಂದ ನಾವು ಮಠದ ಪಡಸಾಲೆಯಲ್ಲಿಯೆ ಸಭೆ ಸೇರಬೇಕಾಗುತ್ತಿತ್ತು. ಅವನನ್ನು ನಾವು ಕರೆಯದಿದ್ದರೂ ಆತ ತಾನಾಗಿಯೇ ಸಭೆಗೆ ಬರುತ್ತಿದ್ದ. ಅಧ್ಯಕ್ಷತೆ ವಹಿಸಿರುತ್ತಿದ್ದ ನನ್ನ ಪಕ್ಕದಲ್ಲಿಯೇ ಕುಳಿತು ಕೊಳ್ಳುತ್ತಿದ್ದ; ನಾನು ಭಾಷಣ ಮಾಡಿದಾಗಲೆಲ್ಲ ಚಪ್ಪಾಳೆ ತಟ್ಟಿ ನಗುತ್ತಿದ್ದ. ನನಗೆ ಅಸಹ್ಯವೆನಿಸುವುದು, ಅವಮಾನವಾದಂತಾಗುವುದು. ನಾನು ನಾಚಿಕೆ ಯಿಂದ ತಲೆ ತಗ್ಗಿಸುತ್ತಿದ್ದೆ. ಅವನಿಗೆ ಮಾತ್ರ ನಾಚಿಕೆಯೆಂಬ ಶಬ್ದವೇ ಅಪರಿಚಿತವಾಗಿದ್ದ ಹಾಗಿತ್ತು.

ಎರಡು ವರ್ಷಗಳ ಹಿಂದೆ ಜಾತ್ರೆಯ ಕಾಲಕ್ಕೆ ಆಟ ನೋಡಲು ನಾನು ಮಠಕ್ಕೆ ಹೋಗಿದ್ದಾಗ ಆತ ತನ್ನ ತಂಗಿಯ ಸಹಾಯದಿಂದ ನನ್ನನ್ನು ಬಲೆಗೆ ಬೀಳಿಸಲು ಪ್ರಯತ್ನಿಸಿದ್ದ. ಅವನ ತಂಗಿ! ಅಯ್ಯೋ ತಂಗಿಯೆ! ಹೆಸರಿಗೆ ಮಾತ್ರ ತಂಗಿ; ರಾತ್ರಿ ಅವನ ಹಾಸಿಗೆಯ ಜತೆಗಾತಿ. ಎಂಥವರಿಗೂ ಹೇಸಿಕೆ ಹುಟ್ಟಿಸುವ ವಿಷಯ ಅದು. ಆವರಿಬ್ಬರಿಗೆ ಮಾತ್ರ ಕೊಂಚವೂ ನಾಚಿಕೆ

ಯಿರಲಿಲ್ಲ. ತಾನು ಕೆಟ್ಟುಹೋದುದು ಸಾಲಲಿಲ್ಲವೇನೊ – ನನ್ನಂಥ ಗರತಿಯನ್ನೂ ಕೆಡಿಸಲು ಅವಳು ಪ್ರಯತ್ನಿಸುತ್ತಿದ್ದಳು. ಅವಳ ಬಲೆಗೆ ನಾನು ಬೀಳಲಿಲ್ಲ; ಪಾರಾದೆ.

ಇವರೊಂದಿಗೆ ಯಾತ್ರೆಗೆ ಹೊರಟೆ. ರೈಲಿನಲ್ಲಿ ಎಲ್ಲ ಗಂಡಸರ ದೃಷ್ಟಿಯೂ ನನ್ನ ಮೇಲೆಯೇ. ಯುವಕರಂತೂ ನನ್ನನ್ನು ನುಂಗುವಂತೆ ನೋಡುತ್ತಿದ್ದರು. ನಾವು ಇಳಿದುಕೊಳ್ಳುವ ಹೋಟಲುಗಳಲ್ಲಿ ಪ್ರಯಾಣಿಕರ ಕಾಟ! ಪೂನಾ ಸ್ಟೇಶನ್ನಿನಲ್ಲಿ ಸೂಟು ಬೂಟು ಹಾಕಿದ ಗೃಹಸ್ಥನೊಬ್ಬ ನನ್ನನ್ನು ಕಂಡನನು ಕಾನಪುರದವರೆಗೂ ನಮ್ಮನ್ನು ಹಿಂಬಾಲಿಸಿಕೊಂಡು ಬಂದ. ಅವನ ಹುಚ್ಚನ್ನು ಕಂಡು ನನಗೆ ಮರುಕ, ನಗು. ನಮ್ಮವರಿಗೆ ಮಾತ್ರ ಅವನ ಕಡೆ ಗಮನವೇ ಇರಲಿಲ್ಲ.

ಹೀಗೆ – ಇಷ್ಟು ದಿನ ಪರಪುರುಷರ ಕಡೆ ಜಾರದೆ ಚಾರಿತ್ರ್ಯವನ್ನು ವಿಶುದ್ಧವಾಗಿರಿಸಿಕೊಂಡು ಬಂದಿದ್ದ ನಾನು ಈಗ ಏಕಾಏಕಿಯಾಗಿ ಈ ಸ್ವಾಮಿಯ ಬಲೆಗೆ ಹೇಗೆ ಬಿದ್ದೆ? ನನ್ನ ಸ್ವಭಾವಕ್ಕೇ ವಿಸಂಗತವಾದ ವಿಷಯವಲ್ಲವೇ ಇದು? ನನ್ನ ಬಗೆಗೆ ನನಗೇ ಅಚ್ಚರಿಯೆನ್ನಿಸುತ್ತಿದೆ.

[೭]

ಈ ಸ್ವಾಮಿಗಳು ಇತರ ಸ್ವಾಮಿಗಳಂಥವರಲ್ಲ, ಅಸಾಮಾನ್ಯ ವ್ಯಕ್ತಿ, ಹಿಮಾಲಯಕ್ಕೆ ಹೋಗಿ ಬಂದವರು ಎಂದೆಲ್ಲ ವರ್ಣಿಸಿದ್ದ ವೀರಯ್ಯ. ಅದೆಲ್ಲ ನಿಜವಿರಬಹುದೇ?

ಇದ್ದರೂ ಇರಬಹುದು!

ಈ ಅಸಾಮಾನ್ಯ ವ್ಯಕ್ತಿಯೂ ನಿನ್ನೆ ರಾತ್ರಿ ತೀರ ಸಾಮಾನ್ಯರಂತೆ ಆಚರಿಸಿತಲ್ಲ? ಇದಕ್ಕೇನೆನ್ನಬೇಕು?

ಇದೂ ಒಂದು ಆಶ್ಚರ್ಯದ ವಿಷಯವೇ.

ನಾನು ಅವರಿಗೆ ಮನಸೋತದ್ದು ಆಶ್ಚರ್ಯ, ಅವರು ನನಗೆ ಮನ ಸೋತದ್ದೂ ಆಶ್ಚರ್ಯ.

[೮]

“ಆಶ್ಚರ್ಯವೇನು ಬಂತು ಇದರಲ್ಲಿ?”

ಯಾರದು ತಾಯಿಾ ಈ ಧ್ವನಿ?

ಮಂಚದ ಮೇಲೆ ಮಲಗಿಕೊಂಡಿರುವ ನಮ್ಮವರನ್ನು ಬಿಟ್ಟರೆ ಇನ್ಯಾರೂ ಇಲ್ಲ ಕೋಣೆಯಲ್ಲಿ. ಯಾರೋ ಮಾತನಾಡಿದುದಂತೂ ಸ್ಪಷ್ಟವಿದೆ. ಇದೇನು ವಿಚಿತ್ರ! ಇದೇನು ಮಾಯೆ!

“ಆಶ್ಚರ್ಯವೇನೂ ಇಲ್ಲ ದೇವೀ!”

ಅದೋ, ಮತ್ತೆ ಕೇಳಿಸುತ್ತದೆ ಆ ಪಿಸುಮಾತು. ಯಾವುದೋ ಮೂಲೆಯಲ್ಲಿ ಕುಳಿತುಕೊಂಡು ಯಾರೋ ಪಿಸುಗುಡುತ್ತಿರುವ ಹಾಗಿದೆ.

“ಯಾರದು, ಹೀಗೆ ಕದ್ದು ಮಾತಾಡುತ್ತಿರೋದು?”

“ನಾನು....ನಾನು....” ಅದರೊಂದಿಗೆ ನಗೆ....ಅಸ್ಪಷ್ಟವಾದ ನಗೆ.

“ಯಾರು ನೀನು?”

ಮತ್ತೆ ನಗೆ....ಮತ್ತೆ ಮಾತು. “ನನ್ನನ್ನು ಗುರುತಿಸಲಿಲ್ಲವೆ ನೀನು? ಹ ಹ ಹ ಹ್ಹಾ....ಹ ಹ ಹ್ಹಾ....”

ನಾನು ಬೆಚ್ಚಿಬಿದ್ದು ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಂಡೆ.

“ನಾನಾರೆಂಬುದು ಇನ್ನೂ ತಿಳಿಯಲಿಲ್ಲವೇ ನಿನಗೆ? ನನ್ನನ್ನು ಬಿಟ್ಟು ನೀನೆಲ್ಲಿರಲು ಸಾಧ್ಯ?”

“ಆ್ಞ?”

“ನೀನೆಂದರೆ ನಾನು. ನಾನೆಂದರೆ ನೀನು. ನಿನ್ನ ಮನಸ್ಸಿನೊಳಗಿನ ಮನಸ್ಸು ನಾನು. ನಿನ್ನ ಆತ್ಮದಾಳದಲ್ಲಿನ ಆತ್ಮ ನಾನು. ನಿನಗೆ ಗೊತ್ತಾಗದಂತೆಯೇ ನಿನ್ನೆಲ್ಲ ವಿಚಾರಗಳನ್ನೂ ರೂಪಿಸುವ ಮಾಟಗಾತಿ ನಾನು.”

“ನೀನೆಲ್ಲಿದ್ದೆ ಇಷ್ಟು ದಿವಸ? ನನಗೆ ಗೊತ್ತೇ ಆಗಲಿಲ್ಲವಲ್ಲ?”

“ಹಾಗೆಲ್ಲ ವಿನಾಕಾರಣವಾಗಿ ತಲೆಯೆತ್ತುವುದಿಲ್ಲ ನಾನು. ಗುಪ್ತವಾಗಿರುವುದೆಂದರೆ ನನಗೆ ಬಲು ಪ್ರೀತಿ.”

ಪೋಲೀಸರ ಕೈಗೆ ಸಿಕ್ಕಿಬಿದ್ದ ಕಳ್ಳನಂತಾಯಿತು ನನ್ನ ಸ್ಥಿತಿ. ನನ್ನ ಮನಸ್ಸಿನಲ್ಲಿ ಗುಪ್ತವಾಗಿ ಅವಿತುಕೊಂಡಿದ್ದ ಈ ಗೂಢಚಾರಿಣಿ ಏನೇನನ್ನು ಕಂಡುಕೊಂಡಿರುವಳೋ ಎಂದು ನಾನು ನಡುಗಿದೆ.

ಒಳಗಿನ ಧ್ವನಿ ನುಡಿಯತೊಡಗಿದ್ದಿತು: "ಇಪ್ಪತ್ತು ವರ್ಷಗಳಿಂದಲೂ ಪಾತಿವ್ರತ್ಯ ಕಾಪಾಡಿಕೊಂಡು ಬಂದ ಜಂಬ ಕೊಚ್ಚುತ್ತೀಯಲ್ಲ? ಏನು ನಿನ್ನ ಆ ಪಾತಿವ್ರತ್ಯ! ಹ ಹ ಹ ಹಾ ಹಾ.... ಹೊ ಹೊ ಹೊ ಹೊ ಹೊ.... ನೀನೊಬ್ಬ ಎರಡನೆಯ ಸೀತೆಯೊ, ಸಾವಿತ್ರಿಯೊ ಆಗಿದ್ದೆಯಲ್ಲವೆ? ಪರ ಪುರುಷರ ಬಗೆಗೆ ಕೊಂಚವೂ ಯೋಚಿಸದೆ ಸದಾಕಾಲವೂ ಪತಿಯನ್ನೇ ಆರಾಧಿಸುತ್ತಿರುವವಳು ಪತಿವ್ರತೆ. ಸೆಟ್ಟರೊಂದಿಗೆ ಮದುವೆ ನಿಶ್ಚಯವಾದಾಗಲೇ ನಿನ್ನ ಮನಸ್ಸು ಅವರ ಬಗ್ಗೆ ಕಹಿಯಾಗಿಹೋಗಿತ್ತು. ನಿನಗಿಂತಲೂ ಇಪ್ಪತ್ತು ವರ್ಷಗಳಿಗೆ ದೊಡ್ಡವರೂ, ಕಪ್ಪು ಬಣ್ಣದವರೂ, ಕುರೂಪಿಯೂ ಆಗಿದ್ದ ಅವರನ್ನು ವರಿಸಲು ನಿನಗೆ ಕೊಂಚವೂ ಇಷ್ಟವಿರಲಿಲ್ಲ. ಆದರೇನು ಮಾಡುವುದು? ಬೇರೆ ಉಪಾಯವಿರಲಿಲ್ಲ. ತಂದೆತಾಯಿಗಳು ನಿನ್ನ ಮಾತು ಕೇಳುವಂತಿರಲಿಲ್ಲ. ಮದುವೆಯ ಹಿಂದಿನ ರಾತ್ರಿ ನೀನೇನು ವಿಚಾರ ಮಾಡಿದ್ದೆ, ನೆನಪಿದೆಯೆ?"

"ಏನು?"

"ನಿನಗೆ ನೆನಪಿರದಿದ್ದರೂ ನನಗಿದೆ. ಬೇಡ, ಬೇಡ, ಈ ಬಂಧನಕ್ಕೆ ಸಿಲುಕಬೇಡ, ಎದುರು ಮನೆಯಲ್ಲಿರುವ ತರುಣನಿಗೆ ನಿನ್ನ ಬಗ್ಗೆ ಆಸೆಯಿದೆ, ಅವನನ್ನು ಕಟ್ಟಿಕೊಂಡು ಎಲ್ಲಿಗಾದರೂ ಓಡಿಹೋಗು – ಎಂದು ನಾನೇ ಉಪದೇಶಿಸಿದ್ದೆ ನಿನಗೆ. ಈಗಲಾದರೂ ನೆನಪಾಯಿತೇ? ಅನಂತರ – ಶೋಭನ ಪ್ರಸ್ತದ ದಿನ ಮತ್ತೆ ಅದೇ ಉಪಾಯವನ್ನೇ ಸೂಚಿಸಿದ್ದೆ. ನನ್ನ ಸಲಹೆಯಂತೆ ವರ್ತಿಸುವ ಧೈರ್ಯ ನಿನ್ನಲ್ಲಿರಲಿಲ್ಲ. ಮಾನ – ಮರ್ಯಾದೆ, ನಾಚಿಕೆ ಎಂದು ಏನೇನೋ ಹೇಳಿಕೊಂಡು ನಿನ್ನನ್ನು ನೀನೇ ಬಂಧಿಸಿಕೊಂಡು ಒಲ್ಲದ ಗಂಡನ ಗುಲಾಮಳಾಗಿ ಕುಳಿತೆ. ಪ್ರಸ್ತದ ರಾತ್ರಿ ನೀನು ಸುರಿಸಿದ ಕಂಬನಿಗಳಿಂದ ತಲೆದಿಂಬು ತೊಯ್ದುಹೋಗಿತ್ತು. ಅಳುವುದರಿಂದ ಉಪಯೋಗವೇನು? ಯಾರನ್ನಾದರೂ ಕಟ್ಟಿಕೊಂಡು ಎಲ್ಲಿಗಾದರೂ ಗಾಡಿಬಿಡು – ಎಂದು ನಾನು ಪದೇ ಪದೇ ಕೂಗುತ್ತಿದ್ದೆ. ನಿನಗೆ ಒಮ್ಮೆಯೂ ಕೇಳಿಸಲಿಲ್ಲವೇ ನನ್ನ ಕೂಗು?"

"................"

"ಅನಂತರ ಸೆಟ್ಟರ ಮನೆಗೆ ಬಂದೆ. ಅವರ ಚಿಗವ್ವ ಮುದುಕಿಯೊಂದನ್ನು ಬಿಟ್ಟರೆ ಯಾರೂ ಇರಲಿಲ್ಲ ಅಲ್ಲಿ – ಆಕೆಗೆ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ; ಕಣ್ಣಿಗೆ ಸರಿಯಾಗಿ ಕಾಣಿಸುತ್ತಿರಲಿಲ್ಲ. ನಿನ್ನ ಗಂಡ ಯಾವಾಗಲೂ ಅಂಗಡಿ

ಯಲ್ಲಿ. ರಾತ್ರಿ ಎಂಟು ಗಂಟೆಗೆ ಆತ ಮನೆಗೆ ಬರುವ ತನಕ ನೀನೇ ರಾಣಿ ಅಲ್ಲಿ. ನೀನು ಏನು ಮಾಡಿದರೂ ಯಾರೂ ಕೇಳುವಂತಿರಲಿಲ್ಲ. ಆ ಮುದುಕಿಗೆ ಏನೂ ತಿಳಿಯುವಂತಿರಲಿಲ್ಲ. ನಿನ್ನಂಥ ಪರಿಸ್ಥಿತಿಗೆ ಸಿಲುಕಿದ ಇತರ ಸ್ತ್ರೀಯರೆಲ್ಲ ಹೇಗೆ ಸುಖಪಡುವರೆಂಬುದನ್ನು ಚೆನ್ನಾಗಿ ಅರಿತಿದ್ದರೂ ನೀನು ಸುಮ್ಮನಿದ್ದು ಬಿಟ್ಟೆ. ಸುಖದ ಬಟ್ಟಲು ನಿನ್ನ ತುಟಿಗಳೆದುರಿಗೇ ಇದ್ದರೂ ನೀನು ಅದನ್ನೆತ್ತಿ ಕುಡಿಯಲಿಲ್ಲ. ಆ ನಾಟಕಕಾರ ಪುಟ್ಟಲಿಂಗಯ್ಯ ನಿನಗಾಗಿ ಎಷ್ಟು ಹುಚ್ಚನಾಗಿದ್ದ. ಅವನನ್ನು ಮಡಗಿಕೊಂಡಿದ್ದರೆ ನಿನ್ನ ಗಂಡನಿಗೂ ಏನೂ ತಿಳಿಯುತ್ತಿರಲಿಲ್ಲ...."

"ಅಯ್ಯೋ ಅವನ ರೂಪ....ಅವನ ಬಣ್ಣ...."

"ಹುಚ್ಚಿ. ಶುದ್ಧ ಹುಚ್ಚಿ ನೀನು. ಗಂಡು ಹೆಣ್ಣುಗಳ ಸಂಯೋಗಕ್ಕೂ ರೂಪ ಬಣ್ಣಗಳಿಗೂ ಸಂಬಂಧವೇನೇ ಹುಚ್ಚೀ? ಗಂಡನಿಂದ ನಿನಗೆ ದೊರೆಯಲಾರದ ಸುಖವನ್ನು ಆತ ನಿನಗೆ ನೀಡುತ್ತಿದ್ದ. ಅಷ್ಟಾದರೆ ಸಾಕುಸಾಕಾಗುತ್ತಿತ್ತು. ಅವನನ್ನು ತಿರಸ್ಕರಿಸಬೇಡ, ಕರೆದುಕೋ, ತಬ್ಬಿಕೋ ಎಂದು ಸಾವಿರಬಾರಿ ಹೇಳಿದೆ ನಾನು. ಹೇಳಿ ಹೇಳಿ ಬೇಸರಪಟ್ಟುಕೊಂಡೆ. ನೀನು ಮಾತ್ರ ನಿನ್ನ ಹಟ ಬಿಡಲಿಲ್ಲ."

"ಅವನ ಮೋರೆಯನ್ನು ನೋಡಿದರೆ ಹಂದಿಯನ್ನು ನೋಡಿದಂತಾಗುತ್ತಿತ್ತು."

"ಆದರೂ ಅಂಥವನನ್ನೇ ಅಪ್ಪಿಕೊಳ್ಳಬೇಕೆಂದು ನನಗೆನ್ನಿಸುತ್ತಿತ್ತು. ನನಗೆ ಎಂದರೆ ನಿನಗೇ....ಹೌದು. ನಿನಗೇ. ತಿಳಿಯಿತೋ ಇಲ್ಲವೋ?"

"ಛೀಃ, ನನಗೆಂದೂ ಹಾಗನ್ನಿಸಿಲ್ಲ."

"ಇದೇ ನಿನ್ನ ಭ್ರಮೆ. ದೊಡ್ಡ ಭ್ರಮೆ. ಪುಟ್ಟಲಿಂಗಯ್ಯ ಒಂದು ಮಧ್ಯಾಹ್ನ ಅಕಸ್ಮಾತ್ತಾಗಿ ನಿನ್ನ ಕೋಣೆಗೆ ಬಂದಿದ್ದನಲ್ಲ–ಆಗ ಆತನನ್ನು ಪ್ರೀತಿಯಿಂದ ತಬ್ಬಿಕೊಳ್ಳಬೇಕೆಂದು ನಿನಗೆ ಆಸೆಯಾಗಿತ್ತು. ಆದರೆ ಧೈರ್ಯವಿರಲಿಲ್ಲ, ಅಷ್ಟೆ."

"ಇದೇನು ಬೊಗಳುವೆ? ಅವನ ಕೆನ್ನೆಗೆ ಬಿಗಿದು ಕಳಿಸಿದ್ದೆ ನಾನು. ಅವನನ್ನು ತಬ್ಬಿಕೊಳ್ಳುವುದುಂಟೇ, ಎಲ್ಲಾದರೂ?"

"ತಬ್ಬಿಕೊಳ್ಳಬೇಕೆಂಬ ನಿನ್ನ ಬಯಕೆಯೇ ವಿಕೃತವೇಷ ತಳೆದು ಅವನ ಕೆನ್ನೆಯನ್ನು ಸ್ಪರ್ಶಿಸಿತ್ತು, ಅಷ್ಟರಲ್ಲೇ ತೃಪ್ತಿಗೊಂಡಿತ್ತು. ಆತ ಹೊರಟು

ಹೋದ ಬಳಿಕ ಅವನನ್ನು ಹಾಗೆ ಹೊಡೆದು ಕಳಿಸಬಾರದಾಗಿದ್ದಿತೆಂದೂ ನಿನಗನ್ನಿಸಿತ್ತು. ಮತ್ತೊಮ್ಮೆ ಆತ ಬಂದರೆ ಹಾಗೆ ಮಾಡಬಾರದೆಂದೂ ನೀನು ಯೋಚಿಸಿದ್ದೆ. ಆತ ಬರಲಿಲ್ಲ....ಅದಕ್ಕೂ ಮೊದಲೊಮ್ಮೆ ನಿಮ್ಮ ಆ ಕಾರಕೂನ ನನ್ನೂ ನೀನು ಹೀಗೇ ಗುಪ್ತ ರೀತಿಯಲ್ಲಿ ಬಯಸುತ್ತಿದ್ದೆ. ಆತ ಆಗಾಗ ನಿಮ್ಮ ಮನೆಯಲ್ಲೇ ಮಲಗುತ್ತಿದ್ದನಲ್ಲ....ರಾತ್ರಿ ನಿಮ್ಮವರಿಗೆ ಗಾಢನಿದ್ದೆ. ನಡುವೆ ಎಚ್ಚರವಾಗುವುದಿಲ್ಲ. ಮಂಚದಿಂದಿಳಿದು ಆತ ಮಲಗಿದಲ್ಲಿಗೆ ಹೋಗಿ ಬಿಡಲೇ ಎಂದೂ ಎಷ್ಟೋ ಸಲ ನಿನಗನ್ನಿಸಿತ್ತು. ಆತ ನಿನ್ನ ಕಡೆ ಕಡೆಗಣ್ಣ ಬಾಣ ಬಿಟ್ಟಾಗ, ನಿನ್ನ ಮೈ ಕೈ ಮುಟ್ಟಿದಾಗ ನಿನಗೆ ಸಂತೋಷವಾಗುತ್ತಿತ್ತು. ಆತ ಅಶಕ್ತ ಪ್ರಕೃತಿಯವನಾಗಿದ್ದರೇನು, ಇನ್ನೂ ಯುವಕನೇ ಆಗಿದ್ದ. ನಿನ್ನ ಗಂಡನಿಗಿಂತಲೂ ಸಶಕ್ತನಾಗಿದ್ದ. ಅವನ ಸಂಗಸುಖವನ್ನನುಭವಿಸುವ ಬಯಕೆ ಕುದಿಯುತ್ತಿದ್ದರೂ ನೀನು ಸುಮ್ಮನಿದ್ದುಬಿಟ್ಟೆ. ಪ್ರತ್ಯಕ್ಷವಾಗಿ ಸಂಗಮಾಡಲಿಲ್ಲ ವಾದರೂ ಕಾಲ್ಪನಿಕವಾಗಿಯಾದರೂ ಮಾಡಿಯೇ ಮಾಡುತ್ತಿದ್ದೆ. ಅಷ್ಟೇ ಸುಖ ಸಿಕ್ಕುತ್ತಿದ್ದಿತಲ್ಲ ನಿನಗೆ!"

"ಏ....ಏ....ಎಂಥ ವಿಚಿತ್ರ ಆಡುತ್ತೀಯೆ?"

"ವಿಚಿತ್ರ ಏನು ಬಂತು? ಸತ್ಯವನ್ನೇ ಹೇಳುತ್ತಿದ್ದೇನೆ. ಸತ್ಯ ಕಲ್ಪನೆ ಗಿಂತಲೂ ವಿಚಿತ್ರವಾಗಿ ಕಾಣುವುದುಂಟು. ಅಂತೇ ನಾ ಹೇಳುವುದೆಲ್ಲ ನಿನಗೆ ವಿಲಕ್ಷಣವೆನ್ನಿಸಬಹುದು. ಆ ಮದರಾಸೀ ಅಯ್ಯರನ ವಿಚಾರದಲ್ಲೂ ನೀನು ಹೀಗೇ ಹೊಯ್ದಾಡಿದ್ದೆ. ಆತ ನೀರು ಕೇಳಲು ಬಂದಾಗಲೆಲ್ಲ ಅವನನ್ನು ಮನೆಯೊಳಕ್ಕೆ ಕರೆಯಬೇಕೆಂದು ನಿನಗೆ ಮನಸ್ಸಾಗುತ್ತಿತ್ತು. ಯಾರಾದರೂ ನೋಡಿಯಾರೆಂಬ ಭೀತಿಯಿಂದ ಸುಮ್ಮನಿದ್ದೆ, ಅಷ್ಟೆ. ಆತ ಒಂದು ರಾತ್ರಿ ಜೀವಾತ್ಮ, ಪರಮಾತ್ಮಗಳ ವಿಚಾರ ತೆಗೆದು ನಿಮ್ಮವರನ್ನು ಪರೀಕ್ಷೆಗೊಡ್ಡಲು ಪ್ರಯತ್ನಿಸಿದ್ದನಲ್ಲ–ಆಗ ನಿನ್ನ ಬಯಕೆಗಳೆಲ್ಲ ಹುಚ್ಚೆದ್ದು ಕುಣಿಯತೊಡಗಿದ್ದುವು. ನಮ್ಮವರು ಪರೀಕ್ಷೆಗೆ ತಯಾರಾದರೆ ನಾನೂ ತಯಾರಾಗುವೆ – ಆ ಅಯ್ಯರನ ಜತೆಗೆ ಒಂದು ರಾತ್ರಿ....ಎಂದೆಲ್ಲ ಲೆಕ್ಕ ಹಾಕತೊಡಗಿದ್ದೆ. ಆತನಂತೂ ನಿನ್ನ ಸಂಗಕ್ಕಾಗಿ ಬಾಯಿ ಬಾಯಿ ಬಿಡುತ್ತಿದ್ದ. ನೀನು ಹೋಗಿ ಅವನನ್ನು ಗದರಿಸ ದಿದ್ದಿದ್ದರೆ ಆ ರಾತ್ರಿಯೆ ಅವನ ಸಂಗಸುಖ ದೊರೆಯುತ್ತಿತ್ತು....ನಿಜವಾಗಿಯೂ! ಆ ರಾತ್ರಿ ನಿನಗೊಂದು ಕನಸು ಬಿದ್ದಿತ್ತು, ನೆನಪಿದೆಯೆ?"

"ಇಂಥ ಎಷ್ಟು ಕನಸು ಬಿದ್ದಿವೆಯೋ ಇದುವರೆಗೆ? ಅವುಗಳನ್ನೆಲ್ಲ ನೆನಪಿಡಲಾಗುತ್ತದೆಯೆ?"

"ನೀನು ನೆನಪಿಡದಿದ್ದರೂ ನಾನು ಇಟ್ಟಿದ್ದೇನೆ. ಕನಸಿಲ್ಲದೆ ಒಂದು ರಾತ್ರಿಯನ್ನೂ ಕಳೆದಿಲ್ಲ ನೀನು. ಬಾಳಿನಲ್ಲಿ ಪ್ರತ್ಯಕ್ಷವಾಗಿ ಅನುಭವಿಸಲಾಗದ್ದನ್ನೆಲ್ಲ ನೀನು ಕನಸಿನಲ್ಲಿ ಅನುಭವಿಸಿ ಸುಖಿಸಲು ಯತ್ನಿಸುತ್ತಿದ್ದೆ. ಕನಸು ತಾನಾಗಿಯೇ ಬೀಳುತ್ತಿರಲಿಲ್ಲ; ನೀನೇ ಅವುಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಆ ರಾತ್ರಿ ಏನು ಕನಸು ಕಂಡಿದ್ದೆ, ಹೇಳಲಾ?"

"ಏನು?"

"ಆ ಅಯ್ಯರನ ಹೆಂಡತಿ ಹೆರಿಗೆಯ ಕಾಲದಲ್ಲಿ ಸತ್ತುಹೋದ ಹಾಗೆ, ಆತನಿಗೆ ಬೇರೆ ಊರಿಗೆ ವರ್ಗವಾದ ಹಾಗೆ, ಅವನೊಂದಿಗೆ ನೀನು ಓಡಿಹೋದ ಹಾಗೆ, ದೊಡ್ಡ ನಗರದಲ್ಲಿ ನೀವಿಬ್ಬರೂ ಸಂಸಾರ ಹೂಡಿದ ಹಾಗೆ, ಅವನ ತೋಳ ಸೆರೆಯಲ್ಲಿ ನೀನು ಒರಗಿಕೊಂಡ ಹಾಗೆ, ಅವನಿಂದ ನಿನಗೊಂದು ಮಗುವಾದ ಹಾಗೆ, ಆ ಮಗುವಿಗೆ ನಿನ್ನ ಬಣ್ಣ ಅವನ ರೂಪು ಇದ್ದ ಹಾಗೆ, ಆ ಮಗುವನ್ನು ನೋಡಲು ಬಂದ ನಿನ್ನ ಗಂಡ ಬಸವಾ ಬಸವಾ ಎಂದು ಉದ್ಗಾರ ತೆಗೆದ ಹಾಗೆ– ಕನಸಾಗಿತ್ತು. ನಿನಗೆ ಎಚ್ಚರವಾದಾಗ ಬೆಳಗಾಗಿತ್ತು. ನಿನ್ನ ಗಂಡ ಆಗತಾನೆ ಎದ್ದವರು ಬಸವಾ, ಬಸವಾ ಎಂದು ಜಪಿಸತೊಡಗಿದ್ದರು....

"ಆ ಮೇಲೆ ಆ ಗುರುಶಾಂತಪ್ಪ....ಮೊದಲಿನಿಂದಲೂ ಅವರ ಬಗೆಗೆ ಆಕರ್ಷಣೆಯೆನ್ನಿಸುತ್ತಿತ್ತು ನಿನಗೆ. ಅವರ ಸುಪುಷ್ಟ ದೇಹವನ್ನೂ ಪ್ರಭಾವಶಾಲಿ ವ್ಯಕ್ತಿತ್ವವನ್ನೂ ಕಂಡು ನೀನು ಮರುಳಾಗಿದ್ದೆ. ಎಷ್ಟೋ ಸಲ ಅವರು ನಿನ್ನ ಕನಸಿನಲ್ಲಿ ಕಾಣಿಸಿಕೊಂಡದ್ದುಂಟು. ನಿಮ್ಮ ಮನೆಗೆ ಅವರು ಬಂದು ನಿನ್ನ ಗಂಡನೊಂದಿಗೆ ಚರ್ಚೆಗೆ ಕುಳಿತಾಗಲೆಲ್ಲ ನಿನಗೂ ಅಲ್ಲಿ ಹೋಗಿ ಕೂಡ್ರುವ ಆಸೆಯಾಗುತ್ತಿತ್ತು. ಅವರ ಕಣ್ಣಿಗೆ ಕಣ್ಣಿಟ್ಟು ಕೂಡ್ರುವ ಧೈರ್ಯವಿರಲಿಲ್ಲ. ನಿನ್ನ ಬಗ್ಗೆ ನಿನಗೇ ಭೀತಿಯಿತ್ತು. ಅವರ ಆ ಪ್ರಣಯ ಪತ್ರವನ್ನು ನೀನೆಷ್ಟು ಸಲ ಓದಿರಲಿಲ್ಲ? ನಾಲ್ಕೈದು ದಿನ ಅದನ್ನೋದುತ್ತಿರುವುದೇ ನಿನ್ನ ಮುಖ್ಯ ಕೆಲಸವಾಗಿತ್ತು. ಅದಕ್ಕೊಂದು ಉತ್ತರ ಬರೆಯಬೇಕೆಂದೂ ನೀನು ವಿಚಾರ ಮಾಡಿದ್ದೆ. ಯಾರ ಕೈಗಾದರೂ ಪತ್ರ ಸಿಕ್ಕೀತೆಂಬ ಶಂಕೆಯಿಂದ ಸುಮ್ಮನಿದ್ದು ಬಿಟ್ಟಿದ್ದೆ. ಅಂದು ರಾತ್ರಿ ಸಿನಿಮಾ ಥಿಯೇಟರಿನಲ್ಲಿ ಅವರು ಅತ್ಯಂತ ಧೈರ್ಯದಿಂದ ನಿನ್ನ ಪಕ್ಕದಲ್ಲಿ ಬಂದು ಕುಳಿತಿದ್ದರಲ್ಲ? ಆಗ ನಿಜವಾಗಿಯೂ ನೀನು

ಅವರನ್ನು ಕಂಡು ಮಾರುಹೋಗಿದ್ದೆ. ಅವರ ಧೈರ್ಯ ಸಾಹಸಗಳ ಬಗ್ಗೆ ತುಂಬ ಮೆಚ್ಚುಗೆಯಾಗಿತ್ತು ನಿನಗೆ. ಆ ಶಿವಲಿಂಗವ್ವ ಅಂದು ಅಲ್ಲಿರದಿದ್ದರೆ ನೀನು ಅವರನ್ನು ಗದರಿಸುತ್ತಿರಲಿಲ್ಲ. ಇಂಟರ್‌ವಲ್ ಆಗುವವರೆಗೂ ಅವರೊಡನೆ ಮಾತನಾಡುತ್ತ ಕೂಡ್ರಬಹುದಾಗಿತ್ತು. ಹೆಗಲಮೇಲೆ ಕೈಹಾಕಿ ನಿನ್ನನ್ನವರು ತಬ್ಬಿಕ್ಕೊಂಡು ಚುಂಬಿಸಬೇಕೆಂದು ನಿನಗೆ ಆಸೆಯಾಗಿತ್ತು. ಅಂದೂ ನಿನಗೆ ದೀರ್ಘಾವಧಿಯ ಕನಸು ಬಿದ್ದಿತ್ತು. ಆ ಕನಸಿನ ಲೋಕದಲ್ಲಿ ಅವರೊಂದಿಗೆ ಕುಳಿತು ಸಿನಿಮಾ ನೋಡಿದ್ದೆ ನೀನು. ಸಿನಿಮಾ ಮುಗಿದ ಬಳಿಕ ಅವರ ಮೋಟರಿನಲ್ಲಿ ವಿಹಾರ ಮಾಡಿದ ಹಾಗೆ, ಯಾವುದೋ ಒಂದು ಭವ್ಯ ಹೋಟಲಿಗೆ ಹೋಗಿ ದೊಡ್ಡ ಕೋಣೆಯಲ್ಲಿ ಇಳಿದುಕೊಂಡ ಹಾಗೆ, ದೊಡ್ಡ ಮಂಚದ ಮೇಲೆ ಮೆತ್ತೆಯ ಗಾದಿಯ ಮೇಲೆ ನೀವಿಬ್ಬರೂ ಮಲಗಿದ ಹಾಗೆ, ಕನಸಾಗಿತ್ತು. ಎಚ್ಚರವಾದಾಗ ನಿನ್ನ ದೇಹದಲ್ಲೆಲ್ಲ ಬೆವರು ಸುರಿಯತೊಡಗಿತ್ತು. ಜಾಗೃತ ಸ್ಥಿತಿಯಲ್ಲಿ ಅನುಭವಿಸಲಾಗದುದನ್ನೆಲ್ಲ ನೀನು ಅಜಾಗೃತ ಸ್ಥಿತಿಯಲ್ಲಿ ಅನುಭವಿಸಿದ್ದೆ....

"ಡಾಕ್ಟರ್ ಸಿಂಗಾರಮ್ಮ ಗುರುಶಾಂತಪ್ಪನವರ ಪರವಾಗಿ ನಿನ್ನ ಮನಸ್ಸಿನ ಮೇಲೆ ಪ್ರಭಾವ ಬೀರಲು ಬಂದಾಗ ಅವಳ ಮಾತುಗಳನ್ನು ಕೇಳುತ್ತ ನೀನು ನಿನಗರಿಯದಂತೆ ಕನಸು ಕಾಣತೊಡಗಿದ್ದೆ. ನಿನಗಾಗಿ ಒಬ್ಬರು ಹುಚ್ಚರಂತೆ ಹಂಬಲಿಸುತ್ತಿರುವರೆಂದು ಸಿಂಗಾರಮ್ಮ ಹೇಳಿದಾಗ ಅವರು ಗುರುಶಾಂತಪ್ಪನವರೇ ಎಂದು ತಿಳಿದುಕೊಳ್ಳಲು ನಿನಗೆ ಹೆಚ್ಚು ವೇಳೆ ಬೇಕಾಗಿರಲಿಲ್ಲ. ಸಿಂಗಾರಮ್ಮನ ಮನೆಗೆ ಅವರು ಪದೇ ಪದೇ ಹೋಗುವರೆಂಬ ವಿಷಯ ನಿನಗೆ ಗೊತ್ತಿದ್ದಿತು. ಆಕೆ ಲೇಡೀ ಡಾಕ್ಟರು. ಡಾಕ್ಟರ ಹತ್ತಿರ ನೀನು ಹೋದರೆ ಜನರಿಗೇನೂ ಸಂಶಯ ಬರುವಂತಿರಲಿಲ್ಲ. ಆಗಾಗ ಹೋಗಿ ಗುರುಶಾಂತಪ್ಪನವರೊಂದಿಗೆ ಮೋಜಿನಿಂದ ಕಾಲ ಕಳೆದು ಬರಲಾ– ಎಂದೂ ನಿನಗೆ ಆಗಲೇ ಅನ್ನಿಸಿತ್ತು. ಅಂದು ನಿನ್ನ ಗಂಡನೂ ಊರಲ್ಲಿರಲಿಲ್ಲ. ಆ ರಾತ್ರಿಯೇ ಹೋಗಬೇಕೆಂದೂ ನೀನು ವಿಚಾರ ಮಾಡಿದ್ದೆ, ಆದರೆ– ಧೈರ್ಯವಾಗಿರಲಿಲ್ಲ. ಅಂದು ಮತ್ತೆ ನೀನು ಕನಸು ಕಂಡಿದ್ದೆ. ಡಾಕ್ಟರ ಮನೆಯಲ್ಲಿ ಗುರುಶಾಂತಪ್ಪನವರೊಂದಿಗೆ ರಮಿಸಿದ ಹಾಗೆ ಕನಸು....

"ಆ ಮೇಲೆ ಆ ಕುಣಿತದ ದೃಶ್ಯವನ್ನು ಕಂಡಾಗ....ಆ ಹುಚ್ಚು ಕುಣಿತದಲ್ಲಿ ಭಾಗಿಯಾಗಿ ಈ ಪ್ರಪಂಚವನ್ನೇ ಮರೆತುಬಿಡಲೇ– ಎಂದುಕೊಂಡಿದ್ದೆ

ನೀನು. ಅವರೆಲ್ಲರೂ ಕುಡಿಯುವುದನ್ನು ನೋಡಿದಾಗ ನಾನೂ ಒಂದು ಗುಟುಕು ಕುಡಿದು ಆದರ ರುಚಿ ನೋಡಲೇ – ಎಂದೂ ನಿನಗನ್ನಿಸಿತ್ತು. ಗುರುಶಾಂತಪ್ಪ ನಿನ್ನನ್ನು ಹಿಡಿದು ಹಾಲಿನಲ್ಲಿ ಎಳೆಯತೊಡಗಿದಾಗ ಹೋಗಿ ಬಿಡಲೇ – ಎಂದೂ ನೀನು ಯೋಚಿಸಿದ್ದೆ. ಆದರೆ....ಆದರೆ....ಅಲ್ಲಿ ಬಹಳ ಜನ ಇದ್ದರಲ್ಲ? ಅವರನ್ನು ಕಂಡು ನಿನಗೆ ಭಯ ಹುಟ್ಟಿಕೊಂಡಿತ್ತು. ನೀನು ಕಾಲು ಜಾರಿದ ಸುದ್ದಿ ಊರಿಗೆಲ್ಲ ಗೊತ್ತಾಗುವುದೆಂಬ ಶಂಕೆಯಿಂದ ನೀನು ಹಿಂಜರಿದು ಅಲ್ಲಿಂದ ಪಲಾಯನ ಹೇಳಿಸಿದ್ದೆ. ಮನೆಗೆ ಬಂದ ಬಳಿಕ ಸಹ ಆ ಕುಣಿತ, ಆ ಹಾಡು, ಆ ವಾದ್ಯತರಂಗ, ಆ ವಿಯೊಲಿನ್ ನುಡಿತ, ಆ ಮಾದಕ ದೃಶ್ಯ ನಿನ್ನ ಕಣ್ಣಿನಿಂದ ಕಿವಿಯಿಂದ ಮರೆಯಾಗಿರಲಿಲ್ಲ. ರಾತ್ರಿ ನಿನಗೆ ಅದರದೇ ಕನಸು. ಅಲ್ಲಿ ಕುಣಿಯುತ್ತಿದ್ದ ನರ್ಸಿನ ಹಾಗೆ ನೀನೂ ಫ್ರಾಕ್ ಹಾಕಿಕೊಂಡು, ಉಬ್ಬಿದ ಎದೆಯನ್ನು ಪ್ರದರ್ಶಿಸುತ್ತ ಗುರುಶಾಂತಪ್ಪ ನವರ ಕೈ ಹಿಡಿದುಕೊಂಡು ಕುಣಿದ ಹಾಗೆ, ಅವರು ನಿನ್ನ ಕಟಿಯ ಬಳಿ ಕೈಯಿಟ್ಟು ನಿನ್ನ ಗಲ್ಲವನ್ನು ಭುಜದ ಮೇಲಿರಿಸಿಕೊಂಡ ಹಾಗೆ, ಸೋಫಾದ ಮೇಲೆ ಎದುರುಬದುರಾಗಿ ಕುಳಿತು ನೀವಿಬ್ಬರೂ ಒಂದೇ ಬಟ್ಟಲಿನಿಂದ ಸುರಾಪಾನ ಮಾಡಿದ ಹಾಗೆ, ಅದರ ಅಮಲಿನಲ್ಲಿ ಮೈಮರೆತು ರತ್ನಗಂಬಳಿಯ ಮೇಲೇ ಮಲಗಿಕೊಂಡ ಹಾಗೆ, ಬೆಳಗಿನ ಜಾವದಲ್ಲಿ ನಿನ್ನ ಗಂಡ ನಿನ್ನನ್ನು ಹುಡುಕುತ್ತ ಅಲ್ಲಿಗೆ ಬಂದು ನಿಮ್ಮಿಬ್ಬರನ್ನು ಆ ಸ್ಥಿತಿಯಲ್ಲಿ ಕಂಡು ಬಸವಾ ಬಸವಾ ಎಂದು ಹಣೆ ತಟ್ಟಿಕೊಂಡ ಹಾಗೆ ಕನಸಾಗಿತ್ತು. ಎಚ್ಚರವಾದಾಗ ನಿನ್ನ ದೇಹವೆಲ್ಲ ಅದ್ಭುತ ಸಂತಸದಿಂದ ಸೂಕ್ಷ್ಮವಾಗಿ ಕಂಪಿಸತೊಡಗಿತ್ತು....

"ಆ ಮರಿಸ್ವಾಮಿಯ ಬಗೆಗೂ ನಿನ್ನಲ್ಲಿ ಅನುರಾಗ ಹುಟ್ಟದಿರಲಿಲ್ಲ. ಆತ ಪಟಿಂಗ, ವ್ಯಭಿಚಾರಿ, ತನ್ನ ತಂಗಿಯನ್ನೇ ಇಟ್ಟುಕೊಂಡ ಹೇಸಿ ಎಂಬುದ ರಿಂದಲೇ ಅವನ ಬಗೆಗೆ ವಿಲಕ್ಷಣ ಆಕರ್ಷಣೆಯೆನಿಸಿತ್ತು ನಿನಗೆ. ಅವನ ದೃಷ್ಟಿ ನಿನ್ನ ಮೇಲೆ ಹರಿದಾಡಿದಾಗಲೆಲ್ಲ ನಿನ್ನ ಸೌಂದರ್ಯದ ಬಗ್ಗೆ ಹೆಮ್ಮೆಯೆನಿಸು ತ್ತಿತ್ತು ನಿನಗೆ. ಆತನಲ್ಲಿ ಕಾಮಭಾವವನ್ನು ಕಂಡಾಗಲೆಲ್ಲ ನಿನ್ನಲ್ಲೂ ಕಾಮ ಹೆಡೆಯೆತ್ತಿ ನಿಲ್ಲುತ್ತಿತ್ತು. ಅವನ ತಲೆ ನಿನ್ನ ತಲೆಗೆ, ಅವನ ಕೈ ನಿನ್ನ ಎದೆಗೆ ತಾಕಿದಾಗ ನಿನ್ನ ಮೈಗೆ ರೋಮಾಂಚವೇಳುತ್ತಿತ್ತು. ಆತ ನಿನ್ನ ಭಾಷಣವನ್ನು ಪ್ರಶಂಸಿಸಿದಾಗಲೆಲ್ಲ ಅವನ ಬಗ್ಗೆ ನಿನ್ನಲ್ಲಿ ಅನುರಾಗ ಹೆಚ್ಚುತ್ತಿತ್ತು. ಆ ಜಾತ್ರೆಯ ರಾತ್ರಿ ಅವನೊಂದಿಗೆ ಕೂಡುವ ಸಂದರ್ಭ ಬಂದೀತೇ – ಎಂದೂ

ನೀನೂ ಹಾರಯಿಸುತ್ತಿದ್ದೆ. ಜನರ ಗದ್ದಲದಲ್ಲಿ ಅದು ಸಾಧ್ಯವಾಗಲಿಲ್ಲ. ನಿನಗೆ ಧೈರ್ಯವೂ ಇರಲಿಲ್ಲ.

"ಪುಣೆಯಿಂದ ಕಾನಪುರದವರೆಗೆ ಹಿಂಬಾಲಿಸಿಕೊಂಡು ಬಂದ ಆ ಸೂಟ್‌ವಾಲಾ....ಅವನ ಆಸಕ್ತಿಯನ್ನು ಕಂಡು ನಿನ್ನ ಚಿತ್ತವೂ ಕೆರಳಿದಂತಾಗಿತ್ತು. ಆತನ ಹಿಂದೆ ಹೊರಟುಹೋಗಿ ಜೀವನದ ಸುಖವನ್ನನುಭವಿಸಲೇ ಎಂದೂ ಅಂದುಕೊಂಡಿದ್ದೆ. ಆದರೆ ಅದಕ್ಕೆ ಅಗತ್ಯವಾದ ಧೈರ್ಯ ನಿನ್ನಲ್ಲಿರಲಿಲ್ಲ. ನಿನ್ನ ಗಂಡನ ಬಗ್ಗೆ ನಿನ್ನಲ್ಲಿ ಸ್ವಲ್ಪವೂ ಪ್ರೀತಿಯಿರಲಿಲ್ಲವಾದರೂ ಅಯ್ಯೋ ಪಾಪ ಎನ್ನಿಸುವ ಕನಿಕರವಿತ್ತು. ಮೂರು ಹೊತ್ತೂ ಬಸವಾ ಬಸವಾ ಎನ್ನುವ ಹಸುಳೆಯಂಥ ಅವರನ್ನು ಅಸಹಾಯಕರನ್ನಾಗಿ ಮಾಡಿ ಹೋಗಲು ನಿನಗೆ ಇಷ್ಟವಿರಲಿಲ್ಲ. ನಿನ್ನ ಬಯಕೆಯನ್ನೆಲ್ಲ ಅದುಮಿಕೊಂಡು ಸುಮ್ಮನಿದ್ದುಬಿಟ್ಟಿದ್ದೆ. ಸಿದ್ಧವೀರಸ್ವಾಮಿಯನ್ನು ಕಂಡೊಡನೆ ಇಪ್ಪತ್ತು ವರ್ಷಗಳಿಂದ ಒತ್ತಿ ಹಿಡಿದಿದ್ದ ನಿನ್ನ ಆಸೆ ಆಕಾಂಕ್ಷೆಗಳೆಲ್ಲ ಚಿಲ್ಲನೆ ಚಿಮ್ಮಿದವು. ಅವರು ನಿನ್ನ ಸಮವಯಸ್ಕರು, ದೃಢಕಾಯರು. ನಿನಗೆ ಒಪ್ಪುವಂಥ, ನಿನ್ನ ಮನಮೆಚ್ಚುವಂಥ ಮೈ ಬಣ್ಣ; ಕಣ್ಣು ಮೂಗು ಹುಬ್ಬು ತುಟಿ ಎಲ್ಲಾ ಚೆಂದ ಚೆಂದ; ಹರವಾದ ತುಂಬಿದ ಎದೆ, ತುಟಿಗಳಲ್ಲಿ ಯಾವಾಗಲೂ ಕಾಣುವ ಮುಗುಳುನಗೆ....ನಿನಗೆ ಎಲ್ಲ ರೀತಿಯಿಂದಲೂ ಅನುರೂಪನಾದ ಪುರುಷ ಈತ. ಇಂಥವನನ್ನು ಇದುವರೆಗೂ ಕಂಡಿರಲಿಲ್ಲ ನೀನು. ನಿನಗಾಗಿಯೇ ದೇವರು ಕಳಿಸಿದಂಥ ಈ ಗಂಡಸನ್ನು ಕಂಡಾಗ ನಿನ್ನ ಮನಸ್ಸು ಸಾಗರದ ಕಡೆ ಧಾವಿಸುವ ನದಿಯಂತೆ ಅವರ ಕಡೆ ಧಾವಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

"ಈಗಲಾದರೂ ತಿಳಿಯಿತೇ ನಿನಗೆ? ನಿನ್ನೆಯ ಘಟನೆಯಲ್ಲಿ ಆಶ್ಚರ್ಯಪಟ್ಟುಕೊಳ್ಳುವಂಥದೇನೂ ಇಲ್ಲ. ನಡೆಯಲೇಬೇಕಾದ ಘಟನೆ ನಡೆದುಹೋಗಿದೆ. ನಿಮ್ಮಿಬ್ಬರ ಮಿಲನಕ್ಕೆ ಅನುಕೂಲವಾಗುವಂಥ ಸನ್ನಿವೇಶವೂ ಇಲ್ಲಿದೆ. ಊರಲ್ಲಾದರೋ, ಜನ ನೋಡಿಯಾರೆಂಬ ಭೀತಿಯಿತ್ತು. ಇಲ್ಲಿ ನಿಮ್ಮನ್ನು ಗುರುತಿಸುವವರಾರೂ ಇಲ್ಲ. ರಾತ್ರಿ ಹೊತ್ತು ಕತ್ತಲೆಯ ಮರೆಯಲ್ಲಿ ನೀವು ಏನು ಮಾಡಿದರೂ ಯಾರಿಗೂ ಗೊತ್ತಾಗುವಂತಿಲ್ಲ. ಗಂಡನಂತೂ ಕುಂಭಕರ್ಣನ ಶಿಷ್ಯ. ಎಲ್ಲವೂ ನಿಮಗೆ ಅನುಕೂಲವೇ ಆಗಿದೆ. ಸಾಗಲಿ, ಸಾಗಲಿ. ಮೋಜು ಸಾಗಲಿ. ಈಗ ನನಗೆ ತೃಪ್ತಿಯಾಯಿತು ನೋಡು. ಇದುವರೆಗೂ ಕೇವಲ ಅತೃಪ್ತಿಯಿತ್ತು, ಅಸಮಾಧಾನವಿತ್ತು."

“ಏನು ಅಕ್ಕನವರೆ. ಎದ್ದಿರಾ?” ಅದು ವೀರಯ್ಯನ ಧ್ವನಿ. ಅದರೊಂದಿಗೆ ಮನಸಿನ ಗಿಳಿ ಮೌನ ತಳೆಯಿತು.

[೯]

ಇನ್ನೊಂದು ಹಗಲು – ಇನ್ನೊಂದು ಇರುಳು ಕಳೆದಿವೆ.

ನಿನ್ನೆಯಿರುಳೂ ಅವರೊಂದಿಗೆ ಮಲಗಿಕೊಂಡಿದ್ದೆ. ಆಹ್, ಏನು ಸುಖ, ಏನು ಸಂತೋಷ! ನನ್ನ ಬಾಳಿನ ಅವಧಿಯಲ್ಲಿ ಒಂದು ಸಲವೂ ಇಂಥ ಸುಖವನ್ನುಂಡಿರಲಿಲ್ಲ ನಾನು. ಅವರನ್ನು ಬಿಟ್ಟು ನನ್ನ ಕೋಣೆಗೆ ಬರುವಾಗ ಕಾಲುಗಳೇ ಏಳದಾಗಿದ್ದುವು. ಮನಸ್ಸು ಅವರೊಂದಿಗೇ ಉಳಿದ ಹಾಗಿತ್ತು. ಇದೇ ಪ್ರೇಮವೇ? ಕವಿಗಳು, ಕತೆಗಾರರು, ಕಾದಂಬರಿಕಾರರು ಬಣ್ಣಿಸುವ ದಿವ್ಯ ಪ್ರೇಮ ಇದೇಯೇ?

ಇದು ಕೇವಲ ದೈಹಿಕ ಸಂಬಂಧ, ಇದು ಕಾಮ, ಇದು ತುಚ್ಛ ಎಂದು ಕೆಲವರು ಹೇಳುತ್ತಾರೆ. ಇದು ತುಚ್ಛವಾದರೆ ಇನ್ನಾವುದು ಉಚ್ಚ ಎಂದು ಕೇಳುತ್ತೇನೆ ನಾನು. ಗಾಂಧರ್ವ ವಿವಾಹವೆಂದರೇನೆಂಬುದು ಇದುವರೆಗೂ ತಿಳಿದಿರಲಿಲ್ಲ ನನಗೆ. ಈಗ ಅದರ ಅರ್ಥವಾಗುತ್ತಿದೆ. ಋಷ್ಯಾಶ್ರಮದಲ್ಲಿ ದುಷ್ಯಂತನಿಗೆ ದೇಹವನ್ನರ್ಪಿಸಲಿಲ್ಲವೇ ಶಕುಂತಲಾ? ಇಬ್ಬರೂ ಪರಸ್ಪರರನ್ನು ಒಲಿದಿದ್ದರು. ಆ ಒಲವೇ ಅವರ ವಿವಾಹದ ಕುರುಹಾಯಿತು. ನಾವೂ ಪರಸ್ಪರರನ್ನು ಒಲಿದಿದ್ದೇವೆ. ದುಷ್ಯಂತ ಶಕುಂತಲೆಯರದು ದಿವ್ಯ ಪ್ರೇಮ ವೆಂದಾದರೆ ನಮ್ಮದೂ ದಿವ್ಯಪ್ರೇಮವೇ ಆದಂತಾಗಲಿಲ್ಲವೆ?

ಶಕುಂತಲಾ ಇನ್ನೂ ಕುಮಾರಿಕೆಯಾಗಿದ್ದಳು, ನನ್ನಂತೆ ಅವಳಿಗೊಬ್ಬ ಗಂಡನಿರಲಿಲ್ಲ ನಿಜ. ಆದರೆ ನನಗಿರುವ ಈ ಗಂಡನೂ ಒಬ್ಬ ಗಂಡನೇ? ಹೆಣ್ಣು ಗಂಡನ್ನು ಒಲಿಯುವಂತೆ ನಾನೆಂದಾದರೂ ಅವರನ್ನು ಒಲಿದಿರುವೆನೇ? ನನ್ನ ಒಪ್ಪಿಗೆಯಿಂದ ಆದುದೇನು ಈ ಮದುವೆ? ಮದುವೆಯಲ್ಲಿ ಮುಖ್ಯ ವಾದುದು ಪ್ರೇಮ. ಅದೇ ಇರಲಿಲ್ಲ ನಮ್ಮ ಮದುವೆಯಲ್ಲಿ. ಇಂಥ ಮದುವೆ ಮದುವೆಯೇ ಅಲ್ಲ; ಈತ ನನ್ನ ಗಂಡನೂ ಅಲ್ಲ. ನನ್ನ ಗಂಡನೆಂದರೆ ಇವರೇ– ಈ ಸ್ವಾಮಿ....ಸಿದ್ಧವೀರ ಸ್ವಾಮಿ....

“ನೀನು ನನಗೆ ಹುಚ್ಚು ಹಿಡಿಸಿಬಿಟ್ಟೆ ದೇವೀ!” ಎಂದರವರು ನಿನ್ನೆ ರಾತ್ರಿ.

“ನೀವು ಕೆಡಲು ನಾನೇ ಕಾರಣಳಾದಂತಾಯಿತಲ್ಲ ಸ್ವಾಮಿ?”

“ನೀನೇಕೆ ಆದೀಯೆ ಹುಚ್ಚಿ. ನಮ್ಮನ್ನೆಲ್ಲ ಕುಣಿಸುವ ಸೂತ್ರಧಾರಿಯೆ ಕಾರಣ ನಮ್ಮಿ ಕೂಟಕ್ಕೆ.”

“ನಾವು ಮಾಡುವುದು ತಪ್ಪಲ್ಲವೇ ಸ್ವಾಮಿ?”

“ತಪ್ಪು ಸಮಾಜದ ದೃಷ್ಟಿಯಲ್ಲಿ.”

“ನಿಮ್ಮ ದೃಷ್ಟಿಯಲ್ಲಿ?”

“ನಾನೀಗ ಏನನ್ನೂ ಹೇಳಲಾರೆ. ನೀನು ಜತೆಗಿದ್ದಾಗ ಇಹಲೋಕದ ಅರಿವೇ ಇರುವುದಿಲ್ಲ ನನಗೆ.”

“ನನಗೂ ಅಷ್ಟೆ. ಮುಂದೆ ಹೇಗೆ ಸ್ವಾಮಿ? ನಾವಿಲ್ಲಿ ಬಹಳವಾದರೆ ಎಂಟು ದಿನ ಇರಬಹುದು. ಅನಂತರ ಊರಿಗೆ ಹೊರಡಬೇಕು.”

“ಹೊರಡುವ ದಿನವನ್ನು ಕೊಂಚ ಮುಂದುವರಿಸಿದರಾಯಿತು. ಅದನ್ನೆಲ್ಲ ವೀರಯ್ಯ ನೋಡಿಕೊಳ್ಳುತ್ತಾನೆ.”

“ಆದರೂ ಇಂದಿಲ್ಲ ನಾಳೆ ಹೋಗಲೇಬೇಕಲ್ಲ? ನಿಮ್ಮನ್ನು ಬಿಟ್ಟು ಹೇಗೆ ಹೋಗುವುದು?”

“ನನ್ನನ್ನು ಬಿಟ್ಟೇಕೆ ಹೋಗಬೇಕು? ಕರೆದುಕೊಂಡು ಹೋಗುವ ಯೋಚನೆ ಹೂಡಿದರಾಯಿತು.”

“ನನಗೇನೋ ಆ ವಿಚಾರವಿದೆ, ನಮ್ಮವರಿಗೂ ಇದೆ. ಆದರೆ ಮಠದ ಟ್ರಸ್ಟ್ ಕಮಿಟಿಯವರೆಲ್ಲ ಅದನ್ನೊಪ್ಪಬೇಕಲ್ಲ? ನಮ್ಮವರು ಹೇಳುವಷ್ಟು ಸುಲಭವಲ್ಲ ಆ ಕೆಲಸ....ಬಹಳ ಕಷ್ಟವಾಗುತ್ತದೆ.”

“ಟ್ರಸ್ಟ್ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ ದೇವೀ?”

“ಜಮೀನ್ದಾರ್ ಗುರುಶಾಂತಪ್ಪ ಅಂತ ಒಬ್ಬರು. ಗುಂಡಾಡಯ್ಯ, ಚಿರೂಟಿನ ದುಂಡಪ್ಪ, ಸೋಟಾಧಾರಿ ಜಡಿಯಪ್ಪ ಮತ್ತು ನಮ್ಮವರು. ಮುದುಕಸ್ವಾಮಿ ಅವರ ಚೇರ್ಮನ್ನರು.”

“ಈಗಿನ ಮರಿದೇವರನ್ನು ತೆಗೆದುಹಾಕಲು ಇವರಲ್ಲೆಷ್ಟು ಜನ ಇಷ್ಟ ಪಡುತ್ತಾರೆ?”

“ದುಂಡಪ್ಪ, ಜಡಿಯಪ್ಪ ಮತ್ತು ನಮ್ಮವರು ಈ ಮೂರು ಮಂದಿ. ಮುದುಕ ಸ್ವಾಮಿಯೂ ನಮ್ಮವರ ಕಡೆಗೇ ಇದ್ದಾನೆ. ಗುರುಶಾಂತಪ್ಪ ಗುಂಡಾಡಯ್ಯ ಇಬ್ಬರೇ ಮರಿದೇವರ ಪಕ್ಷದಲ್ಲಿದ್ದಾರೆ.”

"ಈ ಗುಂಡಾಡಯ್ಯ ಅಂದರೆ ಯಾರು ? ಹೆಸರೂ ವಿಚಿತ್ರವಿದೆಯಲ್ಲ ?"

"ವಿಚಿತ್ರವಿದೆ, ನಿಜ. ಅವನ ಮೂಲ ಹೆಸರು ಬೇರೆ – ಹಿಂದೆ ನಮ್ಮಲ್ಲಿ ಬ್ರಿಟಿಷ ಸರಕಾರವಿದ್ದಾಗ ಆತ ಅವರ ಪಕ್ಷ ಕಟ್ಟಿ ಚಳವಳಿಗಳಿಗೆಲ್ಲ ವಿರೋಧ ಮಾಡುತ್ತಿದ್ದ. ಅದರಿಂದ ರೇಗಿದ ತರುಣರು ಅವರಿಗೆ ಗುಂಡಾಡಯ್ಯ ಅಂತ ಹೆಸರು ಕೊಟ್ಟರು. ಅದೇ ಉಳಿದುಹೋಯಿತು."

"ಆತನ ಉದ್ಯೋಗವೇನು ದೇವಿ ?"

"ಅವನದೊಂದು ಪ್ರೆಸ್ ಇದೆ ಊರಲ್ಲಿ. 'ವೀರಶೈವಾವತಾರ' ಅಂತ ಒಂದು ವಾರಪತ್ರಿಕೆಯನ್ನು ಹೊರಡಿಸುತ್ತಾನೆ."

"ಗುರುಶಾಂತಪ್ಪ ?"

ನಾನು ಅವರ ವಿಷಯವನ್ನೆಲ್ಲ ವಿವರಿಸಿದೆ.

"ಈ ಗುಂಡಾಡಯ್ಯ ಗುರುಶಾಂತಪ್ಪ ಇಬ್ಬರೂ ಬಹಳ ಸ್ನೇಹಿತರೇನು ?"

"ಸ್ನೇಹಿತರೇನೂ ಅಲ್ಲ. ಗುರುಶಾಂತಪ್ಪ ಸಾಹುಕಾರರು. ಅವರು ಕೊಡುವ ಕಾಸಿನಾಸೆಗಾಗಿ ಅವರ ಮುಂದೆ ಬಾಲ ಗುಂಡಾಡಿಸುವವನು ಇವ."

"ಸರಿ. ಸರಿ. ಗೊತ್ತಾಯಿತು. ಇಂಥಾ ಸಾಹುಕಾರರಿಗೆ ಇಂಥಾ ಗುಂಡಾಡಯ್ಯಗಳು ಇರಲೇಬೇಕಾಗುತ್ತದೆ." ಎಂದರವರು.

"ಗುರುಶಾಂತಪ್ಪನವರ ಹೆಂಡತಿ ಚೆನ್ನವ್ವ ಅಂತ ಇದಾಳೆ. ಅವಳೂ ಗಂಡನಂಥವಳೇ. ಅವಳ ಅಹಂಕಾರವನ್ನೇನು ಹೇಳಲಿ ? ಅವಳಿಂದಾಗಿಯೆ ನಮ್ಮೂರಿನ ಅಕ್ಕನ ಬಳಗದಲ್ಲಿ ಜಗಳ ಬಂದು ತುಂಬ ಗಲಾಟೆಯಾಯಿತು. ಕೆಲ ದಿನಗಳ ಹಿಂದೆ ಅಲ್ಲಿಯೇ ಇನ್ನೊಂದು ಅಕ್ಕನ ಬಳಗ ಸ್ಥಾಪಿಸುವ ಮೂರ್ಖತನವನ್ನೂ ಮಾಡಿದಳು ಆ ಚೆನ್ನವ್ವ."

"ಒಂದೇ ಊರಿನಲ್ಲಿ ಎರಡು ಅಕ್ಕನ ಬಳಗಗಳೇ ? ಅದ್ಭುತ...ಅದ್ಭುತ..."

"ಅದ್ಭುತವೇನೂ ಇಲ್ಲ ಇದರಲ್ಲಿ. ಇದೆಲ್ಲ ಅವಳ ಅಹಂಕಾರದ ಫಲ. ಇದು ಹೀಗೇಕಾಯಿತು ಗೊತ್ತೇ ಸ್ವಾಮಿ ?"

"ಇಲ್ಲ. ನನಗೇನು ಗೊತ್ತು ?"

"ಮತ್ತೆ ಯಾವಾಗಲಾದರೂ ಹೇಳುತ್ತೇನೆ. ಈಗ ಬೇಡ," ಎಂದು ಹೇಳಿ ಮಾತು ಮುಗಿಸಿದೆ.

[೧೦]

ಮೂರನೆಯ ದಿನ ಸಾಯಂಕಾಲ ನಗರದ ದೇವಸ್ಥಾನಗಳನ್ನು ನೋಡಿ ಬರಲು ಸ್ವಾಮಿಗಳೊಂದಿಗೆ ಹೊರಟೆ.

"ನಾನು ಹೀಗೆ ಹಾಸಿಗೆ ಹಿಡಿದೆ. ಉಪಾಯವಿಲ್ಲ. ಬಸವನ ಇಚ್ಛೆ. ನೀವು ಇವಳಿಗೆಲ್ಲ ತೋರಿಸಿಕೊಂಡು ಬನ್ನಿ ಸ್ವಾಮಿಗಳೇ," ಎಂದರು ನನ್ನ ಪತಿ. ವೀರಯ್ಯನೂ ನಮ್ಮ ಜತೆಗೆ ಹೊರಟಿದ್ದ. ಕೊಂಚ ದೂರ ಹೋದ ಬಳಿಕ ಸ್ವಾಮಿಗಳು ಅವನನ್ನು ಬೇರೆಡೆಗೆ ಸಾಗಹಾಕಿದರು.

ಹಳೆಯ ಕಾಲದ ದೇವಾಲಯಗಳನ್ನು ಸಂದರ್ಶಿಸಿ, ದೇವರಿಗೆ ಕೈ ಮುಗಿದು, ಕಾಯಿ ಒಡೆದು, ಕಾಣಿಕೆ ಸಲ್ಲಿಸಿ ನಾವಿಬ್ಬರೂ ಕಂಟೋನ್ಮೆಂಟಿನ ಕಡೆ ತಿರುಗಾಡುತ್ತ ಹೋದೆವು. ದಾರಿ ತುಳಿಯುತ್ತಿದ್ದ ಹಾಗೆ ನಾನು ಅಕ್ಕನ ಬಳಗದ ಕತೆಯನ್ನೆಲ್ಲ ಸ್ವಾಮಿಗಳಿಗೆ ಹೇಳತೊಡಗಿದ್ದೆ.

"ನಮ್ಮೂರಲ್ಲಿ ಮೊದಲು ಅಕ್ಕನ ಬಳಗವಿರಲಿಲ್ಲ. ಹೆಂಗಸರೆಲ್ಲಾ ಮನೆ ಹಿಡಿದುಕೊಂಡು ತಣ್ಣಗೆ ಕುಳಿತಿದ್ದರು. ಅವರಿಗೆ ಏನಾದರೊಂದು ಚಟುವಟಿಕೆ ಬೇಕಾಗಿತ್ತು. ವರ್ಷಕ್ಕೊಮ್ಮೆ ಅಕ್ಕನ ಜಯಂತಿ, ಬಸವಜಯಂತಿ ನಡೆಯುತ್ತಿದ್ದವಾದರೂ ಅವುಗಳಿಂದ ಯಾರಿಗೂ ತೃಪ್ತಿಯಿರಲಿಲ್ಲ.

"ಒಂದು ಸಲ ಅಕ್ಕನ ಜಯಂತಿಯಲ್ಲಿ ಭಾಷಣ ಮಾಡಲು ಸೊಲ್ಲಾಪುರದ ಸುಶಿಕ್ಷಿತ ಸ್ತ್ರೀಯೊಬ್ಬರು ಬಂದಿದ್ದರು. ಅಕ್ಕನ ಬಳಗವನ್ನು ಸ್ಥಾಪಿಸಬೇಕೆಂದು ಸೂಚಿಸಿದವರು ಅವರೇ. ನಮ್ಮವರಿಗೂ ಬಲು ದಿನದಿಂದ ಈ ವಿಚಾರವಿತ್ತು. ಬಸವಣ್ಣನವರ ಕಾಲದಂತೆ ಈಗಲೂ ನಮ್ಮ ಸಮಾಜದ ಸ್ತ್ರೀಯರು ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಮುಂದೆ ಬಂದು ಕೆಲಸ ಮಾಡಬೇಕೆಂದು ಅವರು ಆಗಾಗ ಹೇಳುತ್ತಲೇ ಇದ್ದರು. ಅಕ್ಕನ ಬಳಗವೊಂದು ಅತೀ ಅವಶ್ಯವೆಂದು ಮಠದ ಮರಿಸ್ವಾಮಿಯೂ ಹೇಳುತ್ತಿದ್ದ. ಸರಿ. ಸೊಲ್ಲಾಪುರದ ಭಾಷಣಕಾರ್ತಿ ಬಂದ ದಿನವೇ ಹೆಂಗಸರಿಗೆಲ್ಲ ಹುರುಪು ಬಂದು ಅಂದೇ ನಮ್ಮೂರಲ್ಲಿ ಬಳಗ ಹುಟ್ಟಿಕೊಂಡಿತು. ನನ್ನನ್ನೇ ಅಧ್ಯಕ್ಷಿಣಿಯನ್ನಾಗಿ ಮಾಡಲಾಯಿತು. ನಮ್ಮೂರ ಕನ್ನಡಸಾಲೆಯ ಮಾಸ್ತರರ ಹೆಂಡತಿ ಶಿವಲಿಂಗವ್ವನೂ ಅಷ್ಟಿಷ್ಟು ಓದಿಕೊಂಡಾಕೆ. ಆಕೆ ಕಾರ್ಯದರ್ಶಿನಿಯಾದಳು. ಕಾರ್ಯಸಮಿತಿಯೂ ನಿಯಮಿಸಲ್ಪಟ್ಟಿತು."

"ಚೆನ್ನವ್ವ ಅಂತ ನಿನ್ನೆ ಹೇಳಿದೆಯಲ್ಲ - ಅವರೂ ಇದ್ದರಷ್ಟೇ ಸಮಿತಿಯಲ್ಲಿ?" ಎಂದು ಸ್ವಾಮಿ ಕೇಳಿದರು.

"ಇದ್ದಳು. ಅವಳೆಲ್ಲಿ ಹೋಗುತ್ತಾಳೆ? ತಾನೇ ಅಧ್ಯಕ್ಷಿಣಿಯಾಗಬೇಕೆಂದು ಅವಳ ಮನಸ್ಸಿನಲ್ಲಿತ್ತು. ಕೂಡಿದ ಹೆಂಗಳೆಯರೆಲ್ಲ ನನ್ನನ್ನು ಆರಿಸಿದರೆ ನಾನೇನು ಮಾಡಲಿ? ಬೇಡ ಅನ್ನಲೇ? ತನಗೆ ಅಧ್ಯಕ್ಷಪಟ್ಟ ಸಿಗಲಿಲ್ಲ ಅಂತ ಅವಳು ಅಂದಿನಿಂದಲೇ ಸೆಟೆದುಕೊಂಡಳು. ಮುಂದಿನ ಸಲವಾದರೂ ಆ ಜಾಗವನ್ನು ಹಿಡಿಯಬೇಕೆಂದು ಲೆಕ್ಕ ಹಾಕಿ ಅಂದಿನಿಂದಲೇ ಸದಸ್ಯೆಯರನ್ನು ತನ್ನ ಕಡೆ ಒಲಿಸಿಕೊಳ್ಳತೊಡಗಿದಳು.

ಸ್ವಾಮಿಗಳು ನಗುತ್ತಾ ಕೇಳಿದರು. "ನೀವು ಅಕ್ಕನ ಬಳಗ ಸ್ಥಾಪಿಸಿದ್ದು ಯಾತಕ್ಕಾಗಿ? ಅಧ್ಯಕ್ಷ ಸ್ಥಾನಕ್ಕಾಗಿ ಬಡಿದಾಡುವುದಕ್ಕೋ ಏನು?"

ನನಗೂ ನಗು ಬರದಿರಲಿಲ್ಲ. "ನಾನಾದರೂ ಏನು ಮಾಡಲಿ ಹೇಳಿರಿ. ತಾನಾಗಿ ಬಂದ ಸ್ಥಾನವನ್ನು ಬಿಡಲು ಬರುವಂತಿರಲಿಲ್ಲ. ಆ ಚೆನ್ನವ್ವನಿಗೆ ನನ್ನ ಬಗ್ಗೆ ಹೊಟ್ಟೆಯುರಿ. ಹೆಂಗಸರಲ್ಲಿ ಎರಡು ಪಕ್ಷಗಳಾಗುತ್ತಿದ್ದುದನ್ನು ಕಂಡು ನನ್ನ ಮನಸ್ಸು ತಳಮಳಿಸತೊಡಗಿತ್ತು. ಅದನ್ನು ತಪ್ಪಿಸಲು ಶಕ್ತಿಮೀರಿ ಯತ್ನಿಸಿದೆ. ಆದರೆ ಆ ಚೆನ್ನವ್ವ ಏನೇನೋ ತಂತ್ರ ಹೂಡಿ ಹೆಂಗಸರ ಮನಸ್ಸು ಕೆಡಿಸಿಬಿಟ್ಟಿದ್ದಳು. ದಿನವೂ ಒಬ್ಬಳನ್ನು ತನ್ನ ಮನೆಗೆ ಊಟಕ್ಕೆ ಕರೆಯುವುದು, ಅವಳಿಗೆ ಸೀರೆ ಕುಬಸ ಕೊಡುವುದು ಹೀಗೆಲ್ಲ ಮಾಡಿ ತನ್ನ ಪಕ್ಷವನ್ನು ಬಲಪಡಿಸಿಕೊಳ್ಳತೊಡಗಿದಳು."

"ನೀನೂ ಹಾಗೆ ಮಾಡಿರಬಹುದಲ್ಲ?" ಎಂದು ಸ್ವಾಮಿ ಕೇಳಿದರು.

ಹೌದು. ನಾನೂ ಹಾಗೆಯೇ ಮಾಡಿದ್ದೆ. ಚೆನ್ನವ್ವನಲ್ಲಿಗೆ ಹೋಗಿ ಸೀರೆ ಕುಬಸ ಪಡೆದುಕೊಂಡು ಊಟ ಹೊಡೆದು ಬಂದವರನ್ನೆಲ್ಲ ನಾನೂ ಕರೆಯಿಸಿಕೊಂಡು ಅವರಿಗೆಲ್ಲ ಹೋಳಿಗೆಯೂಟ ಮಾಡಿಸಿ ಕಾಣಿಕೆ ಕೊಟ್ಟು ಕಳಿಸಿದ್ದೆ. ಅವರೆಲ್ಲರೂ ಬಡವರು. ಶ್ರೀಮಂತರಾದ ನಮ್ಮಿಂದ ಪುಕ್ಕಟೆಯಾಗಿ ಸೀರೆ ಕುಬುಸ ಸಿಕ್ಕಿದರೆ ಅವರೇಕೆ ಬಿಟ್ಟಾರು? ಮರುವರ್ಷವೂ ನಾನೇ ಅಧ್ಯಕ್ಷಿಣಿಯಾಗಿ ಆರಿಸಿ ಬಂದಿದ್ದೆ. ಚೆನ್ನವ್ವ ವಿಶ್ವಪ್ರಯತ್ನ ಪಟ್ಟಿದ್ದಳು. ಹತ್ತಿಪ್ಪತ್ತು ಹೆಂಗಸರಿಗೆ ಒಬ್ಬೊಬ್ಬರಿಗೂ ಹತ್ತು ಹತ್ತು ರೂಪಾಯಿ ಲಂಚ ಕೊಟ್ಟು ತನಗೆ ಮತ ಹಾಕುವಂತೆ ಕೇಳಿಕೊಂಡಿದ್ದಳು. ಮುನಿಸಿಪಾಲ್ಟಿ, ಲೋಕಲ್ ಬೋರ್ಡ್ಗ, ಶಾಸನಸಭೆಗಳಿಗೆ ಚುನಾವಣೆ ನಡೆಯುವ ಹಾಗೇ ನಮ್ಮ ಅಕ್ಕನ ಬಳಗದ

ಅಧ್ಯಕ್ಷ ಚುನಾವಣೆಯೂ ನಡೆದಿತ್ತು. ಒಂದು ವಾರ ಯಾರಿಗೂ ಬಿಡುವಿರಲಿಲ್ಲ. ಊರಿನ ಹೆಂಗಸರ ಬಾಯಲ್ಲೆಲ್ಲ ಅದೇ ಮಾತು. 'ವೋಟು ಯಾರಿಗೆ ಹಾಕುವುದು? ಚೆನ್ನಮ್ಮನಿಗೋ, ಮಹಾದೇವಮ್ಮನಿಗೋ?' ಎಂಬ ಚರ್ಚೆಯೇ ಎಲ್ಲೆಲ್ಲೂ. ಶಿವಲಿಂಗವ್ವ ನನಗಾಗಿ ಬಹಳ ದುಡಿದಿದ್ದಳು. ಕೊನೆಗೂ ನಾನೇ ಜಯಶಾಲಿಯಾಗಿದ್ದೆ. ಚೆನ್ನವ್ವನಿಗೆ ಮೂಗು ಕೊಯ್ದಂತಾಗಿತ್ತು. ಮುಂದಿನ ವರ್ಷ ಬಳಗದ ಸಭೆಗಳಿಗೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದಳಾಕೆ. ಆದರೂ ಒಳಗೊಳಗೇ ಕಾರಸ್ಥಾನ ನಡೆಸುವುದನ್ನು ನಿಲ್ಲಿಸಿರಲಿಲ್ಲ. ಆಕೆ ಎಷ್ಟು ಲಾಗ ಹಾಕಿದರೂ ಮೂರು ವರ್ಷಗಳವರೆಗೆ ಅವಳದೇನೂ ನಡೆಯದೆ ನಾನೇ ಅಧ್ಯಕ್ಷಳಾಗುತ್ತ ಬಂದ್ದಿದೆ. ನನಗೂ ಅದೊಂದು ಹುಚ್ಚೇ ಹಿಡಿದಂತಾಗಿತ್ತು. ದೇಹದಲ್ಲಿ ಜೀವವಿರುವವರೆಗೆ ಬಳಗದ ಅಧ್ಯಕ್ಷಸ್ಥಾನ ಬಿಡಬಾರದು – ಅದರಲ್ಲೂ ಚೆನ್ನವ್ವನಿಗಂತೂ ಖಂಡಿತ ಬಿಡಬಾರದು – ಎಂದು ನಿರ್ಧರಿಸಿದ್ದೆ.

ಈ ವಿಷಯವನ್ನೆಲ್ಲ ನಾನು ಸ್ವಾಮಿಗಳಿಗೆ ಹೇಳಲಿಲ್ಲ. ಇದನ್ನೆಲ್ಲ ಹೇಗೆ ಹೇಳುವುದು? ನನ್ನ ಬಗ್ಗೆ ಅವರೇನು ತಿಳಿದುಕೊಂಡಾರು! ಸರಿ. ಎಷ್ಟನ್ನು ಹೇಳಬಹುದೋ ಅಷ್ಟನ್ನು ಮಾತ್ರ ಹೇಳಿದೆ. "ನಾಲ್ಕನೆಯ ವರುಷ ಅಧ್ಯಕ್ಷ ಚುನಾವಣೆಯಾಗುವ ಕಾಲ ಬಂತು – ಅಂದರೆ ಅದು ಮೊನ್ನೆ ಮೊನ್ನೆ, ನಾವಿತ್ತ ಪ್ರವಾಸ ಬರುವುದಕ್ಕೆ ಮೊದಲು. ಈ ಸಲವಾದರೂ ತಾನು ಅಧ್ಯಕ್ಷಿಣಿಯಾಗಬೇಕೆಂದು ಚೆನ್ನವ್ವ ನಿರ್ಧರಿಸಿ ಬಿರುಸಾಗಿ ಕೆಲಸ ಸಾಗಿಸಿದಳು. ಮಠದ ಮರಿಸ್ವಾಮಿಯನ್ನೂ ಅವನ ತಂಗಿಯನ್ನೂ ತನ್ನ ಪಕ್ಷಕ್ಕೆ ಸೇರಿಸಿಕೊಂಡು ನಮ್ಮ ವಿರುದ್ಧ ಅಪಪ್ರಚಾರಕ್ಕಾರಂಭಿಸಿದಳು."

"ಮರಿಸ್ವಾಮಿಗೊಬ್ಬ ತಂಗಿಯಿರುವಳೇ? ಎಲ್ಲಿದ್ದಾಳೆ ಆಕೆ?" ಎಂದು ಸ್ವಾಮಿ ಪ್ರಶ್ನಿಸಿದರು.

"ಮಠದ ಆವಾರದಲ್ಲಿ ಕೆಲವು ಮನೆಗಳಿವೆ. ಮಠದ ಕೆಲಸ ಮಾಡುವ ಜಂಗಮರ ಕುಟುಂಬಗಳು ಅಲ್ಲಿ ನೆಲಸಿವೆ. ಈತ ನಮ್ಮ ಮಠಕ್ಕೆ ಮರಿಯಾದ ಬಳಿಕ ಇವನ ತಂಗಿ ತಾಯವ್ವ ಅಲ್ಲಿ ಬಂದು ಸೇರಿಕೊಂಡಳು. ಅವಳು ಸ್ವಾಮಿಯ ತಂಗಿಯೆಂಬುದು ಬಹಳ ದಿನ ಗೊತ್ತಿರಲಿಲ್ಲ ನಮಗೆ. ಅಕಸ್ಮಾತ್ತಾಗಿ ಒಂದು ದಿನ ಗೊತ್ತಾಯಿತು."

"ಈ ತಾಯವ್ವನಿಗೆ ವಯಸ್ಸೆಷ್ಟು?"

"ವಯಸ್ಸೇ? ಇರಬಹುದು ನನ್ನಷ್ಟೇ."

"ಮದುವೆಯಾಗಿಲ್ಲವೇ?"

"ಆಗಿದ್ದಿತಂತೆ. ಅದೊಂದು ಕತೆಯೇ ಇದೆ. ಚಿಕ್ಕ ವಯಸ್ಸಿನಲ್ಲಿ ಜಂಗಮಯ್ಯನೊಬ್ಬನಿಗೆ ಇವಳನ್ನು ಕಟ್ಟಿದ್ದರಂತೆ. ಮುಂದೆ ಆತ ಓದಿ ಪದವೀಧರನಾಗಿ ಅಮೇರಿಕೆಗೆ ಹೋಗಿಬಂದು ಬಡೋದಾ ಸರಕಾರದಲ್ಲಿ ದೊಡ್ಡ ಕೆಲಸಕ್ಕೆ ಸೇರಿದನಂತೆ. ಪರದೇಶಕ್ಕೆ ಹೋಗಿ ಬಂದವನಿಗೆ ಈ ಹಳ್ಳಿಯ ಹೆಣ್ಣಿನ ಸಹವಾಸ ಹೇಗೆ ಹಿಡಿಸೀತು? ಇವಳು ತವರುಮನೆಯಲ್ಲೇ ಉಳಿದಳು. ಆತ ಬಡೋದೆಯಲ್ಲಿಯೆ ಪದವೀಧರ ಸ್ತ್ರೀಯೊಬ್ಬಳನ್ನು ಮದುವೆ ಮಾಡಿಕೊಂಡು ಸುಖವಾಗಿ ಸಂಸಾರ ಮಾಡತೊಡಗಿದ. ತಾಯುವ್ವನನ್ನು ಬಿಟ್ಟ ಹಾಗೇ ಆಯಿತು. ಅವಳ ತವರುಮನೆಯವರು ಬಹಳ ಬಡವರು. ತಂದೆ ತಾಯಿ ಸತ್ತುಹೋಗಿದ್ದರು. ಅಣ್ಣ ಕೋರಾನ್ನ ಭಿಕ್ಷದಿಂದ ಜೀವಿಸುತ್ತಿದ್ದ. ಅಣ್ಣನ ಹೆಂಡತಿ ಇವಳನ್ನಿಟ್ಟುಕೊಳ್ಳಲಿಲ್ಲ. "ದುಡಿದು ತಿನ್ನು ನಡೆ ಹೋಗು" ಎಂದು ಹೇಳಿ ಹೊರಗೆ ಹಾಕಿದಳು. ಇವಳೆಲ್ಲಿಗೆ ಹೋಗಬೇಕು, ಏನು ದುಡಿಯಬೇಕು? ಸರಿ. ಇನ್ನೊಬ್ಬ ಅಣ್ಣ ನಮ್ಮ ಮಠದಲ್ಲಿ ಮರಿಯಾಗಿದ್ದನಲ್ಲ– ಅವನ ಆಶ್ರಯಕ್ಕೆ ಬಂದು ನಿಂತಳು. ಕಾವಿಯ ಬಣ್ಣದ ಸೀರೆ, ಕುಪ್ಪಸ ಧರಿಸತೊಡಗಿದಳು. ದೊಡ್ಡ ವಿರಾಗಿಣಿಯಂತೆಯೆ ನಟಿಸತೊಡಗಿದಳು."

"ನಿಜಕ್ಕೂ ವಿರಾಗಿಣಿಯಾಗಿರಲಿಲ್ಲವೆ?"

"ಎಲ್ಲಿಯ ವಿರಾಗಿಣಿ ಸ್ವಾಮಿ? ಅವಳಣ್ಣ ಆ ಮರಿಯೂ ದೊಡ್ಡ ಡಾಂಬಿಕ, ಅವನ ತಂಗಿ ಇವಳೂ ಡಾಂಭಿಕಳೇ. ಅವನಿಗೂ ಬೇರೆ ಗತಿಯಿರಲಿಲ್ಲ, ಇವಳಿಗೂ ಬೇರೆ ಗತಿಯಿರಲಿಲ್ಲ. ಸರಿ. ಇಬ್ಬರೂ...." ಎಂದು ಹೇಳಿ ಅಷ್ಟಕ್ಕೇ ಮಾತು ನಿಲ್ಲಿಸಿದೆ.

ಸ್ವಾಮಿಗಳಿಗೆ ಅರ್ಥವಾಗಿರಬೇಕು. "ಇಬ್ಬರೂ....ಹಾಂ? ಹಾಗೆ? ಅಂಥ ಕೆಲಸ?" ಎಂದು ಪ್ರಶ್ನಿಸಿದರು.

"ತಾವು ಮಾಡುವ ಕೆಲಸ ಯಾರಿಗೂ ತಿಳಿಯದೆಂದು ಅವರ ಕಲ್ಪನೆಯಿದ್ದಿತೊ ಏನೊ. ಆದರೆ ಕದ್ದು ಮಾಡುವುದು ಎಷ್ಟು ದಿನ ಸಾಧ್ಯ, ಹೇಳಿರಿ. ಒಂದಿಲ್ಲೊಂದು ದಿನ ಕಳವು ಹೊರಬಿದ್ದೇ ಬೀಳುವುದಲ್ಲವೆ? ಇವರು ಮಾಡುವ ಅನಾಚಾರ ಜನರಿಗೆಲ್ಲ ಗೊತ್ತಾಯಿತು. ಒಬ್ಬರಿಂದ ಇನ್ನೊಬ್ಬರಿಗೆ ಹೋಗಿ ಸುದ್ದಿ ಊರಲ್ಲೆಲ್ಲಾ ಹರಡಿತು. ನಾಲ್ಕು ಜನ ಕೂಡಿದಾಗ ಪಿಸುಮಾತು

ನಡೆಯುತ್ತಿತ್ತೇ ಹೊರತು ಈ ಬಗ್ಗೆ ಯಾರೂ ಏನನ್ನೂ ಮಾಡಲು ಮುಂದಾಗ ಲಿಲ್ಲ. ಚೆನ್ನಮ್ಮನಂತೂ ಅವರ ಪಕ್ಷವನ್ನೆತ್ತಿ ಹಿಡಿದು ವಾದಿಸತೊಡಗಿದಳು. ಸರಿ. ಮರಿಸ್ವಾಮಿಯೂ ಅವನ ತಂಗೆವ್ವನೂ ಅವಳ ಪಕ್ಷ ಹಿಡಿದು ನನ್ನನ್ನೇ ನಿಂದಿಸತೊಡಗಿದರು; ಈ ವರ್ಷ ನನ್ನನ್ನೇ ಬಳಗದ ಅಧ್ಯಕ್ಷಸ್ಥಾನದಿಂದ ತೆಗೆದುಹಾಕಿ ಚೆನ್ನವ್ವನನ್ನು ಆರಿಸಬೇಕೆಂದು ಹೆಂಗಳೆಯರಿಗೆಲ್ಲ ಉಪದೇಶ ತೊಡಗಿದರು. ಚುನಾವಣೆಯ ದಿನವೂ ಬಂತು. ಅವರ ಆಟವೇನೂ ನಡೆಯದೆ ಮತ್ತೆ ನಾನೇ ಅಧ್ಯಕ್ಷಳಾಗಿ ಆರಿಸಿ ಬಂದೆ. ಇದರಿಂದ ಅವರ ಹೊಟ್ಟೆಯಲ್ಲಿ ಖಾರ ಕಲಸಿದಂತಾಗಿ ನನ್ನನ್ನೂ ನನ್ನ ಪಕ್ಷಕ್ಕೆ ಸೇರಿದವರನ್ನೂ ಹೀನಾಮಾನವಾಗಿ ನಿಂದಿಸತೊಡಗಿದರು. ನನ್ನ ಬಲಗೈಯಂತಿರುವ ಶಿವಲಿಂಗವ್ವನ ಬಗ್ಗೆ ಸುಳ್ಳು ಕತೆಯೊಂದನ್ನು ಹುಟ್ಟಿಸಿದರು. ಚೆನ್ನವ್ವನ ಗಂಡ ಗುರುಶಾಂತಪ್ಪ ಅವಳನ್ನು ಇಟ್ಟುಕೊಂಡಿರುವನೆಂದು ಪುಕಾರು ಮಾಡಿದರು. ಪಾಪ. ಶಿವಲಿಂಗವ್ವ ಬಲು ಒಳ್ಳೆಯವಳು. ಗಂಡ ಬಡಶಾಲಾಮಾಸ್ತರು, ಅವರಿಗೆ ಬಹಳ ಅವಮಾನವಾಯಿತು. ಶಿವಲಿಂಗವ್ವ ಮನೆ ಬಿಟ್ಟು ಹೊರಡ ದಂತಾಯಿತು. ಇದನ್ನು ನೋಡಿ ಸಿಟ್ಟಿಗೆದ್ದ ನಮ್ಮ ಪಕ್ಷದವಳೊಬ್ಬಳು ಚೆನ್ನಮ್ಮನನ್ನು ಮರಿಸ್ವಾಮಿ ಇಟ್ಟುಕೊಂಡಿರುವನೆಂದೂ ಅದರಿಂದಲೇ ಆತ ಅವರ ಪಕ್ಷ ವಹಿಸಿರುವನೆಂದೂ ಸುದ್ದಿ ಹರಡಿಸಿದಳು."

"ಎರಡೂ ಸುಳ್ಳು ಸುದ್ದಿಗಳೇ!"

"ಹೌದು. ಸುಳ್ಳು ಸುದ್ದಿಗಳೇ. ಅಕ್ಕನ ಬಳಗದ ಸಮಾಜಸೇವೆಯ ಉದ್ದೇಶ ಎಲ್ಲೋ ಮರೆಯಾಗಿ ಒಬ್ಬರ ಬಗ್ಗೆ ಇನ್ನೊಬ್ಬರು ಸುಳ್ಳು ಸುದ್ದಿ ಹರಡಿಸುವುದೇ ಒಂದು ದೊಡ್ಡ ಕೆಲಸವಾದಂತಾಯಿತು. ಇಷ್ಟರಲ್ಲಿ ಗುಂಡಾಡಯ್ಯ ಬೇರೆ ಚೆನ್ನವ್ವನಿಂದ ಸಾಕಷ್ಟು ಹಣ ತಿಂದು ಅವಳ ಪಕ್ಷಕ್ಕೇ ಅಂಟಿಕೊಂಡು ನನ್ನನ್ನು ಟೀಕಿಸತೊಡಗಿದ. ನನ್ನ ಬಗ್ಗೆ ಯದ್ವಾತದ್ವಾ ಲೇಖನಗಳು ಪ್ರಕಟ ವಾಗತೊಡಗಿದುವು. ಅವುಗಳಿಗೆ ನಾನು ಬರೆದು ಕಳಿಸಿದ ಉತ್ತರಗಳನ್ನು ಆತ ಪ್ರಕಟಿಸಲಿಲ್ಲ. ಊರಲ್ಲಿ ಇರುವುದೆಂದರೆ ಅದೊಂದೇ ಪತ್ರಿಕೆ. ಅದೇ ನಮಗೆದುರಾಗಿ ನಿಂತಾಗ ಚಿಂತೆ ಹುಟ್ಟುವುದು ಸಹಜವಲ್ಲವೇ? ಸರಿ. ಇದಕ್ಕೇನಾದರೂ ಉಪಾಯ ಮಾಡೋಣವೆಂದುಕೊಂಡು ಕಳ್ಳೀಕಾಯಿ ನಗರ ದಲ್ಲಿ ಹೊರಡುತ್ತಿದ್ದ 'ಲಿಂಗವೀರ' ಪತ್ರಿಕೆಗೆ ಈ ಬಗ್ಗೆ ಲೇಖನ ಕಳಿಸ ತೊಡಗಿದೆ. ಅವರೂ ಪ್ರಕಟಿಸುವರೋ ಇಲ್ಲವೋ ಎಂಬ ಶಂಕೆಯಿತ್ತು.

ಆವರವರು ಪ್ರಕಟಿಸಿದರು, ಕಳಿಸಿದ್ದವುಗಳನ್ನೆಲ್ಲ ಪ್ರಕಟಿಸಿದರು. ಅವುಗಳಿಗೆ ಚೆನ್ನವ್ವ ಗುಂಡಾಡಯ್ಯನ 'ವೀರಶೈವಾವತಾರ'ದಲ್ಲಿ ಉತ್ತರ ಕೊಡತೊಡಗಿದಳು. ನಾನು 'ಲಿಂಗವೀರ'ದಲ್ಲಿ ಪ್ರತ್ಯುತ್ತರ ಕೊಡತೊಡಗಿದೆ ಎಂದೂ ನಮ್ಮೂರಿಗೆ ಬರದಿದ್ದ 'ಲಿಂಗವೀರ' ಇದರಿಂದಾಗಿ ನಮ್ಮಲ್ಲಿ ತುಂಬ ಖರ್ಚಾಗತೊಡಗಿತು. ಕೋಲಾಹಲವೋ ಕೋಲಾಹಲ. ಮೂರು ನಾಲ್ಕು ತಿಂಗಳ ಕಾಲ ಗುಲ್ಲೋಗುಲ್ಲು."

"ಅಂತೂ ಬಹಳ ಮಜಾ ಆಗಿರಬೇಕು!" ಎಂದರು ಸ್ವಾಮಿಗಳು.

"ಏನು ಮಜಾನೋ ಬಿಡಿರಿ. ನಮ್ಮ ಮನೆಯ ಹುಳುಕನ್ನು ನಾವೇ ತೆಗೆದು ಬಯಲಿಗಿಟ್ಟಂತಾಯಿತು. ನಮ್ಮ ವಾದವಿವಾದವನ್ನು ಕಂಡು ಎಲ್ಲರೂ ನಗುವವರೇ. ನನಗೂ ನಗೆ ಬರುತ್ತಿತ್ತು. ಆದರೇನು ಮಾಡುವುದು, ಒಮ್ಮೆ ಒಂದು ಕೆಲಸಕ್ಕೆ ನಿಂತರೆ ಅದು ಮುಗಿಯುವ ತನಕ ವಿರಮಿಸುವಂತಿಲ್ಲ. ಅದು ನನ್ನ ಸ್ವಭಾವ. ಚೆನ್ನವ್ವನೂ ನನ್ನಷ್ಟೇ ಹಟವಾದಿ. ಕಡೆಗೆ ಗುಂಡಾಡಯ್ಯನ ಸಲಹೆಯ ಪ್ರಕಾರ ಅವಳು ಇನ್ನೊಂದು ಅಕ್ಕನ ಬಳಗ ಸ್ಥಾಪಿಸಿ ತಾನು ಅದಕ್ಕೆ ಅಧ್ಯಕ್ಷಳಾಗಿ ಆ ಪ್ರಕಾರ ಪತ್ರಿಕೆಗಳಲ್ಲಿ ಪ್ರಕಟಿಸಿಕೊಂಡು ಗೆದ್ದೆನೆಂದು ಎದೆ ತಟ್ಟಿಕೊಂಡಳು. ಮರಿಸ್ವಾಮಿ ಅವಳ ಬಳಗಕ್ಕೆ ಮಠದಲ್ಲಿ ಕಚೇರಿ ಹೂಡಿಕೊಟ್ಟ. ಒಂದೇ ಮಠದಲ್ಲಿ ಒಂದೇ ದಿನ ಒಂದೇ ವೇಳೆಗೆ ಎರಡು ಬಳಗಗಳೂ ಬೇರೆ ಬೇರೆ ಸಭೆ ಸೇರಿಸತೊಡಗಿದವು. ಅಲ್ಲಿ ನಾಲ್ಕು ಮಂದಿ, ಇಲ್ಲಿ ನಾಲ್ಕು ಮಂದಿ. ನಮ್ಮ ಸಭೆಗೆ ಬರುವ ಹೆಂಗಸರನ್ನು ಬಲವಂತದಿಂದ ತಮ್ಮ ಸಭೆಗೆ ಕರೆದೊಯ್ಯುವ ಪ್ರಯತ್ನವೂ ನಡೆಯಿತು. ಅದರಿಂದಾಗಿ ಒಂದು ದಿನ ಮಠದಲ್ಲೇ ಕೈ ಕೈ ಜಗಳವೂ ಆಯಿತು. ಇನ್ನು ಪ್ರಸಂಗ ವಿಕೋಪಕ್ಕೆ ಹೋಗುವುದೆಂದು ಬಗೆದು ಆ ಎರಡನೆಯ ಬಳಗಕ್ಕೆ ಆಶ್ರಯ ಕೊಡಬಾರದೆಂದು ಮರಿಸ್ವಾಮಿಗೆ ಹೇಳಿಸಿ ನೋಡಿದೆವು. ವಿಷಯ ಪಂಚರೆದುರಿಗೆ ಹೋಯಿತು. ಜಡಿಯಪ್ಪ, ದುಂಡಪ್ಪ ಮತ್ತು ನಮ್ಮವರು ಮೂವರೂ ಕೂಡಿ ಅವನಿಗೆ ಬುದ್ಧಿ ಹೇಳಿದರು. ಆತ ಕೇಳಲಿಲ್ಲ. ಸರಿ. ಅವನನ್ನೇ ತೆಗೆದುಹಾಕಬೇಕೆಂದೂ ಬೇರೊಬ್ಬ ಯೋಗ್ಯ ಮರಿಸ್ವಾಮಿಯನ್ನು ಹುಡುಕಬೇಕೆಂದೂ ಮಾತಾಡಿಕೊಂಡು ಸುಮ್ಮನಾದರು. ಈ ಸುದ್ದಿ ಹೇಗೋ ಮರಿಸ್ವಾಮಿಗೆ ಗೊತ್ತಾದಾಗ ಆತ ಪ್ರಾಣ ಹೋದರೂ ಮಠ ಬಿಡುವುದಿಲ್ಲ, ನನ್ನನ್ನು ಹೇಗೆ ತೆಗೆಯುತ್ತಾರೋ ನೋಡುತ್ತೇನೆ-ಎಂದು ಮೀಸೆ ತಿರುವಿದನಂತೆ. ಗುರುಶಾಂತಪ್ಪ,

ಗುಂಡಾಡಯ್ಯ ಮತ್ತು ಕೆಲವರು ಗೂಂಡಾಗಳು ಅವನ ಕಡೆಗಿದ್ದಾರೆ. ಏನಾಗುವುದೋ ನೋಡಬೇಕು."

"ಊರಲ್ಲಿ ಜನರ ಅಭಿಪ್ರಾಯವೇನಿದೆ?"

"ಮರಿಸ್ವಾಮಿ ಸಡಿಲುಕಚ್ಚೆಯವನೆಂಬುದು ಗೊತ್ತಾದಂದಿನಿಂದ ಯಾರಿಗೂ ಅವನ ಬಗ್ಗೆ ಆದರವುಳಿದಿಲ್ಲ. ಗುಂಡಾಡಯ್ಯನಿಗಂತೂ ಮೊದಲಿನಿಂದಲೂ ಊರಲ್ಲಿ ಕವಡಿಯ ಬೆಲೆಯೂ ಇಲ್ಲ. ಗುರುಶಾಂತಪ್ಪ ಶ್ರೀಮಂತ, ಕುಡುಕರ ಗುಂಪಿನ ನಾಯಕ, ಹುಂಬ, ಪಟಿಂಗ ಎಂಬ ಕಾರಣದಿಂದ ಜನ ಅವನಿಗೆ ಅಂಜಿ ನಡೆಯುವರಾದರೂ ಆತನ ಬಗ್ಗೆ ಗೌರವಭಾವ ಮಾತ್ರ ಒಬ್ಬರಿಗೂ ಇಲ್ಲ. ಅವನನ್ನು ಯಾರಾದರೂ ಫಜೀತಿ ಮಾಡಿ ಹಾದಿಗೆ ತರಬೇಕು ಎಂದು ಜನ ಒಳಗೊಳಗೇ ಬಯಸುತ್ತಿರುತ್ತಾರೆ."

"ದುಂಡಪ್ಪ, ಜಡಿಯಪ್ಪಗಳ ಬಗ್ಗೆ?"

"ದುಂಡಪ್ಪ ನಮ್ಮ ಭಾಗದ ಎಂ. ಎಲ್. ಎ. ಇದ್ದಾರೆ. ಜಡಿಯಪ್ಪ ಅಂದರೆ ತರುಣ ತಂಡದ ಪುಢಾರಿ. ಉಡಾಳರೆಲ್ಲ ಅಂಜುವುದು ಜಡಿಯಪ್ಪನೊಬ್ಬನಿಗೇ. ಆತ ರಸ್ತೆಯಲ್ಲಿ ಹಾಯ್ದು ಹೊರಟನೆಂದರೆ ಕುಡುಕರೆಲ್ಲ ತಲೆ ಕೆಳಕ್ಕೆ ಬಾಗಿಸಿಕೊಂಡು ಕೂತಿರುತ್ತಾರೆ."

"ಸರಿ. ನಿಮ್ಮ ಯಜಮಾನರ ಬಗ್ಗೆ?"

"ಇಂಥ ಸಂಭಾವಿತರೇ ಇಲ್ಲರೀ ನಮ್ಮ ಊರಲ್ಲಿ. ಗುಂಡಾಡಯ್ಯ, ಗುರುಶಾಂತಪ್ಪ, ಮರಿಸ್ವಾಮಿ ಈ ಮೂವರನ್ನು ಬಿಟ್ಟರೆ ಇವರನ್ನು ವಿರೋಧಿಸುವವರೇ ಇಲ್ಲ ಅಲ್ಲಿ. ಅಬ್ಬ, ಎಷ್ಟು ಒಳ್ಳೆಯವರಪ್ಪ, ಎಂಥ ಸಾಧುಪ್ರಾಣಿ ಅಂತ ಎಲ್ಲರೂ ಹೊಗಳುತ್ತಿರುತ್ತಾರೆ."

ಸ್ವಾಮಿಗಳು ನಗುತ್ತಾ ಹೇಳಿದರು: "ಒಳ್ಳೆ ಸಾಧುಪ್ರಾಣಿಯೆ. ಅವರು ಮನುಷ್ಯರಲ್ಲಿ ಹುಟ್ಟದೆ ಹಸುವಾಗಿ ಹುಟ್ಟಿದ್ದನೆ ಒಳ್ಳೆಯದಾಗುತ್ತಿತ್ತು, ಅಲ್ಲವೆ?"

"ಈಗಲಾದರೂ ಏನು, ಹಸುವಿನಂತೇ ಇದಾರಲ್ಲ?"

"ಅಂತೇ ನಿನ್ನ ಗತಿ ಹೀಗಾಗಿದೆ."

"ಏನು ಮಾಡುವುದು ಹೇಳಿರಿ. ನಮ್ಮ ಅದೃಷ್ಟ. ನಿಜವಾಗಿ ಅವರಷ್ಟು ಒಳ್ಳೆಯವರು ಬಹಳ ವಿರಳ ಈಗಿನ ಕಾಲದಲ್ಲಿ. ಅವರು ನನ್ನ ಪತಿಯಾಗದೆ ಇನ್ನಾರಾದರೂ ಆಗಿದ್ದಲ್ಲಿ ನಾನು ಅವರ ಬಗ್ಗೆ ಪೂಜ್ಯಭಾವನೆಯಿಟ್ಟುಕೊಂಡು ಅವರನ್ನು ಕಂಡಾಗ ಕಾಲು ಮುಟ್ಟಿ ನಮಸ್ಕರಿಸಬಹುದಾಗಿತ್ತು. ಒಂದು

ವೇಳೆ ಇವರೇ ನನ್ನ ತಂದೆಯಾಗಿದ್ದರೆ ನನ್ನ ಭಾಗ್ಯವನ್ನು ಕೊಂಡಾಡುತ್ತಿದ್ದೆ. ಆದರೆ....ಆದರೆ...."

"ದುಃಖವಾಗುತ್ತದೆಯೇ ಮಹಾದೇವೀ ?"

"ಇಲ್ಲ. ದುಃಖವೇಕೆ ?"

"ನನ್ನ ಸಂಗದಲ್ಲಿ ನೀನು ಕೆಟ್ಟೆ ಅಂತ...."

"ನಿಜ ಹೇಳಲೇ ಸ್ವಾಮಿ? ನಾನು ಕೆಟ್ಟೆ ಅಂತ ಅನ್ನಿಸುತ್ತಲೇ ಇಲ್ಲ ನೋಡಿರಿ."

"ಸರಿಯಾಗಿ ಹೇಳಿದೆ. ಪ್ರೇಮದಲ್ಲಿ ಪಾಪವೇನೂ ಇಲ್ಲ. ನಮ್ಮಿಬ್ಬರನ್ನು ದೇವರೇ ಒಂದುಗೂಡಿಸಿದ್ದಾನೆ. ನನಗಾಗಿ ಹುಟ್ಟಿದ ಹೆಣ್ಣು ನೀನು, ನಿನಗಾಗಿ ಹುಟ್ಟಿದ ಗಂಡು ನಾನು. ಇಷ್ಟು ದಿನ ಪರಸ್ಪರರನ್ನು ಹುಡುಕುತ್ತಿದ್ದೆವು, ಇಲ್ಲಿ, ಈ ಪರಪ್ರಾಂತದಲ್ಲಿ ಸಂಧಿಸಿದೆವು. ಇನ್ನು ಎಂದೆಂದೂ ಅಗಲದಿರೋಣ," ಎನ್ನುತ್ತಾ ಅವರು ನನ್ನನ್ನು ತೋಳುಗಳಲ್ಲಿ ಹಿಡಿದುಕೊಂಡರು.

ಸಂಜೆಯ ಮಂದ ಬೆಳಕು ನಿಧಾನವಾಗಿ ಮಾಯವಾಗುತ್ತ ಕತ್ತಲೆ ಕವಿಯತೊಡಗಿತ್ತು. ಆಕಾಶದಲ್ಲಿ ತಾರೆಗಳು ಒಂದೊಂದಾಗಿ ಮೊಗದೋರ ತೊಡಗಿದ್ದುವು.

೩

ಸಿದ್ಧವೀರಸ್ವಾಮಿ

[೧]

ಪುಣೆಯವರೆಗೆ ನಾವೆಲ್ಲರೂ ಕೂಡಿಯೆ ಬಂದೆವು: ನಾವು ಅಂದರೆ ನಾನು, ಮಹಾದೇವಿ, ಸೆಟ್ಟರು.

ಅರ್ಥಾತ್ – ವೀರಯ್ಯ ಅಲ್ಲಿಯೆ ಉಳಿದ, ವೇಶೀ ನಗರದಲ್ಲಿ. "ಈ ಸಲ ನಿನ್ನನ್ನು ಮರೆಯುವುದಿಲ್ಲ ವೀರೂ. ಖಂಡಿತ ಮರೆಯುವುದಿಲ್ಲ. ಕೆಲಸ ಸಾಧಿಸಿದ ಬಳಿಕ, ಕೈಯಲ್ಲಿ ಹಣ ಬಂದ ಬಳಿಕ ನಿನಗೆ ಖಂಡಿತ ಕಳಿಸುತ್ತೇನೆ," ಎಂದು ಹೇಳಿ ಬಂದೆ. ಪಾಪ, ಆತ ನನಗಾಗಿ ತುಂಬ ಶ್ರಮವಹಿಸಿ ದುಡಿದಿದ್ದಾನೆ. ನನಗೆ ಒಳ್ಳೆಯ ಕಾಲ ಬಂದಾಗ ಅವನನ್ನು ಮರೆಯಬಾರದು. ಆದರೇನು ಮಾಡುವುದು. ನನ್ನದೊಂದು ದುರಭ್ಯಾಸ – ಮರೆತುಬಿಡುವುದು. ನನ್ನ ತಂದೆತಾಯಿ ಅಣ್ಣತಮ್ಮಂದಿರ ನೆನಪೇ ಇರುವುದಿಲ್ಲವಂತೆ. ಇನ್ನು ವೀರಯ್ಯ....

ಪುಣೆಯಿಂದ ಸೆಟ್ಟರು ಪತ್ನಿಯೊಂದಿಗೆ ಎಕ್ಸ್‌ಪ್ರೆಸ್ ಗಾಡಿ ಹತ್ತಿ ಮೊದಲೇ ಹೊರಟರು. ನಾನು ಮೇಲ್ ಹತ್ತಿದೆ. ಕಳ್ಳೀಕಾಯಿ ನಗರದಲ್ಲಿಳಿದು ಶಾಸ್ತ್ರಿಗೆ ಕೆಲವೊಂದು ಸಂಗತಿಗಳನ್ನು ತಿಳಿಸಿ, ಅವರ ಸಲಹೆ ಪಡೆಯಬೇಕಾಗಿದ್ದಿತು. ಇಂಥ ವಿಷಯಗಳಲ್ಲಿ ಬಲು ಸೂಕ್ಷ್ಮಬುದ್ಧಿ ಶಾಸ್ತ್ರಿಯದು.

ಮಿರಜ....ಚಿಕ್ಕೋಡಿ....ಹುಕ್ಕೇರಿರೋಡ್....ಕನ್ನಡ ನಾಡಿನಲ್ಲಿ ಓಡ ತೊಡಗಿತ್ತು ರೈಲು. ಡಬ್ಬಿಯಲ್ಲಿ ಕನ್ನಡ ಮಾತು ಕೇಳಬರತೊಡಗಿತ್ತು. ಮೂಲೆಯಲ್ಲಿ ಕಾಶ್ಮೀರೀ ಶಾಲಿನಲ್ಲಿ ಮುಖ ಮುಚ್ಚಿಕೊಂಡು ಕುಳಿತಿದ್ದೆ ನಾನು. ಅಕಸ್ಮಾತ್ತಾಗಿ ಯಾರಾದರೂ ನನ್ನನ್ನು ಗುರುತಿಸಿದರೇನು ಗತಿ ಎಂದು ಭಯ ವಾಗುತ್ತಿತ್ತು. ನನ್ನ ಭಾಗ್ಯ. ಯಾರೂ ನನ್ನ ಕಡೆ ಕಣ್ಣೆತ್ತಿ ನೋಡಲಿಲ್ಲ. ನಾನಿಳಿಯಬೇಕಾಗಿದ್ದ ನಿಲ್ದಾಣವೂ ಬಂತು. ಕೈಯಲ್ಲೊಂದು ಚೀಲ ಹಿಡಿದು ಕೊಂಡು ಇಳಿದು ಹೊರಗಡೆ ಬಂದೆ. ಜನ ಹೋಗುತ್ತಿತ್ತು. ಬರುತ್ತಿತ್ತು. ಯಾರೊಬ್ಬರೂ ನನ್ನನ್ನು ಗುರುತಿಸಲಿಲ್ಲ. "ಬದುಕಿದೆ ಜೀವವೇ" ಎಂದು ಕೊಳ್ಳುತ್ತ ಕುದುರೆ ಗಾಡಿಯೊಂದನ್ನು ಕೂಗಿ, ಹತ್ತಿ ಹೊರಟೆ. ಹಾದಿಯಲ್ಲಿ ಹರಿಹರನೊ ಅವನ ತಮ್ಮಂದಿರೋ ನೋಡಿಯಾರೆಂದುಕೊಂಡು ಮುಖವನ್ನು ಶಾಲಿನಲ್ಲಿ ಮುಚ್ಚಿಕೊಂಡಿದ್ದೆ.

'ಲಿಂಗವೀರ' ಕಚೇರಿಯ ಮುಂದೆ ಗಾಡಿ ನಿಂತಾಗ ಒಳಗಡೆ ಶಾಸ್ತ್ರಿ ಯಿದ್ದಂತೆ ಕಾಣಿಸಲಿಲ್ಲ. ಆಫೀಸು ರೂಮಿನಲ್ಲಿ ಕುರ್ಚಿಯ ಮೇಲೆ ಹುಡುಗ ನಂತಿದ್ದ ವ್ಯಕ್ತಿಯೊಂದು ಕುಳಿತು ಏನನ್ನೊ ಬರೆಯುತ್ತಿತ್ತು. ಆತನನ್ನು ಈ ಮೊದಲು ಎಲ್ಲಿಯೊ ಒಮ್ಮೆ ನೋಡಿದಂತೆ ನೆನಪಿತ್ತು ನನಗೆ. ಆತ ಇಂಥವನೇ ಎಂಬುದು ಮಾತ್ರ ಒಡನೆಯೆ ಗೊತ್ತಾಗಲಿಲ್ಲ.

ಗಾಡಿಯವನಿಗೆ ಹಣ ಕೊಟ್ಟು ನಾನು ಪ್ರೆಸ್ಸಿನ ಅಂಗಳದಲ್ಲಿ ಅಡಿ ಯಿರಿಸುತ್ತಲೂ ಅಡುಗೆಯಮನೆಯ ಕಡೆಯಿಂದ ಹುಡುಗಿಯೊಂದು ಓಡಿ ಬಂದಿತು. ನಾನು ಶಾಸ್ತ್ರಿ ಕೂಡಿ ಸ್ಥಾಪಿಸಿದ್ದ ಅನಾಥ ಬಾಲ-ಬಾಲಿಕಾಶ್ರಮಕ್ಕೆ ಬಂದು ಸೇರಿದ ಪರದೇಶಿ ಹುಡುಗಿ ಅದು. ಮನೆಯಲ್ಲಿ ಕೆಲಸ ಮಾಡುತ್ತ ಊಟ ಮಾಡಿಕೊಂಡು ಬಿದ್ದಿರಲಿ - ಎಂದು ಶಾಸ್ತ್ರಿ ಅವಳನ್ನು ತಂದು ಇಟ್ಟು ಕೊಂಡಿದ್ದ. ಎಂಟು ಹತ್ತು ವರ್ಷದ ಬಾಲೆ. ಚಿಕ್ಕಪುಟ್ಟ ಕೆಲಸ ಮಾಡಿ ಕೊಂಡು ಇರುತ್ತಿದ್ದಳು. ಶಾಸ್ತ್ರಿಯೂ ಅವನ ಪತ್ನಿಯೂ ಅವಳನ್ನು "ಪರದೇಶೀ," ಎಂದೇ ಕರೆಯುತ್ತಿದ್ದರು. ಹೆಸರು ತಮಾಷೆಯಾಗಿತ್ತು. ನಾನೂ ಸಹ ಹಾಗೇ ಕರೆಯುತ್ತಿದ್ದೆ.

"ಸ್ವಾಮಿ ಬಂದರು. ಸ್ವಾಮಿ ಬಂದರು," ಎಂದು ಕೂಗಿದಳು ಪರದೇಶಿ.

ಆಫೀಸು ರೂಮಿನಲ್ಲಿನ ಯುವಕನ ಲಕ್ಷ್ಯ ಇತ್ತ ತಿರುಗಿತು. ನನ್ನನ್ನು ಕಂಡೊಡನೆಯೆ ಆತ ಗುರುತಿಸಿದನೇನೊ. ಎದ್ದು ಬಂದು ಕೈ ಮುಗಿಯುತ್ತ- "ಏನು ಸ್ವಾಮಿಜಿ, ಎಲ್ಲ ಕ್ಷೇಮವೆ? ಎಲ್ಲಿಂದ ಬಂದಿರಿ?" ಎಂದು ಕೇಳಿದ.

ನನ್ನನ್ನು ಗುರುತಿಸುವವರ ಕಣ್ಣಿಗೆ ಬೀಳಬಾರದೆಂಬುದೇ ನನ್ನ ಆಶಯ ವಾಗಿದ್ದಿತು. ಯಾರಿಗೂ ಗೊತ್ತಾಗದಂತೆ ಬಂದು ಶಾಸ್ತ್ರಿಯನ್ನು ಕಂಡು ಯಾರಿಗೂ ಗೊತ್ತಾಗದಂತೆ ಹೊರಟುಹೋಗಬೇಕೆಂದು ನಾನು ಲೆಕ್ಕ ಹಾಕಿದ್ದೆ. ಮೊದಲನೆಯ ಮೆಟ್ಟಲಿಗೇ ಅಪಶಕುನ....ಈ ಯುವಕ ನನ್ನನ್ನು ಗುರುತಿಸಿಯೇ ಬಿಟ್ಟ. ಈತ ಯಾರು? ಯಾರು ? ಎಲ್ಲೋ ನೋಡಿದ್ದೇನೆ ಇವನನ್ನು....ಎಲ್ಲಿ? ಬೆಂಗಳೂರಿನಲ್ಲೋ? ಮೈಸೂರಿನಲ್ಲೋ? ಧಾರವಾಡದಲ್ಲೋ? ಎಲ್ಲಿರಬಹುದು? ಹಾಳು ಮರೆವು....ಥೂ....ಥೂ.... ನೆನಪಾಗಲೊಲ್ಲದು....

"ಏನು ಸ್ವಾಮಿಜಿ, ನನ್ನ ಗುರುತು ಸಿಗಲಿಲ್ಲವೇ ತಮಗೆ? ನಾನು.... ನಾನು....ಕುಟ್ಟೋಜಿಶನಿ," ಎಂದು ಹೇಳುತ್ತಾ ಆತ ನನ್ನನ್ನು ವಿಲಕ್ಷಣ ರೀತಿ ಯಿಂದ ದಿಟ್ಟಿಸತೊಡಗಿದ.

ಅಂಗಳದಲ್ಲಿಯೆ ಕುಸಿದುಬೀಳುವೆನೇನೊ ಎನ್ನಿಸಿತು ನನಗೆ. ಕಾಲುಗಳಲ್ಲಿನ ಶಕ್ತಿಯೆಲ್ಲ ಎಲ್ಲಿಯೋ ಮಾಯವಾದಂತಾಯಿತು. ನಾಲಗೆ ಒಣಗಿತು. ಕುಟ್ಟೋಶನಿ....ಕುಟ್ಟೋಶನಿ....ನಾನು ಬರುತ್ತಲೂ ಕಾಣಿಸಿಕೊಳ್ಳಬೇಕೇ ಈ ಶನಿ....ಇವನಿಗೆ ಗೊತ್ತಾದರೆ ಊರಿಗೆಲ್ಲ ಗೊತ್ತಾದ ಹಾಗೆ. ಕರ್ನಾಟಕಕ್ಕೆಲ್ಲ ಗೊತ್ತಾದ ಹಾಗೆ. ಹರಿಹರನೂ ಇವನೂ ಖಾಸಾ ಸ್ನೇಹಿತರು. ತರುಣರೆಲ್ಲ ಇವನ ಸ್ನೇಹಿತರು. ಇವನ ಪರಿಚಯವಿಲ್ಲದ ಜನರಿಲ್ಲ, ಇವನು ತಿರುಗದ ಊರಿಲ್ಲ. ಕರ್ನಾಟಕದ ಎಲ್ಲ ನಗರಗಳಲ್ಲೂ ಒಂದೊಂದು ಎರಡು ವರ್ಷ ಕಳೆದಿದ್ದಾನೆ. ಕನ್ನಡ ಪತ್ರಿಕೆಗಳಲ್ಲೆಲ್ಲ ಕೆಲಸ ಮಾಡಿದ್ದಾನೆ. ತಾನೇ ಒಂದೆರಡು ಪತ್ರಿಕೆಗಳನ್ನೂ ಹೊರಡಿಸಿದ, ಬೆಂಗಳೂರಿನಲ್ಲಿ. ಅದರಲ್ಲಿ ಪೂರಾ ಹಾನಿಯಾಗಲು ಪತ್ರಿಕೋದ್ಯಮಕ್ಕೆ ಶರಣು ಹೊಡೆದು ಇತ್ತ ಬಂದುಬಿಟ್ಟ. ಭಯಂಕರ ಲೇಖಕ. ಇದೊಂದು ಭೂತವೇ ಸೈ. ಸೈತಾನ್....ಸೈತಾನನ ಮರಿ....ಹಿಂದಿಲ್ಲ ಮುಂದಿಲ್ಲ, ತಂದೆತಾಯಿ ಯಾರೂ ಇಲ್ಲ, ಮದುವೆಯಿಲ್ಲ, ಸಂಸಾರದ ಜವಾಬ್ದಾರಿಯಿಲ್ಲ, ಏನೂ ಇಲ್ಲ. ಯಾರಿಗೂ ಅಂಜುವುದಿಲ್ಲ. ಎಲ್ಲರನ್ನೂ ಅಂಜಿಸುತ್ತಾನೆ. ಅಯ್ಯೊ....ಇವನೇಕೆ ಇಲ್ಲಿ ವಕ್ರಿಸಿದ?

"ಏನು ಸ್ವಾಮಿಜಿ, ಯಾವಾಗ ಬಂದಿರಿ?" ಎಂದು ಪ್ರಶ್ನಿಸುತ್ತಾ ಲಲಿತಮ್ಮ ಬಂದು ನನ್ನನ್ನು ಆ ಸೈತಾನನ ದವಡೆಯಿಂದ ಪಾರುಮಾಡಿದಳು. ಶಾಸ್ತ್ರಿಯ ದ್ವಿತೀಯ ಪತ್ನಿ ಲಲಿತಮ್ಮ. ಕರಡೆಪ್ಪಸೆಟ್ಟರು ಮಹಾದೇವಮ್ಮ ಇದ್ದ ಹಾಗೆ ಇವರ ಜೋಡಿ. ಸೆಟ್ಟರೇನೋ ಒಳ್ಳೆಯವರು, ಪಾಪ. ಶಾಸ್ತ್ರಿ ಮಾತ್ರ ರಸಿಕತನದಲ್ಲಿ ನನ್ನನ್ನೂ ಮೀರಿಸುವವ. ಲಲಿತಮ್ಮ ಇನ್ನೂ ತರುಣಿ. ಗೌರವರ್ಣ, ಸುಂದರ ಮುಖ, ಒನಪು ಒಯ್ಯಾರ ಎಲ್ಲಾ ಉಂಟು. ರಸಿಕತನದಲ್ಲಿ ಶಾಸ್ತ್ರಿಗೇನೂ ಹಿಂದೆ ಬಿದ್ದವಳಲ್ಲ ಆಕೆ.

"ಈಗತಾನೆ ಬಂದೆ ಲಲಿತಮ್ಮ. ಎಲ್ಲಾ ಕ್ಷೇಮವೇ?" ಎನ್ನುತ್ತ ನಾನು ಒಳಗೆ ಧಾವಿಸಿದೆ. ಆಫೀಸು ರೂಮಿನ ಆಚೆಯೇ ಶಾಸ್ತ್ರಿಯ ಸಂಸಾರದ ಮನೆ. ಮಲಗುವ ಕೋಣೆಗೆ ಬಂದು ಚೀಲವನ್ನು ಮಂಚದಮೇಲೊಗೆದು ಶಾಲಿನಿಂದ ಗಾಳಿ ಬೀಸಿಕೊಳ್ಳುತ್ತ, ಉಸಿರುಗರೆಯುತ್ತ ಕುಳಿತುಕೊಂಡೆ. ಮುಖದ ಮೇಲೆಲ್ಲ ಬೆವರು ಮೂಡಿತ್ತು.

ಲಲಿತಮ್ಮ ತಂಬಿಗೆಯಲ್ಲಿ ನೀರು ತಂದು – "ಏಳಿರಿ, ಕೈಕಾಲು ತೊಳೆದುಕೊಳ್ಳಿರಿ," ಎಂದಳು.

"ಸ್ವಲ್ಪ ದಣಿವಾರಿಸಿಕೊಳ್ಳುತ್ತೇನೆ ತಡೆಯಮ್ಮ, ಹಾಳು ಪ್ರವಾಸ. ಬಹಳ ಆಯಾಸವಾಗಿದೆ."

"ಏನು ಬಹಳ ದೂರದಿಂದ ಬಂದಿರಾ ಸ್ವಾಮಿಜಿ?"

"ನಿನ್ನೆ ರಾತ್ರಿ ಪುಣೆಯಲ್ಲಿ ರೈಲು ಹತ್ತಿದೆ."

"ರಾತ್ರಿಯೆಲ್ಲಾ ನಿದ್ದೆಯಿಲ್ಲವೇನೋ."

"ಎಲ್ಲಿಯ ನಿದ್ದೆ ಲಲಿತಮ್ಮ? ಕೂತುಕೊಳ್ಳಲು ಸ್ಥಳ ಸಿಕ್ಕಿದ್ದೇ ದೊಡ್ಡ ಮಾತು. ಇನ್ನು...."

"ಥರ್ಡ್ ಕ್ಲಾಸಿನಲ್ಲೇ ಬಂದಿರಾ?"

"ಮತ್ತೆ? ಫಸ್ಟ್ ಕ್ಲಾಸಿನಲ್ಲಿ ಬರಲು ಹಣವೆಲ್ಲಿಂದ ಬರಬೇಕು?"

"ಹೋಗುವಾಗ ಮೋಟಾರು ಕಾರಿದ್ದಿತಲ್ಲ?"

"ಕಾರಿತ್ತು, ಸಾವಿರಾರು ರೂಪಾಯಿ ಹಣವಿತ್ತು, ಎಲ್ಲ ಇತ್ತು; ಇಂದಲ್ಲ ನಾಳೆ ಮತ್ತೆ ಎಲ್ಲವೂ ಬಂದೀತು. ಈಗ ಮಾತ್ರ ಏನೂ ಇಲ್ಲ. ಯಾರೋ ಪುಣ್ಯವಂತರು ಒಂದು ಟಿಕೀಟು ತೆಗೆಯಿಸಿಕೊಟ್ಟರೆಂದು ಇಲ್ಲಿಯ ತನಕ ಬರಲು ಸಾಧ್ಯವಾಗಿದೆ. ನಿಮ್ಮದೆಲ್ಲ ಹೇಗೆ ನಡೆದಿದೆ ಲಲಿತಮ್ಮ? ಶಾಸ್ತ್ರಿಗಳೆಲ್ಲಿ? ಕೀರ್ತನವೋ, ಭಾಷಣವೋ, ಪತ್ರಿಕಾ ಪ್ರಚಾರವೋ ಏನು ನಡೆದಿದೆ?"

ತಂಬಿಗೆಯನ್ನು ಮೇಜಿನ ಮೇಲಿರಿಸಿ ಲಲಿತಮ್ಮ ಬಾಗಿಲಿಗೊರಗಿ ನಿಂತುಕೊಂಡಳು, ಕೈಗಳೆರಡನ್ನೂ ಮೇಲಕ್ಕೆತ್ತಿ ಆಕಳಿಸುತ್ತ, ಹುಬ್ಬುಗಳನ್ನು ಸಂಕುಚಿತಗೊಳಿಸುತ್ತ ಹೇಳಿದಳು: "ಈಗ ಅದೇನೂ ಇಲ್ಲ ಸ್ವಾಮಿಜಿ. ಎಲ್ಲಾ ಎಂದೋ ನಿಂತುಹೋಯಿತು. ಆ ಹರಿಹರ ಎಲ್ಲಾ ಹಾಳುಮಾಡಿದ. ಈಗ ಇವರನ್ನು ಕೀರ್ತನಕ್ಕೆ ಕರೆಯುವವರೂ ಇಲ್ಲ, ಭಾಷಣಕ್ಕೆ ಕರೆಯುವವರೂ ಇಲ್ಲ. ಪತ್ರಿಕೆಗೆ ಚಂದಾದಾರರೂ ಸಿಗುತ್ತಿಲ್ಲ, ಪ್ರೆಸ್ಸಿಗೆ ಕೆಲಸವೂ ಇಲ್ಲ."

"ಎಲ ಎಲಾ," ಎನ್ನುತ್ತ ನಾನು ಮಂಚದಿಂದೆದ್ದು ಕೊಟಡಿಯಲ್ಲಿ ಅಡಿಯಿಡುತ್ತ – "ಹೀಗಾಯಿತೇ? ಇಷ್ಟೆಲ್ಲ ಆಯಿತೇ? ಹರಿಹರ ಪ್ರಕಟಿಸಿದ ಆ ಜಾಹೀರಾತಿನಿಂದ ಇಷ್ಟೆಲ್ಲ ಅನಾಹುತವಾಯಿತೇ? ಪಾಪ....ಪಾಪ....ನಿಮಗೆ ಬಹಳ ಹಾನಿಯಾಗಿರಬಹುದು. ಎಲ್ಲಿ, ಶಾಸ್ತ್ರಿಗಳು ಕಾಣುವುದಿಲ್ಲವಲ್ಲ?"

ಲಲಿತಮ್ಮ ಕೊಂಕುನಗೆಯಿಂದ ಹೇಳಿದಳು: "ಇಲ್ಲೆಲ್ಲಿ ಕಾಣಬೇಕು ಅವರು? ಅವರು ಕಾಣುವುದು ಅವರ ಪ್ರೇಯಸಿಯ ಜತೆಗೆ."

"ಯಾವ ಪ್ರೇಯಸಿ?"

"ಇನ್ನಾರು? ಅವಳೇ, ಆ ಲೀಲಾವತಿ," ಎಂದು ಹೇಳುತ್ತಾ ಲಲಿತಮ್ಮ ಕೊರಳು ಬಳುಕಿಸಿ ನನ್ನನ್ನು ಓರೆನೋಟದಿಂದ ನೋಡಿದಳು. ಹಾಗೆ ಓರೆ ನೋಟ ಬಿಟ್ಟಾಗಲೆಲ್ಲ ಲಲಿತಮ್ಮ ಬಹಳ ಸುಂದರಿಯಾಗಿ ಕಾಣುತ್ತಾಳೆ.

ನಾನು ಸಂಕೋಚದಿಂದ ದೃಷ್ಟಿಯನ್ನು ತಗ್ಗಿಸಿದೆ. ನನ್ನ ಸಂಕೋಚಕ್ಕೆ ಕಾರಣವಿದ್ದಿತಲ್ಲ? ಲೀಲಾವತಿ ಎಂದರೆ ನಮ್ಮ ಅನಾಥ ಬಾಲ-ಬಾಲಿಕಾಶ್ರಮ ದಲ್ಲಿದ್ದ ಶಿಕ್ಷಿಕೆ, ವಿಧವೆ ಶಾಸ್ತ್ರಿಯೇ ಅವಳನ್ನು ಕರೆದುತಂದು ಅಲ್ಲಿ ಕೆಲಸಕ್ಕೆ ಸೇರಿಸಿದ್ದ. ನಾನು ಆಶ್ರಮದಲ್ಲಿದ್ದಾಗಲೆಲ್ಲ ಆಕೆ ನನ್ನ ಪ್ರೇಯಸಿಯೂ ಆಗಿರು ತ್ತಿದ್ದಳು. ಆ ವಿಷಯ ಲಲಿತಮ್ಮನಿಗೂ ಗೊತ್ತಿದ್ದಿತು.

"ಈ ಮಾತುಗಳು ಈಗಲೇ ಬೇಡ ಲಲಿತಮ್ಮ. ಹೊರಗೆ ಆ ಕುಟ್ಟೋಶನಿ ಇದ್ದಾನೆ," ಎಂದು ನಾನು ಮೆಲ್ಲಗಿನ ಧ್ವನಿಯಲ್ಲಿ ಹೇಳಿದೆ.

"ಇದ್ದರೇನಾಯ್ತು? ಅವರೇನು ಮಾಡುತ್ತಾರೆ?"

"ಅಯ್ಯೋ, ನಿನಗೆ ಅವನ ವಿಷಯ ಗೊತ್ತಿಲ್ಲವೆಂದು ತೋರುತ್ತೆ. ಅವನೇನು ಮಾಡಲಿಕ್ಕಿಲ್ಲ? ಏನನ್ನಾದರೂ ಮಾಡಬಲ್ಲ. ಅದೊಂದು ರಾಕ್ಷಸ ವ್ಯಕ್ತಿ. ಅವನನ್ನೇಕೆ ಸೇರಿಸಿದ್ದೀರಿ ಇಲ್ಲಿ?"

"ಅವರದೊಂದು ಕಾದಂಬರಿ ಅಚ್ಚಾಗುತ್ತಿದೆ ನಮ್ಮ ಪ್ರೆಸ್ಸಿನಲ್ಲಿ. ಪ್ರೂಫು ನೋಡಲು ಬರುತ್ತಾರೆ."

"ಆ ಕಾದಂಬರಿ ಅಚ್ಚಾಗುವುದರೊಳಗಾಗಿ ಆತ ನಿಮ್ಮ ಮೇಲೇ ಇನ್ನೊಂದು ಕಾದಂಬರಿ ಬರೆದುಬಿಡುತ್ತಾನೆ, ಆಯಿತು. ಅಂಥವರನ್ನು ಸೇರಿಸುವುದುಂಟೇ ಯಾರಾದರೂ?"

"ನಮ್ಮವರಿಗೂ ಅವರಿಗೂ ಬಹಳ ವಿಶ್ವಾಸವಿದ್ದಂತೆ ತೋರುತ್ತದೆ. ಅಲ್ಲದೆ ಈಚೆಗೆ ಪ್ರೆಸ್ಸಿಗೆ ಕೆಲಸವೂ ಇರಲಿಲ್ಲ. ಅವರು ತಾವಾಗಿಯೆ ಬಂದು ಕೇಳಿದಾಗ ನಿರಾಕರಿಸಲಾರದೆ ತೆಗೆದುಕೊಂಡಿರಬೇಕು."

"ಸರಿ. ಸರಿ. ಪುಸ್ತಕದ ಮುದ್ರಣ ಮುಗಿಯುವುದರೊಳಗಾಗಿ ನಿಮ್ಮ ಗುಟ್ಟುಗಳನ್ನೆಲ್ಲ ತಿಳಿದುಕೊಂಡು ಇನ್ನೊಂದು ಕಾದಂಬರಿ ಬರೆದು ಹರಿಹರನ ಪ್ರೆಸ್ಸಿನಲ್ಲಿ ಅದನ್ನು ಅಚ್ಚುಮಾಡಿಸುತ್ತಾನೆ. ಆಯಿತೇ?"

"ಅಯ್ಯೋ, ಹೀಗಿದೆಯೆ?" ಎಂದಳು ಲಲಿತಮ್ಮ.

"ಅಯ್ಯೋ, ಹಾಗೇ ಇದೆ," ಎಂದೆ ನಾನು.

ಇಬ್ಬರೂ ಪರಸ್ಪರರ ಮುಖ ನೋಡುತ್ತ ಕುಳಿತುಕೊಂಡೆವು.



ಲಲಿತಮ್ಮನೊಡನೆ ಸ್ವಾಮಿ

"ಸ್ನಾನಕ್ಕೆ ನೀರು ತಯಾರಿದೆ ಸ್ವಾಮಿಜಿ," ಎಂದು ಕೂಗಿದಳು ಪರದೇಶಿ.

[೨]

ಮಧ್ಯಾಹ್ನ ಪ್ರೆಸ್ಸಿನ ಕೆಲಸಗಾರರೆಲ್ಲ ಊಟಕ್ಕೆ ಹೋದ ಬಳಿಕ, ಕುಟ್ಟೋಶನಿಯೂ ತೊಲಗಿದ ಬಳಿಕ ನಾನು ಊಟಕ್ಕೆ ಕುಳಿತುಕೊಂಡೆ. ಲಲಿತಮ್ಮ ನನಗಾಗಿ ಸೇವಿಗೆ ಪಾಯಸ ಮಾಡಿದ್ದಳು. ಜತೆಗೆ ಚಿತ್ರಾನ್ನ, ಸಂಡಿಗೆ, ಹಪ್ಪಳ, ಉಪ್ಪಿನಕಾಯಿ. ಎಷ್ಟೋ ತಿಂಗಳುಗಳವರೆಗೆ ಕರ್ನಾಟಕದ ಈ ಊಟ ದೊರೆತಿರಲಿಲ್ಲ. ಎದುರಿಗೆ ಕುಳಿತು ಬಡಿಸುತ್ತಿದ್ದ ಲಲಿತಮ್ಮ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಿದ್ದಳು. ನನ್ನ ಊಟ ಮುಗಿಯುವವರೆಗೆ ಸುಮ್ಮನಿರಬಾರದೇ ಇವಳು, ಎಂದು ನನಗೆ ಕೊಂಚ ಕೋಪ ಬರುತ್ತಿತ್ತು. ಆದರೆ ಆಕೆ ಸುಮ್ಮನಿರಲಾರಳು. ಲಲಿತಮ್ಮ ಮಾತುಗಾತಿ. ಹರಟೆ ಎಂದರೆ ಬಲು ಪ್ರೀತಿ ಅವಳಿಗೆ. ಅದರಲ್ಲೂ ನಾನು ಹಲವು ತಿಂಗಳುಗಳ ಮೇಲೆ ಭೆಟ್ಟಿಯಾದವ. ಅವಳು ಬಿಟ್ಟೂ ಬಿಡದೆ ಪ್ರಶ್ನೆ ಕೇಳುವುದು ಸಹಜವೇ ಆಗಿತ್ತು.

"ಇಷ್ಟು ದಿನ ಎಲ್ಲಿದ್ದಿರಿ, ಏನು ಮಾಡುತ್ತಿದ್ದಿರಿ, ಮುಂದಿನ ವಿಚಾರ ವೇನು? ಇತ್ಯಾದಿ. ಇತ್ಯಾದಿ.

ನಾನು ಸ್ವಲ್ಪದರಲ್ಲಿಯೆ ಅವಳಿಗೆ ಎಲ್ಲವನ್ನೂ ವಿವರಿಸಿ ಜರತಾರಿ ಜಗದ್ಗುರು ಪೀಠದ ಸಂಗತಿಯನ್ನೂ ತಿಳಿಸಿದೆ. ಅರ್ಥಾತ್–ಮಹಾದೇವಮ್ಮ ನಿಗೂ ನನಗೂ ಉಂಟಾದ ಸಂಬಂಧದ ವಿಚಾರವನ್ನು ಮಾತ್ರ ತಿಳಿಸಲಿಲ್ಲ.

"ಅದೆಲ್ಲ ಸರಿ. ಆದರೆ ಆ ಪೀಠ ನಿಮಗೆ ಸಿಕ್ಕಬಹುದೇ? ಸಿಕ್ಕುವ ಆಸೆಯಿದೆಯೆ?"

"ಆಸೆಯೇನೋ ಇದೆ. ಮಠದ ಟ್ರಸ್ಟ್‌ಕಮಿಟಿಯ ಮೂವರು ಸದಸ್ಯರು ನನ್ನ ಕಡೆ ಆಗಬಹುದು. ಮುದುಕ ಸ್ವಾಮಿಯೂ ನನ್ನನ್ನು ಒಪ್ಪಬಹುದು. ಆ ಮರಿಸ್ವಾಮಿಯನ್ನು ಹೇಗೆ ಹೊರಹಾಕಬೇಕೆಂಬುದೇ ಮುಖ್ಯ ಸಮಸ್ಯೆ. ಅದರ ವಿಷಯವಾಗಿ ಆಲೋಚನೆ ಮಾಡಲೆಂದೇ ನಾನಿಲ್ಲಿ ಇಳಿದದ್ದು. ಇಂಥ ಸಮಸ್ಯೆಗಳಿಗೆ ಪರಿಹಾರೋಪಾಯ ಸೂಚಿಸುವುದರಲ್ಲಿ ಶಾಸ್ತ್ರಿಗಳದು ಎತ್ತಿದ ಕೈ...."

“ಸರಿ. ಆದರೆ ಅವರ ಪತ್ತೆಯೇ ಇಲ್ಲವಲ್ಲ!”

“ಏನು ಮಾಡುತ್ತಿರುವರೋ ಇಷ್ಟು ಹೊತ್ತು? ಊಟಕ್ಕೂ ಬರುವುದಿಲ್ಲವೇ ಮನೆಗೆ?”

“ಅವರೇನು ಈ ಊರಲ್ಲೇ ಇರುವರೆಂದು ತಿಳಿದಿರಾ?”

“ಮತ್ತೆ?”

ಲಲಿತಮ್ಮ ನಗುತ್ತಾ – “ನಿಮಗಿನ್ನೂ ತಿಳಿಯದೇ? ಈಗ ಆ ಲೀಲಾವತಿ ಈ ಊರಲಿಲ್ಲ,” ಎಂದಳು.

“ಇಲ್ಲವೇ? ಏನಾದಳು?”

“ಏನೂ ಆಗಲಿಲ್ಲ. ಉಂಡು ತಿಂದು ಗಟ್ಟಿಮುಟ್ಟಾಗೇ ಇದಾಳೆ. ಆಶ್ರಮದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಯಾವುದೋ ಹಳ್ಳಿಗೆ ಹೋಗಿಬಿಟ್ಟಳು. ಅಲ್ಲೊಂದು ಖಾಸಗಿ ಸಾಲೆ ತೆಗೆದು ಜೀವಿಸುತ್ತಿದ್ದಾಳೆ.”

“ಶಾಸ್ತ್ರಿಗಳು ಅಲ್ಲಿಗೇ ಹೋಗಿದ್ದಾರೆಯೇ ಹಾಗಾದರೆ?”

“ಇನ್ನೆಲ್ಲಿಗೆ ಹೋಗುತ್ತಾರೆ? ಅಲ್ಲಿಗೇ. ಅವಳ ಹುಚ್ಚನ್ನು ಇನ್ನೂ ಬಿಟ್ಟಿಲ್ಲ ಅವರು....”

“ಸಾಯಂಕಾಲವಾದರೂ ಬರಬಹುದೋ ಇಲ್ಲವೋ?”

“ಯಾರಿಗೆ ಗೊತ್ತು. ಮನಸು ಬಂದರೆ ಬರುತ್ತಾರೆ. ಇಲ್ಲವಾದರೆ ಇಲ್ಲ.”

“ಅರೆ! ನಾನು ನಾಳೆ ಬೆಳಗಿನ ರೈಲಿಗೇ ಹೊರಡಬೇಕಾಗಿದ್ದಿತಲ್ಲ?”

“ಅದೇನು ಇಷ್ಟು ಅವಸರ? ಒಂದೆರಡು ದಿನ ವಿಶ್ರಾಂತಿ ತೆಗೆದುಕೊಂಡು ಹೋಗಬಾರದೇ?”

“ವಿಶ್ರಾಂತಿ ತೆಗೆದುಕೊಳ್ಳುವ ಸಮಯವಿದಲ್ಲ. ಲಲಿತಾ – ಕೈಯಲ್ಲಿ ಕಾಸಿಲ್ಲದಿರುವಾಗ ಎಲ್ಲಿನ ವಿಶ್ರಾಂತಿ? ಮೊದಲು ಒಂದು ದಾರಿಗೆ ಹತ್ತುತ್ತೇನೆ. ಆಮೇಲೆ ವಿಶ್ರಾಂತಿ ಗಿಶ್ರಾಂತಿ ಎಲ್ಲಾ,” ಎನ್ನುತ್ತಾ ನಾನು ಕೈ ತೊಳೆದುಕೊಂಡು ಮೇಲಕ್ಕೆದ್ದೆ.

ಮಲಗುವ ಕೊಟಡಿಯಲ್ಲಿ ಮಂಚದ ಮೇಲೆ ಮಡಿಬಟ್ಟೆ ಹಾಸಿ ಅಣಿಗೊಳಿಸಿದ್ದಳು ಪರದೇಶಿ. ರಾತ್ರೆಯೆಲ್ಲ ಜಾಗರಣೆಯಾಗಿದ್ದಿತಾದುದರಿಂದ ನನಗೆ ತೂಕಡಿಕೆ ಬರುತ್ತಿತ್ತು. ಹಾಯಾಗಿ ಮಂಚದ ಮೇಲೊರಗಿದೆ. ನಿದ್ದೆಯ ಗುಂಗು ಕನಿಯುತ್ತಿದ್ದ ಹಾಗೆಯೆ ಕೈ ಬಳೆಗಳ ಸಪ್ಪಳವಾಯಿತು. ಕಣ್ಣು ತೆರೆದು ನೋಡಿದರೆ ಎದುರಿಗೆ ಲಲಿತಮ್ಮ ಬಾಗಿಲನ್ನು ಮುಚ್ಚಿ ಚಿಲಕ ಹಾಕಿ

ಎಡಗೈಯಲ್ಲಿ ಎಲೆಯಡಿಕೆಯ ತಟ್ಟೆ ಹಿಡಿದು ಮೋಹಕವಾದ ಭಂಗಿಯಲ್ಲಿ ನಿಂತಿದ್ದಳು.

"ತಾಂಬೂಲ ಸೇವಿಸುವುದಿಲ್ಲವೆ?" ಎನ್ನುತ್ತಾ ಅವಳು ಮಂಚದ ಮೇಲೆ ನನ್ನ ಪಕ್ಕದಲ್ಲೇ ಕುಳಿತುಕೊಂಡಳು. ಎಲೆಗಳನ್ನು ಕೈಗೆ ತೆಗೆದುಕೊಂಡು ಸುಣ್ಣ ಸವರಿ, ಬಣ್ಣದ ಅಡಕೆಯ ಪುಡಿಯನ್ನು ಸೇರಿಸಿ ಪಟ್ಟಿ ಮಾಡಿ ನನ್ನ ಕಡೆ ನೀಡುತ್ತಾ – "ಬೇಕೋ, ಬೇಡವೋ?" ಎಂದು ಕೇಳಿದಳು.

ಮಲಗಿಕೊಂಡಿದ್ದ ಹಾಗೆಯೆ ಪಟ್ಟಿಯನ್ನು ತೆಗೆದುಕೊಂಡು ಬಾಯಿ ಗಿಟ್ಟಿಕೊಂಡು ನುರಿಸತೊಡಗಿದೆ. ನನಗೆ ನಿದ್ದೆ ಬರುತ್ತಿತ್ತು. ಆ ಸಮಯದಲ್ಲಿ ಅವಳ ಸಹವಾಸ ನನಗಿಷ್ಟವಿರಲಿಲ್ಲ. ಆದರೆ ಅವಳೋ – ಚಿಲಕ ಹಾಕಿಕೊಂಡೇ ಕುಳಿತಿದ್ದಾಳೆ. ಅವಳ ಚಾರಿತ್ರ್ಯ ನನಗೆ ಅಪರಿಚಿತವಾದುದೇನೂ ಆಗಿರ ಲಿಲ್ಲ. ಮಹಾದೇವಮ್ಮನ ಹಾಗೆ ಅವಳದೂ ವಿಷಮ ವಿವಾಹ. ತುಂಬು ತರುಣಿಯಾದ ಲಲಿತಳನ್ನು ವೃದ್ಧಾಪ್ಯದಲ್ಲಿ ಅಡಿಯಿಡುತ್ತಿದ್ದ ಶಾಸ್ತ್ರಿ ಮದುವೆ ಯಾಗಿದ್ದ. ಅವನಿಂದ ಕೊಂಚವೂ ಸುಖ ಲಭಿಸಿರಲಿಲ್ಲ ಅವಳಿಗೆ. ಅಂಥ ಸುಂದರಿಯಾದ ಹೆಂಡತಿಯಿದ್ದರೂ ಶಾಸ್ತ್ರಿ ತನ್ನ ಹೊರಚಾಳಿ ನಿಲ್ಲಿಸಿರಲಿಲ್ಲ; ಲೀಲಾವತಿಯ ಸ್ನೇಹ ತ್ಯಜಿಸಿರಲಿಲ್ಲ. ಲಲಿತಮ್ಮನೂ ಧೈರ್ಯದಿಂದ ತನ್ನ ಮನಸ್ಸಿಗೊಪ್ಪಿದವರನ್ನು ಕೂಡತೊಡಗಿದ್ದಳು. ಶಾಸ್ತ್ರಿಗೆ ಅದೆಲ್ಲವೂ ಗೊತ್ತಿ ದ್ದಿತು. ಆದರೆ ಆತನೇನನ್ನೂ ಮಾಡುವಂತಿರಲಿಲ್ಲ. "ನೀವು ಮಾತ್ರ ಸುಖ ಪಡಬೇಕು, ನಾನೇಕೆ ಸುಖ ಪಡಬಾರದು?" ಎಂದು ಸವಾಲು ಹಾಕಿ ಲಲಿತಾ ಅವನ ಬಾಯಿ ಮುಚ್ಚಿಸಿದ್ದಳು. ಅಂದಿನಿಂದ ಅವನ ದಾರಿ ಅವನಿಗೆ, ಇವಳದು ಇವಳಿಗಾಗಿತ್ತು.

ನಾನು ಹಿಂದೆ ಊರಲ್ಲಿದ್ದಾಗಲೂ ಒಂದೆರಡು ಸಲ ಲಲಿತಮ್ಮನ ಸಹವಾಸ ಮಾಡುವ ಸಂದರ್ಭ ಬಂದಿದ್ದುವು. ಆದರೆ ನನಗೇಕೋ ಅವಳ ಮೇಲೆ ಮನಸ್ಸಾಗಿರಲಿಲ್ಲ. ಏಕೆಂಬುದು ನನಗೇ ತಿಳಿಯದು. ಆಕೆ ತರುಣಿ, ಚೆಲುವೆ, ಬಿನ್ನಾಣಗಿತ್ತಿ, ಮಾತುಗಾತಿ, ಎಲ್ಲ ಸರಿ. ಆದರೂ ನನಗೇಕೋ ಅವಳ ಸಂಗದ ಬಗ್ಗೆ ಅಂಥ ಆತುರತೆ ಹುಟ್ಟುತ್ತಿರಲಿಲ್ಲ. ಇಂದೂ ಹಾಗೇ ಆಯಿತು.

"ಇಲ್ಲಿಂದ ಹೋದಂದಿನಿಂದ ನೀವು ಇನ್ನೂ ಉಬ್ಬಿದ್ದೀರಿ. ಪ್ರಕೃತಿ

ಬಹಳ ಚೆನ್ನಾಗಿದೆ," ಎಂದಳಾಕೆ. ನಾನು ಉತ್ತರವೀಯದೆ ಸುಮ್ಮನೆ ಬಿದ್ದು ಕೊಂಡಿದ್ದೆ.

ಆಕೆ ಕಿಟಕಿಯ ತೆರೆಯನ್ನು ಸರಿಯಾಗಿ ಮುಚ್ಚಿ ನನ್ನ ಪಕ್ಕದಲ್ಲಿ ಮಲಗಿ ಕೊಳ್ಳತೊಡಗಿದಳು.

"ಮಧ್ಯಾಹ್ನದ ವೇಳೆ. ಯಾರಾದರೂ ಬಂದಾಗು," ಎಂದು ನಾನೆಂದೆ.

"ಪ್ರೆಸ್ಸು ತೆರೆಯುವುದು ಎರಡು ಗಂಟೆಗೆ. ಈಗ ಇನ್ನೂ ಒಂದು, ಅಷ್ಟೆ. ಒಂದು ತಾಸಿನ ಅವಧಿಯಿದೆ," ಎಂದು ಆಕೆ ಸಂಕೋಚವಿಲ್ಲದೆ ನುಡಿದಳು.

"ಆ ಕುಟ್ಪೋಶನಿ ಬೇರೆ ನಾನಿಲ್ಲಿಗೆ ಬಂದುದನ್ನು ಕಂಡಿದ್ದಾನೆ, ನನ್ನ ಬಗ್ಗೆ ಮೊದಲಿಂದಲೂ ಅವನಿಗೆ ಸಂಶಯವಿದೆ. ನಿನ್ನ ಬಗೆಗೂ ಇದ್ದೇ ಇರಬೇಕು. ನಮ್ಮನ್ನು ಹಿಡಿಯಲೇಬೇಕೆಂದು ಅವನೇ ಈ ಅಡ್ಡ ವೇಳೆಯಲ್ಲಿ ಬಂದುಬಿಟ್ಟರೇನು ಗತಿ ?"

"ಅವರು ಹಾಗೆಲ್ಲ ಬರುವುದಿಲ್ಲ ಸ್ವಾಮಿಜಿ. ಪ್ರೂಫು ನೋಡಲು ಬೆಳಿಗ್ಗೆ ಒಂದು ಸಲ ಬರುತ್ತಾರೆ, ಅಷ್ಟೆ."

"ಅಯ್ಯೋ, ನಿನಗೆ ಅವನ ಸ್ವಭಾವ ತಿಳಿಯದು. ಸರಕಾರದ ಸಿ.ಐ.ಡಿ. ಗಳೆಲ್ಲ ನಾಚಬೇಕು ಅವನನ್ನು ಕಂಡು. ಇಂಥ ಪಟಾಯಿತ ಆಸಾಮಿ ಆತ."

"ಏನೂ ಯೋಚಿಸಬೇಡಿ. ನಾನೆಲ್ಲ ನೋಡಿಕೊಳ್ಳುತ್ತೇನೆ," ಎಂದು ಆಕೆ ನನ್ನ ಎದೆಯ ಮೇಲೆ ಕೈ ಹಾಕಿದಳು. ಅವಳನ್ನು ಗದರಿಸಿ ದೂರ ಸರಿಸುವಂತಿರಲಿಲ್ಲ. ತಾನಾಗಿಯೇ ಬಂದ ಹೆಣ್ಣನ್ನು ತಿರಸ್ಕರಿಸುವಂಥ ಚಾರಿತ್ರ್ಯವೂ ನನ್ನದಲ್ಲ. ಅವಳನ್ನು ತಬ್ಬಿಕೊಳ್ಳಲೆಂದು ನಾನು ತೋಳು ಚಾಚಿದೆ. ಅಷ್ಟರಲ್ಲಿ....

ಅಷ್ಟರಲ್ಲಿ....ಕಿಟಕಿಯ ಪರದೆಯನ್ನು ಹೊರಗಿನಿಂದ ಯಾರೋ ಎಳೆದು ಬದಿಗೆ ಸರಿಸಿದರು.

ಪರಸ್ಪರರನ್ನು ತಬ್ಬಿಕೊಂಡಿದ್ದ ಭಂಗಿಯಲ್ಲಿಯೆ ನಾವಿಬ್ಬರೂ ದಿಗಿಲು ಗೊಂಡು ಅತ್ತ ಹೊರಳಿದೆವು.

ನಾನು ತರ್ಕಿಸಿದಂತೆಯೆ ನಡೆದಿತ್ತು. ಸೈತಾನ್....ಸೈತಾನನ ಮರಿ.... ರಾಕ್ಷಸ....ಸಿ. ಐ. ಡಿ. ಗಳ ದೊರೆ....ಕಿಟಕಿಯ ಹೊರಗೆ ಖಿ ಖಿ ಖಿ ಎನ್ನುತ್ತ ನಿಂತಿದ್ದ ಕುಟ್ಪೋಶನಿ!

ಅರ್ಧನಗ್ನಳಾಗಿದ್ದ ಲಲಿತಾ ಮಗ್ಗುಲು ಹಾಸಿಗೆಯನ್ನೇ ಎಳೆದು ಮುಖ ಮುಚ್ಚಿಕೊಂಡಳು. ನಾನು ಹೌಹಾರಿದವನಂತಾಗಿ ಮಂಚದಿಂದ ಜಿಗಿದು ಅದರ ಕೆಳಗೇ ಅವಿತುಕೊಂಡೆ.

ಕಿಟಕಿಯ ಆಚೆ ಇನ್ನೂ ನಡೆದಿತ್ತು ಕುಟ್ಟೋಚಿನಿಯ ಖಿ ಖಿ ಖ್ಖಿ!

[೩]

ರಾತ್ರಿ ನಾನು ಊಟಕ್ಕೆ ಕುಳಿತಿದ್ದಾಗ ಶಾಸ್ತ್ರಿ ದಯಮಾಡಿಸಿದ. ಕೈಲಿದ್ದ ಚೀಲವನ್ನು ಮಲಗುವ ಕೊಟಡಿಯಲ್ಲಿ ಬಿಸುಟು, ಕೊಡೆಯನ್ನು ಗೂಟಕ್ಕೆ ತಗಲಿಸಿ, ಮುಖದ ಮೇಲಿನ ಬೊಡವೆಗಳನ್ನು ಕೆರೆದುಕೊಳ್ಳುತ್ತ ಹಹಾ ಹಿಹಿ ಎಂದು ನಗುತ್ತ ಬಂದು ನಮಸ್ಕಾರ ಮಾಡಿದ.

“ಏನು ಆಶ್ಚರ್ಯ ಸ್ವಾಮಿಜಿ, ಒಮ್ಮಿಂದೊಮ್ಮೆ ಬಂದು ಬಿಟ್ಟದ್ದೀರಲ್ಲ! ಆಕಾಶದಿಂದ ಇಳಿದು ಬಂದಿರಾ?”

“ಈಗ ಆಕಾಶದಿಂದ ಇಳಿದು ಬರುವುದೂ ಸಾಧ್ಯವಿದೆಯಲ್ಲ ಶಾಸ್ತ್ರಿ. ಈ ಊರಿಗೆ ವಿಮಾನ ನಿಲ್ಲುವ ವ್ಯವಸ್ಥೆಯಾಗಿದೆಯಂತೆ.”

“ಹೌದು. ಕಳೆದ ತಿಂಗಳಿಂದ ಏರ್ ಸರ್ವಿಸ್ ಷುರುವಾಗಿದೆ. ಏನು, ನಿಜಕ್ಕೂ ವಿಮಾನದಲ್ಲೇ ಬಂದಿರಾ?”

“ಇಲ್ಲ ಮಾರಾಯ. ರೈಲಿಗೇ ಹಣವಿರಲಿಲ್ಲವಂತೆ. ಇನ್ನು ವಿಮಾನ ಕ್ಕೆಲ್ಲಿಂದ ತರಲಿ?”

“ಸರಿ. ಸರಿ. ಅಂತೂ ಬಂದಿರಲ್ಲ. ಮುಂದೆ ಏನಾದರೂ ಉಪಾಯ ಹುಡುಕಿದರಾಯಿತು. ನಾನು ಸ್ನಾನ ತೀರಿಸಿಕೊಂಡು ಬರ್ತೇನೆ. ಇನ್ನೂ ಶಿವಪೂಜೆಯಾಗಬೇಕಲ್ಲ?” ಎನ್ನುತ್ತಾ ಆತ ಕಚ್ಚೆಯನ್ನು ಎತ್ತಿ ಕಟ್ಟಿಕೊಳ್ಳುತ್ತ ಅವಸರದಿಂದ ಬಚ್ಚಲು ಮನೆಗೆ ನಡೆದ.

ಶಾಸ್ತ್ರಿಯ ಆಚರಣೆ ಹೇಗೇ ಇದ್ದರೂ ಕೆಲವು ಆಚಾರಗಳನ್ನು ಮಾತ್ರ ಆತ ಬಿಟ್ಟೂಬಿಡದೆ ನಡಸಿಕೊಂಡು ಬರುತ್ತಾನೆ. ಬೆಳಗ್ಗೆ, ಸಾಯಂಕಾಲ ಎರಡೂ ಹೊತ್ತು ಸ್ನಾನ ಮಾಡಿ ಹತ್ತು ಹದಿನೈದು ನಿಮಿಷಗಳ ಕಾಲ ಲಿಂಗ ಪೂಜೆ ಮಾಡುತ್ತಾನೆ. ಹಣೆಗೆ, ಕೆನ್ನೆಗೆ, ಕಿವಿಗಳಿಗೆ, ಕುತ್ತಿಗೆಗೆ, ಎದೆಗೆ, ತೋಳುಗಳಿಗೆ ವಿಭೂತಿ ಹಚ್ಚಿಕೊಳ್ಳುತ್ತಾನೆ; ಗಂಧವನ್ನೂ ಇಟ್ಟುಕೊಳ್ಳು ತ್ತಾನೆ. ಲಿಂಗದೇವರಿಗೆ ನೈವೇದ್ಯದ ಕೈ ತೋರಿಸಿದ ತರುವಾಯವೆ ಆತ ಊಟ

ಮಾಡುವುದು. ಯಾವ ಊರಿಗೆ ಹೋದರೂ, ಯಾರ ಮನೆಗೆ ಹೋದರೂ ಈ ಕ್ರಮವನ್ನು ತಪ್ಪಿಸುವುದಿಲ್ಲ. ಅವನ ಈ ಸೋಗನ್ನು ಕಂಡು ನನಗೇ ಅನೇಕ ಸಲ ವಿಸ್ಮಯವಾಗಿದೆ. ಎಷ್ಟೋ ಸಲ ಅವನ ಎದುರಿಗೇ ನಕ್ಕುಬಿಟ್ಟಿದ್ದೇನೆ. ನಾನು ಹಾಗೆ ನಗುವುದು ಅವನಿಗೆ ಸರಿಬರುವುದಿಲ್ಲ. "ಹಿರಿಯರಿಂದ ಬಂದ ಪದ್ಧತಿಗಳನ್ನು ಬಿಡದೆ ಆಚರಿಸಬೇಕು ಸ್ವಾಮಿಜಿ," ಎಂದು ಒಳ್ಳೆ ಗಾಂಭೀರ್ಯ ದಿಂದ ಹೇಳುತ್ತಾನೆ. ನನಗೆ ನಗೆ ಉಕ್ಕೇರಿ ಬರುತ್ತದೆ. "ಹಾಗೆಲ್ಲ ನಗ ಬಾರದು ಸ್ವಾಮಿಜಿ. ನಿಮ್ಮ ಹುಡುಗತನವಿನ್ನೂ ಹೋಗಿಲ್ಲ. ಇಂಥ ವಿಷಯಗಳ ಬಗ್ಗೆ ಗಂಭೀರವಾಗಿರಲು ಕಲಿಯಬೇಕು," ಎಂದು ಉಪದೇಶಿಸುತ್ತಾನೆ. ಆ ಉಪದೇಶವನ್ನೂ ನಾನು ನಗೆಯಲ್ಲಿ ಮುಗಿಸಿಬಿಡುತ್ತೇನೆ. ನನಗೇನೋ ಈ ಪೂರ್ವಾಚಾರಗಳಲ್ಲಿ ಕೊಂಚವೂ ನಂಬುಗೆಯಿಲ್ಲ. ಲಿಂಗಪೂಜೆಗೆಂದು ಗಂಟೆ ಗಟ್ಟಲೆ ಒಂದೇ ಕಡೆ ಮೂಗು ನೋಡುತ್ತ ಕುಳಿತಿರುವುದೂ ನನ್ನಿಂದಾಗುವುದಿಲ್ಲ. ಸ್ವಾಮಿಯಾದುದರಿಂದ ಪೂಜೆಯ ನಾಟಕ ಮಾಡಲೇಬೇಕಾಗುತ್ತದೆ. ಎರಡು ಮೂರು ನಿಮಿಷಗಳಲ್ಲಿಯೆ ಅದನ್ನು ಮುಗಿಸಿ ಮೇಲಕ್ಕೇಳುತ್ತೇನೆ. "ಛೆ. ನಿಮಗೆ ತಿಳಿಯದು. ಇಷ್ಟು ಬೇಗ ಮುಗಿಸಬಾರದು. ಜನ ತಪ್ಪು ತಿಳಿದು ಕೊಳ್ಳುತ್ತಾರೆ. ತೀರ ಕಡಿಮೆ ಅಂದರೆ ಅರ್ಧ ಗಂಟೆಯಾದರೂ ಪೂಜೆ ಮಾಡ ಬೇಕು ನೀವು, ಸ್ವಾಮಿಜಿ," ಎಂದು ಶಾಸ್ತ್ರಿಯ ಉಪದೇಶ. "ಅರ್ಧ ಗಂಟೆಯ ತನಕ ಕೂತುಕೊಳ್ಳುವುದೆಂದರೆ ನನಗೆ ತಲೆ ಬೇಸರು ಶಾಸ್ತ್ರಿ. ಅಲ್ಲದೆ ನನಗೆ ಅದರಲ್ಲಿ ವಿಶ್ವಾಸವೂ ಇಲ್ಲ," ಎಂದು ನಾನು ಹೇಳಿದರೆ ಆತ – "ವಿಶ್ವಾಸವಿರಲಿ ಇಲ್ಲದಿರಲಿ, ಕಾವಿ ಬಟ್ಟೆ ಹಾಕಿಕೊಂಡು ಸ್ವಾಮಿಯ ಸೋಗು ಹಾಕಿದ ಬಳಿಕ ಅದಕ್ಕೆ ತಕ್ಕ ಹಾಗೆ ಇಂಥ ಅಡ್ಡ ಸೋಗುಗಳನ್ನೂ ಹಾಕಲೇಬೇಕಲ್ಲ! ನಮ್ಮದು ಮಹಾ ಮರುಳು ಜನ. ಎರಡು ಮೂರು ಗಂಟೆಗಳವರೆಗೆ ಪೂಜೆ ಮಾಡುತ್ತ ಕೂತಿರುವವರನ್ನು ದೊಡ್ಡ ತಪಸ್ವಿಗಳೆಂದು ಭಾವಿಸುವರು. ನಾವು ನಿಜ ವಾಗಿಯೂ ಪೂಜೆ ಮಾಡಿದರೇನು, ತೂಕಡಿಸಿದರೇನು! ಜನಕ್ಕೇನೂ ಅದು ತಿಳಿಯುವುದಿಲ್ಲ. ಅವರ ಮನಸ್ಸಿನ ಮೇಲೆ ಪ್ರಭಾವ ಬಿದ್ದರೆ ನಮ್ಮ ಕೆಲಸ ಸಾಧಿಸಿದಂತಾಯಿತು, ಅಲ್ಲವೇ?" ಎಂದು ವಾದಿಸುತ್ತಾನೆ. ಅರ್ಥಾತ್ ಅದಕ್ಕೆ ಉತ್ತರವೀಯಲು ಸಾಧ್ಯವಾಗುವುದಿಲ್ಲ.

ಸ್ನಾನ – ಪೂಜೆ – ಊಟ ತೀರಿಸಿಕೊಂಡು ಶಾಸ್ತ್ರಿ ಬರಬೇಕಾದರೆ ರಾತ್ರಿ ಹನ್ನೊಂದು ಗಂಟೆಯಾಗಿದ್ದಿತು. ನನಗೆ ತೂಕಡಿಕೆ, ಆಕಳಿಕೆ. ನಿನ್ನೆ ರಾತ್ರಿ

ಜಾಗರಣೆ. ಮಧ್ಯಾಹ್ನ ನಿದ್ದೆ ಮಾಡೋಣವೆಂದು ಮಲಗಿದರೆ ಲಲಿತಳ ಹಾಳು ಸಹವಾಸ....ಕುಟ್ಟೋಶನಿಯ ಕೈಗೆ ಸಿಕ್ಕು ಫಜೀತಿ....ಇನ್ನು ಶಾಸ್ತ್ರಿಯ ಜತೆ ಯಲ್ಲಿ ಮಾತುಕತೆಯಾಗಬೇಕು. ಈತ ಊಟ ಮುಗಿಸುವುದಕ್ಕೇ ಹನ್ನೊಂದು ಗಂಟೆಯಾಯಿತು. ಮಾತು ಮುಗಿಸಬೇಕಾದರೆ ಬೆಳಗಾಗುವುದೋ ಏನೊ.

ದೀಪದ ಕಡ್ಡಿಯಿಂದ ಹಲ್ಲುಗಳ ಸಂದಿಗಳಲ್ಲಿನ ಅನ್ನದ ಅಗಳುಗಳನ್ನು ಹೊರದೆಗೆದು ನುಂಗುತ್ತ ಶಾಸ್ತ್ರಿ ಥರ್ರೆಂದು ತೇಗುತ್ತಾ ಬಂದು ಕುರ್ಚಿಯ ಮೇಲೆ ಕುಕ್ಕರಿಸಿದ. ಆತ ಕೂತ ರಭಸಕ್ಕೆ ಕಿರ್‌ರ್ ಎಂದು ಕುಯಿಗುಟ್ಟಿತು ಕುರ್ಚಿ.

“ನಿಮಗೆ ಇಂದು ನಾಳೆ ಪತ್ರ ಬರೆಯೋಣವೆಂದಿದ್ದೆ. ನೀವೇ ಬಂದು ಬಿಟ್ಟಿರಿ. ಏನು ಸಮಾಚಾರ?” ಎಂದ ಶಾಸ್ತ್ರಿ.

ನನ್ನ ಸಮಾಚಾರವನ್ನು ನಾನು ಒಡನೆಯೆ ಹೇಳಲಿಲ್ಲ. “ಪತ್ರ ಬರೆ ಯುವನಿದ್ದೆಯಾ? ಏನು ವಿಶೇಷ?” ಎಂದು ಕೇಳಿದೆ.

ಶಾಸ್ತ್ರಿ ಕುರ್ಚಿಯ ಮೇಲೆ ಸರಿಯಾಗಿ ಕುಳಿತುಕೊಂಡ, ಮೇಜಿನ ಮೇಲಿದ್ದ ಕನ್ನಡಿಯನ್ನು ಎಡಗೈಯಲ್ಲಿ ತೆಗೆದುಕೊಂಡು ದೀಪದ ಬೆಳಕಿಗೆದುರಾಗಿ ಅದನ್ನು ಹಿಡಿದ, ಮುಖವನ್ನು ನೋಡಿಕೊಳ್ಳುತ್ತ ಬಾಯಿಯನ್ನು ಅಗಲವಾಗಿ ತೆರೆದು ಕಡ್ಡಿಯಿಂದ ಹಲ್ಲುಗಳ ಮೇಲಿನ ಹೊಲಸನ್ನು ಗೀರಿಕೊಂಡ. ಅನಂತರ ಕಡ್ಡಿಯನ್ನು ಮೂಲೆಗೆಸೆದು ಕೆನ್ನೆಗಳ ಮೇಲಿನ ಮೊಡವೆಗಳನ್ನು ಹಿಸುಕಿ ಅವುಗಳಲ್ಲಿನ ಬಿಳಿಯ ಕಣಗಳನ್ನು ತೆಗೆಯುತ್ತ ನಡುನಡುವೆ ನನ್ನ ಕಡೆ ದೃಷ್ಟಿ ತಿರುಗಿಸುತ್ತ ಹೇಳತೊಡಗಿದ:

“ಈಗೊಂದು ವಾರದ ಕೆಳಗೆ ಜರತಾರಿ ನಗರದಿಂದ ನನಗೊಂದು ಪತ್ರ ಬಂದಿತ್ತು. ಅಲ್ಲಿಯ ಅಕ್ಕನ ಬಳಗದಲ್ಲಿ ಒಡಕು ಹುಟ್ಟಿ ಎರಡು ಪಂಗಡಗಳಾಗಿ ಭಾರಿ ಜಗಳ ನಡೆದಿದೆ. ಆ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಹೋಗ ಬೇಕೆಂದು ಅಲ್ಲಿಯವರೊಬ್ಬರು ನನ್ನನ್ನು ಕರೆಯಿಸಿಕೊಂಡಿದ್ದರು....”

ಜರತಾರಿ ನಗರದ ಹೆಸರು ಹೊರಡುತ್ತಲೂ ನನಗೆ ಉದ್ವೇಗದಿಂದ ಎದ್ದು ಹಾರಾಡುವಂತಾಗಿದ್ದಿತು. ಎಂಥ ವಿಚಿತ್ರ! ಶಾಸ್ತ್ರಿಯೊಂದಿಗೆ ನಾನು ಮಾತಾಡ ಬೇಕಾಗಿದ್ದುದೂ ಜರತಾರಿ ನಗರದ ವಿಷಯವೆ. ಆತ ತೆಗೆದುದೂ ಅದೇ ವಿಷಯವೇ. ದೈವ ನನ್ನ ಪರವಾಗಿ ಬಲು ತೀವ್ರವಾಗಿ ಕೆಲಸ ಸಾಗಿಸಬೇಕು, ಎಂದುಕೊಂಡೆ.

ಶಾಸ್ತ್ರಿ ಹೇಳುತ್ತಿದ್ದ : “ಮೊದಲಿನ ಬಳಗದಿಂದ ಸಿಡಿದ ಹೆಂಗಸರು ಬೇರೊಂದು ಬಳಗವನ್ನೇ ಸ್ಥಾಪಿಸಿಕೊಂಡು ಬಿಟ್ಟಿದ್ದಾರೆ. ಒಂದೇ ಊರಲ್ಲಿ ಇನ್ನೊಂದು ಬಳಗ ಮಾಡುವುದು ಸರಿಯಲ್ಲ – ಎಂದು ನಾನು ಲಿಂಗವೀರದಲ್ಲಿ ಟೀಕಿಸಿದ್ದೆ. ಅದನ್ನೋದಿದ ತರುವಾಯ ಈ ಎರಡನೆಯ ಬಳಗದ ಅಧ್ಯಕ್ಷಿಣಿ ಯಿಂದ ನನಗೆ ಕಾಗದ ಬಂತು. ‘ನಮ್ಮೂರ ವಿಷಯ ನಿಮಗೆ ಸರಿಯಾಗಿ ತಿಳಿದಿರಲಿಕ್ಕಿಲ್ಲ, ಅಂತೇ ನೀವು ಹೀಗೆ ಟೀಕೆ ಮಾಡುತ್ತಿರಲು ಸಾಕು, ದಯವಿಟ್ಟು ಇಲ್ಲಿಗೇ ಬಂದು ಒಂದೆರಡು ದಿನವಿದ್ದು ಈ ವಿಷಯವನ್ನು ಪೂರ್ಣ ವಾಗಿ ತಿಳಿದುಕೊಂಡು ಹೋಗಬೇಕು. ಅನಂತರ ನೀವು ಮಾಡುವ ಟೀಕೆ ಯನ್ನು ನಾವು ಸ್ವಾಗತಿಸುವೆವು’ – ಅಂತ ಬರೆದಿದ್ದರವರು. ನನಗೂ ಈಚೆಗೆ ಯಾವ ಊರಿನಿಂದಲೂ ಈ ಬಗೆಯ ಆಮಂತ್ರಣ ಬಂದಿರಲಿಲ್ಲ. ಆ ಕಿಡಿಗೇಡಿ ಹರಿಹರನ ಪ್ರಭಾವ. ಒಡನೆಯೆ ಜರತಾರಿ ನಗರಕ್ಕೆ ಹೋದೆ. ಅಲ್ಲಿ ನನಗೆ ದೊರೆತ ಸ್ವಾಗತ ಅಂದರೆ ಎಂಥ ಸ್ವಾಗತ ಎನ್ನುತ್ತೀರಿ! ಯಾವ ಕಾಂಗ್ರೆಸ್ ನಾಯಕನಿಗೂ ಕಡಮೆಯದಲ್ಲ ಅದು. ಈ ಎರಡನೆಯ ಅಧ್ಯಕ್ಷಿಣಿ ಚೆನ್ನವ್ವನ ಮನೆಯಲ್ಲೇ ಬಿಡಾರವಾಯಿತು. ಅವರು ಭಾರೀ ಶ್ರೀಮಂತರು. ಅವರ ಯಜಮಾನರು ಗುರುಶಾಂತಪ್ಪನವರೂ ರಾಜಾಮನುಷ್ಯ. ಎಂಥ ಧಾರಾಳ ಮನಸ್ಸು, ಎಂಥ ಔದಾರ್ಯ. ಅತಿಥಿ ಸತ್ಕಾರದಲ್ಲಿ ಅವರನ್ನು ಮೀರಿಸು ವವರು ಯಾರೂ ಇರಲಾರರು, ಅಲ್ಲಿದ್ದ ಎರಡು ದಿನವೂ ಹಾಲು ತುಪ್ಪದಲ್ಲೇ ತೇಲಾಡುತ್ತಿದ್ದೆ ನಾನು. ಅಬ್ಬಬ್ಬ....ಧನ್ಯ ಧನ್ಯ....” ಎಂದು ಹೇಳುತ್ತಾ ಶಾಸ್ತ್ರಿ ನಾಲಗೆ ಚಪ್ಪರಿಸಿಕೊಂಡ.

“ಹಾಲು ತುಪ್ಪ ಸಕ್ಕರೆ ಅಂದರೆ ಬಿದ್ದು ಸಾಯುತ್ತೀ ನೀನು,” ಎಂದು ನಾನು ನಗುತ್ತ ನುಡಿದೆ.

“ಯಾರು ಸಾಯುವುದಿಲ್ಲ? ನೀವು ಸಾಯುವುದಿಲ್ಲವೇ ಸ್ವಾಮಿಜಿ?” ಎಂದು ಅವನೂ ನಗುತ್ತಲೇ ಕೇಳಿದ.

“ಸಾಯುವುದು ಈಗಲೇ ಏಕೆ ಮಾರಾಯ? ಮುಂದೆ ಏನಾಯಿತು ಹೇಳು.”

“ಮೊದಲನೆಯ ದಿನ ನನಗವರು ಏನನ್ನೂ ಹೇಳಲಿಲ್ಲ. ಚೆನ್ನಾಗಿ ಊಟಕ್ಕೆ ಹಾಕಿದರು. ಸಾಯಂಕಾಲ ನನ್ನದೊಂದು ಭಾಷಣವನ್ನೂ ಏರ್ಪಾಟು ಮಾಡಿದ್ದರು. ಆ ಊರಿಗೆ ನಾನು ಹೋದುದು ಅದೇ ಮೊದಲ

ಸಲವಾದ್ದರಿಂದ ಕಿಕ್ಕಿರಿದು ನೆರೆದಿತ್ತು ಜನ. ಮಹಿಳೆಯರ ಉನ್ನತಿಯ ಬಗ್ಗೆ ಮಾತಾಡಿದೆ. ಎರಡನೆಯ ಅಕ್ಕನ ಬಳಗದ ಕಾರ್ಯದರ್ಶಿನಿ ಪುಷ್ಪಾವತಿ ಹಿರೇಮಠ ಎಂಬಾಕೆ ಆಭಾರ ಮನ್ನಿಸಿದಳು. ಬಲು ಚುರುಕು ಹುಡುಗಿ ಆಕೆ. ಮಾರನೇ ದಿನ ಅವಳೇ ಬಳಗದ ಕತೆಯೆಲ್ಲವನ್ನೂ ನನಗೆ ಹೇಳಿದಳು. ಮೂರು ವರ್ಷಗಳ ಕಾಲ ಅಧ್ಯಕ್ಷಿಣಿಯಾಗಿದ್ದ ಮಹಾದೇವಮ್ಮ ನಾಲ್ಕನೆಯ ವರ್ಷವೂ ತಾನೇ ಪಟ್ಟ ಹಿಡಿದುಕೊಂಡು ಸರ್ವಾಧಿಕಾರಿಯಾಗಲು ಪ್ರಯತ್ನಿಸುವುದನ್ನು ತಪ್ಪಿಸಲು ಇವರು ಪ್ರಯತ್ನಪಟ್ಟದ್ದರು. ಆದರಿಂದಾಗಿ ಆ ಮಹಾದೇವಮ್ಮನಿಗೆ ಕೋಪ ಬಂದಿತ್ತು. ಆಕೆ, ಚೆನ್ನವ್ವ ಪುಷ್ಪಾವತಿ ಮೊದಲಾದವರ ಬಗ್ಗೆ ಹೀನ ಅಪಪ್ರಚಾರ ನಡೆಸಿದ್ದಳಂತೆ. ಚುನಾವಣೆಯನ್ನು ಸರಿಯಾಗಿ ನಡಸದೆ ಮೋಸದಿಂದ ತಾನೇ ನಾಲ್ಕನೆಯ ಸಲವೂ ಅಧ್ಯಕ್ಷಿಣಿಯಾಗಿ ಆರಿಸಿ ಬಂದಿದ್ದಳಂತೆ. ಅಂಥವಳೊಂದಿಗೆ ಕೂಡಿ ಕೆಲಸ ಮಾಡುವುದು ಅಸಾಧ್ಯವಾದುದರಿಂದ ಇವರು ಎರಡನೆಯ ಬಳಗ ಸ್ಥಾಪಿಸಿದ್ದರಂತೆ. 'ನಮ್ಮ ಸ್ಥಳದಲ್ಲಿ ನೀವೇ ಇದ್ದಿದ್ದರೇನುಮಾಡುತ್ತಿದ್ದಿರಿ?'-ಎಂದು ಸವಾಲು ಹಾಕಿದಳು ಪುಷ್ಪಾವತಿ. 'ಸರಿಯಮ್ಮ ನೀವು ಮಾಡಿದ್ದು'-ಎಂದು ಸುಮ್ಮನಾದೆ. ಪುಷ್ಪಾವತಿಗೆ ಇಪ್ಪತ್ತು ವರ್ಷ ವಯಸ್ಸು. ಇನ್ನೂ ಮದುವೆಯಾಗಿಲ್ಲ. ಶ್ರೀಮಂತರ ಮನೆಯಾಕೆ. ತಿಂದು ನಲಿದು ಸುಖವಾಗಿ ಬೆಳೆದಿದ್ದಾಳೆ. ನನಗೆ ಏಳೆಂಟು ಜನ ಪೋಷಕರನ್ನೂ ಮಾಡಿಕೊಟ್ಟಳು. ಚೆನ್ನವ್ವ ಸ್ವತಃ ಐದುನೂರಾ ಒಂದು ರೂಪಾಯಿ ಕೊಟ್ಟು ಆಶ್ರಯದಾತಳಾದಳು ಪತ್ರಿಕೆಗೆ. ಏಕಾಏಕಿಯಾಗಿ ಹಣದ ಮಳೆಯೇ ಸುರಿದಂತಾಯಿತು ನನ್ನ ಮೇಲೆ. ಆದೊಂದೇ ಗುಂಪಿನಿಂದ ಒಟ್ಟು ಒಂದೂವರೆ ಸಾವಿರ ರೂಪಾಯಿ ಲಾಭವಾಯಿತು, ನೋಡಿರಿ."

"ಇನ್ನೊಂದು ಗುಂಪಿನಿಂದ?"

"ಅವರನ್ನೂ ಕಾಣಲು ಯತ್ನಿಸಿದೆ, ಆದರೆ ಮಹಾದೇವಮ್ಮ ಊರಲ್ಲಿರಲಿಲ್ಲ, ಪ್ರವಾಸ ಹೋಗಿದ್ದಳಂತೆ. ಸರಿ. ಮುಂದೆ ನೋಡಿದರಾಯಿತು ಎಂದುಕೊಂಡು ಊರಿಗೆ ಹೊರಡುವುದರಲ್ಲಿದ್ದಾಗ ದೈವಯೋಗದಿಂದ ಒಂದು ವ್ಯಕ್ತಿಯ ಭೆಟ್ಟಿಯಾಯಿತು. ಕೋಡಂಗಿಪುರದ ಖರೇಸೆಟ್ಟಿ ಎಂದು ಆವನ ಹೆಸರು.

"ಎಂಥ ವಿಚಿತ್ರ ಹೆಸರಯ್ಯ!"

"ಹೆಸರು ವಿಚಿತ್ರವಾದರೂ ಮನುಷ್ಯ ಬಹಳ ಗಂಭೀರ ಪ್ರಕೃತಿಯವ. ದಲಾಲಿ ವ್ಯಾಪಾರ ಮಾಡುತ್ತಾನೆ. ಮೋಟಾರುಕಾರು ಇಟ್ಟುಕೊಂಡಿದ್ದಾನೆ.

ಎಲ್ಲಾ ಬಹಳ ಪ್ರಶಸ್ತವಾಗಿದೆ. ತನ್ನ ಮೋಟಾರಿನಲ್ಲೇ ನನ್ನನ್ನು ಮನೆಗೆ ಕರೆದೊಯ್ದು ಹೋಳಿಗೆ ಊಟ ಹಾಕಿಸಿದ. ಎಲ್ಲವೂ ಮುಗಿದ ನಂತರ ಮಾತು ಹೊರಟಿತು. ಅಕ್ಕನ ಬಳಗದ ಒಡಕಿನ ಬಗ್ಗೆ ಅವನಿಂದಲೂ ಕೆಲವು ಹೊಸ ಸಂಗತಿ ತಿಳಿದವು ನನಗೆ," ಎಂದು ಶಾಸ್ತ್ರಿ ನನಗೆ ಆ ಮೊದಲೇ ಮಹಾದೇವಮ್ಮ ನಿಂದ ಗೊತ್ತಾಗಿದ್ದ ಹಲವು ಅಂಶಗಳನ್ನು ತಿಳಿಸಿದ.

"ಬಳಗದಲ್ಲಿ ಒಡಕು ಹುಟ್ಟಲು ಮಠದ ಮರಿಸ್ವಾಮಿಯೇ ಕಾರಣನಾಗಿದ್ದಾನೆ, ಮಹಾದೇವಮ್ಮ ಅವನ ಮಾತಿನಂತೆ ನಡೆಯುತ್ತಿರಲಿಲ್ಲವೆಂದು ಅವನಿಗೆ ಕೋಪವಿತ್ತು. ಅವನೊಬ್ಬ ನೀಚ, ವ್ಯಭಿಚಾರಿ, ಸ್ವಾಮಿಯಾಗಲು ಶುದ್ಧ ನಾಲಾಯಕ್ ಆಸಾಮಿ – ಎಂದೆಲ್ಲ ಹೇಳಿದ ಖರೇಸೆಟ್ಟಿ. ಮಹಾದೇವಮ್ಮನನ್ನೇ ಬಲೆಗೆ ಬೀಳಿಸಲು ಆ ಮರಿಸ್ವಾಮಿ ಪ್ರಯತ್ನಿಸಿದ್ದನಂತೆ. ಅವಳು ಒಳ್ಳೆಯ ಹೆಣ್ಣುಮಗಳು, ಅವನನ್ನು ಬಯ್ದು ಛೀಥೂ ಹಾಕಿದಳಂತೆ. ಅದಕ್ಕೇ ಇವನಿಗೆ ಸಿಟ್ಟು. ಮಹಾದೇವಮ್ಮನಿಗೆದುರಾಗಿ ಚೆನ್ನವ್ವನನ್ನು ಎತ್ತಿ ಕಟ್ಟಿದವನೂ ಅವನೇ ಅಂತೆ. ಈ ಅಂಶಗಳನ್ನೆಲ್ಲ ಪತ್ರಿಕೆಯಲ್ಲಿ ಹೊರಗೆಡವಬೇಕು ಎಂದು ಆತ ಹೇಳಿದ."

"ಅದರಿಂದ ಅವನಿಗೇನು ಲಾಭ?"

"ಏನು ಲಾಭವೋ ತಿಳಿಯಲಿಲ್ಲ. ಆ ಮರಿಸ್ವಾಮಿಯ ಬಗ್ಗೆ ಅವನಿಗೆ ಕಡುಕೋಪವಿದ್ದುದಂತೂ ಸ್ಪಷ್ಟವಾಗಿತ್ತು. ಅವನನ್ನು ತೆಗೆದುಹಾಕಿ ಇನ್ನೊಬ್ಬ ಯೋಗ್ಯನನ್ನು ತಂದು ಅಧಿಕಾರಕ್ಕೇರಿಸಬೇಕಾಗಿದೆಯೆಂದು ಆತ ಹೇಳಿದ. ನಿಮ್ಮ ಗುರುತಿನವರು ಒಳ್ಳೆಯವರು ಸಂಭಾವಿತರು ಯಾರಾದರೂ ಮರಿದೇವರಿರುವರೇ ಎಂದೂ ವಿಚಾರಿಸಿದ. ನಾನು ನಿಮ್ಮ ಹೆಸರು ಹೇಳಿದೆ – ನೀವು ಬಹಳ ಯೋಗ್ಯರು, ಪಂಡಿತರು, ವಿರಕ್ತರು ಎಂದೆಲ್ಲಾ ವರ್ಣಿಸಿದೆ. ಅದಕ್ಕೆ ಆತ – 'ವಿರಕ್ತರಾಗಿರದಿದ್ದರೂ ಚಿಂತೆಯಿಲ್ಲ, ನಾಲ್ಕು ಜನ ಹೇಳಿದ ಹಾಗೆ ಕೇಳಿಕೊಂಡು ಹೋಗುವವನಿದ್ದರೆ ಸಾಕು' ಎಂದು ಹೇಳಿದ."

"ಸರಿ. ಸರಿ. ಅರ್ಥವಾಯಿತು. ಆ ಮರಿಸ್ವಾಮಿ ಈ ಖರೇಸೆಟ್ಟಿಯ ಮಾತಿಗೆ ಮನ್ನಣೆ ಕೊಡುತ್ತಿರಲಿಕ್ಕಿಲ್ಲ. ಅಂತೇ ಅವನನ್ನು ತೆಗೆದುಹಾಕಬೇಕೆಂಬ ಹಟ ಹುಟ್ಟಿದ್ದೀತು ಸೆಟ್ಟಿಗೆ – ಇವನು ಹೇಳಿದ ಹಾಗೆ ಕೇಳಿದರೆ ಮಾತ್ರ ನಾನೂ ಸ್ವಾಮಿಯಾಗಿ ಉಳಿಯುವದೆಂದಂತಾಯಿತಲ್ಲ?"

"ಕಾರ್ಯಸಾಧನೆಗಾಗಿ ಏನಾದರೂ ಮಾಡಲೇ ಬೇಕಾಗುತ್ತದೆ. ಅವನನ್ನು ಬೀಳ್ಕೊಂಡು ಬಂದ ಬಳಿಕ ಚೆನ್ನವ್ವನ ಮನೆಯಲ್ಲಿ ಅವನ ವಿಷಯ ಪ್ರಸ್ತಾಪಿಸಿದೆ. ಮರಿಸ್ವಾಮಿಯನ್ನು ಆತ ಹೇಗೆ ಬಯ್ದಿದ್ದನೋ ಹಾಗೆ ಗುರುಶಾಂತಪ್ಪ ಸೆಟ್ಟಿಯನ್ನು ಬಯ್ದರು. ಆತ ಒಬ್ಬ ಭಿಕಾರಿ. ವ್ಯಾಪಾರದಲ್ಲಿ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾನೆ, ಈಗ ಕೈಯಲ್ಲಿ ಕಾಸಿಲ್ಲ, ಹಣಕ್ಕಾಗಿ ಮರಿಸ್ವಾಮಿಯನ್ನು ಪೀಡಿಸಿದ, ಅವರು ಕೊಡಲಿಲ್ಲವಾದ್ದರಿಂದ ದ್ವೇಷವಿಟ್ಟುಕೊಂಡು ಅವರ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾನೆ, ಅವನ ನಡತೆಯೂ ಚೆನ್ನಾಗಿಲ್ಲ, ಮನೆಯಲ್ಲಿ ಎಂಟು ಮಕ್ಕಳಿದ್ದರೂ ಹೊರಗಡೆ ಇನ್ನೊಬ್ಬಳನ್ನು ಇಟ್ಟುಕೊಂಡಿದ್ದಾನೆ – ನೀಚ – ಎಂದು ಅವರು ಹೇಳಿದರು. ಆ ಊರಿನ ರಾಡಿಯನ್ನು ಕಂಡು ನಾನು ದಿಙ್ಮೂಢನಂತಾದೆ. ಅದೇ ದಿನವೇ ರೈಲು ಹತ್ತಿ ಬಂದುಬಿಟ್ಟೆ."

"ನನ್ನ ನಿನ್ನ ರಾಡಿಗೆ ಅಲ್ಲಿನ ರಾಡಿಯೇನೂ ಕಡಮೆಯದಲ್ಲ ಎಂದಂತಾಯಿತಲ್ಲ?"

"ಛೆ. ಛೆ. ಅದರ ಮುಂದೆ ನಮ್ಮ ನಿಮ್ಮದೆಲ್ಲಾ ಏನು ಬಿಡಿರಿ. ಮರಿಸ್ವಾಮಿ, ಅವನ ತಂಗೆವ್ವ, ಚೆನ್ನವ್ವ, ಗುರುಶಾಂತಪ್ಪ, ಮಹಾದೇವಮ್ಮ, ಖರೇಸೆಟ್ಟಿ, ಪುಷ್ಪಾವತಿ .... ಬೈಗಳು .... ದೋಷಾರೋಪಣೆ .... ಮರುಬೈಗಳು ಪ್ರತ್ಯಾರೋಪ....ಎಲ್ಲರೂ ಒಂದೇ ಜಾತಿಯವರೇ .... ಆದರೂ ಇಂಥ ಜಗಳ.... ಇಂಥ ರಾಡಿ...."

"ರಾಡಿಯಿದ್ದರೇನೇ ನಿನ್ನಂಥವನಿಗೆ ಲಾಭವಲ್ಲವೇ ಶಾಸ್ತ್ರಿ?"

"ಅದೂ ನಿಜವೆ. ಯಾವ ಜಗಳವೂ ಇಲ್ಲದೆ ಸಮಾಜವೆಲ್ಲ ಒಕ್ಕಟ್ಟಿನಿಂದ ನಡೆಯುತ್ತಿದ್ದರೆ ನನ್ನಂಥವರನ್ನು ನಿಮ್ಮಂಥವರನ್ನು ಯಾರು ಕೇಳಬೇಕು?"

"ಆ ತತ್ವಜ್ಞಾನ ಹಾಗಿರಲಿ. ಈಗ ಏನು ಮಾಡೆನ್ನುತ್ತೀ ನನಗೆ?"

"ಒಂದು ವಾರದಿಂದ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದೇನೆ, ನಿಮ್ಮನ್ನು ಆ ಪೀಠದ ಅಧಿಕಾರಿಯನ್ನಾಗಿ ಮಾಡಿದರೆ ಎಲ್ಲರಿಗೂ ಪ್ರಯೋಜನವುಂಟು. ಈಗಿರುವ ಸ್ವಾಮಿ ಗೋರಿಯಲ್ಲಿ ಒಂದೂವರೆ ಕಾಲು ಹಾಕಿದ್ದಂತಿದೆ. ಎಂದು ಗೊಟಕ್ ಎನ್ನುವನೊ. ಖರೇಸೆಟ್ಟಿಯನ್ನು ಅಂತರಂಗಕ್ಕೆಳೆದುಕೊಂಡರೆ ಈ ಕೆಲಸ ಸಾಧಿಸುತ್ತವೆ – ಖಂಡಿತವಾಗಿ. ಆತ ಮಹಾ ಶಕ್ತಿವಂತನಂತೆ. ಸುತ್ತುಮುತ್ತಲಿನ ಹಳ್ಳಿಗಳಲ್ಲೆಲ್ಲ ಅವನ ಪ್ರಭಾವವಿದೆಯಂತೆ ಆತ ಒಂದು ಮಾತು ಹೇಳಿದರೆ ಒಂದು ತಾಸಿನೊಳಗಾಗಿ ಸಾವಿರಾರು ಜನರು ಕೂಡುತ್ತಾ

ರಂತೆ. ಶಕ್ತಿ ಯುಕ್ತಿ ಎರಡನ್ನೂ ಪ್ರಯೋಗಿಸಿ ಎಂಥ ಕೆಲಸವನ್ನಾದರೂ ಸಾಧಿಸಬಲ್ಲ ಆತ. ಅವನು ಹೇಳಿದ್ದಕ್ಕೆಲ್ಲ ಹೂಂಗುಟ್ಟಿದರಾಯಿತಲ್ಲ? ಅವನಿಗೆ ಆಗಾಗ ಅಷ್ಟಿಷ್ಟು ಹಣವನ್ನೂ ಕೊಟ್ಟರಾಯಿತು."

"ಸರಿಯಪ್ಪ. ಈಗ ನಿನ್ನ ಪ್ಲ್ಯಾನ್ ಏನು?"

"ಮೊದಲು ಆ ಊರಲ್ಲೂ ಅದರ ಸುತ್ತಮುತ್ತಲಿನ ಸೀಮೆಯಲ್ಲೂ ನಿಮಗೆ ಕೀರ್ತಿ ದೊರೆಯುವಂತೆ ಮಾಡಬೇಕು. ನಮ್ಮ ಜಗದ್ಗುರು ಪೀಠಕ್ಕೆ ಇವರೇ ಸ್ವಾಮಿಗಳಾಗಬೇಕು ಎಂದು ಜನ ತಾವಾಗಿಯೆ ಮಾತಾಡುವಂತಾಗ ಬೇಕು. ಟ್ರಸ್ಟ್ ಕಮಿಟಿಯೂ ನಿಮ್ಮ ಕಡೆಗಾಗಬಹುದೆಂದು ಖರೇಸೆಟ್ಟಿ ಹೇಳಿದ."

"ಪ್ರಾಣ ಹೋದರೂ ಮಠ ಬಿಡುವುದಿಲ್ಲವೆಂದು ಆ ಮರಿಸ್ವಾಮಿ ಹೇಳುವನಂತಲ್ಲ?"

"ನಿಮಗೆ ಹೇಗೆ ಗೊತ್ತಾಯಿತು?" ಎಂದು ಆಶ್ಚರ್ಯದ ಧ್ವನಿಯಲ್ಲಿ ಕೇಳಿದ ಶಾಸ್ತ್ರಿ.

ನಾನು ನಗುತ್ತಾ ವೇಶೀನಗರದಲ್ಲಿ ಮಹಾದೇವಮ್ಮನೂ ಅವಳ ಪತಿಯೂ ಭೆಟ್ಟಿಯಾದ ಸಂಗತಿಯನ್ನು ವಿವರಿಸಿದೆ.

"ಅಂತೂ ನೀವೂ ಅಸಾಮಾನ್ಯರಪ್ಪ. ಅರ್ಧ ಕೆಲಸ ಸಾಧಿಸಿಕೊಂಡೇ ಬಂದಿದ್ದೀರಿ. ಮರಿಸ್ವಾಮಿಯೂ ಅವನ ಪರವಾಗಿ ಗುರುಶಾಂತಪ್ಪನೂ ದಂಗಾಮುಸ್ತಿ ಮಾಡಿದರೆ ಅದನ್ನು ಖರೇಸೆಟ್ಟಿ ಜಡಿಯಪ್ಪ ಇಬ್ಬರೂ ಕೂಡಿ ನೋಡಿಕೊಳ್ಳುತ್ತಾರೆ."

"ಜರತಾರಿ ಪೀಠ ಸಿಕ್ಕಹಾಗೇ ಅನ್ನು."

"ಅರ್ಧಕ್ಕರ್ಧ ಸಿಕ್ಕಿತೆಂದೇ ಹೇಳಬಹುದು. ಮುಂದಿನ ಕೆಲಸವನ್ನು ಮಾತ್ರ ಬಹಳ ಎಚ್ಚರಿಕೆಯಿಂದ ಸಾಧಿಸಬೇಕು ಸಾಮಾನ್ಯ ಜನರನ್ನು ಮರುಳು ಮಾಡಬೇಕಾದುದು ಮೊದಲನೆಯ ವಿಷಯ. ಅವರ ಬೆಂಬಲವಿದ್ದರೆ ಜಗದ್ಗುರುವಾದರೂ ಆದೀರಿ, ರಾಜಾಧಿರಾಜರಾದರೂ ಆದೀರಿ," ಎಂದು ನುಡಿದು ಶಾಸ್ತ್ರಿ ಮೇಲಕ್ಕೆದ್ದ.

[೪]

ಮಾರನೆಯ ದಿನ ಬೆಳಗಿನಲ್ಲಿ ನಾನು ಎದ್ದು ಮುಖ ತೊಳೆದು ಚಹ ಕುಡಿಯಲು ಅಣಿಯಾಗುತ್ತಿದ್ದಂತೆಯೆ ಶಾಸ್ತ್ರಿ ಕಾಗದವೊಂದನ್ನು ಹಿಡಿದು

ಕೊಂಡು ಬಂದು–"ನಮ್ಮ ಪ್ಲ್ಯಾನ್‌ನಲ್ಲಿ ಮೊದಲನೆಯ ಕಾರ್ಯಕ್ರಮ ತಯಾರು ಮಾಡಿದ್ದೇನೆ ನೋಡಿ," ಎಂದು ನುಡಿದು ಅದನ್ನು ನನ್ನ ಕೈಗಿತ್ತ. ಅದರಲ್ಲಿ ಶಾಸ್ತ್ರಿ ಬರೆದಿದ್ದುದು ಹೀಗೆ:

"ಜರತಾರಿ ನಗರಕ್ಕೆ ಪ್ರಸಿದ್ಧ ಸ್ವಾಮಿಗಳ ಸಂದರ್ಶನ
ಸ್ವಾಗತ ಸಮಿತಿಯ ಸಿದ್ಧತೆ

ವೇಶೀ ಪಟ್ಟಣದಲ್ಲಿ ಇಪ್ಪತ್ತು ವರ್ಷಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿದ್ದು ನ್ಯಾಯ, ವೇದಾಂತ, ಸಾಹಿತ್ಯಗಳಲ್ಲಿ ಆಚಾರ್ಯ ಪದವಿ ಪಡೆದವರೂ, ಕನ್ನಡ ಹಿಂದೀ ಬಂಗಾಲಿ ಉರ್ದೂ ಇಂಗ್ಲೀಷು ಭಾಷೆಗಳಲ್ಲಿ ಪಂಡಿತರೂ, ಶ್ರೇಷ್ಠ ತತ್ವಜ್ಞಾನಿಗಳೂ ಲೇಖಕರೂ ಭಾಷಣಕಾರರೂ ಮಹಾ ವಿರಕ್ತರೂ, ಶಿವಯೋಗಿಗಳೂ, ತಮ್ಮ ಪ್ರಚಂಡ ವಿದ್ವತ್ತಿನಿಂದ ದೇಶ ವಿದೇಶಗಳಲ್ಲಿ ಪ್ರಖ್ಯಾತ ಪಡೆದವರು ಆದ ವೀರಶೈವ ಕುಲಗುರು ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಶ್ರೀ ಸಿದ್ಧವೀರ ಸ್ವಾಮಿಜಿ ಅವರು ಅನೇಕ ವರ್ಷಗಳ ತರುವಾಯ ಕನ್ನಡ ನಾಡಿಗೆ ಹಿಂತಿರುಗುತ್ತಿದ್ದು ಅವರನ್ನು ಸ್ವಾಗತಿಸಲು ಕರ್ನಾಟಕದ ಎಲ್ಲಾ ಪ್ರಮುಖ ನಗರಗಳಲ್ಲೂ ಸ್ವಾಗತ ಸಮಿತಿಗಳೇರ್ಪಟ್ಟು ಸಿದ್ಧತೆ ಮಾಡಿಕೊಳ್ಳುತ್ತಿವೆ. ವೀರಶೈವರ ಕೇಂದ್ರ ಸ್ಥಳವಾದ ನಮ್ಮಾ ಜರತಾರಿ ನಗರವೂ ಅವರನ್ನು ಬರಮಾಡಿಕೊಂಡು ಸತ್ಕರಿಸಬೇಕಾದುದು ಅತ್ಯಾವಶ್ಯಕ. ಈ ಈ ವಿಚಾರವಾಗಿ ಈಗಾಗಲೇ ನಾವು ಪ್ರಯತ್ನಪಟ್ಟದ್ದು ಶ್ರೀ ಮಹಾಸ್ವಾಮಿಗಳವರು ಎಲ್ಲಕ್ಕೂ ಮೊದಲು ನಮ್ಮ ನಗರಕ್ಕೆ ದಯಮಾಡಿಸಿ ತಮ್ಮ ಅಮೋಘ ವ್ಯಕ್ತಿತ್ವದಿಂದಲೂ ಅಮೃತವಾಣಿಯಿಂದಲೂ ನಮ್ಮನ್ನು ಉದ್ಧರಿಸಲು ಒಪ್ಪಿರುವರೆಂದು ತಿಳಿಸಲು ಅತ್ಯಂತ ಆನಂದವಾಗುತ್ತದೆ. ಈ ಮಹಾ ಕಾರ್ಯವನ್ನು ಉಚಿತ ರೀತಿಯಲ್ಲಿ ನಾಂಗಗೊಳಿಸುವುದಕ್ಕಾಗಿ ಮಹಾಜನರ ಸ್ವಾಗತ ಸಮಿತಿಯೊಂದನ್ನು ರಚಿಸಲು ಇದೇ............ನೇ ದಿನ ಸಾರ್ವಜನಿಕ ಸಭೆಯೊಂದನ್ನು ಕರೆಯಲಾಗಿದೆ. ಎಲ್ಲರೂ ಬರಬೇಕಾಗಿ ವಿನಂತಿ.

ಕೋಡಂಗೀಪುರದ ಖರೇಸೆಟ್ಟಿ,
ನಿಮಂತ್ರಕ."

ಓದುವುದಾದ ಬಳಿಕ ತಲೆಯೆತ್ತಿ ಶಾಸ್ತ್ರಿಯನ್ನು ದಿಟ್ಟಿಸುತ್ತ ಕೇಳಿದೆ: "ಇದನ್ನೇನು ಇಲ್ಲಿಯೆ ಪ್ರಿಂಟ್ ಮಾಡಿಸಿ ಕಳಿಸುತ್ತೀಯಾ?"

“ಛೆ. ಛೆ. ಇಲ್ಲಿ ಮಾಡಿದರೆ ಹ್ಯಾಗೆ? ಇದು ಜರತಾರಿ ನಗರದಲ್ಲೇ ಆಚ್ಯಾಗಬೇಕು. ಹೊರಗಿನವರ ಕೈವಾಡವೇನೂ ಇದರಲ್ಲಿಲ್ಲವೆಂದು ಜನರಿಗನ್ನಿಸಬೇಕಲ್ಲ ?”

“ಖರೇಸೆಟ್ಟಿಯೆ ಈ ಕೆಲಸ ಮಾಡುವನೇನು ?”

“ಇನ್ನು ಮುಂದೆ ಅವನೇ ಈ ನಾಟಕದ ಸೂತ್ರಧಾರ. ಅವನ ಮುಖಾಂತರವೇ ಇದೆಲ್ಲವೂ ನಡೆಯಬೇಕು.”

“ಸರಿ. ಸರಿ. ಸೋಮವಾರದವರೆಗೂ ನಾನೆಲ್ಲಿರಲಿ ?”

“ಆದಿತ್ಯವಾರ ರಾತ್ರಿ ಗಾಡಿಗೆ ಇಲ್ಲಿಗೆ ಹೊರಡುವುದು. ಬೆಳಿಗ್ಗೆ ಎಂಟು ಗಂಟೆಗೆ ಆ ಊರಿಗೆ ತಲಪುತ್ತೇವೆ. ನಿಲ್ದಾಣದಲ್ಲಿ ಪುರಜನರಿಂದ ಸ್ವಾಗತದ ವ್ಯವಸ್ಥೆ, ಅಲ್ಲಿಂದ ಮೆರವಣಿಗೆಯ ವ್ಯವಸ್ಥೆ ಎಲ್ಲವೂ ಆಗಬೇಕಾಗುವುದು. ಆದಿತ್ಯವಾರದವರೆಗೂ ಇಲ್ಲಿಯೇ ಇದ್ದುಬಿಡಿ, ಸುಖವಾಗಿ.”

ಅದೇ ದಿನವೇ ಗಂಗಾಧರಶಾಸ್ತ್ರಿ ಆ ಕಾಗದವನ್ನು ಖರೇಸೆಟ್ಟಿಗೆ ಕಳುಹಿಸಿಕೊಟ್ಟ. ನಾನು ಮಹಾದೇವಿಗೊಂದು ಪತ್ರ ಬರೆದು ಸ್ವಾಗತ ಸತ್ಕಾರಗಳ ವಿವರಗಳನ್ನೆಲ್ಲ ತಿಳಿಸಿದೆ. ಭಾನುವಾರದವರೆಗೆ ಅಲ್ಲಿರಲು ನನಗೆ ಇಷ್ಟವಿರಲಿಲ್ಲ. ಕುಟ್ಬೋಲಿನಿ, ಹರಿಹರ ಇವರ ಕೈಗೆ ಸಿಕ್ಕಿ ಫಜೀತಿಯಾಗಬಹುದೆಂಬ ಭೀತಿಯಿದ್ದೇ ಇತ್ತು. ನನ್ನ ತಂದೆ–ತಾಯಿ, ಅಣ್ಣ–ತಮ್ಮಂದಿರು ಮೊದಲಾದವರನ್ನು ಕಂಡು ಬಹಳ ಕಾಲ ಕಳೆದಿತ್ತು. ಪಾರ್ವತಿಯನ್ನು ನೋಡುವ ಬಯಕೆಯು ಇತ್ತು. ಅಂತೆಯೆ, ಊರಿಗೆ ಹೋಗಿ ಅವರನ್ನೆಲ್ಲ ಕಂಡು ಬಂದೆ. ಪಾರ್ವತಿಯು ತವರೂರಿಗೂ ಹೋಗಿ ಒಂದು ದಿನ ಇದ್ದು ಬಂದೆ. ದೊಡ್ಡ ಜಗದ್ಗುರು ಪೀಠವೊಂದಕ್ಕೆ ನಾನು ಸ್ವಾಮಿಯಾಗಲಿರುವ ಸುದ್ದಿ ತಿಳಿದಾಗ ಸಹಜವಾಗಿಯೆ ಅವರೆಲ್ಲರಿಗೂ ಸಂತೋಷವಾಯಿತು. “ಈ ಸಲವಾದರೂ ಹುಷಾರಾಗಿರಯ್ಯ, ಹಿಂದಿನ ಸಲ ಮಾಡಿದಂತೆ ಮಾಡಬೇಡ. ಕೆಟ್ಟ ಜನರ ಸಹವಾಸಕ್ಕೆ ಬೀಳಬೇಡ,” ಎಂದು ನನ್ನ ತಾಯಿ ಉಪದೇಶಿಸಿದಳು. ಪಾಪ, ಅದೊಂದು ಸರಲ ಜೀವ. ಕೆಟ್ಟವರ ಸಹವಾಸ ಮಾಡದಿದ್ದರೆ ಈ ಪ್ರಪಂಚದಲ್ಲಿ ಬದುಕುವುದೇ ಸಾಧ್ಯವಾಗದೆಂಬ ಸತ್ಯ ಅವರಿಗೆ ತಿಳಿಯದು.

ಬೇರೊಂದು ನಗರದಲ್ಲಿ ಅಂಗಡಿಯಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ನನ್ನ ತಮ್ಮ ಚಿಕ್ಕವೀರಯ್ಯ ನಾ ಬಂದ ಸುದ್ದಿ ಕೇಳಿ ಊರಿಗೆ ಬಂದಿದ್ದ. ಈಚೆಗೆ ಅವನಿಗೆ ತುಂಬಾ ಹಾನಿಯಾಗಿದ್ದಿತಂತೆ. ಆ ವಿಚಾರವಾಗಿ ಅರ್ಧ

ಗಂಟೆಯ ಕಾಲ ಗೋಳು ತೋಡಿಕೊಂಡ. ಯಾವಾಗಲೂ ಹಾಗೇ ಚಿಕ್ಕ ವೀರಯ್ಯ. ಅವನದು ಗೋಳು....ಗೋಳು....ಗೋಳು....

"ಅಂಥ ಭಾರೀ ಮಠ ಕೈಗೆ ಬಂದಾಗ ನೀನು ನಮ್ಮನ್ನೆಲ್ಲಾ ಮರೆತು ಬಿಟ್ಟು ಹೆಂಗಸರಿಗಾಗಿ ಹಣವನ್ನು ನೀರಿನಂತೆ ಹಾಳುಮಾಡಿದೆ. ಅಲ್ಲಿ ನಾವು ವ್ಯಾಪಾರಕ್ಕೆ ಕಾಸಿಲ್ಲದೆ ನರಳುತ್ತಿದ್ದೆವು...."

"ನಿನ್ನ ವ್ಯಾಪಾರಕ್ಕೆ ಹಣವೊದಗಿಸಲು ನಾನೇನು ಮಾರವಾಡಿ ಯೇನು?"

"ಅಣ್ಣ ತಮ್ಮ ಎಂಬ ಕರುಳು ಸ್ವಲ್ಪವಾದರೂ ಇರಬಾರದೆ ನಿನಗೆ? ಬೇರೆ ಸ್ವಾಮಿಗಳನ್ನು ಸ್ವಲ್ಪ ಕಣ್ಣು ತೆಗೆದು ನೋಡು. ತಮ್ಮ ಬಂಧು ಬಾಂಧವರಿಗೆ ಎಷ್ಟು ಲಾಭ ಮಾಡಿಕೊಡುತ್ತಾರೆ!"

"ನಾನು ಅಂಥಿಂಥ ಸ್ವಾಮಿಯಲ್ಲ, ಕಾವಿ ಹಾಕಿ ದೀಕ್ಷೆ ತೊಟ್ಟ ಬಳಿಕ ಪುನರ್ಜನ್ಮವಾದಂತಾಯಿತು. ಈಗ ನಿಮ್ಮೊಡನೆ ನನಗೇನು ಸಂಬಂಧ?"

"ಆಹಾ, ನಿನ್ನ ಪುನರ್ಜನ್ಮವೆ! ಮಾತು ಒಂದು ಕಲಿತಿದ್ದೀ ಅಷ್ಟೆ. ಮಣ್ಣು ಹಾಕಿತು ನಿನ್ನ ಕಾವಿಗೆ. 'ಜನಪದ'ದಲ್ಲಿ ನಿನ್ನ ಕೀರ್ತಿ ಢಮ ಢಮ ಢಮ್ ಡಂಗುರವಾಯಿತಲ್ಲ! ಆ ಸರಸು ಎಂಬ ಹುಡುಗಿಗಾಗಿ ಎಷ್ಟು ಸಾವಿರ ಹಾಳು ಮಾಡಿದೆ?"

"ಅದೆಲ್ಲ ನಿನಗೇಕೆ ಬೇಕು?" ಎಂದು ಕೊಂಚ ಕೋಪದಿಂದಲೆ ಕೇಳಿದೆ ನಾನು.

"ಒಬ್ಬರೇ, ಇಬ್ಬರೇ! ನಿನ್ನ ಸೂಳೆಯರಿಗೆ ಲೆಕ್ಕವಿಲ್ಲ. ಗದಿಗೆಮ್ಮ ಅಂತೆ, ಸ್ನೇಹಲತಾ ಅಂತೆ, ಪಾರ್ವತಿಯಂತೆ, ಇನ್ನೂ ಎಷ್ಟು ಜನರಿರುವರೋ ದೇವರೇ ಬಲ್ಲ. ಅವರಿಗಾಗಿ ಹಣವೆಲ್ಲ ಹಾಳು. ನಮಗೆ ಮಾತ್ರ ಏನೂ ಇಲ್ಲ....ಒಳ್ಳೆ ಸ್ವಾಮಿಯೆ...."

"ಮೊದಲು ಈ ಅಧಿಕಾರ ಲಭಿಸಲಿ ಸುಮ್ಮನಿರಯ್ಯ. ಈ ಸಲ ನಿನ್ನನ್ನು ಮರೆಯುವುದಿಲ್ಲ," ಎಂದು ಹೇಳಿ ಆತನ ಬಾಯಿ ಮುಚ್ಚಿಸಬೇಕಾದರೆ ಸಾಕು ಸಾಕೆನ್ನಿಸಿತು ನನಗೆ.

ಅನಂತರ ನನ್ನ ಕಿರಿಯ ತಮ್ಮ ಸಂಗಯ್ಯ. ಕಿರಿಯನೆಂದರೆ ಕಿರಿಯ ನೇನೂ ಅಲ್ಲ. ಈಗಾಗಲೆ ಅವನಿಗೆ ಇಪ್ಪತ್ತೊಂದು ವರ್ಷ. ಇನ್ನೂ ಮ್ಯಾಟ್ರಿಕ್ ಪಾಸಾಗಿಲ್ಲ. ಒಂದೊಂದು ವರ್ಗದಲ್ಲಿ ಎರಡೆರಡು ವರ್ಷ ಕಳೆದು ಮ್ಯಾಟ್ರಿಕ್ಕಿಗೆ

ಮೂರು ವರ್ಷ ಕುಳಿತಿದ್ದಾನೆ. ಅಭ್ಯಾಸ ಮಾಡುವುದಕ್ಕಿಂತ ಪೋಕಿ ಮಾಡು ವುದರಲ್ಲೇ ಹೆಚ್ಚು ಆಸಕ್ತಿ. ನನ್ನ ಖಾಸಾ ತಮ್ಮನೇ ಅಲ್ಲವೇ?

" ಏನಣ್ಣ, ಬಲು ದಿನಗಳ ನಂತರ ಬಂದುಬಿಟ್ಟೆ. ಕಾಶ್ಮೀರ ಟಿಬೆಟ್ ನೋಡಿಕೊಂಡು ಮಜಾ ಮಾಡಿಕೊಂಡು ಬಂದಿರಬಹುದು. ನೀನೇ ಸುದೈವಿ ಯಪ್ಪ. ಯಾರದೋ ದುಡ್ಡು, ಎಲ್ಲಮ್ಮನ ಜಾತ್ರೆ. ನಿನ್ನ ಹಾಗೆ ನಾನೂ ಸ್ವಾಮಿಯಾಗಿಬಿಡಲೇ ಎಂದೂ ಅನ್ನಿಸುತ್ತದೆ ಒಮ್ಮೊಮ್ಮೆ. ಆಗ್ರಾ ನೋಡ ಬೇಕು, ತಾಜಮಹಲ್ ನೋಡಬೇಕು, ದಿಲ್ಲಿ ನೋಡಬೇಕು, ಕಲ್ಕತ್ತಾ ನೋಡಬೇಕು. ಯಾವುದಕ್ಕೂ ಹಣ ಬೇಕಲ್ಲಾ?" ಎಂದು ಆತ ಆರಂಭಿಸಿದ.

"ಹೌದಯ್ಯ. ಹಣ ಬೇಕಲ್ಲ? ಅದೇನು ಮುಗಿಲಿನಿಂದ ಬೀಳು ತ್ತದೆಯೆ?" ಎಂದು ನಾನು ಅಣಕವಾಡಿದೆ.

"ಮುಗಿಲಿನಿಂದ ಹೇಗೆ ಬಿದ್ದೀತು? ನಿನ್ನ ಜೇಬಿನಿಂದ ಬೀಳುತ್ತದೆ. ನಮ್ಮ ಕೈಗೆ ಮಾತ್ರ ಹತ್ತುವುದಿಲ್ಲ. ಎಲ್ಲಾ ದಕ್ಕುವುದು ಕೋಮಲ ಕೈಗಳಿಗೇ...."

" ಏ ಅಧಿಕಪ್ರಸಂಗೀ," ಎಂದು ಗದರಿಸಿದೆನಾದರೂ ಆತ ಸುಮ್ಮನಾಗ ಲಿಲ್ಲ. ನಗುನಗುತ್ತ ಹೇಳತೊಡಗಿದ.

"ನಿನ್ನ ಜೀವನದ ಮೇಲೆ ಒಂದು ಸಿನಿಮಾ ತಯಾರಿಸಬಹುದು ನೋಡು ಅಣ್ಣ. ನಿನ್ನಿಂದಾಗಿ ಒಬ್ಬ ತರುಣಿಯೂ ಬಾವಿಯ ಪಾಲಾದಳೆಂದು ಕೇಳಿದ್ದೇನೆ. ಅದನ್ನೊಂದು ಕತೆಯಾಗಿ ಬರೆಯಬೇಕೆಂದು ನನ್ನ ವಿಚಾರವಿದೆ. ಹೂಂ. ಈಚೆಗೆ ನಾನು ಲೇಖಕನಾಗಲೂ ಪ್ರಯತ್ನಿಸುತ್ತಿದ್ದೇನೆ. ನಮ್ಮ ಹೈಸ್ಕೂಲಿಗೆ ಆ ಕಾದಂಬರಿಕಾರರು ಬಂದು ಭಾಷಣ ಮಾಡಿದಂದಿನಿಂದ ನನಗೂ ಸ್ಫೂರ್ತಿ ಬಂದಿದೆ...."

" ಯಾವ ಕಾದಂಬರಿಕಾರರು ?"

" ಕುಟ್ಮೋಟೀಶನಿ ಅಂತ ಕಾವ್ಯನಾಮ ಇಟ್ಟುಕೊಂಡಿದ್ದಾರಲ್ಲಾ ಅವರು."

ಕುಳಿತಿದ್ದ ಕುರ್ಚಿಯ ಕೆಳಗೇ ಬಾಂಬು ಸಿಡಿದಂತಾಗಿ ನಾನು ದಿಗಿಲು ಗೊಂಡು ಎದ್ದುಬಿಟ್ಟೆ.

" ಯಾರು ಅಂದೆ? ಕುಟ್ಮೋಟೀಶನಿ? ಅವನಿಗೂ ನಿನಗೂ ಪರಿಚಯ ವಿದೆಯೇ?"

"ಈಚೆಗೆ ಅವರೊಂದಿಗೆ ಒಳ್ಳೆ ದೋಸ್ತಿ ಬೆಳೆದಿದೆ. ನಮ್ಮ ಹೈಸ್ಕೂಲಿನ ಸಾಹಿತ್ಯ ಸಂಘಕ್ಕೆ ನಾನೇ ಕಾರ್ಯದರ್ಶಿ. ಅವರನ್ನು ಭಾಷಣಕ್ಕೆ ಆಮಂತ್ರಿಸಿದವನೂ ನಾನೇ. ಹೀಗಾಗಿ ಗಾಢ ಪರಿಚಯು ಬೆಳೆಯಿತು."

"ನನ್ನ ವಿಚಾರವಾಗಿ ನಿನ್ನ ಹತ್ತಿರ ಏನನ್ನಾದರೂ ಹೇಳಿದನೇ ಆ ಕುಟ್ಸೋಶನಿ?"

"ನಿಮ್ಮ ಅಣ್ಣ ಈಗ ಯಾವ ಊರಲ್ಲಿದ್ದಾರೆ, ಈ ಕಡೆ ಎಂದು ಬರಬಹುದು ಎಂದು ಕೇಳಿದರು, ಅಷ್ಟೆ."

"ಇನ್ನೇನೂ ಇಲ್ಲವೇ?"

"ಇಲ್ಲ. ಯಾಕೆ?"

ನನ್ನ ಮುಖದ ಮೇಲೆಲ್ಲ ಬೆವರು ಹನಿದಿತ್ತು. ಅಂಗವಸ್ತ್ರದಿಂದ ಗಾಳಿ ಹಾಕಿಕೊಳ್ಳುತ್ತ ಶಿವಶಿವಾ ಎನ್ನುತ್ತ ಕುರ್ಚಿಯ ಮೇಲೆ ಕುಕ್ಕರಿಸಿದೆ. ಕುಟ್ಸೋಶನಿಯ ದೃಷ್ಟಿಗೆ ಬೀಳುವುದು ಬೇಡವೆಂದು ಇಲ್ಲಿಗೆ ಬಂದರೆ ಇಲ್ಲಿಯೂ ಅವನ ಮಾತೇ! ಹರಹರಾ....ಸಾಂಬಶಿವಾ....ಬಸವಾ....ಬಸವಾ....

ಒಡನೆಯೆ ಕರಡೆಪ್ಪಸೆಟ್ಟರ ನೆನಪು ಬಂದಿತು ನನಗೆ. ಅದರೊಂದಿಗೆ ಮಹಾದೇವಿಯ ಮುದ್ದುಮುಖವೂ ಕಣ್ಣೆದುರು ಮೂಡಿತು. ಅವಳೊಂದಿಗೆ ಕಳೆದ ರಾತ್ರಿಗಳನ್ನು ನೆನೆದುಕೊಂಡು ಹರ್ಷಿಸತೊಡಗಿದೆ.

"ಒಂದೆರಡು ಪುಲ್ಲನ್‌ಸೂಟು ಹೊಲಿಸಬೇಕು ಅಣ್ಣ. ಒಂದೆರಡು ನೂರು ರೂಪಾಯಿ ಬೇಕು," ಎಂದ, ನನ್ನ ಸೋದರ ರತ್ನ.

"ಒಂದೆರಡು ನೂರೇ ಸಾಕೇ?" ಎಂದು ನಾನು ಅಣಕವಾಡಿದೆ.

"ಅದೇಕೆ ಸಾಕಾದೀತು? ಇನ್ನೆರಡು ನೂರು ಕೊಡು," ಎಂದನಾ ಭೂಪ. ನಾನು ಬೇಸ್ತು ಬಿದ್ದೆ. ಅಣ್ಣನಿಗಿಂತ ತಮ್ಮ ಒಂದು ಕೈ ಮೇಲು!

"ನಾನು ಜಗದ್ಗುರುವಾದ ಬಳಿಕ ನಿನಗೇನೂ ಕೊರತೆಯಾಗದಂತೆ ನೋಡುತ್ತೇನೆ," ಎಂದು ಆಶ್ವಾಸನ ಕೊಟ್ಟು ಅವನನ್ನು ಸಮಾಧಾನಗೊಳಿಸಿದೆ.

ಸಾಯಂಕಾಲದ ವೇಳೆಗೆ ನಾನು ಬಯಲಿನ ಕಡೆ ತಿರುಗಾಡಲು ಹೊರಟದ್ದ ಹಾಗೆ ಗಡಬಡಯ್ಯನ ಭೆಟ್ಟಿಯಾಯಿತು. ನಾನು ಎಳೆಯನಾಗಿದ್ದಾಗ ನನಗೆ ಸಂಸ್ಕೃತ ಅಕ್ಷರಗಳನ್ನೂ ಒಂದೆರಡು ಮಂತ್ರಗಳನ್ನೂ ಕಲಿಸಿದ್ದ ಗಡಬಡಯ್ಯ. ಅದನ್ನೇ ಜ್ಞಾಪಕದಲ್ಲಿಟ್ಟುಕೊಂಡು ತಾನು ನನ್ನ ಗುರುವೆಂಬುದಾಗಿ ಎಲ್ಲರೆದುರಿಗೂ ಕೊಚ್ಚಿಕೊಳ್ಳುತ್ತಿದ್ದ. ವಯಸ್ಸಾದ ಮುದುಕ; ಇಂದೋ

ನಾಳೆಯೋ ಸಾಯುವುದರಲ್ಲಿದ್ದ. ಅಂಥವ ಏನು ಹೇಳಿಕೊಂಡರೇನು ಎಂದು ಕೊಂಡು ನಾನು ಅವನ ಮಾತಿಗೆ ಗಮನ ಕೊಡದೆ ಸುಮ್ಮನಿದ್ದೆ. ನನ್ನ ಮೇಲೆ ಗುರುವಿನ ಅಧಿಕಾರ ನಡೆಸಿ ಗಡಬಡಯ್ಯ ಆಗಾಗ ನನ್ನಲ್ಲಿಗೆ ಬಂದು ಐದೋ ಹತ್ತೋ ರೂಪಾಯಿ ಗುರುದಕ್ಷಿಣೆ ಕಿತ್ತುಕೊಂಡು ಹೋಗುತ್ತಿದ್ದ. ಸಾವಿರಾರು ರೂಪಾಯಿ ಸೂರೆಮಾಡುವವನಿಗೆ ಐದು ಹತ್ತು ರೂಪಾಯಿಯ ದೇನು ಲಕ್ಷ್ಯ. ನಾನೂ ಕಣ್ಣು ಮುಚ್ಚಿಕೊಂಡು ಕೊಡುತ್ತ ಬಂದಿದ್ದೆ.

"ಹೊ ಹೊ ಹ್ಹೊ. ಯಾವಾಗ ಬಂದೆಯೋ?" ಎಂದು ಸುರುಮಾಡಿದ ಗಡಬಡಯ್ಯ. 'ಅಯ್ಯಾ' 'ಅಪ್ಪಾ' 'ರೀ' ಎಂದು ಯಾರನ್ನೂ ಸಂಬೋಧಿ ಸುವುದಿಲ್ಲ ಆತ. 'ಏನೋ, ಯಾಕೊ, ಬಾರಲೋ, ಹೋಗಲೋ, ಬಂದೆಯೋ, ತಿಂದೆಯೋ,' ಎಂದೇ ಆತ ಮಾತನಾಡಿಸುವುದು. ಅದೊಂದು ಅವನ ದುರಭ್ಯಾಸವೆಂದೂ ಹೇಳಬಹುದು. ಗಡಬಡಯ್ಯ ನಮ್ಮೂರಿನ ಪ್ರಮುಖ ಜಂಗಮ. ವೇದಮೂರ್ತಿಯೆಂದು ಹೇಳಿಕೊಳ್ಳುತ್ತಾನೆ. ಸಂಸ್ಕೃತ ಶ್ಲೋಕ ಗಳನ್ನೂ ಮಂತ್ರಗಳನ್ನೂ ಅಡ್ಡಮಳೆ ಸುರಿದಂತೆ ಸುರಿಸುತ್ತಾನೆ. ತನ್ನಂಥ ಪಂಡಿತರು, ಬುದ್ಧಿವಂತರು ಆ ಜಿಲ್ಲೆಯಲ್ಲೇ ಇನ್ನೊಬ್ಬರಿಲ್ಲವೆಂಬ ಹುಚ್ಚು ಅಹಂಕಾರ ಆತನಿಗಿದೆ. ಅಂತೆಯೆ ಎಲ್ಲರನ್ನೂ ಲಘುವಾಗಿ ಮಾತನಾಡಿಸುವ ಅಭ್ಯಾಸ. ಹತ್ತಿಪ್ಪತ್ತು ಜನ ದೊಡ್ಡ ಮನುಷ್ಯರ ಗುಂಪಿನಲ್ಲಿ ನಾನು ಬಹಳ ಗಂಭೀರವಾಗಿ ಮಂಡಿಸಿದ್ದ ಸಮಯಗಳಲ್ಲಿ ಧಡಾರನೆ ಬಂದು – "ನನಗೆ ನಾಲ್ಕು ರೂಪಾಯಿ ಬೇಕಾಗಿದೆ, ಕೊಡಬಾರೋ ಮರಿ!" ಎಂದು ಒದರಿ ಕೊಂಡು ನನಗೆ ಮತ್ತು ಅಲ್ಲಿ ಕುಳಿತವರೆಲ್ಲರಿಗೆ ಅಸಹ್ಯವೆನ್ನಿಸುವಂತೆ ಮಾಡಿ ದ್ದಾನೆ ಗಡಬಡಯ್ಯ. ಎರಡು ನಿಮಿಷಗಳಿಗಿಂತ ಹೆಚ್ಚಾಗಿ ಎಲ್ಲಿಯೂ ಕುಳಿತು ಕೊಳ್ಳುವುದಿಲ್ಲ ಆತ. ಅದೂ ಒಂದು ದುರಭ್ಯಾಸವೇ. ಗಡಿಬಿಡಿ ಮಾಡುತ್ತಾ ಬಂದು ಧಡಬಡ ಎಂದು ನಾಲ್ಕು ಮಾತು ಒದರಿ ಮತ್ತೆ ಗಡಿಬಿಡಿಯಿಂದಲೇ ಹೊರಟುಹೋಗುತ್ತಾನೆ. ಆತ ಊಟ ಮಾಡುವುದೂ ಹಾಗೆಯೆ. ಐದು ನಿಮಿಷಗಳಲ್ಲಿ ಹೊಟ್ಟೆಗೆ ಹಿಡಿಸಿದಷ್ಟು ನುಂಗಿ ಮುಗಿಸಿ ಹೊಟ್ಟೆಯ ಮೇಲೆ ಕೈ ಎಳೆಯುತ್ತ ಎದ್ದು ಪಂಕ್ತಿಭಂಗವಾಗುವುದನ್ನೂ ಗಮನಿಸದೆ ಹೊರಟು ಹೋಗುವುದು ಅವನ ಪದ್ಧತಿ. ಅವನ ವಿಕ್ಷಿಪ್ತತೆಯನ್ನು ಬಲ್ಲ ಜನರು ಆ ಬಗ್ಗೆ ಏನೂ ತಿಳಿದುಕೊಳ್ಳದೆ ಸುಮ್ಮನಿದ್ದುಬಿಡುವರು.

"ಏನೋ, ಮಾತಾಡಲೊಲ್ಲೆ? ಎಂದು ಬಂದೆ? ಕಿವಿ ಕೇಳಿಸುವುದಿಲ್ಲ ವೇನು?" ಮತ್ತೆ ಕೇಳಿದ ಗಡಬಡಯ್ಯ.

"ನಿನ್ನೆ ಬಂದೆ....ನಿನ್ನೆ ಬಂದೆ," ಎಂದು ನಾನು ತಡವರಿಸುತ್ತ ಉತ್ತರವಿತ್ತೆ.

"ವೇಶೀ ಪಟ್ಟಣದಲ್ಲಿದ್ದೆಯೆಂದು ಯಾರೋ ಹೇಳುತ್ತಿದ್ದರು. ಬರುವಾಗ ಯಾವಳೊಬ್ಬ ವೇಶಿಯನ್ನು ಕರೆತಂದೆಯೋ ಏನು?" ಎಂದು ಕೇಳಿಯೇಬಿಟ್ಟ ಗಡಬಡಯ್ಯ. ಹೆಣ್ಣಿನ ಬಗ್ಗೆ ನನಗಿದ್ದ ಹುಚ್ಚನ್ನು ಮೊದಲಿಂದಲೂ ಅರಿತವನು ಆತ. ಪಾರ್ವತಿಗೂ ನನಗೂ ಇದ್ದ ಸಂಬಂಧ ಅವನಿಗೆ ಚೆನ್ನಾಗಿ ಗೊತ್ತಿತ್ತು.

"ಇಲ್ಲ ಇಲ್ಲ ಮಹರಾಯ. ಯಾರನ್ನೂ ಕರೆದು ತಂದಿಲ್ಲ."

"ಏನೋ ಬಿಡು. ನಿನ್ನ ಮಾತಿನ ಮೇಲೆ ನಂಬಿಕೆಯೇ ಇಲ್ಲ ನನಗೆ. ಈಗ ಏನು ವೇಷ ಹಾಕಿದ್ದೀ? ಯಾವ ಊರು, ಎಂಥ ಮಠ, ಏನು ಕತೆ?"

"ಸದ್ಯಕ್ಕಂತೂ ಯಾವ ಕತೆಯೂ ಇಲ್ಲ."

"ಹಾಂ?"

ಜರತಾರಿ ಪೀಠದ ವಿಚಾರವನ್ನು ನಾನು ಅವನಿಗೆ ಸ್ವಲ್ಪದರಲ್ಲಿಯೆ ವಿವರಿಸಿದೆ.

"ಹೀಗೇನು? ನಿನ್ನ ಅದೃಷ್ಟವೇ ಅದೃಷ್ಟ ನೋಡೋ ಮರಿ. ಜಗದ್ಗುರುವಾದ ಬಳಿಕ ನಿನ್ನ ಈ ಗುರುವನ್ನು ಮರೆತುಬಿಟ್ಟೇಯೆ. ಮಗನ ಮದುವೆ ಮಾಡುವುದಿದೆ. ನಿನ್ನಿಂದ ಸಹಾಯವಾಗಬೇಕು. ಈ ಮುದಿ ಜಂಗಮನಿಗೆ ನೀನಲ್ಲದೆ ಇನ್ನಾರು ಹಣ ಕೊಡಬೇಕು, ಹೇಳು."

"ಆಗಲಿ, ಆಗಲಿ. ಹಣ ಕೈಗೆ ಬಂದ ಬಳಿಕ ತಿಳಿಸುತ್ತೇನೆ."

"ಜಗದ್ಗುರುವಾದಮೇಲಾದರೂ ಸ್ವಲ್ಪ ಮರ್ಯಾದೆಯಾಗಿ ಇರು. ಸಿಕ್ಕ ಸಿಕ್ಕ ಭೋಸಡಿಯರ ಬಲೆಗೆ ಬಿದ್ದು ರೊಕ್ಕ ಹಾಳುಮಾಡಬೇಡ. ಹಣವೂ ಹಾಳು, ಹೆಸರೂ ಹಾಳು. ನಿನ್ನ ಗುರುವೆಂದು ಹೇಳಿಕೊಳ್ಳಲು ನಾಚಿಕೆ ಯಾಗುತ್ತದೆ ನನಗೆ. ಎಲ್ಲಿಗೆ ಹೊರಟೆ? ಯಾವಳನ್ನು ಹುಡುಕಿಕೊಂಡು? ಹೊಲಗೇರಿಗೆ ಕಾಲು ಹಾಕೀಯ ಮತ್ತೆ. ನಿನ್ನಂಥವನಿಗೆ ಉಪದೇಶ ಮಾಡುವುದೂ ಗಿಡಕ್ಕೆ ಬುದ್ಧಿ ಹೇಳುವುದೂ ಒಂದೇ. ನಾನೇ ದಡ್ಡ.... ನಾನೇ ದಡ್ಡ...." ಎನ್ನುತ್ತಾ ಗಡಬಡಯ್ಯ ಹಿಂತಿರುಗಿ ಅವಸರದಿಂದ ಹೆಜ್ಜೆ ಹಾಕುತ್ತ ತನ್ನ ಮನೆಯ ಕಡೆ ಹೊರಟುಹೋದ.

ಆತ ಹೊಲಗೇರಿ ಎನ್ನುತ್ತಲೂ ಸರ್ಜನ ನೆನಪಾಗಿತ್ತು ನನಗೆ. ಹರಿಜನ ಕೇರಿಯಲ್ಲೆಲ್ಲ ಪ್ರಬಲ ಪುಢಾರಿ ಸರ್ಜ. ಅವನಷ್ಟು ಸೆರೆ ಕುಡಿಯುವವರು ಯಾರೂ ಇರಲಿಲ್ಲ ಆ ಭಾಗದಲ್ಲಿ. " ಹತ್ತು ಬಾಟಲಿ ಒಂದೇ ಪೆಟ್ಟಿಗೆ ಕುಡಿದು ದಕ್ಕಿಸುತ್ತೇನೆ," ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಸರ್ಜ. ವೇಶೀ ಪಟ್ಟಣವನ್ನು ಬಿಟ್ಟಂದಿನಿಂದ ಮದ್ಯವನ್ನು ಸೇವಿಸುವ ಸಂದರ್ಭ ದೊರೆತಿರಲಿಲ್ಲ. ಬಯಲಿನ ಕಡೆ ಹೋಗಿ ಗಿಡಗಳ ಮರೆಯಲ್ಲಿ ಕುಳಿತು ಯಾರಿಗೂ ಗೊತ್ತಾಗ ದಂತೆ ಕುಡಿದು ತಾಸೆರಡು ತಾಸು ಬಿಟ್ಟು ಮನೆಗೆ ಬರಬಹುದು ಎಂದು ಯೋಚಿಸಿ, ಹರಿಜನ ಕೇರಿಯ ಹತ್ತಿರವೆ ಹಾಯ್ದು ಸರ್ಜನನ್ನು ಕೂಗಿ ಕರೆದೆ. ಅವನಿಗೂ ನನಗೂ ಚಿಕ್ಕಂದಿನಿಂದ ಗೆಳೆತನ. ಆತ ಸಂತೋಷವನ್ನು ಪ್ರದ ರ್ಶಿಸುತ್ತ ಧಾವಿಸಿ ಬಂದ. ಇಬ್ಬರೂ ಕೂಡಿ ಬಯಲಿನ ಕಡೆ ಹೊರಟೆವು. ಭರಮಪ್ಪನ ಗುಡಿ ದಾಟಿದ ಬಳಿಕ ನಾನೊಬ್ಬನೇ ಮುಂದುವರಿದು ಮರಡಿಯ ಕಡೆ ಸಾಗಿದೆ. ಸೆರೆ ತರುವುದಕ್ಕಾಗಿ ಸರ್ಜ ಅಂಗಡಿಗೆ ಹೊರಟ.

ಕತ್ತಲೆ ಪಸರಿಸುವ ವೇಳೆಗೆ ಆತ ಎರಡು ಸೀಸೆಗಳಲ್ಲಿ ಸೆರೆ ತುಂಬಿ ಕೊಂಡು ಬಂದ. ಮರಡಿಯ ಮೇಲಿನ ಮಾವಿನಗಿಡದಡಿಯಲ್ಲಿ ಕುಳಿತು ಇಬ್ಬರೂ ಕುಡಿಯತೊಡಗಿದೆವು.

" ಸೆರೆ ಕುಡಿಯೋದು ಬಂದ್ ಮಾಡುತ್ತೈತಂತಲ್ಲರಿ ಸರಕಾರ?" ಎಂದು ಕೇಳಿದ ಸರ್ಜ.

" ಹೌದಪ್ಪ. ಹಾಗೆ ಹೇಳುತ್ತಾರೆ,"

" ಮುಂದೆ ಹ್ಯಾಂಗೆ ಗುರುವೇ ?"

" ಕಾಯಿದೆಯಿಂದ ಬಂದು ಮಾಡಲು ಸಾಧ್ಯವೇನೋ ಎಲ್ಲಾದರೂ? ಈ ಮಂತ್ರಿಗಳಿಗೆ ತಲೆಯಲ್ಲಿ ಮೆದುಳಿಲ್ಲ."

" ನೀವೇ ಮಂತ್ರಿ ಆದರ ಹ್ಯಾಂಗೆ ಗುರುವೇ ?"

" ಹೂಂ. ನಾನು ಮಂತ್ರಿ. ನೀನು ಸೆಕ್ರೆಟರಿ. ನಮ್ಮದೇ ರಾಜ್ಯವಾದಾಗ ನೋಡಿದರಾಯಿತು," ಎಂದೆ ನಾನು.

ಆ ರಾತ್ರಿ ನಾನು ಮನೆಗೆ ಮರಳಿದ್ದು ಯಾವಾಗ ಎಂಬುದರ ನೆನಪು ನನಗೀಗ ಇಲ್ಲ.

[೫]

ಎರಡನೆಯ ವರ್ಗದ ಚಿಕ್ಕ ಡಬ್ಬಿಯೊಂದನ್ನು ರಿಸರ್ವ್ ಮಾಡಿಸಿದ್ದ ಗಂಗಾಧರಶಾಸ್ತ್ರಿ. ಭಾನುವಾರ ರಾತ್ರಿ ರೈಲು ಹತ್ತಿ ಜರತಾರಿ ನಗರಕ್ಕೆ ಹೊರಟೆವು. ಜತೆಗೆ ಯಾರಾದರೂ ಇರುವುದಗತ್ಯ ಎಂದು ಹೇಳಿ ಶಾಸ್ತ್ರಿಯೂ ನನ್ನೊಡನೆ ಬಂದ. ಮೆತ್ತಗಿನ ಬರ್ಥ್‌ಗಳಲ್ಲಿ ಸುಖನಿದ್ದೆ ಹೊಡೆದು ಬೆಳಗಾಗುತ್ತಲೂ ಎದ್ದೆವು. ಮುಖ ತೊಳೆದುಕೊಂಡು, ಚಹ ಕುಡಿದು, ಒಂದು ಗೋಲ್ಡ್ ಫ್ಲೇಕ್ ಎಳೆದು ಡ್ರೆಸ್ ಮಾಡಿಕೊಳ್ಳತೊಡಗಿದೆ. ಕಾವಿ ಬಣ್ಣದ ಖಾದಿಯ ಧೋತರವೊಂದನ್ನು ಮೊಳಕಾಲುಗಳವರೆಗೆ ಉಟ್ಟುಕೊಂಡು ಅದರ ಎರಡೂ ಕೊನೆಗಳನ್ನೂ ಎದೆಯ ಮೇಲೆ ಹಾಯಿಸಿ ಕುತ್ತಿಗೆಯ ಹಿಂಭಾಗದಲ್ಲಿ ಗಂಟು ಹಾಕಿ ಕಟ್ಟಿಕೊಂಡೆ. ಮೊಳಕಾಲಿನ ಕೆಳಗಿನ ಭಾಗವೆಲ್ಲ ನಗ್ನವಾಗಿತ್ತು. ಬೆಣ್ಣೆಯ ಬಣ್ಣದ ದುಂಡಗಿನ ತೋಳುಗಳು ಎದ್ದು ಕಾಣುತ್ತಿದ್ದುವು. ತಲೆಗೊಂದು ಖಾದಿಯ ವಸ್ತ್ರ. ಕಾಲುಗಳಲ್ಲಿ ಪಾದುಕೆ. ಹಣೆಯ ಮೇಲೆ ವಿಭೂತಿ. ಕೆನ್ನೆಗಳಿಗೆ ಪೌಡರ್ ಸವರಿಕೊಂಡು ಅದರ ಮೇಲೆ ವಸ್ತ್ರವನ್ನಾಡಿಸಿ ಮುಖದ ಗೌರವರ್ಣ ನಸುಬಿಳಿಯದಾಗಿ ಕಾಣುವಂತೆ ಮಾಡಿದೆ. ಅರ್ಧ ಗಂಟೆಯವರೆಗೂ ನಡೆಯಿತು ಈ ಅಲಂಕಾರ.

"ಜರತಾರಿ ನಿಲ್ದಾಣ ಬಂತು ಸ್ವಾಮಿಜಿ," ಎಂದ ಶಾಸ್ತ್ರಿ.

"ಬರಲಿ, ಬರಲಿ. ನಾನು ಸಿದ್ಧವಾಗಿದ್ದೇನೆ."

ನಿಲ್ದಾಣದಲ್ಲಿ ರೈಲು ಪ್ರವೇಶಿಸಿದಾಗ ಪ್ಲಾಟ್‌ಫಾರ್ಮಿನ ಮೇಲೆ ನೆರೆದಿದ್ದ ಜನಸಮೂಹವನ್ನು ಕಂಡು ನಾನು ಬೆರಗಾಗದಿರಲಿಲ್ಲ. ಕೈಗಳಲ್ಲಿ ಹೂಹಾರ ಹಿಡಿದು ನಿಂತಿದ್ದವರು ಕೆಲವರು. ಹಾರಗಳ ಚಿಕ್ಕ ಬುಟ್ಟಿಗಳನ್ನು ಹಿಡಿದು ನಿಂತಿದ್ದವರು ಹಲವರು. ಅನೇಕರ ಹತ್ತಿರ ಕೆಮರಾಗಳೂ ಇದ್ದುವು. ಪಾವುಡ ಸುತ್ತಿ ಧೋತರ ಉಟ್ಟವರು, ಸೂಟು ಬೂಟುಗಳಿಂದ ಅಲಂಕೃತರಾದವರು, ಮದರಾಸಿನ ಲುಂಗಿ ಸುತ್ತಿದವರು, ಮೈಸೂರಿನ ಪೇಟ ಕಟ್ಟಿದವರು, ಖಾದೀಧಾರಿಗಳು, ಗಾಂಧೀ ಟೊಪ್ಪಿಗೆಯವರು, ಬಕ್ಕ ನೆತ್ತಿಯವರು....ಎಲ್ಲ ಬಗೆಯ ಜನರೂ ಅಲ್ಲಿ ನೆರೆದಿದ್ದರು. ಬೇರೆ ಬೇರೆ ಬಣ್ಣಗಳ ಬೇರೆ ಬೇರೆ ಮಾದರಿಗಳ ಸೀರೆಗಳನ್ನುಟ್ಟುಕೊಂಡ ಮಹಿಳೆಯರೂ ಕಾಣಿಸುತ್ತಿದ್ದರು. ಸಾಧಾರಣ ನೀಲವರ್ಣದ ಸೀರೆಯನ್ನುಟ್ಟು, ಕೈಗಳನ್ನು ಎದೆಯ ಸುತ್ತ ಕಟ್ಟಿಕೊಂಡು

ನಿಂತ ಮಹಾದೇವಮ್ಮನೂ ಕಾಣಿಸಿದಳು. ಅವಳ ಹಿಂದೆ ಕೊಂಚ ದೂರದಲ್ಲಿ ಯಾರ ಜತೆಗೋ ಮಾತನಾಡುತ್ತ ನಿಂತಿದ್ದರು ಕರಡೆಪ್ಪಸೆಟ್ಟರು.

ರೈಲು ನಿಂತೊಡನೆಯೆ ದೊಡ್ಡಿಗೆ ನುಗ್ಗುವ ಕುರಿಗಳ ಹಾಗೆ ಆ ಜನರೆಲ್ಲ ನನ್ನ ಡಬ್ಬಿಗೆ ನುಗ್ಗಿದರು. ಸಾಷ್ಟಾಂಗ ನಮಸ್ಕಾರಗಳಿಗಾರಂಭವಾಯಿತು. ಆ ರೈಲು ಡಬ್ಬಿಯೂ ಭಾಗ್ಯಶಾಲಿಯೆ ಸರಿ, ನನ್ನೊಡನೆ ಅದೂ ಸಾಷ್ಟಾಂಗ ಹಾಕಿಸಿಕೊಂಡಿತು! ಹಾರದ ಮೇಲೆ ಹಾರ ಬೀಳತೊಡಗಿತು ಕೊರಳಿಗೆ. ನಾನು ಒಳಗೊಳಗೆ ಕಕ್ಕಾವಿಕ್ಕಿಯಾಗುತ್ತಿದ್ದರೂ ಮುಖದ ಮೇಲೆ ಅದನ್ನು ಕೊಂಚವೂ ತೋರಗೊಡದೆ ಸಮುದ್ರದ ಗಾಂಭೀರ್ಯವನ್ನೂ ಮುಗುಳ್ನಗೆ ಯನ್ನೂ ಪ್ರದರ್ಶಿಸುತ್ತ ಆಗಾಗ ಬಲಗೈ ಎತ್ತಿ ಆಶೀರ್ವದಿಸುತ್ತಲಿದ್ದೆ. ಪ್ಲಾಟ್ ಫಾರ್ಮಿನ ಮೇಲೆ ನನ್ನ ಹೆಸರಿನ ಜಯ ಜಯಕಾರ ನಡೆದಿತ್ತು. ಲೋಕ ಪ್ರಿಯ ಸಿನಿಮಾಚಿತ್ರದ ಟಿಕೀಟು ಆಫೀಸಿನೆದುರಿಗೆ ನೆರೆಯುವಂತೆ ಜನ ನಮ್ಮ ಡಬ್ಬಿಯೆದುರು ನೆರೆದಿತ್ತು.

ಡಬ್ಬಿಯಲ್ಲೇ ಆ ನಗರದ ಪುಢಾರಿಗಳೊಂದಿಗೆ ಸ್ಥೂಲ ಪರಿಚಯ ವಾಯಿತು. ಕೋಡಂಗೀಪುರದ ಖರೇಸೆಟ್ಟ ರೂಪದಿಂದ ಕೋಡಂಗಿಯ ಹಾಗೇ ಕಾಣಿಸುತ್ತಿದ್ದ. ಚಿರೂಟಿನ ದುಂಡಪ್ಪ ಭಾರಿ ಆಸಾಮಿ; ಚರ್ಚಿಲ್ಲರಂಥ ಮುಖ, ಬಲಗೈಯಲ್ಲಿ ದಪ್ಪಗಿನ ದೊಣ್ಣೆ. ಸೋಟಾಧಾರಿ ಜಡಿಯಪ್ಪ ಎತ್ತರ ವಾದ ಬಲಶಾಲಿಯಾದ ಆಳು. ಅವನ ಕೈಯಲ್ಲೂ ಭಾರಿ ಬಡಿಗೆಯೊಂದು ಕಾಣಿಸಿತು. ಅವನ ಹೆಸರಿಗೂ ಅದೇ ಕಾರಣವೇನೋ ಎಂದುಕೊಂಡೆ. ಗುಂಡಾಡಯ್ಯ ಐದು ಅಡಿಯ ಕುಳ್ಳಗಿನ ಇಸಮು. ಮುಟ್ಟಿದರೆ ಮೆಟ್ಟಿ ಬೀಳುವಂಥ ದುರ್ಬಲ ದೇಹ ಬಣ್ಣಗೆಟ್ಟ ಹಳೆಯ ಕೋಟು ತೊಟ್ಟು ತಲೆಗೆ ಮೈಸೂರು ಮಾದರಿಯ ಸಣ್ಣ ಪೇಟಾ ಸುತ್ತಿಕೊಂಡಿದ್ದ. ಕಿವಿಗಳಲ್ಲಿ ಕಡಕ. ಕಣ್ಣುಗಳಿಗೆ ದಪ್ಪ ಕನ್ನಡಕ. "ತಮ್ಮ ದ-ದರ್ಶನದಿಂದ ಕೃ-ಕೃತಾರ್ಥನಾದೆ ಬು-ಬುದ್ಧೀ," ಎಂದು ಆತ ಹೇಳಿದಾಗ ಅವನ ಬಾಯಿಯ ದುರ್ವಾಸನೆ ಬೀಸಿ ಬಂದು ನನ್ನನ್ನು ಕ್ಷಣಕಾಲ ಬಧಿರಗೊಳಿಸಿತು. ಆತನ ತೊದಲುವಿಕೆಯ ದೋಷವೂ ಗೊತ್ತಾಯಿತು.

ಡಬ್ಬಿಯ ಬಾಗಿಲಲ್ಲಿ ಗುಂಪುಗೂಡಿದ್ದ ಜನರನ್ನು ತನ್ನ ದೊಣ್ಣೆಯಿಂದ ದೂರ ಸರಿಸಿ ಜಡಿಯಪ್ಪ ನನ್ನನ್ನು ಕೆಳಕ್ಕಿಳಿಸಿಕೊಂಡು ಬಂದ. ನನ್ನ ಖಾದಿಯ ಕಾಷಿಯನ್ನೂ ಮುಖದ ಮೇಲಿನ ತೇಜಸ್ಸನ್ನೂ ಮೈಯ ಹೊಳಪನ್ನೂ ಕಂಡು

ಜನರೆಲ್ಲ ಮುಗ್ಧರಾದಂತಿದ್ದಿತು. ಪ್ಲಾಟ್‌ಫಾರ್ಮಿನ ಮೇಲೆಯೆ ಅಡ್ಡಬಿದ್ದು ನನಗೆ ಸಾಷ್ಟಾಂಗ ಹಾಕತೊಡಗಿದರು. ಐದಾರು ನಿಮಿಷಗಳವರೆಗೆ ನಾನು ನಿಂತಲ್ಲಿಯೆ ನಿಲ್ಲಬೇಕಾಯಿತು. ಅದೇ ಸಮಯದಲ್ಲಿ ಮಹಾದೇವಮ್ಮನೂ ಮುಂದೆ ಬಂದು ನನ್ನ ಅಡಿಗೆರಗಿ ಅರ್ಥಪೂರ್ಣ ನಗೆ ಬೀರಿದಳು.

ಪ್ಲಾಟ್‌ಫಾರ್ಮನ್ನು ತ್ಯಜಿಸಿ ಹೊರಗಡೆ ಬರುತ್ತಲೂ ಬಿಳಿಯಂಗಿ, ನೀಲಿ ಚಣ್ಣ ಧರಿಸಿದ್ದ ಸ್ವಯಂಸೇವಕರ ಗಾರ್ಡ್ ಆಫ್ ಆನರ್ ಸ್ವೀಕರಿಸಬೇಕಾಯಿತು. ಹತ್ತಿರದಲ್ಲೇ ಹೂಗಳಿಂದ ಅಲಂಕೃತವಾದ, ತೆರೆದ ಮೋಟಾರುಕಾರು ನಿಂತಿತ್ತು. ಜಡಿಯಪ್ಪ ನನ್ನನ್ನು ಅದರಲ್ಲಿ ಹತ್ತಿಸಿ ತಾನೂ ಪಕ್ಕದಲ್ಲಿ ಕುಳಿತುಕೊಂಡ. ಶಾಸ್ತ್ರಿಯೂ ಧಾವಿಸುತ್ತ ಬಂದು ಮೋಟರು ಹತ್ತಿದ. ಖರೇಸೆಟ್ಟಿಯೂ ದುಂಡಪ್ಪನೂ ಡ್ರೈವರನ ಪಕ್ಕದಲ್ಲಿ ಕುಳಿತರು. ಮೋಟಾರು ನಿಧಾನವಾಗಿ ಮುಂದೆ ಸಾಗಿತು. ಹಿಂದೆ ಇನ್ನೊಂದು ಮೋಟರಿನಲ್ಲಿ ಕರಡೆಪ್ಪ, ಮಹಾದೇವಮ್ಮ ಮೊದಲಾದವರು ಬರುತ್ತಿದ್ದರು.

ಬೀದಿಗಳಲ್ಲಿ ಅಲ್ಲಲ್ಲಿ ಕಮಾನುಗಳನ್ನು ಕಟ್ಟಿ "ಸುಸ್ವಾಗತಂ" ಎಂದು ಕನ್ನಡದಲ್ಲಿ ಬರೆಯಲಾಗಿದ್ದಿತು. ಅನೇಕ ಮನೆಗಳ ಎದುರಿಗೆ ತಳಿರು ತೋರಣಗಳು ಕಂಡುಬರುತ್ತಿದ್ದುವು. ದೊಡ್ಡ ಬೀದಿಯೊಂದರಲ್ಲಿ ಕಾರು ಹೊರಟಿದ್ದಾಗ ಮೋಟರಿನ ಎದುರಿಗೇ ನೀರು ಹಾಕಿ ನನಗೆ ಆರತಿ ಬೆಳಗಲಾಯಿತು. "ಇದು ವೀರಶೈವರೇ ಹೆಚ್ಚಾಗಿರುವ ಓಣಿ," ಎಂದು ಸ್ಪಷ್ಟೀಕರಿಸಿದ ಜಡಿಯಪ್ಪ.

ವ್ಯಾಪಾರಿಗಳ ಪೇಟೆಯಲ್ಲಿ ಹಾಯ್ದು ಹೋಗುವಾಗಲೂ ಅಲ್ಲಲ್ಲಿ ಆರತಿ ಎತ್ತಿ ಹಾರ ಹಾಕಲಾಯಿತು. ನಾನೊಮ್ಮೆ ಸಹಜವಾಗಿ ಹೊರಳಿ ನೋಡಿದಾಗ ಅರ್ಧ ಮೈಲು ದೂರದವರೆಗೂ ಜನ ಮೆರವಣಿಗೆಯಲ್ಲಿ ಬರುತ್ತಿದ್ದುದನ್ನು ಕಂಡು 'ಅಬ್ಬಾ!' ಎಂದುಕೊಂಡೆ.

ಮೆರವಣಿಗೆ ದೊಡ್ಡ ಮಹಡಿಯ ಮನೆಯೊಂದರ ಎದುರಿಗೆ ಹಾಯ್ದು ಹೊರಟಿದ್ದಾಗ ಮಹಡಿಯ ಮೇಲೆ ನಿಂತಿದ್ದವರೊಬ್ಬರು ಗಾಳಿಯಲ್ಲಿ ಗುಂಡು ಹಾರಿಸಿ ಮರ್ಯಾದೆಯನ್ನು ಸೂಚಿಸಿದರು. ಅದೇ ಮಹಡಿಯಿಂದ ಮಲ್ಲಿಗೆ ಹೂಗಳೂ ಬಿದ್ದುವು ನನ್ನ ಮೇಲೆ. "ಇದು ದುಂಡಪ್ಪಣ್ಣನವರ ಮನೆ," ಎಂದು ಹೇಳಿದ ಜಡಿಯಪ್ಪ.

"ಭಾರೀ ಮನೆ," ಎಂದೆ ನಾನು.

"ಇಂಥವು ಹತ್ತು ಮನೆಗಳಿವೆ ಅವರವು," ಎಂದ ಜಡಿಯಪ್ಪ. ದುಂಡಪ್ಪ ನಗುತ್ತಾ ನನ್ನ ಕಡೆ ಹೊರಳಿ–"ಎಲ್ಲಾ ಮಹಾಸ್ವಾಮಿಗಳ ಆಶೀರ್ವಾದ," ಎಂದು ಹೇಳಿದ. "ಇನ್ನೂ ಹತ್ತು ಮನೆಯಾಗಲಿ," ಎಂದು ನಾನೂ ನಗುತ್ತ ಹೇಳಿದೆ.

ಸ್ವಲ್ಪ ದೂರ ಹೋದ ಬಳಿಕ ಇನ್ನೊಂದು ದೊಡ್ಡ ಮನೆ ಕಾಣಿಸಿತು. ಮೂರಂತಸ್ತುಗಳ ಭವ್ಯ ಮನೆ. ಅದರೆದುರಿಗೆ ತಳಿರು ತೋರಣವಾಗಲಿ, ಸ್ವಾಗತದ ಬರಹವಾಗಲಿ ಕಾಣಿಸಲಿಲ್ಲವಾದ್ದರಿಂದ ನಾನು ಜಡಿಯಪ್ಪನನ್ನು ಕೇಳಿದೆ. "ಇದಾರ ಮನೆ? ನಮ್ಮ ಜನರದಲ್ಲವೋ?"

"ನಮ್ಮ ಜನರದೇನೋ ಹೌದು."

"ಮತ್ತೆ?"

ಅದು ಗುರುಶಾಂತಪ್ಪನದು. ಅದೊಂದು ಸೊಕ್ಕಿನ ವ್ಯಕ್ತಿ. ತಾನು ಶ್ರೀಮಂತನಾದ್ದರಿಂದ ಎಲ್ಲರಿಗಿಂತ ಹೆಚ್ಚಿನ ಮರ್ಯಾದೆ ತನಗೇ ದೊರೆಯ ಬೇಕೆಂದು ಅವನ ಹಟ. ಸ್ವಾಗತಸಮಿತಿಗೆ ನಾವು ಅವನನ್ನು ಅಧ್ಯಕ್ಷನನ್ನಾಗಿ ಮಾಡಲಿಲ್ಲ. ಅದಕ್ಕೆ ಸಿಟ್ಟು ಮಾಡಿಕೊಂಡು ನಮ್ಮೊಂದಿಗೆ ಅಸಹಕಾರ ಹೂಡಿ ಕುಳಿತಿದ್ದಾನೆ. ಇಂದು ಅವನು ಸ್ಟೇಷನ್ನಿಗೂ ಬಂದಿರಲಿಲ್ಲ. ಅವನ ಹೆಂಡತಿಯೂ ಬಂದಿರಲಿಲ್ಲ – ಅವರ ಪಾರ್ಟಿಯ ಜನರೂ ಬಂದಿಲ್ಲ."

"ಚ್ .... ಚ್ .... ಹೀಗಾಗಬಾರದಾಗಿತ್ತು," ನಾನು ಮನಸ್ಸಿನಲ್ಲಿಯೆ ಹೇಳಿಕೊಂಡೆ.

ಆ ನಗರದ ವಿಷಯವನ್ನೆಲ್ಲ ನಾನು ಆ ಮೊದಲೇ ಚೆನ್ನಾಗಿ ತಿಳಿದು ಕೊಂಡಿದ್ದೆನಾದರೂ ಬೇಕೆಂತಲೇ ಪ್ರಶ್ನಿಸಿದೆ: "ಇಲ್ಲೂ ಎರಡು ಪಾರ್ಟಿ ಗಳಿವೆಯೇ ಜಡಿಯಪ್ಪನವರೆ?"

"ಮೊದಲು ಏನೂ ಇರಲಿಲ್ಲ. ಈ ಗುರುಶಾಂತಪ್ಪ ಮತ್ತು ಅವನ ಹೆಂಡತಿಯ ಸೊಕ್ಕಿನಿಂದ ಈಚೆಗೆ ಪಾರ್ಟಿ ಆಗಿದೆ. ಅವರ ಕಡೆಗೆ ಎಂಟು ಹತ್ತು ಜನ ಇರಬಹುದು. ಇನ್ನುಳಿದ ವೀರಶೈವರೆಲ್ಲಾ ನಮ್ಮ ಕಡೆಗೇ ಇದ್ದಾರೆ."

ನಮ್ಮ ಮೋಟಾರು ಮುಖ್ಯ ಬೀದಿಯೊಂದರಲ್ಲಿ ಬರುತ್ತಿದ್ದಾಗ ಕೈಯಲ್ಲಿ ಹಾರ–ತುರಾಯಿ ಹಿಡಿದುಕೊಂಡಿದ್ದ ಸೂಟುಧಾರಿಯೊಬ್ಬ ಬಂದು "ಸ್ಟಾಪ್ ಪ್ಲೀಸ್," ಎಂದು ಡ್ರೈವರಿಗೆ ಕೂಗಿ ಹೇಳಿದ. ಮೋಟಾರು ನಿಂತುಕೊಂಡಿತು. ಆತ ನಗುನಗುತ್ತ ನನ್ನ ಹತ್ತಿರ ಬಂದಾಗ ಜಡಿಯಪ್ಪ ಪರಿಚಯ ಮಾಡಿಸಿ

ಕೊಟ್ಟ: "ಇವರು ವಿಠೋಬಾಚಾರ್ಯರು. ಬಿ. ಎ. ಎಲೆಲ್. ಬಿ. ಪಾಸು ಮಾಡಿದವರು. ಸಾಹಿತಿಗಳು."

ಆತ ಹಾರ ಅರ್ಪಿಸಿ, ತುರಾಯಿ ಕೊಟ್ಟು, ಬಾಗಿ ಕೈಮುಗಿದ. ನಾನೂ ಪ್ರತಿಯಾಗಿ ಕೈಮುಗಿದು, "ನಿಮ್ಮನ್ನು ಕಂಡು ಸಂತೋಷವಾಯಿತು. ಸಾಹಿತಿಗಳೆಂದರೆ ನಮಗೆ ಬಹಳ ಪ್ರೀತಿ. ನಿಮ್ಮವು ಎಷ್ಟು ಪುಸ್ತಕ ಪ್ರಕಟವಾಗಿವೆ?" ಎಂದು ಕೇಳಿದೆ.

"ನಾಲ್ಕೈದು ಆಗಿವೆ ಸ್ವಾಮಿಜಿ. ಜನರಿಂದ ಪ್ರೋತ್ಸಾಹವಿಲ್ಲ," ಎಂದು ಹೇಳಿದನಾತ.

"ಅದೂ ಆದೀತು," ಎಂದು ನಾನು ಹೇಳುತ್ತಿದ್ದ ಹಾಗೇ ಮೋಟಾರು ಮುಂದೆ ಸಾಗಿತು. ಕೊಂಚ ದೂರ ಹೋದ ಬಳಿಕ – "ಈ ಆಚಾರ್ಯರು ಏನು ಉದ್ಯೋಗ ಮಾಡುತ್ತಾರೆ? ವಕೀಲಿಯೋ ಏನು?" ಎಂದು ನಾನು ಕೇಳಿದೆ.

"ಇವರ ಹತ್ತಿರ ಯಾವ ಕಕ್ಷಿಗಾರ ಬಂದಾನು? ವಕೀಲಿ ನಡೆಯಲಿಲ್ಲ. ಈಗ ಈ ಸಾಹಿತ್ಯದ ಕೆಲಸ ಮಾಡುತ್ತಾರೆ."

"ಆಸಾಮಿ ಚಟುವಟಿಕೆಯದು."

"ವಕೀಲರೆಲ್ಲಾ ಚಟುವಟಿಕೆಯವರೇ," ಎಂದು ನಗುತ್ತ ನುಡಿದ ಜಡಿಯಪ್ಪ.

"ಎಂಥ ಪುಸ್ತಕ ಬರೆದಿದ್ದಾರೆ ಇವರು?"

"ಬರೆದಿದ್ದಾರಂತೆ ನಾನೇನು ನೋಡಿಲ್ಲ," ಎಂದು ಮಾತು ಮುಗಿಸಿದ ಜಡಿಯಪ್ಪ,

"ಮಧ್ಯಾಹ್ನ ತಾವೇ ನೋಡುವಿರಂತೆ. ಎಲ್ಲ ಪುಸ್ತಕಗಳನ್ನೂ ತೆಗೆದು ಕೊಂಡು ಬಂದು ಕಾಣಿಕೆಯಾಗಿ ಅರ್ಪಿಸುತ್ತಾನೆ," ಎಂದು ಹೇಳಿದ ಖರೇಸೆಟ್ಟಿ.

ಎರಡಂತಸ್ತುಗಳ ಮನೆಯೊಂದರ ಮುಂದೆ ಮೋಟಾರು ನಿಂತುಕೊಂಡಿತು. ಹೊಸದಾಗಿ ಕಟ್ಟಿದಂತಿದ್ದ ಮನೆ – ಎದುರಿಗೊಂದು ಪುಟ್ಟ ಕೈದೋಟ. ಅಲ್ಲಿ ಅರಳಿನಿಂತ ದೇಶೀಯ ವಿದೇಶೀಯ ಹೂಗಳು.

"ಇದೂ ದುಂಡಪ್ಪಣ್ಣನವರ ಮನೆಯೇ. ಮೊನ್ನೆ ಮೊನ್ನೆ ಕಟ್ಟಿಸಿದ್ದಾರೆ. ಐವತ್ತು ಸಾವಿರ ಖರ್ಚಾಯಿತು," ಎಂದು ಹೇಳಿದ ಜಡಿಯಪ್ಪ.

ಅದೇ ಮನೆಯಲ್ಲಿ ಬಿಡಾರದ ವ್ಯವಸ್ಥೆಯಾಗಿದ್ದಿತು. ಎಲ್ಲರೂ ಮೋಟಾರಿ ನಿಂದಿಳಿದೆವು. ಬಾಗಿಲಲ್ಲಿ ಮುತ್ತೈದೆಯೊಬ್ಬಳು ಆರತಿ ಬೆಳಗಿದಳು.

ಮಹಡಿಯ ಮೇಲೆ ದೊಡ್ಡ ಹಾಲು. ಗೋಡೆಗಳಿಗೆ ನೀಲವರ್ಣ. ಅಲ್ಲಲ್ಲಿ ಸುಂದರಿಯರ ಪಟಗಳು, ದೊಡ್ಡ ದೊಡ್ಡ ಕನ್ನಡಿಗಳು, ಭಾರಿ ಭಾರಿ ಸೋಫಾಗಳು, ಸುಂದರ ಸುಂದರ ಕುರ್ಚಿಗಳು. ಕಿಟಕಿಯೊಂದರ ಹತ್ತಿರ ಎತ್ತರವಾದ ಕರೀಮರದ ಮಂಚ, ಅದರ ಮೇಲೆ ದಪ್ಪಗಿನ ಗಾದಿ, ಪಟ್ಟೆ ಪಟ್ಟೆಗಳ ನುಗ್ಗುಲುಹಾಸಿಗೆ, ದುಂಡಗಿನ ದಿಂಬುಗಳು. ಮಂಚದ ಸುತ್ತಲೂ ನಯವಾದ ಬಟ್ಟೆಯ ಸೊಳ್ಳೆಪರದೆ. ಹತ್ತಿರದಲ್ಲಿ ಒಂದು ಟೀಪಾಯ್. ಅದರ ಮೇಲೆ ಹೂಗಳನ್ನಿಟ್ಟ ಹೂಜೆ. ಊದಿನ ಕಡ್ಡಿಗಳ ತೀಕ್ಷ್ಣ ಗಂಧ ಹಾಲಿನಲ್ಲೆಲ್ಲ ಇಡುಗಿತ್ತು.

"ಹೀಗೆ ದಯಮಾಡಿಸಿ, ಹೀಗೆ ದಯಮಾಡಿಸಿ," ಎನ್ನುತ್ತಾ ದುಂಡಪ್ಪ ನನ್ನನ್ನು ಕರೆದುತಂದು ಮಂಚದ ಪರದೆಯನ್ನು ಬದಿಗೆ ಸರಿಸಿ ಅದರ ಮೇಲೆ ಕೂಡ್ರಿಸಿದ. ಮಹಡಿಯ ಮೆಟ್ಟಲುಗಳನ್ನೇರುತ್ತ ಜನ ಇನ್ನೂ ಬರುತ್ತಿದ್ದರು. ಹಾಲಿನಲ್ಲಿ ಕೊಂಚವೂ ಸ್ಥಳವುಳಿಯದಂತಾಯಿತು.

"ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ," ಎಂದೆ ನಾನು.

ನೆರೆದಿದ್ದವರೆಲ್ಲ ಅಟ್ಟದ ಹಾಸುಗಂಬಳಿಯ ಮೇಲೆಯೆ ಕುಳಿತುಕೊಳ್ಳ ತೊಡಗಿದರು. "ಹಾಗೆಲ್ಲ ಕೆಳಗೆ ಕೂತಿರಬಾರದು. ಅಂಥದೆಲ್ಲ ನಮಗೆ ಸೇರುವುದಿಲ್ಲ. ಸೋಫಾಗಳ ಮೇಲೇ ಕುಳಿತುಕೊಳ್ಳಿ," ಎಂದು ನಾನು ಹೇಳಿದೆ. ಅನೇಕರ ಮೇಲೆ ಈ ಮಾತಿನಿಂದ ತುಂಬಾ ಪರಿಣಾಮವಾದಂತೆ ತೋರಿತು. "ಎಂಥ ಉದಾರ ಹೃದಯ, ವಿಶಾಲ ಮನಸ್ಸು ಸ್ವಾಮಿಗಳದು. ಎಲ್ಲರನ್ನೂ ಆದರದಿಂದ ಕಾಣುತ್ತಾರೆ" ಎಂದು ಅವರು ಮನಸ್ಸಿನಲ್ಲೇ ಹೇಳಿಕೊಂಡಿರಲು ಸಾಕು.

ಎಲ್ಲರೂ ಕುಳಿತುಕೊಂಡ ತರುವಾಯ ನಾನು ಚಿಕ್ಕದಾಗಿ ಭಾಷಣ ಮಾಡಿ ಅವರೆಲ್ಲರನ್ನೂ ಕಂಡು ಸಂತೋಷವಾದುದಾಗಿ ತಿಳಿಸಿ, "ಪ್ರವಾಸ ದಿಂದಾಗಿ ತುಂಬ ಆಯಾಸವಾಗಿದೆ, ಸದ್ಯ ಸ್ವಲ್ಪ ವಿರಮಿಸಿಕೊಳ್ಳಲು ಅಪ್ಪಣೆ ಕೊಡಿ. ಸಾಯಂಕಾಲ ಮತ್ತೆ ಭೆಟ್ಟಿಯಾಗೋಣ ಸಭೆಯಲ್ಲಿ," ಎಂದು ವಿನಯ ಪೂರ್ವಕವಾಗಿ ಕೇಳಿಕೊಂಡೆ. ಮುಕ್ಕಾಲುಪಾಲು ಜನರು ಮತ್ತೊಮ್ಮೆ ನಮುಸ್ಕರಿಸಿ ಹೊರಟುಹೋದರು.

ದುಂಡಪ್ಪ ಸೇವಕನನ್ನು ಕೂಗಿ–"ಬುದ್ಧಿಗಳ ಸ್ನಾನಕ್ಕೆ ನೀರು ಕಾಯಿತೇನು ನೋಡಯ್ಯಾ," ಎಂದ.

" ಈಗಲೇ ಸ್ನಾನ ತೀರಿಸಿಕೊಂಡು ಬಿಡಿ ಬುದ್ಧೀ. ಆಯಾಸ ಅರ್ಧಕ್ಕರ್ಧ ಪರಿಹಾರವಾಗುತ್ತೆ," ಎಂದ ಖರೇಸೆಟ್ಟಿ.

[೬]

ಮಧ್ಯಾಹ್ನದ ಊಟದಿಂದ ಹೊಟ್ಟೆ ಸಾಕಷ್ಟು ಭಾರವಾಯಿತು. ತಾಂಬೂಲ ಸೇವಿಸುತ್ತ ಮಂಚದ ಮೇಲೊರಗಿದ್ದೆ. ನಿಧಾನವಾಗಿ ಕಣ್ಣು ಮುಚ್ಚಿಕೊಳ್ಳತೊಡಗಿದ್ದುವು. ಶಾಸ್ತ್ರಿಯೂ ಹೊಟ್ಟೆಯ ಮೇಲೆ ಕೈಯೆಳೆದು ಕೊಳ್ಳುತ್ತ ಕಡ್ಡಿಯಿಂದ ಹಲ್ಲುಗಳನ್ನು ಜಜ್ಜಿಕೊಳ್ಳುತ್ತ ಸೋಫಾದ ಮೇಲೆ ಬಿದ್ದು ಕೊಂಡಿದ್ದ. ಊಟವಾದ ಬಳಿಕ ಒಂದು ಸಿಗರೇಟು ಎಳೆಯುವುದು ಅಭ್ಯಾಸ ವಾಗಿತ್ತು ನನಗೆ. ಶಾಸ್ತ್ರಿಯ ಹತ್ತಿರ ಗೋಲ್ಡ್‌ಫ್ಲೇಕ್ ಸಿಗರೇಟಿನ ಪೊಟ್ಟಣ ವೇನೋ ಇತ್ತು. ಆದರೆ ನಾನಾಗ ಅದನ್ನು ಮುಟ್ಟುವಂತಿರಲಿಲ್ಲವಲ್ಲ?

ಖರೇಸೆಟ್ಟಿ, ದುಂಡಪ್ಪ ಮೊದಲಾದವರು ಕೆಳಗಡೆ ಏನೋ ವ್ಯವಸ್ಥೆಯಲ್ಲಿ ತೊಡಗಿದ್ದವರು ಇನ್ನೂ ಮೇಲೆ ಬಂದಿರಲಿಲ್ಲ. ಹಾಲಿನಲ್ಲೆಲ್ಲ ಶಾಸ್ತ್ರಿ ನಾನು ಇಬ್ಬರೇ ಇದ್ದೆವು. ನಾನು ಮೆಲ್ಲಗಿನ ಧ್ವನಿಯಲ್ಲಿ ಕೇಳಿದೆ:

" ಸಿಗರೇಟು ಸೇದುವ ಆಸೆಯಾಗಿದೆಯಲ್ಲೋ ಶಾಸ್ತ್ರಿ ?"

" ಸುಮ್ಮನಿರಿ ಸ್ವಾಮಿಜಿ. ನಾಟಕ ಬಲು ಚೆನ್ನಾಗಿ ನಡೆದಿದೆ. ಎಲ್ಲಾ ಕೆಡಿಸಿಬಿಟ್ಟೀರಿ."

" ಆಗಲಪ್ಪ. ಇನ್ನೇನು ಮಾಡೋದು ?" ಎಂದು ನಾನು ಸುಮ್ಮನಾದೆ.

ಮೆಟ್ಟಿಲುಗಳ ಮೇಲೆ ಸದ್ದು ಮಾಡುತ್ತ ಯಾರೋ ಅಟ್ಟ ಏರಿ ಬಂದರು. ಅತ್ತ ದೃಷ್ಟಿ ತಿರುಗಿಸಿದೆ. ಅದೇ ಆ ವಕೀಲ ಸಾಹೇಬ ವಿಠೋಬಾಚಾರ್ಯ. ನನ್ನ ಕಣ್ಣುಗಳಲ್ಲಿ ನಿದ್ದೆಯ ಗುಂಗು ಕವಿಯುತ್ತಿತ್ತು. ಆ ವೇಳೆಯಲ್ಲಿ ಯಾರನ್ನೂ ಕಾಣುವ ಮನಸ್ಸಿರಲಿಲ್ಲ. ವಕೀಲರೆಂದರೆ ಮಹಾ ವಾಚಾಳಿಗಳು, ತಾಸೆರಡು ತಾಸು ಹರಟುತ್ತಿದ್ದು ಗೋಳು ಹಿಡಿಸಿಬಿಡುವವರು ಎಂಬುದನ್ನು ನಾನೂ ಕೇಳಿ ತಿಳಿದಿದ್ದೆನಾದುದರಿಂದ ವಿಠೋಬಾಚಾರಿಯ ಕಾಟದಿಂದ ಬಿಡುಗಡೆ ಹೊಂದಬೇಕೆಂದುಕೊಂಡು, ಕಣ್ಣುಗಳನ್ನು ಮುಚ್ಚಿ ನಿದ್ದೆ ಹೋದಂತೆ ನಟಿಸತೊಡಗಿದೆ.

ಆದರೆ ಆ ಆಚಾರಿ ಮಹಾ ಘಾಟಿಯಿದ್ದಂತೆ ಕಾಣಿಸಿತು. ನನಗೆ ನಿಜ ವಾದ ನಿದ್ದೆ ಬಂದಿಲ್ಲವೆಂಬುದನ್ನು ಅರಿತುಕೊಂಡನೊ ಏನೊ.

"ಸ್ವಾಮಿಗಳ ಊಟವಾಯಿತೇ?" ಎಂದು ಶಾಸ್ತ್ರಿಯನ್ನು ಕುರಿತು ಕೇಳಿದ.

"ಆಯಿತು. ನಿದ್ದೆ ಮಾಡುತ್ತಿದ್ದಾರೆ. ನೀವು ಸಾಯಂಕಾಲ ನಾಲ್ಕು ಗಂಟೆಗೆ ಬನ್ನಿ."

"ಆಗಲಿ. ನಾಲ್ಕು ಗಂಟೆಯೇ ಆಗಲಿ. ನನಗೇನೂ ಬೇರೆ ಉದ್ಯೋಗವಿಲ್ಲ. ಈಗ ಒಂದು ಗಂಟೆ. ಇನ್ನು ಮೂರೇ ಮೂರು ತಾಸು, ಅಷ್ಟೆ. ಈ ಉರಿಬಿಸಿಲಲ್ಲಿ ಮತ್ತೆಲ್ಲಿ ಹೊರಗೆ ಹೋಗಿ ಮತ್ತೆ ಬರಲಿಕ್ಕಾಗುತ್ತೆ? ಜರತಾರಿ ನಗರದಲ್ಲಿನ ಬಿಸಿಲು ಅಂದರೆ ಆಫ್ರಿಕಾದ ಬಿಸಲಿದ್ದ ಹಾಗೆ. ನಿಷ್ಕರುಣೆಯಿಂದ ಬಾರಿಸುತ್ತೆ. ಯಾವ ಸರಕಾರಿ ಅಧಿಕಾರಿಯೂ ಇಲ್ಲಿ ಆರು ತಿಂಗಳುಗಳಿಗಿಂತ ಹೆಚ್ಚು ಸಮಯ ಇರಬಯಸುವುದಿಲ್ಲ. ಟ್ರಾನ್ಸ್‌ಫರಿಗಾಗಿ ಬಡಿದುಕೊಳ್ಳುತ್ತಿರುತ್ತಾರೆ. ಅವರೇ ಸುದೈವಿಗಳು ನೋಡಿರಿ. ಈ ಮರುಭೂಮಿಗೆ ಶರಣು ಹೊಡೆದು ಹೋಗುತ್ತಾರೆ. ನಾವೇನು ಸರಕಾರಿ ಅಧಿಕಾರಿಗಳಲ್ಲವಲ್ಲಾ? ಎಂಥ ಬಿಸಿಲಿದ್ದರೇನು, ಎಷ್ಟು ತೊಂದರೆಯಾದರೇನು – ಎಲ್ಲಾ ಸಹಿಸಿಕೊಂಡು ಬಿದ್ದಿರಬೇಕಲ್ಲಾ! – ಅಬ್ಬಬ್ಬ! ಏನು ಸೆಕೆ? ನಮ್ಮ ದುಂಡಪ್ಪ ಸಾಹುಕಾರರು ಒಂದು ಫ್ಯಾನ್ ಆದರೂ ಹಾಕಬಾರದೇ ಇಲ್ಲಿ....ಅವರಿಗೇನು ಕಡಿಮೆಯಾಗಿದೆಯಪ್ಪ. ಲಕ್ಷಾಧೀಶರು.... ಲಕ್ಷಾಧೀಶರು...." ಎಂದು ಎಲ್ಲಿಗೋ ಓಡಿಸತೊಡಗಿದ ಮಾತಿನ ಕುದುರೆಯನ್ನು.

ಅಷ್ಟರಲ್ಲಿ ದುಂಡಪ್ಪ ಮೇಲೆ ಬಂದು ಮೆಲ್ಲಗಿನ ಧ್ವನಿಯಲ್ಲಿ ಹೇಳಿದರು: "ಬುದ್ಧಿಗಳಿಗೆ ನಿದ್ದೆ ಬಂದಿದೆ. ಮಲಗಲಿ ಪಾಪ. ರಾತ್ರಿಯೆಲ್ಲ ನಿದ್ದೆಯಿಲ್ಲ ವಂತೆ. ನೀವು ಆಮೇಲೆ ಬನ್ನಿ."

"ಸರಿ. ನಾನಿನ್ನು ಮಾತಾಡುವುದಿಲ್ಲ – ಸುಮ್ಮನಿರುತ್ತೇನೆ. ಆದರೆ ಈಗ ಎದ್ದು ಬಿಸಿಲಿನಲ್ಲಿ ಮತ್ತೆಲ್ಲಿ ಸಾಯಲಿ ಸಾಹುಕಾರರೇ? ಇಲ್ಲೇ ಇರುತ್ತೇನೆ. ಸ್ವಾಮಿಗಳ ಸಂದರ್ಶನ ತೆಗೆದುಕೊಂಡು ಪತ್ರಿಕೆಗೆ ಕಳಿಸಬೇಕಾಗಿದೆ. ಬಹಳ ಅವಸರದ ಕೆಲಸ."

ಸಂದರ್ಶನ ಎನ್ನುತ್ತಲೂ ನನ್ನ ಕಣ್ಣು ತಾವಾಗಿಯೇ ತೆರೆದುಕೊಂಡುವು. ನಿದ್ದೆ ಎಲ್ಲಿ ಹಾರಿಹೋಯಿತೊ, ತಿಳಿಯಲಿಲ್ಲ. ಆಚಾರಿ ಬಂದದ್ದು ಸಂದರ್ಶನ ಕ್ಕಾಗಿಯೆ? ಸಂದರ್ಶನ....ಪತ್ರಿಕಾ ಸಂದರ್ಶನ! ಇದುವರೆಗಿನ ನನ್ನ ಜೀವ ಮಾನದಲ್ಲೇ ಯಾವ ಪತ್ರಿಕೆಯವನೂ ನನ್ನ ಸಂದರ್ಶನ ಪ್ರಕಟಿಸಿಲ್ಲ. ಇಂದು ಆ ಸುಯೋಗವೂ ಬಂದಿದ....ಎಂದುಕೊಳ್ಳುತ್ತ ನಾನು ಆಚಾರಿಯನ್ನು ಪ್ರಸನ್ನ

ದೃಷ್ಟಿಯಿಂದ ನಿಟ್ಟಿಸುತ್ತ–"ಏನು ಸಾಹಿತಿಗಳೇ, ಯಾವಾಗ ಬಂದಿರಿ?" ಎಂದು ಕೇಳಿದೆ.

ಆತ ಧಿಗ್ಗನೆ ಎದ್ದು ಶಿರಬಾಗಿ ನಮಿಸುತ್ತ ಮಂಚದ ಹತ್ತಿರ ಬಂದು, ಕೈಯಲ್ಲಿದ್ದ ಚೀಲದಿಂದ ಐದು ಪುಸ್ತಕಗಳನ್ನು ಹೊರದೆಗೆದು ನನ್ನ ಕೈಗೆ ಕೊಟ್ಟು ಹಿ ಹಿ ಹಿ ಹಿ ಎನ್ನುತ್ತ ನಿಂತುಕೊಂಡ.

ಪುಸ್ತಕಗಳ ರಕ್ಷಾಪತ್ರಗಳ ಮೇಲೆ "ವಿಶ್ವವಿಚಿತ್ರ ಗ್ರಂಥಮಾಲಾ, ಸಂಪಾದಕರು – ಬಿ. ವಿಠೋಬಾಚಾರ್ಯ, ಬಿ.ಎ.ಎಲೆಲ್.ಬಿ." ಎಂದು ಮುದ್ರಿಸಲಾಗಿದ್ದಿತು. "ವರ್ಷಕ್ಕೆ ಐದು ಪುಸ್ತಕ: ವಾ. ಚಂದಾ: ಆರು ರೂಪಾಯಿ" ಎಂದು ರಕ್ಷಾಪತ್ರದ ಕೊನೆಯ ಪುಟದಲ್ಲಿ ಉಲ್ಲೇಖವಿದ್ದಿತು. ಐದೂ ಅನುವಾದಗಳೇ: ಒಂದು ಮರಾಠಿ ಕಾದಂಬರಿ, ಇನ್ನೊಂದು ಹಿಂದೀ ಕಾದಂಬರಿ, ಮಗದೊಂದು ತಮಿಳು ಕಥಾಸಂಗ್ರಹ, ಮತ್ತೊಂದು ಇಂಗ್ಲೀಷು ಕತೆಗಳ ಸಂಗ್ರಹ, ಐದನೆಯದು ಫ್ರೆಂಚ್ ಕಾದಂಬರಿಯೊಂದರ ಸಂಕ್ಷಿಪ್ತ ಅನುವಾದ. ಪ್ರತಿಯೊಂದು ಪುಸ್ತಕದ ಮೊದಲನೆಯ ಹಾಳೆಯ ಮೇಲೆ "ವೀರಶೈವ ಕುಲಗುರು ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀ ಶ್ರೀ ಸಿದ್ಧವೀರ ಸ್ವಾಮಿಜಿಯವರ ಪಾದಾರವಿಂದಗಳಲ್ಲಿ – ಅತ್ಯಂತ ಭಕ್ತಿ, ವಿಶ್ವಾಸಪೂರ್ವಕ ಅರ್ಪಣೆ – ವಿಠೋಬಾಚಾರ್ಯ," ಎಂದು ಬರೆದಿದ್ದ.

ಗ್ರಂಥಕರ್ತರಿಂದ ಪುಸ್ತಕಗಳನ್ನು ಕಾಣಿಕೆಯಾಗಿ ಪಡೆಯುವ ಕಾಲವೂ ಬಂದಿತಲ್ಲಾ – ಎಂದು ಹಿಗ್ಗುತ್ತ ನಾನು ವಿಠೋಬಾಚಾರಿಯನ್ನು ಕುರಿತು ನುಡಿದೆ:

"ಎಲ್ಲಾ ಅನುವಾದಗಳೇ ಇವೆಯಲ್ಲ ಆಚಾರ್ಯರೇ?"

"ಇಂದು ಕನ್ನಡ ಸಾಹಿತ್ಯಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವುದೆಂದರೆ ದೇಶವಿದೇಶಗಳ ಶ್ರೇಷ್ಠ ಸಾಹಿತ್ಯದ ಅನುವಾದ ಸ್ವಾಮಿಜಿ. ಬೇರೆ ಭಾಷೆಗಳಲ್ಲಿ ವಾಙ್ಮಯ ಯಾವ ಉನ್ನತ ಮಟ್ಟದಲ್ಲಿದೆಯೆಂಬುದನ್ನು ಕನ್ನಡಿಗರೆಲ್ಲ ಅರಿತು ಕೊಳ್ಳಬೇಕಾಗಿದೆ. ಆ ದೃಷ್ಟಿಯಿಂದ ನಾನು ಅಲ್ಪಸೇವೆ ಸಲ್ಲಿಸುತ್ತಿದ್ದೇನೆ – ಆದರೆ ಅದನ್ನು ಮೆಚ್ಚಿ ಪ್ರೋತ್ಸಾಹಿಸುವವರು ಮಾತ್ರ ನಾಲ್ಕೈದು ಜನ ಅಷ್ಟೆ. ಅಚ್ಚಿನ ಹಣವೂ ಹುಟ್ಟುವುದಿಲ್ಲ. ಮೈಮೇಲೆ ಬರುತ್ತದೆ ವ್ಯವಹಾರ...."

"ಕನ್ನಡ ಸಾಹಿತ್ಯದ ಹಣೇಬರಹವೇ ಅಷ್ಟು...."

"ಏನು ಮಾಡೋದು ಬುದ್ಧೀ. ಈ ಸಾಹಿತ್ಯ, ಸಾಹಿತ್ಯ ಸೇವೆಗಳ ಹುಚ್ಚು ಬಿಟ್ಟು ವಕೀಲಿ ವ್ಯವಸಾಯದಲ್ಲೇ ಎಲ್ಲಾ ಚಿತ್ತವನ್ನೂ ತೊಡಗಿಸಿದರೆ ಹಾಯಾಗಿ ಜೀವನ ಸಾಗಿಸಬಹುದು ನಾನು. ಆದರೆ ಇದೊಂದು ಹುಚ್ಚು ನನಗೆ. ಚಿಕ್ಕಂದಿನಿಂದಲೂ ಸಾಹಿತ್ಯ ಅಂದರೆ ಬಲು ಪ್ರೀತಿ...."

"ನಮಗೂ ಅಷ್ಟೆ. ಕನ್ನಡ ಸಾಹಿತ್ಯವನ್ನು ಅಭಿಮಾನ ಶ್ರದ್ಧೆಗಳಿಂದ ಅಭ್ಯಸಿಸಿದ್ದೇವೆ. ಶಿವಯೋಗಮಂದಿರದಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಕೆಲವು ಲೇಖನಗಳನ್ನೂ ಬರೆದಿದ್ದೆವು – ಕನ್ನಡ ಸಾಹಿತ್ಯದ ಬಗ್ಗೆ. ಈಚೆಗೆ ಬರುತ್ತಿರುವ ಕತೆ ಕಾದಂಬರಿ ನಾಟಕಗಳನ್ನೂ ಓದಿಕೊಂಡಿದ್ದೇವೆ."

"ಸ್ವಾಮಿಗಳು ಕತೆ ಕಾದಂಬರಿ ಓದುವುದೆಂದರೆ ಆಶ್ಚರ್ಯದ ವಿಷಯವೇ ಸರಿ."

"ಇರಬಹುದು. ಆದರೆ ನಾವು ಎಲ್ಲ ಸ್ವಾಮಿಗಳ ಹಾಗಲ್ಲ. ನಮ್ಮ ದಾರಿಯೇ ಬೇರೆ, ನಮ್ಮ ವಿಚಾರಗಳೇ ಬೇರೆ. ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳ ದಾರಿದ್ರ್ಯವನ್ನು ನಿವಾರಿಸಲು ನಮ್ಮಿಂದ ಸಾಧ್ಯವಾದ ಸೇವೆ ಸಲ್ಲಿಸಲು ನಿರ್ಧರಿಸಿಯೇ ಈ ಕಡೆ ಬಂದಿದ್ದೇವೆ."

ನನ್ನ ಮಾತಿನಿಂದ ವಿಠೋಬಾಚಾರಿಗೆ ಪರಮ ಸಂತೋಷವಾದಂತೆ ತೋರಿತು. ಆತ ತುಟಿಗಳಲ್ಲಿ ನಗೆಯನ್ನು ತುಳುಕಿಸುತ್ತ ಹೇಳಿದ: "ತಮ್ಮಂಥ ವಿಶಾಲದೃಷ್ಟಿಯ ಉದಾರಮನಸ್ಸಿನ ಸ್ವಾಮಿಗಳನ್ನು ನಾನು ಇದುವರೆಗೂ ಕಂಡಿರಲಿಲ್ಲ ಬುದ್ಧೀ. ತಾವು ಯಾವುದಾದರೊಂದು ದೊಡ್ಡ ಮಠದ ಅಧಿಕಾರಿಗಳಾದರೆ ಕನ್ನಡ ಸಾಹಿತಿಗಳಿಗೆಲ್ಲ ಬಹಳ ಸಹಾಯವಾಗುವುದು."

"ನಮ್ಮದು ಮೊದಲಿಂದಲೂ ಸ್ವತಂತ್ರ ಮನೋವೃತ್ತಿ. ಹಾಗೆಲ್ಲ ಮಠಗಳ ಬಂಧನಕ್ಕೊಳಗಾಗುವ ಸ್ವಭಾವ ನಮ್ಮದಲ್ಲ."

ನನ್ನೀ ಮಾತಿನಿಂದಾಗಿ ಆತ ಇನ್ನೂ ಪ್ರಭಾವಿತನಾದಂತೆ ತೋರಿತು. "ತಮ್ಮಂಥ ವಿಭೂತಿಗಳಿಗೆ ಬಂಧನ ವಿಧಿಸುವ ಯೋಗ್ಯತೆ ಯಾರಲ್ಲಿದೆ ಬುದ್ಧೀ?" ಎಂದು ನುಡಿದ.

ಮತ್ತೆ ಆತ ಕೇಳಿದ: "ಕರ್ನಾಟಕದ ಉದ್ಧಾರ ಹೇಗಾಗಬಹುದು ಸ್ವಾಮಿಜಿ?"

"ನಮ್ಮಲ್ಲಿಯ ಜಾತಿಯ ಜಗಳ ನಿಂತು ನಾವೆಲ್ಲಾ ಒಂದು ಎಂಬ ಭಾವನೆ ದೃಢವಾದ ಬಳಿಕ ಉದ್ಧಾರದ ಮಾತು."

"ಜಾತಿಯ ಭಾವನೆಯನ್ನು ತೆಗೆದುಹಾಕುವುದು ಹೇಗೆ?"

"ನಿಸ್ವಾರ್ಥಬುದ್ಧಿಯಿಂದ ಕೆಲಸ ಮಾಡಬೇಕು. ಸರ್ವಧರ್ಮ ಸಮನ್ವಯದ ವಿಚಾರ ಹರಡಬೇಕು. ಸಾಹಿತಿಗಳನ್ನೆಲ್ಲ ಒಂದೆಡೆ ಕೂಡಿಸಬೇಕು. ಅವರಿಗೆ ಬೆಂಬಲವಿತ್ತು ಅವರಿಂದ ಪ್ರಚಾರಕಾರ್ಯ ನಡಸಬೇಕು."

ವಿಶೋಬಾಚಾರಿಯೂ ಅಂಥ ಉತ್ತರವನ್ನೇ ನಿರೀಕ್ಷಿಸುತ್ತಿದ್ದನೆಂಬುದನ್ನು ನಾನು ಮೊದಲೇ ಊಹಿಸಿಕೊಂಡಿದ್ದೆ. ನನ್ನ ಉತ್ತರವನ್ನು ಕೇಳಿ ಆತ ಆನಂದದಿಂದ ಕುಣಿದಾಡಬಹುದೆಂದೂ ನನಗನ್ನಿಸಿತ್ತು. ಆದುದೂ ಹಾಗೆಯೆ. ಆತ ಧಿಗ್ಗನೆದ್ದು ನನ್ನ ಪಾದಗಳಿಗೆ ಮಣಿದು ಹೇಳಿದ: "ಎಂಥ ಅದ್ಭುತ ವಿಚಾರ ಸ್ವಾಮಿಜಿ, ತಮ್ಮವು! ನಮ್ಮ ನಾಡಿನ ಸ್ವಾಮಿಗಳೆಲ್ಲ ನಿಮ್ಮಂತೆ ಯೋಚಿಸತೊಡಗಿದರೆ ಕರ್ನಾಟಕದ ಉದ್ಧಾರ ಎಷ್ಟು ದಿನಗಳದು! ನಿಮ್ಮ ಕ್ರಾಂತಿಕಾರಕ ವಿಚಾರಗಳಿಗೆಲ್ಲ ಸಾಕಷ್ಟು ಪ್ರಚಾರ ದೊರೆಯಬೇಕು. 'ಒಂದೇ ಕರ್ನಾಟಕ' ಪತ್ರಿಕೆಯಲ್ಲಿ ಈ ಬಗ್ಗೆ ಬರೆಯುತ್ತೇನೆ."

ಆ ಪತ್ರಿಕೆಯ ಹೆಸರು ಕಿವಿಗೆ ಬಿದ್ದೊಡನೆ ನನಗೂ ಪರಮಾನಂದವಾಯಿತು. ಕರ್ನಾಟಕದಲ್ಲೆಲ್ಲ ಹೆಚ್ಚು ಪ್ರಚಾರದಲ್ಲಿದ್ದ ದಿನಪತ್ರಿಕೆಯೆಂದರೆ ಅದೊಂದೇ ಒಂದು. ಅದರಲ್ಲಿ ಪ್ರಚಾರ ಸಿಕ್ಕುವುದು ಸುಲಭದ ಮಾತೇನೂ ಅಲ್ಲ.

"ತಮ್ಮದೊಂದು ಫೋಟೋ ಸಹ ಕೊಡಬೇಕು ಬುದ್ಧೀ."

"ಬ್ಲಾಕ್ ಮಾಡಿಸುವವರು ಯಾರು?"

"ಪತ್ರಿಕೆಯವರೇ ಮಾಡಿಸುತ್ತಾರೆ."

"ಹಣ?"

"ತಾವು ಆ ಬಗ್ಗೆ ಯೋಚಿಸಬೇಕಾಗಿಲ್ಲ ಸ್ವಾಮಿಜಿ. 'ಒಂದೇ ಕರ್ನಾಟಕ' ಪತ್ರಿಕೆಯವರು ಲಕ್ಷಾಧೀಶರು. ಬ್ಲಾಕ್ ಡಿಪಾರ್ಟ್‌ಮೆಂಟ್ ಸಹ ಇದೆ ಅವರದ್ದು."

"ಇರಲಿ, ಇರಲಿ. ಸಂತೋಷ. ಆದರೂ...."

"ಈಗ ಹಣದ ಮಾತೇ ಬೇಡ ಬುದ್ಧೀ. ಮುಂದೆ ನೋಡಿದರಾಯಿತು. ನಮ್ಮ ಗ್ರಂಥಮಾಲೆ ಇದ್ದೇ ಇದೆಯಲ್ಲಾ. ಅದಕ್ಕೆ ತಾವು ಪೋಷಕರಾದರಾಯಿತು."

"ಇವೊತ್ತೇ ನಮ್ಮನ್ನು ಪೋಷಕರನ್ನಾಗಿ ಮಾಡಿಕೊಂಡುಬಿಡಿ."

ಒಡನೆಯೇ ವಿಠೋಬಾಚಾರಿ ಜೇಬಿನಿಂದ ರಸೀತಿ ಪುಸ್ತಕ ತೆಗೆಯ ತೊಡಗಿದ. ಮಾತು ಬಲು ದೂರ ಹೋಯಿತೆಂಬುದು ಗೊತ್ತಾಗುತ್ತಲೂ ನಾನು ಮೋಹಕವಾಗಿ ನಗುತ್ತ – "ರಸೀತಿ ಇರಲಿ ಸದ್ಯ, ಆಚಾರ್ಯರೇ. ಪೋಷಕ ಸದಸ್ಯತ್ವದ ವಾಗ್ದಾನ ಮಾಡಿದ್ದೇವೆ, ಕೆಲವು ದಿನ ಹೋದ ಬಳಿಕ ಹಣ ಕೊಡುತ್ತೇವೆ," ಎಂದು ಹೇಳಿದೆ.

ಆಚಾರಿ ಕೈ ಹಿಸುಕಿಕೊಳ್ಳುತ್ತ – "ಹಾಗೇ ಆಗಲಿ ಬುದ್ಧೀ. ತಮಗೆ ಅನುಕೂಲವಾದಾಗ ಕೊಡಿ. ನಾಳೆ ನಾಡಿದ್ದರ ಸಂಚಿಕೆಯಲ್ಲಿ ತಮ್ಮ ಸಂದರ್ಶನ ಪ್ರಕಟವಾಗುತ್ತದೆ," ಎಂದು ಹೇಳಿ ಒಂದು ಫೋಟೋ ಪಡೆದು ಕೊಂಡು ಹೊರಟುಹೋದ.

ಇನ್ನು ಅರ್ಧ ತಾಸಿನವರೆಗೆ ವಿಶ್ರಾಂತಿ ತೆಗೆದುಕೊಳ್ಳೋಣವೆಂದು ನಾನು ಕಣ್ಣು ಮುಚ್ಚಿ ಮಲಗಿಕೊಂಡೆ. ಅಷ್ಟರಲ್ಲಿ ಶಾಸ್ತ್ರಿ ಧ್ವನಿಯೆತ್ತಿ ಹೇಳಿದ: "ಆ ಆಚಾರಿಯನ್ನು ನೀವು ಅಷ್ಟೇಕೆ ಏರಿಸಿ ಕೂಡ್ರಿಸಿದಿರೋ ಏನೊ. ಆ 'ಒಂದೇ ಕರ್ನಾಟಕ' ಬ್ರಾಹ್ಮಣರ ಪತ್ರಿಕೆ, ಆಚಾರಿ ಬ್ರಾಹ್ಮಣ ಎಂಬುದನ್ನೇ ಮರೆತು ಬಿಟ್ಟಿರಲ್ಲಾ ?"

ನಾನು ಗಡಬಡಿಸಿ ಎದ್ದು ಕುಳಿತೆ. ಶಾಸ್ತ್ರಿಗೆ ಹೊಟ್ಟೆಯುರಿಯೆದ್ದುದು ಸ್ಪಷ್ಟವಿದ್ದಿತು. ಮೊದಲಿನಿಂದಲೂ ಅವನ ಸ್ವಭಾವವೇ ಅಂಥದು. ತನ್ನ 'ಲಿಂಗವೀರ'ವನ್ನು ಬಿಟ್ಟರೆ ಕರ್ನಾಟಕದಲ್ಲಿ ಬೇರೆ ಪತ್ರಿಕೆಗಳೇ ಇಲ್ಲವೆಂಬಂತೆ ಆತ ಮಾತನಾಡುತ್ತಾನೆ. ನಾನು ಯಾವಾಗಲೂ ಅದನ್ನೇ ಆಶ್ರಯಿಸಿಕೊಂಡಿರ ಬೇಕು, ಬೇರೆ ಲೇಖಕರನ್ನೂ ಪತ್ರಿಕಾಕರ್ತರನ್ನೂ ಹತ್ತಿರ ಸೇರಿಸಕೂಡದು, ಅವರಿಗೆ ಸಹಾಯ ಮಾಡಕೂಡದು – ಎಂದೆಲ್ಲ ಅವನ ವಿಚಾರ. ಬ್ರಾಹ್ಮಣರ ಪತ್ರಿಕೆ, ವೀರಶೈವರ ಪತ್ರಿಕೆ ಎಂಬ ಭೇದಭಾವವೇನೂ ಅವನಲ್ಲಿ ನಿಜಕ್ಕೂ ಇಲ್ಲವೆಂಬುದನ್ನು ನಾನು ಬಲ್ಲೆ. ವೀರಶೈವರೇ ಹೊರಡಿಸುವ ಇತರ ಪತ್ರಿಕೆ ಗಳನ್ನು ಕಂಡರೂ ಅವನಿಗಾಗುವುದಿಲ್ಲ. ಜಾತಿಯ ಮಾತು ಒಂದು ಕುಂಟು ನೆಪ. ಮುಖ್ಯವಾದುದು ಸ್ವಾರ್ಥ. ಅದನ್ನು ಮರೆಮಾಚಲು ಆಗಾಗ ಜಾತಿಯ ಅಭಿಮಾನದ ಪರದೆಯನ್ನು ಪಯೋಗಿಸುತ್ತಾನೆ ಶಾಸ್ತ್ರಿ.

"ಹಾಗಲ್ಲ ಶಾಸ್ತ್ರಿ. ಆಚಾರಿಯೊಂದಿಗೆ ಮಾತನಾಡಿದ ಮಾತ್ರಕ್ಕೆ ನಾನು ಅವನಿಗೆ ಪ್ರೋತ್ಸಾಹ ಕೊಟ್ಟ ಹಾಗೇ ಆಯಿತೇ ? 'ಒಂದೇ ಕರ್ನಾಟಕ'ದಿಂದ ಇಂಥ ಪ್ರಸಿದ್ಧಿ ಪುಕ್ಕಟೆಯಾಗಿ ದೊರೆಯುವಾಗ ನಾನೇಕೆ ಬೇಡವೆನ್ನಲಿ?

ನೀನಾದರೂ ಏಕೆ ಬೇಡವೆನ್ನಬೇಕು ? ಇಂಥ ವಿಚಾರಗಳಲ್ಲೆಲ್ಲ ಬಹಳ ಮುತ್ಸದ್ದಿ ತನದಿಂದ ವರ್ತಿಸಬೇಕಾಗುತ್ತೆ, ಅಲ್ಲವೆ ?"

"ಏನು ಮುತ್ಸದ್ದಿತನವೋ ನಿಮ್ಮದು. ನಿಮ್ಮಂಥ ಸಾವಿರಾರು ಮುತ್ಸದ್ದಿ ಗಳನ್ನು ಕಂಡ ಮಹಾ ಮುತ್ಸದ್ದಿಗಳು ಆ ಬ್ರಾಹ್ಮಣರು, ನಿಮ್ಮ ಮೂಗಿಗೆ ದಾರ ಕಟ್ಟಿ ಕುಣಿಸಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ನೋಡುತ್ತಿರಿ."

"ನನ್ನಿಂದ ಏನಾಗಬೇಕಾಗಿದೆ ಅವರಿಗೆ? 'ಒಂದೇ ಕರ್ನಾಟಕ'ಕ್ಕೆ ಹಣದ ಕೊರತೆಯೇನು ? ಯುದ್ಧಕಾಲದಲ್ಲಿ ಲಕ್ಷಾಂತರ ಗಳಿಸಿದ್ದಾರೆ. ನನ್ನಂಥವನಿಂದ ದೊರೆಯುವ ನೂರಿನ್ನೂರಕ್ಕೆ ಆಸೆ ಮಾಡಬಹುದೇ ಅವರು ?"

"ಅದರಲ್ಲಿ ಬೇರೆ ಉದ್ದೇಶಗಳಿವೆ. ನಿಮಗೆ ತಿಳಿಯುವುದಿಲ್ಲ. ಪತ್ರಿಕೆ ಯಲ್ಲಿ ಪ್ರಚಾರ ಕೊಟ್ಟಂತೆ ಮಾಡಿ ಈ ಆಚಾರಿ ನಿಮ್ಮನ್ನು ಸುಲಿಯಲು ಹೊಂಚುಹಾಕಿದ್ದಾನೆ. ಇಷ್ಟೂ ಅರ್ಥವಾಗುವುದಿಲ್ಲವೇ? ಒಮ್ಮೆಲೆ ಪೋಷಕ ರಾಗಿಬಿಟ್ಟಿರಲ್ಲಾ ?"

"ಆದರೇನಾಯಿತೋ? ಹಣವನ್ನೇನೂ ಕೊಟ್ಟಿಲ್ಲವಲ್ಲಾ ?"

"ಬಿಡುತ್ತಾನೆಯೇ ಆತ? ಮಾರವಾಡಿಯ ಹಾಗೆ ಒಂದು ಕಾಸನ್ನೂ ಬಿಡದೆ ವಸೂಲು ಮಾಡುತ್ತಾನೆ."

"ಅಂಥ ಪ್ರಸಂಗ ಬಂದಾಗ ನೋಡಿಕೊಂಡರಾಯಿತು."

"ಅಂತೂ ನೀವು ಹೀಗೆ ಬ್ರಾಹ್ಮಣರನ್ನು ಏರಿಸಿ ಕೂಡ್ರಿಸುವುದು ನನಗೇನೂ ಸರಿಬರುವುದಿಲ್ಲ."

"ನಿನಗೆ ತಿಳಿಯದು ಶಾಸ್ತ್ರಿ. ಇದರಲ್ಲಿ ಡಿಪ್ಲೊಮಸಿ ಇದೆ. ಎಲ್ಲಾ ಜಾತಿಯ ಜನರನ್ನೂ ಹಿಡಿದುಕೊಂಡು ಮೊದಲು ಸಾಕಷ್ಟು ಹೆಸರು ಗಳಿಸು ತ್ತೇನೆ, ಮುಂದೆ ನಾನೇನು ಮಾಡುವೆನೆಂಬುದನ್ನು ನೀನೇ ನೋಡುವಿಯಂತೆ."

"ಓಹ್ಹೊ, ನೋಡಿದ್ದೇನಲ್ಲ ಸಾಕಷ್ಟು...." ಎಂದು ಶಾಸ್ತ್ರಿ ಅಣಕದ ನಗೆಯೊಂದಿಗೆ ಹೇಳುತ್ತಿದ್ದ ಹಾಗೆ ಖರೇಸೆಟ್ಟಿ ಬಂದುದನ್ನು ಕಂಡು ಮಾತನ್ನು ಅಷ್ಟಕ್ಕೇ ತಡೆದು ನಿಲ್ಲಿಸಿದ.

[೭]

ಅಂದು ಸಾಯಂಕಾಲ ನಡೆದ ಸಭೆಗೆ ಏನಿಲ್ಲವೆಂದರೂ ಆರು ಸಾವಿರ ಜನರಾದರೂ ಕೂಡಿರಬಹುದು. ಹೈಸ್ಕೂಲು ಬಯಲಿನಲ್ಲಿ ಲೌಡ್‌ಸ್ಪೀಕರ್

ವ್ಯವಸ್ಥೆ ಮಾಡಿ ಸಭೆಯನ್ನೇರ್ಪಡಿಸಲಾಗಿದ್ದಿತು. ಸ್ವಾಗತ ಸಮಿತಿಯ ಪರವಾಗಿ ನನಗೊಂದು ಬಿನ್ನವತ್ತಳಿಯೂ ಅರ್ಪಿಸಲ್ಪಟ್ಟಿತು. ನಗರದ ಅನೇಕ ಸಂಘ ಸಂಸ್ಥೆಗಳು ಹಾರ ತುರಾಯಿ ಅರ್ಪಿಸಿ ನನ್ನನ್ನು ಸತ್ಕರಿಸಿದುವು. ಸುಮಾರು ನೂರಿಪ್ಪತ್ತು ಹಾರಗಳಾದರೂ ಬಿದ್ದಿರಬಹುದು, ಅಂದು ನನ್ನ ಕೊರಳಿಗೆ. ಅದುವರೆಗೆ ಯಾವ ಊರಲ್ಲೂ ಅಂಥ ವೈಭವದ ಸತ್ಕಾರ ದೊರೆತಿರ ಲಿಲ್ಲ ನನಗೆ. ನಾನು ತಬ್ಬಿಬ್ಬಾದೆ. ಆ ಜನರೆಲ್ಲ ನನ್ನಲ್ಲಿ ಏನನ್ನು ಕಂಡು ಮರುಳಾಗಿದ್ದರೆಂಬುದೇ ಅರ್ಥವಾಗದಂತಾಗಿದ್ದಿತು. ಆ ಹಾರಗಳು, ಆ ಬಿನ್ನವತ್ತಳೆ, ಆ ಹೊಗಳಿಕೆ, ಆ ಸತ್ಕಾರ....ನನಗೆ ಒಳಗೊಳಗೇ ನಗೆಯುಕ್ಕಿ ಬರುತ್ತಿತ್ತು. ನನಗೆ ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಪಾಂಡಿತ್ಯವಿಲ್ಲ, ಪ್ರತಿಭೆಯಿಲ್ಲ. ಸಚ್ಚಾರಿತ್ರ್ಯವಾದರೂ ಇದೆಯೆ ಅಂದರೆ ಅದೂ ಇಲ್ಲ. ಸಭೆಯಲ್ಲಿ, ಉಚ್ಚಾಸನದ ಮೇಲೆ ಮಂಡಿಸಿ, ಎದುರಿಗೆ ಕಲೆತ ಜನವನ್ನು ನಿರೀಕ್ಷಿಸುತ್ತಿದ್ದ ಹಾಗೆ ಅದೊಂದು ಹುಚ್ಚರ ನೆರವಿಯೆಂದೇ ನನಗೆನ್ನಿಸಿತು. ಹಸ್ತಪತ್ರಿಕೆಯ ಪ್ರಚಾರದ ಮೂಲಕ ಆ ಜನರನ್ನೆಲ್ಲ ಹುಚ್ಚರನ್ನಾಗಿ ಮಾಡಿದ್ದ ಖರೇಸೆಟ್ಟಿ. ನನ್ನ ನಿಜವಾದ ಯೋಗ್ಯತೆ ಅವನಿಗೊಬ್ಬನಿಗೆ ತಿಳಿದಿತ್ತೊ ಏನೊ. ಮಹಾದೇವಿಗಂತೂ ನೊದಲೇ ಎಲ್ಲವೂ ಗೊತ್ತಿದ್ದಿತು. ಜಡಿಯಪ್ಪ ಬಹಳ ಘಾಟಿ. ಅವನೂ ತಿಳಿದು ಕೊಂಡಿದ್ದಿರಬಹುದು.

ಆದಿನ ನಾನು ಏನೇನು ಭಾಷಣ ಮಾಡಿದೆನೋ ನನಗೇ ತಿಳಿಯದು. ಅಂತೂ ಎರಡು ತಾಸುಗಳವರೆಗೆ ನಾನು ಬಿಟ್ಟೂಬಿಡದೆ ಮಾತನಾಡುತ್ತಿದ್ದುದು ಮಾತ್ರ ನೆನಪಿದೆ. ವೀರಶೈವ ಧರ್ಮ, ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಸರ್ವಧರ್ಮಸಮನ್ವಯ, ಕನ್ನಡ ಸಾಹಿತ್ಯ, ಕನ್ನಡ ನಾಡಿನ ಏಕೀಕರಣ – ಯಾವುದನ್ನೂ ಬಿಡಲಿಲ್ಲ. ನಿಜ ಹೇಳಬೇಕಾದರೆ – ಇವುಗಳಲ್ಲೊಂದು ವಿಷಯದ ಬಗೆಗೂ ನಾನು ಆಳವಾಗಿ ಅಭ್ಯಾಸ ಮಾಡಿಲ್ಲ. ವೀರಶೈವ ಧರ್ಮದ ಬಗೆಗೆ ಬೆಂಗಳೂರಿನ ಮಹಾದೇವ ಸ್ವಾಮಿಗಳು ಸಣ್ಣ ಗ್ರಂಥವೊಂದನ್ನು ಬರೆದು ಪ್ರಕಟಿಸಿದ್ದಾರೆ. ಅದನ್ನು ಒಂದೆರಡು ಸಲ ಓದಿದ್ದೇನೆ. ಅದನ್ನೆಲ್ಲ ಕಂಠಪಾಠ ಮಾಡುವ ಇಚ್ಛೆ ನನಗಿರಲಿಲ್ಲವಾದರೂ ತಾನಾಗಿಯೆ ಪಾಠವಾದಂತಾಗಿದೆ. ವೀರಶೈವ ಧರ್ಮದ ಮಾತು ಬಂದಾಗಲೆಲ್ಲ ಮಹಾದೇವಸ್ವಾಮಿಗಳ ಆ ಭಾಷಣವೇ ನನ್ನ ಮುಖದಿಂದ ಹೊರಬರುತ್ತದೆ. ಸರ್ವಧರ್ಮಸಮನ್ವಯದ ಬಗೆಗೂ ಹೀಗೇ. ನವಲುಗುಂದದ ಬಸವಲಿಂಗಸ್ವಾಮಿಗಳು, ಅ. ನ. ಕೃಷ್ಣ

ರಾಯರು, ಧಾರವಾಡದ ಮೃತ್ಯುಂಜಯ ಸ್ವಾಮಿಗಳು ಈ ಬಗ್ಗೆ ಅಲ್ಲಲ್ಲಿ ಮಾಡಿದ ಭಾಷಣಗಳ ವರದಿ ಪತ್ರಿಕೆಗಳಲ್ಲಿ ಬಂದಿದ್ದುದನ್ನು ಓದಿದ್ದೆ. ಅದೂ ಕಂಠಪಾಠವಾಗಿದೆ. ಸರಿ. ಅವರ ಭಾಷಣಗಳನ್ನು ಕಾಪಿ ಹೊಡೆಯುವ ಇಚ್ಛೆ ನನಗಿರದಿದ್ದರೂ ಅವರ ಮಾತುಗಳೇ ಬಂದುಬಿಡುತ್ತವೆ ನನ್ನ ಬಾಯಿಂದ. ಕನ್ನಡ ಸಾಹಿತ್ಯ, ಏಕೀಕರಣಗಳ ಬಗೆಗಂತೂ ನೂರಾರು ಜನ ಭಾಷಣ ಮಾಡಿರುವರಲ್ಲ? ಒಬ್ಬೊಬ್ಬರದು ಒಂದೊಂದು ಮಾತು ಪಾಠವಾಗಿದೆ, ಜನರನ್ನು ಭಾವೋದ್ರಿಕ್ತರನ್ನಾಗಿ ಮಾಡಲು ಒಂದೆರಡು ಹೊಸ ಘೋಷಣೆಗಳನ್ನೂ ಹುಡುಕಿ ತೆಗೆದಿದ್ದೇನೆ.

"ಶಿವಪೂಜೆಯೆಂದರೆ ಜನಪೂಜೆ. ಕನ್ನಡ ನಾಡಿನ ಏಕೀಕರಣವೇ ನಮ್ಮ ಮಂತ್ರ. ಕನ್ನಡ ಸಾಹಿತ್ಯದ ಉದ್ಧಾರವೇ ನಮ್ಮ ಮುಕ್ತಿ," ಎಂದು ನಾನು ಹೇಳಿದಾಗ ಚಪ್ಪಾಳೆಗಳ ಕಡಕಡಾಟವಾಯಿತು, ಸಭೆಯಲ್ಲಿ.

ಅಂದು ರಾತ್ರಿ ಹನ್ನೊಂದು ಗಂಟೆಯುವರೆಗೂ ದುಂಡಪ್ಪನವರ ಮನೆಯಲ್ಲಿ ಜನಜಾತ್ರೆ. ವೀರಶೈವರು, ಬ್ರಾಹ್ಮಣರು, ವೈಶ್ಯರು, ಮರಾಠರು, ಮುಸ್ಲಿಮರು, ಕ್ರೈಸ್ತರು; ವಕೀಲರು, ಡಾಕ್ಟರರು, ವ್ಯಾಪಾರಿಗಳು, ಶಿಕ್ಷಕರು, ಸಂಗೀತಗಾರರು, ನರ್ತಕರು, ಸರಕಾರಿ ನೌಕರರು ಎಲ್ಲರೂ ನನ್ನ ಸುತ್ತ ಗುಂಪು ಗೂಡಿದ್ದರು. ಆ ನಗರದಲ್ಲಿ ನ್ಯಾಯಾಧೀಶರಾಗಿದ್ದ ಕೋಲ ಶಾಂತಯ್ಯನವರೂ ಬಂದಿದ್ದರು. ಅಂದು ನಾನು ಮಲಗಿಕೊಂಡಾಗ ಹನ್ನೆರಡು ಗಂಟೆಯಾಗಿತ್ತು.

[೮]

ಜರತಾರಿ ನಗರದಲ್ಲಿ ನನ್ನ ಸಮಯ ಸುಖವಾಗಿ ಕಳೆಯತೊಡಗಿತು. 'ಒಂದೇ ಕರ್ನಾಟಕ' ದಿನಪತ್ರಿಕೆಯಲ್ಲಿ ನನ್ನ ಸಂದರ್ಶನ, ಭಾವಚಿತ್ರ, ನನ್ನ ಭಾಷಣದ ವಿಸ್ತೃತ ವರದಿ ಪ್ರಕಟವಾಗಿ ಬಂದುದೂ ಆಯಿತು. ನನ್ನ ದರ್ಶನ ಪಡೆಯುಲು ಬೆಳಗಿನಿಂದ ರಾತ್ರಿಯುವರೆಗೆ ಬಿಡಾರದ ಮನೆಗೆ ಎಡತಾಕುತ್ತಿತ್ತು ಜನ. ಪ್ರತಿ ದಿನವೂ ಮಧ್ಯಾಹ್ನ, ರಾತ್ರಿ ಒಬ್ಬೊಬ್ಬರ ಮನೆಯಲ್ಲಿ 'ಬಿನ್ನಹ' ಸಿಹಿಯೂಟ, ಹಾಲು ತುಪ್ಪ ಹಣ್ಣು. ಕರಡೆಪ್ಪಸೆಟ್ಟರೂ ಒಂದು ದಿನ ಕರೆದುಕೊಂಡು ಹೋಗಿದ್ದರು. ಅವರಲ್ಲಿ ನನ್ನ ಪಾದಪೂಜೆಯೂ ಆಯಿತು; ಎರಡು ನೂರಾ ಒಂದು ರೂಪಾಯಿ ಕಾಣಿಕೆಯೂ ಲಭಿಸಿತು. ಅಂದು ರಾತ್ರಿ ನನ್ನನ್ನು ಅಲ್ಲಿಯೆ ಇರಿಸಿಕೊಳ್ಳಲು ಮಹಾದೇವಿ ಹಲವು ಉಪಾಯ ಯೋಚಿಸಿದರೂ

ಯಾವುದೂ ಫಲಕಾರಿಯಾಗಲಿಲ್ಲ. ಜನರ ಕಣ್ಣು ತಪ್ಪಿಸಿ ಅಲ್ಲಿಯೆ ಉಳಿದುಕೊಳ್ಳುವುದು ಸಾಧ್ಯವಿರಲಿಲ್ಲ. ಮಹಾದೇವಿಯ ಬಗೆಗೆ ಕನಿಕರವುಂಟಾಗುತ್ತಿದ್ದಿತು. ಆದರೇನು ಮಾಡುವುದು? ಬೇರೆ ಉಪಾಯವಿರಲಿಲ್ಲ.

ನಾಲ್ಕೈದು ದಿನಗಳಲ್ಲಿ ದೊರೆತ ಕಾಣಿಕೆಯ ಹಣವೆಲ್ಲ ಸೇರಿ ಒಂದು ಸಾವಿರಕ್ಕೂ ಮಿಕ್ಕಿದ್ದಿತು. ಶಾಸ್ತ್ರಿಯೇ ಅದನ್ನು ಟ್ರಂಕಿನಲ್ಲಿಟ್ಟುಕೊಂಡಿದ್ದ.

ಒಂದು ದಿನ ಮಧ್ಯಾಹ್ನ ನಾನು ವಿರಮಿಸುತ್ತಿದ್ದಾಗ ಗುಂಡಾಡಯ್ಯನ ಸವಾರಿ ಆಗಮಿಸಿತು.

" ಬನ್ನಿ ಸಂಪಾದಕರೇ, ಕುಳಿತುಕೊಳ್ಳಿ," ಎಂದು ನಾನು ಉಪಚರಿಸಿದೆ.

" ನಾನು .... ನಾನು .... ಸ್ವ .... ಸ್ವಲ್ಪ ಪ್ರಾವೇಟ್ ಮಾತಾಡುವದಿದೆ ಸ್ವಾ....ಸ್ವಾಮಿಜೀ...." ಎಂದ ಗುಂಡಾಡಯ್ಯ.

ಸೋಫಾದಲ್ಲಿ ಬಿದ್ದುಕೊಂಡಿದ್ದ ಶಾಸ್ತ್ರಿ ಮುಖ ಗಂಟುಹಾಕಿಕೊಂಡೇ ಎದ್ದುಹೋದ. ಗುಂಡಾಡಯ್ಯ ತನ್ನ ತೊದಲು ಮಾತಿನಲ್ಲಿ ಹೇಳತೊಡಗಿದ:

" ....ತಾವು ನಮ್ಮೂರಿಗೆ ದಯಮಾಡಿಸಿದ್ದು ತುಂಬಾ ಸಂತೋಷ ಬುದ್ಧೀ. ತಮ್ಮ....ಭಾಷಣವೂ ಬಲು ಚಲೋ ಆಯ್ತು. ಈ ವಾರ ನನ್ನ.... ಪತ್ರಿಕೆಯಲ್ಲಿ....ಪ್ರಕಟಿಸುವವನಿದ್ದೇನೆ."

" ಸಂತೋಷ."

" ನಮ್ಮ....ವೀರಶೈವಾವತಾರ....ಪತ್ರಿಕೆ ಇಪ್ಪತ್ಮೂರು....ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಬಂದಿದೆ....ಬುದ್ಧೀ. ಇದರಲ್ಲಿ ಬಹಳ ನಷ್ಟವಾಗಿದೆ."

ನಾನು ಕಳವಳವನ್ನು ಸೂಚಿಸುತ್ತ – " ನಷ್ಟವಾಯಿತೇ ? ಪಾಪ.... ಪಾಪ...." ಎಂದು ನುಡಿದೆ.

" ನಷ್ಟ ನಷ್ಟ ಅಂದರೆ ಅಷ್ಟಿಷ್ಟಲ್ಲ ಬುದ್ಧೀ. ಇಪ್ಪತ್ತುಸಾವಿರ ನಷ್ಟವಾಗಿದೆ. ನಮ್ಮ ಹೊಲ....ಮನೆ ಎಲ್ಲಾ ಇದರಲ್ಲಿ ಮುಳುಗಿ ಹೋಯ್ತು ಬುದ್ಧೀ...."

" ಛೆ. ಛೆ. ಅನ್ಯಾಯ....ಅನ್ಯಾಯ...."

" ಏನೋ ಇಂದಿಲ್ಲ ನಾಳೆ ಆದ್ರೂ ಶಿವ ಕಣ್ಣು ತೆರೆದಾನು....ನಷ್ಟ ತುಂಬಿ ಬಂದೀತು ಅಂತ ಪತ್ರಿಕೆ ನಿಲ್ಲಿಸದೆ ನಡಸುತ್ತಾ ಬಂದಿದ್ದೇವೆ ಬುದ್ಧೀ. ಆದರೇನು ? ಈಗಲೂ ಹಾ....ಹಾನಿಯೇ."

"ಪರ್ಷಕ್ಕೆ ಎಷ್ಟು ಹಾನಿಯಾಗುತ್ತೆ ?"

"ಅದು ಇಷ್ಟೇ ಅಂತ ಹೇಳುವಂತಿಲ್ಲ ಬುದ್ಧೀ. ಸಾವಿರ....ಎರಡು ಸಾವಿರ....ಮೂರು ಸಾವಿರ....ಲೆಕ್ಕವಿಲ್ಲ."

"ಇಷ್ಟೊಂದು ನಷ್ಟವಾದರೂ ಪತ್ರಿಕೆ ಯಾಕೆ ಹೊರಡಿಸುತ್ತಿದ್ದೀರಿ ?"

"ಏನು ಬುದ್ಧೀ....ತಾವು ಇಂಥಾ ಮಾತು ಆಡುವಿರಲ್ಲಾ? ನಾನು ಬಿಟ್ಟರೆ ಸಮಾಜಸೇವೆ ಮಾಡೋರು ಯಾರು ?"

ನನಗೆ ಒಳಗೊಳಗೇ ನಗು. ಸಮಾಜಸೇವೆಯನ್ನು ತಾನೊಬ್ಬನೇ ಗುತ್ತಿಗೆ ಹಿಡಿದ ಹಾಗೆ ಮಾತನಾಡುತ್ತಾನೆ ಈ ಮಗ. ತನ್ನನ್ನು ಬಿಟ್ಟರೆ ಸಮಾಜಸೇವೆ ಮಾಡುವವರೇ ಯಾರೂ ಇಲ್ಲವಂತೆ. ಇವನೋ....ಇವನ ಪತ್ರಿಕೆಯೊ....ಅದನ್ನು ಆಗಾಗ ನೋಡುತ್ತ ಬಂದಿದ್ದೆ ನಾನು. ಅದರ ಮುಖ್ಯ ವೈಶಿಷ್ಟ್ಯವೆಂದರೆ ಮುದ್ರಣದೋಷಗಳು. ಅನಂತರ ಭಾಷಾ ದೋಷಗಳು. ಕನ್ನಡದಲ್ಲಿ ಶುದ್ಧವಾಗಿ ಬರೆಯಲು ಸಹ ಕಲಿತಿರಲಿಲ್ಲ ಗುಂಡಾಡಯ್ಯ. ಅವನದು ವಿಚಿತ್ರ ಭಾಷೆ, ವಿಚಿತ್ರ ಶೈಲಿ, ವಿಚಿತ್ರ ವಿಚಾರಧಾರೆ. ಬ್ರಿಟಿಷರಿರುವವರೆಗೂ ಅವರನ್ನು ಹೊಗಳಿ ಬರೆಯುತ್ತಿದ್ದ. ಬ್ರಾಹ್ಮಣರನ್ನಂತೂ ಪ್ರತಿವಾರವೂ ಟೀಕಿಸುತ್ತಿದ್ದ. ಸ್ವಾತಂತ್ರ್ಯದ ಹೋರಾಟದಲ್ಲಿ ಬೀಳುವ ಮೂರ್ಖತನ ಮಾಡಬಾರದೆಂದು ವೀರಶೈವರಿಗೆ ಬೋಧಿಸುತ್ತಿದ್ದ. ಇಂಥ ಪತ್ರಿಕೆಗೆ ನಷ್ಟವಾದುದರಲ್ಲಿ ಆಶ್ಚರ್ಯದ ಮಾತೇನೂ ಇರಲಿಲ್ಲ. ಅದು ಇಷ್ಟು ದಿನ ಬದುಕಿ ಉಳಿದದ್ದೇ ಆಶ್ಚರ್ಯದ ಮಾತು. ಇವನ ಸಮಾಜಸೇವೆ....

"ತಾವು ವೀ....ವೀರಶೈವ ಸಮಾಜದ ರತ್ನದಂತಿದ್ದೀರಿ ಸ್ವಾಮಿಜಿ. ತಮ್ಮ ಪೂರ್ಣ ಪರಿಚಯ....ಫೋ....ಫೋಟೋ ಎಲ್ಲಾ ಹಾಕುತ್ತೇನೆ ಈ ವಾರದ ಪತ್ರಿಕೆಯಲ್ಲಿ...." ಎನ್ನುತ್ತಾ ಗುಂಡಾಡಯ್ಯ ತನ್ನ ಹಳೆಯ ಕೋಟಿನ ಜೇಬಿನಿಂದ ಹರಿದ ನೋಟ್‌ಬುಕ್ ಹೊರದೆಗೆದ.

"ತಾವು ಹುಟ್ಟಿದ್ದು ಯಾವೂರಲ್ಲಿ ಸ್ವಾಮಿಜಿ ?"

"'ಒಂದೇ ಕರ್ನಾಟಕ' ಪತ್ರಿಕೆಯಲ್ಲಿ ಅದೆಲ್ಲಾ ವಿವರ ಬಂದಿದೆಯಲ್ಲಾ ? ಅದನ್ನು ನೋಡಿಕೊಂಡು ಬಿಡಿ."

"ಛೆ. ಛೆ. ನಾನು ಹಾಗೆಲ್ಲ ಬ್ರಾ....ಬ್ರಾಹ್ಮಣರು ಬರೆದದ್ದು ಕಾ.... ಕಾಪಿ ಮಾಡುವಾತನಲ್ಲ ಬುದ್ಧೀ...."

"ಕಾಪಿ ಮಾಡುವದೇನಿದೆ? ವಿಷಯ ತಿಳಿದುಕೊಳ್ಳುವುದಷ್ಟೆ."

“ ಸರಿ. ಸರಿ. ತಮ್ಮ ಚಿತ್ರ....ಫೋ....ಫೋಟೋ ಒಂದು ಬೇಕಲ್ಲಾ ?”

“ ಬ್ಲಾಕ್ ಮಾಡಿಸುವುದೆಲ್ಲಿ ?”

“ ಇಲ್ಲೇ ಮಾಡಿಸುತ್ತೇನೆ.”

“ ಖರ್ಚು ಎಷ್ಟು ಬರುತ್ತದೆ ?”

ಹಳದಿ ಬಣ್ಣದ ತನ್ನ ಹಲ್ಲುಗಳನ್ನೆಲ್ಲ ತೆರೆದು ಹಿ ಹಿ ಎಂದು ನಗುತ್ತ ಹೇಳಿದ ಗುಂಡಾಡಯ್ಯ :

“ ಅದೆಲ್ಲಾ ಎಂಥ ಖರ್ಚು ಬುದ್ದೀ. ತಾವು ನಮ್ಮ ಪತ್ರಿಕೆಗೆ ಪೋ.... ಪೋಷಕರಾಗಿ ಬಿಡಿ ಅಂದರಾಯಿತು.”

ಆತ ಆ ವಿಷಯಕ್ಕೇ ಬರುವನೆಂಬುದು ನನಗೆ ಮೊದಲೇ ಗೊತ್ತಿದ್ದಿತು. ಆ ಪ್ರಸಂಗದಿಂದ ತಪ್ಪಿಸಿಕೊಳ್ಳುವಂತೆಯೂ ಇರಲಿಲ್ಲ.

“ ಎಷ್ಟು ಹಣ ಅದರದು ?” ಎಂದು ಕೇಳಿದೆ.

“ ಅದೇನು ದೊಡ್ಡದು ಬಿಡಿ ಬುದ್ಧೀ. ಕೇವಲ ನೂರು ರೂಪಾಯಿ....”

“ ಸರಿ. ಸರಿ. ನಾಳೆ ಬಂದು ಹಣ ತಕ್ಕೊಂಡು ಹೋಗಿ.”

ಆತ ಸಾಷ್ಟಾಂಗ ಹಾಕಿ ಎದ್ದು ಹೊರಡುತ್ತಿದ್ದ ಹಾಗೆ ನನಗೆ ಹಠಾತ್ತಾಗಿ ಮಠದ ವಿಷಯ ನೆನಪಿಗೆ ಬಂದಿತು. “ ಇಲ್ಲಿಯ ಮಠದ ಟ್ರಸ್ಟ್ ಕಮಿಟಿಗೆ ನೀವೂ ಒಬ್ಬರು ಸದಸ್ಯರಂತೆ. ಹೌದೇನ್ರೀ ?” ಎಂದು ಕೇಳಿದೆ.

“ ಹೌದು ಬುದ್ಧೀ. ಏಕೆ ಕೇಳಿದಿರಿ ?”

“ ಏಕೂ ಇಲ್ಲ. ಸುಮ್ಮನೆ.”

ಆತ ಮೆಟ್ಟಲುಗಳನ್ನಿಳಿಯುತ್ತಿದ್ದ ಹಾಗೆ ಆಗತಾನೆ ಮೇಲಕ್ಕೇರಿ ಬರುತ್ತಿದ್ದ ವಿಠೋಬಾಚಾರಿಯನ್ನು ಇರಿಯುವ ಹೋರಿಯಂತೆ ಕ್ರೂರವಾಗಿ ನಿಟ್ಟಿಸಿ ನೋಡಿ ಅವಸರದಿಂದ ಇಳಿದು ಹೋದುದು ನನಗೆ ಕಾಣಿಸದಿರಲಿಲ್ಲ.

ವಿಠೋಬಾಚಾರಿ ಬಂದವನು ವಿಶಾಲವಾಗಿ ನಗುತ್ತಾ – “ ನಮಸ್ಕಾರ.... ನಮಸ್ಕಾರ....ಬುದ್ಧಿಗಳು ಸೌಖ್ಯವೇ ?” ಎಂದ.

ನಾನೂ ನಗುತ್ತ – “ ಸೌಖ್ಯಕ್ಕೇನು ಕೊರತೆ. ಕೂತುಕೊಳ್ಳಿ ಆಚಾರ್ಯರೆ,” ಎಂದೆ.

“ ನಾನು ಬರೆದುದನ್ನು ಓದಿದಿರಾ ಸ್ವಾಮಿಜಿ ?”

“ ಓದದಿರುತ್ತೇವೆಯೇ, ನೀವು ಅಷ್ಟು ವಿಶ್ವಾಸದಿಂದ ಬರೆದಿರುವಾಗ ?”

"ಒಂದೇ ಒಂದು ದರ್ಶನದಿಂದ ನಿಮಗೆ ಅಖಿಲ ಕರ್ನಾಟಕ ಕೀರ್ತಿ ಬಂತು ಸ್ವಾಮಿಜಿ."

ಆತ ನಿಜವನ್ನೇ ಹೇಳುತ್ತಿದ್ದನಾದರೂ ಅದು ನಿಜವೆಂದು ಒಪ್ಪುವುದು ಜಾಣತನದ್ದಾಗುತ್ತಿರಲಿಲ್ಲ. ಅಂತೆಯೆ ನಾನು ನಿರ್ಲಕ್ಷ್ಯಭಾವ ಸೂಚಿಸುತ್ತ – "ಏನೋ. ಈ ಕೀರ್ತಿಯನ್ನು ಕಟ್ಟಿಕೊಂಡು ನಾವೇನು ಮಾಡಬೇಕಾಗಿದೆ ಆಚಾರ್ಯರೇ ? ಸನ್ಯಾಸಿಗಳಿಗೆ ಇದೆಲ್ಲಾ ಯಾಕೆ ?" ಎಂದೆ.

"ಅದು ತಮ್ಮ ವೈರಾಗ್ಯಕ್ಕೆ ಒಪ್ಪುವಂಥ ಮಾತು. ಆದರೆ, ತಮ್ಮಿಂದ ಕರ್ನಾಟಕಕ್ಕೆ ಪ್ರಚಂಡ ಸೇವೆ ಸಲ್ಲಬೇಕಾಗಿದೆಯೆಂಬುದನ್ನೂ ಮರೆಯುವಂತಿಲ್ಲ. ಅದಕ್ಕೆ ಮೊದಲು ತಮ್ಮ ಹೆಸರು, ತಮ್ಮ ವಿಷಯ ಜನರಿಗೆಲ್ಲ ತಿಳಿದಿರಬೇಕಾದ್ದು ಅವಶ್ಯ, ಅತೀ ಅವಶ್ಯ. ಇದು ಪ್ರಚಾರಂದ ಯುಗ ಸ್ವಾಮಿಜಿ, ಪ್ರಚಾರದ ಯುಗ. ಪ್ರಚಾರವಿಲ್ಲದಿದ್ದರೆ ಯಾವ ಕಾರ್ಯವೂ ಸಾಧಿಸುವುದಿಲ್ಲ."

"ಸರಿ. ಸರಿ. ನಿಮಗೆ ಸರಿದೋರಿದಂತೆ ಮಾಡಿ."

ಆಚಾರಿ ಸೋಫಾದ ಮೇಲೆ ಕುಳಿತಿದ್ದವನು ತನ್ನ ಕೋಟಿನ ಗುಂಡಿಗಳೊಂದಿಗೆ ಒಂದು ಕ್ಷಣ ಆಟವಾಡಿದ, ಬಲಗೈ ಬೆರಳಿನಿಂದ ಎಡಗೆನ್ನೆಯನ್ನು ಸವರಿಕೊಂಡ, ಕರವಸ್ತ್ರದಿಂದ ಮುಖವನ್ನೊರೆಸಿಕೊಂಡ, ತುಟಿಗಳ ಮೇಲೆ ನಾಲಗೆಯನ್ನೋಡಿಸುತ್ತ ನನ್ನ ಕಡೆ ನೋಡಿದ. ಆತನ ಮನಸ್ಸಿನಲ್ಲಿ ನಡೆದಿದ್ದ ಚಲನವಲನವೇನೆಂಬುದನ್ನು ನಾನು ಕೂಡಲೆ ತಿಳಿದುಕೊಂಡೆ. ತನ್ನ ಗ್ರಂಥಮಾಲೆಯ ಪೋಷಕ ಸದಸ್ಯತ್ವದ ಹಣಕ್ಕಾಗಿ ಕೇಳಲು ಆತ ಸಿದ್ಧತೆ ನಡೆಸಿದ್ದುದು ಸ್ಪಷ್ಟವಿದ್ದಿತು. ಆತ ಹೇಳುವುದಕ್ಕೆ ಮುನ್ನ ನಾನೇ ಹೇಳುವುದೊಳ್ಳೆಯದೆಂದು ಬಗೆದು –

"ನಿಮ್ಮ ಗ್ರಂಥಮಾಲೆಯ ಹಣವನ್ನು ಇನ್ನು ಒಂದೆರಡು ದಿನ ಬಿಟ್ಟು ಕೊಡುತ್ತೇವೆ ಆಚಾರ್ಯರೇ," ಎಂದು ಹೇಳಿದೆ.

ಆತ ಬೆರಳುಗಳನ್ನು ಹಿಸುಕಿಕೊಳ್ಳುತ್ತ – "ಇಂದೇ ಕೊಟ್ಟಿದ್ದರೆ ಉಪಕಾರವಾಗುತ್ತಿತ್ತು ಸ್ವಾಮಿಜಿ. ಪ್ರೆಸ್ಸಿಗೆ ಹಣ ಕೊಡಬೇಕಾಗಿದೆ. ಬಹಳ ತೊಂದರೆಯಾಗಿದೆ...." ಎಂದ.

"ಇನ್ನೆರಡು ದಿನ ಅಷ್ಟೆ. ಖಂಡಿತ ಕೊಡುತ್ತೇವೆ. ಇಂದು ಗುಂಡಾಡಯ್ಯ ಬೇರೆ ಬಂದಿದ್ದನಲ್ಲಾ ?"

"ಹೌದು. ಪಾವಟಿಗೆಗಳ ಮೇಲೆ ಭೆಟ್ಟಿಯಾಯಿತು. ನನ್ನ ಕಂಡರೆ ಆವನಿಗಾಗದು. ನಿಜ ಹೇಳಬೇಕಾದರೆ ಈ ಊರಲ್ಲಿ ನನ್ನ ಕಂಡರೆ ಯಾರಿಗೂ ಆಗದು. ನಾನು ಬ್ರಾಹ್ಮಣನಾಗಿ ಹುಟ್ಟದೆ ಲಿಂಗಾಯತನಾಗಿ ಹುಟ್ಟಿದ್ದರೆ ಇವರೆಲ್ಲರೂ ನನ್ನನ್ನು ಅಟ್ಟಕ್ಕೇರಿಸುತ್ತಿದ್ದರು. ಇಲ್ಲಿಯ ಜನ ಬಹಳ ಜಾತ್ಯಂಧರು ಸ್ವಾಮಿಜಿ. ತಮ್ಮಂಥ ವಿಶಾಲದೃಷ್ಟಿ ಇಲ್ಲಿಯುವರಿಗಿಲ್ಲ."

ನಾನು ವಿಷಾದ ಸೂಚಿಸುತ್ತ – "ಸಮಾಜದ ರಕ್ತದಲ್ಲೇ ಜಾತೀಯ ಭಾವನೆ ಬೆರೆತುಬಿಟ್ಟಿದೆ ಆಚಾರ್ಯರೆ, ಅದನ್ನು ತೆಗೆದುಹಾಕುವುದೇ ನಮ್ಮ ಮೊದಲನೆಯ ಕರ್ತವ್ಯ. ನಿಮ್ಮಂಥವರೆಲ್ಲಾ ಈ ಕಾರ್ಯದಲ್ಲಿ ನಮಗೆ ಬೆಂಬಲ ವಾಗಿ ನಿಲ್ಲಬೇಕು," ಎಂದು ಹೇಳಿದೆ.

"ನಾನು ಯಾವಾಗಲೂ ತಮ್ಮ ಸೇವೆಗೆ ಸಿದ್ಧ ಸ್ವಾಮಿಜಿ. ನನ್ನನ್ನು ಹೇಗೆ ಬೇಕಾದರೂ ತಾವು ಉಪಯೋಗಿಸಿಕೊಳ್ಳಬಹುದು. ಜಾತ್ಯಂಧರ ಚಾಡಿ ಮಾತು ಕೇಳಿ ನನ್ನನ್ನು ದೂರಮಾಡಬಾರದು, ಅಷ್ಟೆ."

"ನನ್ನದು ಹಿತ್ತಾಳೆ ಕಿವಿಯಲ್ಲ ಆಚಾರ್ಯರೆ. ನೀವು ಆ ಬಗ್ಗೆ ನಿಶ್ಚಿಂತೆಯಿಂದಿರಿ."

ಆಚಾರಿ ಹೊರಟುಹೋಗುತ್ತಲೂ ಶಾಸ್ತ್ರಿ ಧಡಧಡನೆ ಮೆಟ್ಟಲು ಏರುತ್ತ ಮೇಲೆ ಬಂದು ಸೋಫಾದ ಮೇಲೆ ಧಡಾರನೆ ಕುಕ್ಕರಿಸಿದ. ಆತನ ಸರ್ವಾಂಗವೂ ಕೋಪವನ್ನು ಹೊರಹಾಕುತ್ತಿತ್ತು.

"ಏನು ಶಾಸ್ತ್ರಿ, ಬಹಳ ಸಿಟ್ಟು ಬಂದ ಹಾಗಿದೆಯಲ್ಲ?"

ಆತ ಮಾತನಾಡದೆ ಮುಖವನ್ನು ಗೋಡೆಯ ಕಡೆ ತಿರುಗಿಸಿದ.

ಒಂದೆರಡು ಕ್ಷಣ ಸುಮ್ಮನಿದ್ದು ಅನಂತರ ಹೇಳಿದ :

"ಯಾವ ಪತ್ರಿಕೆಯ ಪ್ರಚಾರದ ಅಗತ್ಯವೂ ಇಲ್ಲಾಂತ ನಾನು ಮೊದಲೇ ಹೇಳಿದೆ. ನಿಮಗೆ ಅದೊಂದು ಹುಚ್ಚು ಹಿಡಿದಿದೆ. ಮೊದಲು ಆ ಆಚಾರಿ, ಈಗ ಈ ಗುಂಡಾಡಯ್ಯ. ನನ್ನ ಕೈಯಲ್ಲೇ ದೊಡ್ಡ ಪತ್ರಿಕೆ ಯಿರುತ್ತ ಬೇರೆಯವರ ಪತ್ರಿಕೆಗಳ ಆಶ್ರಯ ಪಡೆಯುವ ಅಗತ್ಯವೇನಿದೆ?"

"ಹಾಗಲ್ಲ ಶಾಸ್ತ್ರಿ. ನಿನ್ನದೇನೋ ಇದ್ದೇ ಇದೆ. ಬೇರೆಯವರವೂ ಇರಬೇಕಾಗುತ್ತದೆ. ಪತ್ರಿಕಾಕರ್ತರನ್ನೂ ಲೇಖಕರನ್ನೂ ವೈರಿಗಳನ್ನಾಗಿ ಮಾಡಿಕೊಳ್ಳಬಾರದು. ನಮ್ಮ ಅಸ್ತಿತ್ವಕ್ಕೇ ಅಪಾಯವಾಗುವುದು."

“ನಿಮಗೆ ಅಷ್ಟು ಕೀರ್ತಿಯ ಆಸೆಯಿದ್ದರೆ ಹೇಳಬಾರದೇ? ‘ಲಿಂಗ ವೀರ’ದ ವಿಶೇಷ ಸಂಚಿಕೆಯನ್ನೇ ಹೊರಡಿಸಿ ನಿಮ್ಮ ವಿಷಯವನ್ನೇ ತುಂಬಿ ಬಿಡೋಣ ಅದರಲ್ಲೇನು.”

“ನಮ್ಮವರು ಹೊಗಳುವುದಕ್ಕೂ ಬೇರೆಯವರು ಹೊಗಳುವುದಕ್ಕೂ ಬಹಳ ವ್ಯತ್ಯಾಸವಿದೆ ಶಾಸ್ತ್ರಿ. ಅಲ್ಲದೆ ಗುಂಡಾಡಯ್ಯ ಟ್ರಸ್ಟ್ ಕಮಿಟಿಯ ಸದಸ್ಯ. ನಮಗೆ ಅವನ ಸಹಾಯವೂ ಸಿಕ್ಕರೆ ಉತ್ತಮವಲ್ಲವೆ?”

“ಆತ ಹಾಗೆಲ್ಲ ಒಂದು ಪಕ್ಷ ಹಿಡಿಯುವ ಆಸಾಮಿಯಲ್ಲ. ಬಹಳ ಘಾಟಿ ಸುಳ ಅದು. ನಿಮಗೇನು ಗೊತ್ತು ಅವನ ಸ್ವಭಾವ?”

“ಇರಲಿರಲಿ. ನೋಡೋಣ,” ಎಂದು ನಾನು ಶಾಸ್ತ್ರಿಯನ್ನು ಸಂತೈಸಲು ಯತ್ನಿಸಿದೆ. ಆತನ ಕೋಪವಿಳಿಯಲಿಲ್ಲ. “ನಾಳೆಯೆ ನಾನು ಊರಿಗೆ ಹೊರಡುತ್ತೇನೆ. ಏನಾದರೂ ಮಾಡಿಕೊಳ್ಳಿ,” ಎಂದು ನುಡಿದ.

[೬]

ಅದೇ ದಿನ ಸಾಯಂಕಾಲ ದುಂಡಪ್ಪ, ಕರಡೆಪ್ಪ, ಜಡಿಯಪ್ಪ, ಖರೇಸೆಟ್ಟಿ ಮೊದಲಾದವರ ಜತೆಗೆ ಜರತಾರಿ ಮಠಕ್ಕೆ ಹೋಗಿ ಮುದುಕ ಜಗದ್ಗುರುವನ್ನು ಭೇಟಿಮಾಡಿದೆ. ಮರಿಸ್ವಾಮಿ ವಾಕಿಂಗ್ ಹೋದ ಸಮಯ ವನ್ನು ಸಾಧಿಸಿ ಆ ಭೇಟಿಯ ವ್ಯವಸ್ಥೆ ಮಾಡಲಾಗಿದ್ದಿತು.

ಮುದುಕ ಜಗದ್ಗುರುವಿಗೆ ಗದ್ದುಗೆ ಬಿಟ್ಟು ಏಳಲಾಗುತ್ತಿರಲಿಲ್ಲ. ಕಣ್ಣು ಮಂದ, ಕಿವಿ ಮಂದ, ಕುಗ್ಗಿದ ಧ್ವನಿ. ಆತ ಯಾವ ನಿಮಿಷಕ್ಕೆ ಗೊಟಕ್ ಎನ್ನುವನೆಂಬುದನ್ನೂ ಹೇಳಲು ಬರುತ್ತಿರಲಿಲ್ಲ.

“ಎಲ್ಲರೂ ಅಡ್ಡಬಿದ್ದು ವಂದಿಸಿದರು. ನಾನೂ ವಂದಿಸಿದೆ. ಆತ “ಸಂತೋಷ....ಸಂತೋಷ....” ಎಂದು ಬಾಯಿಯಲ್ಲಿಯೇ ಪುಟಪುಟಿಸಿದ. “ಬಹಳ ದಿನಗಳಿಂದ ತಮ್ಮ ದರ್ಶನಕ್ಕಾಗಿ ಹಾತೊರೆಯುತ್ತಿದ್ದೆ. ತಮ್ಮ ಕೀರ್ತಿಯನ್ನು ಬಹಳ ಕೇಳಿದ್ದೆ. ಇಂದು ದರ್ಶನವಾಯಿತು. ಧನ್ಯನಾದೆ,” ಎಂದು ಮೊದಲಾಗಿ ಔಪಚಾರಿಕವಾಗಿ ಮಾತು ಹೊಡೆದೆ. ಬಲಗಿವಿಯ ಹತ್ತಿರ ಕೈಯಿಟ್ಟುಕೊಂಡು ಕೇಳುತ್ತಿದ್ದ ಮುದುಕ. ಆತನ ಕಳಾಹೀನ ಮುಖದ ಮೇಲೆ ಕ್ಷಣಕಾಲ ಹರ್ಷ ಹರಡಿದ ಹಾಗೆ ಕಾಣಿಸಿತು. “ಇವರನ್ನೇ ನಮ್ಮ ಪೀಠದ ಅಧಿಕಾರಿಗಳನ್ನಾಗಿ ಮಾಡುವ ವಿಚಾರವಿದೆ. ಒಪ್ಪಿಗೆಯೇ?”

ಎಂದು ಪ್ರಶ್ನಿಸಿದರು ಕರಡೆಪ್ಪಶೆಟ್ಟರು. "ಆಗಲಿ – ಆಗಲಿ. ಆನಂದ.... ಆನಂದ...." ಎಂದು ಉತ್ತರವಿತ್ತ ಮುದುಕ. ನಾವು ಪುನಃ ಅಡ್ಡಬಿದ್ದು ಎದ್ದು ಬಂದೆವು.

ಮಾರನೆಯ ದಿನದ 'ಒಂದೇ ಕರ್ನಾಟಕ' ಮತ್ತು ಇತರ ದಿನಪತ್ರಿಕೆಗಳಲ್ಲಿ ಪತ್ರವ್ಯವಹಾರದ ಕಲಮಿನಲ್ಲಿ ಜರತಾರಿ ಪೀಠದ ಬಗೆಗೆ ಪುಟ್ಟ ಬರಹವೊಂದು ಪ್ರಕಟವಾಗಿದ್ದುದನ್ನು ಕಂಡೆ. ಪೀಠದ ಆಡಳಿತದ ಬಗೆಗೆ ಅಸಮಾಧಾನ ವ್ಯಕ್ತಗೊಳಿಸಿ, ನನ್ನನ್ನು ಅದರ ಅಧಿಕಾರಕ್ಕೇರಿಸಬೇಕೆಂದು ಸೂಚಿಸಲಾಗಿದ್ದಿತು. "ಜರತಾರಿ ನಗರದ ಸದ್ಭಕ್ತರು" ಎಂದು ಬರಹದ ಅಡಿಯಲ್ಲಿ ಉಲ್ಲೇಖಿಸಲಾಗಿದ್ದಿತು.

"ನನ್ನನ್ನು ಕೇಳದೆ ಪ್ರಕಟಿಸಿಬಿಡಬೇಕೇ ಸೆಟ್ಟರೆ!" ಎಂದು ನಾನು ಸುಳ್ಳುಕೋಪ ನಟಿಸಿದೆ. ಆತ ನಗುತ್ತಾ – "ಎಲ್ಲಾ ನಿಮ್ಮನ್ನು ಕೇಳಿಯೆ ಮಾಡಬೇಕೇನು ಸ್ವಾಮಿಜಿ?" ಎಂದು ನುಡಿದ. ನಾನೂ ನಕ್ಕು ಸುಮ್ಮನಾದೆ.

ಆ ದಿನ ಜರತಾರಿ ನಗರದಲ್ಲೆಲ್ಲ ಅದೇ ವಿಷಯ ಚರ್ಚಿಸಲ್ಪಡುತ್ತಿದ್ದಿತೆಂದು ನನಗೆ ಹಿಂದಿನಿಂದ ತಿಳಿಯಿತು. ಬೀದಿಗಳಲ್ಲಿ, ಹೋಟಲುಗಳಲ್ಲಿ, ಪಾರ್ಕುಗಳಲ್ಲಿ, ಆಫೀಸುಗಳಲ್ಲಿ, ಮನೆಗಳಲ್ಲಿ ಅದೇ ಮಾತು. "ಮರಿಸ್ವಾಮಿಯ ಬಗ್ಗೆ ಯಾರಿಗೂ ಪ್ರೀತಿಯಿಲ್ಲ. ನಿಮ್ಮನ್ನು ಕಂಡು ನಿಮ್ಮ ಭಾಷಣ ಕೇಳಿ ಜನ ಮರುಳಾಗಿದ್ದಾರೆ. ನಮ್ಮ ಜಗದ್ಗುರು ಪೀಠಕ್ಕೆ ಇವರೇ ಸ್ವಾಮಿಗಳಾಗಬೇಕೆಂದು ಎಲ್ಲರೂ ಮಾತಾಡಿಕೊಳ್ಳುತ್ತಿರುವರಂತೆ," ಎಂಬುದಾಗಿ ಖರೇಸೆಟ್ಟಿ ವರದಿ ಮಾಡಿದ.

ಮಾರನೆಯ ದಿನ ಸಾಯಂಕಾಲ ಸೆಟ್ಟಿಯ ಸೂಚನೆಯ ಪ್ರಕಾರ ಸಾರ್ವಜನಿಕ ಸಭೆಯೊಂದು ಸೇರಿತು. ಜಡಿಯಪ್ಪ, ದುಂಡಪ್ಪ ಮೊದಲಾದವರು ಭಾಷಣ ಮಾಡಿದರು. "ಜರತಾರಿ ಜಗದ್ಗುರು ಪೀಠಕ್ಕೆ ಸಿದ್ಧವೀರ ಸ್ವಾಮಿಯವರನ್ನೇ ನಿಯಮಿಸಬೇಕು," ಎಂಬಾಶಯದ ಗೊತ್ತುವಳಿಯೊಂದು ಅಲ್ಲಿ ಸ್ವೀಕೃತವಾಯಿತು.

ಅದೇ ರಾತ್ರಿ ಟ್ರಸ್ಟ್ ಕಮಿಟಿ ಸಭೆ ಸೇರಿ – "ಮರಿಸ್ವಾಮಿ ಅಯೋಗ್ಯನಾದುದರಿಂದ ಆತನನ್ನು ತೆಗೆದುಹಾಕಬೇಕೆಂದೂ, ಸಿದ್ಧವೀರಸ್ವಾಮಿಜಿಯವರನ್ನು ಅಧಿಕಾರಕ್ಕೇರಿಸಬೇಕೆಂದೂ" ನಿರ್ಣಯ ಸ್ವೀಕರಿಸಿತು. ಮರುದಿನದ ಪತ್ರಿಕೆಗಳಲ್ಲಿ ಈ ಗೊತ್ತುವಳಿಗಳ ಸಂಗತಿಯು ಪ್ರಕಟವಾಗಿ ಬಂತು.

ನಾನು ಪತ್ರಿಕೆಗಳನ್ನೋದುತ್ತ ಕುಳಿತಿದ್ದಾಗಲೆ ಗುಂಡಾಡಯ್ಯ ಬಂದ.

"ಬುದ್ಧಿಗಳಿಗೆ ನ....ನ....ನಮುಸ್ಕಾರ."

"ಓ ಹೊ ಹ್ದೊ. ಬನ್ನಿ. ಬನ್ನಿ."

"ವೀರಶೈವಾವತಾರ"ದ ಸಂಚಿಕೆಯೊಂದನ್ನು ನನ್ನ ಕೈಗಿತ್ತು ಗುಂಡಾಡಯ್ಯ ಕುಳಿತುಕೊಂಡ. ಮೊದಲನೆಯ ಪುಟದ ಮೇಲೆಯೆ ನನ್ನ ಭಾವಚಿತ್ರವೂ ಅಲ್ಪ ಪರಿಚಯವೂ ಪ್ರಕಟವಾಗಿತ್ತು. ಆತನ ಪತ್ರಿಕೆಯ ಮುಖ್ಯ ವೈಶಿಷ್ಟ್ಯವಾದ ಮುದ್ರಾರಾಕ್ಷಸ ನನ್ನ ಹೆಸರನ್ನೂ ಕಬಳಿಸಿದ್ದುದು ಕಾಣಿಸಿತು.

"ಇದೇನ್ರೀ ಸಂಪಾದಕರೆ, ಸಿದ್ಧನೀರಾಸ್ವಾಮಿ ಅಂತ ಬರೆದಿದ್ದೀರಿ?"

ಗುಂಡಾಡಯ್ಯ ಕನ್ನಡಕದೊಳಗಿನಿಂದ ಕಣ್ಣು ಬೊಂಬೆಗಳನ್ನು ಅರಳಿಸಿ– "ಎಲ್ಲಿ, ಎಲ್ಲಿ?" ಎನ್ನುತ್ತಾ ಪತ್ರಿಕೆಯನ್ನು ನೋಡಿದ. "ಅಯ್ಯೋ....ಎಂಥ ಅನ್ಯಾಯ ಬುದ್ಧೀ....ಮಕ್ಕಳು ಕಂಪೋಜಿಟರು ಹಾಳು ಮಾಡಿಬಿಟ್ಟಿದ್ದಾರೆ...."

"ನೀವಿನ್ನೂ ನೋಡೇ ಇರಲಿಲ್ಲವೆ?"

"ನನ್ನ ಕಣ್ಣು ಸ್ವಲ್ಪ ಹಾಗೆ ಹಾಗೆ. ಶಬ್ದದೋಷಗಳು....ತಪ್ಪಿಸಿಕೊಂಡುಬಿಡುತ್ತವೆ. ಹೋಗಲಿ ಬಿಡಿ ಬುದ್ಧೀ. ಇದೆಂಥ ದೋ....ದೋಷ...."

"ನಿನ್ನೆ ಟ್ರಸ್ಟ್ ಕಮಿಟಿ ಮೀಟಿಂಗಿಗೆ ನೀವೂ ಹೋಗಿದ್ದಿರಾ?"

"ಹೌದು ಬುದ್ಧೀ."

"ಏನೇನಾಯಿತು ಅಲ್ಲಿ?" ಎಂದು ನಾನು ಬೇಕೆಂತಲೇ ಕೇಳಿದೆ.

"ಏನೇನೋ ಆಯಿತು ಬಿಡಿ. ಗುರುಶಾಂತಪ್ಪನವರೊಬ್ಬರೇ ಗೊತ್ತುವಳಿ ವಿರೋಧಿಸಿದರು. ಅವರೂ ಮರಿಸ್ವಾಮಿ ಕೂಡಿಕೊಂಡು ಸ್ವಲ್ಪ ಗದ್ದಲ ಮಾಡುವಂತೆ ಕಾಣುತ್ತದೆ. ತಮ್ಮ ಫೋ....ಫೋಟೋ ಹಾಕಿದ್ದಕ್ಕೂ ಪರಿಚಯ ಹಾಕಿದ್ದಕ್ಕೂ ಬಹಳ ಆಕ್ಷೇಪಿಸಿದರು."

"ನೀವೇನು ಹೇಳಿದಿರಿ?"

"ಏನೂ ಹೇಳಲಿಲ್ಲ. ನನ್ನನ್ನೇನು ಅವರು ಕೊಂಡುಕೊಂಡಿರುವರೇ ಬುದ್ಧೀ? ನಾನು ಸ್ವ....ಸ್ವತಂತ್ರನಿದ್ದೇನೆ."

"ಹಾಂ. ಹಾಗಿರಬೇಕು. ಪತ್ರಿಕಾಕರ್ತರು ಯಾವಾಗಲೂ ಸ್ವತಂತ್ರವಾಗೇ ಇರಬೇಕು. ಸರಿ. ನಮ್ಮ ಬಗ್ಗೆ ಗುರುಶಾಂತಪ್ಪನವರಲ್ಲಿ ಎಂಥ ಅಭಿಪ್ರಾಯವಿದೆ?"

"ತಮ್ಮ ಬಗ್ಗೆ ದುರಭಿಪ್ರಾಯ ಯಾರಿಗಾದರೂ ಬಂದೀತೇ ಬುದ್ಧೀ? ಅಣ್ಣನವರೂ ಅಕ್ಕನವರೂ ತಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇ ಇಟ್ಟು ಕೊಂಡಿದ್ದಾರೆ. ಆದರೆ....ತಾವು ಒಂದು ಪಾ....ಪಾರ್ಟಿಗೆ ಸೇರಿದ್ದು ಮಾತ್ರ ಅವರಿಗೆ ಸರಿಬಂದಿಲ್ಲ."

"ನಿಮ್ಮೂರ ಪಾರ್ಟಿಗಳಿಗೂ ನಮಗೂ ಏನು ಸಂಬಂಧ ಸಂಪಾದಕರೆ? ಗುರುಶಾಂತಪ್ಪನವರೂ ಬಂದು ನಮ್ಮನ್ನು ಕರೆದಿದ್ದರೆ ಅವರಲ್ಲಿಗೂ ಊಟಕ್ಕೆ ಬರದಿರುತ್ತಿರಲಿಲ್ಲ ನಾವು."

"ಹೌದು....ಹೌದು. ಆದರೆ....ಆದರೆ...."

ಮುನ್ನಾದಿನದ ರಾತ್ರಿ ಪಾದಕಾಣಿಕೆಯಾಗಿ ಬಂದಿದ್ದ ಒಂದು ನೂರಾ ಒಂದು ರೂಪಾಯಿಗಳನ್ನು ಶಾಸ್ತ್ರಿಯ ಕೈಗೆ ಕೊಡದೆ ನನ್ನ ಹತ್ತಿರವೇ ಇಟ್ಟು ಕೊಂಡಿದ್ದೆ – ಗುಂಡಾಡಯ್ಯನಿಗೆ ಕೊಡುವುದಕ್ಕಾಗಿ.

"ನಿಮ್ಮನ್ನು ಕಂಡು ಬಹಳ ಸಂತೋಷವಾಯಿತು. ಆಗಾಗ ಬರುತ್ತಾ ಇರಿ," ಎಂದು ಹೇಳಿ ಹಣವನ್ನು ಅವನ ಕೈಗಿತ್ತೆ. ಎಂಟು ಹತ್ತು ದಿನಗಳಿಂದ ಉಪವಾಸವಿದ್ದ ಭಿಕಾರಿ ಅನ್ನವನ್ನು ಕಂಡಾಗ ಆಚರಿಸುವಂತೆ, ರೂಪಾಯಿ ತೆಗೆದುಕೊಳ್ಳುವಾಗ ಗುಂಡಾಡಯ್ಯ ಆಚರಿಸಿದುದನ್ನು ಕಂಡು ನನಗೆ 'ಇಶ್ಶೀ' ಎನ್ನಿಸದಿರಲಿಲ್ಲ. ರೊಟ್ಟಿಗಾಗಿ ಕಾದಿರುವ ನಾಯಿಯಂತೆ ಆತ ದೇಹವನ್ನು ಅಲುಗಾಡಿಸುತ್ತ ಕಚಕ್ ಪಿಚಕ್ ಎಂದು ನಗುತ್ತ ನಿಂತಿದ್ದ. ಆ ದೃಶ್ಯವನ್ನು ಕಂಡು ನನಗೆ ಜುಗುಪ್ಸೆಯೂ ಆಯಿತು, ಆತನ ಬಗೆಗೆ ಕನಿಕರವೂ ಉಂಟಾ ಯಿತು. ಹಣವೆಂಬುದು ಮಾನವನನ್ನು ಎಂಥ ಕೀಳುಮಟ್ಟಕ್ಕಿಳಿಸುವುದಲ್ಲ!

[೧೦]

ಪಲ್ಲಕ್ಕಿಯಿಂದಿಳಿದು ನಾನು ಮಠದ ಅಂಗಳದಲ್ಲಿ ಅಡಿಯಿರಿಸಿದಾಗ ಕೊಂಬು ಕಹಳೆಗಳ ನಿನಾದ ನನ್ನನ್ನು ಸ್ವಾಗತಿಸಿತು.

ಸಾಯಂಕಾಲ ಆರು ಆರೂವರೆಯ ಸಮಯ. ಸೂರ್ಯ ಅಸ್ತಮಿ ಸುತ್ತಲಿದ್ದ. ಆತನ ಹೊಂಗಿರಣಗಳು ತುಂಡು ತುಂಡಾಗಿ ಮಠದ ಅಂಗಳದ ಮೇಲೆ ಹರಡಿಕೊಂಡಿದ್ದುವು.

ಮಠದ ಮೆಟ್ಟಲುಗಳನ್ನೇರಿ ಬರುತ್ತಿದ್ದ ಹಾಗೆ ಅಲ್ಲಿ ಕಾಣಿಸಿದ ರಕ್ತ

ವನ್ನು ಕಂಡು ನನ್ನ ಮೈ ಜುಮ್ಮೆಂದಿತು. ಹೊಡೆದಾಟ ಅಷ್ಟು ವಿಕೋಪಕ್ಕೆ ಹೋಗುವುದೆಂದು ನಾನು ಭಾವಿಸಿರಲಿಲ್ಲ.

ನನ್ನ ಪಕ್ಕದಲ್ಲಿ ನಡೆದು ಬರುತ್ತಿದ್ದ ಜಡಿಯಪ್ಪನ ಕಡೆ ಹೊರಳಿ ಕೇಳಿದೆ: "ಬಹಳ ಮಾರಾಮಾರಿಯಾಯಿತೇ ಜಡಿಯಪ್ಪ? ಖೂನಿಗೀನಿ ಆಗಿಲ್ಲವಷ್ಟೆ?"

"ಅದೂ ಆಗುವುದರಲ್ಲಿತ್ತು. ಅವರ ಪುಣ್ಯ. ಉಳಿದುಕೊಂಡರು."

ಮಠದ ಕೈಸಾಲೆಯಲ್ಲಿ ಆರತಿ ಬೆಳಗಿ ಸ್ವಾಗತಿಸಿದಳು ಮಹಾದೇವಿ. ಎದುರಿಗಿದ್ದ ದೇವರಿಗೆ ಕೈಮುಗಿದು ನಾನು ಮುದುಕ ಜಗದ್ಗುರುವಿನ ಕೊಟಡಿಗೆ ಹೋದೆ. ಆತ ಎದ್ದು ನಿಂತು ನನ್ನನ್ನು ಬರಮಾಡಿಕೊಂಡ.

"ಕಡೆಗೊನ್ಮೆ ಶನಿ ತೊಲಗಿದಂತಾಯಿತು. ಇನ್ನು ಮಠದ ಮಾನಾಪ ಮಾನವೆಲ್ಲಾ ನಿನ್ನದು ತವ್ಮಾ," ಎಂದ ಮುದುಕ.

"ಆ ಬಗ್ಗೆ ನೀವು ಕೊಂಚವೂ ಯೋಚಿಸಬೇಡಿ ಬುದ್ಧೀ. ನಿಶ್ಚಿಂತೆಯಿಂದಿರಿ," ಎಂದು ನಾನು ಹೇಳಿದೆ.

ಕಾರಭಾರಿ ಕರಲಿಂಗಯ್ಯ ಬಂದು ಕಾಲಿಗೆರಗಿದ. ಆತನನ್ನು ನಾನು ನೋಡಿದ್ದು ಅದೇ ಮೊದಲ ಸಲ. ಮಠಗಳ ಕಾರಭಾರಿಗಳದೂ ಒಂದು ವೈಶಿಷ್ಟ್ಯವಿರುವುದೊ ಏನೊ. ಎಲ್ಲರೂ ಒಂದೇ ತರದ ಮುಖಮುದ್ರೆಯವರಾಗಿರುತ್ತಾರೆ. ಕಪ್ಪು ಬಣ್ಣ, ಮೊಂಡ ಮೂಗು, ದಪ್ಪ ತುಟಿ, ಕ್ರೂರ ಕಣ್ಣು, ಡೊಳ್ಳು ಹೊಟ್ಟೆ, ಕರ್ಕಶ ಧ್ವನಿ, ಒರಟು ಮಾತು.

ಕರಲಿಂಗಯ್ಯ ನನಗೆ ಅಡ್ಡಬಿದ್ದು ವಂದಿಸಿದನಾದರೂ ನನ್ನ ಪ್ರಶ್ನೆಗಳಿಗೆ ಒರಟು ಉತ್ತರ ಕೊಡುವುದನ್ನು ಮಾತ್ರ ನಿಲ್ಲಿಸಲಿಲ್ಲ.

"ಎಷ್ಟು ವರ್ಷಗಳಿಂದ ನೀವು ಕಾರಭಾರ ನೋಡುತ್ತಿದ್ದೀರಿ?" ಎಂದು ನಾನು ಕೇಳಿದಾಗ ಆತ–"ನಾನು, ನನ್ನ ಅಪ್ಪ, ಅಪ್ಪನ ಅಪ್ಪ, ಅವನ ಅಜ್ಜಂದಿರ ಕಾಲದಿಂದಲೂ ಮಠದ ಕಾರಭಾರಿ ಕೆಲಸ ನಮ್ಮದೇ ಆಗಿದೆ. ಇದರ ಮೇಲಿಂದ ನೀವೇ ಲೆಕ್ಕ ಹಾಕಿಕೊಳ್ಳಿ," ಎಂದು ಉತ್ತರವಿತ್ತ.

"ವಂಶಪರಂಪರಾಗತವಾಗಿ ನಿಮ್ಮದೇ ಅಧಿಕಾರವಿದ್ದಂತಾಯಿತಲ್ಲ?"

"ಈ ಪೀಠದ ಮೂಲಸ್ವಾಮಿಗಳು ಹಾಗೆ ನಮಗೆ ಕಾಗದ ಬರೆದುಕೊಟ್ಟಿದ್ದಾರೆ. ಸ್ವಾಮಿಗಳು ಬರಬಹುದು, ಹೋಗಬಹುದು. ನಾವು ಮಾತ್ರ ಕಾಯಂ ಇರುತ್ತೇವೆ." ಕರಲಿಂಗಯ್ಯನ ಧ್ವನಿಯಲ್ಲಿ ದರ್ಪ ತುಂಬಿಬಂದಿತ್ತು.

ಮೊದಲ ಭೆಟ್ಟಿಯಲ್ಲೇ ಆತ ನನ್ನ ಮೇಲೆ ಪ್ರಭಾವ ಬೀರಲು ಪ್ರಯತ್ನ ಪಡುತ್ತಿದ್ದುದೂ ಸ್ಪಷ್ಟವಿದ್ದಿತು.

ಮುದುಕ ಜಗದ್ಗುರುವೂ ಕರಲಿಂಗಯ್ಯನಿಗೆ ಹೆದರಿಕೊಂಡೇ ಇದ್ದನೇನೊ. ಆತನೆಂದ: "ಅದೆಲ್ಲಾ ಈಗ ಯಾಕೆ ಬಿಡಿರಿ, ಸಂತೋಷದ ಸಮಯದಲ್ಲಿ. ಪಟ್ಟಾಭಿಷೇಕ ಮಹೋತ್ಸವವನ್ನು ಬೇಗ ನೆರವೇರಿಸಿಬಿಡೋಣ. ನಿಮ್ಮ ಕೈಗೆ ಅಧಿಕಾರ ಒಪ್ಪಿಸಿದರೆ ನಮ್ಮ ಚಿಂತೆ ದೂರವಾಗುತ್ತದೆ,"

ಕಾರಭಾರಿ ಪಂಚಾಂಗ ಬಿಚ್ಚಿ ಸುಮುಹೂರ್ತ ಹುಡುಕತೊಡಗಿದ. "ಇನ್ನೊಂದು ತಿಂಗಳಲ್ಲಿಯೆ ಶುಭಲಗ್ನವಿದೆ ಬುದ್ಧೀ."

"ಬಹಳ ಚೆನ್ನಾಯಿತು. ಎಷ್ಟು ಬೇಗ ಆದಷ್ಟೂ ಉತ್ತಮ," ಎಂದ ಮುದುಕ.

"ಸ್ವಾಗತ ಸಮಿತಿಯೊಂದನ್ನು ನಿಯಮಿಸಿ ಈಗಿನಿಂದಲೇ ಸಿದ್ಧತೆಗಾರಂಭಿಸಿದರಾಯಿತು." ಎಂದ ಜಡಿಯಪ್ಪ.

"ಹಣದ ವಿಷಯ ?" ಎಂದ ಕರಲಿಂಗಯ್ಯ.

"ಈಗ ಭಂಡಾರದಲ್ಲಿ ಶಿಲ್ಕಿರುವ ಹಣವೆಷ್ಟು ?"

"ಏನೋ ನೂರಿನ್ನೂರು ಇದ್ದರೆ ಬಹಳವಾಯಿತು. ಮರಿಸ್ವಾಮಿಗಳು ಬಹಳ ಹಾಳು ಮಾಡಿದರು."

"ಹಾಗೆಲ್ಲ ಅವರ ಕೈಗೆ ಏಕೆ ಕೊಟ್ಟಿರಿ ?"

"ಕೊಡದಿದ್ದರೆ ನಡೆದೀತೇ ? ಬೆದರಿಸಿ ತೆಗೆದುಕೊಳ್ಳುತ್ತಿದ್ದರು. ಹೆಸರಿಗೆ ಮಾತ್ರ ನಾನು ಕಾರಭಾರಿ. ಕಾರಭಾರವೆಲ್ಲಾ ಮರಿಸ್ವಾಮಿಗಳ ತಂಗೆವ್ವನ ಕೈಯಲ್ಲಿ."

"ಸರಿ. ಸರಿ. ಆದದ್ದು ಆಗಿಹೋಯಿತು. ಇನ್ನು ಮೇಲಾದರೂ ಹುಷಾರಾಗಿರಿ," ಎಂದು ನುಡಿದು ಜಡಿಯಪ್ಪ ಮೇಲಕ್ಕೆದ್ದ.

"ಬನ್ನಿ, ಸ್ವಾಮಿಜಿ. ನಿಮಗೆ ಆಯಾಸವಾಗಿರಬಹುದು. ವಿಶ್ರಮಿಸಿಕೊಂಡೀರಂತೆ."

ಮುದುಕನ ಅಪ್ಪಣೆ ಪಡೆದು ನನಗಾಗಿ ಗೊತ್ತುಪಡಿಸಿದ್ದ ಕೊಟಡಿಗೆ ಹೊರಟೆ. ಮರಿಸ್ವಾಮಿಯೂ ಅಲ್ಲೇ ಇರುತ್ತಿದ್ದನಂತೆ. ಮಠದ ಮೂರನೆಯ ಅಂತಸ್ತಿನ ಮೇಲೆ ಒಂಟಿಯಾಗಿದ್ದಿತು ಆ ಕೊಟಡಿ. ಗೋಡೆಗಳಿಗೆಲ್ಲ ನೀಲಿ ಬಣ್ಣ. ಅಲ್ಲಲ್ಲಿ ಕನ್ನಡಿಗಳು, ಚಿತ್ರಪಟಗಳು – ಪೂರ್ವದಿಕ್ಕಿನ ಕಿಟಕಿಯ ಬಳಿ

ದೊಡ್ಡ ಮಂಚ. ಅದರ ಎದುರಿಗೆ ಎರಡು ಸೋಫಾಗಳು. ಒಂದು ವಿರಾಮ ಕುರ್ಚಿ. ಹತ್ತಿರದಲ್ಲಿದ್ದ ಪುಟ್ಟ ಮೇಜಿನ ಮೇಲೆ ಒಂದು ರೇಡಿಯೋ ಸೆಟ್.

"ಮಠಸ್ವಾಮಿ ರೇಡಿಯೋ ಬಿಟ್ಟು ಹೋದದ್ದು ಆಶ್ಚರ್ಯವೆ," ಎಂದು ನಾನು ಉದ್ಗಾರ ತೆಗೆದಾಗ ಖರೇಸೆಟ್ಟಿ ನಕ್ಕು ಹೇಳಿದ: "ಜೀವ ಬಿಟ್ಟು ಹೋಗಲಿಲ್ಲವಲ್ಲಾ, ಅದೇ ಆಶ್ಚರ್ಯ."

ನಾನು ವಿರಾಮ ಕುರ್ಚಿಯ ಮೇಲೆ ದೇಹವನ್ನೊರಗಿಸುತ್ತ – "ಅಲ್ಲಿಯ ವರೆಗೂ ಬಂದಿತ್ತೇ?" ಎಂದು ಕೇಳಿದೆ.

"ಬರದಿರುತ್ತದೆಯೇ ಸ್ವಾಮಿಜಿ? ಗುರುಶಾಂತಪ್ಪನ ಗುಂಡಾಗಳು ತನ್ನನ್ನುಳಿಸುವರೆಂದು ಮಠಿಗೆ ನಂಬಿಕೆಯಿತ್ತು. ಏಟು ತಿಂದು ಅವರೆಲ್ಲ ಪಲಾಯನ ಹೇಳಿಸುತ್ತಲೂ ಅವನಿಗೆ ದಿಕ್ಕೇ ತೋರದಂತಾಯಿತು. ನಮ್ಮವರ ಕೈಯಿಂದ ತಪ್ಪಿಸಿಕೊಂಡು ಹೋಗಬೇಕಾದರೆ ತನ್ನ ಎಲ್ಲಾ ಬುದ್ಧಿಯನ್ನೂ ಉಪಯೋಗಿಸಬೇಕಾಯಿತು."

ನನ್ನ ಕುತೂಹಲ ಎದ್ದುನಿಂತಿತು. ಅಂದು ಸಂಜೆ ನಡೆದುದೇನೆಂಬುದು ನನಗಿನ್ನೂ ಪೂರ್ಣವಾಗಿ ತಿಳಿದುಬಂದಿರಲಿಲ್ಲ. ಹೊಡೆದಾಟವಾದುದು ರಕ್ತ ಪಾತವಾದುದು ಮಾತ್ರ ಗೊತ್ತಿದ್ದಿತಷ್ಟೆ. ಬಡಿದಾಟ ಹೇಗೆ ಹೇಗೆ ಆಯಿತು, ರಕ್ತ ಯಾರದು ಹೇಗೆ ಬಿತ್ತು – ಎಂಬುದೇನೋ ಗೊತ್ತಿರಲಿಲ್ಲ. ಕೇಳುವುದಕ್ಕೆ ಬಲು ರುಚಿಕರವಾದುದು ಇಂಥ ವಿಷಯ.

ಖರೇಸೆಟ್ಟಿ ಹೇಳತೊಡಗಿದ:

"ನಿನ್ನೆ ಸಂಜೆ ನಾವು ಮೂವರು ಬಂದು ಒಳ್ಳೆ ಮಾತಿನಿಂದಲೇ ಹೇಳಿದೆವು ಮಠಸ್ವಾಮಿಗೆ – ಟ್ರಸ್ ಕಮಿಟಿ ನಿರ್ಣಯದ ಪ್ರಕಾರ ನೀವು ಮಠ ಬಿಟ್ಟು ಹೋಗಬೇಕಾಗುವುದೆಂದು. ನಮ್ಮ ಶಕ್ತಿಯೇನೆಂಬುದನ್ನರಿತುಕೊಂಡು ಆತ ತೆಪ್ಪಗೆ ಹೊರಟುಹೋಗಿದ್ದರೆ ಇಷೆಲ್ಲಾ ಗದ್ದಲವಾಗುತ್ತಿರಲಿಲ್ಲ."

"ಏನೆಂದ ಮಠಸ್ವಾಮಿ?"

"ನನ್ನನ್ನು ತೆಗೆದುಹಾಗಲು ಟ್ರಸ್ಟ್ ಕಮಿಟಿಗೆ ಏನೂ ಅಧಿಕಾರವಿಲ್ಲ. ಕೋರ್ಟಿಗೆ ಹೋಗುತ್ತೇನೆ, ಹೈಕೋರ್ಟಿನ ತನಕ ಹೋಗಿ ಬಡಿದಾಡುತ್ತೇನೆ. ಹಾಗೆಲ್ಲ ಸುಲಭವಾಗಿ ಮಠ ಬಿಡುವುದಿಲ್ಲ – ಎಂದು ಹಾರಾಡಿದ. ದಂಡ ಪ್ರಯೋಗ ಮಾಡದಿದ್ದಲ್ಲಿ ಆತ ಹಾದಿಗೆ ಬರುವುದಿಲ್ಲವೆಂಬುದು ನಮಗೆ ಮೊದಲೇ ಗೊತ್ತಿತ್ತು, ಸರಿ. ನಾವು ಅವನೆದುರಿಗೆ ಹೆಚ್ಚು ಮಾತಾಡದೆ

ಹೊರಟುಬಂದೆವು. ಅಂದು ರಾತ್ರಿ ಗುರುಶಾಂತಪ್ಪ ನೂರು ನೂರಿಪ್ಪತ್ತು ಕುಡುಕರನ್ನು ಸಿದ್ಧಗೊಳಿಸಿದ್ದಾಗಿ ತಿಳಿಯಿತು. ನಾವು ಎರಡು ನೂರು ಕುಡುಕರನ್ನು ತಯಾರು ಮಾಡಿದೆವು."

"ಛೆ. ಛೆ. ಇದೆಲ್ಲಾ ಬಹಳ ಅನ್ಯಾಯ."

"ಅನ್ಯಾಯವನ್ನು ಅನ್ಯಾಯದಿಂದಲೇ ಎದುರಿಸಬೇಕಾಗುತ್ತೆ ಸ್ವಾಮಿಜಿ. ಸಂಭಾವಿತತನದಿಂದ ಬಗ್ಗುವುದುಂಟೇ ಪುಂಡರು? ಇಂದು ಸಂಜೆ ಐದು ಗಂಟೆಗೇ ಮಠದಲ್ಲಿ ಹೊಕ್ಕು ಮರಿಯನ್ನು ಓಡಿಸುವುದಾಗಿ ನಿರ್ಧರಿಸಿ ನಮ್ಮ ಗ್ಯಾಂಗಿಗೆ ತಿಳಿಸಿ ಇಟ್ಟಿದ್ದೆವು. ಗುರುಶಾಂತಪ್ಪನ ಗ್ಯಾಂಗೂ ಕುಡಿದು ದೊಣ್ಣೆ ಹಿಡಿದುಕೊಂಡು ಸಿದ್ಧವಾಗಿತ್ತು. ಸ್ವತಃ ಗುರುಶಾಂತಪ್ಪನೇ ಭಾರಿ ಬಡಿಗೆಯೊಂದನ್ನು ಹಿಡಿದು ನಿಂತಿದ್ದ. ನಾನು, ಜಡಿಯಪ್ಪ, ದುಂಡಪ್ಪ ಮೂವರೂ ನಮ್ಮ ಗುಂಪಿನೊಂದಿಗೆ ಮಹಾದ್ವಾರದಲ್ಲಿ ಕಾಲಿಡುತ್ತಲೂ ಬಡಿದಾಟಕ್ಕಾರಂಭವಾಯಿತು. ಹತ್ತು ಹದಿನೈದು ನಿಮಿಷಗಳವರೆಗೆ ಜಂಗೀ ಲಢಾಯಿಯೇ ಆಯ್ತು ನೋಡಿರಿ. ಪುಂಡರನ್ನೆಲ್ಲ ಬಲವಾಗಿ ಥಳಿಸಿದೆವು. ಕೆಲವರ ತಲೆಯೊಡೆಯಿತು. ಕೆಲವರ ಕೈಕಾಲು ಮುರಿಯಿತು. ಗುರುಶಾಂತಪ್ಪನಿಗೂ ಹಣೆಗೆ ದೊಡ್ಡ ಗಾಯವಾಯಿತು. ಕಟ್ಟೆಯ ಮೇಲೆ ಬಿದ್ದ ರಕ್ತ ಅವನದೇ. ಆ ವೇಳೆಗೆ ಬಡಿದಾಟದ ಸುದ್ದಿ ನಗರದಲ್ಲೆಲ್ಲಾ ಹರಡಿತು. ಮರಿಸ್ವಾಮಿಯ ಬಗ್ಗೆ ಜನರಿಗೆ ಸ್ವಲ್ಪವೂ ಸಹಾನುಭೂತಿಯಿರಲಿಲ್ಲವಲ್ಲ. ಸರಿ – ಊರವರೂ ಧಾವಿಸಿ ಬಂದು ಮರಿಯ ಕಡೆಯವರನ್ನು ಬಿಗಿಯತೊಡಗಿದರು. ಇನ್ನು ತಾವು ಉಳಿಯುವುದಿಲ್ಲವೆನ್ನುವುದು ಗೊತ್ತಾಗುತ್ತಲೂ ಅವರೆಲ್ಲ ಹಾದಿ ಸಿಕ್ಕತ್ತ ಓಡಿಹೋದರು. ಗುರುಶಾಂತಪ್ಪ ಹಿಂದಿನ ಬಾಗಿಲಿನಿಂದ ಓಡಿಹೋದನೆಂದು ಆಮೇಲೆ ಗೊತ್ತಾಯಿತು ನಮಗೆ."

"ಮರಿಸ್ವಾಮಿ?"

"ಅವನಿಗೂ ಒಂದೆರಡು ಏಟು ತಿನ್ನಿಸಬೇಕೆಂದು ನಮ್ಮ ವಿಚಾರವಿತ್ತು. ಆದರಾತ ಬಹಳ ಘಾಟಿ. ಸೀರೆ ಕುಪ್ಪಸ ಧರಿಸಿ ಹೆಣ್ಣು ವೇಷ ಹಾಕಿಕೊಂಡು ತಂಗಿಯನ್ನು ಕರೆದುಕೊಂಡು ಹಿಂಬಾಗಿಲಿನಿಂದ ತಪ್ಪಿಸಿಕೊಂಡನಂತೆ. ದೇವರ ಪೂಜಾರಿ ಬಿದ್ದು ಬಿದ್ದು ನಗುತ್ತಾ ಈ ಸಂಗತಿಯನ್ನು ತಿಳಿಸಿದ."

"ಸರಿ. ಸರಿ. ಇಷ್ಟಕ್ಕೇ ಸುಮ್ಮನಾಗುವರಷ್ಟೆ ಅವರು?"

"ಇನ್ನೇನು ಮಾಡುತ್ತಾರೆ? ಊರೆಲ್ಲಾ ನಮ್ಮಕಡೆಗಿದೆ. ಮುದುಕ ಜಗದ್ಗುರುಗಳೂ ನಿಮ್ಮ ಕಡೆ. ಕಾರಭಾರಿಯೂ ನಿಮ್ಮ ಕಡೆ. ಟ್ರಸ್ಟ್ ಕಮಿಟಿಯ ನಾಲ್ಕು ಜನರು ನಿಮ್ಮ ಕಡೆ. ಗುರುಶಾಂತಪ್ಪನೊಬ್ಬನಿಂದ ಏನಾದೀತು ?"

"ಬೇಗನೆ ಪಟ್ಟಾಭಿಷೇಕವೊಂದನ್ನು ಮುಗಿಸಿಬಿಟ್ಟರೆ ಮುಂದೆ ಯಾವ ತೊಂದರೆಯೂ ಬರುವುದಿಲ್ಲ," ಎಂದ ದುಂಡಪ್ಪ.

"ಇಂದಿನ ಗದ್ದಲದಲ್ಲಿ ಪೋಲೀಸರು ಅಡ್ಡ ಬರಲಿಲ್ಲವಷ್ಟೆ ?"

"ಅದಕ್ಕೂ ನಾವು ಮೊದಲೇ ವ್ಯವಸ್ಥೆ ಮಾಡಿದ್ದೆವು. ಸೂಪರಿಂಟೆಂಡೆಂಟ್ ಸಾಹೇಬರು ನಮ್ಮ ಕಡೆಗೇ ಇದ್ದಾರೆ."

"ಮರಿಸ್ವಾಮಿ ಕಡೆಯವರು ಪೋಲೀಸ್ ಕಂಪ್ಲೇಂಟ್ ಕೊಡಲಿಕ್ಕಿಲ್ಲವೆ?"

"ಕೊಟ್ಟಾರು ಅನ್ನಿ, ಅದರಿಂದೇನೂ ಉಪಯೋಗವಾಗದು. ಅವರ ಪರವಾಗಿ ಸಾಕ್ಷಿ ಹೇಳುವವರಾರು ?" ಎಂದ ಜಡಿಯಪ್ಪ.

ಅಷ್ಟರಲ್ಲಿ ಕರಡೆಪ್ಪಸೆಟ್ಟರು ಅಟ್ಟವನ್ನೇರಿ ಬಂದು ನನಗೆ ಅಡ್ಡ ಬಿದ್ದು – "ಶಾಂತರೀತಿಯಲ್ಲಿಯೇ ಎಲ್ಲಾ ನಡೆದಿದ್ದರೆ ಚೆನ್ನಾಗುತ್ತಿತ್ತು. ಇದೇನೊ ಸರಿ ಬರಲಿಲ್ಲ ನನಗೆ. ಬಸವಾ, ಬಸವಾ," ಎಂದು ರಾಗ ತೆಗೆದರು.

"ಎಲ್ಲಾ ಶಾಂತವಾಗಿಯೇ ಆಗಬೇಕೆಂದರೆ ಹೇಗಾಗಬೇಕು ಸೆಟ್ಟರೆ? ಮಠದ ಅಧಿಕಾರ ವಶಪಡಿಸಿಕೊಳ್ಳುವುದೆಂದರೆ ಹುಡುಗಾಟವಲ್ಲ. ಎಲ್ಲಾ ಕಡೆಗೂ ಹೀಗೇ ಬಡಿದಾಟ ನಡೆಯತಕ್ಕದ್ದೇ," ಎಂದ ಖರೇಸೆಟ್ಟಿ.

"ಇನ್ನುಮೇಲಾದರೂ ಗದ್ದಲವಾಗಬಾರದು ನಾರಾಯು."

"ಗುರುಶಾಂತಪ್ಪ ಮತ್ತೆ ಬಾಲ ಬಿಚ್ಚಿದರೆ ಆಗತಕ್ಕದ್ದೇ,"

"ಅವರನ್ನೂ ಶಾಂತಗೊಳಿಸಬೇಕು ಪಾಪ. ಅವರಿಗೆ ಬಲು ಅವಹೇಳನವಾಯಿತು."

"ಸೆಟ್ಟರೆನ್ನುವುದು ಸರಿ. ನಾವು ಯಾರನ್ನೂ ವೈರಿಗಳನ್ನಾಗಿ ಮಾಡಿಕೊಳ್ಳುವುದು ಬೇಡ. ಗುರುಶಾಂತಪ್ಪನವರನ್ನು ಸಮಾಧಾನಪಡಿಸೋಣ," ಎಂದು ನಾನು ಹೇಳಿದೆ. ಖರೇಸೆಟ್ಟಿ, ಜಡಿಯಪ್ಪ, ದುಂಡಪ್ಪ ಈ ಮೂವರಿಗೂ ನನ್ನ ಮಾತು ಒಪ್ಪಿಗೆಯಾದಂತೆ ತೋರಲಿಲ್ಲ.

೪

ಜರತಾರಿ ಜಗದ್ಗುರು

೧೬—೮—೧೯೪..

ಪಟ್ಟಾಭಿಷೇಕದ ಸಿದ್ಧತೆ ಬಲು ಚುರುಕಾಗಿ ನಡೆದಿದೆ. ಮಠದಲ್ಲಿ ಗದ್ದಲವೋ ಗದ್ದಲ. ಸ್ವಾಗತ ಸಮಿತಿಯ ರಚನೆಯೂ ಆಗಿದೆ. ಅರ್ಥಾತ್ ಕರಡೆಪ್ಪನವರೇ ಅದಕ್ಕೆ ಅಧ್ಯಕ್ಷರು, ಖರೇಸೆಟ್ಟಿ ಕಾರ್ಯದರ್ಶಿ. ಜಡಿಯಪ್ಪ, ಮುಂಡಪ್ಪ, ಗುಂಡಾಡಯ್ಯ, ಮಹಾದೇವಮ್ಮ, ಶಿವಲಿಂಗಮ್ಮ ಮೊದಲಾದವರೂ ಇದ್ದಾರೆ ಸಮಿತಿಯಲ್ಲಿ. ಕಾರಭಾರಿ ಕರಲಿಂಗನೂ ಒಬ್ಬ ಸದಸ್ಯ. ಆದರೆ ಅವನ ಕೈಲಿ ಅಂಥ ಅಧಿಕಾರವೇನೂ ಇಲ್ಲ. ಆತ ಒಳಗೊಳಗೇ ಚಡಪಡಿಸುತ್ತಿರುವುದು ಸ್ಪಷ್ಟವಾಗಿದೆ. ಖರೇಸೆಟ್ಟಿಗೂ ಅವನಿಗೂ ಒಂದೆರಡು ಸಲ ಘರ್ಷಣೆಯೂ ಆಯಿತು.

"ಕೂಡಿದ ಹಣವೆಲ್ಲ ಇರಬೇಕಾದದ್ದು ನನ್ನ ಹತ್ತಿರ ಅಲ್ಲವೆ?" ಎಂದು ಕರಲಿಂಗಯ್ಯನ ವಾದ.

"ಸಮಿತಿಗೆ ನಾನು ಕಾರ್ಯದರ್ಶಿ. ನನ್ನ ಹತ್ತಿರವೇ ಇರಬೇಕು ಹಣ. ಪಟ್ಟಾಭಿಷೇಕದ ಸಮಿತಿ ಇದು. ಇದರ ಲೆಕ್ಕಪತ್ರವೇ ಬೇರೆ ಇರುತ್ತದೆ," ಎಂದು ಖರೇಸೆಟ್ಟಿಯ ಪ್ರತಿವಾದ.

ನಿರ್ಣಯಕ್ಕೆಂದು ವ್ಯಾಜ್ಯ ನನ್ನೆದುರಿಗೆ ಬಂದಿತು. ನಾನು ಜಾಣ, ಅದರಲ್ಲಿ ಸಿಕ್ಕಿಹಾಕಿಕೊಳ್ಳಲಿಲ್ಲ. "ನೀವೇ ಏನಾದರೂ ಮಾಡಿಕೊಳ್ಳಿ. ಹಣದ ವಿಷಯ ನನ್ನ ಹತ್ತಿರ ಪ್ರಸ್ತಾಪಿಸಬೇಡಿ," ಎಂದುಬಿಟ್ಟೆ. ಖರೇಸೆಟ್ಟಿಗೂ ಅಷ್ಟೇ ಬೇಕಿತ್ತು. ಆತ ತನ್ನ ಹಟವನ್ನು ಬಿಡಲೇ ಇಲ್ಲ. ಕಾರಭಾರಿ ಸೋತು ಸುಮ್ಮನಿರಬೇಕಾಯಿತು.

ಪಟ್ಟಾಭಿಷೇಕ ಅಂದರೆ ಜನಕ್ಕೆ ಅದೊಂದು ಹುಚ್ಚು. ಸಾವಿರ ಸಾವಿರವಾಗಿ ಹಣ ಕೂಡುತ್ತಲಿದೆ. ಅಕ್ಕಿ, ಗೋಧಿ, ಬೇಳೆ, ಬೆಲ್ಲ, ತೆಂಗಿನಕಾಯಿ ಇತ್ಯಾದಿ ಸಾಮಗ್ರಿಗಳು ಬೇರೆ. ಉತ್ಸವಕ್ಕೆ ಏನಿಲ್ಲವೆಂದರೂ ಇಪ್ಪತ್ತೈದು ಸಾವಿರ ರೂಪಾಯಿ ಖರ್ಚು ಬರಬಹುದೆಂದು ಸಮಿತಿಯವರ ಅಂದಾಜು. ಹಣವನ್ನು ನೀರಿನಂತೆ ಹಾಳು ಮಾಡುವುದರಲ್ಲಿ ನಾನು ಯಾರಿಗೂ ಹಿಂದುಳಿಯುವವನಲ್ಲ. ನನ್ನಂಥವನಿಗೂ ದಿಗಿಲಾಗುತ್ತದೆ ಈ ಅಂಕಿಯನ್ನು ನೆನೆದು.

ಕಾಳು ಕಡ್ಡಿ ಪ್ರತ್ಯೇಕವಾಗಿ ಕೊಡುತ್ತಲೇ ಇದೆ. ಮತ್ತೆ ಮೇಲೆ ಇಷ್ಟೊಂದು ವೆಚ್ಚವೇ? ನನಗೇಕೋ ಈಚೆಗೆ ಅನುಮಾನವುಂಟಾಗತೊಡಗಿದೆ. ಖರೇಸೆಟ್ಟಿಯ ಖರೇ (ನೈಜ) ಸ್ವರೂಪವೆಂಥದೆಂಬುದು ತಿಳಿದೇ ಇದೆಯಲ್ಲ ನನಗೆ. ಹಣ ಹಾರಿಸುವುದರಲ್ಲಿ ನುರಿತ ಆಸಾಮಿ ಅದು. ಜಡಿಯಪ್ಪನೂ ಹಾಗೆಯೆ.

ಇಷ್ಟು ದಿನಗಳವರೆಗೆ ಜಡಿಯಪ್ಪನ ವಿಚಾರವಾಗಿ ನನಗೆ ಹೆಚ್ಚಿಗೇನೂ ಗೊತ್ತಿರಲಿಲ್ಲ. ಊರಿನ ಜನರೊಂದಿಗೆ ಪರಿಚಯ ಹೆಚ್ಚಿದ ಹಾಗೆ ಅವನ ಚರಿತ್ರೆಯೆಲ್ಲ ಗೊತ್ತಾಗತೊಡಗಿದೆ. ಜಡಿಯಪ್ಪ ಉಂಡಾಡಿಗರ ತಂಡದ ಮುಖಂಡ. ಮುಲ್ಕೀ ಪರೀಕ್ಷೆಯನ್ನೂ ದಾಟಲಾಗದೆ ಸಾಲೆಗೆ ಶರಣು ಹೊಡೆದ ನಂತೆ. ಇಸ್ಪೀಟು ಕುಟ್ಟುವುದು, ಸಿನಿಮಾ ನೋಡುವುದು. ನಾಟಕ ಆಡಿಸು ವುದು, ಅವನ ನಿತ್ಯಕರ್ಮಗಳಾದುವು. ಕೈಹಿಡಿದ ಹೆಂಡತಿಯನ್ನು ಸೋಟಾ ದಿಂದ ಥಳಿಸಿ ಕೊಂದನಂತೆ. ಮತ್ತೆ ಮದುವೆಯಾಗಲಿಲ್ಲ. ಅವನಿಗೆ ಹೆಣ್ಣು ಕೊಡುವುದಕ್ಕೂ ಎಲ್ಲರಿಗೂ ಭಯ. ಅವನದು ಶ್ರೀಮಂತ ಮನೆತನವೂ ಅಲ್ಲ. ಅಣ್ಣಂದಿರಿಬ್ಬರೂ ಏನೋ ವ್ಯಾಪಾರ ಮಾಡಿಕೊಂಡು ಸಂಭಾವಿತರಂತೆ ಸಂಸಾರ ಮಾಡಿಕೊಂಡಿದ್ದಾರೆ. ಈತ ಅವರಿಬ್ಬರ ಮನೆಗಳಲ್ಲಿ ಸರದಿಯಂತೆ ಊಟ ಮಾಡುತ್ತ ಗುಂಡುಗೋವಿಯಾಗಿ ಅಲೆಯುತ್ತ ಅವನ ಹಾಗೇ ನಿರುದ್ಯೋಗಿ ಗಳಾಗಿರುವವರ ಗ್ಯಾಂಗಿಗೆ ಪುಢಾರಿಯಾಗಿದ್ದಾನೆ. ಅವರ ಬಾಯಿಗೂ, ಬಡಿಗೆಗಳಿಗೂ ಅಂಜಿಕೊಂಡು ವ್ಯಾಪಾರಿಗಳು ಆಗಾಗ ಅಷ್ಟಿಷ್ಟು ಹಣ ಕೊಡು ತ್ತಿರುತ್ತಾರೆ. ಕಾಫಿ-ತಿಂಡಿಯ ಖರ್ಚು ನಡೆಯುವುದು ಆ ಹಣದಿಂದ. ಸಾರ್ವಜನಿಕ ಸ್ವರೂಪದ ಕೆಲಸವೇನಿದ್ದರೂ ಜಡಿಯಪ್ಪ ಅಲ್ಲಿ ಹಾಜರು. ವರ್ಗಣಿ, ನಿಧಿ, ಚಂದಾ ಎತ್ತುವುದು, ಅದರಲ್ಲಿ ಅರ್ಧಕ್ಕರ್ಧವನ್ನು ಗಡಪ್ ಮಾಡುವುದು. ಅವನಿಂದ ಲೆಕ್ಕ ಕೇಳುವ ಧೈರ್ಯ ಯಾರಿಗೂ ಇಲ್ಲ. ಯಾವುದೊಂದು ಚುನಾವಣೆ ಬಂದಿತೆಂದರೆ ಜಡಿಯಪ್ಪನಿಗೆ ಸಾವಿರಾರು ರೂಪಾಯಿ ಲಾಭ. ಸಾಹಿತ್ಯ ಸಮ್ಮೇಳನ, ಕನ್ನಡ ಚಳವಳಿ, ಏಕೀಕರಣ ಪ್ರಚಾರ-ಎಲ್ಲದರಲ್ಲೂ ಆತ ಮುಂದಾಳುವೇ. ಅದರಲ್ಲೂ ಬಂದಷ್ಟು ಬಂತು.

ಜಡಿಯಪ್ಪನ ಖಾಸಾ ಸ್ನೇಹಿತನೊಬ್ಬನಿಂದಲೇ ಈ ಅಂಶಗಳೆಲ್ಲ ನನಗೆ ತಿಳಿದು ಬಂದುದು. ಈ ಸ್ನೇಹಿತನೂ ಮೊದಲು ಜಡಿಯಪ್ಪನ ಗ್ಯಾಂಗಿಗೇ ಸೇರಿದ್ದವನಂತೆ. ಹಾರಿಸಿದ ಹಣವನ್ನು ಹಂಚಿಕೊಳ್ಳುವ ವಿಚಾರದಲ್ಲಿ ಅಸಮಾಧಾನ ಬಂದುದರಿಂದ ಇವನಿಗೂ ಜಡಿಯಪ್ಪನಿಗೂ ವೈಮನಸ್ಯ ಬೆಳೆಯಿ

ತಂತೆ. ಈ ಸಂಗತಿ ನನಗೆ ಗೊತ್ತಾದುದು ವಿಠೋಬಾಚಾರಿಯಿಂದ. ಇಂದೇ ಮಧ್ಯಾಹ್ನ ನನ್ನನ್ನು ಕಾಣಲು ಬಂದಿದ್ದ ಆಚಾರಿ.

"ಜಡಿಯಪ್ಪ ಇಷ್ಟು ಭಯಂಕರ ಆಸಾಮಿಯೆಂಬುದು ನನಗೆ ಗೊತ್ತೇ ಇರಲಿಲ್ಲ ಆಚಾರ್ಯರೇ," ಎಂದೆ ನಾನು.

"ಭಯಂಕರ ಅಂದರೆ ಮಹಾ ಭಯಂಕರ ಬುದ್ಧೀ. ನಾಗರಹಾವಿನ ಸಹವಾಸ ಬೇಕು, ಇವನದು ಬೇಡ. ಒಮ್ಮೆ ಒಬ್ಬರ ಬಗ್ಗೆ ದ್ವೇಷವಿಟ್ಟು ಕೊಂಡನೆಂದರೆ ಸಾಯುವವರೆಗೂ ಕತ್ತಿ ಮಸೆಯುತ್ತಿರುತ್ತಾನೆ. ಹೈಸ್ಕೂಲಿನ ಹೆಡ್ಮಾಸ್ತರನ್ನೇ ಓಡಿಸಿಬಿಟ್ಟ...."

ಜರತಾರಿ ನಗರದಲ್ಲಿದ್ದ ಒಂದು ಹೈಸ್ಕೂಲನ್ನು "ವಿದ್ಯಾಭಿವೃದ್ಧಿ ಸಮಿತಿ"ಯವರು ನಡಸುತ್ತಿದ್ದುದೂ, ಜಡಿಯಪ್ಪ ಆ ಸಮಿತಿಯ ಕಾರ್ಯದರ್ಶಿ ಯಾಗಿದ್ದುದೂ ನನಗೆ ಗೊತ್ತಿದ್ದಿತು. ಆತ ಹೆಡ್ಮಾಸ್ತರನ್ನು ಓಡಿಸಿದ ಪ್ರಕರಣ ಮಾತ್ರ ಅದುವರೆಗೆ ನನಗೆ ತಿಳಿದಿರಲಿಲ್ಲ. ನಾನು ಕುತೂಹಲದಿಂದ ಕೇಳಿದೆ:

"ಅವಕ್ಕೇನು ಕಾರಣವಾಯಿತು ?"

"ಜಡಿಯಪ್ಪ ಹೇಳಿದಂತೆ ಆ ಹೆಡ್ಮಾಸ್ತರರು ಕೇಳದಿದ್ದುದೇ ಕಾರಣ. ಪಾಪ. ಅವರು ಸಭ್ಯಗೃಹಸ್ಥರು. ಸಾರ್ವಜನಿಕ ಹಣವನ್ನು ಅಪವ್ಯಯ ಮಾಡುವುದು ಅವರಿಗೆ ಸೇರುತ್ತಿರಲಿಲ್ಲ. ಸಮಿತಿಯ ಅಕೌಂಟೆಂಟು ಜಡಿ ಯಪ್ಪನ ಹಸ್ತಕ. ಹೈಸ್ಕೂಲಿಗಾಗಿ ಒಂದು ರೂಪಾಯಿ ವೆಚ್ಚವಾಗಿದ್ದರೆ ನೂರು ರೂಪಾಯಿ ಬರೆಯುತ್ತಿದ್ದ. ಹೆಡ್ಮಾಸ್ತರು ಅದಕ್ಕೆಲ್ಲ ಸಹಿ ಹಾಕ ಬೇಕಾಗುತ್ತಿತ್ತು. ಸಭ್ಯರಾದ ಈ ಮಾಸ್ತರರಿಗೆ ಇದೆಲ್ಲ ಸರಿಬರಲಿಲ್ಲ. ಸುಳ್ಳು ಲೆಕ್ಕಕ್ಕೆ ತಾವು ಸಹಿ ಹಾಕುವುದಿಲ್ಲವೆಂದು ವಾದಿಸಿದರು. ಸರಿ. ಜಡಿಯಪ್ಪ ಅವರ ವಿರುದ್ಧ ಕಾರಸ್ಥಾನ ನಡಸಿ ಅವರ ಮೇಲೆ ಏನೋನೋ ಆರೋಪ ಹೊರಿಸಿದ. ಅವರು ರಾಜಿನಾಮೆ ಕೊಟ್ಟು ಹೊರಟುಹೋದರು.

"ಅಬ್ಬಬ್ಬ!" ಎಂದೆ ನಾನು. ನಿಜಕ್ಕೂ "ಅಬ್ಬಬ್ಬ!" ಎನ್ನಿಸಿತ್ತು ನನಗೆ.

ಇಂಥ ಜಡಿಯಪ್ಪ; ಅಂಥ ಖರೇಸೆಟ್ಟಿ. ಉತ್ಸವ ಸಮಿತಿಯಲ್ಲಿ ಇವರದೇ ಮುಖಂಡತ್ವ. ಇಪ್ಪತ್ತೈದು ಸಾವಿರವೇಕೆ, ನೂವತ್ತು ಸಾವಿರ ರೂಪಾಯಿಗಳನ್ನೂ ಕೂಡಿಸಬಹುದು ಇವರು. ಅದನ್ನೆಲ್ಲ ಗಳಂ ಮಾಡಿಯೂ ಬಿಡಬಹುದು.

ದುಂಡಪ್ಪ ಮಾತ್ರ ಸಭ್ಯನೆಂದು ತೋರುತ್ತದೆ - ಹಣ ಕೂಡಿಸುವ ಕಾರ್ಯದಲ್ಲಿ ಮಾತ್ರ ಆತ ಭಾಗವಹಿಸುತ್ತಾನೆ. ಉಳಿದುದನ್ನೆಲ್ಲ ಜಡಿಯಪ್ಪ ಖರೇಸೆಟ್ಟಿ ಇವರಿಗೆ ಬಿಟ್ಟುಕೊಟ್ಟು ತಣ್ಣಗಿರುತ್ತಾನೆ. ಕರಡೆಪ್ಪಸೆಟ್ಟರೂ ಹಾಗೆಯೆ. "ಏನಾದರೂ ಮಾಡಿಕೊಳ್ಳಲಿ ಅವರು. ಅಂತೂ ಉತ್ಸವ ವೈಭವದಿಂದ ನಡೆದು ನಾಲ್ಕು ಜನ ಮೆಚ್ಚುವ ಹಾಗಾದರೆ ಆಯಿತು," ಎಂದು ಅವರು ಹೇಳುತ್ತಾರೆ.

೧೭—೮—೧೯೪..

ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಮಹಾದೇವಿ ಬಂದಿದ್ದಳು. ಎರಡು ಗಂಟೆಗಳವರೆಗೂ ನನ್ನೊಡನಿದ್ದು ಹೊರಟುಹೋದಳು.

ಇನ್ನೂ ಪಟ್ಟಾಭಿಷೇಕವಾಗಿಲ್ಲವಾದ್ದರಿಂದ ನಾನು ಮಠ ಬಿಟ್ಟು ಎಲ್ಲಿಯೂ ಕದಲುವಂತಿಲ್ಲ. ಅವರಿವರ ಮನೆಗಳಿಗೆ ಊಟಕ್ಕೆ ಹೋಗುವುದನ್ನೂ ನಿಲ್ಲಿಸಿ ಬಿಟ್ಟಿದ್ದೇನೆ. "ನಿಮ್ಮ ಬಗ್ಗೆ ಯಾರೂ ಒಂದು ಶಬ್ದವನ್ನೂ ಆಡದಂತೆ ಎಚ್ಚರ ದಿಂದಿರಬೇಕು," ಎಂದು ಜಡಿಯಪ್ಪ ಎಚ್ಚರಿಕೆ ಕೊಟ್ಟಿದ್ದಾನೆ.

ನನ್ನನ್ನು ತನ್ನ ಮನೆಗೆ ಕರೆದೊಯ್ಯಬೇಕೆಂದು ಮಹಾದೇವಿಯ ಹಂಬಲು. ಹೋಗಬೇಕೆಂದು ನನಗೂ ಬಲವಾದ ಆಸೆ - ಆದರೆ - ಸದ್ಯಕ್ಕಂತೂ ಅದು ಸಾಧ್ಯವಾಗದು.

ಅಂತೆಯೆ, ಕೆಲದಿನಗಳಿಂದ ಮಹಾದೇವಿ ಮಠಕ್ಕೇ ಬರುತ್ತಿದ್ದಾಳೆ. ಸಾಮಾನ್ಯವಾಗಿ ನಾನೊಬ್ಬನೇ ಇರುವ ವೇಳೆಯಲ್ಲೇ ಆಕೆ ಬರುವುದು. ಮಠದ ಹಿಂದಿನ ಬಾಗಿಲಿನಿಂದ ಬಂದು, ಯಾರಿಗೂ ಕಾಣಿಸದಂತೆ ಹಿಂಭಾಗದ ಮೆಟ್ಟಲು ಗಳನ್ನೇರಿ ಅಟ್ಟ ಹತ್ತಿ ಬರುತ್ತಾಳೆ ಆಕೆ. ಮಹಡಿಯ ಕೆಳಬಾಗಿಲಲ್ಲಿ ರುದ್ರ ದೇವರು ಕಾವಲು ಕೂತಿರುತ್ತಾನೆ. ಆತ ನನ್ನ ಅಂತರಂಗದ ಶಿಷ್ಯ. ಇಲ್ಲಿಗೆ ಬಂದು ಎಂಟು ಹತ್ತು ದಿವಸವಾಯಿತು.

ಮಧ್ಯಾಹ್ನದ ವೇಳೆಯಲ್ಲಿ ನಾನು ನಿದ್ದೆ ಮಾಡುತ್ತಿರುವೆನೆಂದು ತಿಳಿದು ಸಾಮಾನ್ಯವಾಗಿ ಯಾರೂ ನನ್ನನ್ನು ಕಾಣಲು ಬರುವುದಿಲ್ಲ. ಆಕಸ್ಮಾತ್ತಾಗಿ ಯಾರಾದರೂ ಬಂದುಬಿಟ್ಟರೆ, ಬಾಗಿಲಲ್ಲಿ ಕುಳಿತ ರುದ್ರದೇವರು - "ಗುರುಗಳು ನಿದ್ದೆ ಮಾಡುತ್ತಿದ್ದಾರೆ. ಒಂದು ಗಂಟೆ ಬಿಟ್ಟು ಬನ್ನಿ," ಎಂದು ಹೇಳಿ ಕಳಿಸುತ್ತಾನೆ.

೧೮—೪—೧೯೪..

ಇಂದು ಮಹಾದೇವಿ ನನ್ನೊಡನಿದ್ದಾಗ ಕೆಳಗಡೆ ಯಾರೋ ಕೂಗು ವುದು ಕೇಳಿಸಿತು.

“ಯಾರ ಧ್ವನಿಯಂತಿದೆ ಅದು ?” ಎಂದು ನಾ ಕೇಳಿದೆ.

ಮಹಾದೇವಿ ಒಂದು ಕ್ಷಣ ಕಿವಿಗೊಟ್ಟು ಆಲಿಸಿ–“ಖರೇಸೆಟ್ಟಿ ಬಂದಿ ದಾನಂತ ಕಾಣುತ್ತದೆ,” ಎಂದಳು.

“ಹೌದು. ಹೌದು. ಅವನ ಧ್ವನಿಯೇ. ಮರಿ ಏನು ಹೇಳಿದರೂ ಆತ ಕೇಳಲೊಲ್ಲ. ಸ್ವಾಮಿಗಳನ್ನು ಎಬ್ಬಿಸು ಎನ್ನುತ್ತಿದ್ದಾನಲ್ಲ. ಮುಂದೆ ಹ್ಯಾಗೆ ಮಹಾದೇವಿ ?” ಎಂದು ನಾನು ಕೊಂಚ ಭೀತಿಯಿಂದಲೇ ಕೇಳಿದೆ.

“ಭಯಪಡಬೇಡಿ. ಹ್ಯಾಗಾದರೂ ಪಾರಾದರಾಯಿತು. ನಾನು ಇಲ್ಲೇ ಮಂಚದ ಮೇಲೆ ಮಲಗಿರುತ್ತೇನೆ–ರಗ್ಗನ್ನು ತಲೆತುಂಬಾ ಹೊದ್ದುಕೊಂಡು. ನೀವು ಹೋಗಿ ಬಾಗಿಲು ತೆಗೆದು ಅವನನ್ನು ಕೆಳಗಡೆಗೇ ಕರೆದೊಯ್ದು ಬಿಡಿ. ಅಷ್ಟರಲ್ಲಿ ನಾನು ಪಾರಾಗುತ್ತೇನೆ.”

ಮುಖದ ಮೇಲಿನ ಬೆವರ ಹನಿಗಳನ್ನೊರೆಸಿಕೊಳ್ಳುತ್ತ ನಾನು ಹೋಗಿ ಬಾಗಿಲು ತೆರೆದೆ. ಆಚೆ ನಿಂತಿದ್ದ ಖರೇಸೆಟ್ಟಿ ಒಡನೆಯೆ ಒಳಕ್ಕೆ ನುಗ್ಗಿ ಬಿಟ್ಟ. “ಬನ್ನಿ. ಬನ್ನಿ ಮುಖ ತೊಳೆಯಬೇಕಾಗಿದೆ. ಕೆಳಗಡೆಗೇ ಹೋಗಿ ಬಿಡೋಣ,” ಎಂದು ನಾನಾತನನ್ನು ಕೆಳಗಡೆ ಸಾಗಿಸಲು ಪ್ರಯತ್ನಿಸಿದೆನಾದರೂ ಖರೇಸೆಟ್ಟಿ ಕೊಟಡಿಯನ್ನು ಬಿಟ್ಟು ಬರಲಿಲ್ಲ. “ನೀವು ಹೋಗಿ ಬನ್ನಿ. ನಾನಿಲ್ಲೇ ಇರುತ್ತೇನೆ. ಖಾಸಗಿ ಮಾತಾಡುವದಿದೆ ಸ್ವಲ್ಪ,” ಎಂದು ಹೇಳಿದ.

ನನ್ನ ದೇಹದಲ್ಲೆಲ್ಲ ಬೆವರೂರಿತು, ನಾಲಗೆಯೊಣಗಿತು. ಅವನನ್ನು ಒತ್ತಾಯದಿಂದ ಕರೆದೊಯ್ಯುವಂತೆಯೂ ಇರಲಿಲ್ಲ. ಮಹಾದೇವಿಯ ಉಪಾಯ ವಿಫಲವಾಗಿತ್ತು. ಪ್ರಸಂಗ ಮೈ ಮೇಲೆ ಬರುವದಂತೂ ಸ್ಪಷ್ಟವಿದ್ದಿತು. ಇನ್ನೇನು ಮಾಡುವುದು ? ಸೆಟ್ಟಿಯ ಕೈಯಿಂದ ಹೇಗೆ ತಪ್ಪಿಸಿಕೊಳ್ಳುವುದು ?– ಎಂದು ಯೋಚಿಸುತ್ತಿದ್ದ ಹಾಗೆ ನನಗೆ ದಿಕ್ಕೇ ತೋಚದಂತಾಯಿತು. ಆದದ್ದಾ ಗಲಿ–ಎಂದುಕೊಂಡು ಅಲ್ಲಿ ನಿಲ್ಲದೆ ಕೆಳಗಡೆ ಧಾವಿಸಿದೆ.

ಅರ್ಧ ಗಂಟೆಯವರೆಗೂ ಬಚ್ಚಲಮನೆಯಲ್ಲೇ ಕುಳಿತಿದ್ದೆ. ಇಪ್ಪತ್ತು ಮೂವತ್ತು ತಂಬಿಗೆ ನೀರು ಹುಯ್ದುಕೊಂಡಿರಬಹುದು ಮುಖಕ್ಕೆ. ಆದರೂ ಉದ್ವಿಗ್ನತೆ ಮಾಯವಾಗಲಿಲ್ಲ. ಬೆವರು ಬರುವುದೂ ನಿಲ್ಲಲಿಲ್ಲ. ಖರೇಸೆಟ್ಟಿ

ಮೊದಲೇ ದುಷ್ಟ. ನನ್ನ ದೌರ್ಬಲ್ಯ ಅವನಿಗೆ ಗೊತ್ತಾಗಬಾರದಿತ್ತು, ಗೊತ್ತಾಯಿತು. ಇನ್ನು ನನ್ನ ಈ ಗುಟ್ಟನ್ನು ಆತ ದುರುಪಯೋಗಪಡಿಸಿಕೊಳ್ಳುವುದು ಖಂಡಿತ. ಇಲಿಯನ್ನು ಪೀಡಿಸುವ ಬೆಕ್ಕಿನಂತೆ ಆತ ನನ್ನನ್ನು ಪೀಡಿಸುವುದೂ ಖಂಡಿತ. ಅಯ್ಯೋ....ಇನ್ನೇನು ಗತಿ!

"ಬುದ್ಧೀ...." ಅದು ರುದ್ರದೇವರ ಕೂಗು.

"ಏನಯ್ಯಾ?"

"ಖರೇಸೆಟ್ಟರು ಕರೆಯುತ್ತಿದ್ದಾರೆ ಬುದ್ಧೀ...."

ತಂಬಿಗೆಯನ್ನು ಕೊಡದ ಮೇಲಿಟ್ಟು ನಾನು ಎದ್ದು ನಿಂತುಕೊಂಡೆ. ಕಾಲುಗಳಲ್ಲಿನ ಶಕ್ತಿಯೆಲ್ಲ ಎಲ್ಲಿಯೋ ಮಾಯವಾದಂತಾಗಿದ್ದಿತು.

"ಆಕೆ ಹೋದಳೇನೋ?" ಎಂದು ಕಳ್ಳಧ್ವನಿಯಲ್ಲಿ ಕೇಳಿದೆ.

"ಆಗಲೇ ಹೋದರು ಬುದ್ಧೀ."

"ಖರೇಸೆಟ್ಟಗೂ ಅವಳಿಗೂ ಭೆಟ್ಟಿಯಾಯಿತೇ?"

"ಇಬ್ಬರೂ ಬಹಳ ಹೊತ್ತು ಮಾತಾಡುತ್ತಿದ್ದರು ಬುದ್ಧೀ."

ಮಹಾದೇವಿ ಬುದ್ಧಿವಂತೆ. ಮೂರು ವರ್ಷಗಳವರೆಗೆ ಬಿಟ್ಟೂಬಿಡದೆ ಅಕ್ಕನ ಬಳಗದ ಅಧ್ಯಕ್ಷಳಾಗಿದ್ದವಳಲ್ಲವೆ? ಖರೇಸೆಟ್ಟಗೆ ಏನನ್ನಾದರೂ ಹೇಳಿ ಆಕೆ ಒಂದು ದಾರಿ ತೆಗೆದಿರಬಹುದು ಎಂದು ನನಗನ್ನಿಸಿ ಸ್ವಲ್ಪ ಸಮಾಧಾನವಾಯಿತು. ಕಾಲುಗಳಲ್ಲಿ ಶಕ್ತಿಯೂ ಸಂಚರಿಸತೊಡಗಿತು.

ಮೆಟ್ಟಲುಗಳನ್ನೇರಿ ನಾನು ಕೊಟಡಿಗೆ ಬರುತ್ತಲೂ ಖರೇಸೆಟ್ಟ ನಗು ನಗುತ್ತಾ ನುಡಿದ:

"ಇಂಥಾದ್ದಕ್ಕೆಲ್ಲ ಇಷ್ಟು ಅಂಜುವುದುಂಟೇ ಬುದ್ಧೀ? ಇಷ್ಟು ಹೊತ್ತು ಏನು ಮಾಡುತ್ತಿದ್ದಿರಿ?"

ಟವಲಿನಿಂದ ಗಾಳಿ ಹಾಕಿಕೊಳ್ಳುತ್ತ ನಾನು ಸೋಫಾದ ಮೇಲೆ ಕುಕ್ಕರಿಸಿದೆ.

"ಇಷ್ಟು ಸಣ್ಣ ವಿಚಾರದಲ್ಲೂ ಇಷ್ಟು ಸಂಕೋಚ ಮಾಡಿಕೊಳ್ಳುತ್ತೀರಲ್ಲಾ ಸ್ವಾಮಿಜಿ. ನಾನು ಯಾರಲ್ಲಾದರೂ ಹೇಳಿಯೇನೆಂದು ಭಯವಷ್ಟೆ? ಅಂಥ ಕೆಲಸ ಈ ಖರೇಸೆಟ್ಟಿಯಿಂದ ಎಂದೂ ಆಗಲಾರದು. ನೀವು ನಿಶ್ಚಿಂತರಾಗಿರಿ....ನನ್ನ ಬಾಯಿಂದ ಯಾವ ಗುಟ್ಟೂ ಹೊರಬೀಳಲಾರದು."

"ಹಾ?"

" ನನ್ನನ್ನು ಬೇರೆಯವನೆಂದು ತಿಳಿಯುಲೇಬೇಡಿ. ನಿಮ್ಮ ಅಂತರಂಗದ ಶಿಷ್ಯನೆಂದೇ ಇಟ್ಟುಕೊಳ್ಳಿ. ನಿಮ್ಮ ಕೆಲಸದ ಬಗ್ಗೆ ಆಕ್ಷೇಪಿಸಲು ನನಗೇನು ಅಧಿಕಾರ? ಬೇರೆಯವರಿಗಾದರೂ ಏನು ಅಧಿಕಾರ? ಹಾಗೆ ನೋಡಿದರೆ ಎಷ್ಟು ಜನ ಸ್ವಾಮಿಗಳು ಸ್ತ್ರೀಸಂಗ ಮಾಡುವುದಿಲ್ಲ ?"

" ಎಲ್ಲರೂ ಮಾಡುತ್ತಾರೆಯೇ ?"

" ಎಲ್ಲರೂ ಅಂತ ಅನ್ನಲಾರೆ. ಆದರೆ ಎಲ್ಲರಿಂದಲೂ ಸಾಧ್ಯವೇ ಅದು ಸ್ವಾಮಿಜಿ? ಅದರಲ್ಲೂ ತರುಣ ವಯಸ್ಸಿನಲ್ಲಿ ?"

" ಸರಿಯಪ್ಪ. ಬದುಕಿಕೊಂಡೆವು."

" ನೀವೇನೂ ಸಂಕೋಚಪಟ್ಟುಕೊಳ್ಳಬೇಡಿ ಸ್ವಾಮಿಜಿ. ಈ ವಿಷಯ ದಲ್ಲಿ ನನ್ನ ಸಹಾಯ ಬೇಕಿದ್ದರೆ ಹೇಳಿ. ಇಲ್ಲಿ – ಮಠದಲ್ಲಿ ಇದು ಸುಲಭವಲ್ಲ. ಅಕಸ್ಮಾತ್ ಯಾರಾದರೂ ಬರುತ್ತಾರೆ – ಇದೇ ಈಗ ನಾ ಬಂದ ಹಾಗೆ. ಇಂಥಾದೆಲ್ಲಾ ಹೊರಗೇ ನಡೆಯಬೇಕು."

" ಅದು ಸರಿ. ಆದರೆ...."

" ತಿಳಿಯಿತು....ತಿಳಿಯಿತು. ಮಹಾದೇವಮ್ಮನ ಮನೆಗೂ ನೀವು ಹೋಗುವಂತಿಲ್ಲ. ಜನರಿಗೆ ಸಂಶಯ ಬರುತ್ತದೆ. ಹೀಗೆ ಮಾಡುತ್ತೀರಾ ? ಊರ ಹೊರಗೆ ಒಂದು ಮೈಲಿನಾಚೆ ನನ್ನ ಫ್ಯಾಕ್ಟರಿಯಲ್ಲಿ ಒಂದು ಬಂಗಲೆ ಯಿದೆ. ಅಲ್ಲಿ ಆಗಾಗ ಬರುತ್ತಾ ಇರಿ – ಸಾಯಂಕಾಲದ ವೇಳೆಗೆ, ಮಹಾ ದೇವಮ್ಮನೂ ಅವರ ಗೆಳತಿ ಶಿವಲಿಂಗವ್ವನೂ ಸಂಜೆ ಆ ಕಡೆ ಗಾಳಿ ತಿನ್ನಲು ಬರುತ್ತಿರುತ್ತಾರೆ. ಜನರಿಗೆ ಸಂದೇಹ ಬರದಂತೆ ಎಲ್ಲಾ ವ್ಯವಸ್ಥೆ ಮಾಡ ಬಹುದು."

" ಫ್ಯಾಕ್ಟರಿಯಲ್ಲಿ ಕೆಲಸಗಾರರಿರುವುದಿಲ್ಲವೆ ?"

" ಆರು ತಿಂಗಳಿಂದ ಫ್ಯಾಕ್ಟರಿ ಬಂದು ಬಿದ್ದಿದೆ. ಅಲ್ಲಿ ಒಂದು ಹುಳುವೂ ಇರುವುದಿಲ್ಲ."

" ಬಂಗಲೆಯಲ್ಲಿ ಯಾರಿರುತ್ತಾರೆ ?"

" ನೀವೊಮ್ಮೆ ಬಂದು ನೋಡಿ. ಎಲ್ಲಾ ಗೊತ್ತಾಗುತ್ತದೆ."

ಖರೇಸೆಟ್ಟಿ ಹೊರಟುಹೋದ ಬಳಿಕ ಕಾದಂಬರಿಯೊಂದನ್ನು ಹಿಡಿದು ಕೊಂಡು ಕುಳಿತಿದ್ದೆ. ಅರ್ಧ ತಾಸು ಕಳೆದಿರಬಹುದು. " ನ....ನ....ನಮಸ್ಕಾರ ಬು....ಬು....ಬುದ್ಧೀ...." ಎನ್ನುತ್ತಾ ಗುಂಡಾಡಯ್ಯ ಬಂದು ಅಡ್ಡ ಬಿದ್ದ.

"ಪಟ್ಟಾಭಿಷೇಕ ಮಹೋತ್ಸವದ ಬಗ್ಗೆ ಒಂದು ವಿ....ವಿಶೇಷ ಸಂಚಿಕೆ ಹೊರಡಿಸಬೇಕೆಂದಿದ್ದೇನೆ ಬುದ್ಧೀ...."

"ಆಗಬಹುದು ಸಂತೋಷ – ಎಷ್ಟು ಖರ್ಚು ಬಂದೀತು."

"ತೀರಾ ಕಡಿಮೆ ಅಂದರೂ ಸಾವಿರ ರೂಪಾಯಿ ಆದೀತು, ತಮ್ಮವು ನಾಲ್ಕೈದು ಬ್ಲಾಕು, ಹಿರಿಯ ಜಗದ್ಗುರುಗಳವು ಎರಡು, ಮಠದ್ದು ಒಂದು, ಪೀಠದ್ದು ಒಂದು. ಎಲ್ಲಾ ಆರ್ಟ್ ಪೇಪರಿನ ಮೇಲೆ ಪ್ರಿಂಟಾಗಬೇಕು. ಕವರ್ ಪೇಜಿನ ಮೇಲೆ ಮೂರು ಬಣ್ಣಗಳ ಚಿತ್ರ ಹಾಕಬೇಕು."

"ಸರಿ. ಸರಿ. ನಿಮಗೆ ತಿಳಿದಂತೆ ಮಾಡಿ. ನಾಳೆ ಬಂದು ಖರೇಸೆಟ್ಟರ ಹತ್ತಿರ ಹಣ ತೆಗೆದುಕೊಂಡು ಹೋಗಿ," ಎಂದು ಹೇಳಿ, ಒಂದು ಕ್ಷಣ ತಡೆದು ನಾನು ಹೇಳಿದೆ: "ಒಂದು ಮಾತು ಕೇಳುತ್ತೇನೆ ಸಂಪಾದಕರೇ. ಯಾರ ಹತ್ತಿರವೂ ಬಾಯಿಬಿಡಬೇಡಿ."

"ಇ....ಇ....ಇಲ್ಲಾ ಬುದ್ಧೀ."

"ಖರೇಸೆಟ್ಟಿಯ ಫ್ಯಾಕ್ಟರಿಯಲ್ಲಿ ಒಂದು ಬಂಗಲೆಯಿದೆಯಂತಲ್ಲಾ? ಅಲ್ಲಿ ಯಾರಿರುತ್ತಾರೆ?"

"ಅಂಥಾದ್ದನ್ನೆಲ್ಲಾ ನಿಮ್ಮ ಹತ್ತಿರ ಹ್ಯಾಗೆ ಹೇಳೋದು ಬು....ಬುದ್ಧೀ?"

"ಪರವಾಯಿಲ್ಲ, ಹೇಳಿ."

ಗುಂಡಾಡಯ್ಯ ತಡವರಿಸುತ್ತ ನುಡಿದ: "ಅಲ್ಲಿ....ಅಲ್ಲಿ....ಸೆಟ್ಟರ ಸೂಳೆಯೊಬ್ಬಾಕೆ ಇರುತ್ತಾಳೆ...."

"ಸೂಳೆ?"

"ಹೌದೌದು ಬುದ್ಧೀ. ಬಹಳ ದಿನಗಳಿಂದ ಸಂಬಂಧವಿದೆ...."

೧೯—೮—೧೯೪..

ನಿನ್ನೆಯ ರಾತ್ರಿಯನ್ನೆಲ್ಲಾ ಖರೇಸೆಟ್ಟಿಯ ಬಂಗಲೆಯಲ್ಲೇ ಕಳೆದುದಾಯಿತು.

ಸಾಯಂಕಾಲ ಆರು ಗಂಟೆಗೆ ಸೆಟ್ಟಿಯ ಜತೆಗೆ ಹೊರಗಡೆ ತಿರುಗಾಡಲು ಹೋಗಿದ್ದವನು ಮತ್ತೆ ಮಠಕ್ಕೆ ಮರಳಲಿಲ್ಲ, ಬಂಗಲೆಯಲ್ಲೇ ಊಟವೂ ಆಯಿತು. ಜಾಗೀರದಾರನೊಬ್ಬನ ಮನೆಯಂತಿದೆ ಆ ಬಂಗಲೆ. ಅಲಂಕೃತವಾದ ಕೈಸಾಲೆ. ಎರಡು ಮೂರು ಮಲಗುವ ಕೋಣೆಗಳು. ನೆಲಕ್ಕೆಲ್ಲ

ಹಾಸುಗಂಬಳಿ. ಸೋಫಾಗಳು, ಮಂಚಗಳು, ರೇಡಿಯೋ ಸೆಟ್, ವೀಣೆ ಎಲ್ಲಾ ಉಂಟು.

ಸೆಟ್ಟಿಯ ಪ್ರೇಯಸಿ ಭಾಗೀರಥಿಯ ಪರಿಚಯವಾಯಿತು. ಇನ್ನೂ ಯುವತಿ. ಇಪ್ಪತ್ತು ಇಪ್ಪತ್ತೊಂದು ವರ್ಷದವಳಿರಬಹುದೊ ಏನೊ – ಸಾಕಷ್ಟು ಸುಂದರಿಯೂ ಹೌದು. ತಿಳಿ ನೀಲಿಬಣ್ಣದ ಜಾರ್ಜೆಟ್ ಸೀರೆಯೊಂದನ್ನುಟ್ಟು ಕೊಂಡು ಬಿಳಿಯ ಕುಪ್ಪುಸ ತೊಟ್ಟುಕೊಂಡಿದ್ದ ಭಾಗೀರಥಿ ವಿದ್ಯುದ್ದೀಪದ ಬೆಳಕಿನಲ್ಲಿ ಸಿನಿಮಾ ನಟಿಯಂತೆ ಕಾಣಿಸುತ್ತಿದ್ದಳು....

"ನೀವಿಷ್ಟು ರಸಿಕರಿರಬಹುದೆಂದು ನಮಗೆ ತಿಳಿದಿರಲಿಲ್ಲ ಸೆಟ್ಟರೆ," ಎಂದು ನಾನು ನಗುತ್ತ ನುಡಿದೆ. ಖರೇಸೆಟ್ಟಿ ನಕ್ಕ. ಭಾಗೀರಥಿಯೂ ನಕ್ಕಳು.

"ಭಾಗೀರಥಿ ಬಲು ಸೊಗಸಾಗಿ ವೀಣೆ ನುಡಿಸುತ್ತಾಳೆ. ಕೇಳುತ್ತೀರಾ ಬುದ್ಧೀ ?"

"ಓ ಹ್ದೊ. ಬಹಳ ಸಂತೋಷ. ಬಾರಿಸಮ್ಮ. ನಮಗೂ ಗಾಯನ ವಾದನ ಅಂದರೆ ತುಂಬ ಇಷ್ಟ."

ಊಟವಾದ ತರುವಾಯ ಒಂದು ಗಂಟೆಯವರೆಗೂ ಬಾರಿಸುತ್ತಿದ್ದಳು ಭಾಗೀರಥಿ. ಸುಮಾರು ಹನ್ನೊಂದು ಗಂಟೆಯ ವೇಳೆಗೆ ಬಂಗಲೆಯ ಹೊರಗಡೆ ಕಾರು ಬಂದು ನಿಂತುದು ಕೇಳಿಸಿತು. ವೀಣೆಯನ್ನು ಅದರ ಸ್ಥಳದಲ್ಲಿಟ್ಟು ಭಾಗೀರಥಿ ಏಳುತ್ತಿದ್ದ ಹಾಗೆ ಮಹಾದೇವಿ ಪ್ರವೇಶಿಸಿದಳು.

"ಬನ್ನಿ, ಅಕ್ಕನವರೇ," ಎಂದು ಖರೇಸೆಟ್ಟಿ ಅವಳನ್ನು ಸ್ವಾಗತಿಸಿದ.

ಸಂಕೋಚದಿಂದಾಗಿ ಆಕೆ ತಲೆಯನ್ನೇ ಮೇಲಕ್ಕೆತ್ತಲಿಲ್ಲ; ಭಾಗೀರಥಿ ಯೊಂದಿಗೆ ಒಂದು ಮಾತನ್ನೂ ಆಡಲಿಲ್ಲ.

ನಮಗಾಗಿ ಸಿದ್ಧಗೊಳಿಸಲ್ಪಟ್ಟಿದ್ದ ಕೊಟಡಿಗೆ ಬರುತ್ತಲೂ ಅವಳು ಮಂಚದ ಮೇಲುರುಳಿ ಮಾತನಾಡಿದಳು :

"ಇಂಥ ಸಾಹಸ ಕಾರ್ಯಕ್ಕೆ ಇದುವರೆಗೂ ಇಳಿದಿರಲಿಲ್ಲ ನಾನು. ಮನೆ ಯಲ್ಲಿ ಅವರು ಮಲಗಿದ್ದಾರೆ. ನಾನಿತ್ತ ಬಂದಿದ್ದೇನೆ. ಏನಾಗುವುದೋ ಏನೊ...."

ನಾನು ಅವಳ ಮುಂಗುರುಳು ತೀಡುತ್ತಾ – "ಗಾಬರಿಯಾಗಬೇಡ ದೇವೀ. ಏನೂ ಆಗುವುದಿಲ್ಲ. ಸೆಟ್ಟರಿಗೆ ರಾತ್ರಿ ಎಚ್ಚರವಾಗುವುದೇ ಇಲ್ಲವೆಂದು ನೀನೇ ಹೇಳುತ್ತಿದ್ದೆಯಲ್ಲ?" ಎಂದೆ.

"ಅದೇನೋ ನಿಜ. ಆದರೂ...."

"ಮೋಟಾರು ಕಾರು ಯಾರದ್ದು ?"

"ಸೆಟ್ಟರು ಏನೋ ವ್ಯವಸ್ಥೆ ಮಾಡಿದ್ದಾರೆ."

"ಮೋಟಾರು ಎಲ್ಲಿಯ ತನಕ ಬಂದಿತ್ತು ?"

"ನಮ್ಮ ಮನೆಗೆ ತುಸು ದೂರದಲ್ಲಿರುವ ಚೌಕದವರೆಗೆ,"

"ನೀನು ಮನೆ ಬಿಟ್ಟು ಹೊರಟದ್ದನ್ನು ಯಾರೂ ನೋಡಿರಲಿಕ್ಕಿಲ್ಲವಷ್ಟೆ ?"

"ಯಾರಿಗೆ ಗೊತ್ತು ? ಈ ವೇಳೆಯಲ್ಲಿ ಓಣಿಯಲ್ಲಿ ಯಾರೂ ಇರುವುದಿಲ್ಲ. ಆದರೂ...."

"ಹೌದು. ಗಂಡಾಂತರದ ಕೆಲಸವೆಂಬುದು ನಿಜ. ಯಾರಾದರೂ ನೋಡಿ ಕಾರನ್ನು ಹಿಂಬಾಲಿಸಿಕೊಂಡು ಬಂದರೆ ಕೆಲಸ ಕೆಡುತ್ತದೆ."

"ಸೆಟ್ಟರಿಗೆ ಬುದ್ಧಿಯಿಲ್ಲ. ಈಗಲೇ ಬೇಡ ಇದೆಲ್ಲಾ – ಇನ್ನೂ ನಿಮಗೆ ಅಧಿಕಾರ ಸಿಗಬೇಕು."

"ಹೌದು. ಹೌದು. ಬೇರೇನಾದರೂ ವ್ಯವಸ್ಥೆ ಮಾಡೋಣ. ಇಲ್ಲಿ ಮಾತ್ರ ಬೇಡ."

ರಾತ್ರಿ ಎರಡು ಗಂಟೆಯ ಹೊತ್ತಿಗೆ ಮಹಾದೇವಿ ಹೊರಟುಹೋದಳು. ಸೆಟ್ಟಿ ನನ್ನನ್ನು ಒಂದು ಗಂಟೆಗೆ ಎಬ್ಬಿಸಿ ಮಠಕ್ಕೆ ಕರೆದು ತಂದು ಬಿಟ್ಟ.

"ರಾತ್ರಿ ಸುಖವಾಗಿ ಕಳೆಯಿತೇ ಸ್ವಾಮಿಜಿ ?"

"ಎಂಥ ಸುಖವೋ ಮಾರಾಯ. ಕಣ್ಣಿಗೆ ಕಣ್ಣು ಹತ್ತಲಿಲ್ಲ. ಮಹಾದೇವಿಯನ್ನು ಯಾರಾದರೂ ನೋಡಿಬಿಟ್ಟರೇನು ಗತಿ ! ಒಳ್ಳೆ ಅಗ್ನಿಪರೀಕ್ಷೆಯೇ ಆಯಿತು ರಾತ್ರಿ...."

"ಗಂಡಾಂತರಗಳ ನಡುವೆ ಸುಖಪಡುವುದರಲ್ಲೇ ನಿಜವಾದ ಮೋಜು ಇರುತ್ತೆ ಸ್ವಾಮಿಜಿ," ಎಂದು ನುಡಿದು ಖರೇಸೆಟ್ಟಿ ಖಹ ಖಹಾ ಎಂದು ನಗೆಯೆಬ್ಬಿಸಿದ.

ನನಗೆ ನಗು ಬರುವುದು ಸಾಧ್ಯವಿರಲಿಲ್ಲ. ಮಂಚದ ಮೇಲೆ ಬಿದ್ದುಕೊಂಡವನು ಮತ್ತೆ ಎದ್ದಾಗ ಗಡಿಯಾರದಲ್ಲಿ ಹನ್ನೊಂದು ಗಂಟೆಯಾಗಿತ್ತು.

೨೦—೮—೧೯೪೪ . .

ಪಟ್ಟಾಭಿಷೇಕ ಮಹೋತ್ಸವದ ಆಮಂತ್ರಣ ಪತ್ರಿಕೆಗಳು ಸಿದ್ಧವಾಗಿವೆ.

ಬೆಳಗಿನಿಂದ ಸಾಯಂಕಾಲದವರೆಗೆ ಅವುಗಳನ್ನೆಲ್ಲ ಕಳುಹಿಸುವ ಕೆಲಸವೇ ನಡೆಯಿತು.

ಸ್ವಾಗತ ಸಮಿತಿಯವರು ತಮ್ಮ ಪರಿಚಯದ ಸ್ವಾಮಿಗಳಿಗೂ, ಶಾಸ್ತ್ರಿಗಳಿಗೂ ಕಳುಹಿಸಿದರು. ಮಠದ ಭಕ್ತವರ್ಗಕ್ಕೂ ಕಳುಹಿಸಲಾಯಿತು. ನಾನು ನನ್ನ ಪರಿಚಯದ ಜನರಿಗೆಲ್ಲ ಕಳುಹಿಸಿದೆ. ವೀರಯ್ಯನನ್ನೂ ಮರೆತಿಲ್ಲ. ಆಮಂತ್ರಣದ ಜೊತೆಗೆ ಪತ್ರವೊಂದನ್ನಿಟ್ಟು – "ಉತ್ಸವಕ್ಕೆ ತಪ್ಪದೆ ಬಾ, ಹೋಗಿ ಬರುವ ಖರ್ಚು, ಮೇಲೆ ಸಾಧ್ಯವಾದಷ್ಟು ಆಶೀರ್ವಾದ ಎಲ್ಲಾ ಮಾಡುತ್ತೇನೆ," ಎಂದು ಬರೆದಿದ್ದೇನೆ.

ಕರ್ನಾಟಕದಲ್ಲೆಲ್ಲ ನನ್ನದು ಅಭೂತಪೂರ್ವ ಪಟ್ಟಾಧಿಕಾರವಾಗಬೇಕೆಂದು ನನ್ನ ಆಸೆ. ಘನಗರ್ಜದ ಮುದುಕ ಜಗದ್ಗುರು, ಅವನ ಮರಿ ಇಬ್ಬರೂ ಬಂದು ನನ್ನ ವೈಭವವನ್ನು ನೋಡಲಿ – ಎಂದೆನ್ನಿಸುತ್ತಿದೆ. ಅವರಿಗೂ ಆಮಂತ್ರಣ ಕೊಟ್ಟಿದಾಗಿದೆ. ಬಂದಾನೇ ಆ ಮುದುಕ!

ಕರ್ನಾಟಕದ ಎಲ್ಲಾ ಪತ್ರಿಕೆಗಳಲ್ಲೂ ಉತ್ಸವದ ವಿಸ್ತೃತ ವರದಿ ಬಂದರೆ ಎಷ್ಟು ಚೆನ್ನಾಗುವುದು! ಅಂತೆಯೆ, ಕೆಲವು ದಿನಪತ್ರಿಕೆಗಳ, ವಾರಪತ್ರಿಕೆಗಳ ಸಂಪಾದಕರನ್ನು ಆಮಂತ್ರಿಸಿದ್ದೇನೆ. ಒಂದು ವಾರವೆಲ್ಲಾ ಉತ್ಸವ ನಡೆಯುತ್ತದೆ. ಒಂದೊಂದು ದಿನ ಇಬ್ಬಿಬ್ಬರ ಉಪನ್ಯಾಸ ಏರ್ಪಡಿಸಬೇಕೆಂಬ ಯೋಚನೆ.

'ಒಂದೇ ಕರ್ನಾಟಕ'ದ ವಿನಾಯಕರಾಯರು ಉತ್ಸವಕ್ಕೆ ಬರಬಹುದೆಂಬ ನಿರೀಕ್ಷೆಯಿದೆ. ವಿಠೋಬಾಚಾರಿಯಿಂದಲೂ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆಸಿ ಉತ್ಸವಕ್ಕೆ ಬಂದೇತೀರಬೇಕೆಂದು ಒತ್ತಾಯಪಡಿಸಲಾಗಿದೆ. ಬಹಳ ಮಾಡಿ ಅವರು ಬರಬಹುದು. 'ಏಕ-ಕನ್ನಡ'ದ ತರುಣ ಸಂಪಾದಕ ಕೀಟಲೆ ಕುಟ್ಟಪ್ಪನಿಗೂ ಪತ್ರ ಬರೆದಿದ್ದೇನೆ. ಒಂದು ವರ್ಷದ ಅವಧಿಯಲ್ಲೇ ಪತ್ರಿಕೆಯನ್ನು ಅತ್ಯಂತ ಜನಪ್ರಿಯವನ್ನಾಗಿ ಮಾಡಿದ ಶಕ್ತಿವಂತನಾತ. ಅದು ಪ್ರಕಟವಾಗತೊಡಗಿದಂದಿನಿಂದ 'ಒಂದೇ ಕರ್ನಾಟಕ'ದ ಮಾರಾಟ ಕಡಿಮೆಯಾಗಿದೆಯಂತೆ. ಕುಟ್ಟಪ್ಪನಂಥ ಪ್ರಭಾವಶಾಲಿ ಲೇಖಕ ನನ್ನನ್ನು ಹೊಗಳುತ್ತಿದ್ದರೆ ಎಷ್ಟು ಚೆನ್ನ!

ಸಣ್ಣದೊಂದು ಪತ್ರಿಕೆ ಹೊರಡಿಸುತ್ತಿರುವ ದೂರ್ವಾಸ ಸೆಟಗೌಡನನ್ನೂ ಕಡೆಗಾಣಿಸುವಂತಿಲ್ಲ. ಆತ ಮಹಾ ಉಪದ್ವ್ಯಾಪಿ. ವಿನಾಯಕರಾಯರನ್ನೂ ಕುಟ್ಟಪ್ಪನನ್ನೂ ಕರೆಯಿಸಿ, ಅವನನ್ನು ಬಿಟ್ಟೆನೆಂದರೆ ದೂರ್ವಾಸನಂತೆಯೇ ಆತ

ನನ್ನ ಮೇಲೆರಗುವುದು ಖಂಡಿತ. ಅವನ ಪತ್ರಿಕೆಗೆ ಬೆಲೆಯಿರಲಿ ಇಲ್ಲದಿರಲಿ, ಅವನನ್ನೂ ಕರೆಯಿಸಲೇಬೇಕಾಗಿದೆ. ಅಂಥವನನ್ನು ಎದುರು ಹಾಕಿಕೊಳ್ಳು ವುದು ಸರಿಯಲ್ಲ.

'ತಲೆಕಾಯಿ' ವಾರಪತ್ರಿಕೆಯ ಗೊಬ್ಬಣ್ಣನನ್ನೂ ಬರಮಾಡಿಕೊಳ್ಳ ಬೇಕು. ಮೂವತ್ತು ವರ್ಷಗಳಿಂದ ನಡೆದು ಬಂದಿರುವ ಪತ್ರಿಕೆ ಅದು. ಗುಂಡಾ ಡಯ್ಯನ 'ವೀರಶೈವಾವತಾರ'ದ ಯೋಗ್ಯತೆ ಗೊಬ್ಬಣ್ಣನ 'ತಲೆಕಾಯಿ' ಯೋಗ್ಯತೆ ಎಲ್ಲಾ ಅಷ್ಟೆ. ಬಹಳವೆಂದರೆ ನಾನೂರು ಪತ್ರಿಕೆಗಳನ್ನು ಹೊರಡಿ ಸುತ್ತಿರಬಹುದು ಆತ. ಹಳೆಯ ಪತ್ರಿಕೆಯೆಂಬ ಅಭಿಮಾನದಿಂದ ಹಳಬರು ಕೆಲವರು ಇನ್ನೂ ಅದರ ಚಂದಾದಾರರಾಗಿ ಉಳಿದಿರಬಹುದು. ಹೊಸ ಪೀಳಿಗೆಯ ಜನಕ್ಕೆ 'ತಲೆಕಾಯಿ'ಯ ಹೆಸರು ಸಹ ತಿಳಿಯದು. ಆದರೂ ಗೊಬ್ಬಣ್ಣನಿಗೆ ಅದರ ಬಗ್ಗೆ ಭಯಂಕರ ಹೆಮ್ಮೆಯಿದೆ. ತಾನೂ ಒಬ್ಬ ಸಂಪಾದಕ, ಹಿರಿಯ ಸಂಪಾದಕ ಎಂಬ ಅಹಂಕಾರವಿದೆ. ಸರಿ. ಅವನನ್ನೂ ಬಿಡುವಂತಿಲ್ಲ.

ಒರೆಕೋರೆ ನಗರದ 'ಮುಡಿವಂತಿ' ವಾರಪತ್ರಿಕೆಯ ನರಿರಾಯನನ್ನೂ ಮರೆಯುವಂತಿಲ್ಲ. ಬ್ರಾಹ್ಮಣರಲ್ಲಿ ಅವನ ಕೀರ್ತಿ ಬಹಳ. ಅವನದೇ ಆದು ದೊಂದು ಶಿಷ್ಯಬಳಗವೂ ಇದೆ. ಪತ್ರಿಕೆಯ ಕವರಿನ ಮೇಲೆ ಆತ ನಾಯಕರ ಚಿತ್ರಗಳನ್ನೂ ಪ್ರಕಟಿಸುತ್ತಾನೆ. ನನ್ನ ಭಾವಚಿತ್ರವನ್ನೂ ಪ್ರಕಟಿಸಿಯಾನು. ಸಣ್ಣದೊಂದು ಪರಿಚಯ ಲೇಖನವನ್ನೂ ಬರೆದಾನು. ಅವನನ್ನೂ ಉಪ ಯೋಗಿಸಿಕೊಳ್ಳಬೇಕು.

ಆ ಊರಿನಲ್ಲಿ ಎಲ್ಲ ಪಕ್ಷಗಳವರಿಗೂ ಬೇಕಾಗಿದ್ದು ಎಲ್ಲ ಕಡೆಗೂ ಓಡಿ ಯಾಡುವ ಆ ನಿರುದ್ಯೋಗಿಗೂ ಆಮಂತ್ರಣ ಕೊಟ್ಟಿದೆ. ಅವನನ್ನು ನಾನು ಇನ್ನೂ ನೋಡಿಲ್ಲ. ನನ್ನ ಶಿಷ್ಯ ರುದ್ರದೇವರಿಗೆ ಅವನ ಪರಿಚಯ ಇದೆಯಂತೆ. ಸಾಹಿತಿಗಳು, ಪತ್ರಿಕಾಕರ್ತರು, ಪುಢಾರಿಗಳು ಎಲ್ಲರೊಂದಿಗೂ ಪರಿಚಯವಿದೆ ರುದ್ರದೇವರಿಗೆ. ಇಂಥವನನ್ನು ಹತ್ತಿರವಿಟ್ಟುಕೊಂಡಿದ್ದೂ ಅನುಕೂಲವೇ ಆಯಿತು.

"ಇನ್ನು ಯಾರಾರನ್ನು ಕರೆಯಿಸೋಣ ಮರಿ?" ಎಂದು ನಾನು ಕೇಳಿ ದಾಗ ಆತ ತಲೆ ತುರಿಸಿಕೊಳ್ಳುತ್ತ ಕೇಳಿದ:

"ಒರೆಕೋರೆ ನಗರದ ಪ್ರಸಾದನಿಲಯದ ಸ್ವಾಮಿಗಳು!"

"ಆಮಂತ್ರಣವನ್ನಂತೂ ಕಳಿಸಿಬಿಡೋಣ. ಅವರು ಹಾಗೆಲ್ಲಾ ಬರುವವರಲ್ಲ. ಬಂದರೆ ಬರಲಿ. ತೊಂದರೆಯೇನೂ ಇಲ್ಲ."

"ಯಾರಾದರೊಬ್ಬ ಕಾಂಗ್ರೆಸ್ ಪುಢಾರಿಯನ್ನು ಕರೆಸೋಣವೇ?"

"ಹೌದಪ್ಪ. ಅವರನ್ನು ಬಿಟ್ಟರೆ ಹೇಗೆ? ಅವರೂ ಒಬ್ಬರು ಇರಬೇಕು ನಮ್ಮ ಜೇಬಿನಲ್ಲಿ. ಯಾರನ್ನು ಕರೆಸೋಣ?"

"ಜಟ್ಟಿಪ್ಪನವರು?"

"ಅವರು ಹಾಗೆಲ್ಲ ಎಲ್ಲಿ ಬರುತ್ತಾರೆ? ಏನಾದರೂ ಅಧ್ಯಕ್ಷತೆ, ಉದ್ಘಾಟನೆ ಇದ್ದರೆ ಮಾತ್ರ ಬರುವ ಮಂದಿ ಅದು."

"ಅವರಿಂದಲೇ ಉತ್ಸವದ ಉದ್ಘಾಟನೆ ಮಾಡಿಸಬಹುದಲ್ಲ?"

"ಇದು ಧಾರ್ಮಿಕ ಉತ್ಸವ. ಹಾಗೆ ಒಂದು ರಾಜಕೀಯ ಪಕ್ಷದ ಮುಖಂಡರಿಂದ ಉದ್ಘಾಟನೆ ಮಾಡಿಸಿದರೆ ಬೇರೆ ಪಕ್ಷಗಳ ಭಕ್ತರಿಗೆ ಸಿಟ್ಟು ಬರುತ್ತದೆ."

"ಹಾಗಾದರೆ ಹೇಗೆ?"

"ಜಟ್ಟಿಪ್ಪನವರೂ ಬಂದು ಒಂದು ಭಾಷಣ ಹೊಡೆದು ಹೋಗಲಿ ಬಿಡಿ. ಬಂದರೆ ಬಂದರು. ಬರದಿದ್ದರೆ ಇಲ್ಲ."

"ಸರಿ. ಏಕೀಕರಣದ ವಿಷಯ ಮಾತನಾಡಲಿ. ಅವರಿಗೇನು ಕಾಫಿ ಕುಡಿದಷ್ಟು ಸುಲಭ ಅದು!"

ಗಮಕಿ ಗೋವಿಂದಯ್ಯ, ಸಂಗೀತರತ್ನಾಕರ ವೃಷಭೇಂದ್ರ ಶರ್ಮ, ಗಡಬಡಯ್ಯ, ನನ್ನ ತಂದೆ ತಾಯಿ ಅಣ್ಣ ತಮ್ಮಂದಿರು, ಪಾರ್ವತಿಯ ತಂದೆ, ಗದಿಗೆವ್ವ, ಮಲ್ಲಪ್ಪಸೆಟ್ಟರು ಮೊದಲಾದವರಿಗೂ ಆಮಂತ್ರಣ ಕಳುಹಿಸಿದುದಾಯಿತು. "ಲೀಲಾವತಿ ಲಲಿತಾ ಇಬ್ಬರನ್ನೂ ಕರೆದುಕೊಂಡು ಬನ್ನಿ," ಎಂದು ಶಾಸ್ತ್ರಿಗೆ ಬರೆದಿದ್ದೇನೆ.

ಸ್ನೇಹಲತೆಗೂ ಪತ್ರ ಬರೆಯಲೇ ಎಂದೂ ಅನ್ನಿಸುತ್ತದೆ. ಉತ್ಸವದ ಅಂಗವಾಗಿ ಅವಳದೊಂದು ನರ್ತನ ಕಾರ್ಯಕ್ರಮವನ್ನೇರ್ಪಡಿಸಲು ಬಂದೀತು. ಆದರೆ ಮಹಾದೇವಿಗೆ ಅವಳ ಬಗ್ಗೆ ಸಂಶಯ ಬಂದರೇನು ಗತಿ? ಹೆಂಗುಸರಿಗೆ ಹೊಟ್ಟೆಯುರಿ ನಿಸರ್ಗಸಿದ್ಧವೆಂಬುದು ನನಗೆ ಗೊತ್ತೇ ಇದೆಯಲ್ಲ?

೨೨—೮—೧೯೪೪..

ನಾನು ಇಲ್ಲಿಗೆ ಬಂದು ಇಷ್ಟು ದಿನಗಳಾದರೂ ಗುರುಶಾಂತಪ್ಪ – ಚೆನ್ನವ್ವ ಮತ್ತು ಅವರ ಪಾರ್ಟಿಯ ಜನರು ಮಾತ್ರ ನನ್ನನ್ನು ಕಾಣಲು ಬಂದಿರಲಿಲ್ಲ.

ಈ ವಿಚಾರ ನನ್ನ ಮನಸ್ಸಿನಲ್ಲಿ ಒಳಗೊಳಗೇ ಕೊರೆಯುತ್ತಿತ್ತು. ನನ್ನ ಮಟ್ಟಿಗೆ ಈ ನಗರದಲ್ಲಿ ಪಾರ್ಟಿಗಳಿರಬಾರದೆಂದೇ ನನ್ನ ಆಶಯ. ಎಲ್ಲರ ಜತೆಗೂ ಚೆನ್ನಾಗಿರಬೇಕು ನಾನು.

ಈ ದಿನ ಗುಂಡಾಡಯ್ಯ ಬಂದಾಗ ಅವನ ಹತ್ತಿರ ಈ ವಿಷಯ ಪ್ರಸ್ತಾಪಿಸಿದೆ.

"ನಾನೂ ಚೆ.... ಚೆ.... ಚೆನ್ನವ್ವಕ್ಕನವರ ಹತ್ತಿರ ಮಾತಾಡಿದ್ದೇನೆ ಸ್ವಾಮಿಜಿ. ಅವರಿಗೂ ತಮ್ಮನ್ನು ನೋಡುವ ಅಪೇಕ್ಷೆಯಿದೆ."

"ಗುರುಶಾಂತಪ್ಪನವರಿಗೋ?"

"ಅವರದು ಕೊಂಚ ಹಟದ ಸ್ವಭಾವ. ಮರಿಸ್ವಾಮಿಯ ಪಾರ್ಟಿ ಕಟ್ಟಿ ಮುಖಭಂಗವಾದಂತಾಯಿತು. ಅದನ್ನಿನ್ನೂ ಅವರು ಮರೆತ ಹಾಗಿಲ್ಲ."

"ಅದರಲ್ಲಿ ನಮ್ಮದೇನು ತಪ್ಪಿದೆ?"

"ತಮ್ಮದೇನೂ ಇಲ್ಲಾ ಬುದ್ಧೀ. ತಮ್ಮ ಬಗ್ಗೆ ಅವರಿಗೂ ಕೋಪ ವೇನೂ ಇಲ್ಲ. ಆದದ್ದು ಆಗಿಹೋಯ್ತು ಸಾವುಕಾರರೆ, ಎಲ್ಲಾ ಮರೆತುಬಿಡ ಬೇಕು. ನಮ್ಮ ಸ್ವಾಮಿಗಳು ಬಲು ಒಳ್ಳೆಯವರು – ಎಂದು ನಾ ಹೇಳಿದೆ."

"ಏನೆಂದರು?"

"ಏನೂ ಅನ್ನಲಿಲ್ಲ. ಅಂತೂ ಸಾವುಕಾರರ ಕೋಪ ಇಳಿಯುತ್ತಾ ಇದ್ದಂತೆ ಕಂಡಿತು."

"ಅವರ ಪತ್ನಿ ಏನೆನ್ನುತ್ತಾರೆ?"

"ಅವರ ಅಕ್ಕನ ಬಳಗದ ಸಭೆಗಳಿಗೆ ಸ್ಥಳವಿಲ್ಲವಾದ್ದರಿಂದ ಬಹಳ ತೊಂದರೆಯಾದಂತಿದೆ ಬುದ್ಧೀ. ಇಷ್ಟು ದಿನ ಮಠದಲ್ಲಿ ನಡೆಸುತ್ತಿದ್ದರು. ಈಗ ಇಲ್ಲಿಗೆ ಬರುವಂತಿಲ್ಲವಲ್ಲಾ?"

"ಈಗ ಎಲ್ಲಿ ಸಭೆ ನಡೆದಿವೆ?"

"ಊರಲ್ಲಿ ಒಂದು ಹಾಳು ಮಠವಿದೆಯಲ್ಲಾ, ಅಲ್ಲಿ."

ಜರತಾರಿ ನಗರದಲ್ಲಿ ಇನ್ನೊಂದು ಮಠವಿರುವ ಸಂಗತಿ ನನಗೆ ಗೊತ್ತಾ ಗುತ್ತಿದ್ದುದು ಇದೇ ಮೊದಲು. ನಾನು ದಿಗಿಲುಗೊಂಡು ಪ್ರಶ್ನಿಸಿದೆ:

“ಇನ್ನೊಂದು ಮಠವೆ? ಯಾರದ್ದು ಅದು?”

“ಪಂಚಾಚಾರ್ಯ ಸಂಗಡದ ಸ್ವಾಮಿಗಳದು.”

“ಅರೆ! ಇಷ್ಟು ದಿನ ಗೊತ್ತೇ ಇರಲಿಲ್ಲವಲ್ಲ ನನಗೆ! ಅಲ್ಲಿ ಯಾವ ಸ್ವಾಮಿಯಿದ್ದಾನೆ ಈಗ?”

“ಅಲ್ಲಿ ಯಾ....ಯಾರೂ ಇಲ್ಲ ಬುದ್ಧೀ. ಮಠವೂ ದೊಡ್ಡದಲ್ಲ. ಹಾಳು ಹಾಳು ಬಿದ್ದಿದೆ. ಕೇಳುವವರೇ ಇಲ್ಲ.”

ನನಗೆ ಕೊಂಚ ಹಾಯೆನ್ನಿಸಿತು “ಹೀಗೇನು? ಸರಿ. ಸರಿ. ಎಷು ವರ್ಷಗಳಿಂದ ಖಾಲಿ ಇದೆ ಮಠ?”

“ಇಪ್ಪತ್ತು ವರ್ಷವಾದರೂ ಆಗಿದ್ದೀತು”

“ಆಸ್ತಿ ಗೀಸ್ತಿ ಉಂಟೇ ಏನಾದರೂ?”

“ಇದ್ದಿತಂತೆ ಮೊದಲು. ಆಗ ಇದ್ದ ಸ್ವಾಮಿಗಳು ಎಲ್ಲಾ ಹಾಳು ಮಾಡಿ ಒಬ್ಬಳನ್ನು ಕಟ್ಟಿಕೊಂಡು ಓಡಿಹೋದರು.”

“ಸರಿಯಪ್ಪ. ಚೆನ್ನವ್ವತಾಯಿಯ ಅಕ್ಕನ ಬಳಗ ಆ ಹಾಳು ಮಠ ಸೇರಿಕೊಂಡಿದೆಯೆ! ಪಾಪ ....ಪಾಪ. ಬಹಳ ಅನ್ಯಾಯವಾಯಿತು. ಈ ನಗರದಲ್ಲಿ ಎರಡು ಬಳಗಗಳಾದುದು, ಎರಡು ಪಾರ್ಟಿಗಳಾದುದು ಯಾವುದೂ ಸರಿಬಂದಿಲ್ಲ ನಮಗೆ. ಏನಾದರೂ ಪ್ರಯತ್ನಪಟ್ಟು ಎಲ್ಲಾ ಒಂದು ಮಾಡಬೇಕು,”

“ಹೌದೌದು ಬುದ್ಧೀ. ಹಾ....ಹಾಗೇ ಮಾಡಿ.”

“ಇಂದೇ ಚೆನ್ನವ್ವತಾಯಿಯವರ ಹತ್ತಿರ ಹೋಗಿ ಈ ವಿಷಯ ಪ್ರಸ್ತಾಪಿಸಿ, ನಾವು ಅವರನ್ನು ಕೂಡಲೆ ನೋಡಬೇಕಾಗಿದೆಯೆಂದು ತಿಳಿಸಿ. ಹಾಗೇ ಬಳಗದ ಕಾರ್ಯದರ್ಶಿನಿ ಹಿರೇಮಠ ಕುಮಾರಿಯೂ ಬರಲಿ. ಅವಳದು ಏನೋ ಚೆಲುವಾದ ಹೆಸರಿರಬೇಕು. ನೆನಪಾಗಲೊಲ್ಲದು....”

ಗುಂಡಾಡಯ್ಯ ಹಲ್ಲು ಕಿರಿಯುತ್ತಾ ಹೇಳಿದ: “ಪು....ಪು....ಪುಷ್ಪಾವತೀ ಅಂತ....”

“ಹಾ....ಹಾ....ಪುಷ್ಪಾವತಿ! ಅವಳ ವಿಷಯ ಗಂಗಾಧರಶಾಸ್ತ್ರಿಗಳು ಬಹಳ ಹೇಳಿದ್ದಾರೆ ನಮಗೆ. ಹುಡುಗಿ ಬಹಳ ಬುದ್ಧಿವಂತೆಯಂತೆ. ಗಂಡಸರನ್ನು ಮೀರಿಸುವ ಹಾಗೆ ಭಾಷಣ ಮಾಡುವಳಂತೆ. ನಿಜವೇ?”

" ನಿಜ, ಬುದ್ಧೀ, ನಿಜ. ಒಳ್ಳೆ ಗಂಡುಬೀರಿ ಹುಡುಗಿ ಅದು. ಇಂಟರ್‌ವರೆಗೆ ಓದಿಕೊಂಡಿದ್ದಾಳೆ. ಶ್ರೀಮಂತರ ಮಗಳು. ತಂದೆ ಅವಳಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಇವಳನ್ನು ಹಿಡಿಯುವವರೇ ಇಲ್ಲ ಊರಲ್ಲಿ."

" ಇನ್ನೂ ಮದುವೆಯಾಗಿಲ್ಲವೆ?"

" ಅವಳನ್ನು ಮದುವೆಯಾಗುವ ಗಂಡಸಾದರೂ ಯಾರು? ಮಂಗಲಾದೇವಿಯವರ ಮಗ ಮುಕ್ಕಣ್ಣನೊಬ್ಬನಿಗೆ ಮಾತ್ರ ಮಣಿಯುವಳೇನೋ ಆಕೆ."

" ಮಂಗಲಾದೇವಿ ಯಾರು ಅವರು?

" ಇಲ್ಲಿಯ ವ್ಯಾಪಾರಸ್ಥರೊಬ್ಬರ ಹೆಂಡತಿ."

" ನನಗೆ ಗೊತ್ತಿಲ್ಲದವರು ಯಾರ್ರೀ ವ್ಯಾಪಾರಸ್ಥರು ಈ ಊರಲ್ಲಿ?"

" ಅವರಿಗೆ ಒಂದು ವರ್ಷದಿಂದ ಆರೋಗ್ಯವಿಲ್ಲ ಬುದ್ಧೀ. ಮನೆಯಲ್ಲೇ ಹಾಸಿಗೆ ಹಿಡಿದು ಮಲಗಿದ್ದಾರೆ. ಮರಿಸ್ವಾಮಪ್ಪನವರು ಎಂದು ಅವರ ಹೆಸರು."

" ಈ ಮುಕ್ಕಣ್ಣ ಏನು ಮಾಡುತ್ತಾನೆ? ವ್ಯಾಪಾರವೋ?"

" ಎಲ್ಲರೂ ಮಾಡುವಂಥ ವ್ಯಾಪಾರವಲ್ಲ ಅವನದು. ವಿಚಿತ್ರ ವ್ಯಾಪಾರ. ತಂದೆ ತಾಯಿಗಳಿಗೆ ಏಕಮಾತ್ರ ಪುತ್ರ. ಬಿ. ಎ. ವರೆಗೂ ಓದಿ ಬಂದ – ಯಾವುದೊಂದು ನೌಕರಿಗೂ ಸೇರಲಿಲ್ಲ. ಅಂಗಡಿಯಲ್ಲೂ ಕೂಡ್ರಲಿಲ್ಲ. ಸಮಾಜವಾದಿ ಪಕ್ಷದ ಮುಖಂಡನಾಗಿ ಮೆರೆಯುತ್ತಿದ್ದಾನೆ."

" ಅಪ್ಪ ಗಳಿಸಿದ ಆಸ್ತಿಯೇನಾದರೂ ಇದೆಯೋ?"

" ಏನೋ ಅಲ್ಪ ಸ್ವಲ್ಪ ಇತ್ತು. ಅವರು ಹಾಸಿಗೆ ಹಿಡಿದು ಬಿದ್ದಂದಿನಿಂದ ಅದೂ ಕರಗುತ್ತ ಬಂದಿದೆ."

" ಈ ಮಂಗಲಾದೇವಿ ಅಕ್ಕನ ಬಳಗ ಮೊದಲಾದುವುಗಳಿಗೆ ಬರುವುದಿಲ್ಲವೇನು?"

" ಮೊದಲು ಬರುತ್ತಿದ್ದರು. ಆದರೆ ಬಳಗದಲ್ಲಿ ಒಳಜಗಳ ಸುರುವಾಗುತ್ತಲೂ ಬೇಸರಪಟ್ಟುಕೊಂಡು ಬರುವುದನ್ನು ನಿಲ್ಲಿಸಿದರು."

" ಒಳ್ಳೆಯ ಮಹಿಳೆಯೆಂದು ಕಾಣುತ್ತೆ?"

" ಅಂಥ ಆ....ಆದರ್ಶ ಹೆಣ್ಣು ಮಕ್ಕಳು ಈ ಊರಲ್ಲೇಕೆ, ಈ ಜಿಲ್ಲೆಯಲ್ಲೇ ವಿರಳ ಸ್ವಾಮಿಜಿ."

" ಅವರ ವಯಸ್ಸೆಷ್ಟು, ಸಂಪಾದಕರೇ?"

" ಐವತ್ತು ಆಗಿದ್ದೀತು ಬುದ್ಧೀ."

" ಈ ಮುಕ್ಕಣ್ಣನಿಗೂ ಪುಷ್ಪಾವತಿಗೂ ಬಹಳ ಸಲಿಗೆಯಿದೆಯೇನು ?"

" ಹೌದು. ಇಬ್ಬರೂ ಕೂ....ಕೂಡಿಯೆ ಬೆಳೆದವರು. ಮುಕ್ಕಣ್ಣನ ಮನೆಯ ಹತ್ತಿರವೇ ಅವಳ ಮನೆಯೂ ಇದೆ."

" ಕರಡೆಪ್ಪಸೆಟ್ಟರ ಮನೆಗೆ ಸಮೀಪದಲ್ಲಿವೆಯೇನು ಈ ಮನೆಗಳು ?"

" ಹೌದು ಬುದ್ಧೀ. ಸೆಟ್ಟರ ಮನೆಯೆದುರಿನದೇ ಮುಕ್ಕಣ್ಣನ ಮನೆ "

ಮಹಾದೇವಿ ಅಂದು ರಾತ್ರಿ ಮೋಟಾರು ಕಾರಿನಲ್ಲಿ ಖದೀಸೆಟ್ಟಿಯ ಬಂಗಲೆಗೆ ಬಂದುದರ ಜ್ಞಾಪಕ ಬಂದು ನನ್ನ ಎದೆ ನಡುಗಿತು. ಮುಕ್ಕಣ್ಣ ಸಮಾಜವಾದಿ; ಪುಷ್ಪಾವತಿ ದಿಟ್ಟ ಹುಡುಗಿ – ಅವಳು ಮಹಾದೇವಿಯ ವಿರೋಧಿಯಾಗಿರುವುದು ಬೇರೆ. ಅವರಿಬ್ಬರಲ್ಲಿ ಯಾರಾದರೊಬ್ಬರು ಮಹಾದೇವಿ ಕಾರಿನಲ್ಲಿ ಓಡಾಡಿದುದನ್ನು ಕಂಡಿರಬಹುದೋ – ಏನೊ.... ಶಿವಶಿವಾ.... ಮಹಾದೇವಾ....ಶಂಭುಶಂಕರಾ....

೨೩—೮—೧೯೪೪ . .

ಬೆಳಗ್ಗೆ ಗುಂಡಾಡಯ್ಯ ಮತ್ತೆ ಬಂದಿದ್ದ.

" ತಾವು ಹೇಳಿದ ಹಾಗೆ ಚೆ....ಚೆನ್ನವ್ವಕ್ಕನವರನ್ನು ಕಂಡು ತಮ್ಮ ಅಪ್ಪಣೆ ತಿಳಿಸಿದೆ. ಪು....ಪುಷ್ಪಾವತಿಯನ್ನೂ ಕಂಡಿದ್ದೆ. ಅವರೇನು ತಾವಾಗಿಯೇ ತಮ್ಮ ದರ್ಶನಕ್ಕೆ ಬರುವಂತೆ ಕಾಣುವುದಿಲ್ಲ ಬುದ್ಧೀ," ಎಂದು ಹೇಳಿದ.

" ಯಾಕ್ರೀ, ಏನೆಂದರು ?"

" ಅದನ್ನೆಲ್ಲ ತಮ್ಮೆದುರಿಗೆ ಹ್ಯಾಗೆ ಹೇಳೋದು ಬುದ್ಧೀ."

" ಪರವಾಯಿಲ್ಲ ಹೇಳಿ. ಅವರು ನಮ್ಮನ್ನು ಬಯ್ದಿದ್ದರೂ ಚಿಂತೆಯಿಲ್ಲ. ಅವರು ಅಂದದ್ದನ್ನು ಇದ್ದಕ್ಕಿದ್ದ ಹಾಗೆ ಹೇಳಿ."

" ನೋಡಿ ಬುದ್ಧೀ. ಕೋ....ಕೋ....ಕೋಪಿಸಿಕೊಳ್ಳಬೇಡಿ. ನಾವು ಅವರನ್ನು ಕೇಳಬಾರದಾಗಿತ್ತೋ ಏನೊ. ಚೆನ್ನವ್ವ ಅಂದರು....ಇವರನ್ನು ನಾವು ಜಗದ್ಗುರು ಅಂತ ಮನ್ನಿಸುವುದೇ ಇಲ್ಲ. ಇವರ ದರ್ಶನದ ಅಗತ್ಯವೇನು ? ನಮ್ಮನ್ನು ನೋಡುವವರಿದ್ದರೆ ತಾವೇ ಬರಲಿ ಮನೆಗೆ....ಅಂತಂದರು ಬುದ್ಧೀ...."

ಸೋಫಾದಿಂದೆದ್ದು ಕೊಟಡಿಯಲ್ಲಿ ಅಡಿಯಿಡುತ್ತ ನಾನು ಹೇಳಿದೆ: "ಹೀಗೆ ಅಂದರೇ? ಸರಿ. ಸರಿ. ಅನಂತರ ಆ ಪುಷ್ಪಾಕುಮಾರಿ?"

"ಅಕ್ಕನ ಬಳಗದ ಸಭೆಗೆ ಸೋಮವಾರ ದಿನ ಭಾಷಣ ಮಾಡಲು ಬರಹೇಳು ನಿಮ್ಮ ಸ್ವಾಮಿಗಳಿಗೆ. ಅಲ್ಲಿ ಎಲ್ಲರದೂ ಭೆಟ್ಟಿಯಾಗುತ್ತೆ - ಅಂದಳು."

"ನಿಜಕ್ಕೂ ಬರಬೇಕೆಂದಳೋ, ಇಲ್ಲ - ತಮಾಷೆಗೋ?"

"ಸಮಾಷೆಗಲ್ಲ ಬುದ್ಧೀ. ನಿಜಕ್ಕೂ...."

"ಸರಿ. ಬರುತ್ತಾರೆಂದು ತಿಳಿಸಿಬಿಡಿ."

ಗುಂಡಾಡಯ್ಯ ವಿಸ್ಮಯದಿಂದ ನುಡಿದ: "ಬರುತ್ತೀರಾ ಬುದ್ಧೀ? ತಾ....ತಾ....ತಾವು....ಅಲ್ಲಿಗೆ? ಅಲ್ಲಿಗೆ?"

"ಇದರಲ್ಲಿ ಆಶ್ಚರ್ಯದ ಮಾತೇನು ಬಂತು? ಅವರೂ ನಮ್ಮ ಜನವೇ ಅಲ್ಲವೆ? ನಾವು ಯಾರನ್ನೂ ದೂರವಿರಿಸಬಾರದು. ನಮ್ಮ ದೃಷ್ಟಿಯಲ್ಲಿ ಎಲ್ಲರೂ ಅಷ್ಟೇ."

ಏಕೋ ಏನೋ ತಿಳಿಯದು. ಚೆನ್ನವ್ವನ ಪಕ್ಷದ ಕಡೆ ನನ್ನ ಒಲವು ರಭಸದಿಂದ ಹರಿಯುತ್ತಿದ್ದಿತು. ಪುಷ್ಪಾವತಿಯನ್ನು ನೋಡಬೇಕೆಂಬ ಆತುರತೆಯೂ ಅದಕ್ಕೆ ಕಾರಣವಾಗಿದ್ದಿತೇನೊ.

ಹೆಣ್ಣಿನ ಬಗೆಗೆ ಇಷ್ಟೊಂದು ಹುಚ್ಚು ಇರಬಾರದು. ನನ್ನ ಈ ಹುಚ್ಚಿನಿಂದಾಗಿ ಏನೇನು ಸಂಭವಿಸಿದೆಯೊ, ಆ ಶಿವ - ಶಂಕರನೇ ಬಲ್ಲ!

ಮಧ್ಯಾಹ್ನ ಮಹಾದೇವಿ ಬರುತ್ತಲೂ ಚೆನ್ನವ್ವನ ಬಳಗದ ಸಭೆಗೆ ಭಾಷಣಕ್ಕೆ ಹೋಗುವ ವಿಚಾರವನ್ನು ಬಹಳ ಎಚ್ಚರದಿಂದ ಪ್ರಸ್ತಾಪಿಸಿದೆ. ನಾನು ಯೋಚಿಸಿಕೊಂಡಂತೆಯೆ ಆಯಿತು. ಮಹಾದೇವಿ ಒಂದೈದು ನಿಮಿಷ ಮೂಕಬೊಂಬೆಯಂತೆ ಕುಳಿತುಬಿಟ್ಟಳು. ಅನಂತರ ಧ್ವನಿಯೆತ್ತಿ ಹೇಳಿದಳು:

"ನನ್ನನ್ನು ಕೇಳದೆ ಒಮ್ಮೆಲೆ ನೀವು ಇದಕ್ಕೆ ಒಪ್ಪಿಗೆ ಕೊಟ್ಟೀರೆಂದು ನಾ ತಿಳಿದಿರಲಿಲ್ಲ."

"ಕೇಳಬೇಕೆಂದರೆ ವೇಳೆಯಿರಲಿಲ್ಲ ದೇವೀ. ಅವರಿಗೆ ಆಗಿಂದಾಗ ತಿಳಿಸಬೇಕಾಗಿತ್ತು."

"ನೀವು ಅಲ್ಲಿಗೆ ಹೋಗುವುದು ಗಟ್ಟಿಯಾದಂತಾಯಿತಲ್ಲ ಹಾಗಾದರೆ?"

"ಒಪ್ಪಿಕೊಂಡ ಬಳಿಕ ಹೋಗಲೇಬೇಕಾಗುವುದಲ್ಲವೆ?"

ಮಹಾದೇವಿ ತಲೆ ಬಾಗಿಸಿಕೊಂಡು ಎದ್ದು ಹೊರಟಳು. “ಕೂತಿರು ದೇವೀ. ಕೋಪಿಸಿಕೊಳ್ಳಬೇಡ.” ಎಂದು ನಾನೆಷ್ಟು ಬಿನ್ನವಿಸಿಕೊಂಡರೂ ವ್ಯರ್ಥವಾಯಿತು. ಆಕೆ ಹೊರಟೇ ಹೋದಳು.

ಇನ್ನೇನು ಮಾಡುವುದು? ಮಹಾದೇವಿಯ ಕೋಪವನ್ನು ಹೇಗೆ ಹೋಗಲಾಡಿಸುವುದು? ಭಾಷಣಕ್ಕೆ ಬರುವೆನೆಂದು ಹೇಳಿಕಳಿಸಿದ್ದಾಗಿದೆ. ಯಾವ ಕಾರಣದಿಂದಲೂ ಅದನ್ನು ರದ್ದುಮಾಡುವಂತಿಲ್ಲ– ಚೆನ್ನವ್ವನ ಗುಂಪಿಗೆ ಅಂಜಿಕೊಂಡು ನಾನು ಬರಲಿಲ್ಲವೆಂದು ಅವರು ಪ್ರಚಾರ ಮಾಡುವುದು ಖಂಡಿತ. ಹೆಂಗಳೆಯರ ಗುಂಪಿಗೆ ಹೆದರುವಾತನೇ ಈ ಸಿದ್ಧವೀರಸ್ವಾಮಿ? ಅವರು ಹೇಗಿರುವರೋ ನೋಡಿಯೆ ಬಿಡಬೇಕು ಒಂದು ಕೈ.

೨೪—೮—೧೯೪ . .

ನಿನ್ನೆ ಸಂಜೆ ಕರಡೆಪ್ಪಶೆಟ್ಟರಿಗೆ ಬರಹೇಳಿಕಳಿಸಿದ್ದೆ. ಇಂದು ಬೆಳಗ್ಗೆ ಬಂದು ಭೆಟ್ಟಿಯಾದರು.

ನಾನು ಭಾಷಣಕ್ಕೆ ಹೋಗುವ ಸಂಗತಿಯನ್ನೆಲ್ಲ ವಿವರಿಸಿ ಹೇಳಿ– “ಇದುವರೆಗೆ ಏನೇನೋ ಆಯಿತು ಸೆಟ್ಟರೆ. ಇನ್ನು ಮೇಲೆ ಊರೆಲ್ಲಾ ಒಕ್ಕಟ್ಟ ನಿಂದಿದ್ದರೆ ಉತ್ತಮ. ಒಂದೇ ಊರಲ್ಲಿ ಎರಡು ಅಕ್ಕನ ಬಳಗಗಳಿರುವುದೂ ಒಳ್ಳೆಯದಲ್ಲ. ನಾವು ಆ ಪಕ್ಷದವರಿಗೆ ತಿಳಿಹೇಳಿ ಎರಡನ್ನೂ ಮತ್ತೆ ಒಂದು ಗೂಡಿಸಲು ಪ್ರಯತ್ನಿಸಬೇಕೆಂದಿದ್ದೇನೆ,” ಎಂದು ಹೇಳಿದೆ.

“ಬಸವಾ....ಬಸವಾ....ಒಳ್ಳೆಯ ವಿಚಾರ ಅಪ್ಪಣೆ ಕೊಡಿಸಿದಿರಿ ಬುದ್ಧೀ, ಹಾಗೇ ಆಗಬೇಕು. ಅಕ್ಕನ ಬಳಗದಲ್ಲಿಯ ಜಗಳದಿಂದಾಗಿ ನನಗೆ ಸ್ವಲ್ಪವೂ ಮನಶ್ಶಾಂತಿಯಿಲ್ಲವಾಗಿದೆ.”

“ನಾವು ಅಲ್ಲಿಗೆ ಭಾಷಣಕ್ಕೆ ಹೋಗುವುದರಿಂದ ಮಹಾದೇವಕ್ಕನವರು ನೊಂದುಕೊಳ್ಳಬಹುದೋ ಏನೋ. ಅವರನ್ನು ಸಮಾಧಾನಪಡಿಸುವ ಜವಾಬ್ದಾರಿ ನಿಮ್ಮದು.”

“ಅಪ್ಪಣೆ ಬುದ್ಧೀ. ನಾನವಳಿಗೆ ಹೇಳುತ್ತೇನೆ. ಬಳಗದ ಅಧ್ಯಕ್ಷತೆಗಾಗಿ ಜಗಳ ಮಾಡುವುದು ಸರಿಯಲ್ಲ. ನಮ್ಮಾಕೆ ನೂರು ವರ್ಷ ಆಳಿದ್ದಾಳೆ. ಇನ್ನು ಮೇಲೆ ಚೆನ್ನವ್ವಕ್ಕನವರೇ ಆಳಿಕೊಳ್ಳಲೇಳಿ.”

"ನಿಮ್ಮವರಿಗೆ ಕೇಳಿ ನೋಡಿ. ಅಂತೂ ಮನಸ್ತಾಪ ಹೋಗಬೇಕು. ಎಲ್ಲರೂ ಒಂದಾಗಿ ಇರಬೇಕು. ಉತ್ಸವಕ್ಕೆ ಆ ಪಕ್ಷದವರೂ ಬರುವಂತಾಗ ಬೇಕು."

"ನನಗೂ ಅದೇ ವಿಚಾರವಿದೆ ಬುದ್ಧೀ," ಎಂದರು ಸೆಟ್ಟರು.

ಇವೊತ್ತು ವೀರಯ್ಯನಿಂದ ಪತ್ರ ಬಂದಿದೆ. ಪ್ರವಾಸದ ಖರ್ಚಿಗೆ ಹತ್ತಿರ ಹಣವಿಲ್ಲವೆಂದೂ ಎರಡುನೂರು ರೂಪಾಯಿಗಳನ್ನು ಕೂಡಲೆ ಕಳಿಸಿದರೆ ಬರುವುದಾಗಿಯೂ ಬರೆದಿದ್ದಾನೆ. ದೊಡ್ಡ ಪುಢಾರಿ ಈತ! ಮುಂಗಡ ಹಣ ಕಳಿಸಬೇಕು ಇವನಿಗೆ!

ನನ್ನ ಹತ್ತಿರ ಹತ್ತು ರೂಪಾಯಿಗಿಂತ ಹೆಚ್ಚು ಹಣವಿಲ್ಲ. ಉತ್ಸವದ ಹಣವೆಲ್ಲ ಇರುವುದು ಖರೇಸೆಟ್ಟಿಯ ಹತ್ತಿರ. ಇನ್ನೂರು ರೂಪಾಯಿ ಬೇಕೆಂದು ಕೇಳಿದಾಗ ಆತ ಮುಖ ಗಂಟು ಹಾಕಿ, "ಯಾತಕ್ಕೆ ಸ್ವಾಮಿಜಿ?" ಎಂದು ಪ್ರಶ್ನಿಸಿದ. ನನಗೆ ಎಲೆಕ್ಟ್ರಿಕ್ ಶಾಕ್ ಹೊಡೆದಂತಾಯಿತು. ನನಗಾಗಿ ನಡೆಯುತ್ತಿರುವ ಉತ್ಸವ....ಅದಕ್ಕಾಗಿಯೆ ಕೂಡಿದ ಹಣ....ನಾನೇ ಕೇಳಿದರೂ ನನಗೇ ಇಂಥ ಪ್ರಶ್ನೆ....ಮೇಲೆ ಮುಖ ಗಂಟು! ನನಗೆ ಭಯಂಕರ ಕೋಪ ಬಂದಿತು. ಆದರೆ–ಖರೇಸೆಟ್ಟಿಯ ಬಗೆಗೆ ಕೋಪಿಸಿಕೊಂಡರೆ ನನ್ನ ಆಟ ವೇನೂ ನಡೆಯದು. ನಿರ್ವಾಹವಿಲ್ಲದೆ ಸುಮ್ಮನಾಗಬೇಕಾಯಿತು. ವೀರಯ್ಯನ ಪತ್ರವನ್ನೇ ಅವನ ಕೈಗೆ ಕೊಟ್ಟೆ. ಸೆಟ್ಟಿ ಅದನ್ನೋದಿಕೊಂಡು–"ಈ ವೀರಯ್ಯ ಯಾರು? ಅವನಿಗೇಕೆ ಹಣ ಕಳಿಸಬೇಕು?" ಎಂದು ಕೇಳಿದ.

"ವೇಶೀಪಟ್ಟಣದ ಪ್ರಸಿದ್ಧ ಪಂಡಿತರಲ್ಲಿ ಅವನೊಬ್ಬ, ಧರ್ಮದ ಬಗ್ಗೆ ನಿರರ್ಗಳವಾಗಿ ಭಾಷಣ ಮಾಡುತ್ತಾನೆ. ನಮ್ಮ ಬಗ್ಗೆ ಬಹಳ ಅಭಿಮಾನ ವಿಟ್ಟುಕೊಂಡಿದ್ದಾನೆ. ಅಂತೆಯೆ ಕರೆಯಿಸುತ್ತಿದ್ದೇವೆ."

"ಸರಿ. ಅವರ ವಿಳಾಸಕ್ಕೆ ಹಣ ಕಳಿಸುವ ವ್ಯವಸ್ಥೆ ಮಾಡುತ್ತೇನೆ," ಎಂದು ನುಡಿದು ಖರೇಸೆಟ್ಟಿ ಆ ಪತ್ರವನ್ನು ಜೇಬಿಗೆ ಸೇರಿಸಿಕೊಂಡು ಹೊರಟು ಹೋದ.

ರುದ್ರದೇವರ ಅಂಗಿಗಳೆಲ್ಲ ಹರಿದುಹೋಗಿದೆಯಂತೆ. ಬಟ್ಟೆ ಹೊಲಿಸಲು ಇಪ್ಪತ್ತು ರೂಪಾಯಿ ಬೇಕೆಂದು ಕೇಳಿದ. ಕಾರಭಾರಿ ಕರಲಿಂಗನ ಹತ್ತಿರ ಬಾಯಿ ತೆರೆಯುಬೇಕಾಯಿತು. ಒಡೆದ ಗಡಿಗೆಯ ಹಾಗೆ ಧ್ವನಿ ತೆಗೆಯುತ್ತ

ಆತನೆಂದ: “ಹಣ? ನನ್ನ ಹತ್ತಿರ ಎಲ್ಲಿದೆ ಹಣ? ಎಲ್ಲಾ ಇರೋದು ನಿಮ್ಮ ಆ ಖರೇಸೆಟ್ಟೆಯ ಹತ್ತಿರ. ಅವನನ್ನೇ ಕೇಳಿ.”

ಇದೆಲ್ಲವೂ ಎಂಥ ಅವಹೇಳನದ ವಿಷಯ. ನನಗೆ ಕಣ್ಣೀರು ಬರುವಂತಾಯಿತು. ಜಗದ್ಗುರು ಪೀಠವೇನೋ ಸಿಕ್ಕಂತಾಯಿತು. ಅದರ ಆಸ್ತಿ ಪಾಸ್ತಿಗಳಿಗೂ ಕೊರತೆಯೇನಿಲ್ಲ. ಹಣಕ್ಕೂ ಕೊರತೆಯಿಲ್ಲ. ಎಲ್ಲಾ ಇದ್ದರೂ ಏನೂ ಇಲ್ಲದಂತೆ! ಜಗದ್ಗುರುವಾಗಲಿರುವ ನನ್ನ ಕೈಯಲ್ಲಿ ಒಂದು ಕಾಸಿನ ಅಧಿಕಾರವೂ ಇಲ್ಲ! ಈಗಲೇ ಇಂಥ ಅವಸ್ಥೆಯಾದರೆ ಮುಂದೆ ಹೇಗೋ ದೇವರೇ ಬಲ್ಲ....

೨೭—೮—೧೯೪ . .

ಅಕ್ಕನ ಬಳಗದ ಸಭೆಯಿಂದ ಈಗತಾನೆ ಹಿಂತಿರುಗಿ ಬಂದೆ. ಅಲ್ಲಿ ಏನಾಗುವುದೋ ಎಂದು ಮನಸ್ಸಿನಲ್ಲಿ ಕಟಿಯುತ್ತಿತ್ತು. ಸುದೈವದಿಂದ ಅಂಥದೇನೂ ಆಗದೆ ಸಭೆ ಶಾಂತವಾಗಿ ಕೊನೆಗೊಂಡಿತು. ನನ್ನ ಉಪನ್ಯಾಸವೂ ಚೆನ್ನಾಗಿಯೇ ಆಯಿತೆಂದೂ ಹೇಳಬಹುದು.

ಅರ್ಥಾತ್ ಚೆನ್ನವ್ವತಾಯಿಯೆ ಅಧ್ಯಕ್ಷತೆ ವಹಿಸಿದ್ದಳು. ಪರವಾಯಿಲ್ಲ–ಚೆನ್ನಾಗಿ ಭಾಷಣ ಮಾಡುತ್ತಾಳೆ. ಮಹಾದೇವಿಗಿಂತಲೂ ಉತ್ತಮವೆಂದೇ ಹೇಳಬೇಕು. ಯಾರಾದರೂ ಬರೆದುಕೊಟ್ಟುದನ್ನು ಪಾಠಮಾಡಿರಲಿಕ್ಕಿಲ್ಲವಷ್ಟೆ, ಎಂದೂ ಅನ್ನಿಸದಿರಲಿಲ್ಲ. ನಾನು ಮಾಡುತ್ತೇನಲ್ಲಾ – ಹಾಗೆಯೆ! ಇದ್ದರೂ ಇರಬಹುದು. ಅವರು ಭಾರಿ ಶ್ರೀಮಂತರು. ಭಾಷಣ ಬರೆದುಕೊಡುವ ಬುದ್ಧಿವಂತರನ್ನೂ ಅವರು ಸುಲಭವಾಗಿ ಕೊಂಡುಕೊಳ್ಳಬಲ್ಲರು.

ನನಗೆ ನಗು ಬರುತ್ತಿದೆ. ಏನು ಒಡವೆಗಳಪ್ಪ ಆ ಅಧ್ಯಕ್ಷಣಿಯ ಮೈಮೇಲೆ! ಅಷ್ಟೊಂದು ಒಡವೆಗಳನ್ನಿಟ್ಟುಕೊಂಡ ಸ್ತ್ರೀಯರನ್ನು ಇದುವರೆಗೂ ಕಂಡಿರಲಿಲ್ಲ ನಾನು. ಅವುಗಳನ್ನೆಲ್ಲ ಹೇಗಾದರೂ ಹೊರುತ್ತಾಳೆಯೊ ತಿಳಿಯದು. ಒಂದು ಮಣ ತೂಕದಷ್ಟಾದರೂ ಇದ್ದೀತು ಬಂಗಾರ. ಉಟ್ಟುಕೊಂಡಿದ್ದ ಸೀರೆಯೂ ಭಾರವಾದುದೇ. ಹಳೆಯ ಕಾಲದ ಪೀತಾಂಬರ, ಮೂಗಿಗೆ ನೇರವಾದ ಬೈತಲೆ. ಹಣೆಯ ಮೇಲೆ ದೊಡ್ಡ ಕುಂಕುಮ. ಮುಖದಲ್ಲಿ ದರ್ಪ – ಅಹಂಕಾರಗಳ ಛಾಯೆ. ಇಂಥವಳು ಅಧ್ಯಕ್ಷಿಣಿ, ವಿರಾಗಿಣಿ ಅಕ್ಕನ ಬಳಗಕ್ಕೆ! ವಿಚಿತ್ರ ಪ್ರಪಂಚ! ವಿಚಿತ್ರ ಸಮಾಜ! ವಿಚಿತ್ರ ಜನರು!

ಬಳಗದ ಕಾರ್ಯದರ್ಶಿನಿ ಪುಷ್ಪಾವತಿ ಹಿರೇಮಠಳದು ಚೆನ್ನವ್ವನಿಗೆ ಎಲ್ಲ ರೀತಿಯಿಂದಲೂ ನಿರುದ್ಧವಾದ ವ್ಯಕ್ತಿತ್ವ. ಚೆನ್ನವ್ವ ಸನಾತನಿಯಾದರೆ ಪುಷ್ಪಾವತಿ ಅತ್ಯಾಧುನಿಕಳು. ಹೊಸ ಫ್ಯಾಷನ್ನಿನ ಮೈಸೂರ್ ಸಿಲ್ಕ್ ಸೀರೆ, ಅರ್ಧ ಎದೆಯನ್ನು ಪ್ರದರ್ಶಿಸುವ ರವಿಕೆ. ಎಡಗಡೆ ತೆಗೆದ ಸೊಗಸಾದ ಬೈತಲೆ. ಮೂಗಿನಲ್ಲಿ ನತ್ತಿಲ್ಲ, ಕಿವಿಗಳಲ್ಲಿ ಓಲೆಗಳಿಲ್ಲ. ಎಡಗೈಯಲ್ಲಿ ಗಡಿಯಾರ, ಬಲಗೈಯಲ್ಲಿ ಒಂದೇ ಒಂದು ಕಪ್ಪು ಬಳೆ. ದಂತದಲ್ಲಿ ಕಡೆದಂಥ ಅಂದವಾದ ಶರೀರ. ಎಂಥವರಲ್ಲಾದರೂ ಮೋಹವನ್ನುಕ್ಕಿಸುವಂಥ ಲಾವಣ್ಯ. ಒಳ್ಳೆಯ ಮಾತುಗಾತಿ. ಪರಿಚಯ ಭಾಷಣ, ವಂದನಾರ್ಪಣೆ ಎರಡನ್ನೂ ಅವಳೇ ಮಾಡಿದಳು. ಬೇರೆಯವರಿಗೆ ಗೊತ್ತಾಗದಂತೆ ಆಗಾಗ ನಾನವಳನ್ನು ಕದ್ದು ನೋಡುತ್ತಿದ್ದೆ. ಒಂದೆರಡು ಸಲ ಅವಳ ನನ್ನ ದೃಷ್ಟಿ ಕೂಡಿದಂತೆ ಕಾಣಿಸಿತು. ಪುಷ್ಪಾವತಿ ಕೊಂಚವೂ ಚಂಚಲಳಾಗಲಿಲ್ಲ. ನನಗೆ ನಿಜಕ್ಕೂ ಆಶ್ಚರ್ಯವೇ ಆಯಿತು. ಇನ್ನೂ ಅವಿವಾಹಿತಳಾಗಿರುವ ಈ ಸುಶಿಕ್ಷಿತ ಯುವತಿ ದೃಢಚಾರಿತ್ರ್ಯದವಳಾಗಿರಲೂ ಸಾಧ್ಯವೇ?

"ಸ್ವಾಮಿಗಳನ್ನು ಕಂಡು ಬಹಳ ಸಂತೋಷವಾಯಿತು," ಎಂದು ನಗು ನಗುತ್ತ ನನ್ನನ್ನು ಬರಮಾಡಿಕೊಂಡಳು ಪುಷ್ಪಾವತಿ.

"ನಿಮ್ಮನ್ನು ಕಂಡು ನಮಗೂ ಆನಂದವಾಯಿತು," ಎಂದು ನಾನು ಅರ್ಥಪೂರ್ಣವಾಗಿ ಹೇಳಿದೆ.

ಆಕೆ ತುಂಟತನದಿಂದ ನಗುತ್ತ – "ಓಹ್ಹೊ. ಆಗಬೇಕಾದ್ದು ಸಹಜವೇ ಅಲ್ಲವೆ?" ಎಂದಳು. ನನಗೆ ಕಕ್ಕಾಬಿಕ್ಕಿಯಾದಂತಾಯಿತು. ಅವಳ ಮಾತಿನಲ್ಲಿ ಎಂಥ ಅರ್ಥವಿದ್ದಿತೆಂಬುದನ್ನು ಅರಿತುಕೊಳ್ಳಲಾಗಲಿಲ್ಲ.

ಅಕ್ಕನ ಬಳಗಗಳೆರಡೂ ಒಂದಾಗಿ ಕೆಲಸ ಮಾಡಬೇಕೆಂದು ನಾನು ಭಾಷಣದಲ್ಲಿ ಸೂಚಿಸಿದ್ದೆ. ಅಧ್ಯಕ್ಷಭಾಷಣದ ಕಾಲಕ್ಕೆ ಆ ಬಗ್ಗೆ ತನ್ನ ಅಭಿಪ್ರಾಯವನ್ನು ತಿಳಿಸುತ್ತ ಚೆನ್ನವ್ವ "ಸ್ವಾಮಿಗಳವರ ಸೂಚನೆ ನನಗಂತೂ ಮಾನ್ಯವಿದೆ. ಆದರೆ ಮೊದಲು ಮಹಾದೇವಮ್ಮನವರು ಒಪ್ಪಬೇಕಲ್ಲ? ಅವರ ಹಟಮಾರಿತನದಿಂದಾಗಿಯೆ ನಾವು ಹೊಸ ಬಳಗ ಸ್ಥಾಪಿಸಬೇಕಾಗಿ ಬಂದದ್ದು," ಎಂದಳು.

"ಮಹಾದೇವಮ್ಮ ಗುರುಗಳ ಮಾತಿಗಾದರೂ ಮನ್ನಣೆ ಕೊಟ್ಟು ತನ್ನ

ಬಳಗವನ್ನು ವಿಸರ್ಜಿಸಿಬಿಡಲಿ. ಈ ಸಮಸ್ಯೆ ತನ್ನಷ್ಟಕ್ಕೆ ತಾನೇ ಪರಿಹಾರ ವಾಗುತ್ತದೆ," ಎಂದಳು ಪುಷ್ಪಾವತಿ.

ಗುಂಡಾಡಯ್ಯನ ಶ್ರೀಮತಿ ಚೆಂಡವ್ವನದೂ ಒಂದು ಚಿಕ್ಕ ಭಾಷಣ ವಾಯಿತು. ಪುಣ್ಯಕ್ಕೆ ಅವಳೂ ತೊದಲಲಿಲ್ಲ. ಗಿಳಿಯೋದಿದ ಹಾಗೆ ಮಾತ ನಾಡಿ ಮುಗಿಸಿದಳು. ನಿಜಕ್ಕೂ ಚೆಂಡವ್ವನೇ ಆಕೆ. ದೊಡ್ಡ ಹಂಡೆಯ ಹಾಗಿದ್ದಾಳೆ. ಏನು ಬೊಜ್ಜು ಅದು. ಅಬ್ಬಬ್ಬ!

"ಊಟಕ್ಕೆ ನಮ್ಮಲ್ಲಿಗೇ ದಯಮಾಡಿಸಿ ಬುದ್ಧೀ," ಎಂದು ಚೆನ್ನವ್ವ ನೇನೋ ಹೇಳಿದಳಾದರೂ ಅವಳ ಆಮಂತ್ರಣ ಸ್ವೀಕರಿಸಲು ನನಗೆ ಧೈರ್ಯ ವಾಗಲಿಲ್ಲ. "ಇವೊತ್ತು ಬೇಡ ತಾಯಿ. ಇನ್ನೊಮ್ಮೆ ಯಾವಾಗಲಾದರೂ ಬರುತ್ತೇವೆ," ಎಂದು ಹೇಳಿ ಬಂದುಬಿಟ್ಟೆ.

ನಾನು ಮೋಟಾರು ಕಾರಿನಲ್ಲಿ ಕುಳಿತುಕೊಂಡ ಬಳಿಕ ಪುಷ್ಪಾವತಿ ಹತ್ತಿರ ಬಂದು ಕೈಮುಗಿದಳು. "ಹೋಗಿ ಬರೋಣವೇ ಪುಷ್ಪಾಕುಮಾರೀ?" ಎಂದು ಕೇಳಿದೆ. ಅವಳು ನಗುತ್ತಾ "ಹೋಗಿ ಬನ್ನಿ. ಮುಂದಿನ ವಾರವೂ ಬರುತ್ತೀರಷ್ಟೆ?" ಎಂದಳು.

"ಪಟ್ಟಾಭಿಷೇಕವಾಗಬೇಕಲ್ಲಮ್ಮ? ಈಗ ಸಮಯವೆಲ್ಲಿರುತ್ತೆ?"

"ಹೌದು. ಹೌದು. ಸಮಯವೆಲ್ಲಿರುತ್ತೆ!" ಎಂದು ಹೇಳಿ ಆಕೆ ಕಿಸ ಕ್ಕೆಂದು ನಕ್ಕಳು. ಆ ಮಾತಿನಲ್ಲಿ ಇನ್ನಾವ ಅರ್ಥ ಅವಿತಿದ್ದಿತೋ ಯಾರು ಬಲ್ಲರು!

ಇಂದು ರಾತ್ರಿ ನನಗೆ ನಿದ್ದೆ ಬರುವಂತೆ ತೋರುವುದಿಲ್ಲ. ನನ್ನ ಮನಸ್ಸ ನ್ನೆಲ್ಲ ಪುಷ್ಪಾವತಿಯೇ ಆಕ್ರಮಿಸಿದಂತಿದೆ. ಯಾವಳೊಬ್ಬ ಸುಂದರ ಯುವತಿ ಯನ್ನು ಮೊದಲನೆಯ ಸಲ ಕಂಡಾಗಲೆಲ್ಲ ಹೀಗೇ ಆಗುತ್ತದೆ ನನಗೆ. ಬಸಪ್ಪ ಸೆಟ್ಟರ ಕುಮಾರಿ ಆ ಸರಸುವನ್ನು ಕಂಡಾಗಲೂ ಹೀಗೇ ಆಗಿತ್ತು. ಸ್ನೇಹಲತಾ, ಜಹಾನಾರಾ, ಮಹಾದೇವಿ—ಯಾವಾಗಲೂ ಹಾಗೆಯೇ.

ನನಗೊಬ್ಬನಿಗೇ ಇದೇನು ಇಷ್ಟೊಂದು ಹೆಣ್ಣಿನ ಹುಚ್ಚು ಎಂದೂ ಆಗಾಗ ಯೋಚನೆ ಬರುತ್ತದೆ. ಇದು ಅನುವಂಶಿಕ ದೋಷವಾಗಿದ್ದರೂ ಇರಬಹುದೋ ಏನೊ. ನನ್ನ ತಂದೆಗೂ ಹೆಣ್ಣಿನ ಹುಚ್ಚು ವಿಪರೀತವಾಗಿದ್ದುದನ್ನು ನಾನೇ ಕಂಡಿಲ್ಲವೆ? ಅವನ ಕೈಗೆ ಸಿಕ್ಕು ನನ್ನ ತಾಯಿ ಅಸ್ತಿಪಂಜರವಾಗಿ ಹೋಗಿದ್ದಳು. ವರ್ಷಕ್ಕೊಂದು ಮಗು ತಪ್ಪದೆ ಜನಿಸುತ್ತಿತ್ತು. ನಮ್ಮೂರ ಹೊಲೆಯರ ರಾಮಿ

ಯನ್ನು ಆತ ಇಟ್ಟುಕೊಂಡ ವಿಷಯ ಎಲ್ಲರಿಗೂ ಗೊತ್ತಿತ್ತು. ನಾನು ಆರೇಳು ವರ್ಷದ ಬಾಲಕನಾಗಿದ್ದಾಗ ಅವನೊಂದಿಗೆ ಅನೇಕ ಸಲ ರಾಮಿಯ ಮನೆಗೆ ಹೋದುದರ ನೆನಪಿದೆ ನನಗೆ. ನನ್ನ ಕಣ್ಣೆದುರಿಗೇ ನನ್ನ ತಂದೆ ಅವಳೊಡನೆ ಸರಸ ಸಲ್ಲಾಪಕ್ಕಾರಂಭಿಸುತ್ತಿದ್ದ.

ಜಂಗಮರಲ್ಲ ಹುಟ್ಟಿದವನಾದರೂ ನನ್ನ ತಂದೆಯಲ್ಲಿ ಜಂಗಮನ ಲಕ್ಷಣ ವೊಂದೂ ಇರಲಿಲ್ಲ. ಅವನಲ್ಲಿದ್ದುದೆಂದರೆ ಅದೊಂದು ಲಿಂಗ. ಅದರ ಮೇಲೆ ಸ್ವಲ್ಪ ನೀರು ಹಾಕಿದ ಹಾಗೆ ಮಾಡಿ, ಹಗಲಿರುಳೂ ದುರಾಚಾರದಲ್ಲಿಯೇ ಮುಳುಗೇಳುತ್ತಿದ್ದ. ಅಂಥವನನ್ನೂ ಜಂಗಮನೆಂದು ಮನ್ನಿಸುತ್ತಿತ್ತು ಮೂರ್ಖ ಸಮಾಜ; ಹಬ್ಬ ಹುಣ್ಣಿವೆಗಳಲ್ಲಿ ಅವನನ್ನು ಬರಮಾಡಿಕೊಂಡು ಅವನ ಪಾದದ ನೀರು ಕುಡಿಯುತ್ತಿತ್ತು. "ಜಂಗಮ ಎಂಥವನಾದರೇನು, ಆತ ಜಂಗಮನೇ. ಆತ ಶಿವಸ್ವರೂಪಿ," ಎಂಬ ಮೂಢ ನಂಬಿಕೆ ನಮ್ಮ ಸಮಾಜದ್ದು. ಸರಿ.... ಜಂಗಮರಾದರೂ ಏಕೆ ಸಚ್ಛೀಲರಾಗಿರಬೇಕು? ಈ ಸಮಾಜದಲ್ಲಿ ಏನು ಮಾಡಿ ದರೂ ನಡೆಯುತ್ತದೆಂಬ ವಿಷಯ ಬಾಲ್ಯದಲ್ಲೇ ಬಿಂಬಿತವಾಯಿತು ನನ್ನ ಚಿತ್ತದ ಮೇಲೆ. ನಾನು ಸ್ವಾಮಿ, ವಿರಕ್ತ, ಹೆಣ್ಣಿನ ಸಂಗ ಮಾಡಬಾರದು ಎಂಬು ದೆಲ್ಲವೂ ಗೊತ್ತು. ಆದರೂ ಮಾಡುತ್ತಿದ್ದೇನೆ....ಹೊಸ ಹೊಸ ಹೆಣ್ಣುಗಳನ್ನು ಬಯಸುತ್ತಿದ್ದೇನೆ.

ಈ ಪುಷ್ಪಾವತಿ ಹಿರೇಮಠ....

೪—೯—೧೯೪..

ಇನ್ನೆರಡು ದಿನಗಳಿಗೆ ಪಟ್ಟಾಧಿಕಾರ.

ಈಗಾಗಲೆ ಆಮಂತ್ರಿತರು ಆಗಮಿಸತೊಡಗಿದ್ದಾರೆ. ನನ್ನ ತಂದೆ ತಾಯಿಗಳು, ಅಣ್ಣತಮ್ಮಂದಿರು, ಬಂಧುಗಳು, ಪಾರ್ವತಿ, ಅವಳ ತಂದೆ, ಗಡಬಡಯ್ಯ, ಅವನ ಮಗ ಷಡಾಕ್ಷರಯ್ಯ; ಗಂಗಾಧರಶಾಸ್ತ್ರಿ, ಲಲಿತಾ, ಪರದೇಶಿ: ಕೆಲವರು ಸ್ವಾಮಿಗಳು ಬಂದಿದ್ದಾರೆ. ಮಠದಲ್ಲೆಲ್ಲ ಗದ್ದಲವೋ ಗದ್ದಲ.

ವೀರಯ್ಯನಿಂದ ಮತ್ತೊಂದು ಪತ್ರ ಬಂದಿದೆ. ಅವನಿಗೆ ಹಣ ಮುಟ್ಟಿಯೇ ಇಲ್ಲವಂತೆ. ಬಹಳ ಕೋಪಿಸಿಕೊಂಡು ಬರೆದಿದ್ದಾನೆ. ಖರೇಸೆಟ್ಟಿ ಕೊನೆಗೂ ಕೈಕೊಟ್ಟ. ಇನ್ನೇನು ಮಾಡುವುದು? ಉಪಾಯವಿಲ್ಲ.

ಮಠದ ಆವಾರದಲ್ಲಿ ಅಂಗಡಿಗಳನ್ನು ಸಿದ್ಧಗೊಳಿಸಲಾಗುತ್ತಿದೆ. ಒಂದು ವಾರವೆಲ್ಲಾ ವ್ಯಾಪಾರಿಗಳಿಗೆ ಹಣದ ಸುರಿಮಳೆ. ಉತ್ಸವಗಳಲ್ಲೂ ಜಾತ್ರೆಗಳಲ್ಲೂ ದೊಡ್ಡ ಲಾಭವೆಂದರೆ ವ್ಯಾಪಾರಸ್ಥರದೇ.

ಉತ್ಸವದ ನಿಮಿತ್ತವಾಗಿ ಗಂಗಾಧರಶಾಸ್ತ್ರಿ 'ಲಿಂಗವೀರ'ದ ವಿಶೇಷಾಂಕವೊಂದನ್ನು ಹೊರಡಿಸಿಕೊಂಡು ಬಂದಿದ್ದಾನೆ. ಕವರಿನ ಮೇಲೆ ನನ್ನ ತ್ರಿವರ್ಣ ಚಿತ್ರ. ಅದರ ಖರ್ಚಿಗೆ ಹಣವನ್ನು ಮೊದಲೇ ವಸೂಲು ಮಾಡಿದ್ದನಂತೆ ಖರೇಸೆಟ್ಟಿಯಿಂದ. ಶಾಸ್ತ್ರಿ ಮಹಾ ಧೂರ್ತ!

ಗುಂಡಾಡಯ್ಯನದೂ ಒಂದು ವಿಶೇಷ ಸಂಚಿಕೆ ಹೊರಟಿದೆ. ಅದನ್ನು ನೋಡಿ ತಮಾಷೆ ಮಾಡಿ ನಕ್ಕುಬಿಟ್ಟ ಗಂಗಾಧರಶಾಸ್ತ್ರಿ.

ಮಠದಲ್ಲಿ ಅಡಿಯಿರಿಸಿದಾಗಿನಿಂದ ಗಡಬಡಯ್ಯ ಒಂದೇಸಮನೆ ಗಡಿಬಿಡಿ ನಡಸಿದ್ದಾನೆ. ಕುಳಿತಲ್ಲಿ ಕೂಡ್ರಲೊಲ್ಲ, ನಿಂತಲ್ಲಿ ನಿಲ್ಲಲೊಲ್ಲ. "ಉತ್ಸವದ ಕಾಲಕ್ಕೆ ನನ್ನ ಮಗನ ಮದುವೆಗೆಂದು ಸಾವಿರ ರೂಪಾಯಿ ಕೊಟ್ಟುಬಿಡಬೇಕೋ ಮರಿ, ಈ ಸಲ ನಾನೇನು ಬರಿಗೈಯಲ್ಲಿ ಹೋಗುವವನಲ್ಲ," ಎಂದು ಮತ್ತೆ ಮತ್ತೆ ಕಿರಿಚುತ್ತಲೇ ಇದ್ದಾನೆ.

ನನ್ನ ತಮ್ಮ ಚಿಕ್ಕವೀರಯ್ಯನ ಪಿರಿಪಿರಿಯೂ ಸಾಗಿದೆ. "ಉತ್ಸವಕ್ಕೆ ಮೂವತ್ತು ಸಾವಿರ ಕೂಡಿಸಿದ್ದಾರಂತೆ. ಅದರಲ್ಲಿ ಎರಡು ಸಾವಿರವನ್ನಾದರೂ ಉಳಿಸಿ ನನಗೆ ಕೊಡಬೇಕು. ಈ ಸಲ ಒಂದು ದೊಡ್ಡ ಏಜನ್ಸಿ ಹಿಡಿಯಬೇಕಾಗಿದೆ," ಎಂದು ಗಂಟುಬಿದ್ದಿದ್ದಾನೆ. ಗಂಟೆಲ್ಲವೂ ಖರೇಸೆಟ್ಟಿಯ ಹತ್ತಿರ ಇರುವ ವಿಷಯ ಈ ಮೂರ್ಖನಿಗೇನು ಗೊತ್ತು!

ನನ್ನ ಕಿರಿಯ ತಮ್ಮ ಸಂಗಯ್ಯನಂತೂ ಹರಕು ಮುರಕು ಇಂಗ್ಲೀಷಿನಲ್ಲಿ ನನ್ನನ್ನು ದಬಾಯಿಸುತ್ತಿದ್ದಾನೆ. "ಮುಂದಿನ ಸಲ ನಾನು ಕಾಲೇಜಿಗೆ ಹೋಗಬೇಕೋ ಬೇಡವೊ? ಕಾಲೇಜ್ ಅಂದರೆ ಹೈಸ್ಕೂಲಲ್ಲ, ಎಂಟು ಹತ್ತು ಸೂಟು ಹೊಲಿಸಬೇಕಾಗುತ್ತೆ. ಸಾವಿರಾರು ರೂಪಾಯಿ ಖರ್ಚು ಬರುತ್ತದೆ. ಅದಕ್ಕೆಲ್ಲ ಏನು ವ್ಯವಸ್ಥೆ ಮಾಡುತ್ತೀ?" ನಾನೇನು ವ್ಯವಸ್ಥೆ ಮಾಡಲಿ ನನ್ನ ತಲೆ? ಇವನು ಮಾತಾಡುವ ರೀತಿಯನ್ನು ನೋಡಿದರೆ ಸೂಟು ಹಾಕಿಕೊಂಡು ಮೆರೆಯುವುದಕ್ಕಾಗಿಯೆ ಈತ ಕಾಲೇಜಿಗೆ ಹೋಗಲಿರುವನೊ ಅನ್ನಿಸುತ್ತದೆ. ಅವನನ್ನು ಕಾಲೇಜಿಗೆ ಕಳಿಸುವೆನೆಂದು ನಾನೇನು ಪ್ರಮಾಣಪತ್ರ ಬರೆದು ಕೊಟ್ಟಿದ್ದೇನೆಯೆ? ಎಂಥ ಅಪ್ಪಟ ಮೂರ್ಖ! ಒಡಹುಟ್ಟಿದ ತಮ್ಮನಾದುದ

ರಿಂದ ಸುಮ್ಮನಿದ್ದೇನೆ. ಬೇರೆಯವರಾರಾದರೂ ಹೀಗೆ ಮಾತಾಡಿದ್ದರೆ ಕೆನ್ನೆಗೆ ಹೊಡೆದು ಕಳಿಸುತ್ತಿದ್ದೆ.

೫—೯—೧೯೪..

ಇಂದು ಬೆಳಗಿನ ಗಾಡಿಯಲ್ಲಿ ಆಮಂತ್ರಿತರ ಹಿಂಡಿಗೆ ಹಿಂಡೇ ಬಂದಿದೆ.

ದೂರ್ವಾಸ ಸೆಟಗೌಡ, 'ತಲೆಕಾಯಿ' ಗೊಬ್ಬಣ್ಣ, 'ಮಡಿವಂತಿ'ಯ ನರಿರಾಯ, ಇನ್ನೂ ಹಲವರು.

ಬಂದವರನ್ನೆಲ್ಲ ಒಮ್ಮೆಲೆ ಕೊಟಡಿಗೆ ಸೇರಿಸದೆ, ಒಬ್ಬೊಬ್ಬರನ್ನೇ ಬರ ಮಾಡಿಕೊಂಡು ಮಾತನಾಡಿಸಿ ಕೆಳಗಡೆ ಕಳಿಸುತ್ತಿದ್ದೇನೆ – ಪ್ರತಿಯೊಬ್ಬರ ಜತೆಗೂ ಖಾಸಗಿಯಾಗಿ ಮಾತಾಡಲು ಇದರಿಂದ ಅನುಕೂಲವಾಗಿದೆ. ಬಾಗಿಲ ಬಳಿ ರುದ್ರದೇವರು ಕುಳಿತಿದ್ದು ಒಬ್ಬೊಬ್ಬರನ್ನೇ ಮೇಲಕ್ಕೆ ಬಿಡುತ್ತಾನೆ. ಮಂತ್ರಿಯ ಹಾಗೆ ದರಬಾರು ನಡೆಸಿದ್ದೇನಲ್ಲಾ – ಎಂದು ನನಗೆ ಒಳಗೊಳಗೇ ನಗು.

ಎಲ್ಲರಿಗೂ ಮೊದಲು ಸೆಟಗೌಡನನ್ನು ಬರಮಾಡಿಕೊಂಡೆ. ಅವನನ್ನು ನಾನು ನೋಡುವುದು ಇದೇ ಮೊದಲು. ಆಸಾಮಿ ವೃದ್ಧಾವಸ್ಥೆಗೀಡಿರಬಹು ದೆಂದು ನನಗನ್ನಿಸಿರಲಿಲ್ಲ. ವಯಸ್ಸಾಗಿದೆ. ತಲೆಗೂದಲು, ಗಡ್ಡ ಮೀಸೆ ಬೆಳ್ಳ ಗಾಗಿವೆ. ಜಪಾನ್ ಖಾದಿಯ ಬಟ್ಟೆಗಳನ್ನು ಧರಿಸುತ್ತಾನೆ. ಮಾತು ಬಲು ಒರಟು. ಧ್ವನಿ ಕರ್ಕಶ. ಮೂವತ್ತು ವರ್ಷಗಳಿಂದ ಪತ್ರಿಕೆ ಹೊರಡಿಸುತ್ತ ಬಂದು ಪಾಪರಾದ ಕತೆಯನ್ನೆಲ್ಲ ಕೋಪದಿಂದ ಹೇಳಿಕೊಂಡ. ನಾನು ಮರುಕ ಸೂಚಿಸಿದೆ. ಬ್ರಾಹ್ಮಣರನ್ನು ಬೈದು ಬಾಯ್ತುಂಡಿ ತೀರಿಸಿಕೊಂಡು, ಬ್ರಾಹ್ಮಣ ರೊಂದಿಗೆ ಸಹಕರಿಸುವ ವೀರಶೈವರನ್ನೂ ಉದ್ಧಾರ ಮಾಡಿದ. 'ಒಂದೇ ಕರ್ನಾ ಟಕ' ಪತ್ರಿಕೆಯವರನ್ನೆಲ್ಲ ದರೋಡೆಕೋರರ ಗುಂಪಿಗೆ ಸೇರಿಸಿದ. 'ಏಕಕನ್ನಡ'ದ ವಿಷಯವನ್ನೆತ್ತಿ ಕೀಟಲೆ ಕುಟ್ಟಪ್ಪನನ್ನೂ ಟೀಕಿಸಿ ಅಪ್ಪಳಿಸಿದ. "ಹುಡುಗ ಮುಂಡೇದು, ಇನ್ನೂ ಮಾರಿಯ ಮ್ಯಾಲೆ ಮೀಸೆ ಬಂದಿಲ್ಲ, ಸಂಪಾದಕನಾದ ನಂತೆ. ಅವನಂಥ ಸಂಪಾದಕನೇ ಇಲ್ಲವಂತೆ ಕರ್ನಾಟಕದೊಳಗೆ. ಮೂವತ್ತು ವರ್ಷಗಳಿಂದ ಸಂಪಾದಕರಾಗಿರುವ ನಮ್ಮಂಥವರೇ ಅಳುತ್ತ ಕೂತಿದ್ದೇವೆ. ಇನ್ನು ಇಂಥಾ ಬಚ್ಚಾಗಳನ್ನಾರು ಕೇಳಬೇಕು!" ಎಂದೆಲ್ಲ ಕೂಗಾಡಿದ. ಈತನನ್ನು ಕರೆಯಿಸುವ ದುರ್ಬುದ್ಧಿ ನನಗೆ ಏಕೆ ಬಂದಿತೋ ಏನೋ. ಸಾರ್ವ

ಜನಿಕ ಭಾಷಣದಲ್ಲೂ ಈತ ಇಂಥ ಮಾತುಗಳನ್ನೇ ಉಪಯೋಗಿಸಿದರೆ ದೇವರೇ ಕಾಪಾಡಬೇಕು.

ಪತ್ರಿಕಾಕರ್ತರನ್ನು ಬೈದು ಮುಗಿದ ತರುವಾಯ ಸೆಟಗೌಡ ಸ್ವಾಮಿಗಳನ್ನು ಟೀಕಿಸತೊಡಗಿದ. "ಊರೂರಿಗೆ ಮೂರು ನಾಲ್ಕು ಜನ ಸ್ವಾಮಿಗಳಿದ್ದಾರೆ ನಮ್ಮಲ್ಲಿ. ಆಸ್ತಿಪಾಸ್ತಿಗೂ ಕಡಿಮೆಯಿಲ್ಲ. ಸಮಾಜದ ಹಿತಕ್ಕಾಗಿ ದುಡಿಯುತ್ತಿರುವ ನಮ್ಮಂಥವರಿಗೆ ಹಣಸಹಾಯ ಮಾಡಬೇಕಾದುದು ಇವರ ಕರ್ತವ್ಯ. ಅದನ್ನು ಮರೆತು ರಂಡಿಯರನ್ನಿಟ್ಟುಕೊಂಡು ಹಣ ಹಾಳು ಮಾಡುತ್ತಿದ್ದಾರೆ. ನಮ್ಮ ಲಿಂಗಾಡಿಗಳಿಗೆ ಬುದ್ಧಿಯಿಲ್ಲ. ಇಂಥ ಸ್ವಾಮಿಗಳಿಗೂ ಸಾಷ್ಟಾಂಗ ಹಾಕುತ್ತಾರೆ," ಎಂದು ಆತ ಆವೇಶದಿಂದ ನುಡಿಯುತ್ತಲೂ ನನಗೆ ಭಯವಾಗದಿರಲಿಲ್ಲ–'ಜನಪದ'ದ ಆ ಸಂಚಿಕೆ ಇವನ ಕಣ್ಣಿಗೆ ಬಿದ್ದಿಲ್ಲವಷ್ಟೇ–ಎಂದುಕೊಂಡು. ನನ್ನ ಸುದೈವ. ಸೆಟಗೌಡ ನನ್ನ ಮೇಲೇನೂ ಹರಿಹಾಯಲಿಲ್ಲ. "ನೀವಾದರೂ ಒಬ್ಬರು ಆದರ್ಶ ಸ್ವಾಮಿಗಳಾಗಬೇಕು ಬುದ್ಧೀ. ನಮ್ಮಂಥ ಸಮಾಜಸೇವಕರಿಗೆ ಮುಕ್ತಹಸ್ತದಿಂದ ನೆರವಾಗಬೇಕು," ಎಂದಿಷ್ಟು ಹೇಳಿದ.

"ಆಗಲಿ, ಆಗಲಿ," ಎಂದೇನೋ ನನ್ನ ನಾಲಿಗೆ ನುಡಿಯಿತು. "ಹಸ್ತ ಮುಕ್ತವೇ ಆಗಿದೆಯಲ್ಲ. ಒಂದು ಕಾಸೂ ಇಲ್ಲ ಅದರಲ್ಲಿ," ಎಂದು ಒಳದನಿ ಗುಣುಗುಣಿಸಿತು.

"ಆ ಬಾವೀಕಪ್ಪೆಯೂ ಬಂದೈತಲ್ಲ? ಅವನನ್ನೇಕೆ ಕರೆಸಿದಿರಿ?" ಎಂದು ಪ್ರಶ್ನಿಸಿದ ಸೆಟಗೌಡ.

"ಬಾವೀಕಪ್ಪೆ?" ನಾನು ವಿಸ್ಮಯದಿಂದ ಕೇಳಿದೆ.

"ಅಂದರೆ ನರಿರಾಯ. ನಮ್ಮೂರಲ್ಲೆಲ್ಲ ಅವನಿಗೆ ಬಾವೀಕಪ್ಪೆ ಎಂದೇ ಹೆಸರಿದೆ."

"ಹೀಗೋ? ಅದೇಕೆ?"

"ಏಕೋ ಏನೋ ನನಗೆ ತಿಳಿಯದು. ಅಂತೂ ಅವನನ್ನು ಹಾಗೆ ಕರೆಯುವುದು ಮಾತ್ರ ನಿಜ. ವೀರಶೈವರ ಉತ್ಸವದಲ್ಲಿ ಈ ಹಾರುವರ ಕೆಲಸವೇನು? ಇವರನ್ನು ಕರೆದವರಾರು?"

ನನಗೆ ನಿಜವಾಗಿಯೂ ಭಯವಾಯಿತು. ಸೆಟಗೌಡನ ಕೋಪವನ್ನು ನೋಡಿದರೆ ಆತ ನನ್ನನ್ನು ಹೊಡೆಯಲು ಹಿಂದಾಗುವವನಲ್ಲ ಎಂದೆನ್ನಿಸುತ್ತಿತ್ತು. "ಸ್ವಾಗತ ಸಮಿತಿಯವರು ಯಾರ್ಯಾರನ್ನೋ ಕರೆಸಿದ್ದಾರೆ ಮಹರಾಯ. ಇದೆಲ್ಲಾ

ನನಗೇನೂ ಸಂಬಂಧವಿಲ್ಲ," ಎಂಬುದಾಗಿ ಸುಳ್ಳು ಹಾರಿಸಿ ಅವನಿಂದ ತಪ್ಪಿಸಿಕೊಂಡೆ. "ಇರಲಿ, ನೋಡುತ್ತೇನೆ," ಎನ್ನುತ್ತಾ ಸೆಟಗೌಡ ಸ್ನಾನಕ್ಕೆ ಹೋದ. "ಬದುಕಿಕೊಂಡೆ ಬಡಜೀವವೇ," ಎನ್ನುತ್ತಾ ನಾನು ಗಾಳಿ ಹಾಕಿಕೊಳ್ಳತೊಡಗಿದೆ.

"ನಮಸ್ತೆ ಸ್ವಾಮಿಜಿ."

ನಾನು ಕತ್ತೆತ್ತಿ ನೋಡಿದೆ. ದೇಶಾವರಿ ನಗೆ ತುಳುಕಿಸುತ್ತ ನರಿರಾಯ ಬರುತ್ತಿದ್ದ. ಹೆಂಡದ ಅಮಲಿನಲ್ಲಿರುವವರಂತೆ ಅವನ ಶರೀರ ಅತ್ತ ಇತ್ತ ಹೊರಳಾಡುತ್ತಿತ್ತು.

ನರಿರಾಯನನ್ನು ಈ ಮೊದಲು ಮೂರು ನಾಲ್ಕು ಬಾರಿ ನೋಡಿದ್ದೆ. ಆಗ ನಾನಿನ್ನೂ ಸಣ್ಣ ಸ್ವಾಮಿ. ಕೈಯಲ್ಲಿ ಕಾಸಿರಲಿಲ್ಲ. ಅಂತೆಯೆ ಆಗ ನನ್ನನ್ನು ಯಾರೂ ಕಣ್ಣು ತೆರೆದು ನೋಡುತ್ತಿರಲಿಲ್ಲ. ಆಗ ಕೆಲವು ದಿನ ನನಗೆ ಲೇಖನದ ಹುಚ್ಚೂ ಹಿಡಿದಿತ್ತು. ಒಂದೆರಡು ಕವಿತೆ ಬರೆದು 'ಮಿಡಿವಂತಿ' ಆಫೀಸಿಗೆ ಹೋಗಿ ನರಿರಾಯನನ್ನು ಸ್ವತಃ ಕಂಡು ಅವುಗಳನ್ನು ಕೊಟ್ಟಿದ್ದೆ. ಆತ ಕುತ್ಸಿತ ನಗೆ ಬೀರಿ, ಅವುಗಳ ಮೇಲೆ ದೃಷ್ಟಿಯನ್ನೂ ಚೆಲ್ಲದೆ ಫೈಲಿನಲ್ಲಿ ಮಡಗಿಸಿಬಿಟ್ಟಿದ್ದ. ಮೂರು ತಿಂಗಳು ಕಳೆದರೂ ನನ್ನ ಕವಿತೆಗಳು ಪ್ರಕಟನಾಗಿರಲಿಲ್ಲ. ಆ ಬಗ್ಗೆ ವಿಚಾರಿಸಲೆಂದು ಮತ್ತೊಮ್ಮೆ ಹೋಗಿದ್ದೆ. ಆತ ಮತ್ತೆ ಕುತ್ಸಿತ ನಗೆ ನಕ್ಕು – "ನಿಮ್ಮ ಕವಿತೆಗಳೆಂದಿರಾ? ಇನ್ನೂ ನಾನು ಅವುಗಳನ್ನು ಓದಿ ನೋಡಿಯೇ ಇಲ್ಲ. ಕೊಂಚವೂ ಸಮಯವಿಲ್ಲ. ಏನು ಮಾಡುವುದು?" ಎಂದು ಹೇಳಿದ್ದ. ನನಗೆ ಭಯಂಕರ ಸಿಟ್ಟು ಬಂದಿತ್ತು. ಆದರೂ ಹೇಗೋ ಅದನ್ನು ತಡೆಹಿಡಿದು, "ಯಾವಾಗ ನೋಡುತ್ತೀರಿ?" ಎಂದು ಕೇಳಿದೆ. "ಬಿಡುವಾದಾಗ," ಎಂದು ಆತ ಉತ್ತರವಿತ್ತಿದ್ದ. ನಾನು ಮತ್ತೊಂದು ಮಾತಾಡದೆ ಎದ್ದು ಬಂದಿದ್ದೆ. ಅನಂತರ ಒಂದೆರಡು ಸಲ ಹಾದಿಯಲ್ಲಿ ಭೆಟ್ಟಿಯಾದಾಗ ಆತ ನನ್ನ ಕಡೆ ಹೊರಳಿ ಸಹ ನೋಡಿರಲಿಲ್ಲ. ನಾನು ಕೈಯೆತ್ತಿ ವಂದಿಸಿದರೂ ಆತ ನನ್ನನ್ನು ಗಮನಿಸಿರಲಿಲ್ಲ. "ಸಂಪಾದಕನೆಂದು ಇಷ್ಟು ಸೊಕ್ಕು ಈ ಮಗನಿಗೆ!" ಎಂದು ಮನಸ್ಸಿನಲ್ಲೇ ಅವನನ್ನು ಬೈದು ಸಮಾಧಾನಪಟ್ಟುಕೊಂಡು ಸುಮ್ಮನಾಗಿದ್ದೆ. ಇನ್ನು ಮುಂದೆ ಎಂದೆಂದೂ ಕವಿತೆ ಬರೆಯಬಾರದೆಂದು ಅಂದೇ ಪ್ರತಿಜ್ಞೆ ಮಾಡಿದ್ದೆ.

ಅಂದು ನನ್ನನ್ನು ಅಷ್ಟು ತುಚ್ಛರೀತಿಯಿಂದ ಕಂಡಿದ್ದ ಅದೇ ನರಿರಾಯನೇ ಇಂದು ಓರೇಕೋರೆ ನಗರದಿಂದ ಇಲ್ಲಿಯತನಕ ಬಂದು, ಕೈಕಟ್ಟಿ, ನನ್ನ ದಾಸಾನುದಾಸನಂತೆ 'ನಮಸ್ತೆ' ಎನ್ನುತ್ತಿದ್ದಾನೆ!

ಹಿಂದಿನ ಸೇಡನ್ನು ತೀರಿಸಿಕೊಳ್ಳಬೇಕೆಂಬ ದುಷ್ಟ ಬಯಕೆ ನನ್ನನ್ನಾವರಿಸಿತು. ಅವನ 'ನಮಸ್ತೆ'ಯನ್ನು ನಾನು ಸ್ವೀಕರಿಸಲಿಲ್ಲ; ಮುಖದ ಮೇಲೆ ನಗೆಯನ್ನೂ ಮೂಡಿಸಲಿಲ್ಲ, 'ಕೂತುಕೊಳ್ಳಿರಿ' ಎಂದೂ ಹೇಳಲಿಲ್ಲ. ಆತ ತಾನೇ ನೆಲದ ಮೇಲೆ ಕುಳಿತುಕೊಂಡ. ಅವನ ಕೈಗಳೆರಡೂ ಒಂದೇ ಸಮನೆ ಕಂಪಿಸುತ್ತಿದ್ದುವು. ಆತ ಹೊದೆದಿದ್ದ ಖಾದಿಯ ಶಾಲೂ ಹಾಗೆ ಹೀಗೆ ಹೊಯ್ದಾಡುತ್ತಿತ್ತು.

"ಸ್ವಾಮಿಜಿಯವರು ಆರೋಗ್ಯವೇ?" ಎಂಬುದಾಗಿ ಮೈಸೂರು ಥಾಟಿಯಲ್ಲಿ ಆರಂಭಿಸಿದ ನರಿರಾಯ.

"ಆರೋಗ್ಯಕ್ಕೇನು ಧಾಡಿ? ಗಟ್ಟಿಮುಟ್ಟಾಗೇ ಇದ್ದೇವೆ," ಎಂದು ನಾನು ಧಾರವಾಡದ ಥಾಟಿಯಲ್ಲಿ ಉತ್ತರವಿತ್ತೆ.

ಆತ ಗಹಗಹಿಸಿ ನಗುತ್ತ – "ಅಂದು ತಾವು ನಮ್ಮ ಆಫೀಸಿಗೆ ಬಂದಾಗ ಇಷ್ಟು ಆರೋಗ್ಯವಿರಲಿಲ್ಲವೆಂಬುದು ನಿಜ," ಎಂದ.

"ನಿಮ್ಮ ಆಫೀಸಿಗೆ ಯಾರು ಬಂದಿದ್ದರು?" ಎಂದು ನಾನು ಅವನ ಮಾತನ್ನು ಕತ್ತರಿಸಿಹಾಕಿದೆ.

"ಸ್ವಾಮಿಜಿಯವರಿಗೆ ಮರೆವಾಗಿರಬಹುದು...."

"ಸ್ವಾಮಿಜಿಯವರಿಗೆ ಯಾವುದೂ ಮರೆವಾಗುವುದಿಲ್ಲ," ಎಂದು ನಾನು ಗಂಭೀರವಾಗಿ ಹೇಳಿದೆ.

"ತಾವು ಇಂಥಾ ಮಹಾಪೀಠವನ್ನೇರಿದ್ದು ಪರಮಸಂತೋಷದ ವಿಚಾರ."

ನಾನು ಮೌನವಾಗಿದ್ದೆ.

"ಇಂಥ ಉತ್ಸವಗಳಿಗೆ ಸಾಮಾನ್ಯವಾಗಿ, ನಮ್ಮಂಥ ಅನ್ಯಜಾತೀಯರನ್ನು ಯಾರೂ ಕರೆಯಿಸುವುದಿಲ್ಲ. ತಾವು ಉದಾರ ಬುದ್ಧಿಯಿಂದ...."

"ಆಮಂತ್ರಣ ಕೊಟ್ಟವರು ಸ್ವಾಗತ ಸಮಿತಿಯವರು."

"ತಮ್ಮ ಸೂಚನೆಯ ಪ್ರಕಾರವೇ ಕೊಟ್ಟಿರಲು ಸಾಕು. ಲಿಂಗಾಯತರಲ್ಲಿ ತಮ್ಮಂಥ ವಿಶಾಲದೃಷ್ಟಿಯುವರು ಹೆಚ್ಚು ಜನರಿಲ್ಲ."

"ಏನೆಂದಿರಿ!" ನಾನು ಏರಿದ ಧ್ವನಿಯಲ್ಲಿ ನುಡಿದೆ.

ಅದರೊಡನೆ ಅವನ ಶರೀರವೆಲ್ಲಾ ನಡುಗತೊಡಗಿತು. ಆತ ವಿಚಿತ್ರವಾಗಿ ಕೈ ತಿರುವುತ್ತ ನುಡಿದ: "ಹಾಗಲ್ಲ ಸ್ವಾಮಿಜಿ....ಹಾಗೇನೂ ಅಲ್ಲ.... ಅಂದರೆ ಹೀಗೆ....ಅಂದರೆ....ನನ್ನ ಅಭಿಪ್ರಾಯ....ತಾವು....ತಾವು...."

ಆತನ ಶೋಚನೀಯ ಅವಸ್ಥೆಯನ್ನು ಕಂಡು ನನಗೆ ಕನಿಕರ ಬಂದಿತು. ಧ್ವನಿಯನ್ನು ಕೊಂಚ ಮೃದುವಾಗಿಸಿ – "ಪ್ರವಾಸದಲ್ಲಿ ಆಯಾಸವಾಗಿರಬಹುದು. ಸ್ನಾನ ಊಟ ತೀರಿಸಿಕೊಂಡು ಸ್ವಲ್ಪ ವಿಶ್ರಾಂತಿ ಪಡೆದ ಬಳಿಕ ಬನ್ನಿ," ಎಂದು ಹೇಳಿ ಆತನನ್ನು ಕಳಿಸಿದೆ. ಪಾಪ, ಮುದುಕನಾಗಿದ್ದಾನೆ, ಆತನನ್ನು ಪೀಡಿಸಬಾರದಾಗಿದ್ದಿತು – ಎಂದೂ ಅನ್ನಿಸದಿರಲಿಲ್ಲ.

ಆತ ಕೆಳಗೆ ನಡೆಯುತ್ತಲೂ 'ತಲೆಕಾಯಿ' ಗೊಬ್ಬಣ್ಣ ಧೋತರದ ಕಚ್ಚೆಯನ್ನು ಮೇಲಕ್ಕೆತ್ತಿಕೊಳ್ಳುತ್ತ ಪ್ರವೇಶಿಸಿದ. ಅದೊಂದು ಕೆಟ್ಟ ಚಟ ಗೊಬ್ಬಣ್ಣನದು. ಯಾವಾಗಲೂ ಧೋತರವನ್ನು ಮೇಲಕ್ಕೇರಿಸಿಕೊಳ್ಳುತ್ತಿರುತ್ತಾನೆ. ಅವನದೂ ನನ್ನದೂ ಅನೇಕ ವರ್ಷಗಳ ಪರಿಚಯ. ಎಷ್ಟೋ ಸಲ ನಾನು ಗೊಬ್ಬೂರಿಗೆ ಹೋಗಿದ್ದಾಗಲೆಲ್ಲ ಅವನಲ್ಲೇ ಉಳಿದುಕೊಂಡಿದ್ದೆ. ಅವನೂ ಜಂಗಮನೇ ಆದರೂ ನನಗೆ ಊಟಕ್ಕಿಡುವುದರಲ್ಲಿ ಎಂದೂ ಹಿಂದೆ ಮುಂದೆ ನೋಡಿದವನಲ್ಲ. ಹಿಂದೆ ಆತ ಬ್ರಿಟಿಷರ ಪಕ್ಷ ವಹಿಸಿ ಬರೆಯುತ್ತಿದ್ದ. ನಲವತ್ತೆರಡರ ಚಳವಳಿಯ ಕಾಲಕ್ಕೆ ಹುಡುಗರು ಅವನನ್ನು 'ಗೊಬ್ಬೂರಿನ ಗೊಬೆಲ್ಸ್' ಎಂದೂ ಕರೆಯತೊಡಗಿದ್ದರು. ೪೫–೪೬ರ ಸುಮಾರಿಗೆ ಗೊಬ್ಬಣ್ಣ ಬಣ್ಣ ಬದಲಿಸಿ ಖಾದಿ ಹಾಕಿಕೊಂಡು ಕಾಂಗ್ರೆಸ್ಸಿಗನಾಗಿಬಿಟ್ಟ. ಕಾಂಗ್ರೆಸ್ಸಿಗರೂ ಬಹಳ ಜಾಣರು; ಗೊಬ್ಬಣ್ಣನನ್ನು ಹತ್ತಿರ ಸೇರಿಸದೆ ದೂರದಲ್ಲೇ ಇಟ್ಟುಬಿಟ್ಟಿದ್ದಾರೆ.

"ಪ್ರವಾಸ ಸುಖಕರವಾಗಿ ಆಯಿತೇ ಗೊಬ್ಬಣ್ಣನವರೇ?"

"ಏನು ಸುಖವೋ ಬಿಡಿರಿ. ನಿಲ್ಲುವುದಕ್ಕೆ ಕೂಡಾ ಜಾಗ ಸಿಗಲಿಲ್ಲ. ಗೊಬ್ಬೂರು ಸ್ಟೇಶನ್ ಮೇಲೆ ಸೆಟಗೌಡ, ನರಿರಾಯ ಬೇರೆ ಗಂಟುಬಿದ್ದರು. ಅವರೊಂದಿಗೆ ಹಾಳು ಹರಟೆ ಹೊಡೆಯುತ್ತ ಬರಬೇಕಾಯಿತು. ಅಲ್ಲಾ ಸ್ವಾಮಿಜಿ, ಈ ಬಾವೀಕಪ್ಪೆಯನ್ನೇಕೆ ಕರೆಸಿದಿರಿ?"

"ಇನ್ಯಾತಕ್ಕೆ, ಕುಪ್ಪಳಿಸಲಿಕ್ಕೇ ತಾನೆ!" ಎಂದು ನುಡಿದು ನಾನು ನಗತೊಡಗಿದೆ. "ಬಾವೀಕಪ್ಪೆ ಅಂತ ಅವನನ್ನು ಯಾಕೆ ಕರೆಯುತ್ತಾರೆ ಗೊಬ್ಬಣ್ಣ?"

“ಅದೇ! ಅದು ಹೀಗೆ. ಅವನಿಗೆ ಇಂಗ್ಲೀಷು ತಿಳಿಯುವುದಿಲ್ಲವೆಂಬುದು ನಿಮಗೆ ಗೊತ್ತಿರಬಹುದು. ಆಧುನಿಕ ಕತೆ, ಕಾದಂಬರಿ, ಕವಿತೆ ಹೇಗಿವೆಯೆಂಬುದು ಅವನಿಗೆ ಹೇಗೆ ಗೊತ್ತಾಗಬೇಕು? ಇನ್ನೂ ಪಂಪ ರನ್ನ ಜನ್ನರ ಕಾಲವೇ ಇದೆಯೆಂದು ಆತ ತಿಳಿದಿದ್ದಾನೆ. ಆತ ಬರೆಯುವುದೂ ಅಂಥ ಹಳಸನ್ನೇ ಅಂತೆಯೆ, ಆಧುನಿಕ ತಂತ್ರದಿಂದೊಡಗೂಡಿದ ನವ್ಯ ಕಾವ್ಯ, ನವ್ಯ ಕತೆ ಕಾದಂಬರಿಗಳನ್ನು ಕಂಡಾಗಲೆಲ್ಲ ಅಸೂಯೆಯಿಂದ ತಳಮಳಿಸುತ್ತಾನೆ. ತರುಣ ಸಾಹಿತಿಗಳೆಲ್ಲ ಇಂಗ್ಲೀಷ್ ಸಾಹಿತ್ಯವನ್ನು ಮನಃಪೂರ್ವಕವಾಗಿ ಅಭ್ಯಸಿಸಬೇಕೆಂದು ಒಬ್ಬರು ಪ್ರೊಫೆಸರರು ಹೇಳಿದಾಗ ಈತ ಸಿಡಿದೆದ್ದು – ಇಂಗ್ಲೀಷಿನಲ್ಲೇನಿದೆ? ಕನ್ನಡದಲ್ಲೇನಿಲ್ಲ? ನಾವು ಇಂಗ್ಲೀಷನ್ನು ಯಾಕೆ ಓದಬೇಕು, ಇದು ನಮ್ಮ ಸ್ವಾಭಿಮಾನಕ್ಕೆ ಕುಂದು – ಎಂದೆಲ್ಲಾ ಗೀಚಿದ ತನ್ನ ಪತ್ರಿಕೆಯಲ್ಲಿ. ಆ ಪ್ರೊಫೆಸರರು ಅದಕ್ಕುತ್ತರ ಕೊಡುತ್ತಾ – ನರಿರಾಯ ಅಂದರೆ ಕೂಪಮಂಡೂಕ, ಬಾವೀಕಪ್ಪೆ – ಎಂದಿಷ್ಟೇ ಹೇಳಿ ಸುಮ್ಮನಾದರು. ಅಂದಿನಿಂದ ಪ್ರಚಾರದಲ್ಲಿ ಬಂತು ಈ ಹೆಸರು....”

“ಬಲು ತಮಾಷೆಯಾಗಿದೆಯಪ್ಪ.”

“ತಮಾಷೆಯಲ್ಲದಿನ್ನೇನು? ನನ್ನ ‘ತಲೆಕಾಯಿ’ಗೂ ಅವನಿಗೂ ಹಿಂದೊಂದು ಸಲ ವಾದವಿವಾದ ನಡೆಯಿತು. ಅದು ಇನ್ನೂ ತಮಾಷೆಯಾಗಿತ್ತು. ಕೊನೆಗೆ ಸೋತು ಸಲಾಂ ಹೊಡೆದು ಸುಮ್ಮನಾಯಿತು ಅವನ ಮಡಿವಂತಿ.”

“ಪತ್ರಿಕೆಗೆ ಇಂಥ ಹೆಸರನ್ನೇಕೆ ಇಟ್ಟನೋ ಈತ?”

“ಅವನಿದ್ದಂತೆ ಅವನ ಪತ್ರಿಕೆ. ಅವನೂ ಮಡಿವಂತ. ಅವಳೂ ಮಡಿವಂತಿ. ಹಹ ಹಹಾ ಹಾ ಹಾ....”

೬—೯—೧೯೪..

ಇಂದು ನಮ್ಮ ಮಠಕ್ಕೆ ಸಂತೆಯ ಸ್ವರೂಪ ಬಂದಿದೆ.

ನಿನ್ನೆ ರಾತ್ರಿಯಿಂದ ಜನ ಸೇರತೊಡಗಿದ್ದಾರೆ. ಸುತ್ತಮುತ್ತಲ ಊರುಗಳಿಂದ ರೈತರು ಗಾಡಿ ಕಟ್ಟಿಕೊಂಡು, ಊದುತ್ತ ಬಾರಿಸುತ್ತ ಬರುತ್ತಿದ್ದಾರೆ. ಮಠದ ಸುತ್ತಲಿನ ಬಯಲುಸೀಮೆಯೆಲ್ಲ ತುಂಬಿಹೋಗಿದೆ. ಅಂಗಡಿಗಳಲ್ಲಿ ವ್ಯಾಪಾರ ಭರದಿಂದ ಸಾಗಿದೆ. ಚಹದಂಗಡಿಗಳಲ್ಲಿ ಗ್ರಾಮಫೋನ್, ರೇಡಿಯೋ

ಕಿರಿಚಿಕೊಳ್ಳುತ್ತಿವೆ. ಹಾಡುವವರು, ಬಾರಿಸುವವರು, ಕುಣಿಯುವವರು, ಅಭಿನಯಿಸುವವರು, ಪೈಲ್ವಾನರು, ಕಸರತ್ತಿನವರು, ಆಟದವರು, ನೋಟದ ವರು. ಮಠದ ಅಂಗಳದಲ್ಲಿ ಇರುವೆಗಳಂತೆ ಓಡಿಯಾಡುತ್ತಿದೆ ಜನ. ಎಂಥ ಹುರುಪು. ಎಂಥ ಉತ್ಸಾಹ! ಮಹಡಿಯ ಕಿಟಕಿಯಲ್ಲಿ ನಿಂತು ನೋಡುತ್ತಿದ್ದ ಹಾಗೆಲ್ಲ ನನ್ನ ಎದೆ ಹೆಮ್ಮೆಯಿಂದ ಉಬ್ಬತೊಡಗಿದೆ. ಈ ಜನರೆಲ್ಲ ಬಂದಿರು ವುದು ನನಗಾಗಿ – ನನ್ನನ್ನು ನೋಡಲಿಕ್ಕಾಗಿ – ನನ್ನ ಪಟ್ಟಾಧಿಕಾರದ ಉತ್ಸವ ದಲ್ಲಿ ಭಾಗಿಗಳಾಗಿ ಸಂತೋಷಿಸಲಿಕ್ಕಾಗಿ!

ಬೆಳಗಿನ ರೈಲಿನಿಂದ ನಮ್ಮ ಅತಿಥಿಗಳೆಲ್ಲರೂ ಬಂದುಬಿಟ್ಟಂತಾಗಿದೆ.

'ಒಂದೇ ಕರ್ನಾಟಕ'ದ ವಿನಾಯಕರಾಯರು, 'ಏಕಕನ್ನಡ'ದ ಕುಟ್ಟಪ್ಪ, ನಿರುದ್ಯೋಗಣ್ಣ, ಶರಣಸಂಘದ ಹೊಟ್ಟೆಪ್ಪ, ಗಮಕಿ ಗೋವಿಂದಯ್ಯ, ಗವಾಯಿ ವೃಷಭೇಂದ್ರ, ಮಲ್ಲಪ್ಪಸೆಟ್ಟರು ಎಲ್ಲರೂ ಬಂದಿದ್ದಾರೆ. ಗದಿಗೆಮ್ಮ ಮಾತ್ರ ಬರಲಿಲ್ಲ. "ಅವಳೀಗ ಊರಲ್ಲಿಲ್ಲ," ಎಂದು ಹೇಳಿದರು ಮಲ್ಲಪ್ಪಸೆಟ್ಟರು.

ಶರಣಸಂಘದ ಹೊಟ್ಟೆಪ್ಪನ ಜತೆಗೆ ನನಗೆ ಅಪರಿಚಿತವಾದ ಇನ್ನೊಂದು ವ್ಯಕ್ತಿ ಬಂದಿದೆ. "ಇವರು ತರಾತುರಿ ಮಾಸ್ತರರು. ಕಳ್ಳೇಕಾಯಿ ನಗರದ ಸಾರ್ವಜನಿಕ ಚಟುವಟಿಕೆಗಳಿಗೆಲ್ಲ ಪ್ರಾಣಸ್ವರೂಪಿ. ನಮ್ಮ ಸಂಘದ ಉಪಾ ಧ್ಯಕ್ಷರು. ಹೈಸೂಲಿನಲ್ಲಿ ಮಾಸ್ತರರಾಗಿದ್ದಾರೆ," ಎಂಬುದಾಗಿ ಅವರ ಪರಿಚಯ ಮಾಡಿಕೊಟ್ಟ, ಹೊಟ್ಟೆಪ್ಪ.

"ಕಳ್ಳೇಕಾಯಿ ನಗರ ನಮಗೇನೂ ಅಪರಿಚಿತವಲ್ಲವಲ್ಲಾ? ಇಷ್ಟು ದಿನ ಇವರನ್ನು ನೋಡಲೇ ಇಲ್ಲವೆಂದರೆ!" ಎಂದು ನಾನು ಆಶ್ಚರ್ಯದ ದನಿಯಲ್ಲಿ ಕೇಳಿದೆ.

"ಆ ಪ್ರಕರಣ ನಡೆದಾಗ ಇವರು ಸೊಲ್ಲಾಪುರದಲ್ಲಿದ್ದರು ಸ್ವಾಮಿಜಿ. ಹೋದ ವರ್ಷವಷ್ಟೇ ಕಳ್ಳೇಕಾಯಿ ನಗರಕ್ಕೆ ವರ್ಗವಾಗಿ ಬಂದಿದ್ದಾರೆ."

"ಆ ಪ್ರಕರಣ," ಎಂದು ಹೊಟ್ಟೆಪ್ಪ ಹೇಳುತ್ತಲೂ ನನ್ನ ಮೈ ನಡುಗಿ ದಂತಾಯಿತು. ಅರ್ಥಾತ್ – ಹೊಟ್ಟೆಪ್ಪನಿಗಂತೂ ಅದು ತಿಳಿದೇ ಇದ್ದಿತು. ತರಾತುರಿ ಮಾಸ್ತರನಿಗೂ ತಿಳಿದಿದೆಯೊ ಏನೊ. ಇನ್ನೂ ಯಾರು ಯಾರಿಗೆ ತಿಳಿದಿಹೆಯೊ!

"ಓಹೊ....ಆ ಪ್ರಕರಣವೇ!" ಎಂದು ಅರ್ಥಪೂರ್ಣವಾಗಿ ನುಡಿದು ಪಿಸಿ ಪಿಸಿ ನಕ್ಕ ಮಾಸ್ತರರು. "ಅಲ್ಲ? ಅವೆಲ್ಲ ನಿಜವೇನ್ರೀ ಸ್ವಾಮಿಜಿ?"

ನಾನು ಬೆಚ್ಚಿಬಿದ್ದು – "ಯಾವುದು ಮಾರಾಯಾ?" ಎಂದು ಕೇಳಿದೆ.

"ಅಲ್ಲ? ಅದೇ – ಆ ಜನಪದ ಪತ್ರಿಕೆಯಲ್ಲಿ ಬಂದದ್ದು ?"

"ಸುಳ್ಳು....ಸುಳ್ಳು....ಪೂರಾ ಸುಳ್ಳು. ನನಗಾಗದವರು ಯಾರೋ ಹಾಗೆ ಅಪಪ್ರಚಾರ ಮಾಡಿದ್ದರು...."

"ಅಲ್ಲ? ಅದು ಸುಳ್ಳಾಗಿದ್ದರೆ ನೀವೇಕೆ ಹಾಗೆ ಊರು ಬಿಟ್ಟು ಹೋಗಿ ಬಿಟ್ಟರಿ ?"

ನಾನು ನಿರುತ್ತರನಾಗಿ, "ಸ್ನಾನಕ್ಕೆ ಹೊತ್ತಾಯಿತು," ಎಂದು ಹೇಳಿ ಕೊಟಡಿಯಿಂದ ಜಾರಿಕೊಂಡೆ. ತರಾತುರಿ ಮಾಸ್ತರು ಮತ್ತೆ ಪಿಸಿ ಪಿಸಿ ನಗುವುದು ಕೇಳಿಸಿತು.

ಮಧ್ಯಾಹ್ನ ಹೊಟ್ಟೆಪ್ಪನನ್ನೊಬ್ಬನನ್ನೇ ಕರೆಯಿಸಿಕೊಂಡು – "ಆ ಅಧಿಕ ಪ್ರಸಂಗಿ ಅಲ್ಲಾ ಮಾಸ್ತರನನ್ನೇಕೆ ಕರೆದು ತಂದಿರಿ? ನಾವು ಆಮಂತ್ರಣ ಕಳಿಸಿದ್ದು ನಿಮಗೊಬ್ಬರಿಗೇ," ಎಂದು ಕೋಪದ ಧ್ವನಿಯಲ್ಲಿ ಹೇಳಿದೆ.

"ನಾನೇನು ಮಾಡಲಿ ಸ್ವಾಮಿ? ಆಮಂತ್ರಣ ಶರಣಸಂಘದ ಹೆಸರಿಗೆ ಬಂದಿತ್ತು. ನಾನು ಕೇವಲ ಕಾರ್ಯದರ್ಶಿ. ಅವರು ಉಪಾಧ್ಯಕ್ಷರು. ಅವರಿಗೆ ಬೇಡ ಅನ್ನಲು ಬರುತ್ತದೆಯೆ?"

"ಸರಿ. ಸರಿ. ಹರಿಹರನಿಗೂ ಈ ತರಾತುರಿಗೂ ಪರಿಚಯವಿದೆಯೇನು ?"

"ಇವರ ಪರಿಚಯ ಆ ಊರಲ್ಲಿ ಯಾರಿಗಿಲ್ಲ ಸ್ವಾಮಿ? ಎಲ್ಲರೂ ಇವರ ಗೆಳೆಯರೇ. ಹರಿಹರನಿಗೂ ಇವರಿಗೂ ಜೀವಶ್ಚ ಕಂಠಶ್ಚ ದೋಸ್ತಿ ಇದೆ."

"ಕುಟ್ಟೋಶನಿಯ ಜತೆಗೆ?"

"ದಟ್ಟ ಸ್ನೇಹ. ಕಳ್ಳೇಕಾಯಿಯಲ್ಲಿದ್ದಾಗ ಆತ ಇವರಲ್ಲೇ ಊಟ ಮಾಡುತ್ತಾನೆ."

"ಹಾಳಾದೆನಪ್ಪ," ಎಂದುಕೊಳ್ಳುತ್ತ ನಾನು ಚಿಂತೆಯಲ್ಲಿ ಮುಳುಗಿದೆ. ಹರಿಹರ ಮತ್ತು ಕುಟ್ಟೋಶನಿಗಳ ಪ್ರತಿನಿಧಿಯಾಗಿ ಈ ತರಾತುರಿ ಬಂದಿರ ಲಿಕ್ಕಿಲ್ಲವಷ್ಟೆ, ಎಂದೂ ಅನ್ನಿಸಿತು. ಈತನ ರೂಪದಲ್ಲಿ ರಾಹುಕೇತುಗಳೇ ಬಂದಂತೆ ಭಾಸವಾಯಿತು.

"ನೀವು ಆ ಮಾಸ್ತರ ಬಗೆಗೇಕೆ ತಪ್ಪು ಕಲ್ಪನೆ ಮಾಡಿಕೊಳ್ಳುತ್ತೀರಿ

ಸ್ವಾಮಿಜಿ? ಅವರು ಬಹಳ ಒಳ್ಳೆಯವರು. ಕಳ್ಳೀಕಾಯಿ ನಗರದಲ್ಲಿ ನಿಮ್ಮ ದೊಂದು ಸಾರ್ವಜನಿಕ ಭಾಷಣವಿಡಿಸುವ ವಿಚಾರದಲ್ಲಿದ್ದಾರೆ."

ಆಗ ಸ್ವಲ್ಪ ಸಮಾಧಾನವಾಯಿತು ನನಗೆ. "ಹೀಗೇನು? ಆ ಕುಟ್ಟೋ ಶನಿ ಹರಿಹರರ ಸಂಗದಲ್ಲಿ ಇವರೂ ಕೆಟ್ಟುಹೋಗಿಲ್ಲ ಅನ್ನಿರಿ."

"ಇವರೇಕೆ ಕೆಡುತ್ತಾರೆ? ಅವರೊಂದಿಗೆ ಗೆಳೆತನವೆಷ್ಟೋ ಅಷ್ಟೆ. ಹಾಗೆಲ್ಲ ಇನ್ನೊಬ್ಬರ ಪ್ರಭಾವಕ್ಕೊಳಗಾಗುವ ವ್ಯಕ್ತಿಯಲ್ಲ ತರಾತುರಿ. ಪೂರಾ ಸ್ವತಂತ್ರ ವಿಚಾರದ ಮನುಷ್ಯ."

"ಹಾಗಿದ್ದರೆ ಪರಾವಾಯಿಲ್ಲವಯ್ಯ."

ಕೀಟಲೆ ಕುಟ್ಟಪ್ಪನ ಜತೆಗೂ ತರಾತುರಿಗೆ ತುಂಬ ಸಲಿಗೆಯಿದ್ದ ಹಾಗೆ ಕಂಡುಬಂದಿತು. ಸಾಯಂಕಾಲ ಅವರಿಬ್ಬರೂ ಕೂಡಿಯೆ ಕೊಟಡಿಗೆ ಬಂದರು. ಕುಟ್ಟಪ್ಪ ಇನ್ನೂ ಯುವಕ. ಇಪ್ಪತ್ತೈದು ಇಪ್ಪತ್ತಾರು ವರ್ಷ ವಯಸ್ಸಿದ್ದೀತು. ಆಸಾಮಿ, ಇಂದಿನ ತರುಣರಂತೆ ಕಡ್ಡೀಪೈಲ್ವಾನನಾಗಿರದೆ ನಿಜಕ್ಕೂ ಪೈಲ್ವಾನ ರಂತೇ ಇದ್ದಾನೆ. ಎದ್ದು ಕಾಣಿಸುವ ಎತ್ತರ. ಖಾದೀ ಬಟ್ಟೆಯ ಫುಲ್ ಸೂಟ್ ಹಾಕುತ್ತಾನೆ. ಶುದ್ಧವಾದ ಕನ್ನಡದಲ್ಲಿ ಸ್ವಾರಸ್ಯವಾಗಿ ಮಾತನಾಡು ತ್ತಾನೆ. ಇಂಗ್ಲೀಷಿಗಾರಂಭಿಸಿದರೆ ಚಟಪಟ ಇಂಗ್ಲೀಷು. ಮಧ್ಯೆ ಮಧ್ಯೆ ಮನಃಪೂರ್ವಕವಾದ ನಗೆ. ಎಲ್ಲ ರೀತಿಯಿಂದಲೂ ಆಕರ್ಷಕವಾಗಿರುವ ಈ ಆಸಾಮಿಗೂ ಒಂದೇ ಒಂದು ದುರಭ್ಯಾಸವಿದೆ – ಮಾತನಾಡುವಾಗ ತನ್ನ ಹತ್ತಿರ ಇರುವವರನ್ನು ಚಟಪಟೆಂದು ಹೊಡೆದು – ತಿವಿದು ನಗುವುದು. ಅದು ಅತಿ ಯಾದಾಗ ಭುಜಗಳನ್ನು ಹಿಡಿದು ಅಲುಗಾಡಿಸುವವರೆಗೂ ಹೋಗುತ್ತದೆ. ನಾನು ಸ್ವಾಮಿ. ನನ್ನನ್ನೂ ಉಳಿಸುವುದಿಲ್ಲ ಪುಣ್ಯಾತ್ಮ. "ಹೌದೋ, ಅಲ್ಲವೋ ಸ್ವಾಮಿಜೀ...." ಎನ್ನುತ್ತ ನನ್ನ ತೊಡೆಗಳಿಗೇ ಏಟು ಹಾಕುತ್ತಾನೆ. "ಹೌದಪ್ಪ," ಎನ್ನುತ್ತ ತೊಡೆಗಳನ್ನು ದೂರ ಎಳೆದುಕೊಳ್ಳುತ್ತೇನೆ ನಾನು. ತರಾತುರಿ ಮಾಸ್ತರು ಬಡಕಲು ಶರೀರಿ. ಕುಟ್ಟಪ್ಪನ ಏಟುಗಳಿಗೆ ನಡುಗಿಹೋಗುತ್ತಿರ ಬೇಕು ಆ ಬಡಪಾಯಿ.

"ಮಾಸ್ತರರದೂ ನಿಮ್ಮದೂ ಬಹಳ ದಿನಗಳಿಂದ ಸ್ನೇಹವೋ?" ಎಂದು ನಾನು ಕೇಳಿದೆ.

"ಸೊಲ್ಲಾಪುರಕ್ಕೆ ನಾನೊಂದು ಸಲ ಭಾಷಣಕ್ಕೆ ಹೋಗಿದ್ದಾಗ ಕೂಡಿತು

ದೋಸ್ತಿ," ಎಂದು ಹೇಳಿ ಕುಟ್ಟಪ್ಪ ತರಾತುರಿಯ ಎರಡೂ ಭುಜಗಳನ್ನು ಹಿಡಿದು ಗದಗದಾ ಅಲುಗಾಡಿಸಿದ.

"ನಾವಿಬ್ಬರೂ ಕೂಡಿಯೆ ಇಂಗ್ಲೆಂಡಿಗೆ ಹೋಗಬೇಕೆಂದಿದ್ದೇವೆ," ಎಂದು ಹೇಳಿದ ತರಾತುರಿ.

"ಇಂಗ್ಲೆಂಡಿಗೆ ?"

"ಆಕ್ಸಫರ್ಡಿಗೆ ಹೋಗಿ ಅಲ್ಲಿನ ಬಿ.ಎ. ದೊರಕಿಸುವ ಯೋಚನೆಯಿದೆ. ಆ ಬಗ್ಗೆ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇವೆ."

"ಬಹಳ ಸಂತೋಷ. ಬಹಳ ಸಂತೋಷ. ನಮ್ಮ ಜನರು ಹೆಚ್ಚು ಹೆಚ್ಚಾಗಿ ವಿದೇಶಗಳಿಗೆ ಹೋಗಿ ದೊಡ್ಡ ದೊಡ್ಡ ಡಿಗ್ರಿ ದೊರಕಿಸಿಕೊಂಡು ಬಂದು ಕರ್ನಾಟಕದ ಸೇವೆ ಮಾಡಬೇಕು. ಹಣದ ತೊಂದರೆಯೇನೂ ಇಲ್ಲವಷ್ಟೇ ನಿಮಗೆ ?"

"ಇಲ್ಲ. ಇಲ್ಲ. ನಾವಿಬ್ಬರೂ ಕುಬೇರರ ಮಕ್ಕಳು...." ಎಂದು ನಗುತ್ತ ನುಡಿದ ಕುಟ್ಟಪ್ಪ. ನನಗೆ ಅರ್ಥವಾಯಿತು.

"ಏನು ಮಾಡುವುದು ! ನಮ್ಮ ಜನರಲ್ಲಿ ಹಣಕ್ಕೇನೂ ಕೊರತೆಯಿಲ್ಲ. ಲಕ್ಷಾಧೀಶರೆಷ್ಟೋ ಜನರಿದ್ದಾರೆ. ಅವರ ಮಕ್ಕಳಿಗೆ ಮಾತ್ರ ಓದಿ ಮುಂದೆ ಬಂದು ಕೆಲಸ ಮಾಡುವ ಇಚ್ಛೆಯಿಲ್ಲ. ಮಹತ್ವಾಕಾಂಕ್ಷಿಗಳಾದ ನಿಮ್ಮಂಥವರ ಹತ್ತಿರ ಹಣವಿಲ್ಲ ಇರಲಿ. ಇರಲಿ. ನಮ್ಮಿಂದ ಸಾಧ್ಯವಾದ ಸಹಾಯ ಮಾಡುತ್ತೇವೆ."

ನನ್ನ ಮಾತಿನಿಂದಾಗಿ ಅವರಿಗೇನೆನ್ನಿಸಿತೊ ಏನೊ. ಅವರು ಆ ವಿಷಯ ಬೆಳೆಸಲಿಲ್ಲ. ನಾನೂ ಸುಮ್ಮನಾದೆ.

ಆ ವೇಳೆಗೆ ವಿನಾಯಕರಾಯರು, ವಿ ಠೋ ಬಾ ಚಾ ರಿ , ಗಮಕಿ ಗೋವಿಂದಯ್ಯ ಮೊದಲಾದವರೆಲ್ಲ ಮೇಲೆ ಬಂದರು. ಚರ್ಚೆ ಬೇರೆ ವಿಷಯ ಗಳತ್ತ ಹೊರಟಿತು.

ಈ ರಾಯರುಗಳನ್ನೆಲ್ಲ ನಾನು ಕರೆಯಿಸಿರುವುದು ಗಂಗಾಧರಶಾಸ್ತ್ರಿಗೆ ಎಷ್ಟು ಮಾತ್ರಕ್ಕೂ ಸರಿಬಂದಿಲ್ಲ. ನನ್ನ ಉದ್ದೇಶವೇನೆಂಬುದು ಅವನಿಗೆ ಸರಿಯಾಗಿ ಅರ್ಥವಾಗುವಂತಿಲ್ಲ.

ಸಾಯಂಕಾಲ ಜಟ್ಟಪ್ಪನವರು ಸ್ಪೆಶಲ್ ಕಾರಿನಲ್ಲಿ ಬಂದಿಳಿದರು. ನಾಳೆ ಬೆಳಗ್ಗೆ ಉತ್ಸವಕ್ಕಾರಂಭವಾಗಬೇಕು.

೧೦—೯—೧೯೪೬..

ಮೂರು ದಿನ ದಿನಚರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಒಂದು ಕಡೆ ಕೂತಿರಲು ಸಹ ಪುರಸತ್ತಿಲ್ಲ. ಇನ್ನು ಬರೆಯುವುದು ಹೇಗೆ ಸಾಧ್ಯ?

ಮೊನ್ನೆ ಆರಂಭವಾದ ಉತ್ಸವ ವಿಜೃಂಭಣೆಯಿಂದ ನಡೆಯುತ್ತಿದೆ. ಜಟ್ಟಪ್ಪ, ಕುಟ್ಟಪ್ಪ, ವಿನಾಯಕರಾಯರು, ನರಿರಾಯ ಎಲ್ಲರ ಉಪನ್ಯಾಸಗಳೂ ಜರುಗಿದುವು. ಜಟ್ಟಪ್ಪ ಅಂದೇ ಹೊರಟುಹೋದರು. ವಿನಾಯಕರಾಯರು ನಿನ್ನೆಯ ದಿನ ಹೋದರು. ಕುಟ್ಟಪ್ಪ ಈ ದಿನ ಹೋದ. ನರಿರಾಯ ಮಾತ್ರ ಹೊರಡುವ ಲಕ್ಷಣ ಕಾಣಿಸುತ್ತಿಲ್ಲ. ನಿರುದ್ಯೋಗಣ್ಣನೂ ಇಲ್ಲಿಯೆ ಧ್ವಜ ನೆಟ್ಟಿದ್ದಾನೆ. "ಇವರಿನ್ನೂ ತೊಲಗುವುದು ಯಾವಾಗ?" ಎಂದು ಮತ್ತೆ ಕೇಳುತ್ತಿದ್ದಾರೆ ಗಂಗಾಧರಶಾಸ್ತ್ರಿ, ಸೆಟಗೌಡ ಇಬ್ಬರೂ.

ನಿನ್ನೆ ಸಂಜೆ ಅಪರಿಚಿತ ವ್ಯಕ್ತಿಯೊಂದು ಆಗಮಿಸಿತು. ನನಗೆ ಕೊಂಚವೂ ಬಿಡುವಿರಲಿಲ್ಲವಾದರೂ ಒಂದರ್ಧ ತಾಸು ಅವನೊಂದಿಗೆ ಮಾತಾಡಲೇಬೇಕಾಯಿತು. ಅವನ ಹೆಸರು ಕಾಳಹೃದಯಪ್ಪ ಅಂತೆ. ಗೊಬ್ಬೂರಿನ ಹೈಸ್ಕೂಲೊಂದರಲ್ಲಿ ಮಾಸ್ತರನಾಗಿರುವನಂತೆ. ವ್ಯಕ್ತಿ ತೆಳ್ಳಗೆ ಕುಳ್ಳಗೆ ಇದೆ. ಕಪ್ಪು ಬಣ್ಣ. ಕಳಾಹೀನ ಕಣ್ಣುಗಳ ಮೇಲೆ ದಪ್ಪ ಕಪ್ಪು ಕನ್ನಡಕ. ಕಿರಿಚಲು ಧ್ವನಿ. ಮೂವತ್ತು ವರ್ಷ ವಯಸ್ಸಿರಬಹುದು. ಈಗಾಗಲೆ ಕೂದಲು ನರೆತಿವೆ.

"ನಾನೂ ಒಬ್ಬ ಕವಿ, ಕತೆಗಾರ, ಪ್ರಬಂಧಕಾರ, ಭಾಷಣಕಾರ. ಕರ್ನಾಟಕದ ಎಲ್ಲಾ ಪತ್ರಿಕೆಗಳಲ್ಲೂ ನನ್ನ ಬರಹಗಳು ಪ್ರಕಟವಾಗಿವೆ. 'ಅಯ್ಯಯ್ಯೋ ಸಾವೇ' ಎಂಬ ಕಥಾಸಂಗ್ರಹವೂ ಬಂದಿದೆ. ತಾವೂ ನೋಡಿರಬಹುದು," ಎಂದು ತನ್ನ ಪರಿಚಯ ತಾನೇ ಮಾಡಿಕೊಟ್ಟ ಕಾಳ ಹೃದಯಪ್ಪ.

ಅದರ ಹೆಸರನ್ನೂ ಕೇಳಿರಲಿಲ್ಲ ನಾನು.

"ವೀರಶೈವಾವತಾರ, ಒಂದೇ ಕನ್ನಡ ಪತ್ರಿಕೆಗಳಲ್ಲಿ ತಮ್ಮ ಪರಿಚಯವನ್ನೋದಿದ ಬಳಿಕ ಕನ್ನಡಸಾಹಿತ್ಯ, ಸಾಹಿತಿಗಳನ್ನು ಉದ್ಧರಿಸಲೆಂದೇ ತಮ್ಮ ಅವತಾರ ವಾಗಿದೆಯೆಂದು ಅನ್ನಿಸಿತು. ಅಂತೇ ತಮ್ಮನ್ನು ಕಾಣಲು ನಾನಾಗಿಯೆ ಧಾವಿಸಿ ಬಂದೆ."

"ನಿಮಗೂ ಆಮಂತ್ರಣ ಬಂದಿರಬಹುದು...."

"ಇಲ್ಲ. ನಮ್ಮಂಥವರಿಗೆಲ್ಲಾ ಆಮಂತ್ರಣವಾದರೂ ಯಾತಕ್ಕೆ ಬೇಕು! ನಾವೇನ್ರಿ, ಮನೆಯುವರೇ ಇದ್ದ ಹಾಗಿದ್ದೇವೆ. ಇದೋ-- ನಾನು ಹೊರಡಿಸುತ್ತಿರುವ ಗ್ರಂಥಮಾಲೆಯ ಮೊದಲನೆಯ ಪುಸ್ತಕ," ಎಂದು ನುಡಿದು ಆತ ತನ ಕೈಚೀಲದಿಂದ ಒಂದು ಚಿಕ್ಕ ಪುಸ್ತಕ ತೆಗೆದು ಕೊಟ್ಟ.

'ಗೋಳು ಗ್ರಂಥಮಾಲೆ – ಪುಷ್ಪ ೧. "ಹಾಯ್ ಬಾಳೇ!" ಶೋಕ ಗೀತಗಳ ಸಂಕಲನ: ಕವಿ: ಎಸ್. ಕಾಳಹೃದಯಪ್ಪ, ಬಿ.ಎ. (ಆನರ್ಸ್) ಬಿ. ಟಿ; ಡಿ. ಬಿ. ಇ; ಗೊಬ್ಬೂರು.'

"ಸರಿ. ನೀವೂ ಒಂದು ಭಾಷಣ ಹೊಡೆಯುವಿರೇನು?"

ಕಾಳಹೃದಯಪ್ಪ ಉತ್ಸಾಹದಿಂದ ಮೇಲಕ್ಕೆದ್ದು – "ಲೌಡ್‌ಸ್ಪೀಕರ್ ಇದೆ ತಾನೆ?" ಎಂದು ಕೇಳಿದ.

"ಇದೆ."

"ಒಳ್ಳೆಯದಾಯ್ತು. ನನ್ನಿಂದ ಗಟ್ಟಿಸಿ ಮಾತಾಡಲು ಆಗುವುದಿಲ್ಲ. ನಾನೇನು ಕುಟ್ಟಪ್ಪನಲ್ಲವಲ್ಲಾ? ಅವನಿಗೆ ಲೌಡ್‌ಸ್ಪೀಕರಿನ ಅಗತ್ಯವೇ ಇಲ್ಲ. ಅವನ ಬಾಯಿಯೆಂದರೆ ಲೌಡ್‌ಸ್ಪೀಕರಿನ ಅಪ್ಪ...."

"ಕುಟ್ಟಪ್ಪನವರೊಂದಿಗೆ ಪರಿಚಯವಿದೆಯೇನು ನಿಮಗೆ?" ಎಂದು ನಾನು ಕುತೂಹಲದಿಂದ ಕೇಳಿದೆ.

"ಓರೆಕೋರೆ ನಗರದಲ್ಲಿ ನಾವಿಬ್ಬರೂ ಕೂಡಿಯೆ ಓದಿದವರು. ಮನುಷ್ಯ ಬಹಳ ಅಹಂಕಾರಿ. ತನ್ನನ್ನು ಬಿಟ್ಟರೆ ಲೇಖಕರೇ ಇಲ್ಲವೆಂಬಂತೆ ವರ್ತಿಸುತ್ತಾನೆ. ನನ್ನನ್ನು ಕಂಡರೆ ಅವನಿಗಾಗದು. ಎಲ್ಲರಿಗೂ ನನ್ನ ಬಗ್ಗೆ ಅಸೂಯೆ...." ಎಂದು ಅಳುಧ್ವನಿಯಲ್ಲಿ ರಾಗ ತೆಗೆದ ಕಾಳಹೃದಯಪ್ಪ. ಈತನೆಲ್ಲಿ ಅತ್ತುಕೊಂಡೇ ಬಿಡುವನೋ ಎಂದು ನನಗೆ ದಿಗಿಲಾಯಿತು. ಕುಟ್ಟಪ್ಪನ ಬಗ್ಗೆ ಈತ ಪೂರಾ ತಪ್ಪು ಕಲ್ಪನೆ ಮಾಡಿಕೊಂಡಿರಬೇಕೆಂದೂ ಅನ್ನಿಸದಿರಲಿಲ್ಲ. ಆತ ನನ್ನೊಡನೆ ಮೂರು ದಿನ ಇದ್ದನಾದರೂ ಒಂದು ಸಲವೂ ಕಾಳಹೃದಯನ ಹೆಸರೆತ್ತಿರಲಿಲ್ಲ. ಇನ್ನಿತರ ಸಾಹಿತಿಗಳೂ ಇವನ ನೆನಪು ತೆಗೆದಿರಲಿಲ್ಲ. ಇವನೇ ಅನಾವಶ್ಯಕವಾಗಿ ಅವರೆಲ್ಲರ ವಿಷಯವೆತ್ತಿ ಆಧಾರರಹಿತ ಆರೋಪಣೆ ಮಾಡುತ್ತಿದ್ದಾನೆ....

"ನೀವು ಸುಮ್ಮಸುಮ್ಮನೆ ಗೋಳಾಡುತ್ತಿದ್ದೀರಿ ಕವಿಗಳೇ. ಅವರಾರೂ ನಿಮ್ಮ ಮಾತನ್ನೇ ಎತ್ತಲಿಲ್ಲ."

"ನಾನೆಂದರೆ ಅಷ್ಟು ತಾತ್ಸಾರ ಅವರಿಗೆ. ನನ್ನ ಕೃತಿಗಳನ್ನು ಓದಿ ನೋಡಿ ಮೆಚ್ಚುಕೊಳ್ಳುವವರಿಲ್ಲ, ಪತ್ರಿಕೆಗಳಲ್ಲಿ ಒಳ್ಳೆಯ ವಿಮರ್ಶೆ ಬರೆಯುವವರಿಲ್ಲ, ನನ್ನ ಪುಸ್ತಕ ಪ್ರಕಟಿಸುವವರಿಲ್ಲ, ನನ್ನನ್ನು ಮಾತಾಡಿಸುವವರೂ ಇಲ್ಲ. ಎಲ್ಲರೂ ನನಗೆ ಬಹಿಷ್ಕಾರವನ್ನೇ ಹಾಕಿದಂತಿದೆ. ಆ ಕುಟ್ಟೋಶನಿ, ಕುಟ್ಟಪ್ಪ ಇಬ್ಬರನ್ನೇ ಎತ್ತಿ ಆಕಾಶಕ್ಕೇರಿಸುತ್ತಾರೆ ಎಲ್ಲರೂ.... ಬೇರೆ ಪ್ರಕಾಶಕರು ನನ್ನ ಪುಸ್ತಕ ಪ್ರಕಟಿಸಲಿಲ್ಲವೆಂದೇ ನಾನೇ ಪ್ರಕಾಶಕನಾಗಿ ಈ ಗೋಳು ಮಾಲಾ ಹೊರಡಿಸಬೇಕಾಯ್ತು. ಮಾಸ್ತರಕೆಯಿಂದ ಬರುವ ಸಂಬಳವೆಷ್ಟು! ಒಂದು ಪುಸ್ತಕಕ್ಕೇ ಹತ್ತಿರವಿದ್ದ ಹಣವೆಲ್ಲಾ ತೀರಿಹೋಯ್ತು. ಎರಡನೆಯ ಪುಸ್ತಕಕ್ಕೆ ಎಲ್ಲಿಂದ ಹಣ ತರುವುದು ಸ್ವಾಮಿಜಿ?" ಎಂದ.

ಒಳ್ಳೆಯ ಪ್ರಶ್ನೆಯೆ! ಗ್ರಂಥಮಾಲೆ ಹೊರಡಿಸೆಂದು ಯಾವ ಮೂರ್ಖ ಉಪದೇಶ ಮಾಡಿದ್ದು ಅವನಿಗೆ? ನಾನೇನೂ ಅಲ್ಲವಲ್ಲ?

"ಉತ್ಸವ ಮುಗಿಯಲಿ. ನಮ್ಮ ಕೈಲಾದ ಸಹಾಯ ಮಾಡುತ್ತೇವೆ," ಎಂದು ಭರವಸೆ ಕೊಟ್ಟಾಗಲೇ ಆತ ತನ್ನ ಗೋಳಾಟ ನಿಲ್ಲಿಸಿದ್ದು.

ನಿರುದ್ಯೋಗಣ್ಣನನ್ನು ವಿಚಾರಿಸಿದಾಗ ಕಾಳಹೃದಯುಪ್ಪನ ಬಗೆಗೆ ವಿವರವಾಗಿ ತಿಳಿದುಬಂದಿತು. "ಆತ ಮೊದಲಿಂದಲೂ ಅಳುಬುರುಕ. ಕತೆ, ಕವಿತೆ, ಪ್ರಬಂಧ ಏನು ಬರೆದರೂ ಎಲ್ಲಾ ಗೋಳು ಗೋಳೇ. ಬರೀ ಕಣ್ಣೀರು, ದುಃಖ, ಸಾವು, ಸಮಾಧಿ, ಸ್ಮಶಾನ ಅನ್ನುತ್ತಾನೆ. ಎಲ್ಲಾ ಅವಾಸ್ತವವೇ. ಹೀಗಾಗಿ ಅವುಗಳನ್ನು ಯಾರೂ ಮೆಚ್ಚದಂತಾಗಿದೆ. ಯಾವಾಗಲೂ ಅಳುತ್ತಿರಬಾರದಯ್ಯ, ಸ್ವಲ್ಪ ಆಶಾವಾದಿಯಾಗು ಅಂತ ಕುಟ್ಟಪ್ಪ ಕುಟ್ಟೋಶನಿ ಇಬ್ಬರೂ ಉಪದೇಶಿಸಿದರಂತೆ. ಅಂದಿನಿಂದ ಅವರ ಮೇಲೆ ಸಿಟ್ಟುಮಾಡಿ ಕೊಂಡಿದ್ದಾನೆ." ಎಂದು ಆತ ಹೇಳಿದ.

"ನರಿರಾಯನಿಗೂ ಇವನಿಗೂ ಹೇಗಿದೆ?"

"ಅಷ್ಟಕ್ಕಷ್ಟೆ. ನರಿರಾಯ ಹಾಗೆಲ್ಲ ಅವರಿವರನ್ನು ಹಚ್ಚಿಕೊಳ್ಳುವ ಆಸಾಮಿಯಲ್ಲ."

೧೮—೯—೧೯೪..

ಕೊನೆಗೊಮ್ಮೆ ಉತ್ಸವ ಮುಗಿದುಹೋಗಿ ಎಲ್ಲವೂ ಶಾಂತವಾಗಿದೆ. ಆರು ತಿಂಗಳು ಪ್ರವಾಸ ಮಾಡಿ ಹಿಂತಿರುಗಿದಂತಾಗಿದೆ ನನಗೆ. ಬಹಳ ಆಯಾಸ. ಇನ್ನೊಂದು ವಾರವಾದರೂ ವಿಶ್ರಾಂತಿ ಬೇಕು.

'ಒಂದೇ ಕರ್ನಾಟಕ', 'ಏಕಕನ್ನಡ' ಎಲ್ಲದರಲ್ಲೂ ಭಯಂಕರ ಪ್ರಚಾರ ಸಿಕ್ಕಿದೆ ನನಗೆ. ಐದೈದು ಕಾಲಂ ಹೆಡಿಂಗ್ ಹಾಕಿ ನನ್ನ ಭಾಷಣಗಳ ವರದಿ ಕೊಟ್ಟಿದ್ದಾರೆ ಎಲ್ಲರೂ. ಒಂದೇ ವಾರದಲ್ಲಿ ನಾನು ಅಖಿಲ ಕರ್ನಾಟಕ ಮುಖಂಡನಾದಂತಾಯಿತು.

ಸೆಟಗೌಡ, ನರಿರಾಯ, ಗಡಬಡಯ್ಯ, ಗಂಗಾಧರಶಾಸ್ತ್ರಿ, ಗೊಬ್ಬಣ್ಣ ಈ ಐದು ಜನರಿಗೂ ಸ್ವಲ್ಪ ಸ್ವಲ್ಪ ಹಣ ಕೊಟ್ಟು ಕಳಿಸಿದ್ದಾಯಿತು. ಕಾಳ ಹೃದಯಪ್ಪನ ಗೋಳು ಗ್ರಂಥಮಾಲೆಗೆ ೧೦೧ ರೂ. ಕೊಡುವುದಾಗಿ ವಾಗ್ದಾನ ಮಾಡಿ, ಅವನಿಗೆ ರೈಲು ವೆಚ್ಚವನ್ನಷ್ಟು ಕೊಟ್ಟು ಸಾಗಹಾಕಿದ್ದಾಯಿತು. ಆಸಾಮಿ – ಅಳುಮೋರೆಯಿಂದಲೇ ಹೊರಟುಹೋಯಿತು. ನಿರುದ್ಯೋಗಣ್ಣ ಸ್ಟೇಶನರಿ ಅಂಗಡಿಯೊಂದನ್ನು ಹಾಕುವನಂತೆ, ಸಾವಿರ ರೂಪಾಯಿ ಬೇಕೆಂದು ಕೇಳಿದ. ಮುಂದೆ ನೋಡೋಣ – ಎಂದು ಹೇಳಿ ಅವನನ್ನೂ ಹೊರಡಿಸಿ ದ್ದಾಯಿತು. ನನ್ನ ತಮ್ಮಂದಿರಿಗೂ ಏನನ್ನೂ ಕೊಡಲಾಗಲಿಲ್ಲ. ಅವರೂ ಮುಖ ಗಂಟುಹಾಕಿಕೊಂಡೇ ಹೋದರು. ಶರಣ ಸಂಘದ ಹೊಟ್ಟೆಪ್ಪ ಐದು ನೂರು ರೂಪಾಯಿ ಬೇಕೆಂದು ಹಟ ಹಿಡಿದು ಕುಳಿತಿದ್ದ. ಕಳ್ಳೇಕಾಯಿ ನಗರದ ಭಕ್ತರಿಂದಲೇ ಕೂಡಿಸಿ ಕೊಡುವುದಾಗಿ ಆಶ್ವಾಸನ ಕೊಟ್ಟು ಅವನನ್ನೂ ಹೊರಡಿಸಿದೆ. ಕುಟ್ಟಪ್ಪ, ವಿನಾಯಕರಾಯರು, ತರಾತುರಿ ಇವರು ಮಾತ್ರ ಒಂದು ಕಾಸನ್ನೂ ಕೇಳಲಿಲ್ಲ. ರೈಲು ವೆಚ್ಚಕ್ಕಾಗಿ ಸಹ ಹಣ ಸ್ವೀಕರಿಸಲಿಲ್ಲ. ಜಟ್ಟೆಪ್ಪನೂ ಕಾರಿನಲ್ಲಿ ಬಂದು ಕಾರಿನಲ್ಲೇ ಹೋದ. ಪೆಟ್ರೋಲ್ ಖರ್ಚಿಗೆ ಸಹ ಬೇಡಲಿಲ್ಲ. ಇವರೆಲ್ಲರ ಮನಸ್ಸಿನಲ್ಲಿ ಏನಿದೆಯೋ ತಿಳಿಯದು. ಸದ್ಯ ಸುಮ್ಮನಿದ್ದು ಮುಂದೆ ನನಗೆ ಚೆನ್ನಾಗಿ ಟೋಪಿ ಹಾಕುವ ಯೋಚನೆಯೇನೂ ಇವರಿಗಿಲ್ಲವಷ್ಟೆ?

ಇರಲಿ. ಇರಲಿ. ನಾನೇನೂ ಬೆಪ್ಪುತಕ್ಕಡಿಯಲ್ಲವಲ್ಲ, ಇಂಥವರಿಂದ ಮೋಸ ಹೋಗಲು?

ಹೇಗೂ ಜಗದ್ಗುರುವಾಗಿಬಿಟ್ಟೆ. ಘನಗರ್ಜದ ಮುದುಕನೂ ಅವನ ಆ ದುರಹಂಕಾರಿ ಮರಿಯೂ ಹೊಟ್ಟೆಯುರಿಯಿಂದ ತಳಮಳಿಸುತ್ತಿರಲು ಸಾಕು.

೨೨—೯—೧೯೪..

ಉತ್ಸವದ ಲೆಕ್ಕಪತ್ರಗಳನ್ನು ಪರಿಶೀಲಿಸುವುದಕ್ಕೆಂದು ಇಂದು ಸಮಿತಿಯ ಸಭೆ ಸೇರಿತ್ತು.

ಖರೇಸೆಟ್ಟಿ ಜಡಿಯಪ್ಪ ಇಬ್ಬರೂ ಕೂಡಿ ಏನೇನೋ ಖರ್ಚುಗಳನ್ನು ಬರೆದು ಯದ್ವಾತದ್ವಾ ವೆಚ್ಚ ತೋರಿಸಿದ್ದಾರೆ. ಒಟ್ಟು ವಸೂಲಾದ ಹಣ ಮೂವತ್ತೊಂದು ಸಾವಿರ ಚಿಲ್ಲರೆ. ಖರೇಸೆಟ್ಟಿ ಜಡಿಯಪ್ಪ ಇಬ್ಬರ ಬಗೆಗೂ ಎಲ್ಲರಿಗೂ ಅನುಮಾನ. ಯಾರೂ ಬಾಯಿಬಿಟ್ಟು ಮಾತನಾಡಲಿಲ್ಲ. ಅವರನ್ನು ಕಂಡರೆ ಎಲ್ಲರಿಗೂ ಭೀತಿ. ನನಗೂ ಅಂಜಿಕೆಯೇ.

"ಉಳಿದ ಹಣನಾದರೂ ಎಲ್ಲಿದೆ?" ಎಂಬುದಾಗಿ ಕರಲಿಂಗಯ್ಯ ಕೇಳಿದಾಗ ಖರೇಸೆಟ್ಟಿ ಕಣ್ಣು ಕೆರಳಿಸಿ, ಸ್ವರವೇರಿಸಿ ಹೇಳಿದ: "ಅಲ್ಲಿ ಇಲ್ಲಿ ಇದೆ ಅಂತ ಇಟ್ಟುಕೊಳ್ಳಿ. ಅದೇನೂ ಎಲ್ಲೂ ಓಡಿಹೋಗುವುದಿಲ್ಲ."

ಕರಲಿಂಗಯ್ಯ ಮತ್ತೆ ತುಟಿ ಬಿಚ್ಚಲಿಲ್ಲ. ನಾನೂ ತೆಪ್ಪಗೆ ಕುಳಿತುಕೊಂಡೆ. ಸಭೆ ಕೊನೆಗೊಂಡಿತು.

೨೫—೮—೯೧೪..

ನನ್ನ ತಮ್ಮ ಚಿಕ್ಕವೀರಯ್ಯ ಮತ್ತೆ ವಕ್ರಿಸಿದ್ದಾನೆ. "ಉತ್ಸವದ ಹಣ ಉಳಿದಿರಬಹುದಲ್ಲ ಸಾಕಷ್ಟು? ಒಂದು ಸಾವಿರವನ್ನಾದರೂ ಕೊಡು ಏಜನ್ಸಿ ಹಿಡಿಯಬೇಕಾಗಿದೆ," ಎಂದು ಪೀಡಿಸುತ್ತಿದ್ದಾನೆ.

ಮಧ್ಯಾಹ್ನ ಖರೇಸೆಟ್ಟಿಯ ಮನೆಗೆ ಹೋಗಿ ಒಂದು ಸಾವಿರ ರೂಪಾಯಿ ಬೇಕೆಂದು ಬಹಳ ದೈನ್ಯದಿಂದ ಕೇಳಿಕೊಂಡೆ.

"ಯಾತಕ್ಕೆ ಅಷ್ಟೊಂದು ಹಣ ಸ್ವಾಮಿಜಿ?"

ನನ್ನ ತಮ್ಮನ ವಿಷಯವನ್ನು ಹೇಳಲೇಬೇಕಾಯಿತು. ಖರೇಸೆಟ್ಟಿ ಒಂದು ಕ್ಷಣ ಸುಮ್ಮನಿದ್ದು ಅನಂತರ ಹೇಳಿದ: "ಹಣವನ್ನೇನೋ ಕೊಡುತ್ತೇನೆ. ಅವನದು ಮರಳಿ ಬರುವುದು ಯಾವಾಗ?"

"ಅಂದರೆ? ನೀವೀಗ ಕೊಡುವುದು ಸಾಲವೋ ಹೇಗೆ?"

"ಹಾಗೇ ತಿಳಿದುಕೊಳ್ಳಬಹುದು."

"ಉತ್ಸವದ ಶಿಲ್ಕು ಹಣ ಏನಾಯಿತು?" ಎಂದು ನಾನು ನಸು ಕೋಪದಿಂದ ಕೇಳಿದೆ.

"ಮಹಾದೇವಿಗೆ ಅರ್ಪಿತವಾಯಿತು," ಎಂದು ಗಂಭೀರವಾಗಿ ನುಡಿದ ಖರೇಸೆಟ್ಟಿ.

ನಾನು ಮತ್ತೊಂದು ಮಾತನಾಡದೆ ಹೊರಟು ಬಂದೆ.

ಈ ದುಷ್ಟನಿಗೆ ನನ್ನ ಗುಟ್ಟು ತಿಳಿಯದಂತೆ ಎಚ್ಚರಿಕೆಯಿಂದಿರಬೇಕಾಗಿತ್ತು. ನಾನು ಶತ ಮೂರ್ಖ. ಅವನ ಕೈಗೆ ಸಿಕ್ಕುಬಿಟ್ಟೆ.

೨೭—೯—೧೯೪..

ಈ ದಿನ ಕರಡೆಪ್ಪಸೆಟ್ಟರು ತಮ್ಮಲ್ಲಿಗೆ ಊಟಕ್ಕೆ ಕರೆದೊಯ್ದಿದ್ದರು.

ಅವರು ಪೂಜಾಗೃಹದಲ್ಲಿದ್ದ ಸಂಧಿ ಸಾಧಿಸಿ ಮಹಾದೇವಿಗೆ ನನ್ನ ಸಂಕಟಗಳನ್ನೆಲ್ಲ ಹೇಳಿಕೊಂಡೆ. ಪಾಪ, ಅವಳಲ್ಲಿ ನನ್ನ ಬಗ್ಗೆ ಅಕೃತ್ರಿಮ ಪ್ರೇಮವಿದ್ದಂತಿದೆ. "ನನ್ನವು ಒಂದೆರಡು ಆಭರಣ ಕೊಡುತ್ತೇನೆ. ತೆಗೆದುಕೊಳ್ಳಿ," ಎಂದಳು. "ಛೆ, ಸೆಟ್ಟರೇನೆಂದಾರು!" ಎಂದು ನಾನು ನಿರಾಕರಿಸಿದೆ.

೨೮—೯—೧೯೪..

ಇಂಥ ಭಾರಿ ಜಗದ್ಗುರು ಪೀಠವಾದರೂ ಒಂದು ಮೋಟಾರು ಕಾರು ಸಹ ಇಲ್ಲ ಇಲ್ಲಿ. ಎಲ್ಲಿಗೆ ಹೋಗುವುದಿದ್ದರೂ ಎತ್ತಿನ ಗಾಡಿಯೇ ಗತಿ. ಜರತಾರಿ ವಸ್ತ್ರಗಳನ್ನು ಧರಿಸಿ, ನಿಲುವಂಗಿ ಹಾಕಿಕೊಂಡು ಸಡಗರದಿಂದ ಹೊರಡುವ ನನಗೆ ಈ ಗಾಡಿಯಲ್ಲಿ ಕೂತಿರುವುದೆಂದರೆ ಅದೊಂದು ಅವಮಾನದ ವಿಷಯವೆಂದೇ ಅನ್ನಿಸತೊಡಗಿದೆ.

ಕಾರಿನ ಬಗ್ಗೆ ಮೊನ್ನೆ ಮುದುಕ ಸ್ವಾಮಿಯ ಹತ್ತಿರ ಮಾತು ತೆಗೆದಾಗ ಆತ ಅನಾಸಕ್ತಿ ಪ್ರದರ್ಶಿಸಿ, "ನಮ್ಮ ಕಾಲವಾಗುತ್ತಾ ಬಂತು. ನೀವು ಏನಾದರೂ ಮಾಡಿಕೊಳ್ಳಿ," ಎಂದು ಹೇಳಿದ.

ಕಾರಭಾರಿಯ ಹತ್ತಿರ ಮಠದ ಹಣ ಸಾಕಷ್ಟು ಇದೆಯೆಂದು ಸುದ್ದಿಯಿದೆ. ಆತ ಒಂದು ಕಾಸೂ ಇಲ್ಲವೆನ್ನುತ್ತಾನೆ. ಖರೇಸೆಟ್ಟಿ ಹಾಗೆ ಮಾಡಿದ. ಮಠಕ್ಕೆ ಬರುವ ಭಕ್ತರು ಆಗಾಗ ಒಪ್ಪಿಸುವ ಕಾಣಿಕೆಯೂ ಕಾರಭಾರಿಯ ಕಪಿಮುಷ್ಟಿಗೇ ಬೀಳುತ್ತದೆ. ರುದ್ರದೇವರು ಕೆಲದಿನಗಳ ಮಟ್ಟಿಗೆ ಊರಿಗೆ ಹೋಗಿ ಬರುವೆನೆನ್ನುತ್ತಿದ್ದಾನೆ. ಅವನ ಗಾಡಿಯ ಖರ್ಚಿಗೆ ಕೊಡಲು ಸಹ ನನ್ನ ಬಳಿ ಹಣವಿಲ್ಲ. ಇನ್ನು ಮೋಟಾರು ಕಾರಿನ ವಿಚಾರ!

ಜಗದ್ಗುರುವಾಗಿ ಬಿಟ್ಟರೆ ದೇವೇಂದ್ರನಂತೆ ಸುಖವಾಗಿ ಕಾಲ ಕಳೆಯಬಹುದೆಂದು ಹಿಂದೆ ನನಗನ್ನಿಸಿತ್ತು. ಈಗ ಅದನ್ನು ನೆನೆದರೇ ನಗು ಬರುತ್ತದೆ.

ಒಳ್ಳೆ ಜಗದ್ಗುರು! ಒಳ್ಳೆ ಸುಖ! ಎರಡು ಹೊತ್ತು ಊಟಕ್ಕೇನೂ ಕೊರತೆ ಯಿಲ್ಲ. ಅದೇ ಒಂದು ಭಾಗ್ಯವೆನ್ನಬೇಕು.

೩—೧೦—೧೯೪..

ಇಂದು ಬೆಳಗಿನ ಜಾವದಲ್ಲಿ ಹಿರಿಯ ಜಗದ್ಗುರುಗಳು ಕೈಲಾಸವಾಸಿ ಗಳಾದರು.

೧೦—೧೦—೧೯೪..

ಒಂದು ವಾರವೆಲ್ಲ ದಿನಚರಿ ಬರೆಯಲಾಗಲಿಲ್ಲ, ಮಠದಲ್ಲಿ ಬಹಳ ಗದ್ದಲ. ಬಿಡುವಿಲ್ಲ.

೧೦—೧೦—೧೯೪..

ಇಂದು ಟ್ರಸ್ಟ್ ಕಮಿಟಿಯ ಸಭೆ ಸೇರಿ ಮಠದ ಭಂಡಾರದಲ್ಲಿನ ಮುತ್ತು ರತ್ನ, ಚಿನ್ನ ಬೆಳ್ಳಿ ಒಡವೆಗಳು, ಬಟ್ಟೆಬರೆಗಳನ್ನು ತೆಗೆದು ಯಾದಿಯೊಂದಿಗೆ ಮೇಳವಿಸಿ ನೋಡಿ, ಮತ್ತೊಂದು ಹೊಸ ಯಾದಿ ತಯಾರಿಸಿ ರುಜು ಹಾಕ ಲಾಯಿತು. ಹಿರಿಯ ಜಗದ್ಗುರು ತೀರಿಕೊಂಡಂದಿನಿಂದ ನಾನೇ ಕಮಿಟಿಯ ಅಧ್ಯಕ್ಷನಾಗಿದ್ದೇನೆ. ಭಂಡಾರದ ಬೀಗದ ಕೈ ಇದುವರೆಗೂ ಅವರ ಬಳಿ ಯಿರುತ್ತಿದ್ದುದು ಈಗ ನನ್ನ ಕಡೆ ಬಂದಿದೆ.

"ಬಹಳ ಹುಷಾರಾಗಿರ್ರಿ ಸ್ವಾಮಿಜಿ. ಬೀಗದ ಕೈ ಕಳೆದುಗಿಳೆದೀತು," ಎಂದ ಕರಲಿಂಗಯ್ಯ. ಹಾಗೆ ಹೇಳುವುದರಲ್ಲಿ ಅವನ ಉದ್ದೇಶವೇನಿದ್ದಿತೊ ತಿಳಿಯದು. ಕೈ ಹಾರಿಸಲು ಆತ ಪ್ರಯತ್ನಿಸಲಿಕ್ಕಿಲ್ಲವಷ್ಟೆ? ಆತನಂತೂ ದರೋಡೆಕೋರರಂತೇ ಇದ್ದಾನೆ. ಮಠದ ಆವಾರದಲ್ಲಿರುವವರೆಲ್ಲ ಅವನ ಪಕ್ಷದ ಜನರೇ. ನನಗೆ ಬಹಳ ಭಯವಾಗತೊಡಗಿದೆ.

೧೫—೧೦—೧೯೪..

ಭಂಡಾರದ ಬೀಗದ ಕೈ ನನ್ನ ವಶಕ್ಕೆ ಬಂದಂದಿನಿಂದ ಖರೇಸೆಟ್ಟಿ ನನ್ನನು ಬಲು ಆದರದಿಂದ ಮಾತನಾಡಿಸುತ್ತಿದ್ದಾನೆ. ಅವನಪೇನು ಹೊಂಚು ಇದೆಯೊ, ದೇವರೇ ಬಲ್ಲ.

ಜಡಿಯಪ್ಪ ಬೇರೆ ಒಂದು ಜಮೀನಿಗಾಗಿ ಗಂಟುಬಿದ್ದಿದ್ದಾನೆ. ಅವರ ಶಿಕ್ಷಣಸಮಿತಿಗೆ ಅದನ್ನು ದಾನ ಮಾಡಿಬಿಡಬೇಕಂತೆ. ಹತ್ತು ಸಾವಿರ ರೂಪಾಯಿಯ ಹೊಲ. ಮಠಕ್ಕೆ ಸೇರಿದ ಭೂಮಿಯನ್ನು ದಾನಮಾಡಲೂ ಬರುವಂತಿಲ್ಲ. "ಟ್ರಸ್ಟ್ ಕಮಿಟಿಯೆಲ್ಲ ಒಪ್ಪಿದರಾಯಿತಲ್ಲ ?" ಎಂದು ವಾದಿಸುತ್ತಾನೆ ಜಡಿಯಪ್ಪ. ಕಮಿಟಿ ಒಪ್ಪಿದರೂ ಸಹ ಅದನ್ನು ಕೊಡಲು ಇಷ್ಟವಿಲ್ಲ ನನಗೆ. ಅದರಿಂದ ಬರುವ ಉತ್ಪನ್ನವನ್ನೆಲ್ಲ ಜಡಿಯನೇ ಹೊಡೆದುಬಿಡುವನೆಂಬುವಲ್ಲಿ ನನಗೇನೂ ಸಂದೇಹವಿಲ್ಲ.

ಕೆಲದಿನಗಳಿಂದ ಖರೇಸೆಟ್ಟಿ ತನ್ನ ಮೋಟಾರು ಕಾರನ್ನು ನನ್ನ ಉಪಯೋಗಕ್ಕಾಗಿ ಕಳಿಸುತ್ತಿದ್ದಾನೆ. "ಇದನ್ನು ನೀವೇ ತೆಗೆದುಕೊಂಡು ಬಿಡಿಬುದ್ಧೀ. ನಿಮ್ಮಂಥ ದೊಡ್ಡ ಜಗದ್ಗುರುಗಳು ಎತ್ತಿನ ಗಾಡಿಯಲ್ಲಿ ಓಡಾಡುವುದೆಂದರೆ ನಮಗೆಲ್ಲ ಅವಮಾನ," ಎಂದೂ ಉಪಚಾರ ಹೇಳುತ್ತಿದ್ದಾನೆ.

೨೦—೧೦—೧೯೪ . .

ನಿನ್ನೆ ರಾತ್ರಿ ಹತ್ತು ಗಂಟೆಯ ವೇಳೆಗೆ ಖರೇಸೆಟ್ಟಿ ಕಾರು ತೆಗೆದುಕೊಂಡು ಬಂದು ನನ್ನನ್ನು ಬಂಗಲೆಗೆ ಕರೆದೊಯ್ದ. ಮಹಾದೇವಿ ಬರಬಹುದೆಂಬ ಆಸೆಯಿಂದ ನಾನು ಅಲ್ಲಿಗೆ ಹೋಗಿದ್ದೆ. ಅವಳು ಬರಲಿಲ್ಲ. ಅವಳಿಗೆ ಬದಲಾಗಿ ಇನ್ನೊಬ್ಬ ದೇವಿಯನ್ನು ಕರೆಯಿಸಿದ್ದ ಖರೇಸೆಟ್ಟಿ.

"ಇವಳು ಯಾರು?" ಎಂದು ನಾನು ಕೇಳಿದಾಗ – "ಭಾಗೀರಥಿಯ ತಂಗಿ," ಎಂದು ಉತ್ತರ ಬಂದಿತು. ಖರೇಸೆಟ್ಟಿಯ ಸಹವಾಸ ತುಚ್ಛವೆನ್ನಿಸಿತು ನನಗೆ. ಆ ಹುಡುಗಿಯೊಂದಿಗೆ ರಾತ್ರಿ ಕಳೆಯಲು ಮನಸ್ಸಾಗಲಿಲ್ಲ. "ನನಗೆ ಇದೆಲ್ಲಾ ಬೇಡ ಸೆಟ್ಟರೆ," ಎಂದು ಹೇಳಿ ಅಲ್ಲಿಂದ ಹೊರಡಲು ಪ್ರಯತ್ನಿಸಿದೆ. ಅಷ್ಟು ಹೊತ್ತಿಗೆ ಕಾರು ಹೊರಟುಹೋಗಿಬಿಟ್ಟಿತ್ತು. ಹೊರಬಾಗಿಲೂ ಮುಚ್ಚಿಕೊಂಡಿತ್ತು. ಖರೇಸೆಟ್ಟಿ ನಗುತ್ತಾ ಭಾಗೀರಥಿಯೊಂದಿಗೆ ಕೊಟಡಿಯಲ್ಲಿ ಸೇರಿಕೊಂಡ. ನಾನು ನಿರ್ವಾಹವಿಲ್ಲದೆ ಆ ಹುಡುಗಿಯ ಜತೆಗೆ ರಾತ್ರಿಯನ್ನು ಕಳೆಯಬೇಕಾಯಿತು. ಪಾಪ, ಆಕೆ ಬಲು ಒಳ್ಳೆಯವಳು. ನನ್ನೊಡನೆ ಒಂದು ಮಾತನ್ನೂ ಆಡಲಿಲ್ಲ. ಬೆಳಗಿನ ಜಾವದಲ್ಲಿ ನಾನು ಹೊರಟು ನಿಂತಾಗ ನನ್ನ ಪಾದಗಳಿಗೆ ಹಣೆಯಿಟ್ಟು ನಮಸ್ಕರಿಸಿದಳು. ಅವಳಿಂದ ನಮಸ್ಕರಿಸಿಕೊಳ್ಳುವ ಯೋಗ್ಯತೆ ನನಗೆಲ್ಲಿಯದು? ನನ್ನ ಬಗೆಗೆ

ನನಗೇ ಅಸಹ್ಯವಾಯಿತು, ನಾನೆಷ್ಟು ಪತಿತನಾದೆನಲ್ಲಾ ಎಂದು ವ್ಯಥೆ ಯಾಯಿತು.

ಅರುಣೋದಯವಾಗುವ ವೇಳೆಗೆ ನಾನು ಮಠದ ಹೆಬ್ಬಾಗಿಲಲ್ಲಿ ಅಡಿ ಯಿರಿಸುತ್ತಿದ್ದಾಗ ಎದುರಿಗೆ ಕರಲಿಂಗನ ಮುಖ ಕಾಣಿಸಿತು.

"ರಾತ್ರಿಯೆಲ್ಲಾ ಎಲ್ಲಿದ್ದಿರಿ ಸ್ವಾಮಿಜಿ?"

ಅವನಿಗೆ ಏನೆಂದು ಉತ್ತರವೀಯುವುದು? ತಲೆ ತಗ್ಗಿಸಿಕೊಂಡು ಮೌನವಾಗಿ ಮಠಕ್ಕೆ ಬಂದೆ.

ಸ್ನಾನ, ಪೂಜೆ, ಫಲಾಹಾರ ತೀರಿಸಿಕೊಂಡು ನಾನು ವಿರಮಿಸುತ್ತಿದ್ದಾಗ ಕರಲಿಂಗ ಬಂದು ಕುಳಿತುಕೊಂಡ. ಕೊಟಡಿಯಲ್ಲಿ ಬೇರೆ ಯಾರೂ ಇರಲಿಲ್ಲ.

"ತಾವು ಜಗದ್ಗುರುಗಳು. ಹಾಗೆಲ್ಲ ರಾತ್ರಿ ಅಲ್ಲಿ ಇಲ್ಲಿ ತಿರುಗಿದರೆ ಪೀಠಕ್ಕೆ ಕೆಟ್ಟ ಹೆಸರು ಬರುವುದಿಲ್ಲವೇ ಬುದ್ಧೀ?" ಎಂದು ಆತ ಮಾತಿ ಗಾರಂಭಿಸಿದ.

"ಬೆಳಗಿನಲ್ಲೆದ್ದು ವಾಕಿಂಗ್ ಹೋಗಿದ್ದೆವಷ್ಟೆ. ರಾತ್ರಿ ಇಲ್ಲೇ ಇದ್ದೆ ವಲ್ಲಾ?"

"ನನಗೆಲ್ಲ ಗೊತ್ತಿದೆ. ನನ್ನ ಹತ್ತಿರ ಸುಳ್ಳು ಹೇಳಬೇಡಿ. ರಾತ್ರಿ ಖರೇಸೆಟ್ಟಿಯ ಕಾರು ಬಂದಿರಲಿಲ್ಲವೆ? ನೀವು ಅವನ ಬಂಗಲೆಗೆ ಹೋಗಿರ ಲಿಲ್ಲವೆ?"

"ಕಾರಿನಲ್ಲಿ ಹೋದದ್ದು ನಿಜ. ಹದಿನೈದು ನಿಮಿಷಗಳಲ್ಲೇ ಹೊರಳಿ ಬಂದುಬಿಟ್ಟೆವು."

"ಬಂದದ್ದು ನೀವಲ್ಲ, ಖಾಲೀ ಕಾರು. ನೀವು ಯಾರನ್ನು ಮೋಸ ಗೊಳಿಸಿದರೂ ನನ್ನನ್ನು ಮೋಸಗೊಳಿಸಲಾರಿರಿ ಸ್ವಾಮಿಜಿ. ನಿನ್ನೆ ರಾತ್ರಿ ನಾನು ಸ್ವತಃ ನಿಮ್ಮನ್ನು ಆ ಬಂಗಲೆಯಲ್ಲಿ ಕಂಡಿದ್ದೇನೆ."

ಆತ ಸುಳ್ಳು ಹೇಳುತ್ತಿರಬಹುದೆಂದು ನನಗನ್ನಿಸಲಿಲ್ಲ. ಬಂಗಲೆಯ ವರೆಗೂ ಬಂದು ಕಿಟಕಿಯಲ್ಲಿ ನಿಂತು ನೋಡಿದ್ದರೂ ನೋಡಿದ್ದಾನು ಆತ.

"ಈಗ ಏನು ಮಾಡೆನ್ನುತ್ತೀ ನಮಗೆ?"

"ತಾವು ತಿಳಿದವರು. ನಾನೇನು ಹೇಳಲಿ? ತಾವು ಮಾಡುತ್ತಿರುವುದು ಸರಿಯಾದ ಕೆಲಸವಲ್ಲ. ಅದನ್ನು ಬಿಡಲು ಸಾಧ್ಯವಿಲ್ಲವಾದರೆ ಜನಕ್ಕೇನೂ ಗೊತ್ತಾಗದಂತಾದರೂ ಮಾಡಿ. ಪೀಠದ ಮರ್ಯಾದೆ ಹಾಳುಮಾಡಬೇಡಿ."

ನಾನು ಸುಮ್ಮನಿದ್ದೆ. ಕರಲಿಂಗಯ್ಯನೇ ಮತ್ತೆ ಹೇಳಿದ: "ನನ್ನ ಮನೆಯ ಹೊರಗಡೆ ಒಂದು ಕೋಣೆಯಿದೆ. ನಿಮ್ಮ ಆ ಇಸಮು ಬಂದು ಇಲ್ಲೇ ಇರಲಿ. ಊರವರಿಗೆ ಗೊತ್ತಾಗದಂತೆ ನಡೆದೀತು."

ನನಗೆ ಒಂದು ಕಡೆ ಆಶ್ಚರ್ಯ, ಇನ್ನೊಂದು ಕಡೆ ಜುಗುಪ್ಸೆ. ಕರಲಿಂಗಯ್ಯ ಖರೇಸೆಟ್ಟಿ ಇಬ್ಬರೂ ಒಂದೇ ದರ್ಜೆಯವರೆಂಬುದು ಸ್ಪಷ್ಟ ನಾಯಿತು. ನನ್ನ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಅವರಿಬ್ಬರೂ ಸ್ವಾರ್ಥ ಸಾಧಿಸಲು ಯತ್ನಿಸುತ್ತಿದ್ದುದು ನನಗೆ ತಿಳಿಯದಿರಲಿಲ್ಲ. ಸೆಟ್ಟಿ ಬಂಗಲೆಗೆ ಕರೆದೊಯ್ದರೆ ಕರಲಿಂಗ ತನ್ನ ಮನೆಯಲ್ಲೇ ಏರ್ಪಾಟು ಮಾಡಿ ಕೊಡಲು ಸಿದ್ಧವಾಗುತ್ತಾನೆ. ಇವರ ಈ ನೈತಿಕ ಅಧಃಪತನವನ್ನು ಕಂಡು ನನ್ನಂಥ ನುರಿತ ಪಾಪಿಯ ಎದೆಯೂ ಕಂಪಿಸಿತು.

"ಮಹಾದೇವಕ್ಕನವರದು ನಿಮ್ಮ ಮೇಲೆ ಬಹಳ ಪ್ರೀತಿಯಲ್ಲವೇ ಸ್ವಾಮಿಜಿ?" ಎಂದು ಕೇಳಿಯೇಬಿಟ್ಟ ಕರಲಿಂಗಯ್ಯ.

ನನ್ನೆದೆಗೆ ಥಟ್ಟನೆ ಪೆಟ್ಟುಬಿದ್ದಂತಾಯಿತು. ಅವಳ ವಿಷಯವೂ ಹೊರ ಬಿದ್ದಿದೆಯೆ?

"ಏನೂ ಅಡ್ಡಿಯಿಲ್ಲ ಸ್ವಾಮಿಜಿ. ಅವರೇ ಬರುತ್ತಾ ಇರಲಿ ನಮ್ಮ ಮನೆಗೆ. ಯಾರಿಗೂ ಗೊತ್ತಾಗದಂತೆ ಅವರನ್ನು ಕರೆದು ತಂದು ಮತ್ತೆ ಕಳಿಸಿ ಬರುವ ಕೆಲಸವನ್ನು ನಮ್ಮ ಮನೆಯವರು ನೋಡಿಕೊಳ್ಳುತ್ತಾರೆ. ನೀವು ಯಾವುದಕ್ಕೂ ಅನುಮಾನಿಸಬೇಡಿ."

"ಏನೂ ಬೇಡ ಕರಲಿಂಗಯ್ಯ."

"ಇರಲಿರಲಿ. ನಿಮಗೇನೂ ಸಂಕೋಚ ಬೇಡ. ಇಂದು ರಾತ್ರಿಯೇ ಮಹಾದೇವಕ್ಕನವರನ್ನು ನಮ್ಮಲ್ಲಿ ಭೆಟ್ಟಿ ಮಾಡಿಸುತ್ತೇವೆ ನಿಮಗೆ," ಎಂದು ನುಡಿದು ಆತ ಎದ್ದು ಹೋದ.

೨೧—೧೦—೧೯೪ . .

ರಾತ್ರಿ ಮಹಾದೇವಿಯನ್ನು ಕರೆಸಿಯೇ ಬಿಟ್ಟ ಕರಲಿಂಗಯ್ಯ. ಸುಮಾರು ಹನ್ನೊಂದು ಗಂಟೆಯಾಗಿರಬಹುದು ಆಗ. ಆ ಸಮಯದಲ್ಲಿ ಮಠದ ಆವಾರ ದಲ್ಲಿ ಯಾರೂ ಎಚ್ಚರವಾಗಿರುವುದಿಲ್ಲ.

ಪಾದುಕೆಗಳನ್ನು ಕೊಟಡಿಯಲ್ಲೇ ಬಿಟ್ಟು ಬರಿಗಾಲಲ್ಲೇ ಕರಲಿಂಗನ ಮನೆಗೆ ಹೋದೆ. ಹೊರಬಾಗದ ಕೊಟಡಿಯಲ್ಲಿ ಚಿಕ್ಕ ದೀಪವೊಂದು ಬೆಳಕು ಬೀರುತ್ತಿತ್ತು. ಅಲ್ಲಿದ್ದ ಸಣ್ಣ ಮಂಚದ ಮೇಲೆ ಮುಖವನ್ನೊರೆಸಿಕೊಳ್ಳುತಾ ಕುಳಿತಿದ್ದಳು ಮಹಾದೇವಿ.

“ಇಲ್ಲಿಗೇತಕ್ಕೆ ಕರೆಯಿಸಿದಿರಿ? ನನಗೆ ಬಹಳ ಭಯವಾಗುತ್ತಿದೆ.”

“ನನಗೂ ಭಯವೇ. ಏನು ಮಾಡುವುದು. ಕರಲಿಂಗಯ್ಯ ಹಟ ತೊಟ್ಟು ನಿನ್ನನ್ನು ಕರೆಯಿಸಿದ್ದಾನೆ. ರಸ್ತೆಯಲ್ಲಿ ಯಾರಾದರೂ ನೋಡಿದರೇ ದೇವೀ?”

“ಯಾರು ಬಲ್ಲರು? ನನಗೇಕೋ ಇದೆಲ್ಲಾ ಹೇಸಿಕೆಯಾಗತೊಡಗಿದೆ.” ಮಹಾದೇವಿ ಕುಗ್ಗಿದ ಧ್ವನಿಯಲ್ಲಿ ಹೇಳಿದಳು.

ಹೇಸಿಕೆ! ನಾನು ವಿಸ್ಮಯದಿಂದ ಅವಳ ಮುಖವನ್ನು ದಿಟ್ಟಿಸಿ ನೋಡುತ್ತ ಕೇಳಿದೆ: “ಯಾಕೆ ದೇವೀ, ಇಂಥ ಮಾತು? ಏನಾಗಿದೆ ನಿನಗೆ?”

“ಏನಾಗಿದೆಯೊ. ಅಂತೂ ಇದೆಲ್ಲ ತಪ್ಪು, ಇದೆಲ್ಲ ಪಾಪ, ಇದೆಲ್ಲ ಅಸಹ್ಯ ಅಂತ ಅನ್ನಿಸತೊಡಗಿದೆ ಈಚೀಚೆಗೆ. ಕೆಲದಿನಗಳಿಂದ ನಮ್ಮವರಿಗೆ ಜೀರೆ ನೆಟ್ಟಗಿಲ್ಲ. ಹಾಸಿಗೆ ಹಿಡಿದು ಮಲಗಿದ್ದಾರೆ.”

“ಏನಾಗಿದೆ ಅವರಿಗೆ?”

“ವೇಶೀಪಟ್ಟಣದಲ್ಲಿ ನೆಗಡಿ ಶೀತವಾಗಿತ್ತಲ್ಲಾ ಅದೇ ಮತ್ತೆ ಮರುಕಳಿಸಿದಂತಿದೆ. ಭಯಂಕರ ಕೆಮ್ಮು. ಕಾಲುಗಳೆರಡೂ ಬಾತುಕೊಂಡಿವೆ. ರಾತ್ರಿಯೆಲ್ಲಾ ನಿದ್ದೆಯೂ ಬರುವುದಿಲ್ಲ.”

ನಾನು ಗಾಬರಿಗೊಂಡು ಕೇಳಿದೆ: “ನಿದ್ದೆ ಬರುವುದಿಲ್ಲವೆ? ಹಾಗಾದರೆ ನೀನಿತ್ತ ಹ್ಯಾಗೆ ಬಂದೆ?”

“ನಾನು ಬರುವಾಗ ಸ್ವಲ್ಪ ಜೊಂಪು ಹತ್ತಿದ ಹಾಗಿತ್ತು. ನಿಜವಾಗಿಯೂ ಬರುವ ಮನಸ್ಸಿರಲಿಲ್ಲ ನನಗೆ. ಅವರು ರೋಗದಿಂದ ಜರ್ಜರಿತರಾಗಿ ಅಲ್ಲಿ ನರಳುತ್ತ ಬಿದ್ದಿರುವಾಗ ನಾನು....ಇಲ್ಲಿ....ಅಯ್ಯೋ....” ಎನ್ನುತ್ತಾ ಆಕೆ ಸೆರಗಿನಲ್ಲಿ ಮುಖ ಮುಚ್ಚಿಕೊಂಡಳು.

ನಾನು ಅವಳ ತಲೆಗೂದಲಿನ ಮೇಲೆ ಕೈಯಾಡಿಸುತ್ತ ಸಂತೈಸುವ ಸ್ವರದಲ್ಲಿ–“ಶೂಶ್ಶೂ. ದುಃಖಿಸಬೇಡ ದೇವೀ. ನಿನಗೆ ಮನಸ್ಸಿಲ್ಲವಾದರೆ

ಮನೆಗೆ ಹೋಗಿಬಿಡು. ಬಲಾತ್ಕಾರದಿಂದ ಏನನ್ನೂ ಮಾಡುವಂಥವನಲ್ಲ ನಾನು...." ಎಂದೆ.

"ಅದೆಲ್ಲಾ ಸರಿ. ನನ್ನ ನಿಮ್ಮ ಭೆಟ್ಟಿಯೇ ಆಗಬಾರದಾಗಿತ್ತು ವೇಶೀ ಪಟ್ಟಣದಲ್ಲಿ....ಕೆಡುತ್ತಿರಲಿಲ್ಲ....ನಾನು ಕೆಡುತ್ತಿರಲಿಲ್ಲ...." ಎಂದು ನುಡಿಯುತ್ತ ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವಳ ಅಳು ಮುಗಿಯಬೇಕಾದರೆ ಹದಿನೈದು ನಿಮಿಷ ಬೇಕಾಯಿತು.

ಮುಂದೆ ಹ್ಯಾಗೆ ದೇವೀ ?" ನನ್ನ ನಿನ್ನ ಸಂಬಂಧ ಇಂದಿಗೇ ಮುಗಿದಂತಾಯಿತೇ? ಎಂದು ನಾನು ಕೇಳಿದೆ.

"ಬೇರೆ ಉಪಾಯವೇ ಇಲ್ಲ. ಈಗಾಗಲೆ ನಮ್ಮವರಿಗೆ ನಮ್ಮಿಬ್ಬರ ಬಗ್ಗೆ ಸಂಶಯ ಬಂದಂತೆ ತೋರುತ್ತದೆ."

"ಹಾ! ಏನಾದರೂ ಅಂದರೇನು ?"

"ಏನೂ ಅನ್ನಲಿಲ್ಲ. ಈಚೆಗೆ ಮಾತಾಡುವುದನ್ನೂ ಬಿಟ್ಟುಬಿಟ್ಟಿದ್ದಾರೆ. ಹಾಲು ಹಣ್ಣು ಕೂಡಾ ಸಾಕಷ್ಟು ತೆಗೆದುಕೊಳ್ಳುವುದಿಲ್ಲ. ಡಾಕ್ಟರು ಕೊಟ್ಟ ಔಷಧವನ್ನೂ ಕುಡಿಯುವುದಿಲ್ಲ. ಯಾವಾಗಲೂ ಬಸವಾ ಬಸವಾ ಎಂದು ಜಪ ಮಾಡುತ್ತಿರುತ್ತಾರೆ. ಮುಖದ ಮೇಲೆ ವಿಚಿತ್ರ ಕಳೆ ಕಾಣುತ್ತದೆ. ಅಂದು ನಾನು ಸೆಟ್ಟರ ಬಂಗಲೆಗೆ ಬಂದದ್ದನ್ನು ಯಾರಾದರೂ ನೋಡಿ ಅವರಿಗೆ ತಿಳಿಸಿರುವರೋ ಏನೊ ಯಾರಿಗೆ ಗೊತ್ತು. ಅವರೇ ಬಂದು ನೋಡಿದ್ದರೂ ನೋಡಿರಬಹುದು .... ಅಯ್ಯೋ....ಇಪ್ಪತ್ತು ವರ್ಷಗಳವರೆಗೆ ಕಾದುಕೊಂಡು ಬಂದಿದ್ದ ನನ್ನ ಪಾತಿವ್ರತ್ಯ ನಿಮ್ಮನ್ನು ನೋಡುತ್ತಲೂ ಮಣ್ಣುಗೂಡಿತಲ್ಲ.... ನನ್ನ ಬಾಳುವೆಯೆಲ್ಲಾ ಹಾಳಾಯಿತು....ನನ್ನ ಗಂಡ....ಹಸುಗೂಸಿನ ಹಾಗಿರುವ ನನ್ನ ಗಂಡ....ದೇವರ ಹಾಗಿರುವ ನನ್ನ ಗಂಡ....ಅವರ ರೋಗಕ್ಕೆ ನಾನೇ ಕಾರಣಳಾದೆನೇನೋ...." ಎನ್ನುತ್ತ ಮತ್ತೆ ರೋದಿಸತೊಡಗಿದಳು ಮಹಾದೇವಿ.

೫

ರುದ್ರದೇವರು

★

"ನಿಮಗೆ ಎಂಥ ಕೆಲಸವಿದ್ದರೂ ಬಿಟ್ಟು, ಕೂಡಲೆ ಬಂದು ದರ್ಶನ ಪಡೆಯಿರಿ. ಬಾಕಿ ಸಮಕ್ಷಮದಲ್ಲಿ ಅಪ್ಪಣೆ ಕೊಡಿಸೋಣವಾಗುತ್ತದೆ."

'ದರ್ಶನ'ಕ್ಕೆ ಕರೆಯುವ, 'ಅಪ್ಪಣೆ' ಕೊಡಿಸುವ ಈ ಆಸಾಮಿ ಯಾವುದಪ್ಪಾ! ಎಂದು ಕೊಂಚ ಅಚ್ಚರಿಪಟ್ಟುಕೊಳ್ಳುತ್ತ ನಾನು ಆ ಕಾರ್ಡಿನ ಕೆಳಗಿದ್ದ ಸಹಿಯನ್ನು ನೋಡಿದೆ. "ಇತ್ಯಾಶೀ: ಸಿದ್ಧವೀರ ಸ್ವಾಮಿಗಳು."

ನನಗೆ ಅರ್ಥವಾಯಿತು, ನಗೆಯೂ ಬಂದಿತು. ಅವರು ವೇಶಿಪಟ್ಟಣದಿಂದ ಆಗಮಿಸಿದುದು, ಜರತಾರಿ ಜಗದ್ಗುರು ಪೀಠಕ್ಕೆ ಅಧಿಕಾರಿಯಾಗಲಿದ್ದುದು ಎಲ್ಲವೂ ನನಗಾಗಲೆ ಪತ್ರಿಕೆಗಳ ಮೂಲಕ ತಿಳಿದು ಬಂದಿತ್ತು.

ನನಗೂ ಅಂಥ ಕೆಲಸವೇನೂ ಇರಲಿಲ್ಲ. ಗೊಬ್ಬೂರಿನಲ್ಲಿ ಹರಿಜನ ಪ್ರಸಾದನಿಲಯವನ್ನು ಸ್ಥಾಪಿಸಬೇಕೆಂಬ ನನ್ನ ಪ್ರಯತ್ನ ಕೊನೆಗೂ ಯಶಸ್ವಿಯಾಗಿರಲಿಲ್ಲ. ಆ ಹಾಳು ಮಠದಲ್ಲಿ ನೊಣ ಜಾಡಿಸುತ್ತ ಕುಳಿತಿರುವುದೂ ಬೇಸರಕ್ಕಿಟ್ಟುಕೊಂಡಿತ್ತು. ಸಿದ್ಧವೀರಸ್ವಾಮಿಗಳ ಜೀವನದ ರಹಸ್ಯಗಳನ್ನೆಲ್ಲ ಅರಿತುಕೊಳ್ಳಬೇಕೆಂಬ ಬಲು ದಿನಗಳ ನನ್ನ ಬಯಕೆ ಮತ್ತೆ ಪುಟಿದೆದ್ದು ನಿಂತುಕೊಂಡಿತು. ಅಂದೇ ಹೊರಟುಬಿಟ್ಟೆ.

ನನ್ನನ್ನು ನೋಡುತ್ತಲೂ ಸ್ವಾಮಿಗಳು ಕೇಳಿದರು :

"ಏನು ನಡಸಿದ್ದೀರಿ ಗೊಬ್ಬೂರಿನಲ್ಲಿ?"

"ಏನು ನಡಸೋಣ? ಎಲ್ಲ ಸ್ವಾಮಿಗಳು ಏನು ನಡಸಿದ್ದಾರೋ ಅದನ್ನೇ."

ಅವರು ನಗುತ್ತಾ –"ಸರಿ. ಸರಿ. ಮಠಕ್ಕೆ ಆಸ್ತಿ ಗೀಸ್ತಿ ಇದ್ದರೆ ಅದೊಂದು ರೀತಿ. ನಿಮ್ಮ ಆ ಭಿಕಾರಿ ಮಠಕ್ಕೇನಿದೆ?" ಎಂದರು.

"ಬಿದ್ದ ಗೋಡೆಗಳು, ಗೆದ್ದಲು ಹಿಡಿದ ಕಂಬಗಳು, ಸೋರುವ ಜಂತೆ, ಓಡಾಡುವ ಹೆಗ್ಗಣಗಳು...." ಎಂದು ನಾನೂ ನಗುತ್ತ ಹೇಳಿದೆ.

"ಹೋಗಲಿ. ನಾವಂತೂ ಜಗದ್ಗುರುಗಳಾದೆವು, ನಮ್ಮ ಜತೆಗೇ ಬಂದು ನಮ್ಮ ಶಿಷ್ಯರಂತೆ ಇದ್ದುಬಿಡಿ. ನೀವು ಪ್ರತಿಭಾಶಾಲಿಗಳು. ಯೋಗ್ಯತಾ

ನಂತರು. ನಿಮ್ಮಿಂದ ನಾಡಿಗೆ ದೊಡ್ಡ ಸೇವೆ ಸಲ್ಲಬೇಕಾಗಿದೆ. ಕೆಲ ದಿನ ಕಳೆದ ಬಳಿಕ ನಿಮ್ಮ ಯೋಗ್ಯತೆಗೆ ತಕ್ಕಂಥ ದೊಡ್ಡ ಮಠದ ಅಧಿಕಾರ ವೊಂದನ್ನು ನಿಮಗೆ ಕೊಡಿಸುವೆವು. ಹಂ! ಏನೆನ್ನುತ್ತೀರಿ?"

ದೊಡ್ಡ ಮಠದ ಅಧಿಕಾರಿಯಾಗುವ ಆಸೆಯೇನೂ ನನಗಿರಲಿಲ್ಲ. ಸ್ವಾಮಿಗಳ ಜತೆಯಲ್ಲಿ ಒಂದೆರಡು ವರ್ಷ ಕಾಲ ಕಳೆಯುವ ಮನಸ್ಸಿದ್ದುದೆಷ್ಟೋ ಅಷ್ಟೆ. ಸರಿ. ಅಂದಿನಿಂದ ನಾನು ಅವರ 'ಮರಿ'ಯಾಗಿ ಅಲ್ಲಿ ತಳವೂರಿದೆ.

ಜಗದ್ಗುರುಗಳು ನಿಸ್ಸಂಕೋಚವಾಗಿ ಎಲ್ಲ ಕೆಲಸಗಳನ್ನೂ ನನ್ನಿಂದ ಮಾಡಿಸಿಕೊಳ್ಳುತ್ತಿದ್ದರು. ಅವರ ಬಟ್ಟೆ ತೊಳೆಯುವುದನ್ನು ಮೊದಲು ಮಾಡಿ ಕೊಂಡು ಹಾಸುಗೆ ಸಿದ್ಧಪಡಿಸುವವರೆಗೆ ಎಲ್ಲ ಬಗೆಯ ಸೇವೆಯನ್ನೂ ನಾನು ಮಾಡಬೇಕಾಗುತ್ತಿತ್ತು. ಮೊದಮೊದಲು ಕೆಲ ದಿನಗಳವರೆಗೆ ನನ್ನನ್ನು ಗೌರವದಿಂದ ನಡಸಿಕೊಂಡರು. ಬರಬರುತ್ತ ಅದೂ ತಪ್ಪಿಹೋಯಿತು. "ಬಾರೋ ಮರಿ, ಹೋಗೋ ಮರಿ," ಎಂದು ಏಕವಚನದಲ್ಲಿ ಸಂಬೋಧಿಸು ವುದಕ್ಕೂ ಪ್ರಾರಂಭಿಸಿಬಿಟ್ಟರು. ನಾನು ಮೊದಲಿನಿಂದಲೂ ಸ್ವಾಭಿಮಾನಿ. ಯಾರೆದುರಿನಲ್ಲೂ ಆತ್ಮಗೌರವವನ್ನು ಕಳೆದುಕೊಂಡವನಲ್ಲ. ಆದರೂ ಸ್ವಾಮಿಗಳ ಹತ್ತಿರ ಮಾತ್ರ ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿರಬೇಕಾ ಯಿತು. ಅವರ ನಿಜಸ್ವರೂಪವನ್ನು ಪೂರ್ಣವಾಗಿ ಅರಿತುಕೊಳ್ಳುವವರೆಗೂ ಅವರನ್ನು ಬಿಟ್ಟು ಹೊರಡಬಾರದೆಂದೇ ನಾನು ನಿರ್ಧರಿಸಿದ್ದೆ.

ಕರಡೆಪ್ಪಶೆಟ್ಟರ ಪತ್ನಿ ಮಹಾದೇವಿಯನ್ನು ಸ್ವಾಮಿಗಳು ಇಟ್ಟುಕೊಂಡಿ ರುವ ಸಂಗತಿಯೂ ನನಗೆ ಬಲು ಬೇಗ ಗೊತ್ತಾಯಿತು. ನನ್ನ ಸಹಾಯ ವಿರದಿದ್ದಲ್ಲಿ ಸ್ವಾಮಿಗಳು ಆ ಕೆಲಸ ಮಾಡುವುದೂ ಕಷ್ಟವಿದ್ದಿತು. ಆಕೆ ಅವರ ಕೊಟಡಿಗೆ ಬಂದಾಗಲೆಲ್ಲ ಬಾಗಿಲ ಹೊರಗೆ ನಿಂತು ಕಾವಲು ಮಾಡುವ ಕೆಲಸವೂ ನನ್ನದಾಯಿತು. "ಯಾರಿಗೂ ಹೇಳಬಾರದು ಮರಿದೇವರೆ. ನಿಮಗೆ ದೊಡ್ಡ ಮಠ ಕೊಡಿಸುತ್ತೇವೆ. ನಿಮ್ಮನ್ನೂ ಪ್ರಖ್ಯಾತ ಸ್ವಾಮಿಗಳನ್ನಾಗಿ ಮಾಡುತ್ತೇವೆ," ಎಂದೆಲ್ಲ ಹೇಳಿ ನನ್ನನ್ನು ಬಲೆಗೆ ಹಾಕಿಕೊಳ್ಳಲು ಯತ್ನಿಸು ವರು ಸ್ವಾಮಿಗಳು. ನಾನು ಮುಗುಳ್ನಗೆ ನಕ್ಕು ಸುಮ್ಮನಾಗುತ್ತಿದ್ದೆ.

ಅವರಿವರಿಗೆ ಪತ್ರ ಬರೆಯಿಸುವ ಕೆಲಸವನ್ನೂ ಅವರು ನನ್ನಿಂದಲೇ ಮಾಡಿಸುತ್ತಿದ್ದರು. "ಜಗದ್ಗುರುವಾದ ನಾವೇ ಸ್ವತಃ ನಮ್ಮ ಹಸ್ತಾಕ್ಷರಗಳಲ್ಲಿ ಅಂಥಿಂಥ ಜನರಿಗೆ ಬರೆಯುವುದೆಂದರೆ ನಮ್ಮ ಘನತೆಗೆ ಕುಂದು. ನೀವೇ

ಬರೆದು ಸೆಕ್ರೆಟರಿ – ಜರತಾರಿ ಜಗದ್ಗುರು ಮಹಾ ಸಂಸ್ಥಾನ ಮಠ – ಎಂದು ಸಹಿ ಹಾಕಬೇಕು. ಆದರಿಂದ ಜನರ ಮೇಲೆ ಪ್ರಭಾವವೂ ಬೀಳುತ್ತದೆ," ಎಂದು ಹೇಳುತ್ತಿದ್ದರು.

ಪಟ್ಟಾಧಿಕಾರ ದೊರೆತ ಕೆಲ ದಿನಗಳಲ್ಲಿಯೆ ಸ್ವಾಮಿಗಳಿಗೆ ಮಠದ ಬಗ್ಗೆ ಬಲು ಬೇಸರು ಬಂದಿತು. ಅವರ ಕೈಯಲ್ಲಿ ಕಾಸಿಲ್ಲದಂತಾದುದೇ ಅದಕ್ಕೆ ಮುಖ್ಯ ಕಾರಣ. ಹಣವೆಲ್ಲಾ ಇರುತ್ತಿದ್ದುದು ಕಾರಭಾರಿ ಕರಲಿಂಗಯ್ಯನ ಹತ್ತಿರ. ಆತ ಸ್ವಾಮಿಗಳಿಗೆ ಕವಡೆಯ ಬೆಲೆಯನ್ನೂ ಕೊಡುತ್ತಿರಲಿಲ್ಲ. ಟ್ರಸ್ಟ್ ಕಮಿಟಿಯ ಸದಸ್ಯರಾದ ಖರೇಸೆಟ್ಟಿ, ಜಡಿಯಪ್ಪ ಇಬ್ಬರೂ ಸ್ವಾಮಿಗಳನ್ನು ಬೆದರಿಸಿಕೊಂಡಿದ್ದರು. ಸ್ವಾಮಿಗಳಿಗೂ ಅವರ ಬಗ್ಗೆ ಬಹಳ ಭೀತಿಯಿತ್ತು. ಸ್ವಾಮಿಗಳ ವ್ಯಭಿಚಾರದ ರಹಸ್ಯ ಅವರಿಗೆ ಗೊತ್ತಾಗಿದ್ದುದೇ ಆ ಭೀತಿಗೆ ಕಾರಣವಾಗಿತ್ತು.

"ಇಲ್ಲಿರುವುದು ಬಲು ಬೇಸರವಾಗಿದೆ. ಕೆಲ ದಿನಗಳ ಮಟ್ಟಿಗೆ ಎಲ್ಲಿಗಾದರೂ ಪ್ರವಾಸ ಹೋಗಿಬರೋಣವೇ ಮರಿ!" ಎಂದು ಒಂದು ದಿನ ನನ್ನ ಹತ್ತಿರ ಪ್ರಸ್ತಾಪಿಸಿದರು.

"ಎಲ್ಲಿಗೆ ಹೋಗೋಣ ಬುದ್ಧೀ ?"

"ನಮ್ಮ ಪೀಠದ ಅಧೀನದಲ್ಲಿ ಹಳ್ಳಿ ಪಳ್ಳಿಗಳಲ್ಲೆಲ್ಲಾ ಮಠಗಳುಂಟು. ಒಂದೊಂದು ಮಠದಲ್ಲಿ ಒಂದೊಂದು ತಿಂಗಳು ಇರಲೂ ಬಂದೀತು, ಆದರೆ ನಮಗೆ ಹಳ್ಳಿಗಳೆಂದರಾಗದು."

"ಯಾಕೆ?" ನಾನು ಕುತೂಹಲದಿಂದ ಕೇಳಿದೆ.

"ಏನಿದೆ ಮಣ್ಣು ಹಳ್ಳಿಗಳಲ್ಲಿ? ಬುದ್ಧಿಗೇಡಿ ಹುಂಬ ರೈತರು, ಕಪ್ಪು ಬಣ್ಣದ ಕುರೂಪಿ ಹೆಂಗಸರು, ಅರಸಿಕ ವಾತಾವರಣ, ಜೋಳದ ರೊಟ್ಟಿ ಅಂಬಲಿಯ ಹೊಲಸು ಊಟ....ಪಟ್ಟಣಗಳಲ್ಲಾದರೋ ಸುಶಿಕ್ಷಿತ ಜನರಿರುತ್ತಾರೆ, ಸುಧಾರಕ ಮನೋವೃತ್ತಿಯ ಸುಂದರ ಸ್ತ್ರೀಯರಿರುತ್ತಾರೆ, ಅಕ್ಕನ ಬಳಗಗಳಿರುತ್ತವೆ, ಸಾಹಿತಿಗಳು ಕಲಾವಿದರು ರಸಿಕರ ಸಹವಾಸವಿರುತ್ತದೆ. ಸಭೆ, ಸಮ್ಮೇಲನ, ಭಾಷಣ, ಮೆರವಣಿಗೆ, ಪತ್ರಿಕಾ ಪರಿಷತ್ತು, ಸಾವಿರಾರು ಜನರ ಗುಂಪು – ಎಲ್ಲಾ ಅದ್ಭುತವಾಗಿರುತ್ತದೆ. ದಿನವೂ ಒಬ್ಬ ಶ್ರೀಮಂತ ಭಕ್ತರ ಮನೆಗೆ ಊಟಕ್ಕೆ ಹೋಗಬಹುದು, ಹೋಳಿಗೆ, ಕರಜೀಕಾಯಿ, ಸುರಳೀ ಹೋಳಿಗೆ, ಖೀರು, ಸೇವಿಗೆ ಪಾಯಸ, ಹಾಲು ತುಪ್ಪ – ಏನು

ಬೇಕೋ ಎಲ್ಲಾ ಹೊಡೆಯಬಹುದು. ಮೇಲೆ ನೂರಿನ್ನೂರು ರೂಪಾಯಿಗಳ ವರೆಗೂ ಪಾದಕಾಣಿಕೆಯೆಬ್ಬಿಸಬಹುದು. ದೊಡ್ಡ ದೊಡ್ಡ ಮಂಚಗಳ ಮೇಲೆ ಶಯನ....ಮತ್ತು ಚೆಲುವೆಯರು...." ಎಂದು ನುಡಿದು ಸ್ವಾಮಿಗಳು ನಗ ತೊಡಗಿದರು.

ನನಗೆ ಒಳಗೊಳಗೇ ಅಸಹ್ಯವೆನಿಸುತ್ತಿದ್ದರೂ ಅದನ್ನು ಹೊರಗೆ ತೋರಿ ಸದೆ ಹೇಳಿದೆ: "ಹಾಗಾದರೆ ಕಾರ್ಯಕ್ರಮ ತಯಾರಿಸಿಬಿಡಿ ಸ್ವಾಮಿಜಿ. ಹೊರಟುಬಿಡೋಣ."

"ನಾವಾಗಿಯೆ ಹಾಗೆಲ್ಲ ಹೋಗಲು ಬರುವುದಿಲ್ಲ. ನಾವೀಗ ಜಗದ್ಗುರು ಗಳೆಂಬುದನ್ನು ಮರೆಯಬೇಡ. ಈಗಾಗಲೆ ನಮಗೆ ಅಖಂಡ ಕರ್ನಾಟಕ ಕೀರ್ತಿಯೂ ದೊರೆತಿದೆ. ಅದನ್ನು ಸರಿಯಾಗಿ ಉಪಯೋಗಮಾಡಿಕೊಳ್ಳ ಬೇಕು. ಅವಸರ ಮಾಡಬಾರದು. ಬೇರೆ ಬೇರೆ ನಗರಗಳಿಂದ ನಮಗೆ ಆಮಂತ್ರಣ ಬರುವಂತೆ ಮಾಡುವುದು ಮೊದಲನೆಯ ಕೆಲಸ."

"ಆಮಂತ್ರಣಗಳಾದರೂ ನಮಗೆ ಬೇಕಾದಾಗಲೇ ಹೇಗೆ ಬಂದಾವು?"

"ಬರುತ್ತವೆ, ಮರೀ. ಎಲ್ಲಾ ಬರುತ್ತವೆ. ಮೊನ್ನೆ ಪಟ್ಟಾಭಿಷೇಕದ ಕಾಲಕ್ಕೆ ಅಷ್ಟೊಂದು ಜನರನ್ನು ಕರೆಯಿಸಿದ್ದೆವಲ್ಲಾ – ಅದು ಯಾತಕ್ಕಾಗಿ? ಮೊದಲೇ ಒಂದು ಪ್ಲ್ಯಾನ್ ತಯಾರುಮಾಡಿದ್ದೇವೆ ನಾವು. ಫಾಯಿವ್ ಇಯರ್ ಪ್ಲ್ಯಾನು! ಅದರ ಪ್ರಕಾರವೇ ಪ್ರತಿಯೊಂದು ಕೆಲಸವನ್ನೂ ಸಾಗಿಸಿ ದ್ದೇವೆ," ಎಂದು ಹೇಳಿ, ಒಂದು ಕ್ಷಣ ಸುಮ್ಮನಿದ್ದು ಅವರು ಮತ್ತೆ ಹೇಳಿದರು: "ಕಾರ್ಯಕ್ರಮದಲ್ಲಿ ಮೊದಲನೆಯ ನಂಬರಿನ ವಿಷಯ: ಓರೆಕೋರೆ ನಗರಕ್ಕೆ ಹೋಗುವುದು, ಅಲ್ಲಿ ಮಾನಪತ್ರ ಸ್ವೀಕರಿಸುವುದು. ಮೆರವಣಿಗೆ ಮಾಡಿಸಿ ಕೊಳ್ಳುವುದು; ನಂಬರ್ ಎರಡು: ಗೊಬ್ಬೂರಿಗೆ ದಯಮಾಡಿಸುವುದು. ಮಾನಪತ್ರ ಮೆರವಣಿಗೆ ಇತ್ಯಾದಿ...."

ನಾನು ವಿಸ್ಮಯದಿಂದ ಅವರ ಮುಖವನ್ನೇ ನೋಡುತ್ತ ಕುಳಿತಿದ್ದೆ. "ಲೆಟರ್‌ಹೆಡ್ ತಕ್ಕೊಂಡು ಸಿದ್ಧವಾಗು," ಎಂದು ಆಜ್ಞೆಯಾಯಿತು. ನಾನು ಪತ್ರ ಬರೆದುಕೊಳ್ಳಲು ತಯಾರಾಗಿ ಕುಳಿತೆ. ಸ್ವಾಮಿಗಳು ಹೇಳತೊಡಗಿದರು.

"ಶ್ರೀ ಜರತಾರಿ ಜಗದ್ಗುರು ಮಹಾ ಸಂಸ್ಥಾನದಿಂದ – ಸನ್ನಿಧಿಯ ಕೃಪಾ ಪಾತ್ರರಾದ ನಮ್ಮ 'ಮಡಿವಂತಿ' ವಾರಪತ್ರಿಕೆ ಸಂಪಾದಕರು ಶ್ರೀ ನರಿರಾಯರು ಅವರಿಗೆ – ಮಾಡ್ಪ ಆಶೀರ್ವಾದಗಳು – ತರುವಾಯ ಸದ್ಯ ಆದೇಶವೀಯುವುದೇ

ನೆಂದರೆ: ಪಟ್ಟಾಭಿಷೇಕದ ಕಾಲಕ್ಕೆ ನೀವಿಲ್ಲಿಗೆ ಬಂದಿದ್ದಾಗ ಓರೆಕೋರೆ ನಗರಕ್ಕೆ ಮಹಾಸನ್ನಿಧಿ ಚಿತ್ತೈಸಬೇಕೆಂದೂ, 'ಸಾಹಿತ್ಯಗೋಷ್ಠಿ'ಯೆಂಬ ಸಂಸ್ಥೆಯ ಉದ್ಘಾಟನ ಸಮಾರಂಭವನ್ನು ನೆರವೇರಿಸಬೇಕೆಂದೂ, ಆ ಕಾಲಕ್ಕೆ ಸನ್ನಿಧಿಗೆ ಸನ್ಮಾನಪತ್ರಿಕೆಯನ್ನರ್ಪಿಸಲಾಗುವುದೆಂದೂ ಅರಿಕೆ ಮಾಡಿಕೊಂಡಿದ್ದಿರಷ್ಟೆ. ಸನ್ನಿಧಿಯವರು ಈಗ ವಿರಾಮವಾಗಿರುವುದರಿಂದ ಇನ್ನೊಂದು ವಾರದೊಳಗಾಗಿ ಈ ಕಾರ್ಯಕ್ರಮವನ್ನೇರ್ಪಡಿಸಿ, ಮಹಾಸನ್ನಿಧಿಯ ಘನತೆಗೆ ಸರಿಹೋಗುವಂತೆ ಸ್ವಾಗತ, ಮೆರವಣಿಗೆ ಇತ್ಯಾದಿ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ಆ ಬಗ್ಗೆ ಅರಿಕೆ ಮಾಡಿಕೊಳ್ಳೋಣವಾಗಬೇಕು. ಸಮಾರಂಭದ ಖರ್ಚು ವೆಚ್ಚ ವಹಿಸುವ ಶಕ್ತಿ ಸಾಹಿತ್ಯಗೋಷ್ಠಿಗಿಲ್ಲದಿದ್ದರೂ ಚಿಂತೆ ಮಾಡಬಾರದು. ಆ ಬಗ್ಗೆ ಸಮಕ್ಷಮದಲ್ಲಿ ವ್ಯವಸ್ಥೆ ಮಾಡಲಾಗುವುದು. ನಿಮ್ಮ ಪತ್ರಿಕೆಗೂ ಉದಾರ ಸಹಾಯ ಸಲ್ಲಿಸುವ ಯೋಜನೆಯೊಂದನ್ನು ಸಿದ್ಧಗೊಳಿಸಿದೆ."

★

ಮೂರು ದಿನಗಳೊಳಗಾಗಿ ಉತ್ತರವೂ ಬಂತು. ಮೊದಲು ಓರೆಕೋರೆ ನಗರಕ್ಕೆ ಹೋಗಿ ಅಲ್ಲಿಂದ ಗೊಬ್ಬೂರಿಗೆ ಪಯಣ ಬೆಳಸುವುದೆಂದು ನಿರ್ಧರವಾಯಿತು. ಓರೆಕೋರೆ ನಗರದಲ್ಲೊಂದು ವಿದ್ಯಾರ್ಥಿನಿಲಯವಿದೆ. ಮೂವತ್ತು ವರ್ಷಗಳಿಂದ ಶಿವಶಂಕರಸ್ವಾಮಿಗಳು ಅದನ್ನು ನಡಸುತ್ತ ಬಂದಿದ್ದಾರೆ. ಒಂದೆರಡು ದಿನಗಳ ಮಟ್ಟಿಗೆ ಅಲ್ಲಿಯೆ ಬಿಡಾರ ಹೂಡುವುದೆಂದು ಗೊತ್ತಾಯಿತ್ತು.

ಕಾರ್ಯಕ್ರಮದ ಬಗೆಗೆ ದಿನಪತ್ರಿಕೆಗಳಲ್ಲೆಲ್ಲ ಪ್ರಕಟನೆ ಕೊಡುವುದಲ್ಲದೆ ಹಸ್ತಪ್ರತಿಗಳ ಮೂಲಕವೂ ಪ್ರಚಾರ ಮಾಡಿ ಸಮಾರಂಭಗಳಿಗೆ ಸಾವಿರಾರು ಜನ ಸೇರುವಂತೆ ಮಾಡಬೇಕೆಂದು ನರಿರಾಯನಿಗೆ ಸೂಚಿಸಲಾಯಿತು.

ಸಮಾರಂಭದ ಹಿಂದಿನ ದಿನವೇ ಓರೆಕೋರೆ ನಗರಕ್ಕೆ ಹೊರಟೆವು – ಖರೇಸೆಟ್ಟರ ಕಾರಿನಲ್ಲಿ. ಅದೊಂದು ಹಳೆಯ ಯಂತ್ರ. ಖರೀದಿ ಮಾಡಿದುದಕ್ಕೆ ಮೂವತ್ತು ವರ್ಷವಾದರೂ ಆಗಿದ್ದೀತು. ಕುಂಟುತ್ತ ಕಿರಿಚುತ್ತ ಸಾಗುತ್ತದೆ. ಹಾದಿಯಲ್ಲಿ ಹಟ ಹಿಡಿದು ಬಿದ್ದಿತೆಂದರೆ ಅದನ್ನು ರಮಿಸಿ ಹೊರಡಿಸಲು ನಾಲ್ಕೈದು ತಾಸುಗಳ ಅವಧಿಯಾದರೂ ಬೇಕಾಗುತ್ತದೆ. ಆ ಕಾರನ್ನುಪಯೋಗಿಸುವುದರಿಂದ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚು.

ಆದರೂ ಸ್ವಾಮಿಗಳು ಅದರಲ್ಲೇ ಹೊರಟರು. ರೈಲಿನಲ್ಲಿ ಸಂಚರಿಸುವುದು ಅವರ ಘನತೆಗೆ ಕಡಮೆಯಂತೆ.

★

ಬೆಳಗ್ಗೆ ಆರುಗಂಟೆಗೆ ಜರತಾರಿ ನಗರದಿಂದ ಹೊರಟವರು ಸಾಯಂಕಾಲ ಎಂಟು ಗಂಟೆಯೊಳಗಾಗಿ ಓರೆಕೋರೆ ನಗರಕ್ಕೆ ಬಂದು ತಲ್ಪಿ, ನೇರವಾಗಿ ವಿದ್ಯಾರ್ಥಿನಿಲಯಕ್ಕೆ ಹೋದೆವು. ಶಿವಶಂಕರಸ್ವಾಮಿಗಳಿಗೂ ನಮ್ಮ ಸ್ವಾಮಿಗಳಿಗೂ ಹಿಂದಿನಿಂದಲೂ ಪರಿಚಯವಿದೆಯಂತೆ. ಶಿವಶಂಕರಸ್ವಾಮಿಗಳು ವಯಸ್ಸಿನಲ್ಲೂ ಯೋಗ್ಯತೆಯಲ್ಲೂ ಬಹಳ ಹಿರಿಯರು. ಸುತ್ತುಮುತ್ತಲ ಸೀಮೆಯಲ್ಲೆಲ್ಲ ಅವರ ಬಗ್ಗೆ ಬಹಳ ಪೂಜ್ಯಭಾವನೆಯಿದೆ. ಅವರ ವ್ಯಕ್ತಿತ್ವವೂ ಪ್ರಭಾವಯುತವಾದುದು. ಮುಖದ ಮೇಲೆ ವೈರಾಗ್ಯದ ದಿವ್ಯ ಕಳೆಯಿದೆ. ಅವರನ್ನು ಕಂಡಾಗ ಎಂಥವರೂ ತಲೆಬಾಗಿಸಿ ವಂದಿಸುತ್ತಾರೆ.

ಆದರೆ ನಮ್ಮ ಜಗದ್ಗುರುಗಳು ಮಾತ್ರ ಅವರಿಗೆ ನಮಸ್ಕಾರ ಮಾಡಲಿಲ್ಲ. ಕಾರಿನಿಂದಿಳಿದವರು – "ಏನು ಸ್ವಾಮಿಗಳೆ, ಎಲ್ಲವೂ ಸೌಖ್ಯವೇ ?" ಎನ್ನುತ್ತಾ ಬಿಂಕದಿಂದ ನಿಂತುಕೊಂಡರು. ವೃದ್ಧರಾದ ಶಿವಶಂಕರಸ್ವಾಮಿಗಳೇ ಬಾಗಿ ಜಗದ್ಗುರುಗಳ ಪಾದಗಳನ್ನು ಸ್ಪರ್ಶಿಸಿ ವಂದಿಸಿದರು. ಜಗದ್ಗುರುಗಳು ಮಾತ್ರ ತಮ್ಮ ದೇಹವನ್ನು ಕೊಂಚವೂ ಬಾಗಿಸದೆ ಗಂಭೀರವಾಗಿ ನಿಂತುಕೊಂಡಿದ್ದರು. ಆ ದೃಶ್ಯವನ್ನು ಕಂಡು ಅಲ್ಲಿ ನೆರೆದವರಿಗೆಲ್ಲ ಅಸಹ್ಯವಾಗಿರಲು ಸಾಕು.

ಮಠದ ಪಡಸಾಲೆಯಲ್ಲಿದ್ದ ವಿರಾಮ ಕುರ್ಚಿಯ ಮೇಲೆ ಜಗದ್ಗುರುಗಳು ಮಂಡಿಸಿದರು. ಶಿವಶಂಕರಸ್ವಾಮಿಗಳು ನಮ್ರಭಾವದಿಂದ ಕೆಳಗಡೆ ಕಂಬಳಿಯ ಮೇಲೆ ಕುಳಿತರು. ಔಪಚಾರಿಕ ಮಾತುಕತೆಗಳಾದ ಬಳಿಕ ಜಗದ್ಗುರುಗಳು ಸ್ನಾನಕ್ಕೆದ್ದರು.

ಮಠದ ಅಟ್ಟದ ಮೇಲಿದ್ದ ಒಂದೇ ಒಂದು ಕೊಟಡಿಯನ್ನು ಜಗದ್ಗುರುಗಳಿಗಾಗಿ ಬಿಟ್ಟುಕೊಡಲಾಗಿತ್ತು.

ಊಟ ಮುಗಿದ ತರುವಾಯ ನಾವಿಬ್ಬರೇ ಕುಳಿತಿದ್ದಾಗ ನಾನು – "ಸ್ವಾಮಿಗಳಿಗೆ ನಮಸ್ಕಾರ ಮಾಡಲಿಲ್ಲವೇಕೆ? ಅವರು ನಿಮಗಿಂತ ದೊಡ್ಡವರಲ್ಲವೆ ?" ಎಂದು ಕೇಳಿದರೆ ಜಗದ್ಗುರುಗಳು ಕಣ್ಣು ಕೆರಳಿಸಿ ಉತ್ತರವಿತ್ತರು: "ದೊಡ್ಡವರಾದರೇನಾಯಿತು? ನಿನಗೆ ಅದೆಲ್ಲಾ ತಿಳಿಯುವುದಿಲ್ಲ. ಅವರ

ದರ್ಜೆ ನಮ್ಮ ದರ್ಜೆ ಒಂದೇ ಏನು? ಅವರು ಸಾಧಾರಣ ಸ್ವಾಮಿ ನಾವು ಜಗದ್ಗುರುಗಳು. ಇಂಥ ಏಳೆಂಟುನೂರು ಸ್ವಾಮಿಗಳನ್ನು ಆಳುವವರು."

ನಾನು ಆ ವಿಷಯ ಬೆಳೆಸಲಿಲ್ಲ.

★

ಮರುದಿನ ಬೆಳಗಾಗುತ್ತಲೂ ನರಿರಾಯನ ಸವಾರಿ ಆಗಮಿಸಿತು. 'ಸಾಹಿತ್ಯಗೋಷ್ಠಿ'ಗೆ ಸೇರಿದ ಇನ್ನೂ ಅನೇಕರು ಬಂದು ನೆರೆದರು. ಎಂಟು ಗಂಟೆಗೆ ಮೆರವಣಿಗೆ ಹೊರಟಿತು. ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಹತ್ತು ಗಂಟೆಯ ವೇಳೆಗೆ ವೃದ್ಧಸಾಹಿತಿಗಳ ಸಂಘಕ್ಕೆ ಬಂದು ಮುಟ್ಟಿತು. ಸಮಾರಂಭ ನಡೆಯುಬೇಕಿದ್ದುದು ಅಲ್ಲಿಯೆ. ನರಿರಾಯನೂ ಅದನ ಸ್ನೇಹಿತರೂ ಸಭೆಯ ವ್ಯವಸ್ಥೆಯನ್ನು ಚೆನ್ನಾಗಿಯೆ ಮಾಡಿದ್ದರು. ಮೂರು ನಾಲ್ಕು ಸಾವಿರ ದಷ್ಟು ಜನ ಸೇರಿದ್ದಿತು. ಕಾಲೇಜು ಹೈಸ್ಕೂಲುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಬಂದಿದ್ದರು. ನಗರದ ಪ್ರತಿಷ್ಠಿತ ವ್ಯಕ್ತಿಗಳೆಲ್ಲ ಅಲ್ಲಿ ಸೇರಿದ ಹಾಗಿದ್ದಿತು.

ಸ್ವಾಮಿಗಳ ಮೋಟಾರು ಸಂಘದ ಬಳಿ ಬರುತ್ತಲೂ 'ಜಗದ್ಗುರೂಕೀ ಜೈ' ಎಂದು ಜಯಕಾರವಾಯಿತು. ಪ್ರತಿಷ್ಠಿತ ವ್ಯಕ್ತಿಗಳೆಲ್ಲ ಹೊರಗಡೆ ಬಂದು ಸ್ವಾಮಿಗಳನ್ನು ಸ್ವಾಗತಿಸಿ ಸಭಾಸ್ಥಳಕ್ಕೆ ಕರೆದೊಯ್ದರು. ಕಾವಿ ಬಣ್ಣದ ರೇಶಿಮೆ ಧೋತರ ಸುತ್ತಿಕೊಂಡು, ಜರತಾರಿ ಶಾಲು ಹೊದೆದು, ಜರತಾರಿ ರುಮಾಲು ಸುತ್ತಿದ ಸ್ವಾಮಿಗಳು ಬಲು ಆಕರ್ಷಣೀಯವಾಗಿ ಕಾಣುತ್ತಿದ್ದರು. ಪ್ರತಿಷ್ಠಿತ ವ್ಯಕ್ತಿಗಳೆಲ್ಲ ನಾ ಮುಂದೆ ನೀ ಮುಂದೆ ಎಂದು ಮುಗಿಬಿದ್ದು ಸ್ವಾಮಿಗಳ ಪರಿಚಯ ಮಾಡಿಕೊಳ್ಳುವುದನ್ನು ಕಂಡಾಗ ನನಗೆ ಒಳಗೊಳಗೇ ನಗೆ ಬರತೊಡಗಿದ್ದಿತು. ಜನ ಮರಳೋ ಜಾತ್ರೆ ಮರಳೋ!

ಸ್ವಾಗತಗೀತೆ, ಸ್ವಾಗತಭಾಷಣ, ಮಾನಪತ್ರ ವಾಚನ, ಅರ್ಪಣ, ಸ್ವಾಮಿಗಳ ಉತ್ತರ, ಸಾಹಿತ್ಯಗೋಷ್ಠಿಯ ಉದ್ಘಾಟನೆ, ಅಧ್ಯಕ್ಷ ಭಾಷಣ, ವಂದನಾರ್ಪಣೆ, ರಾಷ್ಟ್ರಗೀತೆ. ಎಲ್ಲವೂ ಮುಗಿಯುವ ವೇಳೆಗೆ ನಡುಹಗಲಿನ ಒಂದು ಗಂಟೆಯಾಯಿತು. ಹಸಿವು ಹೋ ಅನ್ನುತ್ತಿತ್ತು ನನ್ನ ಹೊಟ್ಟೆಯಲ್ಲಿ.

ಸ್ವಾಮಿಗಳು ಹೊರಗಡೆ ಬರುತ್ತಿದ್ದಾಗ ಸೂಟುಧಾರಿಗಳೊಬ್ಬರು ಹತ್ತಿರ ಬಂದು ಕೈಮುಗಿದು, "ಪ್ರಸಾದಕ್ಕೆ ನಮ್ಮ ಮನೆಗೇ ಬಿನ್ನಯಿಸಬೇಕು," ಎಂದರು. ಸ್ವಾಮಿಗಳು ಮುಗುಳ್ನಗುತ್ತ – "ಇವೊತ್ತು ಬೇಡ ಡಾಕ್ಟರ್

ಸಾಹೇಬರೆ. ಮಠದಲ್ಲಿ ವ್ಯವಸ್ಥೆಯಾಗಿರುತ್ತದೆ. ನಾಳೆ ಬರುತ್ತೇವೆ," ಎಂದು ಉತ್ತರವಿತ್ತು ಕಾರಿನಲ್ಲೇರಿ ಕುಳಿತು, ಪ್ರತಿಷ್ಠಿತರನ್ನೆಲ್ಲ ಬೀಳ್ಕೊಳ್ಳುತ್ತಾ - "ಮಠದಲ್ಲಿರುತ್ತೇವೆ. ಅಲ್ಲಿಗೇ ಬನ್ನಿ, ನಿಧಾನವಾಗಿ ಮಾತಾಡೋಣ," ಎಂದರು.

ಕಾರು ಕೊಂಚ ದೂರ ಬಂದ ಬಳಿಕ ಮುಂದಿನ ಸೀಟಿನಲ್ಲಿದ್ದ ನಿರುದ್ಯೋಗಣ್ಣನನ್ನು ಬೆರಳಿನಿಂದ ತಟ್ಟುತ್ತಾ ಸ್ವಾಮಿಗಳು - "ಏನೋ, ಹೇಗಾಯಿತು ಭಾಷಣ?" ಎಂದರು.

"ಬಹಳ ಸೊಗಸಾಗಿ ಆಯಿತು ಸ್ವಾಮಿಜಿ. ಇದುವರೆಗೆ ನಮ್ಮ ಊರವರು ಇಂಥ ಭಾಷಣವನ್ನೇ ಕೇಳಿರಲಿಲ್ಲ."

"ಸರ್ವಧರ್ಮ ಸಮನ್ವಯದ್ದೊಂದು ಚಳವಳಿಯೇ ಏಳುತ್ತದೆ ಇನ್ನು ಮೇಲೆ. ನಾವೇ ಅದರ ಮುಖಂಡರಾದಂತಾಯಿತು."

"ನೀವಲ್ಲದಿನ್ನಾರು ಆಗಬೇಕು ಸ್ವಾಮಿ? ಈ ಬ್ರಾಹ್ಮಣ ಲಿಂಗಾಯತ ಜಗಳದಿಂದ ಜನಕ್ಕೆ ತಲೆ ಬೇಸರು ಹಿಡಿದಿದೆ. ಈ ಭೇದವನ್ನಳಿಸಿ ಒಕ್ಕಟ್ಟನ್ನುಂಟುಮಾಡಲು ನಿಮ್ಮಂಥ ಪುಢಾರಿಗಳೊಬ್ಬರ ಅವಶ್ಯಕತೆಯಿತ್ತು. ಬ್ರಾಹ್ಮಣರು, ಲಿಂಗಾಯತರು ಇತರ ಜಾತಿಯವರು ಎಲ್ಲರೂ ನಿಮ್ಮ ಭಾಷಣ ಕೇಳಿ ಮುಗ್ಧರಾದರು."

"ಮೊದಲು ನಾವು ಲಿಂಗಾಯತರ ಮನೋವೃತ್ತಿಯನ್ನೇ ಸುಧಾರಿಸಲು ಯತ್ನಿಸಬೇಕು. ಇಲ್ಲಿಯ ಪ್ರತಿಷ್ಠಿತ ಶ್ರೀಮಂತ ಲಿಂಗಾಯತರದೊಂದು ಲಿಸ್ಟ್ ತಯಾರಿಸಿಕೊಡು ನಿರುದ್ಯೋಗಣ್ಣ. ಅವರನ್ನೆಲ್ಲ ಮೊದಲು ನಮ್ಮ ಭಕ್ತರನ್ನಾಗಿ ಮಾಡಿಕೊಳ್ಳೋಣ. ನಮ್ಮ ಸಹವಾಸದಿಂದ ಅವರೂ ಸುಧಾರಿಸಲಿ."

"ಸುಧಾರಿಸದಿರುತ್ತಾರೆಯೇ ಬುದ್ಧೀ!" ಎಂದ ನಿರುದ್ಯೋಗಣ್ಣ.

ಅಂದಿನಿಂದ ಪ್ರಾರಂಭವಾಯಿತು 'ಸುಧಾರಣೆ'ಯ ಕಾರ್ಯ! ಸ್ವಾಮಿಗಳ ಸುಧಾರಣೆಯ ಬಲೆಗೆ ಮಿಕಗಳೂ ಬೀಳತೊಡಗಿದವು. ಓರೆಕೋರೆ ನಗರದ ಧನಿಕ ವೀರಶೈವರೆಲ್ಲ ಸ್ವಾಮಿಗಳನ್ನು ತಮ್ಮ ತಮ್ಮ ಮನೆಗಳಿಗೆ ಊಟಕ್ಕೆ ಕರೆದೊಯ್ಯತೊಡಗಿದರು. ಅರ್ಥಾತ್ - ಮರಿಯಾದ ನಾನು ಅವರ ಜತೆಗೇ ಹೋಗಬೇಕಾಗುತ್ತಿತ್ತು.

ಮೊದಲನೆಯದಾಗಿ ಆ ಡಾಕ್ಟರ್ ಸಾಹೇಬರು. ಊರ ಹೊರಗೆ ಅವರದು ದೊಡ್ಡ ಬಂಗಲೆ. ಮೋಟಾರು ಕಾರು, ರೇಡಿಯೋ, ಆಳುಕಾಳುಗಳು.

ಮನೆಯಲ್ಲಿದ್ದವರೇದರೆ ಮೂರು ಮಂದಿ: ಡಾಕ್ಟರು, ಅವರ ಹೆಂಡತಿ, ಒಬ್ಬ ಮಗ, ಹುಡುಗ ಕಾಲೇಜಿನಲ್ಲಿ ಓದುತ್ತಿದ್ದ.

ಅವರಲ್ಲಿಗೆ ಊಟಕ್ಕೆ ಹೋಗುವುದಕ್ಕೆ ಮುನ್ನ ಸ್ವಾಮಿಗಳು ನಿರುದ್ಯೋಗಣ್ಣನಿಂದ ಅವರ ಮನೆಯ ವಿಷಯಗಳನ್ನೆಲ್ಲ ಅರಿತುಕೊಂಡರು. ಡಾಕ್ಟರು ಬಹಳ ಮರುಳ ಸ್ವಭಾವದವರಂತೆ, ಅವರ ಹೆಂಡತಿಯ ನಡತೆ ಅಷ್ಟೇನೂ ಚೆನ್ನಾಗಿರಲಿಲ್ಲವಂತೆ, ತಂದೆಯಂತೆ ಮಗನದೂ ಮರುಳ ಸ್ವಭಾವ – ಇತ್ಯಾದಿ ಇತ್ಯಾದಿ.

ಇಂಥ ಜನರನ್ನೇ ಮೊದಲು 'ಸುಧಾರಿಸುವ' ಬಯಕೆಯಿದ್ದಿತೇನೋ ನಮ್ಮ ಸ್ವಾಮಿಗಳಿಗೆ! ಡಾಕ್ಟರ ಮನೆಯಲ್ಲಿ ಊಟವಾದ ತರುವಾಯ ವಿರಮಿಸಿ ಕೊಳ್ಳುತ್ತಿದ್ದಾಗ ನನ್ನೊಂದಿಗೆ ಪಿಸುದನಿಯಲ್ಲಿ ಹೇಳಿದರು.

"ನಿರುದ್ಯೋಗಣ್ಣ ಹೇಳಿದ್ದು ನಿಜವಿರಬೇಕು ಮರಿದೇವರೆ. ಡಾಕ್ಟರ ಬಾಯಿ ನಮ್ಮ ಕಡೆ ಓರೆನೋಟ ಬಿಡುತ್ತಿದ್ದಾರೆ...."

ಪುಣ್ಯಕ್ಕೆ ಆಗ ಕೊಟಡಿಯಲ್ಲಿ ಯಾರೂ ಇರಲಿಲ್ಲ. ಅತ್ಯವಸ್ಥ ಸ್ಥಿತಿಯಲ್ಲಿದ್ದ ರೋಗಿಯೊಬ್ಬನನ್ನು ನೋಡುವುದಕ್ಕಾಗಿ ಕರೆ ಬಂದುದರಿಂದ ಡಾಕ್ಟರು ಹೊರಟುಹೋಗಿದ್ದರು. ಕುಮಾರ ಕಾಲೇಜಿಗೆ ಹೋಗಿದ್ದ. ಡಾಕ್ಟರ ಬಾಯಿ ದೂರ ಅಡುಗೆಮನೆಯಲ್ಲಿದ್ದರು.

ಡಾಕ್ಟರು ನಮ್ಮನ್ನು ಊಟಕ್ಕೆ ಕರೆದಿದ್ದುದು ಅದೊಂದು ದಿನದ ಮಟ್ಟಿಗೆ ಮಾತ್ರವಾದರೂ ಸ್ವಾಮಿಗಳು ಅಲ್ಲಿಯೆ ಕೊನೆಯವರೆಗೂ ಇರುವ ಹಾಗೆ ತಳವೂರಿಬಿಟ್ಟರು. "ನಿಮ್ಮನ್ನೆಲ್ಲ ಕಂಡು ನಮಗೆ ಬಹಳ ಅಭಿಮಾನ ಹುಟ್ಟಿದೆ. ನಿಮ್ಮ ಮನೆ ಬಿಟ್ಟು ಹೊರಡಲು ಮನಸ್ಸೇ ಬರಲೊಲ್ಲದು," ಎಂದು ಡಾಕ್ಟರ ಹತ್ತಿರ ಹೇಳಿದರು. ಪಾಪ, ಆತ ಭಾವಿಕ ಮನುಷ್ಯ. ಕಾವೀ ಬಟ್ಟೆಯವರೆಂದರೆ ಬಹಳ ಭಕ್ತಿ. ಇಂಥ ದೊಡ್ಡ ಜಗದ್ಗುರುಗಳ ಕೃಪೆಗೆ ತಾವು ಪಾತ್ರರಾದುದು ತಮ್ಮ ಭಾಗ್ಯವೆಂದೇ ಅವರು ಭಾವಿಸಿದ್ದರು.

ಮೂರು ದಿನಗಳವರೆಗೂ ಸ್ವಾಮಿಗಳ ಸವಾರಿ ಡಾಕ್ಟರರಲ್ಲಿಯೆ ಬೀಡು ಬಿಟ್ಟಿತು. ನಗರದ ಪ್ರತಿಷ್ಠಿತರೆಲ್ಲ ಸ್ವಾಮಿಗಳನ್ನು ಕಾಣಲು ಅಲ್ಲಿಗೇ ಬರತೊಡಗಿದರು. ಬಂದವರಿಗೆಲ್ಲ ತಿಂಡಿ, ಕಾಫೀ ಸರಬರಾಜೂ ಅಲ್ಲಿಯೆ ಆಗತೊಡಗಿತು. ನಿರುದ್ಯೋಗಣ್ಣ ಮೊದಲಾದ ಒಬ್ಬಿಬ್ಬರಂತೂ ಅಲ್ಲಿಯೆ ಊಟವನ್ನೂ ಗಿಟ್ಟಿಸತೊಡಗಿದರು.

ನಗರದ ಪ್ರಸಿದ್ಧ ವ್ಯಾಪಾರಿಗಳೊಬ್ಬರ ಬಲವಂತಕ್ಕೊಳಗಾಗಿ ನಾಲ್ಕನೆಯ ದಿನ ಸ್ವಾಮಿಗಳು ಅವರ ಮನೆಗೆ ಹೊರಟರು. ಡಾಕ್ಟರು, ಡಾಕ್ಟರ ಬಾಯಿ, ಮಗ ಮೂವರೂ ಭಕ್ತಿಭಾವದಿಂದ ಅವರ ಅಡಿಗೆರಗುವಾಗ ನಾನು ಹತ್ತಿರವೇ ನಿಂತುಕೊಂಡಿದ್ದೆ. ಡಾಕ್ಟರ ಬಾಯಿಯ ಮುಖದ ಮೇಲೆ ಮೂಢಭಕ್ತಿಯನ್ನಲ್ಲದೆ ಇನ್ನಾವ ವಿಕಾರ ಭಾವವನ್ನೂ ನಾನು ಕಾಣಲಿಲ್ಲ. ಸ್ವಾಮಿಗಳ ಕಾಮುಕ ದೃಷ್ಟಿಯೆ ಅವಳ ಸರಲತನವನ್ನು ವಿಕೃತವಾಗಿ ಕಂಡಿದ್ದುದು ಸ್ಪಷ್ಟವಿದ್ದಿತು.

ಆ ಧನಿಕ ವ್ಯಾಪಾರಸ್ಥರ ಮನೆಯಲ್ಲಿಯೂ ಸ್ವಾಮಿಗಳು ಹೆಣ್ಣುಮಕ್ಕಳ ಮೇಲೆ ಕಣ್ಣು ಓಡಿಸದಿರಲಿಲ್ಲ. ಅವರು ಸ್ವಾಮಿಗಳಾದುದರಿಂದ ಹೆಂಗಳೆಯರೆಲ್ಲ ಯಾವ ಸಂಕೋಚವನ್ನೂ ಇಟ್ಟುಕೊಳ್ಳದೆ ಅವರೆದುರು ಓಡಿಯಾಡುತ್ತಿದ್ದರು. ಸ್ವಾಮಿಗಳೆಂದರೆ ದೇವರ ಸಮಾನರೆಂದೇ ಅವರು ಭಾವಿಸಿಕೊಂಡಿರುತ್ತಾರೆ. ಅವರ ಭಾವನೆಗೆ ಸರಿಹೋಗುವ ಹಾಗೆ ಸ್ವಾಮಿಗಳೂ ಶುದ್ಧ ಮನಸ್ಸಿನಿಂದ ವರ್ತಿಸಬೇಕಾಗುತ್ತದೆ.

ಆದರೆ – ನಮ್ಮೀ ಜಗದ್ಗುರುಗಳಲ್ಲಿರುವ ದೊಡ್ಡ ಕೊರತೆಯೆಂದರೆ ವಿಶುದ್ಧ ಮನಸ್ಸಿನದೇ. ತಾವು ವಿರಕ್ತಾಶ್ರಮಕ್ಕೆ ಸೇರಿದವರೆಂಬ ಅರಿವೇ ಅವರಿಗಿದ್ದ ಹಾಗಿಲ್ಲ; ಪೋಲಿ ಕೃಷ್ಣನ ದ್ವಿತೀಯಾವೃತ್ತಿಯಂತೆ ಆಚರಿಸುತ್ತಾರೆ. ಸ್ವಲ್ಪ ಚೆಂದ ಕಾಣುವಂಥ ರೂಪಿದೆ. ಯಾವಾಗಲೂ ಅದರ ಹೆಮ್ಮೆಯೇ ಹೆಮ್ಮೆ. ಸ್ನಾನ ಮಾಡಿದ ಬಳಿಕ ಕನ್ನಡಿಯೆದುರಿಗೆ ನಿಂತು ಜರತಾರಿ ರುಮಾಲು ಕಟ್ಟಿಕೊಳ್ಳುತ್ತ ನನ್ನ ಕಡೆ ತಿರುಗಿ ಕೇಳುತ್ತಾರೆ, "ಏನು ಮರಿ, ನಮ್ಮ ರೂಪಿಗೆ ಬಹಳ ಶೋಭಿಸುವುದಿಲ್ಲವೇ ಈ ರುಮಾಲು!" ನೂರು ಸಾರಿಯಾದರೂ ಇದೇ ಮಾತು ಬಂದಿದ್ದೀತು ಅವರ ಬಾಯಿಂದ. ನನಗೆ ನಗೆ ತಡೆಯಲಾಗುವುದಿಲ್ಲ. "ಮನ್ಮಥನ ಹಾಗೆ ಕಾಣುತ್ತೀರಿ ಗುರುಗಳೇ!" ಎಂದು ಹೇಳಿ ನಕ್ಕುಬಿಡುತ್ತೇನೆ. ಅದು ಅಣಕದ ಮಾತೆಂಬುದು ಅವರ ದಪ್ಪ ಮೆದುಳಿಗೆ ತಿಳಿದೇ ಇಲ್ಲ. "ಮನ್ಮಥನೇನೋ ಆದದ್ದಾಯಿತು....ಆದರೆ ರತಿ?" ಎಂದು ಕಳ್ಳ ಧ್ವನಿಯಲ್ಲಿ ನುಡಿದು ನಗುತ್ತಾರೆ. ಆ ನಗೆಯೂ ಕೃತ್ರಿಮ ನಗೆಯೇ. ನಾಟಕದಲ್ಲಿ ನಟರು ನಗುವಂಥ ನಗೆ.

ತಮ್ಮ ಭಾವಚಿತ್ರದ ಬಗೆಗಂತೂ ಸ್ವಾಮಿಗಳಿಗೆ ಭಯಂಕರ ಹುಚ್ಚು. ತಮಗೆ ವಂದಿಸಲು ಬಂದ ಹೆಣ್ಣುಮಕ್ಕಳಿಗೆಲ್ಲ ತಮ್ಮ ಫೋಟೋ ಪ್ರತಿಗಳನ್ನು

ತೋರಿಸುತ್ತ ಕೂಡ್ರುತ್ತಾರೆ. "ಇದು ಚೆನ್ನಾಗಿ ಬಂದಿದೆಯಲ್ಲವೆ ಗಿರಿಜಮ್ಮ?" ಎಂದೋ, "ಅದು ಚೆನ್ನಾಗಿದೆಯೋ, ಇದು ಚೆನ್ನಾಗಿದೆಯೋ?" ಎಂದೋ, "ರುಮಾಲು ನಮಗೆ ಒಪ್ಪುತ್ತದೆಯೋ ಇಲ್ಲವೋ?" ಎಂದೋ ಪ್ರಶ್ನೆ ಮಾಡುತ್ತಾರೆ. ಪಾಪ, ಆ ಹೆಣ್ಣುಮಕ್ಕಳು ಕಕ್ಕಾಬಿಕ್ಕಿಯಾಗಿ, ಏನೂ ಉತ್ತರ ಕೊಡದೆ ಎದ್ದು ಹೋಗುತ್ತಾರೆ.

ಬೇರೆ ಬೇರೆ ಪತ್ರಿಕೆಗಳಲ್ಲಿ ಇದುವರೆಗೆ ಪ್ರಕಟವಾದ ತಮ್ಮ ಭಾಷಣಗಳ ವರದಿಗಳನ್ನೂ ಪರಿಚಯದ ಲೇಖನಗಳನ್ನೂ ಪ್ರಶಂಸಾಪೂರ್ಣ ಬರಹಗಳನ್ನೂ ಭಾವಚಿತ್ರಗಳನ್ನೂ ಕತ್ತರಿಸಿ ತೆಗೆದು ಒಂದು ಫೈಲಿನಲ್ಲಿ ಜೋಡಿಸಿ ಇಟ್ಟಿದ್ದಾರೆ, ಸ್ವಾಮಿಗಳು. ಅವರು ಎಲ್ಲಿಗೆ ಹೋದರೂ ಅವರ ಜತೆಯಲ್ಲೇ ಇರುತ್ತದೆ ಆ ಫೈಲು. ಭಕ್ತರ ಮನೆಗಳಿಗೆ ಊಟಕ್ಕೆ ಹೋದಾಗಲೆಲ್ಲ ಅದನ್ನು ಬಿಚ್ಚಿ– "ನೋಡಿ, ನಮ್ಮ ಬಗ್ಗೆ ಈ ಪತ್ರಿಕೆಯಲ್ಲಿ ಹೀಗೆ ಹೊಗಳಿದ್ದಾರೆ, ಆ ಪತ್ರಿಕೆಯಲ್ಲಿ ಹಾಗೆ ಹೊಗಳಿದ್ದಾರೆ, ನಮ್ಮ ಭಾಷಣದ ವರದಿ ಐದು ಕಾಲಂ ಬಂದಿದೆ ನೋಡಿದಿರಾ? ಪಂಡಿತ ನೆಹರೂ ಭಾಷಣಕ್ಕೂ ಸಹ ಇಷ್ಟೊಂದು ಪ್ರಾಶಸ್ತ್ಯ ದೊರೆಯುವುದಿಲ್ಲ. 'ಒಂದೇ ಕರ್ನಾಟಕ'ದ ವಿನಾಯಕರಾಯರು ಬ್ರಾಹ್ಮಣರಾದರೂ ನಮ್ಮ ಬಗ್ಗೆ ಬಹಳ ಭಕ್ತಿ ಅವರಿಗೆ. ನಮ್ಮ ವಿಷಯದ ಸುದ್ದಿಗಳನ್ನೆಲ್ಲಾ ಫ್ರಂಟ್ ಪೇಜಿನಲ್ಲಿಯೆ ಅಚ್ಚು ಹಾಕುತ್ತಾರೆ....ಇದು, ಇಲ್ಲಿ ನೋಡಿದಿರಾ? ನಮ್ಮ ಫೋಟೋ ಬ್ಲಾಕು ಎಷ್ಟು ದೊಡ್ಡದಾಗಿ ಮಾಡಿಸಿದ್ದಾರೆ....ಬ್ಲಾಕಿಗೇ ಐವತ್ತು ರೂಪಾಯಿಯಾಯಿತಂತೆ....ಎಲ್ಲಾ ಖರ್ಚು ಅವರೇ ವಹಿಸಿಕೊಂಡರು....ನಮ್ಮ ಬಗ್ಗೆ ಎಲ್ಲರಿಗೂ ಬಹಳ ಭಕ್ತಿ...." ಎಂದು ಮೊದಲಾಗಿ ಹೇಳಿಯೆ ಹೇಳುತ್ತಾರೆ. ತನ್ನ ಬಣ್ಣಿಸಬೇಡ– ಎಂಬುದು ಬಸವಣ್ಣನವರ ಮುಖ್ಯ ತತ್ವಗಳಲ್ಲೊಂದು. ವಿರಕ್ತರಾದ ಸ್ವಾಮಿಗಳಂತೂ ಆತ್ಮಸ್ತುತಿ ಅಹಂಕಾರಗಳಿಂದ ಗಾವುದ ದೂರವಿರಬೇಕು. ಆದರೆ ನಮ್ಮಾ ಗುರುಗಳು....

ಒಂದೊಂದು ಸಲ ಫೈಲಿನಲ್ಲಿನ ಯಾವುದೊಂದು ಭಾಷಣವನ್ನು ಸ್ವಾಮಿಗಳು ಓದಿ ಹೇಳುವುದುಂಟು. ಕೇಳುತ್ತ ಕುಳಿತವರಿಗೆ ಉಭಯ ಸಂಕಟ. ಹೊಸ ಸಂಗತಿಯೇನೂ ಇರುವುದಿಲ್ಲ ಆ ಭಾಷಣದಲ್ಲಿ. ಮತ್ತೆ ಅದನ್ನೇ ಕೇಳಲು ಎಲ್ಲರಿಗೂ ತಲೆಬೇಸರು. ಅಲ್ಲಿಂದ ಎದ್ದು ಹೋಗುವಂತೆಯೂ ಇರುವುದಿಲ್ಲ. ಸೌಜನ್ಯಕ್ಕಾಗಿಯಾದರೂ ಕುಳಿತಿರಲೇಬೇಕಾಗುತ್ತದೆ. ಓದಿ ಹೇಳು

ತ್ತಿರುವುದು ಸಾಮಾನ್ಯ ವ್ಯಕ್ತಿಯಲ್ಲವಲ್ಲ! ದೊಡ್ಡ ಸ್ವಾಮಿ.... ಜರತಾರಿ ಜಗದ್ಗುರು.

ಎಷ್ಟು ಓದಿದರೂ ಬೇಸರವೇ ಬರುವುದಿಲ್ಲ ಸ್ವಾಮಿಗಳಿಗೆ. ಎರಡು ಮೂರು ಗಂಟೆಗಳವರೆಗೆ ಹಾಗೇ ಓದುತ್ತಿರುತ್ತಾರೆ. ದೇವರು ಅವರಿಗೆ ಸಾಕಷ್ಟು ಬುದ್ಧಿಯನ್ನು ಕೊಡದಿದ್ದರೂ ಬಲವಾದ ಕಂಠಶಕ್ತಿಯನ್ನು ಮಾತ್ರ ದಯ ಪಾಲಿಸಿದ್ದಾನೆ. ಆರು ಗಂಟೆಗಳವರೆಗೆ ಒಂದೇ ಸಮನೆ ಮಾತಾಡುತ್ತಿದ್ದರೂ ತಗ್ಗುವುದಿಲ್ಲ ಆ ಕಂಠ.

ಡಾಕ್ಟರ ಮನೆಯಲ್ಲಿ ಎರಡುನೂರಾ ಒಂದು, ವ್ಯಾಪಾರಸ್ಥರಲ್ಲಿ ನೂರಾ ಒಂದು, ಇನ್ನು ಕೆಲವರು ಭಕ್ತರಿಂದ ಒಟ್ಟು ಏಳುನೂರು – ಅಂತೂ ಸಾವಿರ ರೂಪಾಯಿ ಪಾದಕಾಣಿಕೆ ಬಂತು ಆ ನಗರದಲ್ಲಿ. ಸಾಹಿತ್ಯಗೋಷ್ಠಿಯ ಸಮಾರಂಭಕ್ಕೆ ಆರುನೂರು ರೂಪಾಯಿ ಖರ್ಚು ಬಂದಿತೆಂದು ಹೇಳಿ ಅಷ್ಟು ಹಣ ವಸೂಲು ಮಾಡಿಕೊಂಡದ್ದಲ್ಲದೆ ತನ್ನ 'ಮಡಿವಂತಿ' ಪತ್ರಿಕೆಗಾಗಿ ಎರಡು ನೂರು ರೂಪಾಯಿ 'ಆಶೀರ್ವಾದ' ಪಡೆದುಕೊಂಡ, ನರಿರಾಯ. ನಿರುದ್ಯೋಗಣ್ಣ ಒಂದುನೂರನ್ನು ಕಿತ್ತುಕೊಂಡ. ಇನ್ನೊಂದು ನೂರು ಚಿಲ್ಲರೆಯಾಗಿ ಖರ್ಚಾಯಿತು. ಓರೆಕೋರೆ ನಗರವನ್ನು ತ್ಯಜಿಸಿ ಗೊಬ್ಬೂರಿಗೆ ಹೊರಡುವ ವೇಳೆಗೆ ಸ್ವಾಮಿಗಳ ಹತ್ತಿರ ಐದಾರು ರೂಪಾಯಿ ಮಾತ್ರ ಉಳಿದಿದ್ದುವು. ಅಷ್ಟರಲ್ಲಿ ಅಲ್ಲಿನ ಪೆಟ್ರೋಲ್ ವ್ಯಾಪಾರಿಯೊಬ್ಬ ಅವರ ಭಕ್ತನಾಗಿದ್ದ. ಸರಿ. ಅವನಲ್ಲಿ ಉಚಿತವಾಗಿ ಪೆಟ್ರೋಲ್ ತುಂಬಿಸಿಕೊಂಡು ನಮ್ಮ ಕಾರು ಗೊಬ್ಬೂರಿಗೆ ಹೊರಟುಬಿಟ್ಟಿತು. "ಅಲ್ಲಿಯೂ ತಮಗೆ ದೊರೆಯುವ ಸ್ವಾಗತ ಸತ್ಕಾರಗಳನ್ನು ಕಂಡು ಧನ್ಯನಾಗಬೇಕೆಂಬ ಇಚ್ಛೆಯಿದೆ," ಎಂದು ಹೇಳಿ ನಿರುದ್ಯೋಗಣ್ಣನೂ ಸ್ವಾಮಿಗಳ ಜತೆಯಲ್ಲಿ ಬಂದುಬಿಟ್ಟ. ಸ್ವಾಮಿಗಳನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತ, ಅವರ ಆತ್ಮಸ್ತುತಿಯ ಮಾತುಗಳನ್ನೆಲ್ಲ ಬೇಸರಿಸದೆ ಕೇಳಿಕೊಳ್ಳುತ್ತ ಬಂದುದರಿಂದ ನಿರುದ್ಯೋಗಣ್ಣ ಈ ವೇಳೆಗಾಗಲೆ ಸ್ವಾಮಿಗಳ ಅಚ್ಚುಮೆಚ್ಚಿನ ವ್ಯಕ್ತಿಯಾಗಿಬಿಟ್ಟಿದ್ದ. "ನೀವು ನಮ್ಮ ಪ್ರೈವೇಟ್ ಸೆಕ್ರೆಟರಿಯಾಗಿ ನಮ್ಮ ಜತೆಗೇ ಇದ್ದು ಬಿಡಿ," ಎಂದು ಹೇಳುವುದಲ್ಲದೆ ಗುಟ್ಟಿನ ವಿಷಯಗಳನ್ನೂ ಸಹ ಅವನೆದುರಿಗೆ ನಿಸ್ಸಂಕೋಚವಾಗಿ ಮಾತನಾಡತೊಡಗಿದ್ದರು ಸ್ವಾಮಿಗಳು.

ಓರೆಕೋರೆ ನಗರದ ಸೀಮೆಯನ್ನು ಹಿಂದೆ ಹಾಕಿ ಕಾರು ಗೊಬ್ಬೂರಿನ ಕಡೆ ಓಡತೊಡಗಿದಂತೆ ಸ್ವಾಮಿಗಳ ನಾಲಗೆಯೂ ಓಡತೊಡಗಿತು.

"ನಿಮ್ಮೂರಿನಲ್ಲಿ ಹತ್ತು ಹನ್ನೆರಡು ದಿನ ಚೈನಿಯಿಂದ ಕಳೆದಂತಾಯಿತು ನಿರುದ್ಯೋಗಣ್ಣ. ಆದರೂ ಮನಸ್ಸಿಗೆ ನೆಮ್ಮದಿಯಿರಲಿಲ್ಲ."

"ಯಾಕೆ ಸ್ವಾಮಿಜಿ?"

"ಎಲ್ಲವೂ ಒಣ ಒಣ ಆಯ್ತು ಮಾರಾಯ. ರಸವಿರಲಿಲ್ಲ ರಸ...." ಎಂದು ಹೇಳಿ ಸ್ವಾಮಿಗಳು ಗಹಗಹಿಸಿ ನಗತೊಡಗಿದರು.

ನಿರುದ್ಯೋಗಣ್ಣನೂ ನಗುತ್ತ ನುಡಿದ: "ಅರ್ಥವಾಯಿತು ಸ್ವಾಮಿಜಿ, ಅರ್ಥವಾಯಿತು. ಕೃಷ್ಣನಿದ್ದಲ್ಲಿ ಗೋಪಿಯರಿರಬೇಕು – ಅಂದರೇನೇ ಸ್ವಾರಸ್ಯ. ನಮ್ಮೂರು ಅಷ್ಟೇನೂ ಮುಂದುವರಿದುದಲ್ಲ. ಇಲ್ಲಿಯ ಸ್ತ್ರೀಯರಿನ್ನೂ ಹದಿಮೂರನೆಯ ಶತಮಾನದವರಂತಿದ್ದಾರೆ...."

"ಆ ಡಾಕ್ಟರ ಬಾಯಿ ಸುಶಿಕ್ಷಿತೆ, ಸುಧಾರಣೆಯ ಮನೋವೃತ್ತಿಯವಳು, ಆವಳ ನಡತೆಯೂ ನೆಟ್ಟಗಿಲ್ಲವೆಂದು ನೀನು ಹೇಳಿದ್ದೆ. ಆದರೆ...."

"ಏನಾಯಿತು ಬುದ್ಧೀ?"

"ಏನೂ ಆಗಲಿಲ್ಲ, ಹೋಗಲಿಲ್ಲ. ಅಂತೂ ಇಂತೂ ಸ್ವಾರಸ್ಯವೇ ಇರಲಿಲ್ಲ."

"ಆ ವ್ಯಾಪಾರಿಗಳ ಮನೆಯಲ್ಲಿ ಹ್ಯಾಗೆ, ಬುದ್ಧೀ?"

"ಅಲ್ಲಿಯೂ ಹಾಗೇ. ಎಲ್ಲಾ ಹುಂಬ ಜನ. ನಮ್ಮ ಹತ್ತಿರ ಕುಳಿತು ಮಾತಾಡಲು ಸಹ ನಾಚುತ್ತಿದ್ದರು...."

"ಆ ಅಕ್ಕನ ಬಳಗದ ಚಿಕ್ಕಲಿಂಗವ್ವ?"

"ಮಾರಾಯ! ಅದೊಂದು ರಾಕ್ಷಸ. ಅಕ್ಕನ ಬಳಗದವರೆಂದರೆ ಎಲ್ಲರೂ ಸ್ವಚ್ಛಂದ ವೃತ್ತಿಯವರಾಗಿರುವರೆಂದು ನಮ್ಮ ಕಲ್ಪನೆಯಿತ್ತು, ಇದುವರೆಗೆ. ಈ ಚಿಕ್ಕಲಿಂಗವ್ವನೊಂದಿಗೆ ಸ್ವಲ್ಪ ಸಲಿಗೆಯಿಂದ ಮಾತಾಡಲು ಹೋದೆವು. ಅಷ್ಟಕ್ಕೇ ಆಕೆ ಹುರ್‌ರ್ ಅಂತ ಕೋಪಿಸಿಕೊಂಡು ಹಾಗೆಲ್ಲ ಹಗುರಾಗಿ ಮಾತಾಡಬಾರದು ಸ್ವಾಮಿಗಳಾದವರು – ಅಂತ ಒದರಾಡಿಬಿಟ್ಟಳಯ್ಯ. ನಮಗೆ ಬಹಳ ಅಸಹ್ಯವಾಯಿತು."

"ಚಿಕ್ಕಲಿಂಗವ್ವ ಅಂದರೆ ಓರೆಕೋರೆ ನಗರವೆಲ್ಲಾ ಭಯಪಡುತ್ತದೆ ಬುದ್ಧೀ. ಅವಳ ನಾಲಗೆ ಬಹಳ ತೀಕ್ಷ್ಣವಾದದ್ದು."

"ಅಂತೂ ನಿಮ್ಮೂರಿನ ಹೆಂಗಸರು ನಮ್ಮ ಮನಸ್ಸಿಗೆ ಬರಲಿಲ್ಲ ಬಿಡಯ್ಯ."

ಕಾರು ನಡೆಸುತ್ತಿದ್ದ ಡ್ರೈವರನೂ ನಕ್ಕ ಹಾಗೆ ಕೇಳಿಸಿತು.

"ಯಾಕೋ ಭಡವಾ, ಬಹಳ ನಗುತ್ತಿದ್ದೀಯ?" ಎಂದು ಹುಸಿಮುನಿಸಿನಿಂದ ನುಡಿದರು ಸ್ವಾಮಿಗಳು. ಆತನೂ ಅವರ ಅಂತರಂಗವನ್ನೆಲ್ಲ ಅರಿತವನೇ. ಅವನ ಹತ್ತಿರವೂ ಸ್ವಾಮಿಗಳು ಸಲುಗೆಯಿಂದ ಮಾತಾಡುತ್ತಾರೆ.

"ಏನೂ ಇಲ್ಲ ಬುದ್ಧೀ. ಹೆಂಗಸರು ಅಂತ ಕೇಳಿಸಿತು. ಅದಕ್ಕೆ ನಗು ಬಂತು," ಎಂದು ನುಡಿದು ಆತ ಮತ್ತೆ ನಗೆಯೆಬ್ಬಿಸಿದ.

"ಹೈಸ್ಕೂಲಿನಲ್ಲಿ ಮಿಸ್ಟ್ರೆಸ್ ಆಗಿದ್ದಾಳಲ್ಲ – ಆಕೆಯ ಹೆಸರೇನು, ಕ್ಷಾಂ?" ಸ್ವಾಮಿಗಳು ಕೇಳಿದರು.

"ಓ, ಅವರೇ? ಸುಗುಣಾಬಾಯಿ."

"ಸುಗುಣಾಬಾಯಿಯೆ! ಬಿ. ಎ. ಬಿ. ಟಿ. ಅಲ್ಲವೇ ಆಕೆ? ಇನ್ನೂ ಮದುವೆಯೂ ಇಲ್ಲ. ಅವರ ಹೈಸ್ಕೂಲಿಗೆ ಉಪನ್ಯಾಸಕ್ಕೆ ಹೋಗಿದ್ದೆವಲ್ಲಾ – ಆಗ ಸ್ವಲ್ಪ ತಮಾಷೆಯಾಗಿ ಮಾತಾಡಿದೆವು ಅವಳ ಹತ್ತಿರ. ಅವಳು ಸರಸಿಯಾಗಿರಬಹುದೆಂದು ನಮ್ಮ ಕಲ್ಪನೆಯಿತ್ತು. ಅಯ್ಯೋ, ಎಂಥ ಅರಸಿಕ ಪ್ರಾಣಿ ಅದು!"

"ನೀವು ಏನೆಂದು ಮಾತಾಡಿದಿರಿ ಅವರ ಹತ್ತಿರ?"

"ನೀವಿನ್ನೂ ಅವಿವಾಹಿತರಾಗಿರುವುದನ್ನು ಕೇಳಿ ನಮಗೆ ಬಹಳ ಆಶ್ಚರ್ಯವಾಯಿತು, ಮದುವೆಯಾಗುವ ವಿಚಾರವೇ ಇಲ್ಲವೇ ಸುಗುಣಾಬಾಯಿ – ಅಂತ ವಿನೋದದಿಂದ ಕೇಳಿದ ಮಾತ್ರಕ್ಕೆ ಮೂಗು ಮುರಿದು ಕಣ್ಣು ಕೆಂಪಗೆ ಮಾಡಿ – ನೀವಿಂಥ ಅನವಶ್ಯಕ ಪ್ರಶ್ನೆ ಕೇಳಬಾರದು ಅಂದು ಬಿಟ್ಟು ಧಡಧಡನೆ ಹೋಗಿಬಿಡಬೇಕೇ ಆಕೆ! ಅಬ್ಬ, ಎಂಥ ಹೆಣ್ಣು!"

"ಅವರು ಹಾಗೆ ವರ್ತಿಸಲು ಅಂಥದೊಂದು ಕಾರಣವಿದೆ ಬುದ್ಧೀ. ಬಿ. ಎ. ದಲ್ಲಿ ಓದುತ್ತಿದ್ದಾಗ ಅವರ ಕ್ಲಾಸ್‌ಮೇಟ್ ಒಬ್ಬರಿಗೆ ಮರುಳಾಗಿ ಗರ್ಭಿಣಿಯಾಗಿದ್ದರಂತೆ. ಔಷಧ ತೆಗೆದುಕೊಂಡು ಗರ್ಭವನ್ನೇನೋ ಕಳೆದುಕೊಂಡರು. ಹೆಸರು ಮಾತ್ರ ಕೆಟ್ಟುಹೋಯಿತು. ಆ ಕ್ಲಾಸ್‌ಮೇಟು ಬೇರೆ ಜಾತಿಯವನು. ಲಗ್ನವಾಗಲು ಸಾಧ್ಯವಿರಲಿಲ್ಲ. ಅವರು ಇನ್ನೂ ಅವಿವಾಹಿತರಾಗಿರಲು ಅದೇ ಕಾರಣ. ಅವರು ಹಾಗೆ ವರ್ತಿಸುವುದಕ್ಕೂ ಅದೇ ಕಾರಣ...."

"ಹೀಗೆಲ್ಲಾ ಇದೆಯೇ? ಸರಿ. ಹಾಗಾದರೆ ಇನ್ನೊಮ್ಮೆ ಪ್ರಯತ್ನ ಮಾಡೋಣ," ಎಂದರು ಸ್ವಾಮಿಗಳು.

ಅನಂತರ ನಾವು ಮತ್ತೆ ಓರೆಕೋರೆ ನಗರಕ್ಕೆ ಬಂದಾಗಲೆಲ್ಲ ಸ್ವಾಮಿಗಳು ಭೆಟ್ಟಿಗೆ ಬರಬೇಕೆಂಮ ಆಕೆಗೆ ಹೇಳಿಕಳಿಸುತ್ತಿದ್ದರು. ಆಕೆ ಮಾತ್ರ ಒಂದು ಸಲವೂ ಅವರ ಹತ್ತಿರ ಸುಳಿಯಲಿಲ್ಲ. ಕೊನೆಗೆ ಸ್ವಾಮಿಗಳು ನಿರಾಶರಾಗಿ ಅವಳ ಹವ್ಯಾಸ ಬಿಟ್ಟುಬಿಟ್ಟರು.

ಡಾಕ್ಟರ ಬಾಯಿಯ ಹುಚ್ಚೂ ಇತ್ತು ಅವರ ತಲೆಯಲ್ಲಿ. ಎಷ್ಟೋ ಸಲ ಅವರ ಮನೆಯಲ್ಲೇ ಬಿಡಾರ ಮಾಡುತ್ತಿದ್ದರು. ಆಕೆಯನ್ನು ಬಲೆಗೆ ಬೀಳಿಸಲು ಬಗೆಬಗೆಯಾಗಿ ಯತ್ನಿಸಿದರೂ ಆ ಹೆಣ್ಣುಮಗಳು ಮಾತ್ರ ತನ್ನ ಚಾರಿತ್ರ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡಳು.

ಕೊನೆಗೆ ಆ ನಗರದ ಬಗೆಗೇ ಬೇಸರು ಬಂದಿತು ಸ್ವಾಮಿಗಳಿಗೆ. "ಇದು ನಮ್ಮ ಯೋಗ್ಯತೆಗೆ ತಕ್ಕ ನಗರವಲ್ಲ. ಇಂಥಲ್ಲಿ ನಾವು ಕಾಲು ಹಾಕುವುದು ನಮ್ಮ ಘನತೆಗೆ ಕುಂದು," ಎಂದು ಹೇಳಿ ಅಲ್ಲಿಗೆ ಹೋಗುವುದನ್ನೇ ನಿಲ್ಲಿಸಿ ಬಿಟ್ಟರು.

★

ಗೊಬ್ಬೂರಿನಲ್ಲೂ ಭಾರಿ ಸಮಾರಂಭ ನಡೆಯಿತು. ಕಾಳಹೃದಯಪ್ಪನ ದೊಂದು ಪುಸ್ತಕದ ಪ್ರಕಾಶನೋತ್ಸವ ಹೂಡಿ ಆ ನಗರದಲ್ಲಿ ಸ್ವಾಮಿಗಳನ್ನು ಮೆರೆಸಲಾಯಿತು. ಅರ್ಥಾತ್ ಅದರ ವೆಚ್ಚವನ್ನೆಲ್ಲ ಸ್ವಾಮಿಗಳೇ ವಹಿಸಿ ಕೊಂಡರು. ಸಭೆಯ ಕಾಲಕ್ಕೆ ಶ್ರೀಮಂತರ ಪರಿಚಯ ಮಾಡಿಕೊಳ್ಳುವುದು, ಅವರ ಮನೆಗಳಿಗೆ ಊಟಕ್ಕೆ ಹೋಗುವುದು, ಪಾದಗಾಣಿಕೆ ಪಡೆಯುವುದು, ಆ ಹಣವನ್ನೇ ಸಭೆಯ ಖರ್ಚುಗಳಿಗೆಂದು ಕೊಟ್ಟುಬಿಡುವುದು ಸ್ವಾಮಿಗಳ ಪದ್ಧತಿಯಾಯಿತು.

ಭಕ್ತರಿಂದ ಬಂದ ಹಣವನ್ನೆಲ್ಲ ಹೀಗೆ ಅವರಿವರಿಗೆ ಕೊಟ್ಟುಬಿಟ್ಟರೆ ಹೇಗೆ?" ಎಂದು ನಾನೊಮ್ಮೆ ಕೇಳಿದಾಗ ಸ್ವಾಮಿಗಳು ನಗುತ್ತ ಉತ್ತರವಿತ್ತರು: "ಕೊಟ್ಟರೆ ನಮ್ಮ ಗಂಟೇನು ಹೋದಂತಾಯಿತು? ಯಾರಿಂದಲೋ ಬರುತ್ತದೆ, ಯಾರಿಗೋ ಹೋಗುತ್ತದೆ. ನಮಗೆ ಸುಲಭವಾಗಿ ಶ್ರೀಮಂತ ಭಕ್ತರು ಸಿಕ್ಕುತ್ತಾರೆ,

ಮೃಷ್ಟಾನ್ನ ಭೋಜನವೂ ಸಿಕ್ಕುತ್ತದೆ. ಮೆರವಣಿಗೆ, ಸಭೆ, ಸಮಾರಂಭ, ಭಾಷಣ, ಕೀರ್ತಿ. ಪತ್ರಿಕೆಗಳಲ್ಲಿ ಹೆಸರು, ಪ್ರಚಾರ ಎಲ್ಲಾ ನಮಗೆ ಲಾಭ ದಾಯಕವಾದುದೇ. ಹಾನಿಯೇನೂ ಇಲ್ಲವಲ್ಲಾ ?"

ಅವರ ಮಾತು ನಿಜವಾದುದೇ ಆಗಿತ್ತು. ಹಾ ನಿ ಯೇ ನೂ ಇರಲಿಲ್ಲ ಸ್ವಾಮಿಗಳಿಗೆ.

ಒಂದು ವಿಷಯದಲ್ಲಿ ಮಾತ್ರ ಗೊಬ್ಬೂರಿನಲ್ಲೂ ಅತೃಪ್ತಿಯೇ ಉಂಟಾ ಯಿತು ಸ್ವಾಮಿಗಳಿಗೆ. ಅಲ್ಲಿಯೂ ಅವರ ಸುಂದರ ರೂಪಕ್ಕೆ ಯಾವ ಮಹಿಳೆಯೂ ಮರುಳಾಗಲಿಲ್ಲ.

"ಥೂ...,ಇದೂ ಸಹ ಹಿಂದುಳಿದ ಊರೇ. ಏನೂ ಉಪಯೋಗವಿಲ್ಲ," ಎಂದು ಆಗಾಗ ಗೋಗರೆಯುತ್ತಿದ್ದರು ಸ್ವಾಮಿ.

ಒಂದೊಂದು ರಾತ್ರಿ ಅವರು ಕಾರಿನಲ್ಲಿ ಹೊರಗೆ ಹೋಗಿ ಮಧ್ಯರಾತ್ರಿಯ ವೇಳೆಗೆ ಬರುತ್ತಿದ್ದರು. ಅವರು ಹೋಗುತ್ತಿದ್ದುದೆಲ್ಲಿಗೆ ಎಂದು ಯೋಚಿಸಿಯೇ ಯೋಚಿಸಿದೆ. ಯಾವುದೂ ಅರ್ಥವಾಗಲಿಲ್ಲ. ಒಂದು ದಿನ ಡ್ರೈವರನನ್ನು ಚಹದಂಗಡಿಗೆ ಕರೆದೊಯ್ದು ಮೈಸೂರುಪಾಕು, ಮಸಾಲೆದೋಸೆ, ಕಾಫಿ, ಮೇಲೊಂದು ಗೋಲ್ಡ್‌ಫ್ಲೇಕ್ ಸಿಗರೇಟು ಕೊಡಿಸಿ ಮೆಲ್ಲಗೆ ಕೇಳಿದೆ: "ರಾತ್ರಿ ಹನ್ನೆರಡರವರೆಗೆ ಎಲ್ಲೆಲ್ಲಿ ಅಲೆಯುತ್ತೆಯೋ ಕಾರು ?"

ಡ್ರೈವರು ಹೊಗೆ ಬಿಡುತ್ತಾ ಕೇಳಿದ: "ಇನ್ನೂ ಗೊತ್ತಿಲ್ಲವೇ ನಿಮಗೆ?"

"ಇಲ್ಲವಪ್ಪ."

"ಮೇದಾರ ಓಣಿಯ ಎದುರಿಗೆ ಸೂಳೆಯರ ಗಲ್ಲಿ ಇದೆಯಲ್ಲಾ–ಅಲ್ಲೇ ಇರುತ್ತೆ ಕಾರು...."

"ಆ ?" ಎಂದು ಬಾಯ್ತೆರೆದು ಒಂದು ಕ್ಷಣ ಮೂಕನಂತೆ ಕೂತಿದ್ದೆ. ಸ್ವಾಮಿಗಳು....ಸೂಳೆಯರ ಸಹವಾಸ....ಅದನ್ನು ನಂಬುವುದೂ ಕಷ್ಟವಾಯಿತು. ಅವರ ಸ್ತ್ರೀ ವ್ಯಾಮೋಹದ ವಿಷಯವನ್ನೇನೋ ನಾನು ಪೂರ್ಣವಾಗಿ ಅರಿತು ಕೊಂಡಿದ್ದೆನಾದರೂ ಅದು ಅಷ್ಟು ದೂರ ಹೋಗಿರಬಹುದೆಂದು ತಿಳಿದಿರಲಿಲ್ಲ.

"ಇಲ್ಲಿಗೆ ಬಂದಾಗಿಂದ ಹತ್ತು ಹನ್ನೆರಡು ಸಲ ಹೋಗಿ ಬಂದಿದ್ದೇವೆ–ಅಲ್ಲಿಗೇ. ಅವಳ ಹೆಸರು ಯಲ್ಲವ್ವ ಅಂತೆ. ಸ್ವಾಮಿಗೂ ಅವಳಿಗೂ ಮೊದ ಲಿಂದಲೂ ಗುರುತುಂಟಂತೆ...." ಎಂದು ವಿವರಿಸಿದ ಡ್ರೈವರು.

"ನಾನೇನೂ ನಂಬುವುದಿಲ್ಲಪ್ಪ. ಛೆ ಛೆ."

"ಏನು ಚೇ ಚೇನೋ ನಿಮ್ಮದು ಬಿಡಿ. ನಾನೇನು ಸುಳ್ಳು ಹೇಳ್ತೀನೆಯೆ? ಸಾಹುಕಾರರ ಮನೆಗಳಲ್ಲಿ ಹೆಂಗಸರು ಸಿಗದಿದ್ದರೆ ಸ್ವಾಮಿ ಆದ್ರೂ ಮಾಡ ಬೇಕೇನು? ಅದಕ್ಕೇ ಯಲ್ಲವ್ವಾ ನೀನೇ ಗತಿ ಅಂತ ಅವಳ ಹತ್ತಿರ ಹೋಗೋದು....ನಾವು ಓರೆಕೋರೆ ನಗರದಲ್ಲಿದ್ದೆವಲ್ಲಾ– ಅಲ್ಲೂ ಒಬ್ಬಳ ಮನೆಗೆ ಹೋಗಿ ಬರುತ್ತಿದ್ದರು ಸ್ವಾಮಿಗಳು."

"ನನಗೆ ಹ್ಯಾಗೆ ತಿಳಿಯಲಿಲ್ಲಪ್ಪ? ಎಲ್ಲಿದೆ ಅವಳ ಮನೆ?"

"ಮಹಾಲಕ್ಷ್ಮೀ ಥಿಯೇಟರ್ ಇದೆಯಲ್ಲಾ– ಅದರ ಹಿಂದೆ."

ನಾನು ಅವಾಕ್ಕಾಗಿ ಕುಳಿತುಕೊಂಡೆ.

ಅಂದು ರಾತ್ರಿಯೂ ಸ್ವಾಮಿಗಳು ಹೊರಗಡೆ ಹೋದರು. ನಾನು ಹಾಸಿಗೆ ಹಾಸಿ ಮಲಗಿದ್ದವನು ಸ್ವಲ್ಪ ಹೊತ್ತಿನ ಬಳಿಕ ಎದ್ದು ಬಾಗಿಲು ತೆಗೆದು ಹೊರಗೆ ಹೊರಡುತ್ತಲೂ ಗೊಬ್ಬಣ್ಣನಿಗೆ ಸಂಶಯ ಬಂದಿತೋ ಏನೊ, "ಎಲ್ಲಿಗೆ ಹೋಗುತ್ತೀರಿ ಮರಿದೇವರೆ?" ಎಂದು ಕೇಳಿದ.

"ಏಕೋ ಏನೋ ನಿದ್ದೆ ಬರುತ್ತಿಲ್ಲ. ಸ್ವಲ್ಪ ಗಾಳಿ ತಿಂದು ಬರುತ್ತೇನೆ."

ಮೇದಾರ ಓಣಿಗೆ ಬಂದು ಸೂಳೆಯರ ಗಲ್ಲಿಗೆ ಅಡಿಯಿರಿಸಿದಾಗ ಮನೆ ಯೊಂದರ ಎದುರಿಗೆ ಸ್ವಾಮಿಗಳ ಮೋಟರು ನಿಂತಿದ್ದುದು ಕಾಣಿಸಿತು. ಮನವರಿಕೆ ಮಾಡಿಕೊಳ್ಳಲು ಅಷ್ಟೇ ಸಾಕಾಗಿತ್ತು ನನಗೆ. ಬಂದ ಹಾಗೇ ಹಿಂದಿರುಗಿದೆ.

★

ಕೀಟಲೆ ಕುಟ್ಟಪ್ಪನವರು ಆಕ್ಸಫರ್ಡಿಗೆ ಹೋಗುವ ವಿಷಯ ನಿರ್ಧರ ವಾದುದೂ ಅದೇ ಸಮಯದಲ್ಲಿ.

ಒಂದು ದಿನ ಅವರು ಭೆಟ್ಟಿಗೆ ಬಂದಾಗ ಸ್ವಾಮಿಗಳೇ ಆ ವಿಚಾರವನ್ನೆತ್ತಿ– "ಏನು ಕುಟ್ಟಪ್ಪ, ನೀವು ಇಂಗ್ಲೆಂಡಿಗೆ ಹೋಗುವುದು ಎಲ್ಲಿಗೆ ಬಂತು?" ಎಂದು ಕೇಳಿದರು.

"ಇಂಗ್ಲೆಂಡ್ ಪ್ರವಾಸವೆಂದರೆ ಸಾಮಾನ್ಯವೇ ಸ್ವಾಮಿಜಿ? ಭಯಂಕರ ಖರ್ಚು ಬರುತ್ತದೆ."

"ಅಬ್ಬಾ ಅಂದರೆ ಎಷ್ಟು ಬಂದೀತು ಖರ್ಚು?"

"ಏನಿಲ್ಲ ಅಂದರೂ ಇಪ್ಪತ್ತು ಸಾವಿರವಾದರೂ ಬೇಕು."

ಸ್ವಾಮಿಗಳು ಕೊಂಚವೂ ಯೋಚಿಸದೆ ಅಹಂಕಾರಪೂರ್ಣ ಸ್ವರದಲ್ಲಿ ಹೇಳಿದರು: “ಇಷ್ಟೇಯೆ! ಇದೇನು ಮಹಾ ಬಿಡಿರಿ. ನಮ್ಮ ನಾಲ್ಕು ಜನ ಭಕ್ತರಿಗೆ ಒಂದು ಅಪ್ಪಣೆ ಮಾಡಿದರೆ ಸಾಕು—ಇಪ್ಪತ್ತು ಸಾವಿರ ಕೂಡುತ್ತದೆ. ನೀವು ಪಾಸ್‌ಪೋರ್ಟಿಗೆ ಬರೆದುಬಿಡಿ. ಕಾಲೇಜಿಗೆ ಪ್ರವೇಶ ಸಿಕ್ಕುವುದು ಖಂಡಿತವಷ್ಟೆ?”

“ಯೂನಿವರ್ಸಿಟಿಗೆ ಬರೆದು ತಿಳಿದುಕೊಂಡಿದ್ದೇನೆ. ಅದರದೇನೂ ತೊಂದರೆಯಿಲ್ಲ. ಪಾಸ್‌ಪೋರ್ಟ್ ಸಿಕ್ಕೀತು. ಆದರೆ....”

“ಆದರೆ ಗೀದರೆ ಅಂತ ಅನ್ನಲೇಬೇಡಿರಿ ನೀವು. ಹಣದ ಜವಾಬ್ದಾರಿಯನ್ನು ನಮಗೆ ಬಿಟ್ಟು ಆಕ್ಸಫರ್ಡಿಗೆ ಹೊರಡುವ ಸಿದ್ಧತೆ ಮಾಡಿಕೊಳ್ಳಿ.”

“ಈ ಕಾಲದಲ್ಲಿ ಹಣ ಕೂಡಿಸುವುದು ಬಲು ಪ್ರಯಾಸದ ಕೆಲಸ ಸ್ವಾಮಿಜಿ....”

ಸ್ವಾಮಿಗಳಿಗೆ ಬಹಳ ಅವಮಾನವಾದಂತಾಯಿತು. ಅವರು ಉತ್ತೇಜಿತ ಸ್ವರದಲ್ಲಿ ನುಡಿದರು: “ಪ್ರಯಾಸ? ನಮಗೂ ಪ್ರಯಾಸವೆಂದು ನಿಮ್ಮ ಕಲ್ಪನೆಯೋ ಏನು?”

“ಹಾಗೇನೂ ಅಲ್ಲ ಸ್ವಾಮಿಜಿ. ಕೋಡಂಗಿಪುರದ ವರ್ತಕರು ಕೆಲವರು ನನಗೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ನಾನೇ ಹೋಗಿ ಕೇಳಿಲ್ಲ. ನನ್ನ ಬಗ್ಗೆ ಅವರಿಗೆಲ್ಲ ಆತ್ಮೀಯತೆಯುಂಟು. ಅದೇ ಊರಲ್ಲೇ ಸಾಲೆ ಕಲಿತದ್ದು ನಾನು.”

“ಹೀಗೋ? ಬಹಳ ಉತ್ತಮವೇ ಆದಂತಾಯಿತಲ್ಲಾ? ಮೊದಲು ಕೋಡಂಗಿಪುರಕ್ಕೇ ಹೋಗಿ ನಿಮ್ಮ ಅಭಿಮಾನಿಗಳಿಂದಲೇ ಹಣ ಎತ್ತಿದರಾಯಿತು. ಅವರಿಂದ ನಮಗೆ ಆಮಂತ್ರಣ ಬರುವಂತೆ ಮಾಡಿಬಿಟ್ಟರೆ ಸಾಕು, ಮುಂದಿನ ಕೆಲಸವೆಲ್ಲಾ ನಮಗೆ ಸೇರಿದ್ದು.”

“ನಾನಿನ್ನೂ ಒಂದು ನಿರ್ಧಾರಕ್ಕೆ ಬಂದಿಲ್ಲ ಸ್ವಾಮಿಜಿ. ಈ ವಿಷಯದಲ್ಲಿ ದುಡುಕುವಂತಿಲ್ಲ. ಸಾವಧಾನವಾಗಿ ಕೆಲಸ ಮಾಡಬೇಕು.”

“ನಾವು ಹೇಳುವುದನ್ನು ಕೇಳಿ. ಹಣದ ಚಿಂತೆ ನಿಮಗೆ ಬೇಡವೇ ಬೇಡ. ಲಿಂಗಾಯತ ಸಮಾಜದಲ್ಲಿ ಆಕ್ಸಫರ್ಡಿಗೆ ಹೋಗಿ ಬಂದವರು ಬಹಳ ಕಡಿಮೆ. ಬಿ.ಎ., ಎಂ.ಎ., ಆರ್ಕ್ಸನ್ ಎಂದು ಮೂಗು ಮೇಲೆ ಮಾಡಿಕೊಂಡು ಮೆರೆದಾಡುವವರೆಲ್ಲಾ ಆ ಹಾರುವರೇ. ನಿಮ್ಮಂಥವರು ಹೋಗಿ ಪದವಿ ಪಡೆದು ಬಂದು

ಈ ಹಾರುವರ ಸೊಕ್ಕು ಇಳಿಸಿದರೆ ನಮಗೆ ಸಂತೋಷವೇ ಅಲ್ಲವೇ!" ಎಂದರು ಸ್ವಾಮಿ. "ಸರ್ವಧರ್ಮಸಮನ್ವಯ"ದ ಬಗೆಗೆ ಸಾರ್ವಜನಿಕ ಸಭೆಗಳಲ್ಲಿ ಗಂಟೆಗಳ ಕಾಲ ಭಾಷಣ ಕುಟ್ಟುತ್ತಿದ್ದ ಈ ವ್ಯಕ್ತಿಯ 'ಸಮನ್ವಯ'ದ ನಿಜಸ್ವರೂಪವನ್ನು ಕಂಡಾಗ ಕುಟ್ಟಪ್ಪನವರಿಗೆ ಅಚ್ಚರಿಯಾಗಿರಲು ಸಾಕು.

ಕುಟ್ಟಪ್ಪ ಎದ್ದುಹೋದ ತರುವಾಯ ನಾನು ನಿಧಾನವಾಗಿ ಮಾತು ತೆಗೆದೆ:

"ಇಪ್ಪತ್ತು ಸಾವಿರ ಅಂದರೆ ಸಾಮಾನ್ಯವೇ ಸ್ವಾಮಿಜಿ? ಜನ ಕೊಡಬಹುದೇ?"

"ಇಪ್ಪತ್ತೇಕೆ, ನಲವತ್ತು ಸಾವಿರ ರೂಪಾಯಿಗಳನ್ನೂ ಕೂಡಿಸುತ್ತೇವೆ. ಸುಮ್ಮನಿರು. ಮಠದಲ್ಲಿ ನಮ್ಮ ಪರಿಸ್ಥಿತಿ ಹೇಗಿದೆಯೆಂಬುದು ಗೊತ್ತೇ ಇದೆಯಲ್ಲಾ ನಿನಗೆ? ಖರ್ಚಿಗೆ ಹಣ ಬೇಕೋ, ಬೇಡವೋ? ಬೇರೆಯವರ ನೆವ ಮುಂದೆ ಮಾಡಿ ಫಂಡ್ ಎತ್ತುವ ಇಂಥ ಉಪಾಯ ಅಂದರೆ ಅದ್ಭುತ ಉಪಾಯ. ಟಿಳಕ ಫಂಡು, ಕಸ್ತೂರಿಬಾ ಫಂಡು, ಗಾಂಧೀ ಫಂಡು, ಆ ಫಂಡು ಈ ಫಂಡು ಅಂತ ಗಾಂಧೀಟೋಪಿಯ ಮಂದಿ ಮಜಾ ಹೊಡೆಯುವುದಿಲ್ಲವೇನು? ಹಾಗೇ ಇದೂ ಒಂದು ಕುಟ್ಟಪ್ಪಾ ಫಂಡು...." ಎಂದು ಹೇಳಿ ಗೊಳ್ಳೆಂದು ನಕ್ಕರು ಸ್ವಾಮಿ.

ಕುಟ್ಟಪ್ಪ ಆಕ್ಸ್‌ಫರ್ಡಿಗೆ ತೆರಳುವ ವಿಚಾರ ಗೊಬ್ಬೂರಿನಲ್ಲೆಲ್ಲ ಹರಡುತ್ತಲೂ ಕಾಳಹೃದಯಪ್ಪ ಓಡಿಬಂದು, ಸ್ವಾಮಿಗಳಿಗೆ ಸಾಷ್ಟಾಂಗ ಹಾಕಿ, ಕೈಕಟ್ಟಿಕೊಂಡು ನಿಂತು ನುಡಿದ: "ಏನು ಬುದ್ಧೀ? ಎಂಥಾ ಅನ್ಯಾಯ! ನನ್ನಿಂದೇನು ಅಪರಾಧವಾಯಿತು ಅಂತ ನನಗೀ ಶಿಕ್ಷೆ?"

"ಶಿಕ್ಷೆ!?"

"ಅಲ್ಲದಿನ್ನೇನು ಬುದ್ಧೀ? ತಮ್ಮ ಪ್ರೀತಿಯ ಶಿಷ್ಯನಾದ ನನ್ನನ್ನು ಬಿಟ್ಟು ಆ ಕುಟ್ಟಪ್ಪನನ್ನು ಕಳಿಸುವುದುಂಟೇ ಆಕ್ಸಫರ್ಡಿಗೆ? ಪರದೇಶಕ್ಕೆ ಹೋಗಿ ಒಂದು ಡಿಗ್ರಿ ಪಡೆದು ಬರುವ ಆಸೆ ಎಷ್ಟೋ ದಿನಗಳಿಂದ ಇದೆ ನನಗೆ. ಹತಭಾಗ್ಯ....ಸಂಧಿಯೇ ಸಿಗಲೊಲ್ಲದು. ತಾವಾದರೂ ಸಹಾಯಮಾಡಿ ನನ್ನನ್ನು ಕಳಿಸಬಹುದೆಂದು ತಿಳಿದಿದ್ದೆ. ತಾವು...."

ಸ್ವಾಮಿಗಳು ಗೊಂದಲಕ್ಕೊಳಗಾದವರಂತೆ ತಡವರಿಸುತ್ತ ನುಡಿದರು: "ನಿಮ್ಮನ್ನೂ ಕಳಿಸುವೆವು ಕವಿಗಳೇ....ಚಿಂತಿಸಬೇಡಿ, ಚಿಂತಿಸಬೇಡಿ. ಮೊದಲು

ಕುಟ್ಟಪ್ಪ ಹೋಗಿ ಬರಲಿ....ಇಂಗ್ಲೆಂಡಿನ ಚಳಿಗೆ ನಿಮ್ಮ ಸೂಕ್ಷ್ಮ ಪ್ರಕೃತಿ ತಡೆದೀತೋ ಹ್ಯಾಗೆ ?"

"ಯಾಕೆ ತಡೀಲಿಕ್ಕಿಲ್ಲ ? ಎಲ್ಲಾ ತಡೆಯುತ್ತದೆ. ವುಲ್ಲನ್‌ಸೂಟು, ಗ್ರೇಟ್ ಕೋಟು ಹಾಕಿಬಿಟ್ಟರಾಯಿತು...." ಎಂದು ಹೇಳುತ್ತಿದ್ದ ಹಾಗೆ ಕಾಳಹೃದಯಪ್ಪನ ಕಂಠದಲ್ಲಿ ಗೊರಗೊರ ಎಂದು ಸದ್ದಾಗತೊಡಗಿತು. "ಅಂತೂ ನನ್ನ ಅದೃಷ್ಟವೇ ಕೆಟ್ಟದು. ವಿಧಿ ನನ್ನ ಹಣೆಯಲ್ಲಿ ಒಳ್ಳೆಯದನ್ನು ಬರೆದೇ ಇಲ್ಲ. ಕುಟ್ಟಪ್ಪನಂಥ ಕೋಣಗಳೂ ಇಂಗ್ಲೆಂಡಿಗೆ ಹೋಗುತ್ತವೆ ನನ್ನಂಥ ಸ್ಕಾಲರು...." ಎನ್ನುತ್ತಾ ಆತ ಬಿಕ್ಕಿ ಬಿಕ್ಕಿ ಅಳತೊಡಗಿದ.

ಆತನ ಮಾತಿನ ರೀತಿ ಸ್ವಾಮಿಗಳಿಗೂ ಸರಿಬರಲಿಲ್ಲ. ಅವನು ಕಂಬನಿ ಗರೆಯುವದನ್ನೂ ಗಮನಿಸದೆ ಅವರು ಏರಿಸಿದ ಧ್ವನಿಯಲ್ಲಿ ನುಡಿದರು : "ನೀವು ಕವಿಗಳೂ ಲೇಖಕರೂ ಆಗಿ ಇನ್ನೊಬ್ಬ ಲೇಖಕರನ್ನು ಈ ರೀತಿ ಅನಾಗರಿಕರಂತೆ ಬಯ್ಯಬಾರದು. ಕುಟ್ಟಪ್ಪ ಕೋಣನಾದರೆ ನೀವೊಂದು....ನೀವೊಂದು....ಏನು ? ನೀವು ಏನೆಂಬುದನ್ನು ಹೇಳಿಬಿಡೋಣವೇನು ?"

ಕಾಳಹೃದಯಪ್ಪ ಕಂಬನಿಗಳನ್ನೊರೆಸಿಕೊಳ್ಳುತ್ತ ಎದ್ದು ಹೋದ.

ಕುಟ್ಟಪ್ಪನವರನ್ನು ಆಕ್ಸಫರ್ಡಿಗೆ ಕಳಿಸುವ ಬಗೆಗೆ ಗೊಬ್ಬಣ್ಣನಿಂದಲೂ ಆಕ್ಷೇಪಣೆ ಬರದಿರಲಿಲ್ಲ. ಅವನನ್ನು ಸಮಾಧಾನಪಡಿಸುತ್ತ ಸ್ವಾಮಿಗಳೆಂದರು :

"ಈ ಯೋಜನೆಯಿಂದ ಕುಟ್ಟಪ್ಪನಿಗಾಗುವ ಲಾಭಕ್ಕಿಂತ ಹೆಚ್ಚು ನಮಗೇ ಆಗುತ್ತದೆ ಗೊಬ್ಬಣ್ಣ ! ಸ್ವಲ್ಪದಿನ ಹೋದ ಬಳಿಕ ಎಲ್ಲಾ ತಾನೇ ಗೊತ್ತಾಗುವುದು ನಿಮಗೆ. ಈಗ ನೋಡಿ. ಕೋಡಂಗಿಪುರ ಶ್ರೀಮಂತರ ಊರು. ಅಲ್ಲಿ ಹೆಚ್ಚಾಗಿ ಇರುವವರೆಂದರೆ ವ್ಯಾಪಾರಿಗಳು. ಕಳ್ಳಸಂತೆಯಲ್ಲಿ ಲಕ್ಷಾಂತರ ಲಾಭ ಹೊಡೆದು ಎಲ್ಲರೂ ಸಾಹುಕಾರರಾಗಿದ್ದಾರೆ. ಅವರೆಲ್ಲರೂ ನಮ್ಮ ಭಕ್ತರಾಗುವಂತಾದರೆ ಎಷ್ಟು ಚೆನ್ನಾದೀತು ! ಅನಂತರ ಹಣಕ್ಕೇನು ಕೊರತೆ ? ನಿಮ್ಮ 'ತಲೆಕಾಯಿ'ಯನ್ನೇ ದಿನಪತ್ರಿಕೆಯನ್ನಾಗಿ ಮಾಡಿದರಾಯಿತು, ಸುಮ್ಮನಿರಿ. ಅದಕ್ಕೂ ಹಣವೊದಗಿಸಿಕೊಡುತ್ತೇವೆ. ಮೊದಲು ಆ ಊರಲ್ಲಿ ನಾವು ಕಾಲಿಡುವಂತಾಗಬೇಕಲ್ಲವೆ ? ಸದ್ಯಕ್ಕಂತೂ ಅಲ್ಲಿ ನಮ್ಮ ಭಕ್ತರಾರೂ ಇಲ್ಲ. ಕುಟ್ಟಪ್ಪನ ಮೂಲಕ ಆಮಂತ್ರಣ ಬರುತ್ತದೆ. ತೀರಾ ಸುಲಭವಾಗಿ ನಮ್ಮ ಕೆಲಸ ಸಾಧಿಸುತ್ತದೆ."

★

ಮೂರು ನಾಲ್ಕು ದಿನಗಳೊಳಗಾಗಿ ಕೋಡಂಗಿಪುರದಿಂದ ಸ್ವಾಮಿಗಳಿಗೆ ಆಮಂತ್ರಣವೂ ಬಂದಿತು. ಆ ಊರಿನ ವಿರಕ್ತಮಠದಲ್ಲೇ ಬಿಡಾರ ಮಾಡುವುದೆಂದು ಗೊತ್ತಾಗಿದ್ದಿತು. ಸರಿ, ಗೊಬ್ಬೂರಿನಿಂದ ಕೋಡಂಗಿಪುರಕ್ಕೆ ಬಿಜಯಂಗೈಸಿತು ನಮ್ಮ ಕಾರು. ಈ ಸಲ ಕುಟ್ಟಪ್ಪನವರೂ ನಮ್ಮ ಜತೆಗಿದ್ದರಾದುದರಿಂದ ಸ್ವಾಮಿಗಳು ದಾರಿಯಲ್ಲಿ ಹೆಣ್ಣಿನ ವಿಷಯವನ್ನೇ ಎತ್ತಲಿಲ್ಲ. ಕುಟ್ಟಪ್ಪ ಎಂದರೆ ಅವರಿಗೆ ಒಳಗೊಳಗೇ ತುಂಬ ದಿಗಿಲು. ತಮ್ಮ ನಿಜಸ್ವರೂಪವನ್ನು ಅವರಿಗೆ ತಿಳಿಯಗೊಡಬಾರದೆಂದೇ ನಿರ್ಧರಿಸಿದ್ದರು.

ಸ್ವಾಮಿಗಳ ಗೌರಕಾಯ, ಜರತಾರಿ ಬಟ್ಟೆ, ಮಾತಿನ ಆಡಂಬರ, ನಾಟಕೀಯ ನಗೆಗಳನ್ನು ಕಂಡು ಮರುಳಾದ ಕೋಡಂಗಿಪುರದ ಜನ ಶುದ್ಧ ಮೂರ್ಖರಂತೆಯೆ ಆಚರಿಸತೊಡಗಿದರು. ಅಲ್ಲಿನವರೆಲ್ಲ ಹೆಚ್ಚಾಗಿ ವೀರಶೈವರು. ವೀರಶೈವ ಧರ್ಮದ ತತ್ವಗಳನ್ನು ನಿತ್ಯದ ಆಚರಣೆಯಲ್ಲಿ ತರುವವರು ಇಲ್ಲವೇ ಇಲ್ಲವಾದರೂ ಅವರಿಗೆ ವೃಥಾ ಅಭಿಮಾನ ಮಾತ್ರ ವಿಪರೀತ. ಕಳ್ಳಸಂತೆ ನಡಸಿ ಹಣ ಗಳಿಸುವುದು ಪಾಪ ಎಂಬುದು ಗೊತ್ತಿದ್ದರೂ ಅಲ್ಲಿನ ಪ್ರತಿಯೊಬ್ಬ ವ್ಯಾಪಾರಿಯೂ ಪ್ರತಿದಿನವೂ ಅದೇ ಪಾಪಕಾರ್ಯದಲ್ಲಿ ಮುಳುಗೇಳುತ್ತಿದ್ದ. ಅಂಥ ಪಾಪಿಗಳಿಗೆಲ್ಲ ಸರಿಯಾದ ಗುರುವಾಗಿಬಿಟ್ಟರು ನಮ್ಮ ಸ್ವಾಮಿ !

" ಗಳಿಸಬೇಕು, ಲಕ್ಷಾಂತರ ಗಳಿಸಬೇಕು, ಕೋಟ್ಯಾಂತರ ಗಳಿಸಬೇಕು. ಗಳಿಸಿದ ಹಣದಲ್ಲಿ ನೂರಕ್ಕೆ ಒಂದು ಪಾಲನ್ನಾದರೂ ಜಂಗಮರಿಗರ್ಪಿಸಬೇಕು. ಬಸವಣ್ಣನವರು ಹೀಗೇ ಮಾಡುತ್ತಿದ್ದರು. ಅವರ ಮತದವರಾದ ನೀವೂ ಹಾಗೇ ಮಾಡಬೇಕು" ಎಂದು ಸ್ವಾಮಿಗಳು ಆ ವ್ಯಾಪಾರಿಗಳಿಗೆ ಬೋಧಿಸುತ್ತಿದ್ದರು !

ಆ ಊರಲ್ಲೂ ಒಂದು ಅಕ್ಕನ ಬಳಗವಿತ್ತು. ಪ್ರತಿ ವರ್ಷವೂ ಅಕ್ಕನ ಜಯಂತಿ, ಬಸವ ಜಯಂತಿ, ನಾಡಹಬ್ಬಗಳು ಆಚರಿಸಲ್ಪಡುತ್ತಿದ್ದುವಂತೆ. ರಾತ್ರಿ ಅಂಗಡಿ ಮುಚ್ಚಿ, ಊಟ ಮುಗಿಸಿದ ಬಳಿಕ ಒಂದರ್ಧ ತಾಸು ಭಾಷಣ ಕೇಳುವುದೆಂದರೆ ಬಲು ಪ್ರೀತಿ ಅಲ್ಲಿನ ಜನರಿಗೆ. ಅವರ ಆಸಕ್ತಿಗಳನ್ನೆಲ್ಲ ಉಪಾಯಾಂತರದಿಂದ ತಿಳಿದುಕೊಂಡ ಸ್ವಾಮಿಗಳು ಭಾಷಣಗಳ ಯಜ್ಞವನ್ನೇ ಪ್ರಾರಂಭಿಸಿಬಿಟ್ಟರು. ಪ್ರತಿದಿನವೂ ರಾತ್ರಿ ಒಂಭತ್ತೂವರೆ ಗಂಟೆಗೆ ಮಠದ ಅಂಗಳದಲ್ಲಿ ಸಭೆ ಸೇರತೊಡಗಿತು. ತಮ್ಮ ಪ್ರಚಾರಶಾಖೆಯ ಸದಸ್ಯರನ್ನೆಲ್ಲ

ಒಬ್ಬೊಬ್ಬರನ್ನಾಗಿ ಬರಮಾಡಿಕೊಂಡು ಅವರಿಂದ ಭಾಷಣ ಮಾಡಿಸಿ, ಹತ್ತಿಪ್ಪತ್ತು ರೂಪಾಯಿ ಕೊಟ್ಟು ಕಳಿಸತೊಡಗಿದರು ಸ್ವಾಮಿ. ನರಿರಾಯ, ಗುಂಡಾಡಯ್ಯ, ಗೊಬ್ಬಣ್ಣ, ಹೊಟ್ಟೆಪ್ಪ, ಗಂಗಾಧರಶಾಸ್ತ್ರಿ, ನಿರುದ್ಯೋಗಣ್ಣ ಎಲ್ಲರೂ ಬಂದು ಭಾಷಣ ಹೊಡೆದುದಾಯಿತು. ಶಾಸ್ತ್ರಿ ಒಂದು ಕೀರ್ತನೆಯನ್ನೂ ಕುಟ್ಟಿ ಎರಡು ನೂರು ರೂಪಾಯಿ ಕಿತ್ತುಕೊಂಡ. ವಿನಾಯಕರಾಯರೂ ಒಂದು ದಿನ ಬಂದು ಅಂದೇ ರಾತ್ರಿ ಗಾಡಿಗೆ ಹೊರಟುಹೋದರು. ದಿನಪತ್ರಿಕೆಗಳಲ್ಲಿ ಮತ್ತೆ ಜಗದ್ಗುರುಗಳ ಹೆಸರು ಎದ್ದು ಕಾಣಿಸತೊಡಗಿದುದಲ್ಲದೆ ಕೋಡಂಗಿಪುರಕ್ಕೂ ಕೀರ್ತಿ ಲಭಿಸತೊಡಗಿತು. "ಜಗದ್ಗುರುಗಳಿಗೆ ಎಂಥೆಂಥಾ ದೊಡ್ಡದೊಡ್ಡ ಮಂದಿ ಭಕ್ತರಾಗಿದ್ದಾರಲ್ಲಪ್ಪ! ಅವರಿಂದಾಗಿ ನಮ್ಮ ಊರಿಗೂ ಹೆಸರು ಬಂತು," ಎಂದು ಹರ್ಷದಿಂದ ಹಿಗ್ಗಿತು ಕೋಡಂಗಿಪುರದ ಜನ! ಸ್ವಾಮಿಗಳ ಬಗೆಗೆ ಅವರಿಗಿದ್ದ ಮೂಢಭಕ್ತಿ ಇಮ್ಮಡಿ ಮುಮ್ಮಡಿ ನೂರ್ಮಡಿಯಾಯಿತು; ಅವರನ್ನು ಕರೆದೊಯ್ದು ಪಾದಗಾಣಿಕೆ ಒಪ್ಪಿಸುವದರಲ್ಲಿ ನಾ ಮುಂದೆ ನೀ ಮುಂದೆ ಎಂದು ಸ್ಪರ್ಧೆಯನ್ನೇ ನಡೆಸತೊಡಗಿದರು. "ನಮ್ಮ ಜಗದ್ಗುರುಗಳು ನಿಜವಾಗಿಯೂ ಅವತಾರೀಪುರುಷರು," ಎಂದು ಭಾವಿಸಿಕೊಂಡು ಹೆಣ್ಣುಮಕ್ಕಳೂ ಉತ್ಸಾಹದಿಂದ ಅವರಿಗಾಗಿ ಸಿಹಿಯಡುಗೆ ಮಾಡತೊಡಗಿದರು. ಒಮ್ಮೆ ಅದರ ರುಚಿ ಹತ್ತುತ್ತಲೂ ಗೊಬ್ಬಣ್ಣ, ನಿರುದ್ಯೋಗಣ್ಣ ಆ ಊರು ಬಿಟ್ಟು ಹೊರಡುವುದಕ್ಕೇ ಸಿದ್ಧರಾಗಲಿಲ್ಲ. ಕೋಡಂಗಿಪುರದಲ್ಲಿ ನಾವು ಬಿಡಾರ ಹೂಡಿದ್ದ ಎರಡು ತಿಂಗಳ ಅವಧಿಯಲ್ಲಿ ನಿರುದ್ಯೋಗಣ್ಣನ ಹೊಟ್ಟೆ ಒಂದೂವರೆ ಇಂಚು ಮುಂದೆ ಬಂದಿತು. ನನಗೆ ಮಾತ್ರ ಆ ಊರಿನಿಂದ ಎಂದು ಹೊರಡುವೆವೊ ಎನ್ನಿಸಿತು. ದಿನವೂ ಎರಡು ಸಲ ಸಿಹಿಯೂಟವನ್ನುಂಡು ನನಗೆ ಅಜೀರ್ಣರೋಗ ಅಂಟಿಕೊಂಡಿತ್ತು. ಕುಟ್ಟೆಪ್ಪನವರಿಗೂ ಹಾಗೇ ಆಗಿದ್ದಿತಂತೆ.

ಸ್ವಾಮಿಗಳ ತಟ್ಟೆಯಲ್ಲಿ ಹೋಳಿಗೆ ಕರಜೀಕಾಯಿಗಳೂ, ಪಾದಗಳ ಮೇಲೆ ನೂರು ರೂಪಾಯಿ ನೋಟುಗಳೂ ಸೂರೆಯಾಗತೊಡಗಿದ್ದುವು. ಬಡರೈತರನ್ನು ಮೋಸಗೊಳಿಸಿ ತೀರ ಸುಲಭವಾಗಿ ಲಕ್ಷಗಟ್ಟಲೆ ಲಾಭ ಹೊಡೆದಿದ್ದ ಆ ವ್ಯಾಪಾರಿಗಳಿಗೆ ನೂರು ರೂಪಾಯಿ ನೋಟೆಂದರೆ ಲಕ್ಷವೇ ಇರಲಿಲ್ಲ. ಅದೊಂದೇ ಊರಿನಲ್ಲಿ ಏನಿಲ್ಲವೆಂದರೂ ಹತ್ತುಸಾವಿರ ರೂಪಾಯಿಗಳಾದರೂ ಕಾಣಿಕೆ ಲಭಿಸಿರಬಹುದು ಸ್ವಾಮಿಗಳಿಗೆ. ಅದರಲ್ಲಿ ಒಂದೆರಡು ಸಾವಿರವನ್ನು ಗೊಬ್ಬಣ್ಣ ಹೊಡೆದುಕೊಂಡು ಹೋಗಿರಬೇಕು. ಒಂದು ಸಾವಿರದಷ್ಟನ್ನಾದರೂ ಶಾಸ್ತ್ರಿ

ಹಾರಿಸಿರಬೇಕು. ಗುಂಡಾಡಯ್ಯನಿಗೂ ಸ್ವಲ್ಪ ಸಿಕ್ಕಿರಬಹುದು. ಇನ್ನುಳಿದು ದೇನಾಯಿತೆಂಬುದು ಇದುವರೆಗೂ ನನಗೆ ತಿಳಿದಿಲ್ಲ.

ಕುಟ್ಟಪ್ಪನವರಿಗಾಗಿ ಪ್ರತ್ಯೇಕವಾಗಿಯೆ ಎಂಟು ಸಾವಿರ ರೂಪಾಯಿ ಕೂಡಿಸಲಾಯಿತು. "ಸದ್ಯ ಪ್ರಯಾಣದ ಖರ್ಚು ಮೊದಲಾದುವುಗಳಿಗೆ ಇಷ್ಟು ಸಾಕಲ್ಲವೇ? ನೀವು ಹೊರಟು ಬಿಡಿ. ಇನ್ನುಳಿದ ಹಣವನ್ನು ಒಂದೆರಡು ತಿಂಗಳಲ್ಲಿ ನಾವು ಅಲ್ಲಲ್ಲಿ ಕೂಡಿಸಿ ನಿಮಗೆ ಕಳಿಸುತ್ತೇವೆ," ಎಂದು ಸ್ವಾಮಿಗಳು ಹೇಳಿದರು.

ಪಾದಗಾಣಿಕೆಯಿಂದ ಸ್ವಾಮಿಗಳಿಗೆ ಹತ್ತುಸಾವಿರ ರೂಪಾಯಿ ಸಿಕ್ಕ ಸಂಗತಿ ಕುಟ್ಟಪ್ಪನವರಿಗೂ ಗೊತ್ತಿದ್ದುದೇ ಆಗಿತ್ತು. "ಈಗ ತಮ್ಮ ಹತ್ತಿರ ಇರುವುದನ್ನೂ ಸೇರಿಸಿ ಎಲ್ಲ ಹಣವನ್ನೂ ಭರ್ತಿ ಮಾಡಿಕೊಟ್ಟರೆ ಒಳ್ಳೆಯದಾಗು ತ್ತದೆ. ಪರದೇಶಕ್ಕೆ ಹೋಗಿ ನಾನು ತೊಂದರೆಪಟ್ಟುಕೊಳ್ಳಬಾರದಲ್ಲ?" ಎಂದು ಅವರು ಹೇಳಿದರು.

"ನಮ್ಮ ಹತ್ತಿರ ಹಣವಾದರೂ ಎಲ್ಲಿ ಉಳಿದಿರುತ್ತೆ ಕುಟ್ಟಪ್ಪ? ಆ ಕೈಯಿಂದ ಬರುತ್ತೆ, ಈ ಕೈಯಿಂದ ಹೋಗುತ್ತೆ. ನಮ್ಮನ್ನು ಕಿತ್ತು ತಿನ್ನುವ ನಿರುದ್ಯೋಗಿಗಳೆಷ್ಟು ಜನರಿದಾರೆ ಗೊತ್ತಿಲ್ಲವೇ ನಿಮಗೆ? ಆ ನರಿರಾಯನಿಗೆ ಐದು ನೂರು ಕೊಟ್ಟೆವು, ಗುಂಡಾಡಯ್ಯನಿಗೆ ಎರಡು ಸಾವಿರ. ಶಾಸ್ತ್ರಿಗೆ ನಾಲ್ಕು ಸಾವಿರ, ಗೊಬ್ಬಣ್ಣನಿಗೆ ಒಂದು ಸಾವಿರ, ನಿರುದ್ಯೋಗಣ್ಣನಿಗೆ ಐದುನೂರು" ಎಂದೆಲ್ಲ ನಾಲಗೆಯ ಮೇಲೆ ಮೂಡಿದ ಮಾತು ಹಾರಿಸಿಬಿಟ್ಟರು ಸ್ವಾಮಿಗಳು.

"ಹಾಗೆಲ್ಲ ಯಾಕೆ ಕೊಡುತ್ತೀರಿ ಸ್ವಾಮಿಜಿ?"

"ಅಯ್ಯೊ ಮಾರಾಯ. ಕೊಡದಿದ್ದರೆ ಬಿಡ್ತಾರೆಯೆ? ಹೋದ ಹೋದಲ್ಲೆಲ್ಲಾ ನಮ್ಮ ಬಗ್ಗೆ ಅಪಪ್ರಚಾರ ಮಾಡುತಾರೆ, ಪತ್ರಿಕೆಗಳಲ್ಲಿ ಟೀಕೆ ಮಾಡುತಾರೆ. ದೊಡ್ಡ ಪೀಠದ ಜಗದ್ಗುರುವಾಗಿದ್ದೇವಲ್ಲಾ– ಅದಕ್ಕಾಗಿ ಇಂಥವರ ಟೀಕೆಗಳೆಂದರೆ ಹೆದರಿಕೊಂಡೇ ಇರಬೇಕಾಗುತ್ತದೆ."

"ನೀವು ಒಳ್ಳೆಯವರಾಗಿರುವಾಗ ಯಾರು ಏನು ಟೀಕೆ ಮಾಡಿದರೇನು? ನೀವೇಕೆ ಹೆದರಬೇಕು?"

ಕುಟ್ಟಪ್ಪನವರ ಆ ಪ್ರಶ್ನೆಗೆ ಸ್ವಾಮಿಗಳಿಂದ ಸಮರ್ಪಕ ಉತ್ತರ ದೊರೆಯು ಲಿಲ್ಲ. "ಹೋಗಲಿ ಬಿಡಿ. ಅಂತೂ ಪತ್ರಿಕಾಕರ್ತರ ವೈರ ಕಟ್ಟಿಕೊಳ್ಳಬಾರದು,"

ಎಂದಿಷ್ಟೇ ನುಡಿದು ಸುಮ್ಮನಾದರು. ಕುಟ್ಟಪ್ಪನವರೂ ಆ ವಿಷಯ ಅಲ್ಲಿಗೇ ನಿಲ್ಲಿಸಿದರು.

ಆ ದಿನ ಸಾಯಂಕಾಲ ಹೊಲಗಳ ಕಡೆ ಅಲೆಯಲು ಹೋಗಿದ್ದಾಗ ಸ್ವಾಮಿಗಳನ್ನು ಪೂರ್ಣವಾಗಿ ನಂಬಬಾರದೆಂದು ನಾನು ಕುಟ್ಟಪ್ಪನವರಿಗೆ ಉಪಾಯವಾಗಿ ಸೂಚಿಸಿದೆ.

"ಅವರಿಗೂ ನಿಮಗೂ ಇರುವ ಸಂಬಂಧವನ್ನು ಕೆಡಿಸುವ ಉದ್ದೇಶ ನನ್ನದಲ್ಲ. ನಿಮ್ಮ ಬಗ್ಗೆ ನನ್ನಲ್ಲಿ ಬಹಳ ಅಭಿಮಾನವಿದೆಯಾದ್ದರಿಂದ ಈ ಮಾತು ಹೇಳುತ್ತಿದೇನೆ. ಸ್ವಾಮಿಗಳ ವಿಷಯ ನನ್ನಷ್ಟು ನಿಮಗೆ ತಿಳಿಯದು. ಅವರನ್ನು ನಂಬಿ ನೀವೇನೋ ಇಂಗ್ಲೆಂಡಿಗೆ ಹೊರಟುಬಿಡಬಹುದು. ಮಾತು ಕೊಟ್ಟ ಪ್ರಕಾರ ಅವರು ನಿಮಗೆ ಹಣ ಕಳಿಸುವರೆಂಬ ಭರವಸೆಯೇನಿದೆ ?"

"ಭರವಸೆಯಿರಲಿ, ಇಲ್ಲದಿರಲಿ. ಅಂತೂ ಹೊರಡುವ ನಿಶ್ಚಯ ಮಾಡಿದ್ದಾಗಿದೆ. ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆಯನ್ನೂ ಕೊಟ್ಟುಬಿಟ್ಟೆನಲ್ಲ? ಇನ್ನು ಈ ಯೋಜನೆಯಿಂದ ಕದಲುವುದು ನನ್ನಿಂದಾಗದ ಮಾತು," ಎಂದು ದೃಢಸ್ವರದಲ್ಲಿ ನುಡಿದರು ಕುಟ್ಟಪ್ಪ.

ಎಂಟುಸಾವಿರ ರೂಪಾಯಿ ತೆಗೆದುಕೊಂಡು ಅವರು ಮರುದಿನವೇ ಮುಂಬಯಿಗೆ ಹೊರಟುಬಿಟ್ಟರು. ಹತ್ತು ಹನ್ನೆರಡು ದಿನಗಳಲ್ಲೇ ಹಡಗು ಹತ್ತಿದುದೂ ಗೊತ್ತಾಯಿತು. ಅವರ ಕಾಗದವನ್ನೋದುತ್ತ ಸ್ವಾಮಿಗಳೆಂದರು : "ಅಂತೂ ಗೆದ್ದನಪ್ಪಾ ಕುಟ್ಟಪ್ಪ – ನಾವೂ ಗೆದ್ದೆವು. ಪದವಿ ಪಡೆದು ಹಿಂದಿರುಗಿದ ಬಳಿಕ ದೊಡ್ಡ ದಿನಪತ್ರಿಕೆಯೊಂದನ್ನು ಹೊರಡಿಸುತ್ತಾನೆ. ಅದು 'ಒಂದೇ ಕರ್ನಾಟಕ'ವನ್ನು ಮೆಟ್ಟಿ ನಿಲ್ಲುತ್ತದೆ. ಅನಂತರ ನಾವು ಪ್ರಚಾರಕ್ಕಾಗಿ ಜನಿನಾರದವರ ಮೋರೆ ನೋಡುತ್ತ ಕೂತಿರಬೇಕಾಗುವುದಿಲ್ಲ. ನಮ್ಮದೊಂದು ಸುದ್ದಿ ಪ್ರಕಟಿಸುವುದೆಂದರೆ ದೊಡ್ಡ ಉಪಕಾರ ಮಾಡಿದಂತೆ ವರ್ತಿಸುತ್ತಾರೆ, ಈ ಬೋ....ಮಕ್ಕಳು...."

★

ಕೋಡಂಗಿಪುರದಿಂದ ಮುಂದೆ ಯಾವ ಊರಿಗೆ ಹೊರಡುವುವೆಂದು ಸ್ವಾಮಿಗಳು ಯೋಚಿಸುತ್ತಿದ್ದಾಗಲೇ ಧರ್ಮಪುರದಿಂದ ನಿರುದ್ಯೋಗಿಯೊಬ್ಬ ಬಂದು ಅವರ ಪರಿಚಯ ಮಾಡಿಕೊಂಡು, ತನ್ನ ಪರಿಚಯವನ್ನೂ ಮಾಡಿ

ಕೊಟ್ಟ. ಧರ್ಮಪುರದ ಕೀರ್ತಿಯನ್ನು ಅದಕ್ಕೂ ಮೊದಲೇ ಸಾಕಷ್ಟು ಕೇಳಿದ್ದರು ಸ್ವಾಮಿಗಳು. ನಿರುದ್ಯೋಗಿಯಿಂದ ಎಲ್ಲವೂ ವಿಶದವಾಗಿ ತಿಳಿದುಬಂದಿತು.....

....ಕೋಡಂಗಿಪುರಕ್ಕಿಂತಲೂ ಮೂರುನಾಲ್ಕು ಪಟ್ಟು ದೊಡ್ಡ ನಗರ ಧರ್ಮಪುರ. ಬಹುಸಂಖ್ಯಾತರು ವ್ಯಾಪಾರಿಗಳು, ವೀರಶೈವರು. ಉದ್ಯೋಗ ವಾಣಿಜ್ಯಗಳಲ್ಲಿ ಬಹಳ ಮುಂದುವರೆದಿದ್ದ ಊರು ಅದು. ಒಂದೆರಡು ನೂಲಿನ ಗಿರಣಿಗಳೂ ಉಂಟು. ಒಬ್ಬಿಬ್ಬರು ಕೋಟ್ಯಾಧೀಶರೂ ನೂರಾರು ಜನ ಲಕ್ಷಾಧೀಶರೂ ಉಂಟು. ಸಾಮಾನ್ಯವಾಗಿ ಅಲ್ಲಿನ ವ್ಯಾಪಾರಿಗಳೆಲ್ಲ ಶ್ರೀಮಂತರೇ. ಅಲ್ಲಿ ನಡೆಯುವುದೆಲ್ಲ ಕಳ್ಳಸಂತೆಯೇ....ಇತ್ಯಾದಿ.

"ಅಂದರೆ? ಒಳ್ಳೆಯವರು ಇಲ್ಲವೇ ಇಲ್ಲವೇನಯ್ಯ ಅಲ್ಲಿ?" ಎಂದು ಸ್ವಾಮಿಗಳು ಪ್ರಶ್ನಿಸಿದರು.

"ಒಳ್ಳೆಯದು ಅಂದರೇನು ಸ್ವಾಮಿಜಿ?" ಎಂದು ಆತ ಮರುಪ್ರಶ್ನೆ ಹಾಕಿದ. ಸ್ವಾಮಿಗಳು ನಕ್ಕು—

"ಸರಿ, ಸರಿ. ಬಡವರೆಂಬವರೇ ಇಲ್ಲವೇ ಅಲ್ಲಿ?" ಎಂದು ಕೇಳಿದರು.

"ಇದ್ದಾರೆ. ಅವರೆಲ್ಲಾ ಕೂಲಿಕಾರರು."

"ಊರಿನ ಮುಖಂಡರಾರು?"

"ತಮ್ಮಣ್ಣನವರೆಂದು ಒಬ್ಬರಿದಾರೆ, ಕಾಂಗ್ರೆಸ್ಸಿಗರು; ನಗರ ಸಭಾಧ್ಯಕ್ಷರು. ಅವರದೊಂದು ಪಾರ್ಟಿ. ಲಾಯರ್ ಮಾರುತಿಯಪ್ಪನವರದೊಂದು ಪಾರ್ಟಿ. ಕಾಳಸಂತೆಯ ಖಡೇರುದ್ರಪ್ಪನವರದೊಂದು ಪಾರ್ಟಿ. ಸೌತೇಕಾಯಿ ಗಿಡ್ಡಪ್ಪ ನವರದೊಂದು ಪಾರ್ಟಿ...."

ಸ್ವಾಮಿಗಳು ಗಾಬರಿಗೊಂಡು ಪ್ರಶ್ನಿಸಿದರು: "ಏನು ಮಾರಾಯ, ಓಣಿಗೊಂದು ಪಾರ್ಟಿಯಿದೆಯೋ ಅಲ್ಲಿ?"

"ಹಾಗೇನು ಇಲ್ಲ ಸ್ವಾಮಿಜಿ. ಇರುವ ಪಾರ್ಟಿಗಳೆಂದರೆ ಇವು ನಾಲ್ಕೇ."

"ವ್ಯಾಪಾರಿಗಳ ಪುಢಾರಿ ಯಾರು?"

"ಸೌತೇಕಾಯಿ ಗಿಡ್ಡಪ್ಪ."

"ಘನಗರ್ಜದ ಸ್ವಾಮಿಗಳ ಪ್ರಭಾವವುಂಟೇನು ಅಲ್ಲಿ?"

"ಇದೆ, ಸಾಧಾರಣ."

"ನಾವು ಅಲ್ಲಿಗೆ ಬಿಜಯಮಾಡಿಸಿದರೆ ಸಾಕು, ಅವನನ್ನು ಮೂಸಿ ನೋಡುವವರೂ ಇಲ್ಲವಾಗುತ್ತದೆ."

"ಆಗದಿರುತ್ತದೆಯೇ ಬುದ್ಧೀ? ತಾವೆಲ್ಲಿ, ಆ ಮುದಿಯನೆಲ್ಲಿ!" ಎಂದ ನಿರುದ್ಯೋಗಿ. ಆತ ಏನು ಕೆಲಸ ಮಾಡುತ್ತಿದ್ದನೆಂಬುದು ನನಗೆ ತಿಳಿಯಲಿಲ್ಲ. ಸುಲಭವಾಗಿ ಹಣ ಗಳಿಸುವುದೇ ಅವನ ಕೆಲಸವಾಗಿದ್ದರೂ ಆಗಿರಬಹುದು. ಸ್ವಾಮಿಗಳಿಗೂ ಪ್ರತಿಯೊಂದು ಊರಿನಲ್ಲೂ ಇಂಥ ನಿರುದ್ಯೋಗಿಗಳ ನೆರವು ಬೇಕಿತ್ತು. ಮೊದಲು ಅವರ ಮೂಲಕ ಸಭೆ ಸಮಾರಂಭ ಏರ್ಪಡಿಸಿಕೊಳ್ಳುವುದು, ಊರಿನವರ ಲಕ್ಷ್ಯ ಸೆಳೆದುಕೊಳ್ಳುವುದು, ಭಕ್ತರನ್ನು ದೊರಕಿಸಿಕೊಳ್ಳುವುದು! ಪಾದಗಾಣಿಕೆಗೇನು ಕೊರತೆ ಆಮೇಲೆ!

★

ಸ್ವಾಮಿಗಳ ಆಡಂಬರಕ್ಕೆ ಕೋಡಂಗಿಪುರದವರು ಒಮ್ಮೆಲೆ ಮರುಳಾದ ಹಾಗೆ ಧರ್ಮಪುರದವರೇನೂ ಮರುಳಾಗಲಿಲ್ಲ. ಅಲ್ಲಿನ ಜನ ಬಹಳ ಧೂರ್ತರಾಗಿದ್ದಂತೆ ಕಾಣಿಸಿತು.

ಮೊದಲನೆಯ ದಿನ ಯಾವುದೋ ಒಂದು ಚಿಲ್ಲರೆ ದೇವಾಲಯದಲ್ಲಿ ಸಭೆಯನ್ನೇರ್ಪಡಿಸಿದ್ದ, ನಿರುದ್ಯೋಗಿ. ಅಧ್ಯಕ್ಷತೆ ಎಂದೊಡನೆ ಧಾವಿಸಿ ಬರುವ ಸೌತೇಕಾಯಿ ಗಿಡ್ಡಪ್ಪನೇ ಅಂದಿನ ಸಭೆಗೂ ಅಧ್ಯಕ್ಷನಾಗಿದ್ದ. ಸಭೆಗೆ ಎರಡು ಮೂರು ನೂರು ಜನ ಸೇರಿದಂತಿತ್ತು. ವ್ಯಾಪಾರಿಗಳಂತೆ ಕಾಣಿಸುತ್ತಿದ್ದ ಕೆಲವರು ಬೀಡಿ ಸೇದುತ್ತಾ ದೂರ ನಿಂತುಕೊಂಡಿದ್ದರೇ ವಿನಾ ಹತ್ತಿರ ಬಂದು ಸ್ವಾಮಿಗಳ ಪರಿಚಯ ಮಾಡಿಕೊಳ್ಳಲಿಲ್ಲ. ಅವರನ್ನು ಊಟಕ್ಕೆ ಕರೆಯುವ ಮಾತಂತೂ ದೂರವೇ ಉಳಿಯಿತು. ಗಿಡ್ಡಪ್ಪನಾದರೂ ಕರೆಯುವನೇನೋ ಎಂಬ ಸಣ್ಣ ಆಸೆಯೊಂದು ಉಳಿದಿತ್ತು ಸ್ವಾಮಿಗಳಿಗೆ. ಅಧ್ಯಕ್ಷಭಾಷಣ ಕುಟ್ಟಿದ ಬಳಿಕ ಆತನೂ ಕೈ ಮುಗಿದು ಹೊರಟುಹೋದ. ಆ ರಾತ್ರಿ ನಾವು ನಿರುದ್ಯೋಗಿಯ ಮನೆಯಲ್ಲಿಯೇ ಬಿಡಾರ ಹೂಡಿ ರೊಟ್ಟಿ ಪಲ್ಯದಲ್ಲೇ ತೃಪ್ತಿಪಡಬೇಕಾಯಿತು.

"ಏನಯ್ಯ, ಹೀಗಾಗಿ ಹೋಯಿತಲ್ಲಾ. ಒಬ್ಬರೂ ಕರೆಯಲಿಲ್ಲವಲ್ಲ?" ಎಂದು ಸ್ವಾಮಿಗಳು ಅಳುಧ್ವನಿಯಲ್ಲಿ ನುಡಿಯುತ್ತಲೂ ನಿರುದ್ಯೋಗಿ ನಗುತ್ತ ಹೇಳಿದ. "ಒಂದೆರಡು ದಿನ ತಡೀರಿ ಸ್ವಾಮಿಜಿ. ನಾನೊಂದು ಸ್ಟಂಟ್ ಮಾಡುತ್ತೇನೆ. ಆಮೇಲೆ ನೀವೇ ನೋಡುವಿರಂತೆ ಎಂಥಾ ಚಮತ್ಕಾರವಾಗುತ್ತೆ! ಬೆಲ್ಲಕ್ಕೆ ನೊಣ ಮುಕುರುವಂತೆ ನಿಮ್ಮ ಸುತ್ತ ಮುಕುರುವುದು ಇದೇ ಜನ."

"ಅದೇನಯ್ಯಾ ಅಂಥ ಸ್ಟಂಟು?"

"ಈ ಊರವರ ಸ್ವಭಾವ ನಿಮಗೆ ಸರಿಯಾಗಿ ತಿಳಿಯದು ಸ್ವಾಮಿಜಿ. ಇಲ್ಲಿ ಪ್ರತಿಯೊಬ್ಬನೂ ಧನಪಿಶಾಚಿ. ಇವರಿಗೆ ಕೋಟಿ ಕೋಟಿ ಹಣ ಸಿಕ್ಕಿದರೂ ಸಮಾಧಾನವೇ ಆಗದು. ಇನ್ನೂ ಬೇಕು, ಮತ್ತೂ ಬೇಕು ಅಂತ ಹಪಾಪಿಸುತ್ತಾರೆ. ಭವಿಷ್ಯ ಕೇಳುವುದು ಅಂದರೂ ಬಹಳ ಹುಚ್ಚು ಇಲ್ಲಿಯ ಜನರಿಗೆ. ಅದಕ್ಕೂ ಅವರ ಆ ಹಣದಾಸೆಯೇ ಕಾರಣ. ಸರಿ. ಅವರ ಆಸೆಗೂ ಹುಚ್ಚಿಗೂ ತುಪ್ಪ ಹೊಯ್ಯುವ ಹಾಗೆ ನಾವು ಭವಿಷ್ಯ ಹೇಳಲು ಮೊದಲು ಮಾಡಬೇಕು. ಸ್ವಾಮಿಗಳು ಹಿಮಾಲಯದ ಬೆಟ್ಟಗಳಲ್ಲಿ ಮೂರು ವರ್ಷ ಇದ್ದು ದಿವ್ಯಶಕ್ತಿ ಗಳಿಸಿಕೊಂಡು ಬಂದಿರುವವರು, ಮನುಷ್ಯನ ಮುಖ ನೋಡಿದ ಕೂಡಲೇ ಅವನ ಜೀವನದ ಭವಿಷ್ಯವನ್ನೆಲ್ಲ ಹೇಳಬಲ್ಲವರು, ಐಶ್ವರ್ಯವನ್ನು ದಯಪಾಲಿಸಬಲ್ಲ ಸಾಮರ್ಥ್ಯವುಳ್ಳವರು – ಎಂದೆಲ್ಲಾ ಸುದ್ದಿ ಎಬ್ಬಿಸಿಬಿಟ್ಟರಾಯಿತು."

"ನಿನ್ನಂಥ ಘಾಟೀ ಇಸಮುನ್ನು ಇದುವರೆಗೂ ಕಂಡಿರಲಿಲ್ಲ ನಾವು."

"ಘಾಟಿಯಾಗದಿದ್ದರೆ ಈ ಶ್ರೀಮಂತರ ಪ್ರಪಂಚದಲ್ಲಿ ಬದುಕಲು ಸಾಧ್ಯವಾದೀತೇ ಸ್ವಾಮಿಜಿ? ರೈತರ ತಲೆ ಬೋಳಿಸಿ ಗಿರಾಕಿಗಳ ತಲೆ ಬೋಳಿಸಿ ಶ್ರೀಮಂತರಾಗುತ್ತಾರೆ ಈ ವ್ಯಾಪಾರಿಗಳು. ಇವರ ತಲೆ ಬೋಳಿಸಲೂ ಯಾರಾದರೂ ಬೇಕೇ ಬೇಕಲ್ಲ? ನನ್ನ ನಿಮ್ಮಂಥವರ ಉದ್ಯೋಗ ಅದೇ ಅಲ್ಲವೆ?" ಎಂದು ನಗುತ್ತ ನುಡಿದ ನಿರುದ್ಯೋಗಿ.

★

ಆತ ಹೇಗೆ ಸುದ್ದಿ ಹರಡಿಸಿದನೊ ಏನೊ, ಎರಡು ದಿನ ಕಳೆಯುವುದರೊಳಗಾಗಿ ಧರ್ಮಪುರದ ದೊಡ್ಡ ದೊಡ್ಡ ವರ್ತಕರೆಲ್ಲ ನಿರುದ್ಯೋಗಿಯ ಮನೆಗೆ ಎಡತಾಕತೊಡಗಿದರು. ಸ್ವಾಮಿಗಳು ಅವರನ್ನೆಲ್ಲ ಬರಮಾಡಿಕೊಂಡರಾದರೂ ಅವರ ಭವಿಷ್ಯವನ್ನು ಮಾತ್ರ ಹೇಳಲಿಲ್ಲ. "ಇಂಥ ಗದ್ದಲದಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಅದಕ್ಕೆಲ್ಲ ಪ್ರಶಾಂತವಾದ ಸ್ಥಳ ಬೇಕು, ವಿರಾಮ ಬೇಕು," ಎಂದು ಹೇಳುತ್ತಿದ್ದರು. "ಹಾಗಾದರೆ ನಮ್ಮಲ್ಲೇ ಬಂದು ಇದ್ದು ಬಿಡಿ ಬುದ್ಧಿ," ಎಂದು ಎಲ್ಲರೂ ಒತ್ತಾಯ ಮಾಡತೊಡಗಿದರು.

ಅಂದಿನಿಂದ ಸ್ವಾಮಿಗಳಿಗೆ ಆ ನಗರದಲ್ಲಿ ಶುಕ್ರದೆಸೆಗಾರಂಭವಾಯಿತು. ಅಲ್ಲಿಯೂ ಕೋಡಂಗಿಪುರದ ಘಟನೆಗಳ ಪುನರಾವೃತ್ತಿಯಾಗತೊಡಗಿತು. ಒಂದೊಂದು ದಿನ ಒಬ್ಬೊಬ್ಬರಲ್ಲಿ ಊಟ, ವಸತಿ, ಅವರಿಗೆ ಸುಳ್ಳೊಂದು

ಸೊಟ್ಟೊಂದು ಭವಿಷ್ಯ ಹೇಳುವುದು. ಅವರನ್ನು ಉಬ್ಬಿಸುವುದು. ಪಾದಗಾಣಿಕೆ ಹೊಡೆಯುವುದು, ಗಿರಣಿಯೊಡೆಯರಾದ ಸಂಗಪ್ಪಸೆಟ್ಟರೂ ಒಂದು ದಿನ ಕರೆದು ಕೊಂಡು ಹೋಗಿದ್ದರು. "ಟಾಟಾ ಬಿರ್ಲಾಗಳ ಹಾಗೆ ನೀವೂ ಜಗತ್ಪ್ರಸಿದ್ಧ ಬಂಡವಾಳಗಾರರಾಗುವಿರಿ," ಎಂದು ಅವರ 'ಭವಿಷ್ಯ ಕಥನ' ಮಾಡಿದರು ಸ್ವಾಮಿಗಳು. ಸಂತುಷ್ಟರಾದ ಸೆಟ್ಟರು ಐದುನೂರಾ ಒಂದು ರೂಪಾಯಿ ಕಾಣಿಕೆ ಅರ್ಪಿಸಿದರು!

ಮಾರನೆಯ ದಿನ ನಾವು ಖಡೇರುದ್ರಪ್ಪನವರ ಮನೆಗೆ ಹೋದೆವು. ನಗರದ ಹೊರಗೆ ವಿಸ್ತರಣದಲ್ಲಿ ಹೊಸದಾಗಿ ಕಟ್ಟಿಸಿದ ಮೂರಂತಸ್ತುಗಳ ಮನೆ. ಸ್ವಾಮಿಗಳಿಗಾಗಿ ಎರಡನೆಯ ಅಂತಸ್ತಿನ ಮೇಲಿನ ಮೂರು ಕೊಟಡಿಗಳನ್ನು ಸಜ್ಜುಗೊಳಿಸಿದ್ದ ಖಡೇರುದ್ರಪ್ಪ. "ತಮ್ಮ ಸಾಮಾನನ್ನೆಲ್ಲ ಇಲ್ಲಿಗೇ ತರಿಸಿ ಇಲ್ಲೇ ಇದ್ದುಬಿಡಿ ಬುದ್ದೀ. ಈ ಮನೆ ತಮ್ಮದೇ ಅಂತ ತಿಳಿದುಕೊಳ್ಳಿ. ಬೇರೆ ಯಾರ ಮನೆಗೂ ಹೋಗಬೇಡಿ," ಎಂದು ಆತ ಬಿನ್ನವಿಸಿಕೊಂಡ. ಸ್ವಾಮಿಗಳ ದಿವ್ಯಶಕ್ತಿಯ ಲಾಭವನ್ನೆಲ್ಲ ತಾನೊಬ್ಬನೇ ಪಡೆದು ಕೋಟ್ಯಾಧೀಶ್ವರನಾಗ ಬೇಕೆಂದು ಆತ ಲೆಕ್ಕ ಹಾಕಿದಂತಿದ್ದಿತು.

ಆ ಮನೆಯಲ್ಲಿ ಹೆಚ್ಚು ಜನರಿರಲಿಲ್ಲ. ಖಡೇರುದ್ರಪ್ಪ, ಅವನ ಹೆಂಡತಿ, ಅವನ ತಾಯಿ, ಅವರ ಸಣ್ಣ ಮೂರು ಮಕ್ಕಳು, ಇಬ್ಬರು ಆಳುಗಳು. ಅವನ ಹೆಂಡತಿಯ ವಿಧವಾ ಸೋದರಿಯೊಬ್ಬಳೂ ಅಲ್ಲಿಯೆ ನೆಲಸಿದ್ದಳು. ಅವಳ ಹೆಸರು ನೀಲಕ್ಕ. ಮೂವತ್ತು ವರ್ಷ ವಯಸ್ಸಿರಬಹುದು. ಬಹಳ ಸುಂದರಿ. ಒಂದೆರಡು ವರ್ಷಗಳ ಹಿಂದೆಯಷ್ಟೆ ಅವಳ ಗಂಡ ತೀರಿಕೊಂಡಿದ್ದನಂತೆ. ಅತ್ತೆಯ ಮನೆಯಲ್ಲಿ ಅವಳನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲವಾದ್ದರಿಂದ ಅದನ್ನು ತ್ಯಜಿಸಿ ಅಕ್ಕನ ಮನೆಗೆ ಬಂದು ಅಲ್ಲಿಯೆ ತಳವೂರಿದಳಂತೆ. ಪಾಪ, ಆಕೆಗೆ ಮಕ್ಕಳೂ ಇರಲಿಲ್ಲ.

ಅವಳನ್ನು ಬಲೆಗೆ ಬೀಳಿಸುವ ಯೋಚನೆಯಿಟ್ಟುಕೊಂಡೇ ಸ್ವಾಮಿಗಳು ಆ ಮನೆಯಲ್ಲಿ ಅಡಿಯಿರಿಸಿದ್ದರು. ತವರುಮನೆಯವರಿಂದ ಅವಳಿಗೆ ದೊರೆ ತಿದ್ದ ಇಪ್ಪತ್ತು ಮೂವತ್ತು ಸಾವಿರ ರೂಪಾಯಿ ಬೆಲೆ ಬಾಳುವ ಒಡವೆಗಳು ಅವಳ ಹತ್ತಿರವಿರುವ ಸಂಗತಿಯೂ ನಿರುದ್ಯೋಗಿಯಿಂದ ಅವರಿಗೆ ಗೊತ್ತಾಗಿತ್ತು. ಆಭರಣಗಳ ಸಮೇತ ಅವಳನ್ನು ಹಾರಿಸುವ ಹವ್ಯಾಸವಿದ್ದಿತೇನೊ ಸ್ವಾಮಿ ಗಳಿಗೆ. ನೀಲಕ್ಕ ಮಾತ್ರ ಮೂರು ನಾಲ್ಕು ದಿನ ಅವರ ದೃಷ್ಟಿಗೇಬೀಳಲಿಲ್ಲ.

ಸ್ವಾಮಿಗಳು ಚಡಪಡಿಸತೊಡಗಿದರು. ಸಾಯಂಕಾಲ ನಾವಿಬ್ಬರೇ ಗಿರಣಿಯ ರಸ್ತೆಯಲ್ಲಿ ಮೂರು ನಾಲ್ಕು ಮೈಲಿಯಷ್ಟು ದೂರ ವಾಕಿಂಗ್ ಹೋಗಿ ಬರುವಾಗಲೆಲ್ಲ ಸ್ವಾಮಿಗಳು ಕೇಳುವರು: "ಅವಳೆಲ್ಲಿ ಮಾಯವಾದಳೋ ಮರಿ? ಕಾಣುವುದೇ ಇಲ್ಲವಲ್ಲಾ?"

"ಹೌದು ಸ್ವಾಮಿಜಿ. ನಾನೂ ಕಂಡಿಲ್ಲ."

"ಅರೆ! ಅಡಿಗೆಮನೆಗೂ ಬರುವುದಿಲ್ಲವೇ ಆಕೆ?"

"ಗಂಡಸರಿರುವವರೆಗೆ ತಮ್ಮ ಕೋಣೆ ಬಿಟ್ಟು ಅತ್ತ ಸುಳಿಯುವುದಿಲ್ಲ."

"ಅದೇನೋ ಒಂದು ಆಟ ನಡೆಸಿರಬೇಕು ಅವಳು. ಇಂಥ ಹೆಂಗಸರನ್ನು ನಾವರಿಯೆವೆ? ಇನ್ನೂ ಹರಯದಲ್ಲಿಯೆ ವಿಧವೆಯಾಗಿದ್ದಾಳೆ. ಗಂಡ ಸತ್ತಂದಿನಿಂದ ಗಂಡಸರ ಸಹವಾಸವಿಲ್ಲ. ಎಷ್ಟೋ ದಿನಗಳಿಂದ ಉಪವಾಸ ವಿದ್ದವರು ಅನ್ನದ ವಾಸನೆ ಬರುತ್ತಲೂ ಧಾವಿಸಿ ಬರುವ ಹಾಗೆ ಆಕೆ ನಮ್ಮತ್ತ ಬರುವುದು ಖಂಡಿತ. ಮಹಾದೇವಿಯೂ ಹೀಗೇ ನಮ್ಮ ಕಡೆ ಹೊರಳಿದಳು. ಇವಳೂ ಹೊರಳುತ್ತಾಳೆ."

ನೀಲಕ್ಕ ಮಾತ್ರ ಸ್ವಾಮಿಗಳ ಕಡೆ ಕಣ್ಣು ಸಹ ಹೊರಳಿಸಲಿಲ್ಲ. ಆವಳದು ಬಹಳ ಧಾರ್ಮಿಕ ಪ್ರವೃತ್ತಿಯೆಂಬುದನ್ನು ಆವೇಳೆಗಾಗಲೆ ನಾನು ಕಂಡುಕೊಂಡಿದ್ದೆ. ಪೂಜಾಗೃಹದಲ್ಲಿ ಪ್ರವೇಶಿಸಿದವಳು ಎರಡು ಗಂಟೆಗಳವರೆಗೆ ಲಿಂಗದಲ್ಲಿ ಮನಸ್ಸು ತೊಡಗಿಸಿ ಕುಳಿತುಬಿಡುತ್ತಿದ್ದಳು. ಹಣೆಯ ಮೇಲೆ ಯಾವಾಗಲೂ ವಿಭೂತಿಯಿರುತ್ತಿತ್ತು. ಹಳೆಯ ಸಾಧಾರಣ ಸೀರೆಯೊಂದನ್ನುಟ್ಟುಕೊಂಡು, ಮುಖದ ತುಂಬಾ ಸೆರಗೆಳೆದುಕೊಂಡು ಯಾರನ್ನೂ ಕಣ್ಣೆತ್ತಿ ನೋಡದೆ ತನ್ನ ಕೊಟಡಿಗೆ ಹೊರಟುಹೋಗುತ್ತಿದ್ದಳು. ಆವಳ ಮುಖದಲ್ಲಿ ಅಲೌಕಿಕ ಭಾವವೊಂದು ನೆಲಸಿದ್ದುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ನೀಲಕ್ಕ ವಿರಾಗಿಣಿಯಾಗಿದ್ದುದರಲ್ಲಿ ಕೊಂಚವೂ ಸಂದೇಹವಿರಲಿಲ್ಲ.

ಅಂಥ ಸುಶೀಲ ಸ್ವಭಾವದ ಹೆಣ್ಣುಮಗಳ ಮೇಲೂ ದುಷ್ಟ ದೃಷ್ಟಿಯನ್ನಿರಿಸಿದ ಸ್ವಾಮಿಗಳ ಬಗೆಗೆ ನನಗೆ ಹೇಸಿಕೆ ಬರದಿರಲಿಲ್ಲ. ನೀಲಕ್ಕ ತಮ್ಮನ್ನು ಕಣ್ಣೆತ್ತಿ ಸಹ ನೋಡುವುದಿಲ್ಲವೆಂಬುದನ್ನು ತಿಳಿದುಕೊಂಡ ತರುವಾಯವಾದರೂ ಅವರು ಆ ದುಷ್ಟ ಆಸೆಯನ್ನು ತ್ಯಜಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ನನ್ನ ಮುಖಾಂತರವಾಗಿಯಾದರೂ ಅವಳನ್ನು ಒಲಿಸಿಕೊಳ್ಳುವ ಹೊಂಚು ಹೂಡಿ, ತಮ್ಮ ತ್ರಿವರ್ಣ ಚಿತ್ರವೊಂದನ್ನು ನನ್ನ ಹತ್ತಿರ ಕೊಟ್ಟು ಅದನ್ನು ನೀಲಕ್ಕನಿಗೆ

ಅರ್ಪಿಸಬೇಕೆಂದು ಅಪ್ಪಣೆ ಮಾಡಿದರು. ತಮ್ಮ ಚಿತ್ರವನ್ನು ನಾಲ್ಕೈದು ಸಲ ನೋಡಿದ ಮೇಲಾದರೂ ತಮ್ಮ ಬಗೆಗೆ ಅವಳಲ್ಲಿ ಮೋಹವುತ್ಪನ್ನವಾದೀತೆಂಬ ಹುಚ್ಚು ಆಸೆಯಿದ್ದಿತೇನೊ ಅವರಲ್ಲಿ! ಅವರ ಅಪ್ಪಣೆಯಂತೆ ನಾನು ಅದನ್ನೊಯ್ದು ನೀಲಕ್ಕನಿಗೆ ಕೊಟ್ಟೆ. ಆಕೆ ಅದನ್ನು ಕೈಗೆತ್ತಿಕೊಂಡು, ಅದರ ಮೇಲೆ ಒಂದು ಸಲವೂ ದೃಷ್ಟಿ ಹರಿಸದೆ, ಪರಪರನೆ ಹರಿದು ಬಿಸುಟಳು.

"ಏನಾಯಿ:ತು ಮರಿ? ನಮ್ಮ ಫೋಟೋ ನೋಡಿ ಏನೆಂದಳು ನೀಲಾ ದೇವಿ?" ಎಂದು ಕೇಳಿದರು ಸ್ವಾಮಿ.

"ಏನೂ ಅನ್ನಲಿಲ್ಲ ಸ್ವಾಮಿಜಿ."

"ಮತ್ತೆ ?"

ಅವರ ಭಾವಚಿತ್ರಕ್ಕೊದಗಿದ ಅವಸ್ಥೆಯ ವಿಚಾರವನ್ನು ನಾನು ಇದ್ದು ದಿದ್ದಂತೆ ಹೇಳಿಬಿಟ್ಟೆ. ಸ್ವಾಮಿಗಳು ಹತಾಶರಾಗಿ ಹಣೆಗೆ ಕೈಯಿಟ್ಟುಕೊಂಡು ಕು:ಳಿತರು.

ನಾಲ್ಕೈದು ನಿಮಿಷಗಳ ತರುವಾಯ ಅವರು ನಿಧಾನವಾಗಿ ಮೇಲಕ್ಕೆದ್ದು ಗೋಡೆಗಿದ್ದ ನಿಲುವುಗನ್ನಡಿಯೆದುರಿಗೆ ನಿಂತುಕೊಂಡು ತಮ್ಮ ಮುಖ, ಕುತ್ತಿಗೆ, ಎದೆ, ತೋಳು, ಹೊಟ್ಟೆ, ತೊಡೆಗಳ ಮೇಲೆಲ್ಲ ಮೆಲ್ಲನೆ ಕೈಯಾಡಿಸಿದರು.

"ಏನಾಗಿದೆ ನಮಗೆ ಮರಿ? ನಮ್ಮ ರೂಪಿನಲ್ಲೇನಾದರೂ ಬದಲಾವಣೆ ಯಾಗಿದೆಯೇ ?"

"ನನಗೇನೂ ತಿಳಿಯದು ಸ್ವಾಮೀಜಿ."

"ನಮಗೂ ಅರ್ಥವಾಗದಂತಾಗಿದೆ. ರೂಪಿಗೇನು ಧಾಡಿ. ಮೊದಲ ಗಿಂತಲೂ ಚೆನ್ನಾಗಿಯೇ ಇದೆ. ದಿನವೂ ಹಾಲು ತುಪ್ಪ ಹಣ್ಣಿನ ರಸಗಳಲ್ಲೇ ಮುಳುಗೇಳುತ್ತಿದ್ದರೆ ಮೈಗೆ ಬಣ್ಣ ಬರದಿರುತ್ತದೆಯೆ? ಈಚೆಗೆ ನಮ್ಮ ಆರೋಗ್ಯವೂ ಬಹಳ ಸುಧಾರಿಸಿದೆ. ಕೆನ್ನೆಗಳೂ ಉಬ್ಬಿಕೊಂಡಿವೆ. ಕಣ್ಣು ಗಳಲ್ಲಿ ಮದ ತುಂಬಿ ಬಂದಿದೆ. ಆದರೂ....ಆದರೂ...." ಎನ್ನುತ್ತಾ ನಿಟ್ಟು ಸಿರು ಬಿಟ್ಟರು ಸ್ವಾಮಿ.

ಒಂದು ಸಾಯಂಕಾಲ ನಾವು ವಾಕಿಂಗ್ ಹೋಗಿದ್ದಾಗ ನಿರುದ್ಯೋ ಗಿಯೂ ಜತೆಯಲ್ಲಿದ್ದ. ಸ್ವಾಮಿಗಳು ಅವನೊಡನೆ ಮಾತನಾಡುತ್ತಾ,

"ಏನು ನಗರವೋ ನಿಮ್ಮದು ನಿರುದ್ಯೋಗಿ. ನಮಗೆ ಬಲು ಬೇಜಾರು ಬಂದುಬಿಟ್ಟಿತು," ಎಂದು ಹೇಳಿದರು.

"ಯಾಕೆ ಸ್ವಾಮಿಜಿ? ಏನು ಕಡಿಮೆಯಾಗಿದೆ ನಿಮಗೆ? ನನ್ನ ಸ್ಟಂಟ್‌ನಿಂದ ಹಣವೂ ಸೂರೆಯಾಯಿತು, ಭಕ್ತರೂ ದೊರೆತರು...."

"ಭಕ್ತೆಯರು ಮಾತ್ರ ದೊರೆಯಲಿಲ್ಲ."

"ಅದಕ್ಕೆ ನಾನೇನು ಮಾಡಲಿ? ಅಂಥದನ್ನೆಲ್ಲಾ ನೀವೇ ನೋಡಿಕೊಳ್ಳಬೇಕು."

"ನಾವೇ ಏನು ನಮ್ಮ ತಲೆ ನೋಡಿಕೊಳ್ಳೋದು? ನೀವು ಇರುವುದಾದರೂ ಏತಕ್ಕಾಗಿ? ಇಷ್ಟು ಒದ್ದಾಡುತ್ತಿದ್ದೇವೆ. ಏನಾದರೂ ವ್ಯವಸ್ಥೆ ಮಾಡಬಾರದೇ?"

ನಿರುದ್ಯೋಗಿ ಒಂದು ನಿಮಿಷ ಮೌನವಾಗಿ ದಾರಿ ತುಳಿಯುತ್ತಿದ್ದ, ಅನಂತರ ಧ್ವನಿಯೆತ್ತಿ ಕೇಳಿದ: "ಏನಾದರೂ ವ್ಯವಸ್ಥೆ ಮಾಡಿದರೆ ಕಣ್ಣು ಮುಚ್ಚಿಕೊಂಡು ಬರುತ್ತೀರಿ ತಾನೆ ಅಲ್ಲಿಗೆ?"

"ಮತ್ತೇನು ಮಾಡುವುದು? ಬರಲೇಬೇಕಲ್ಲ?"

ಅಂದು ಕತ್ತಲಾಗುವವರೆಗೆ ಹೊಲವೊಂದರಲ್ಲಿ ಹರಟುತ್ತಾ ಕುಳಿತಿದ್ದು ಎಂಟು ಗಂಟೆಯ ಹೊತ್ತಿಗೆ ಎದ್ದು ಹೊರಟೆವು. ಹರಿಜನ ಕೇರಿಯ ಹತ್ತಿರ ನಡೆದುಬರುತ್ತಿದ್ದ ಹಾಗೆ ನಿರುದ್ಯೋಗಿ ನನ್ನ ಕಡೆ ತಿರುಗಿ – "ನೀವು ಮುಂದೆ ನಡೆಯಿರಿ ಮರಿದೇವರೆ. ನಾನು ಸ್ವಾಮಿಜಿ ಹಿಂದಿನಿಂದ ಬರುತ್ತೇವೆ," ಅಂದು ಹೇಳಿದ. "ಆಗಲಪ್ಪ," ಎಂದು ನುಡಿದು ನಾನು ತುಸು ದೂರ ಹೋಗಿ ನಿಂತುಕೊಂಡೆ. ಅವರು ಹರಿಜನ ಕೇರಿಯಲ್ಲಿ ಪ್ರವೇಶಿಸಿ ಕಣ್ಮರೆಯಾಗುತ್ತಲೂ ಮತ್ತೆ ಹೊರಳಿ ಬಂದು ರಸ್ತೆಯ ಬದಿಯಲ್ಲಿದ್ದ ಗಿಡವೊಂದರ ಕೆಳಗೆ ಕುಳಿತುಕೊಂಡಿದ್ದೆ. ಹೆಣ್ಣಿನ ಸಂಗಸುಖ ದೊರೆಯದೆ ಒದ್ದಾಡುತ್ತಿದ್ದ ಸ್ವಾಮಿಗಳಿಗಾಗಿ ನಿರುದ್ಯೋಗಿ, ಹರಿಜನ ಕೇರಿಯಲ್ಲಿಯೆ 'ಏನಾದರೂ ವ್ಯವಸ್ಥೆ' ಮಾಡಿದ್ದುದು ಸ್ಪಷ್ಟವಿದ್ದಿತು.

ಏಳೆಂಟು ದಿನಗಳವರೆಗೆ ಆ 'ವ್ಯವಸ್ಥೆ' ಎಡೆಬಿಡದೆ ನಡೆಯಿತು. ಧರ್ಮಪುರದಲ್ಲಿ ಪಾದಗಾಣಿಕೆಯಾಗಿ ಬಂದಿದ್ದುದೆಲ್ಲವೂ ಈ 'ವ್ಯವಸ್ಥೆ'ಯ ವ್ಯವಸ್ಥೆಗಾಗಿ ನಿರುದ್ಯೋಗಿಯ ಜೇಬು ಸೇರಿಕೊಂಡಿತು.

ಒಂದು ದಿನ ಬೆಳಗ್ಗೆ ಸ್ವಾಮಿಗಳಿಗೆ ಹಾಸುಗೆ ಬಿಟ್ಟು ಏಳಲಾಗಲಿಲ್ಲ. ನರಳುತ್ತಾ ನನ್ನನ್ನು ಕೂಗಿ ಕರೆದರು.

"ಏನಾಯಿತು ಸ್ವಾಮಿಜಿ?"

ಸ್ವಾಮಿಗಳು ತೊಡೆಗಳನ್ನು ಹಿಸುಕಿಕೊಳ್ಳುತ್ತ – "ಏನೋ ಭಯಂಕರ ನೋವು ಮರಿ. ಮೈಯೆಲ್ಲಾ ಹೊಡೆದುಕೊಳ್ಳುತ್ತಾ ಇದೆ. ಮೇಲಕ್ಕೇಳ ಲಾಗುವುದಿಲ್ಲ." ಎಂದರು.

ಖಡೇರುದ್ರಪ್ಪ ಅಂಗಡಿಗೆ ಹೊರಟಿದ್ದವರು ಒಬ್ಬರು ಡಾಕ್ಟರನ್ನು ಕಳಿಸಿ ಕೊಟ್ಟರು. ಅವರು ಬಂದು ಸ್ವಾಮಿಗಳನ್ನು ಪರೀಕ್ಷಿಸಿ ನೋಡಿ ಮುಗುಳ್ನಗೆ ನಕ್ಕು – "ನನ್ನ ಹತ್ತಿರ ನಿಜ ಹೇಳಬೇಕು ಸ್ವಾಮಿಜಿ. ನಾನು ಡಾಕ್ಟರು. ಎಷ್ಟೋ ಜನರ ಗುಟ್ಟುಗಳು ನನಗೆ ಗೊತ್ತಿರುತ್ತವೆ. ಯಾವುವೂ ಬಯಲಾಗು ವುದಿಲ್ಲ...." ಎಂದರು.

"ಏನಾದರೂ ಮಾಡಿ ಮೊದಲು ಈ ನೋವು ನಿಲ್ಲಿಸಿ ಡಾಕ್ಟರೆ. ತುಂಬ ಉಪಕಾರವಾಗುತ್ತೆ."

ಡಾಕ್ಟರ ಚಿಕಿತ್ಸೆಗಾರಂಭವಾಯಿತು. ನಾಲ್ಕೈದು ಇಂಜಕ್ಷನ್, ಸಣ್ಣ ದೊಂದು ಆಪರೇಶನ್ ಎಲ್ಲವೂ ಮುಗಿದು ಸ್ವಾಮಿಗಳು ಗುಣಹೊಂದಬೇಕಾದರೆ ಹದಿನೈದು ದಿನ ಹಿಡಿಯಿತು.

"ಆ ನಿರುದ್ಯೋಗಿಯ ಮಾತು ಕೇಳಿ ಆ ಹೊಲೆಯರ ಸಣ್ಣಿಯ ಸಾವಾಸ ಮಾಡಿ ಫಜೀತಿ ಪಟ್ಟಿದ್ದಾಯ್ತು. ಈ ಸುದ್ದಿ ಇನ್ನು ಈ ಊರಿಗೆಲ್ಲಾ ಗೊತ್ತಾಗುವುದೋ ಏನೊ. ಇಲ್ಲಿಂದ ಬೇಗ ಹೊರಡೋಣ ಮರಿ," ಎಂದರು ಸ್ವಾಮಿ.

ಅದೇ ವೇಳೆಗೆ ಕಳ್ಳೀಕಾಯಿ ನಗರದ ಹೊಟ್ಟೆಪ್ಪನಿಂದ ಒಂದು ಪತ್ರ ಬಂದಿತ್ತು. "ಶರಣಸಂಘ"ದ ವಾರ್ಷಿಕೋತ್ಸವದ ನಿಮಿತ್ತ ಸ್ವಾಮಿಗಳನ್ನು ಅಲ್ಲಿಗೆ ಬರಮಾಡಿಕೊಂಡು ಮೆರೆಸುವವನಿದ್ದ ಹೊಟ್ಟೆಪ್ಪ. "ನಾವು ಇದೇ ವಾರ ಹೊರಡುತ್ತೇವೆ. ದಿನಪತ್ರಿಕೆಗಳಲ್ಲೆಲ್ಲ ಜಾಹೀರಾತು ಕೊಟ್ಟು ಅದ್ಭುತ ಪ್ರಚಾರ ಮಾಡಿರಿ. ಮೆರವಣಿಗೆಯಲ್ಲಿ ನಗರವೆಲ್ಲಾ ಭಾಗವಹಿಸುವ ಹಾಗಾಗ ಬೇಕು. ಖರ್ಚಿನ ಯೋಚನೆಯನ್ನೇ ಇಟ್ಟುಕೊಳ್ಳಬಾರದು," ಎಂಬುದಾಗಿ ಅವನಿಗೆ ಪತ್ರ ಹೋಯಿತು. ಕಳ್ಳೀಕಾಯಿ ನಗರದಲ್ಲಿ ಒಂದು ವಾರ ಮೆರೆದ ಬಳಿಕ ಸಾಂಗಲಿ, ಕೊಲ್ಹಾಪುರ, ಪುಣೆ, ಮುಂಬಯಿಗಳಿಗೆ ಹೋಗಿ 'ಮೋಜು' ಮಾಡಬೇಕೆಂಬ ವಿಚಾರವಿತ್ತು ಸ್ವಾಮಿಗಳಿಗೆ. ಅದೇ ಸಮಯದಲ್ಲಿ 'ಕುಟ್ಟೆಪ್ಪಾ ಫಂಡ್' ಕೂಡಿಸುವ ಯೋಚನೆಯನ್ನೂ ಇಟ್ಟುಕೊಂಡಿದ್ದರು.

★

ಕಳ್ಳೀಕಾಯಿ ನಗರದಲ್ಲಿ ನಾವು ಮೊದಲು ಬಿಡಾರ ಮಾಡಿದ್ದು ವಿಶಾಲಪ್ಪನವರಲ್ಲಿ. ಹೆಸರಿಗೆ ತಕ್ಕ ಹಾಗೆ ಅವರು ವಿಶಾಲ ಮನಸ್ಕರೇ ಆಗಿದ್ದಂತೆ ಕಾಣಿಸಿತು. ಅವರ ಪತ್ನಿ ವಿಶಾಲಕಕ್ಷಮ್ಮ ಉದಾರ ಬುದ್ಧಿಯವರೂ ಸುಶಿಕ್ಷಿತರೂ ಆಗಿದ್ದರು. ಮನೆ ತುಂಬಾ ಮಕ್ಕಳು.

ಕುಟ್ರೋಳೀಶನಿಯ ಬಗೆಗೆ ವಿಶಾಲಪ್ಪನವರಿಗೂ ಅವರ ಶ್ರೀಮತಿಯವರಿಗೂ ಬಹಳ ವಿಶ್ವಾಸವಿದ್ದಂತೆ ಕಂಡುಬಂದಿತು. ನಾವು ಅಲ್ಲಿಗೆ ಹೋದ ದಿನ ರಾತ್ರಿ ಊಟ ನಡೆದಾಗ ಅವನ ವಿಚಾರ ತೆಗೆದು ದಂಪತಿಗಳಿಬ್ಬರೂ ಮುಕ್ತಕಂಠದಿಂದ ಅವನನ್ನು ಶ್ಲಾಘಿಸಿದರು. ಅರ್ಥಾತ್ -- ಸ್ವಾಮಿಗಳಿಗೆ ಅದೆಲ್ಲವೂ ಸರಿಬರಲಿಲ್ಲ.

"ನೀವೆಲ್ಲಾ ಅವನನ್ನು ಏನೆಂದು ಹೊಗಳುವಿರೋ ನಮಗೆ ತಿಳಿಯದು. ಹುಡುಗ ಬಹಳ ಉಪದ್ವ್ಯಾಪಿ," ಎಂದರು ಸ್ವಾಮಿ.

"ಹಾ! ಏನೆಂದಿರಿ?" ಎಂದು ಬೆರಗುಗೊಂಡು ಪ್ರಶ್ನಿಸಿದರು ವಿಶಾಲಪ್ಪನವರು.

"ಹುಡುಗ ಬಹಳ ನಿಷ್ಠುರ ಸ್ವಭಾವದವ. ದಾಕ್ಷಿಣ್ಯವಿಟ್ಟುಕೊಳ್ಳದೆ ಬರೆಯುತ್ತಾನೆ. ಅದಕ್ಕೇ ಕೆಲವರಿಗೆ ಅವನ ಬಗ್ಗೆ ಸಿಟ್ಟೂ ಇರಬಹುದು. ಅಂಥವರಿಗೆ ಆತ ಉಪದ್ವ್ಯಾಪಿಯೆಂದೂ ಕಾಣಿಸಬಹುದು," ಎಂದರು ವಿಶಾಲಾಕ್ಷಮ್ಮ.

"ನಮ್ಮ ಸಮಾಜದಲ್ಲಿ ಹುಟ್ಟಿ ನಮ್ಮ ಸಮಾಜವನ್ನೇ ಟೀಕೆ ಮಾಡಿದರೆ ಹ್ಯಾಗೆ ತಾಯಿಾ?" ಸ್ವಾಮಿಗಳೆಂದರು.

"ಲೇಖಕರಾದವರಿಗೆ ನಮ್ಮ ಸಮಾಜ ನಿಮ್ಮ ಸಮಾಜ ಎಂಬ ಭೇದಭಾವ ಎಲ್ಲಿ ಬಂತು ಸ್ವಾಮಿಜಿ? ಅವರಿಗೆ ಎಲ್ಲಾ ಒಂದೇ. ದೋಷವನ್ನು ಎಲ್ಲಿ ಕಂಡರೂ ಅದನ್ನೆತ್ತಿ ತೋರಿಸಲು ಅವರಿಗೆ ಅಧಿಕಾರವಿದೆ. ನಮ್ಮ ಸಮಾಜದ ದೋಷಗಳನ್ನು ಕುರಿತು ಬರೆಯಲು ಬ್ರಾಹ್ಮಣರಿಗೆ ಸಹಜವಾಗಿಯೆ ಅಂಜಿಕೆಯಿದೆ. ಜಾತೀಯತೆಯ ಆರೋಪ ಬಂದೀತು, ಹುಂಬರಾರಾದರೂ ಏನಾದರೂ ಮಾಡಿಯಾರು - ಎಂದೆಲ್ಲಾ ಅನುಮಾನಿಸುತ್ತಾರೆ. ಅಂತೆಯೆ, ಲಿಂಗಾಯತರಲ್ಲಿ ಹುಟ್ಟಿದ ಕುಟ್ರೋಳೀಶನಿಯಂಥವರೇ ಲಿಂಗಾಯತ ಸಮಾಜದ ದೋಷಗಳನ್ನು ಕುರಿತು ಬರೆಯಬೇಕಾದುದು ಅವಶ್ಯ."

ಸ್ವಾಮಿಗಳ ಮುಖದ ಮೇಲೆ ಬೆವರಹನಿಗಳು ಕಾಣಿಸಿಕೊಂಡುವು. ವಿಶಾಲಾಕ್ಷಮ್ಮನವರ ವಿಚಾರ ಅಷ್ಟು ಮುಂದುವರಿದುವುಗಳಾಗಿರಬಹುದೆಂದು ಅವರು ಭಾವಿಸಿರಲಿಲ್ಲವೇನೊ. ಲಿಂಗಾಯತರೆಂದರಾಯಿತು, ಅವರದೆಲ್ಲ ಹಿಂದುಳಿದ ವಿಚಾರಗಳೇ ಸರಿ – ಎಂಬ ತಪ್ಪು ಗ್ರಹಿಕೆ ಅವರದು. ಆ ಗ್ರಹಿಕೆಯನ್ನು ಒಂದು ನಿಮಿಷದಲ್ಲೇ ತೊಡೆದು ಹಾಕಿದ್ದರು ವಿಶಾಲಾಕ್ಷಮ್ಮ.

"ಕುಟ್ರೋಶನಿಯ ಬಗ್ಗೆ ನಿಮ್ಮಲ್ಲಿ ಒಳ್ಳೆಯ ಅಭಿಪ್ರಾಯವಿದ್ದಂತಿಲ್ಲವಲ್ಲಾ? ಏನಾದರೂ ಜಗಳವಾಗಿದೆಯೋ?" ಎಂದು ವಿಶಾಲಪ್ಪನವರು ಕೇಳಿದರು.

"ಜಗಳವೇನೂ ಇಲ್ಲ. ಆದರಾತ ಧರ್ಮಲಂಡ. ಅಂಥವರ ಸಹವಾಸ ನಮಗೆ ಸೇರುವುದಿಲ್ಲ."

"ಆತ ಧರ್ಮಲಂಡ ಎಂದು ನಿಮಗಾರು ಹೇಳಿದರು ಸ್ವಾಮಿಜಿ? ನಿಜವಾದ ಧರ್ಮವನ್ನು, ಮಾನವಧರ್ಮವನ್ನು ಆಚರಿಸಬೇಕೆಂದು ಆತ ಹೇಳುತ್ತಾನೆ. ಸೋಗು ಹಾಕುವುದು, ಡಾಂಭಿಕತನ ಮಾಡುವುದು ಮಾತ್ರ ಆತನಿಗೆ ಸರಿಬರುವುದಿಲ್ಲ. ಅಂಥವರನ್ನೇ ಆತ ಟೀಕಿಸುವುದು. ಟೀಕಿಸಲೇ ಬೇಕು. ಲೇಖಕರ ಕರ್ತವ್ಯ ಅದೇ ಅಲ್ಲವೇ?" ಎಂದರು ವಿಶಾಲಾಕ್ಷಮ್ಮ.

"ನಾಳೆ ಬೆಳಿಗ್ಗೆ ಚಹಕ್ಕೆ ಬರಹೇಳಿದ್ದೇವೆ. ಸಮಕ್ಷಮ ಭೆಟ್ಟಿಯಾಗುತ್ತದೆ. ಇಬ್ಬರೂ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸುವಿರಂತೆ," ಎಂದರು ವಿಶಾಲಪ್ಪ.

"ಹಾ! ಬೆಳಿಗ್ಗೆ ಬರ್ತಾನೆಯೆ?"

ಸ್ವಾಮಿಗಳ ಚಲನವಲನಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಲಿದ್ದ ಶ್ರೀಮತಿಯವರು ಕೌತುಕದಿಂದ ಕೇಳಿದರು: "ಬಂದರೇನಾಯಿತು? ಇಷ್ಟೇಕೆ ಗಾಬರಿಯಾಗುವಿರಿ ಸ್ವಾಮಿಜಿ?"

ಸ್ವಾಮಿಗಳು ಶುಷ್ಕ ನಗೆ ಬೀರಿ, "ಹಾಗೇನಿಲ್ಲ, ಹಾಗೇನಿಲ್ಲ," ಎನ್ನುತ್ತಾ ಅವಸರದಿಂದ ಊಟ ಮುಗಿಸತೊಡಗಿದರು.

★

ಮಹಡಿಯ ಮೇಲಿನ ಕೊಟಡಿಯನ್ನು ನಮಗಾಗಿ ಬಿಟ್ಟುಕೊಡಲಾಗಿದ್ದಿತು. ಅಲ್ಲಿದ್ದ ರೇಡಿಯೋ ಹಚ್ಚಿ ಸಂಗೀತ ಕೇಳುತ್ತ ಕುಳಿತಿದ್ದರು

ಸ್ವಾಮಿಗಳು. ವಿಶಾಲಪ್ಪನವರ ಮೂರನೆಯ ಮಗ ಅಪ್ಪಾಸಾಹೇಬ ಅವರ ಹತ್ತಿರ ಕುಳಿತಿದ್ದ. ನಾನು ಹಾಸಿಗೆ ಸಿದ್ಧಗೊಳಿಸುತ್ತಲಿದ್ದೆ.

ಅಪ್ಪಾಸಾಹೇಬ ಬಿ.ಎ. ದಲ್ಲಿ ಓದುತ್ತಾನೆ. ಬಲು ಚುರುಕು ಬುದ್ಧಿಯ ಹುಡುಗ. ಅಲ್ಪಾವಧಿಯಲ್ಲಿಯೆ ನಮ್ಮ ಜಗದ್ಗುರುಗಳಿಗೂ ಅವನ ಚುರುಕುತನದ ಅನುಭವ ಬಂತು.

"ನೀವು ವಿರಕ್ತರಲ್ಲವೇ ಸ್ವಾಮಿಜಿ?" ಎಂಬುದು ಅವನ ಮೊದಲನೆಯ ಪ್ರಶ್ನೆ.

ಸ್ವಾಮಿಗಳು ರೇಡಿಯೊ ನಿಲ್ಲಿಸಿ – "ಆ? ಏನೆಂದೆ?" ಎಂದು ಕೇಳಿದರು. ಆತ ತನ್ನ ಪ್ರಶ್ನೆಯನ್ನು ಮತ್ತೆ ಪಠಿಸುತ್ತಲೂ ಅವರು ಮೆಟ್ಟಬಿದ್ದು ಕುರ್ಚಿಯ ಬೆನ್ನಿಗೊರಗಿ ಕುಳಿತುಕೊಂಡು ನುಡಿದರು:

"ಇಂಥ ಪ್ರಶ್ನೆಗಳನ್ನೆಲ್ಲ ಕೇಳಬಾರದು ಅಪ್ಪಾಸಾಹೇಬ್."

ಆತ ತುಂಟತನದಿಂದ ನಗುತ್ತ – "ಯಾಕೆ ಕೇಳಬಾರದು?" ಎಂದು ಸವಾಲು ಹಾಕಿದ.

"ನಾವು ಜಗದ್ಗುರುಗಳು, ದೊಡ್ಡವರು. ನೀನಿನ್ನೂ ಹುಡುಗ."

"ಇರಬಹುದು. ನಾಳೆ ಸಾಯುಂಕಾಲದ ಸಭೆಯಲ್ಲಿಯೆ ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳೋಣವೆಂದಿದ್ದೆ. ಹೇಗೂ ನೀವು ನಮ್ಮಲ್ಲೇ ಕ್ಯಾಂಪ್ ಹಾಕಿದ್ದೀರಿ. ಇಲ್ಲೇ ಕೇಳುತ್ತಿದ್ದೇನೆ."

"ಸಭೆಯಲ್ಲಿ ಕೇಳುವವನಿದ್ದಿಯಾ?"

"ಹೌದು. ಯಾಕೆ ಕೇಳಬಾರದು? ನಿಮ್ಮ ಬಗ್ಗೆ ನಮ್ಮೂರಲ್ಲಿ ಬಗೆ ಬಗೆಯ ಕಥೆಗಳು ಹರಡಿವೆ. ಹಿಂದೆ 'ಜನಪದ'ದಲ್ಲಿ ಬೇರೆ ನಿಮ್ಮ ವಿಷಯ ಗದ್ದಲವಾಗಿದ್ದಿತಲ್ಲ?"

"ಅದೆಲ್ಲಾ ಸುಳ್ಳು ಅಪ್ಪಾಸಾಹೇಬ್. ಪೂರಾ ಸುಳ್ಳು."

"ಸುಳ್ಳಿರಬಹುದೆಂದು ನನಗೇನೂ ಅನ್ನಿಸುವುದಿಲ್ಲ. ನೀವು ನಿಜಕ್ಕೂ ವಿರಕ್ತರಾಗಿರಬಹುದೆಂದೂ ನನಗನ್ನಿಸುವುದಿಲ್ಲ. ವಿರಕ್ತರಿಗೆ ಈ ಜರತಾರೀ ಪೇಟ, ಜರತಾರೀ ಶಾಲು, ನಾಟಕದ ರಾಜನಂಥ ಗೌನು, ರೇಶಿಮೆ ಧೋತರ, ಬೆರಳುಗಳಲ್ಲಿ ಹರಳಿನ ಉಂಗುರ ಇದೆಲ್ಲಾ ಯಾಕೆ ಬೇಕು?"

"ಅದು ನಮ್ಮ ಜರತಾರಿ ಪೀಠದ ಸಂಪ್ರದಾಯ ಕಣಪ್ಪ."

"ಅಂಥ ಸಂಪ್ರದಾಯವಿರಬಹುದೆಂದೂ ನನಗನ್ನಿಸುವುದಿಲ್ಲ. ಇಂಥ ಆಡಂಬರದಿಂದ ನಿಮ್ಮ ವಿರಕ್ತಿ ಹೆಚ್ಚುವುದುಂಟೇ ಸ್ವಾಮಿಗಳೇ?"

"ಇದೆಲ್ಲಾ ಎಂಥ ಆಡಂಬರವಯ್ಯ? ಇದರಲ್ಲೆಲ್ಲಾ ಏನಿದೆ?"

"ಸರಿ. ಈಚೆಗೆ ನೀವು ಅಲ್ಲಿ ಇಲ್ಲಿ ಭಾಷಣ ಹೊಡೆಯುತ್ತ ತಿರುಗುತ್ತಿರುವಿರಲ್ಲಾ – ಅವುಗಳ ಉದ್ದೇಶವೇನು?"

"ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವುದು, ಕರ್ನಾಟಕ ಏಕೀಕರಣಕ್ಕಾಗಿ ಜನರನ್ನು ಸಿದ್ಧಗೊಳಿಸುವುದು."

"ಜರತಾರಿ ಪೀಠಕ್ಕೆ ನಿಮ್ಮನ್ನು ಜನರು ನಿಯಮಿಸಿದ್ದು ಈ ಉದ್ದೇಶಗಳಿಗಾಗಿಯೋ ಏನು?"

"ಸಾಕು ಮಾಡು ಮಾರಾಯ. ನಮಗೆ ನಿದ್ದೆ ಬರುತ್ತಾ ಇದೆ," ಎಂದು ಸ್ವಾಮಿಗಳು ಅಪ್ಪಾಸಾಹೇಬನ ಪ್ರಶ್ನೆಗಳಿಂದ ತಪ್ಪಿಸಿಕೊಂಡು ಮಂಚವನ್ನೇರಿ ಮಲಗಿಕೊಂಡರು. ಆತ ನಗುನಗುತ್ತಾ ಕೆಳಕ್ಕಿಳಿದು ಹೋದ.

ಮಹಡಿಯ ಮೇಲೆ ನಮ್ಮಿಬ್ಬರನ್ನುಳಿದು ಇನ್ನಾರೂ ಇರಲಿಲ್ಲ. ಅದು ಹೊಸ ಸ್ಥಳವಾಗಿದ್ದುದರಿಂದ ನನಗೆ ಬೇಗ ನಿದ್ದೆ ಹತ್ತಲಿಲ್ಲ. ಸ್ವಾಮಿಗಳಿಗೂ ನಿದ್ದೆ ಬರದಂತಾಗಿತ್ತು. ಆ ಮಗ್ಗುಲಿನಿಂದ ಈ ಮಗ್ಗುಲಿಗೆ ಹೊರಳಾಡುತ್ತಿದ್ದವರು ತೀರ ಮೆಲ್ಲಗಿನ ಧ್ವನಿಯಲ್ಲಿ ನುಡಿದರು:

"ನಾವಿಲ್ಲಿಗೆ ಬಂದದ್ದು ನೆಟ್ಟಗಾಗಲಿಲ್ಲ ಮರಿ. ಈ ಹುಡುಗ ಅಪ್ಪಾಸಾಹೇಬ ನಮ್ಮ ಮರ್ಯಾದೆ ಉಳಿಸುವಂತೆ ಕಾಣಲಿಲ್ಲ. ಬೆಳಿಗ್ಗೆ ಆ ಕುಟ್ರೋಶನಿ ಬೇರೆ ವಕ್ರಿಸುತ್ತಾನೆ. ನಮ್ಮ ಗುಟ್ಟುಗಳೆಷ್ಟೋ ಗೊತ್ತಿವೆ ಅವನಿಗೆ. ಹತ್ತು ಜನರೆದುರಿಗೇ ಆ ಗುಟ್ಟು ರಟ್ಟುಮಾಡಿ ಖಿಖಿ ಅಂತ ನಗುವ ಉಲಕೋಚಿ ಆತ....ನಾಳೆ ಬೆಳಗಾಗುತ್ತಲೂ ಈ ಮನೆ ಬಿಟ್ಟು ಮಠ ಸೇರಿಕೊಂಡುಬಿಡೋಣ. ಏನಂತೀಯಾ?"

"ಕುಟ್ರೋಶನಿಗೆ ಹೆದರಿ ಸ್ವಾಮಿಗಳು ಓಡಿಹೋದರು ಅಂತ ಅಂದುಕೊಂಡಾರು."

"ಅಂದರೆ ಅಂದುಕೊಳ್ಳಲಿ. ಈಗಾಗಲೆ ನಮ್ಮ ಬಗ್ಗೆ ನೂರಾರು ರೀತಿ ಅಂದುಕೊಳ್ಳುತ್ತಾರೆ, ಇದು ನೂರಾ ಒಂದನೇದು."

ಬೆಳಗ್ಗೆ ಬೇಗನೆದ್ದು ಹೊರಟುಬಿಡುವುದಾಗಿ ನಿಶ್ಚಯಿಸಿಕೊಂಡಿದ್ದೆವಾದರೂ ರಾತ್ರಿ ತಡವಾಗಿ ನಿದ್ದೆ ಹೋದುದರಿಂದ ಬೇಗ ಏಳಲಾಗಲಿಲ್ಲ.

ನಾನು ಹಾಸುಗೆ ಬಿಟ್ಟೇಳಬೇಕಾದರೆ ಏಳೂವರೆಯಾಗಿದ್ದಿತು. ಏಳುತ್ತಲೂ ಮೊಟ್ಟಮೊದಲು ಕಿವಿಗೆ ಬಿದ್ದುದು ಕುಟ್ಟೋಶನಿಯ ನಗೆಯೇ!

ಹಾಸಿಗೆಯನ್ನು ಸುರುಳಿ ಸುತ್ತಿ ಗೋಡೆಗೊರಗಿಸಿಟ್ಟು ಕಿಟಕಿಯ ಹತ್ತಿರ ಹೋಗಿ ನೋಡಿದರೆ ಮನೆಯೆದುರಿನ ಉದ್ಯಾನದಲ್ಲಿ ವಿಶಾಲಪ್ಪನವರು, ವಿಶಾಲಾಕ್ಷಮ್ಮನವರು, ಕುಟ್ಟೋಶನಿ, ತರಾತುರಿ, ಹರಿಹರ ನಗುನಗುತ್ತ ಸಂಭಾಷಿಸುತ್ತಲಿದ್ದುದು ಕಾಣಿಸಿತು.

ಅವರ ನಗೆಯ ಸದ್ದು ಸ್ವಾಮಿಗಳನ್ನೂ ಬಡಿದೆಬ್ಬಿಸಿತು. ಅವರು ಕಣ್ಣುಜ್ಜಿಕೊಳ್ಳುತ್ತ ಎದ್ದು ಕುಳಿತು – "ಏನದು ಗಲಾಟೆ ಮರಿ?" ಎಂದು ಕೇಳಿದರು.

"ಎದ್ದು ಬಂದು ನೋಡಿರಿ."

ಸ್ವಾಮಿಗಳು ನೋಡಿದುದೆಷ್ಟೋ ಅಷ್ಟೆ. ಮಹಡಿಯನ್ನು ಬಿಟ್ಟು ಕೆಳಗಿಳಿಯಲೇ ಇಲ್ಲ. ಮತ್ತೆ ಮಂಚವನ್ನೇರಿ ತಲೆತುಂಬಾ ರಗ್ಗನ್ನೆಳೆದು ಮಲಗಿಕೊಂಡರು. "ನಮಗೆ ದೇಹಾಲಸ್ಯವೆಂದು ಹೇಳಿಬಿಡು ಮರಿ. ಆ ಪಟಿಂಗರೆಲ್ಲಾ ತೊಲಗಿದ ಬಳಿಕ ಎಬ್ಬಿಸು," ಎಂದು ನನಗೆ ಸೂಚಿಸಿದರು.

ಆ 'ಪಟಿಂಗರು' ಮಾತ್ರ ತೊಲಗಲಿಲ್ಲ. ಎಂಟು ಗಂಟೆಯವರೆಗೂ ಉದ್ಯಾನದಲ್ಲಿಯೆ ನಿಂತು ಹರಟುತ್ತಿದ್ದವರು ಅನಂತರ ಒಬ್ಬೊಬ್ಬರಾಗಿ ಮಹಡಿಗೆ ಬಂದರು.

"ಅಲ್ಲ! ಎಂಥ ನಿದ್ದೆ! ಅಲ್ಲ! ಇಷ್ಟೊಂದು ಮಲಗುವುದುಂಟೇ ಯಾರಾದರೂ? ಅದರಲ್ಲೂ ವಿರಕ್ತರು? ಅಲ್ಲ!" ಎಂದು ಹೇಳಿ ಪಿಸಿಪಿಸಿ ನಕ್ಕ ತರಾತುರಿ. ಮಾತಿನ ಮಧ್ಯೆ 'ಅಲ್ಲಾ' ಎನ್ನುವುದು ಅವನದೊಂದು ಚಟ.

"ನಾವು ಬಂದದ್ದು ಗೊತ್ತಾಗುತ್ತಲೂ ಗಡದ್ದಾಗಿ ನಿದ್ದೆ ಹತ್ತಿರಬಹುದು ಸ್ವಾಮಿಗಳಿಗೆ – ಅಲ್ಲಲ್ಲ – ಜಗದ್ಗುರುಗಳಿಗೆ," ಎಂದ ಕುಟ್ಟೋಶನಿ.

"ಏನಾಗಿದೆ ಸ್ವಾಮಿಗಳಿಗೆ ಮರಿದೇವರೆ?" ಎಂದು ಹರಿಹರ ಪ್ರಶ್ನಿಸಿದ.

"ಏನೋ ಮೈಯಲ್ಲಿ ಸರಿಯಿಲ್ಲ ಅಂದರು."

"ಹೀಗೋ? ಎಬ್ಬಿಸಿರಿ ಹಾಗಾದರೆ. ನನಗೆ ಅಷ್ಟಿಷ್ಟು ವೈದ್ಯಕವೂ ಬರುತ್ತದೆ. ಏನಾಗಿದೆಯೋ ನೋಡುತ್ತೇನೆ," ಎನ್ನುತ್ತ ಹರಿಹರ ಮಂಚದ ಸಮೀಪಕ್ಕೆ ಹೋದ.

ಆ ವೇಳೆಗೆ ಮಹಡಿಗೆ ಬಂದಿದ್ದ ಅಪ್ಪಾಸಾಹೇಬ ತಾನೇ ಮುಂದುವರಿದು

ಸ್ವಾಮಿಗಳ ಮುಖದ ಮೇಲಿನ ರಗ್ಗನ್ನು ಮೆಲ್ಲನೆ ಎಳೆದುಹಾಕಿದ. ಕೋಪಿಸಿಕೊಂಡವರಂತೆ ನಟಿಸುತ್ತ ಸ್ವಾಮಿಗಳು ಕಣ್ತೆರೆದರು.

"ನೀವೆಲ್ಲಾ ಯಾಕೆ ಗಲಾಟೆ ಮಾಡುತ್ತಿದ್ದೀರಿ ಇಲ್ಲಿಗೆ ಬಂದು ?"

ತರಾತುರಿ ಕೆನ್ನೆಗಳಲ್ಲಿಯೇ ನಗುತ್ತ ಕೈ ಮುಗಿದು ಹೇಳಿದ: "ಗಲಾಟೆ ಎಲ್ಲಿಯದು ಬುದ್ಧೀ ? ಅಲ್ಲ! ತಮ್ಮ ದರ್ಶನಕ್ಕೆ ಬಂದಿದ್ದೆವು ಬುದ್ಧೀ! ಅಲ್ಲ...."

"ಆ ಅಲ್ಲಾನೇ ಕಾಪಾಡಬೇಕು ನಮ್ಮನ್ನು ನಿಮ್ಮಂಥವರಿಂದ. ಜನಜಾಗೃತಿ ಮಾಡಲು ಊರೂರು ಅಲೆದು ಆಯಾಸವಾಗಿ ಅಸ್ವಾಸ್ಥ್ಯವಾಗಿದೆ. ಒಂದೆರಡು ದಿನ ವಿಶ್ರಾಂತಿ ತೆಗೆದುಕೊಳ್ಳೋಣವೆಂದರೆ...."

"ಅಗತ್ಯವಾಗಿ ವಿಶ್ರಾಂತಿ ತೆಗೆದುಕೊಳ್ಳಿ ಸ್ವಾಮಿಜಿ. ಆದರಿದು ಅದಕ್ಕೆ ತಕ್ಕ ಸ್ಥಳವಲ್ಲ. ಗಂಗಾಧರಶಾಸ್ತ್ರಿಯ ಮನೆಯಲ್ಲೇ ಪೂರ್ಣ ವಿಶ್ರಾಂತಿ ಸಿಕ್ಕಬಹುದು. ಆ ಲಲಿತಾ ನಿಮ್ಮನ್ನು ಕರೆಯುತ್ತಿದಾಳೆ...." ಎಂದ ಕುಟ್ಟೋಶನಿ. ಆತನಿನ್ನೂ ಮಾತು ಮುಗಿಸಿರಲಿಲ್ಲ. ಅಷ್ಟರೊಳಗಾಗಿ ಎಲ್ಲರೂ ಖೊ ಖೊ ಖ್ಖೊ ಎಂದು ನಗತೊಡಗಿದರು.

ಅಷ್ಟರಲ್ಲಿ ವಿಶಾಲಾಕ್ಷಮ್ಮ ಮೆಟ್ಟಿಲುಗಳನ್ನೇರಿ ಬಂದು – "ನೀವೆಲ್ಲರೂ ಕೆಳಗೆ ಬನ್ನಿ. ಅವರನ್ನು ಪೀಡಿಸಬೇಡಿರಿ," ಎಂದರು.

"ಬೇಡ ತಾಯಿೞ. ನಾವೇ ಹೊರಡುತ್ತೇವೆ. ಒಂದು ಕ್ಷಣವೂ ಇಲ್ಲಿ ಇರುವುದಿಲ್ಲ," ಎಂದು ಉತ್ತೇಜಿತರಾಗಿ ನುಡಿದು ಸ್ವಾಮಿಗಳು ನನ್ನ ಕಡೆ ತಿರುಗಿ ಹೇಳಿದರು: "ಹಾಸಿಗೆ ಕಟ್ಟು ಮರಿ. ಡ್ರೈವರನ್ನು ಕೂಗಿ ಕಾರು ಸಿದ್ಧಗೊಳಿಸಲು ಹೇಳು. ಈ ಮನೆಗೆ ನಾವು ಬಂದದ್ದು ಮಹಾ ಮೂರ್ಖತನವಾಯಿತು."

ಅದುವರೆಗೆ ಗಾಂಭೀರ್ಯದಿಂದಿದ್ದ ವಿಶಾಲಾಕ್ಷಮ್ಮನವರಿಗೂ ಸ್ವಾಮಿಗಳ ಈ ಮಾತಿನಿಂದ ಕೊಂಚ ಕೋಪ ಬಂದಂತೆ ಕಾಣಿಸಿತು. ಅವರು ಏರಿಸಿದ ಧ್ವನಿಯಲ್ಲಿ ಹೇಳಿದರು: "ನಿಮ್ಮನ್ನು ಮನೆಗೆ ಸೇರಿಸಿದ್ದೂ ಮಹಾ ಮೂರ್ಖತನವಾಯಿತು ನಮ್ಮದು. ನೀವು ಇಂಥವರೆಂಬುದು ನಿನ್ನೆಯೇ ನಮಗೆ ಗೊತ್ತಾಗಿದ್ದರೆ ಗೇಟಿನಲ್ಲಿ ಕಾಲು ಹಾಕಗೊಡುತ್ತಿರಲಿಲ್ಲ."

"ಈ ಪಟಿಂಗರ ಮಾತುಗಳನ್ನೆಲ್ಲಾ ನಂಬುವಿರೇನು ನೀವು ?"

"ಪಟಿಂಗರು ಗಿಟಿಂಗರು ಅಂತ ನೀವು ಹಗುರಾಗಿ ಮಾತಾಡುವುದನ್ನು ಕೇಳಿದರೂ ಸಹ ನಿಮ್ಮ ಯೋಗ್ಯತೆಯೇನೆಂಬುದು ಗೊತ್ತಾಗುತ್ತದೆ. ನಿಮ್ಮ

ಆಡಂಬರ, ಬಣ್ಣದ ಮಾತು ಕಂಡು ಆಗಲೇ ಸಂಶಯ ಬಂದಿತ್ತು ನನಗೆ. ಈಗಂತೂ ಸಂಶಯವೇ ಇಲ್ಲ. ಎಲ್ಲಾ ಮನವರಿಕೆಯಾಗಿದೆ."

ಅಲ್ಲಿಂದ ಹೊರಟವರು ನೇರವಾಗಿ ಮಠಕ್ಕೆ ಬಂದೆವು. ಕೊಂಚ ಹೊತ್ತಿನೊಳಗಾಗಿ ಶಾಸ್ತ್ರಿ, ಹೊಟ್ಟೆಪ್ಪ ಇಬ್ಬರೂ ಬಂದು ತಲೆಗೆ ಕೈಯಿಟ್ಟು ಕುಳಿತುಕೊಂಡರು.

"ಸಭೆಯ ವ್ಯವಸ್ಥೆ ಚೆನ್ನಾಗಿ ಆಗಿದೆಯೇನೋ ಹೊಟ್ಟೆಪ್ಪ?" ಸ್ವಾಮಿಗಳು ಕೇಳಿದರು.

ಆತ ಇಳಿದ ಧ್ವನಿಯಲ್ಲಿ ಹೇಳಿದ: "ಆದೇನೋ ಆಗಿದೆ. ಆದರೆ...."

"ಆದರೆ....?"

"ಸಂಘದಲ್ಲಿ ಎರಡು ಪಾರ್ಟಿಗಳಾಗಿ ಪ್ರಸಂಗ ವಿಕೋಪಕ್ಕೆ ಹೋಗಿದೆ ಸ್ವಾಮಿಜಿ."

"ಎಂಥ ವಿಕೋಪ?"

"ಕಾರ್ಯಸಮಿತಿಯ ಸದಸ್ಯರೆಲ್ಲಾ ನನಗೆ ವಿರುದ್ಧವಾಗಿದ್ದಾರೆ. ವಾರ್ಷಿಕೋತ್ಸವಕ್ಕೆ ನಿಮ್ಮನ್ನು ಕರೆಯಿಸಬಾರದೆಂದು ಮೊನ್ನೆಯೆ ನಿರ್ಣಯ ಸ್ವೀಕರಿಸಿದರು."

ಸ್ವಾಮಿಗಳು ಒಂದು ನಿಮಿಷ ಮೂಕ ಮೂರ್ತಿಯಂತೆ ಕುಳಿತಿದ್ದು, ಅನಂತರ—"ಅದೇಕೆ ಹೊಟ್ಟೆಪ್ಪ? ನಾವೇನು ಮಾಡಿರುವೆವಂತೆ ಅವರಿಗೆ?" ಎಂದು ಕೇಳಿದರು.

"ಏನು ಮಾಡಿರುವಿರೋ ಯಾರು ಬಲ್ಲರು. ಅಂತೂ ನೀವು ಬೇಡ ಅಂತ ನಿರ್ಣಯಿಸಿ ಸಾಹಿತಿಗಳೊಬ್ಬರನ್ನು ಕರೆಯಿಸಿದ್ದಾರೆ," ಎಂದು ನುಡಿದು ಹೊಟ್ಟೆಪ್ಪ ಒಬ್ಬ ಸಾಹಿತ್ಯಿಕರ ಹೆಸರು ಹೇಳಿದ.

"ಹಾಗಾದರೆ.....ಹಾಗಾದರೆ.....ಮೆರವಣಿಗೆಯಿಲ್ಲ.....ಸತ್ಕಾರವಿಲ್ಲ.....ಮಾನಪತ್ರವಿಲ್ಲ....ಏನೂ ಇಲ್ಲ....?"

"ಏನೂ ಇಲ್ಲ ಸ್ವಾಮಿಜಿ."

"ಕಳ್ಳೀಕಾಯಿನಗರದವರು ಕಡೆಗೂ ಕೈ ಕೊಟ್ಟರು ನಮಗೆ."

ಎರಡು ದಿನ ಮಠದಲ್ಲಿದ್ದು ತರುವಾಯ ನಾವು ನಿಪ್ಪಾಣಿಗೆ ಹೊರಟೆವು. ತಂಬಾಕಿನ ವ್ಯಾಪಾರದಲ್ಲಿ ಲಕ್ಷಾಧೀಶರಾದ ಕೆಲವರು ವೀರಶೈವರು ಆ ಊರಲ್ಲಿದ್ದಾರೆ. ಕುಟ್ಟಪ್ಪಾ ಫಂಡಿಗೆ ಅವರೆಲ್ಲರಿಂದ ಹಣವೆತ್ತಿದುದಾಯಿತು. ನಿಪ್ಪಾಣಿ

ಯಿಂದ ಚಿಕ್ಕೋಡಿ....ಅಲ್ಲಿಂದ ಜಮುಖಂಡಿ, ಮುಧೋಳ, ರಬಕವಿ, ಬನಹಟ್ಟಿ ಮೊದಲಾದ ಊರುಗಳಿಗೆ ಭೆಟ್ಟಿಕೊಟ್ಟು ಸಾಂಗಲಿ ಕೊಲ್ಲಾಪುರಗಳ ಮೇಲೆ ಹಾಯ್ದು ಮುಂಬಯಿಗೆ ದಯಮಾಡಿಸಿತು ಸ್ವಾಮಿಗಳ ಸವಾರಿ. ಧಾರವಾಡ ಜಿಲ್ಲೆಯ ವೀರಶೈವ ವ್ಯಾಪಾರಸ್ಥನೊಬ್ಬ ಅಲ್ಲಿ ಕಮೀಷನ್ ಏಜನ್ಸಿ ವ್ಯವಹಾರ ಸಾಗಿಸುತ್ತ ಲಕ್ಷಾಧೀಶನಾಗಿದ್ದ. ಅರ್ಥಾತ್, ಧರ್ಮಗುರುಗಳೆಂದರೆ ಅವನಿಗೆ ಬಹಳ ಭಕ್ತಿ. ತಾವಾಗಿ ಬಂದಿಳಿದ ಸ್ವಾಮಿಗಳನ್ನು ಆದರದಿಂದಲೇ ಬರಮಾಡಿ ಕೊಂಡು ತನ್ನ ಮನೆಯಲ್ಲೇ ಬಿಡಾರದ ಏರ್ಪಾಟು ಮಾಡಿಕೊಟ್ಟ. ಮುಂಬಯಿ ಯಲ್ಲಿನ ಕನ್ನಡ ವ್ಯಾಪಾರಸ್ಥರೆಲ್ಲರಿಂದ ಕುಟ್ಟಪ್ಪಾ ಫಂಡಿಗೆ ಹಣ ಕೂಡಿಸುವ ಕೆಲಸ ಸಾಗಿತು. "ಕುಟ್ಟಪ್ಪ ಅನಾಥ. ಬಹಳ ಬಡವ. ನಮ್ಮನ್ನು ನಂಬಿ ಕೊಂಡು ಇಂಗ್ಲೆಂಡಿಗೆ ಹೋಗಿದ್ದಾನೆ. ಇನ್ನೊಂದು ತಿಂಗಳೊಳಗಾಗಿ ಇಪ್ಪತ್ತು ಸಾವಿರ ಕಳಿಸಬೇಕಾಗಿದೆ," ಎಂದು ಸ್ವಾಮಿಗಳು ಹೇಳುತ್ತಲೂ ಎಂಥವರ ಹೃದಯವಾದರೂ ಕರಗುತ್ತಿತ್ತು. ಅವರಲ್ಲಿ ಅನೇಕರು 'ಏಕ ಕನ್ನಡ' ಪತ್ರಿಕೆಯ ಚಂದಾದಾರರಾಗಿದ್ದವರು, ಕುಟ್ಟಪ್ಪನವರ ಬುದ್ಧಿಶಕ್ತಿಯನ್ನು ಕಂಡು ಮೆಚ್ಚಿ ಕೊಂಡಿದ್ದವರು. ಸರಿ. ಒಂದೇ ಒಂದು ತಿಂಗಳೊಳಗಾಗಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ಹಣ ಬಂದಿತು. ಹಣ ಕೊಟ್ಟವರಿಗೆ ಸ್ವಾಮಿಗಳು ರಸೀತಿಯನ್ನು ಕೊಡುತ್ತಿರಲಿಲ್ಲ, ಅದರ ಲೆಕ್ಕವನ್ನೂ ಇಟ್ಟಿರಲಿಲ್ಲ. ನಾನೇ ನನ್ನ ನೋಟ್‌ಬುಕ್ಕಿ ನಲ್ಲಿ ಗುರುತು ಹಾಕಿಕೊಂಡಿದ್ದೆನಷ್ಟೆ.

ನಾವು ಮುಂಬಯಿಯಲ್ಲಿದ್ದಾಗಲೇ ಕುಟ್ಟಪ್ಪನವರಿಂದ ಏರ್‌ಮೇಲ್ ಪತ್ರವೊಂದು ಬಂತು. ಹಣದ ಅಡಚಣೆ ವಿಪರೀತವಾಗಿದೆಯೆಂದೂ, ತಕ್ಷಣ ಬ್ಯಾಂಕಿಗೆ ಹಣ ತುಂಬಬೇಕೆಂದೂ ಬಿನ್ನವಿಸಿಕೊಂಡಿದ್ದರು.

ಆ ಪತ್ರವನ್ನು ನೋಡಿದಂತೆ ಮಾಡಿ ಸ್ವಾಮಿಗಳು ಮುಂಬಯಿ ನಗರದಲ್ಲಿ ಮೋಜು ಮಾಡುತ್ತ ಅಲೆಯತೊಡಗಿದರು. ಅಲ್ಲಿಗೆ ಬಂದಂದಿನಿಂದ ಕಾವೀಬಟ್ಟೆ, ಜರತಾರೀ ಪೇಟಗಳನ್ನು ತೆಗೆದಿರಿಸಿ ಬಿಳಿಯ ರೇಶಿಮೆ ಅಂಗಿ, ಫಿನ್ಲೆ ಧೋತರ ಧರಿಸತೊಡಗಿದ್ದರು. ಕುಟ್ಟಪ್ಪಾ ಫಂಡಿನ ಹಣವಂತೂ ಕೈಯಲ್ಲಿತ್ತು ಸರಿ. ಯಾವ ತಾಪತ್ರಯವೂ ಇರಲಿಲ್ಲ.

ಸ್ವಾಮಿಗಳ ಇಬ್ಬರು ಸಹೋದರರೂ ಮುಂಬಯಿಗೆ ಬಂದು ಒಂದೆರಡು ದಿವಸವಿದ್ದು, ಸ್ವಾಮಿಗಳನ್ನು ಕಾಡಿಸಿ ಪೀಡಿಸಿ ಅವರ ಹತ್ತಿರವಿದ್ದ ಹಣದಲ್ಲಿ ಬಹುಭಾಗವನ್ನು ತೆಗೆದುಕೊಂಡು ಹೋದರು.

ಆಗ ಮಾತ್ರ ನನಗೆ ಬಹಳ ಗಾಬರಿಯಾಯಿತು. ಕುಟ್ಟಪ್ಪನವರಿಗೆ ಕಳುಹಿಸುವುದಕ್ಕಾಗಿ ಸಾರ್ವಜನಿಕರಿಂದ ಎತ್ತಿದ ಆ ಹಣವನ್ನು ಹಾಗೆ ಅನ್ಯರಿಗೆ ಕೊಡುವುದೆಂದರೆ! ಅಲ್ಲಿ, ಇಂಗ್ಲೆಂಡಿನಲ್ಲಿ ಕುಟ್ಟಪ್ಪ ಹಣದ ಹಾದಿ ಕಾಯುತ್ತ ಕುಳಿತಿರಬಹುದು. ಪರದೇಶದಲ್ಲಿ ಪಾಪ, ಅವರೆಷ್ಟು ತೊಂದರೆ ಪಟ್ಟುಕೊಳ್ಳುತ್ತಿರುವರೊ. ಅವರ ಪತ್ರವನ್ನು ಕಂಡೊಡನೆಯೆ ಬ್ಯಾಂಕಿಗೆ ಹಣ ಕಟ್ಟಿಬಿಟ್ಟಿದ್ದರೆ ಚೆನ್ನಾಗುತ್ತಿತ್ತು. ಆದರೆ....

"ಕುಟ್ಟಪ್ಪನವರ ಹಣವನ್ನು ಹೀಗೆ ಅವರಿವರಿಗೆ ಕೊಟ್ಟರೆ ಹ್ಯಾಗೆ ಸ್ವಾಮಿಜಿ?" ಎಂದು ನಾನು ಅಂಜುತ್ತಲೇ ಮಾತು ತೆಗೆದೆ.

"ಕುಟ್ಟಪ್ಪನವರ ಹಣ!" ಸ್ವಾಮಿಗಳು ನಗುತ್ತ ನುಡಿದರು: "ಅದನ್ನೇನು ಆತ ಗಳಿಸಿ ಇಟ್ಟಿದ್ದನೇ, ಇಲ್ಲಾ, ಅವರಪ್ಪ ಸಂಪಾದಿಸಿದ್ದನೇ?"

"ಅವರಿಗಾಗಿ ಜನ ಕೊಟ್ಟರಲ್ಲನೇ?"

ಸ್ವಾಮಿಗಳು ಕೋಪದಿಂದ ಕನಲಿ ಹೇಳಿದರು: "ಅವರಿಗಾಗಿ ಕೊಟ್ಟರಂತೆ! ಕುಟ್ಟಪ್ಪ ಅಂದರೆ ಯಾವ ದೊಡ್ಡ ಮನುಷ್ಯ ಅಂತ ಅವನಿಗಾಗಿ ಕೊಡಬೇಕು ಜನ? ನಾವು ಅಪ್ಪಣೆ ಮಾಡದಿದ್ದರೆ ಈ ಭಕ್ತರು ಗಂಟು ಬಿಚ್ಚುತ್ತಿದ್ದರೇನು? ಇಂಥ ಸಾವಿರ ಕುಟ್ಟಪ್ಪಗಳು ಹೋಗಿ ಬೊಬ್ಬೆ ಕುಟ್ಟಿದರೂ ಒಂದು ಕಾಸೂ ಹುಟ್ಟುತ್ತಿರಲಿಲ್ಲ. ದೊಡ್ಡ ಜಗದ್ಗುರುಗಳಾದ ನಾವು ಕೇಳಿದ್ದರಿಂದ ಕೊಟ್ಟರು. ಅರ್ಥಾತ್ ಅದು ನಮ್ಮದೇ ಆದಂತಾಯಿತು. ನಾವು ನಮ್ಮಿಷ್ಟ ಬಂದಂತೆ ಅದನ್ನು ವಿನಿಯೋಗಿಸಬಹುದು."

ಸ್ವಲ್ಪ ಹೊತ್ತು ಸುಮ್ಮನಿದ್ದು ಸ್ವಾಮಿಗಳು ಮತ್ತೆ ಹೇಳಿದರು: "ನನ್ನ ತಮ್ಮಂದಿರಿಗೆ ಕೊಡಬಾರದಾಗಿತ್ತು ಅಂತಲ್ಲವೇ ನೀನು ಹೇಳುವುದು? ಆ ಹಾರವರ ಹೆಣಕ್ಕೆ ಸುರಿಯುವುದರ ಬದಲು ಹೀಗೆ ನಮ್ಮವರ ಹತ್ತಿರ ಕೊಟ್ಟಿರುವುದು ಮೇಲಲ್ಲವೆ? ಈ ಜರತಾರಿ ಪೀಠ ಶಾಶ್ವತವೆಂದು ನಾವು ತಿಳಿದೇ ಇಲ್ಲ. ಖರೇಸೆಟ್ಟಿ, ಕರಲಿಂಗ, ಜಡಿಯಪ್ಪ ಮೂವರೂ ನಮ್ಮನ್ನು ಅರೆದುಕೊಂಡು ಕುಡಿಯತೊಡಗಿದ್ದಾರೆ. ಇವರೇನೂ ನಮ್ಮನ್ನು ಅಲ್ಲಿ ಹೆಚ್ಚು ದಿನ ಇರಗೊಡುವಂತೆ ತೋರುವುದಿಲ್ಲ. ನಾಳೆ ಹೇಗೋ ಏನೋ ಬಲ್ಲವರಾರು? ಅದಕ್ಕೇ ಕಷ್ಟಕಾಲದಲ್ಲಿ ಆಧಾರವಾಗಿ ಇಷ್ಟಾದರೂ ಉಳಿದಿರಲಿ ಹಣ...."

"ಆದರೆ ಪಾಪ....ಕುಟ್ಟಪ್ಪ ಅಲ್ಲಿ ತೊಂದರೆಪಟ್ಟುಕೊಳ್ಳುತ್ತಿರುವರಲ್ಲಾ?"

"ತೊಂದರೆಯೇನೂ ಇಲ್ಲದಂತೆ ಸುಖವಾಗಿ ಚೈನಿಯಿಂದ ಇರಲು

ಅವನೇನು ದೊಡ್ಡ ಸಂಸ್ಥಾನಿಕನ ಮಗನೇನು ? ಬಡವರೆಂದರೆ ಬಡವರಂತಿರ ಬೇಕು. ಇಂದು ಕಷ್ಟಪಟ್ಟರೆ ನಾಳೆ ಸುಖ ಸಿಕ್ಕೀತು."

ಒಂದೆರಡುವಾರ ಕಳೆಯುವುದರೊಳಗಾಗಿ ಕುಟ್ಟಪ್ಪನವರಿಂದ ಇನ್ನೊಂದು ಕಾಗದ ಬಂದಿತು. ಕೂಡಲೆ ಹಣದ ವ್ಯವಸ್ಥೆಯಾಗದಿದ್ದರೆ ಭಯಂಕರ ಪರಿಸ್ಥಿತಿ ಯನ್ನೆದುರಿಸಬೇಕಾಗುವುದೆಂದು ಬರೆದಿದ್ದರು. ಸ್ವಾಮಿಗಳು ಅದನ್ನೋದಿ, ಬೇಸರದ ಧ್ವನಿಯಲ್ಲಿ "ಇನ್ನೊಂದು ವಾರದಲ್ಲಿ ಬ್ಯಾಂಕಿಗೆ ಹಣ ಕಟ್ಟುವೆ ವೆಂದು ಉತ್ತರ ಹಾಕಿಬಿಡು ಮರಿ. ಏನಾದರೂ ವ್ಯವಸ್ಥೆ ಮಾಡಿದರಾಯಿತು," ಎಂದು ಹೇಳಿದರು. ಹೇಳಿದುದಷ್ಟೇ ಆಗಲಿ, ಆ ವಿಚಾರ ಅವರ ಜ್ಞಾಪಕ ದಲ್ಲೇ ಉಳಿಯಲಿಲ್ಲ. ಅವರ ಮನಸು ಫೋರಾಸ್ ರೋಡ್, ಜುಹೂಗಳಲ್ಲೇ ತೊಡಗಿಕೊಂಡಿತ್ತು.

ನಾನು ಕುಟ್ಟಪ್ಪನವರಿಗೆ ಬರೆದ ಕಾಗದದಲ್ಲಿ ಸತ್ಯಸಂಗತಿಗಳನ್ನೆಲ್ಲ ತಿಳಿಸಿದುದಲ್ಲದೆ, ಹಣಕ್ಕಾಗಿ ಸ್ವಾಮಿಗಳನ್ನೇ ಅವಲಂಬಿಸಿಕೊಂಡಿದ್ದರೆ ತೊಂದರೆ ಯಾಗುವುದೆಂದೂ, ಬೇರೆ ಕಡೆಗಳಿಂದ ನೆರವು ಪಡೆಯಲು ಪ್ರಯತ್ನಿಸುವುದೇ ಒಳ್ಳೆಯದೆಂದೂ ಸೂಚಿಸಿದೆ.

★

ಜರತಾರಿ ಪೀಠದ ವಾರ್ಷಿಕ ಜಾತ್ರೆ ಸಮೀಪಿಸಿದ್ದಿತು. ಆ ಸಮಯದಲ್ಲಿ ಸ್ವಾಮಿಗಳು ಮಠದಲ್ಲಿ ಉಪಸ್ಥಿತರಾಗಿರಲೇಬೇಕಾಗಿದ್ದುದರಿಂದ ಅಲ್ಲಿಗೆ ಹೋಗಲು ಕೊಂಚವೂ ಇಷ್ಟವಿರದಿದ್ದರೂ ಸ್ವಾಮಿಗಳು ಹೊರಡಲೇಬೇಕಾ ಯಿತು. ಆ ಬಗೆಗೆ ದಿನಪತ್ರಿಕೆಗಳಿಗೆ ವಾರ್ತೆಯನ್ನೂ ಕಳುಹಿಸಲಾಯಿತು. ಮುಂಬಯಿಯ ಇಂಗ್ಲಿಷ್ ಪತ್ರಿಕೆಗಳಲ್ಲಿ ಕೆಲಸ ಮಾಡುವ ಕನ್ನಡಿಗರಿಗೆ ದಮ್ಮಯ್ಯ ಗುಡ್ಡೆ ಹಾಕಿ ಇಂಗ್ಲಿಷ್ ದಿನಪತ್ರಿಕೆಗಳಲ್ಲೂ ತಮ್ಮ ಹೆಸರು ಅಚ್ಚಾಗುವಂತೆ ಪ್ರಯತ್ನಪಟ್ಟು ಯಶಸ್ಸನ್ನೂ ಪಡೆದರು, ಸ್ವಾಮಿಗಳು – "ನೋಡು ಮರಿ, ನನ್ನ ಬಗ್ಗೆ ಇಂಗ್ಲಿಷ್ ಪತ್ರಿಕೆಯವರೂ ಬರೆಯತೊಡಗಿದರು. ಇದುವರೆಗೆ ಅಖಿಲ ಕರ್ನಾಟಕ ಕೀರ್ತಿಯ ವ್ಯಕ್ತಿಯಾಗಿದ್ದ ನಾವು ಇದೀಗ ಅಖಿಲ ಭಾರತ ಕೀರ್ತಿಯ ವಿಭೂತಿಯಾಗುತ್ತಿದ್ದೇವೆ...." ಎಂದು ಹರ್ಷದಿಂದ ಉದ್ಗಾರ ತೆಗೆದರು.

ವಿಭೂತಿ! ಆ ಒಂದು ಕ್ಷಣ ಸ್ವಾಮಿಗಳ ಬಗೆಗೆ ನನಗೆ ಕನಿಕರವೆನ್ನಿಸಿತು. ಈ ಹುಚ್ಚು ಹೀಗೇ ಬೆಳೆದರೆ ಇನ್ನು ಕೆಲ ದಿನಗಳಲ್ಲೇ ಇವರು ಹುಚ್ಚರಾಸ್ಪತ್ರೆಗೆ ಸೇರುವ ಪ್ರಸಂಗ ಬರುವುದೆಂದೂ ಎನ್ನಿಸದಿರಲಿಲ್ಲ. ಅವರ ಅಹಂಭಾವ ಈ ಮಟ್ಟಕ್ಕೇರಲು, ಅವರು ಬಿಸುಟುವ ಕಾಸಿನಾಸೆಗಾಗಿ ಅವರನ್ನು ಹೊಗಳುವ ನಿರುದ್ಯೋಗಿ, ನರಿರಾಯ, ಗೊಬ್ಬಣ್ಣ, ಗಂಗಾಧರಶಾಸ್ತ್ರಿ ಮೊದಲಾದವರೂ ಬಹಳ ಮಟ್ಟಿಗೆ ಕಾರಣರೆಂಬ ಅಂಶವನ್ನು ನಾನು ಕಡೆಗಣಿಸುವಂತಿರಲಿಲ್ಲ.

★

ಮುಂಬಯಿಯಿಂದ ಮರಳಿ ಬರುವಾಗ ಒಂದು ರಾತ್ರಿಯ ಮಟ್ಟಿಗೆ ಕಳ್ಳೇಕಾಯಿ ನಗರದಲ್ಲಿ ಬಿಡಾರ ಹೂಡುವುದೆಂದು ಮೊದಲೇ ಗೊತ್ತಾಗಿತ್ತು. ಓರೆಕೋರೆ, ಗೊಬ್ಬೂರು, ಜರತಾರಿ ನಗರಗಳಿಗೂ ಸಹ ಆ ಸುದ್ದಿ ಹೇಗೆ ಹರಡಿದ್ದಿತೊ ಏನೊ, ನಾವು ಕಳ್ಳೇಕಾಯಿಗೆ ಬಂದಿಳಿಯುತ್ತಲೂ ಹೊಗಳು ಭಟ್ಟರ ಮತ್ತು ನಿರುದ್ಯೋಗಿಗಳ ದಂಡಿಗೆ ದಂಡೇ ನಮ್ಮನ್ನು ಸ್ವಾಗತಿಸಿತು. ಧರ್ಮಪುರದ ನಿರುದ್ಯೋಗಿಯೂ ದಯಮಾಡಿಸಿದ್ದ. ನರಿರಾಯ, ಕಾಳ ಹೃದಯಪ್ಪ, ಗೊಬ್ಬಣ್ಣ, ಗುಂಡಾಡಯ್ಯ, ಓರೆಕೋರೆ ನಗರದ ನಿರುದ್ಯೋಗಣ್ಣ ಎಲ್ಲರೂ ಬಂದಿದ್ದರು.

ಅವರೆಲ್ಲರನ್ನೂ ಅಲ್ಲಿ ಕಂಡಾಗ ಸ್ವಾಮಿಗಳಿಗೆ ಆಶ್ಚರ್ಯವಾಗದಿರಲಿಲ್ಲ. ಕಾರಿನಿಂದಿಳಿದು, ಮಠದಲ್ಲಿ ಪ್ರವೇಶಿಸುತ್ತ ಅವರು ಕೇಳಿದರು: "ಇದೇನು ಅದ್ಭುತ! ನೀವೆಲ್ಲಾ ಎಲ್ಲಿಂದ ಆಕಾಶದಿಂದ ಇಳಿದು ಬಂದಿರೋ ಏನು?"

"ಆಕಾಶದಿಂದೇಕೆ ಇಳಿಯಬೇಕು ಸ್ವಾಮಿಜಿ, ರೈಲಿನಿಂದಲೇ ಇಳಿದು ಬಂದೆವು...." ಎಂದ, ಧರ್ಮಪುರದ ನಿರುದ್ಯೋಗಿ. ಸ್ವಾಮಿಗಳು ನಕ್ಕರು. ಎಲ್ಲರಿಗೂ ನಗೆ ಬಂದಿತು.

ಅವರೆಲ್ಲರೂ ಅಷ್ಟು ಅವಸರದಿಂದ ಅಲ್ಲಿಗೆ ಧಾವಿಸಿ ಬಂದುದರ ಉದ್ದೇಶ ಸ್ವಲ್ಪ ಹೊತ್ತಿನಲ್ಲಿಯೇ ಸ್ವಾಮಿಗಳಿಗೆ ಗೊತ್ತಾಯಿತು. ನನಗೂ ಗೊತ್ತಾಯಿತು.

ಗಂಗಾಧರಶಾಸ್ತ್ರಿ ನನ್ನನ್ನು ಮಠದ ಹಿಂದಿನ ಪತ್ರಿಯ ಬನಕ್ಕೆ ಕರೆದೊಯ್ದು ಮುಂಬಯಿಯ ಸಮಾಚಾರಗಳನ್ನು ವಿಚಾರಿಸತೊಡಗಿದ.

"ಪಾದಗಾಣಿಕೆ ಬಹಳ ಬಂದಿರಬಹುದಲ್ಲಾ ಮರಿದೇವರೇ?"

ಬಂದಿರಬೇಕು. ನನಗೆ ಸರಿಯಾಗಿ ತಿಳಿಯದು."

" ಏಳೆಂಟು ಸಾವಿರವಾದರೂ ಇರಬಹುದಲ್ಲ ಈಗ?"

" ಇದ್ದರೂ ಇರಬಹುದು."

" ಸ್ವಾಮಿಗಳ ಕೈಯಲ್ಲಿ ಹಣ ಹೆಚ್ಚು ಹೊತ್ತು ಉಳಿಯುವುದಿಲ್ಲವೆಂಬುದು ಆ ಭಟ್ಟರಿಗೆಲ್ಲ ಗೊತ್ತಾಗಿಬಿಟ್ಟಿದೆ. ಮುಂಬಯಿಯಲ್ಲಿ ಹಣ ಸಿಕ್ಕಿರುತ್ತದೆ, ಇಲ್ಲಿ ಇಳಿದಾಗ ನನಗೇ ಅದನ್ನೆಲ್ಲಾ ಕೊಟ್ಟು ಬರಿಗೈಯಿಂದ ಓರೆಕೋರೆ ನಗರಕ್ಕೆ ಬಂದಾರು ಎಂಬ ದೂರಾಲೋಚನೆಯಿಂದಲೇ ಇವರೆಲ್ಲಾ ಇಲ್ಲಿಗೆ ಓಡಿಬಂದಿದ್ದಾರೆ. ಇವರಿಗೆಲ್ಲ ಸ್ವಾಮಿಗಳು ಇಷ್ಟು ಸಲಿಗೆ ಯಾಕೆ ಕೊಟ್ಟರು ವರೋ ತಿಳಿಯದು. ಹತ್ತಿಪ್ಪತ್ತು ವರ್ಷಗಳಿಂದ ಅವರ ಆತ್ಮೀಯನಾಗಿದ್ದು ಅವರು ಈ ಪೀಠಕ್ಕೆ ಬರಲು ಬಹುಮಟ್ಟಿಗೆ ಕಾರಣನಾದ ನಾನು ಎಲ್ಲೋ ಉಳಿದೆ. ಇವರಿಗೆ ಈ ಹೊಸಬರದೇ ಹುಚ್ಚು ಹಿಡಿದಿದೆ."

" ಹೊಸ ಹೆಂಡತಿ ಮನೆಗೆ ಬರುತ್ತಲೂ ಹಳೇ ಹೆಂಡತಿಯ ಬಗ್ಗೆ ಬೇಸರ ಬರುವ ಹಾಗೆ!" ಎಂದು ನಾನು ಬೇಕೆಂತಲೇ ನುಡಿದೆ. ಆದರೆ ಶಾಸ್ತ್ರಿ ಬಹಳ ಗಟ್ಟಿಗ. ಅಂಥ ಟೀಕೆಗೆಲ್ಲ ನೊಂದುಕೊಳ್ಳುವಾತನಲ್ಲ. ಆತ ಹಲ್ಲು ಕಿರಿಯುತ್ತ ಹೇಳಿದ: " ನೀವು ಹೇಳುವುದು ಬರಾಬರಿ! ನನ್ನ ಗತಿ ಹಾಗೇ ಆಗುತ್ತಾ ಇದೆ. ಈ ತೋಳಗಳೆಲ್ಲಾ ಸೇರಿ ಸ್ವಾಮಿಗಳನ್ನು ಹರಿದುಕೊಂಡು ತಿಂದು ಬಿಡುವುದು ಖಂಡಿತ. ಏನಾದರೂ ಪ್ರಯತ್ನಪಟ್ಟು ಅವರನ್ನುಳಿಸಿಕೊಳ್ಳಬೇಕು."

ಮಾರನೆಯ ದಿನ ಸ್ವಾಮಿಗಳೊಬ್ಬರನ್ನೇ ತನ್ನ ಮನೆಗೆ ಕರೆದೊಯ್ದ ಶಾಸ್ತ್ರಿ. ಅರ್ಥಾತ್ ನಾನೂ ಅವರ ಜತೆಯಲ್ಲಿದ್ದೆ.

" ಈಗ ನೆನಪು ಬಂದಿತೇ ಬಡವರದು?" ಎಂದು ನಗುತ್ತ ನುಡಿದಳು ಲಲಿತಮ್ಮ.

" ಏನು ಮಾಡುವುದು. ಬಿಡುವೇ ಇಲ್ಲ. ಆ ಕುಟ್ಟಪ್ಪನಿಗೆ ಇಪ್ಪತ್ತು ಸಾವಿರ ಕಳಿಸುವ ಹೊಣೆ ಹೊತ್ತು ಊರೂರು ತಿರುಗುತ್ತಿದ್ದೇವೆ. ಸಾಕು ಸಾಕಾಗಿ ಹೋಗಿದೆ."

" ಇಲ್ಲೇ ಏಳೆಂಟು ದಿನವಿದ್ದು ವಿಶ್ರಾಂತಿ ಪಡೆದುಕೊಂಡು ಹೋಗ ಬಹುದಲ್ಲ?" ಎಂದಳಾಕೆ.

ಸ್ವಾಮಿಗಳು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ – " ಎಲ್ಲಿಯ ವಿಶ್ರಾಂತಿ ಯಮ್ಮಾ. ಈಗಿಂದೀಗ ಮಠಕ್ಕೆ ಹೋಗಬೇಕು. ಜಾತ್ರೆಯೊಂದು ಆಗಬೇಕಲ್ಲಾ? ಅದರ ವ್ಯವಸ್ಥೆಯನ್ನೂ ನಾವೇ ಮಾಡಬೇಕು," ಎಂದರು.

“ಯಾಕೆ? ಕಾರಭಾರಿಯಿದ್ದಾನಲ್ಲ?”

“ಇದ್ದಾನೆ, ಕೂತು ಸ್ವಾಹಾ ಮಾಡುವುದಕ್ಕೆ,” ಎಂದು ಹೇಳಿ ಸ್ವಲ್ಪ ನಕ್ಕು ಸ್ವಾಮಿಗಳೆಂದರು: “ಈ ಸಲ ನೀವು ಜಾತ್ರೆಗೆ ಬರಬೇಕು ಲಲಿತಮ್ಮ; ಒಂದೆರಡು ದಿನ ಮೊದಲೇ ಬಂದು ಬಿಡಿ.”

“ನಾವೆಲ್ಲಾ ಯಾತಕ್ಕೆ ಸ್ವಾಮಿಜಿ? ನಿಮ್ಮ ಆ ಶಿಷ್ಯರ ಬಳಗವೆಲ್ಲಾ ಇದ್ದೇ ಇದೆಯಲ್ಲಾ? ಅವರನ್ನೇ ಕರೆದುಕೊಂಡು ಹೋಗಿಬಿಡಿ,” ಎಂದು ಅಣಕದ ಧ್ವನಿಯಲ್ಲಿ ಹೇಳಿದ ಶಾಸ್ತ್ರಿ.

“ಬೇರೆ ಲೇಖಕರನ್ನೂ ಪತ್ರಿಕಾಕರ್ತರನ್ನೂ ನಾವು ಮಾತನಾಡಿಸಿದರೂ ನಿನಗೆ ಅಸೂಯೆ ಶಾಸ್ತ್ರಿ. ಇಂಥ ಸ್ವಭಾವ ನಮಗೆ ಸ್ವಲ್ಪವೂ ಸೇರಿಬರುವುದಿಲ್ಲ,” ಎಂದು ಏರಿಸಿದ ಧ್ವನಿಯಲ್ಲಿ ನುಡಿದರು ಸ್ವಾಮಿಗಳು.

“ನನ್ನದು ಯಾಕೆ ಸರಿಬಂದೀತು ನಿಮಗೆ? ನಾನೆಂದರೆ ಒಂದು ಕಸಬರಿಗೆ ಕಂಡಂತೆ ಕಾಣುವೆನಲ್ಲವೇ ನಿಮ್ಮ ಕಣ್ಣಿಗೆ? ಹತ್ತು ವರ್ಷಗಳಿಂದ ನಿಮ್ಮನ್ನು ನಂಬಿಕೊಂಡು ಬಂದು ಎಷ್ಟೋ ರೀತಿಯಲ್ಲಿ ನಿಮಗೆ ಸಹಾಯ ಮಾಡಿದ ನನ್ನನ್ನು ಮರೆತು ಈ ನಿರುದ್ಯೋಗಿಗಳನ್ನೆಲ್ಲ ಕಟ್ಟಿಕೊಂಡು ಹಣವನ್ನೆಲ್ಲ ಅವರಿಗೇ ಕೊಡುತ್ತಿದ್ದೀರಿ. ಸರಿ. ಅವರೂ ನೀವೂ ನೆಮ್ಮದಿಯಿಂದ ಇರಿ. ಇನ್ನು ನನ್ನ ಅಗತ್ಯವೇನು ನಿಮಗೆ?” ಎಂದು ಬಡಬಡನೆ ನುಡಿದು ಶಾಸ್ತ್ರಿ, ಕೊಟಡಿಯಲ್ಲಿ ನಿಲ್ಲದೆ ಪ್ರೆಸ್ಸಿನ ಕಡೆ ನಡೆದುಬಿಟ್ಟ. “ತಡೆ ಶಾಸ್ತ್ರೀ, ನಿಲ್ಲು, ನಮ್ಮ ಮಾತನ್ನಾದರೂ ಕೇಳು. ಕೋಪಿಸಿಕೊಳ್ಳಬೇಡ,” ಎಂದು ಸ್ವಾಮಿಗಳು ಕೂಗಿ ಹೇಳಿದರು. ಶಾಸ್ತ್ರಿ ಮಾತ್ರ ಮುದ್ರಣಾಲಯದಿಂದ ಈಚೆಗೇ ಬರಲಿಲ್ಲ.

“ಹೀಗೆಲ್ಲಾ ಸಿಟ್ಟು ಮಾಡಿಕೊಂಡರೆ ಹ್ಯಾಗೆ ಲಲಿತಾ?” ಸ್ವಾಮಿಗಳೆಂದರು.

“ನೀವಾದರೂ ಅವರಿವರನ್ನು ಯಾಕೆ ಸೇರಿಸುತ್ತೀರಿ ಹತ್ತಿರ?” ಎಂದು ಅವಳು ಒಯ್ಯಾರದಿಂದ ಪ್ರಶ್ನಿಸಿದಳು.

“ಈಗ ನಾವು ಜಗದ್ಗುರುಗಳೆಂಬುದನ್ನು ಮರೆಯಬೇಡ ಲಲಿತಾ. ನಮ್ಮ ಸುತ್ತ ಮುತ್ತ ಕೆಲವೊಂದು ಜನ ಇರಲೇಬೇಕಾಗುತ್ತದೆ. ಪತ್ರಿಕೆಯವರಂತೂ ಅವಶ್ಯವಾಗಿ ಬೇಕು. ಇವೊತ್ತು ನಾವು ಅವರನ್ನೆಲ್ಲ ದೂರಗೊಳಿಸಿದೆವೆಂದು ಇಟ್ಟುಕೋ. ನಮ್ಮ ಗತಿಯೇನಾಗಲಿಕ್ಕಿಲ್ಲ? ಇಂದು ನಮ್ಮನ್ನು

ಹೊಗಳಿ ಅವತಾರಪುರುಷನನ್ನಾಗಿ ಮಾಡುತ್ತಿರುವ ಈ ಜನರೇ ನಾಳೆ ನಮ್ಮನ್ನು ತೆಗಳಿ ಪಾತಾಳಕ್ಕೆ ಮೆಟ್ಟುವುದು ಖಂಡಿತ. ಆ ಭಯದಿಂದಾಗಿಯೆ ನಾವು ಅವರನ್ನು ಕಟ್ಟಿಕೊಂಡಿರುವುದು. ಶಾಸ್ತ್ರಿ ಅದನ್ನು ಅರ್ಥಮಾಡಿಕೊಳ್ಳುವು ದಿಲ್ಲವಲ್ಲಾ!"

ಆ ದಿನವೆಲ್ಲಾ ಸ್ವಾಮಿಗಳಿಗೆ ಶಾಸ್ತ್ರಿಯದೇ ಚಿಂತೆಯಾಯಿತು. "ಶಾಸ್ತ್ರಿ ಯನ್ನು ನಾವು ಕಳೆದುಕೊಳ್ಳಬಾರದು ಮರಿ. ನಮ್ಮ ಪೂರ್ವೇತಿಹಾಸವೆಲ್ಲಾ ಗೊತ್ತಿದೆ ಅವನಿಗೆ–ಆತನೇನಾದರೂ ನಮ್ಮ ವಿರುದ್ಧ ಬರೆಯತೊಡಗಿದರೆ ನರಕವೇ ಗತಿ," ಎಂದರು.

ಕಳ್ಳೀಕಾಯಿ ನಗರದಿಂದ ನಾವು ಹೊರಟು ನಿಂತಾಗ ನಮ್ಮನ್ನು ಬೀಳ್ಕೊಡುವುದಕ್ಕೂ ಬರಲಿಲ್ಲ ಶಾಸ್ತ್ರಿ. ಸ್ವಾಮಿಗಳು ಮುಖ ಬಾಡಿಸಿಕೊಂಡು ಕಾರು ಹತ್ತಿದರು. ನಿರುದ್ಯೋಗಿಗಳ ತಂಡವೂ ನಮ್ಮ ಜತೆಗೆ ಕಾರಿನಲ್ಲೇ ಹೊರಟಿದ್ದಿತು. "ಹಳೆಯ ಕಾರು, ಓವರ್ ಲೋಡ್ ಆದರೆ ಎಲ್ಲಿ ಕೆಟ್ಟು ಹೋಗುವುದೋ," ಎಂಬ ಆಶಂಕೆಯಿದ್ದಿತಾದರೂ ಸ್ವಾಮಿಗಳು ಅವರಾರಿಗೂ "ಕಾರಿನಲ್ಲಿ ಬರಬೇಡಿ" ಎಂದು ಹೇಳುವಂತಿರಲಿಲ್ಲ. "ಏನಾಗುವುದೋ ಎಲ್ಲವೂ ಆಗಲಿ" ಎಂಬ ಒಂದು ಬಗೆಯ ನಿರ್ಲಕ್ಷ್ಯಭಾವದಿಂದಲೇ ಮೌನ ತಳೆದರು.

ದಾರಿಯಲ್ಲಿ ಕಾರಿನ ಎಂಜಿನು ಮೂರು ನಾಲ್ಕು ಸಲ ಕೆಲಸ ನಿಲ್ಲಿಸಿ ನಾಲ್ಕೈದು ತಾಸು ತಂಟೆ ಮಾಡಿತು. ಓರೆಕೋರೆ ನಗರಕ್ಕೆ ಇನ್ನೂ ಇಪ್ಪತ್ತು ಮೈಲಿಗಳಿರುವಾಗ ಮತ್ತೊಮ್ಮೆ ನಿಂತುಕೊಂಡಿತು. ಡ್ರೈವರು ಇಳಿದುಹೋಗಿ, ಮುಚ್ಚಳವನ್ನು ಮೇಲಕ್ಕೆತ್ತಿ ಅರ್ಧ ತಾಸಿನವರೆಗೆ ಯಂತ್ರದೊಂದಿಗೆ ಸೆಣಸಿದ ನಾದರೂ ಫಲ ದೊರೆಯಲಿಲ್ಲ.

"ಇನ್ನು ಇದಕ್ಕೆ ಹಗ್ಗ ಬಿಗಿದು ಎಳೆದೊಯ್ಯಬೇಕಾಗುವುದು ಸ್ವಾಮಿಜಿ. ಯಂತ್ರ ಪೂರಾ ಕೆಟ್ಟಿದೆ. ಗ್ಯಾರೇಜಿನಲ್ಲೇ ರಿಪೇರಿಯಾಗಬಹುದು," ಎಂದು ಆತ ಘೋಷಿಸಿದ.

ಆ ವೇಳೆಗಾಗಲೆ ಐದು ಗಂಟೆಯಾಗಿದ್ದಿತು. ಬೆಳಗ್ಗೆ ಕಳ್ಳೀಕಾಯಿ ಯಿಂದ ಹೊರಟವರಿಗೆ ಮಧ್ಯಾಹ್ನ ಊಟವೂ ದೊರೆತಿರಲಿಲ್ಲ. ನರಿರಾಯ, ಗುಂಡಾಡಯ್ಯ, ನಿರುದ್ಯೋಗಿ ಎಲ್ಲರೂ ಮೇಲುಸಿರು ಬಿಡತೊಡಗಿದ್ದರು.

ಎರಡು ಗಂಟೆಗಳ ಕಾಲ ಅಲ್ಲಿಯೆ ಕಾಯ್ದು ಬಳಿಕ ಓರೆಕೋರೆಗೆ ಹೊರ ಟಿದ್ದ ಲಾರಿಯೊಂದನ್ನು ಕಾಡಿ ಬೇಡಿ ನಿಲ್ಲಿಸಿ ಅದಕ್ಕೊಂದು ಹಗ್ಗ ಬಿಗಿದು

ಅವರ ಸಹಾಯದಿಂದ ನಮ್ಮ ಕಾರನ್ನು ನಡೆಸಿಕೊಂಡು ಹೋಗಬೇಕಾಯಿತು. ಮೋಟಾರುಕಾರನ್ನೂ ಡ್ರೈವರನನ್ನೂ ಓರೆಕೋರೆಯಲ್ಲಿಯೆ ಬಿಟ್ಟು ನಾನು, ಸ್ವಾಮಿ ರೈಲಿನ ಮೂಲಕ ಜರತಾರಿಗೆ ಹೊರಟು ಬಂದೆವು, ಗುಂಡಾಡಯ್ಯನೂ ನಮ್ಮ ಜತೆಯಲ್ಲೇ ಹೊರಟ. ನಾವು ಬರುವ ಸುದ್ದಿಯನ್ನು ತಂತಿಯ ಮೂಲಕ ಮೊದಲೇ ತಿಳಿಸಿ, ನಿಲ್ದಾಣಕ್ಕೆ ಗಾಡಿಯನ್ನು ಕಳುಹಿಸಬೇಕೆಂದು ಸೂಚನೆ ಕೊಡಲಾಗಿದ್ದಿತಾದರೂ ಅದನ್ನು ಯಾರೂ ಗಮನಿಸಿರಲಿಲ್ಲ. ಸ್ವಾಮಿಗಳಿಗೆ ಬಹಳ ಅವಮಾನವಾದಂತಾಯಿತು. ನಿರ್ವಾಹವಿಲ್ಲದೆ ಬಾಡಿಗೆ ಗಾಡಿ ಗೊತ್ತು ಮಾಡಿಕೊಂಡು ಮಠಕ್ಕೆ ಬರಬೇಕಾಯಿತು. ದಾರಿಯಲ್ಲೆಲ್ಲ ಸ್ವಾಮಿಗಳು ತಲೆಯನ್ನೇ ಮೇಲಕ್ಕೆತ್ತಲಿಲ್ಲ. ಜಗದ್ಗುರುಗಳು ಬಾಡಿಗೆ ಗಾಡಿಯಲ್ಲಿ ಬರುವುದೆಂದರೆ....!

★

ಕರಡೆಪ್ಪಸೆಟ್ಟರಿಗೆ ಕಾಹಿಲೆ ವಿಷಮಿಸಿದೆಯೆಂಬ ಸಮಾಚಾರ ನಾವು ಮಠಕ್ಕೆ ಬಂದ ದಿನವೇ ತಿಳಿದು ಬಂದಿತು. ಅಂದು ಸಾಯಂಕಾಲ ಸ್ವಾಮಿ ನಾನು ಇಬ್ಬರೂ ಅವರನ್ನು ನೋಡಲೆಂದು ಅವರ ಮನೆಗೆ ಹೋದೆವು.

"ಈಗ ಸ್ವಲ್ಪ ಸುಧಾರಿಸಿಕೊಂಡಿರುವಿರಷ್ಟೇ ಸೆಟ್ಟರೆ ?" ಸ್ವಾಮಿ ಕೇಳಿದರು.

ಆ ಪ್ರಶ್ನೆಗೆ ಸೆಟ್ಟರಿಂದ ಉತ್ತರ ದೊರೆಯಲಿಲ್ಲ. ಅವರ ತುಟಿಗಳ ಮೇಲೆ ಶುಷ್ಕ ನಗೆ ಮೂಡಿತು. "ಬಸವಾ....ಬಸವಾ...." ಎಂದು ಅವರ ನಾಲಗೆ ಪುಟುಪುಟಿಸಿದಂತೆ ಕೇಳಿತಷ್ಟೆ.

ಮಂಚದ ಕೆಳಗಡೆ, ನೆಲದ ಮೇಲೆ, ಕಣ್ಣೀರು ಸುರಿಸುತ್ತ ಕುಳಿತುಕೊಂಡಿದ್ದಳು ಮಹಾದೇವಮ್ಮ. ಅವಳು ಅಳುವುದನ್ನು ಕಂಡು ನನಗೆ ಅಚ್ಚರಿಯೆನ್ನಿಸದಿರಲಿಲ್ಲ. ಸ್ವಾಮಿಗಳಿಗೆ ಏನೆನ್ನಿಸಿತೊ ಏನೊ. "ಅಳಬೇಡಿ ಅಕ್ಕ. ಅಳುವುದಕ್ಕೇನಾಯಿತು ?" ಎಂದು ಅವರೆಂದರು.

ಮಹಾದೇವಮ್ಮ ತಲೆಯನ್ನೆತ್ತಿ ಒಂದು ಸಲ ಸ್ವಾಮಿಗಳನ್ನು ದಿಟ್ಟಿಸಿ ನೋಡಿದಳು. ಅನಂತರ ಕಂಪಿಸುವ ಕಂಠದಿಂದ ನುಡಿದಳು : "ಇನ್ನೇನುಳಿಯಿತು ಸ್ವಾಮಿಜಿ, ಇನ್ನೇನುಳಿಯಿತು ?"

ಸ್ವಾಮಿಗಳ ಮುಖ ತೇಜೋಹೀನವಾಯಿತು. "ಸಮಾಧಾನವಿರಬೇಕು ತಾಯಿ, ಧೈರ್ಯ ಬಿಡಬಾರದು...." ಎಂದು ತಡವರಿಸುತ್ತ ನುಡಿದು ಅವರು ಅಲ್ಲಿಂದ ಹೊರಟುಬಿಟ್ಟರು.

ಗಾಡಿ ಮಠದ ಕಡೆ ಓಡತೊಡಗಿದ ಬಳಿಕ ಅವರೆಂದರು: "ಮಹಾದೇವಿ ಹೀಗೇಕೆ ಮಾಡುತ್ತಿದ್ದಾಳೆ ಮರಿ? ನಮಗೆ ಅರ್ಥವೇ ಆಗಲೊಲ್ಲದು...."

"ನನಗೂ ಅರ್ಥವಾಗಲಿಲ್ಲ," ಎಂದೇನೋ ನಾನು ಹೇಳಿದೆ. ಆದರೆ ನನಗೆ ಅವಳ ಆಚರಣೆ ಸ್ವಲ್ಪ ಸ್ವಲ್ಪ ಅರ್ಥವಾಗತೊಡಗಿತ್ತು.

ಮೂರನೆಯ ದಿನ ಮಧ್ಯಾಹ್ನ ನಾನೊಬ್ಬನೇ ಸೆಟ್ಟರ ಮನೆಗೆ ಹೋದೆ. ಆಗತಾನೆ ಡಾಕ್ಟರು ಬಂದು ಸೂಜಿಮದ್ದು ಕೊಟ್ಟಿದ್ದುದರಿಂದ ಸೆಟ್ಟರಿಗೆ ಜೊಂಪು ಹತ್ತಿದ್ದಿತಂತೆ. ಮಹಾದೇವಮ್ಮ ಒಬ್ಬಳೇ ಅಡುಗೆಮನೆಯಲ್ಲಿ ಕುಳಿತು, ತನ್ನೆದೆ ಯಲ್ಲಿ ಕುದಿಯುತ್ತಿದ್ದ ಸಂಕಟವನ್ನೆಲ್ಲ ನನ್ನೆದುರಿಗೆ ತೋಡಿಕೊಂಡಳು.

ಸ್ವಾಮಿಗಳಿಗೂ ನನಗೂ ಇರುವ ಸಂಬಂಧ ನಿಮಗೆ ಗೊತ್ತಿದೆ ಮರಿದೇವರೆ. ಇನ್ನೂ ಯಾರು ಯಾರಿಗೆ ಗೊತ್ತಿದೆಯೊ ದೇವರೇ ಬಲ್ಲ. ಒಂದು ರಾತ್ರಿ ನಾನು ಮನೆಬಿಟ್ಟು ಖರೇಸೆಟ್ಟರ ಬಂಗಲೆಗೆ ಹೊರಟಾಗ ಮುಕ್ಕಣ್ಣ ನೋಡಿದನೆಂದು ಸುದ್ದಿಯಾಗಿದೆ."

"ಮುಕ್ಕಣ್ಣ ?"

"ಮಂಗಲಾದೇವಿಯವರ ಮಗ. ಅವನಿಗೆ ಸ್ವಾಮಿಗಳು ಜಗದ್ಗುರು ಗಳೆಂದರೆ ಬಹಳ ಸಿಟ್ಟು. ಪುಷ್ಪಾವತಿಗೂ ಅವನಿಗೂ ಬಹಳ ಸಲುಗೆಯಿದೆ. ಅವನಿಂದ ಆಕೆಗೂ ಆ ಸುದ್ದಿ ಗೊತ್ತಾಗಿರಬಹುದು. ನಮ್ಮವರಿಗೂ ಗೊತ್ತಾ ಗಿರಬಹುದು. ಅದರಿಂದಾಗಿಯೆ ಇವರು ಹೀಗೆ ಹೃದ್ರೋಗ ಹಚ್ಚಿಕೊಂಡು ಬಿದ್ದಿದ್ದಾರೆ. ಅಯ್ಯೋ....ನನ್ನ ಗಂಡನನ್ನು ನಾನೇ ಕೈಯಾರ ಕೊಂದಂತಾಗು ವುದಲ್ಲಾ !"

"ನೀವು ಈ ವಿಷಯವನ್ನು ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬಾರದು ಅಕ್ಕ ನವರೆ."

"ಮನಸ್ಸು....ಮನಸ್ಸು....ಮನಸ್ಸು...." ಮಹಾದೇವಮ್ಮ ಹುಚ್ಚಿಯಂತೆ ಮಾತನಾಡಿದಳು: "ಮನಸ್ಸೆಲ್ಲಾ ಒಡೆದು ಚೂರುಚೂರಾಗಿ ಹಾಳಾಗಿ ಹೋಗಿದೆ ಮರಿದೇವರೆ. ನಿಮ್ಮೆದುರಿಗೆ ನಿಜ ಹೇಳುತ್ತೇನೆ. ಇಪ್ಪತ್ತು ವರ್ಷ ಗಳವರೆಗೆ ನಾನು ನನ್ನ ಗಂಡನಿಗೆ ಮೋಸ ಮಾಡಿರಲಿಲ್ಲ. ಪತಿವ್ರತೆ....ಪೂರಾ

ಪತಿವ್ರತೆಯಾಗಿದ್ದೆ. ಆದರೆ....ಒಂದು ದುರ್ಬಲ ಗಳಿಗೆಯಲ್ಲಿ ಕಾಲು ಜಾರಿತು. ಸ್ವಾಮಿಗಳನ್ನೂ ಕೆಡಿಸಿದೆ. ನಾನೂ ಕೆಟ್ಟೆ. ಹಾಳು ಜನ್ಮ ಹೆಂಗಸಿನದು.... ನನಗೆ ಸ್ವಲ್ಪವೂ ಸುಖವಿರಲಿಲ್ಲ ಮರಿದೇವರೆ. ಇಪ್ಪತ್ತು ವರ್ಷಗಳಿಂದ ಸ್ವಲ್ಪವೂ ಸುಖವಿರಲಿಲ್ಲ. ನನ್ನ ಮನಸ್ಸು ಸುಖವನ್ನು ಬಯಸಿ ಕೆಟ್ಟಿತು....ಹಾಳಾಯಿತು.... ಅರ್ಥವಾಗುತ್ತದೆಯೇ ಮರಿದೇವರೆ?"

ಅನುಕಂಪ ತುಂಬಿದ ಸ್ವರದಲ್ಲಿ ನಾನು ಹೇಳಿದೆ: "ಅರ್ಥವಾಗುತ್ತದೆ ಅಕ್ಕ, ಪೂರಾ ಅರ್ಥವಾಗುತ್ತದೆ. ನೀವು ಕಾಲು ಜಾರಿದ್ದರಲ್ಲಿ ನಿಮ್ಮ ತಪ್ಪೇನೂ ಇಲ್ಲ."

"ಹಾ! ಹೀಗೆನ್ನುತ್ತೀರಾ? ನನ್ನ ತಪ್ಪೇನೂ ಇಲ್ಲವೆ?" ಎಂದು ನುಡಿದು ಅವಳು ಹುಚ್ಚಿಯಂತೆ ನಗತೊಡಗಿದಳು. "ತಪ್ಪು ಯಾರದು ಹಾಗಾದರೆ? ಸ್ವಾಮಿಗಳದೇ?

"ಯಾಕಿರಬಾರದು?"

"ಅವರೇನು ಮಾಡಿಯಾರು? ನಾನೇ ಅವರನ್ನು ಕೆಡಿಸಿದಂತಾಯಿತು. ಅದಕ್ಕೆ ಮೊದಲು ಅವರು ಒಳ್ಳೆಯವರಾಗಿದ್ದರು....ವಿರಕ್ತರಾಗಿದ್ದರು...."

ನಾನು ಅಣಕದ ಧ್ವನಿಯಲ್ಲಿ ಹೇಳಿದೆ: "ವಿರಕ್ತರು! ಒಳ್ಳೆ ವಿರಕ್ತರೇ!"

ಮಹಾದೇವಮ್ಮನಿಗೆ ಆಶ್ಚರ್ಯದ ಆಘಾತವಾದಂತಾಯಿತು. "ಏನು, ಹೀಗೆಲ್ಲಾ ಅನ್ನುತ್ತೀರಲ್ಲಾ, ಮರಿದೇವರೆ? ಸ್ವಾಮಿಗಳು ನಿಜವಾಗಿಯೂ ವಿರಕ್ತರಾಗಿರಲಿಲ್ಲವೆ?" ಎಂದು ಕೇಳಿದಳು.

"ಇವರೆಲ್ಲಾ ಎಂಥ ವಿರಕ್ತರಮ್ಮ! ಎಲ್ಲಾ ಸೋಗು....ಬರಿಯ ಸೋಗು," ಎಂದು ಆರಂಭಿಸಿ, ಸ್ವಾಮಿಗಳ ಪೂರ್ವೇತಿಹಾಸವನ್ನು ಸ್ವಲ್ಪದರಲ್ಲಿಯೇ ವಿವರಿಸಿದೆ.

"ಹಾ! ಹೀಗೆಲ್ಲ ಇದೆಯೆ? ನಿಮ್ಮ ಮಾತನ್ನು ನಂಬಬಹುದೋ ನಾನು?"

"ನಂಬಿದರೆ ನಂಬಬಹುದು, ಬಿಟ್ಟರೆ ಬಿಡಬಹುದು. ಸ್ವಾಮಿಗಳ ಬಗ್ಗೆ ನನಗಿಂತ ಹೆಚ್ಚಿಗೆ ನಿಮಗೆ ತಿಳಿಯಲು ಸಾಧ್ಯವೇ? ನಿಮ್ಮೆದುರಿಗೆ ಸುಳ್ಳು ಹೇಳುವುದರಿಂದ ನನಗಾಗುವ ಲಾಭವಾದರೂ ಏನು?"

ಮಹಾದೇವಮ್ಮನ ಹೃದಯ ಹಗುರಾದಂತಾಯಿತು. "ಸ್ವಾಮಿ ಕೆಡಲು ನಾನೇ ಕಾರಣಳೆಂದು ತಿಳಿದು ಕೊರಗುತ್ತಿದ್ದ ನಾನೊಬ್ಬಳು ದೊಡ್ಡ ಹುಚ್ಚಿ

ಹಾಗಾದರೆ!" ಎಂದು ಆಕೆ ಹೇಳುತ್ತಿದ್ದ ಹಾಗೆಯೆ ಅಡುಗೆ ಮನೆಯ ಬಾಗಿಲಲ್ಲಿ ಯಾರೋ ಬಂದು ನಿಂತಂತೆ ಭಾಸವಾಗಲು ಅತ್ತ ಹೊರಳಿದೆವು. ಅವರು ಬೇರೆ ಯಾರೂ ಆಗಿರದೆ ಕರಡೆಪ್ಪಸೆಟ್ಟರಾಗಿದ್ದರು. ಅಡುಗೆ ಮನೆಯಲ್ಲಿ ನಡೆದಿದ್ದ ಮಾತುಕತೆಗಳಿಂದಾಗಿ ಅವರು ಯಾವಾಗ ಎಚ್ಚರಗೊಂಡಿದ್ದರೊ, ಅಲ್ಲಿಯವರೆಗೆ ಹೇಗೆ ನಡೆದು ಬಂದರೊ, ಎಷ್ಟು ಹೊತ್ತಿನವರೆಗೆ ಬಾಗಿಲಲ್ಲಿ ನಿಂತು ಎಷ್ಟು ಮಾತು ಕೇಳಿಕೊಂಡರೊ ಏನೊ – ನಾವಿಬ್ಬರೂ ಬೆಚ್ಚಿ ಬಿದ್ದು ಮೇಲಕ್ಕೇಳುತ್ತಿದ್ದ ಹಾಗೆಯೇ, ಸೆಟ್ಟರ ದೇಹ ಹೊಸತಿಲ ಮೇಲೆ ಬಿದ್ದುಬಿಟ್ಟಿತು.

★

ಅವರನ್ನೆತ್ತಿ ಮಂಚದ ಮೇಲೆ ಮಲಗಿಸಿದುದಾಯಿತು. ಶೈತ್ಯೋಪಚಾರ ಮಾಡಿದುದಾಯಿತು, ಅಂಗಾಲುಗಳಿಗೆ ಬೂದಿ ತಿಕ್ಕಿದುದಾಯಿತು. ಎದುರು ಮನೆಯ ಮಂಗಲಾದೇವಿಯವರೂ ಧಾವಿಸಿಬಂದು ಮಹಾದೇವಮ್ಮನಿಗೆ ಸಮಾಧಾನ ಹೇಳತೊಡಗಿದರು. ಪತಿಯ ಪಾದಗಳ ಮೇಲೆ ತಲೆಯನ್ನು ಚೆಲ್ಲಿ ಬಿಕ್ಕಿಬಿಕ್ಕಿ ಅಳುತ್ತಿದ್ದಳು ಮಹಾದೇವಮ್ಮ.

ಹತ್ತು ಹದಿನೈದು ನಿಮಿಷಗಳ ತರುವಾಯ ಸೆಟ್ಟರು ಮೆಲ್ಲನೆ ಕಣ್ದೆರೆದು ಸುತ್ತಲಿದ್ದವರನ್ನೆಲ್ಲ ದಿಟ್ಟಿಸಿ ನೋಡಿದರು. ಅವರ ಮುಖದ ಮೇಲೆ ಅಪೂರ್ವ ಶಾಂತಿಯೂ ಕಣ್ಣುಗಳಲ್ಲಿ ಅದ್ಭುತ ಕಾಂತಿಯೂ ಬೆಳಗುತ್ತಿತ್ತು.

"ನಾನು ಪಾಪಿ....ನನ್ನನ್ನು ಕ್ಷಮಿಸಿರಿ...." ಎಂದು ಮತ್ತೆ ಮತ್ತೆ ಹೇಳುತ್ತ ಮಹಾದೇವಮ್ಮ ಪತಿಯ ಪಾದಗಳನ್ನು ಬಿಗಿಯಾಗಿ ಹಿಡಿದುಕೊಂಡಳು.

ಮೂಳೆಯಂತಿದ್ದ ತಮ್ಮ ಬಲಗೈಯನ್ನೆತ್ತಿ ಸೆಟ್ಟರು ತಮ್ಮ ಪತ್ನಿಯ ತಲೆಯನ್ನು ನೇವರಿಸಿದರು. "ನನ್ನಿಂದ ನಿನಗೆ ಏನೂ ಸುಖ ಸಿಗಲಿಲ್ಲ....ನಾನೇ ತಪ್ಪುಮಾಡಿದೆ....ಬಸವಾ....ಬಸವಾ...." ಎಂದು ಅವರು ತುಂಬ ಕಷ್ಟದಿಂದ ನುಡಿಯುತ್ತಿದ್ದ ಹಾಗೆ ಅವರ ಕೈ ಥಟ್ಟನೆ ಕೆಳಕ್ಕುರುಳಿತು. "ಬಸವಾ" ಎಂಬುದೇ ಅವರ ಕೊನೆಯ ಶಬ್ದವಾಯಿತು.

★

ಒಂದು ಗಂಟೆಯವರೆಗೂ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಮೂಕವಾಗಿ ರೋದಿಸುತ್ತಿದ್ದಳು ಮಹಾದೇವಮ್ಮ. ಮಂಗಲಾದೇವಿ ಎಷ್ಟು ಸಂತೈಸಿದರೂ

ಅವಳ ಅಳು ನಿಲ್ಲಲಿಲ್ಲ. ಸೆಟ್ಟರ ಶವವನ್ನು ದಿಟ್ಟಿಸುತ್ತ ನಾನು ಮೌನವಾಗಿ ಕುಳಿತುಕೊಂಡಿದ್ದೆ.

ಸೆರಗಿನಿಂದ ಕಂಬನಿಗಳನ್ನೊರಗಿಸಿಕೊಳ್ಳುತ್ತ ಮಹಾದೇವಮ್ಮ ಮುಖ ವೆತ್ತಿ ನನ್ನನ್ನು ವಿಚಿತ್ರವಾಗಿ ದಿಟ್ಟಿಸುತ್ತ ಕೇಳಿದಳು:

"ಇವರಂತೂ ನಡೆದರು. ಮುಂದೆ ನನ್ನ ಗತಿಯೇನು? ನಾನೇನು ಮಾಡಬೇಕು?"

ಒಳ್ಳೆಯ ಪ್ರಶ್ನೆಗಳೇ? ಅವುಗಳಿಗೆ ನಾನಾದರೂ ಏನೆಂದು ಉತ್ತರ ವೀಯುವುದು? ಮೌನಂ ಸರ್ವತ್ರ ಸಾಧನಂ. ಸರಿ, ಕುಳಿತ ಹಾಗೇ ಕುಳಿತಿದ್ದೆ.

"ಹೊಟ್ಟೆ ಬಟ್ಟೆಯ ಚಿಂತೆಯಿಲ್ಲ. ಇರಲು ಮನೆಯೂ ಇದೆ. ಖರ್ಚಿಗೆ ಹಣವೂ ಇದೆ. ಸಾಕಷ್ಟು ಆಸ್ತಿಯನ್ನೂ ಗಳಿಸಿಟ್ಟಿದ್ದಾರೆ. ಇನ್ನು ಮುಂದೆ ಇದರಿಂದ ಉಪಯೋಗವೇನು? ಹಿಂದಿನ ಕಾಲದಲ್ಲಿ ವಿಧವೆಯರು ಕಾಶಿಗೆ ಹೋಗಿ ವಿಶ್ವೇಶ್ವರನ ಸನ್ನಿಧಿಯಲ್ಲಿ ಜನ್ಮಸಾರ್ಥಕ ಮಾಡಿಕೊಳ್ಳುತ್ತಿದ್ದರು. ಇಂದು ನಮ್ಮಂಥವರು ಅಲ್ಲಿ ಹೋದರೆ ಸೂಳೆಯರೇ ಆಗಬೇಕಾದೀತು. ಸ್ವಾಮಿ ಗಳೆಲ್ಲಾ ಕಾಮಿಗಳಾದರು, ಮಠಗಳೆಲ್ಲಾ ಅಪವಿತ್ರವಾದುವು, ಎಲ್ಲಾ ಕಡೆಗೂ ಮೋಸಗಾರರು. ಯಾರನ್ನೂ ಮೊರೆ ಹೋಗುವಂತಿಲ್ಲ. ಇನ್ನು ಶಾಂತಿ ಸಿಗುವಂತಿಲ್ಲ...."

ಮಂಜುಲವೂ ಸ್ನೇಹಪೂರ್ಣವೂ ಆದ ಸ್ವರದಲ್ಲಿ ಮಂಗಲಾದೇವಿ ಹೇಳಿದರು: "ಸಿಗುತ್ತದೆ, ತಂಗೀ, ಸಿಗುತ್ತದೆ. ಚಿಂತೆ ಮಾಡಬೇಡ."

"ನನ್ನಂಥವಳಿಗೆ ಶಾಂತಿ ಹೇಗೆ ಸಿಗಬೇಕು ಮಂಗಲಕ್ಕಾ?" ಎನ್ನುತ್ತ ಮಹಾದೇವಮ್ಮ ಅವರನ್ನು ತಬ್ಬಿಕೊಂಡು ಹಸುಮಗುವಿನಂತೆ ಬಿಕ್ಕ ತೊಡಗಿದಳು.

★

ಯಾರಲ್ಲೂ ಯಾವ ದೋಷವನ್ನೂ ಎಣಿಸದಿರುವುದು ಮಂಗಲಾದೇವಿ ಯವರ ವೈಶಿಷ್ಟ್ಯ. ಯಾರೊಬ್ಬರ ಬಗೆಗೆ ವೈಯಕ್ತಿಕ ಟೀಕೆಗಾರಂಭವಾದಾಗ ಲೆಲ್ಲ ಅವರು ಮೌನ ತಳೆದುಬಿಡುವರು. ಅವರ ಸ್ವಭಾವಕ್ಕೆ ಅನೇಕ ಅಂಶ ಗಳಲ್ಲಿ ತೀರ ವಿರುದ್ಧವಾದುದು, ಅವರ ಮಗ ಮುಕ್ಕಣ್ಣನ ಸ್ವಭಾವ. ಅವನ ಬುದ್ಧಿ ನಾಲಗೆಗಳೆರಡೂ ತುಂಬ ಹರಿತವಾದುವು. ತನಗೆ ಸತ್ಯವೆನ್ನಿಸಿದುದನ್ನು

ಬಡಬಡನೆ ಹೇಳಿಬಿಡುವುದು ಅವನ ಸ್ವಭಾವ. “ಹಾಗೆಲ್ಲಾ ಒಮ್ಮೆಲೆ ಹರಿಹಾಯಬಾರದು ತಮ್ಮಾ. ತಾಳ್ಮೆಯಿರಬೇಕು,” ಎಂದು ಸೌಮ್ಯಸ್ವರದಲ್ಲಿ ಬೋಧಿಸುವರು ತಾಯಿ. “ತಾಳಿ....ತಾಳ್ಮೆ....ಎಲ್ಲಿಯವರೆಗೆ ತಾಳ್ಮೆ? ಎಲ್ಲಾ ಹಾಳಾಗಿ ನಾಶವಾಗಿ ಹೋಗುವವರೆಗೂ ತಾಳ್ಮೆಯಿರಬೇಕೆಂದರೆ ಅಂಥ ತಾಳ್ಮೆ ನನಗೆ ಬೇಡ,” ಎಂದು ಆತ ಉತ್ತರಿಸುವನು. “ನಿನ್ನ ಸಹನೆಗೊಂದು ಮಿತಿಯಿಲ್ಲವಮ್ಮ. ನೀನೆಲ್ಲೋ ತ್ರೇತಾಯುಗದಲ್ಲಿ ಹುಟ್ಟಬೇಕಾದವಳು ತಪ್ಪಿ ಈ ಕಲಿಯುಗದಲ್ಲಿ ಹುಟ್ಟಿರುವೆ,” ಎಂದು ಹುಸಿ ಅಣಕವಾಡುವನು.

ಸೆಟ್ಟರ ಅಂತ್ಯವಿಧಿಗಳು ಕೊನೆಗೊಂಡ ಬಳಿಕ ಮುಕ್ಕಣ್ಣನೊಂದಿಗೆ ಅವನ ಕೊಟಡಿಯಲ್ಲಿ ಕುಳಿತಿದ್ದೆ. ಏನೇನೋ ನೆನಪು ಮಾಡಿಕೊಂಡವನಂತೆ ಆತ ಹಠಾತ್ತಾಗಿ ಹೇಳಿದ: ಸೆಟ್ಟರು ಇಷ್ಟು ಬೇಗ ಸಾಯಲು ಒಂದು ರೀತಿಯಿಂದ ನಾನೇ ಕಾರಣನಾದಂತಾಯಿತು ಮರಿದೇವರೆ.”

“ನೀವು ?”

“ನಿಮಗೆ ಗೊತ್ತಿರಲಿಕ್ಕಿಲ್ಲ. ನಿಮಗೇ ಏಕೆ, ಯಾರಿಗೂ ಗೊತ್ತಿರಲಿಕ್ಕಿಲ್ಲ. ತಮ್ಮ ಹೆಂಡತಿ ವ್ಯಭಿಚಾರಣಿಯಾಗಿರಬಹುದು, ಸ್ವಾಮಿಗಳ ಪ್ರೇಯಸಿಯಾಗಿರಬಹುದು ಎಂಬ ಕಲ್ಪನೆ ಸೆಟ್ಟರ ಕನಸು ಮನಸ್ಸಿನಲ್ಲೂ ಇದ್ದಿರಲಾರದು. ನನಗೂ ಮೊದಲು ಗೊತ್ತಿರಲಿಲ್ಲ. ಒಂದು ರಾತ್ರಿ ಅಕಸ್ಮಾತ್ತಾಗಿ ಗೊತ್ತಾಯಿತು. ಈ ಡಾಂಭಿಕ ಸ್ವಾಮಿಗಳೆಂದರೆ ಮೊದಲಿನಿಂದಲೂ ನನಗೆ ಭಯಂಕರ ಸಿಟ್ಟು. ಈತ ವ್ಯಭಿಚಾರಿಯೆಂಬುದು ಸೆಟ್ಟರಿಗೆ ಗೊತ್ತಾಗಿ ಹೋದರೆ ಏನಾದರೂ ಒಳ್ಳೆಯದಾದೀತು ಎಂದುಕೊಂಡು ಹೇಳಿಬಿಟ್ಟೆ. ಪರಿಣಾಮ ಹೀಗಾದೀತೆಂದು ನನಗಾಗ ಅನ್ನಿಸಿರಲಿಲ್ಲ.”

“ಮಹಾದೇವಮ್ಮನ ಗುಟ್ಟು ನಿಮಗೆ ಹೇಗೆ ಗೊತ್ತಾಯಿತು ?”

“ಒಂದು ರಾತ್ರಿ ಒಳಗಡೆ ಸೆಕೆಯಾದ್ದರಿಂದ ಅಟ್ಟದ ಮೇಲಿನ ಬಿಸಿಲಂಗಳದಲ್ಲಿ ಮಲಗಿದ್ದೆ. ಅಕಸ್ಮಾತ್ತಾಗಿ ಎದುರು ಮನೆಯ ಬಾಗಿಲು ಕಿರ್ರೆಂದಿತು. ಇಂಥಾ ರಾತ್ರಿಯಲ್ಲಿ ಏಕಪ್ಪಾ ಬಾಗಿಲು ತೆಗೆದರು – ಎಂದುಕೊಳ್ಳುತ್ತ ನಾನು ಅತ್ತ ನೋಡುತ್ತಿದ್ದೆ. ಮಹಾದೇವಮ್ಮ ಮೆಲ್ಲನೆ ಹೊರಬಂದು ಬಾಗಿಲು ಮುಚ್ಚಿ ಬೀಗ ಹಾಕಿ ಬೀದಿಗಿಳಿದು ನಡೆದಿದ್ದರು. ಏನಿದೆಯೋ ಪರೀಕ್ಷೆ ಮಾಡಿಯೇ ಬಿಡುವುದೆಂದುಕೊಂಡು ನಾನೂ ಅಟ್ಟವಿಳಿದು ಬಂದು ಅವರನ್ನು ಹಿಂಬಾಲಿಸಿದೆ....”

" ಮುಂದಿನದೆಲ್ಲ ನಾ ಬಲ್ಲೆ ಮುಕ್ಕಣ್ಣ."

" ಓ! ಎಲ್ಲಾ ಬಲ್ಲಿರಾ ?"

" ಮತ್ತೆ! ಸ್ವಾಮಿಗಳ ಅಂತರಂಗದ ಶಿಷ್ಯನಲ್ಲವೇ ನಾನು ?"

" ಅವರು ಇಂಥವರೆಂಬುದು ಗೊತ್ತಿದ್ದರೂ ನೀವಿನ್ನೂ ಅವರ ಶಿಷ್ಯ ರಾಗಿಯೇ ಯಾಕೆ ಉಳಿದಿರೋ ನನಗಂತೂ ಹೊಳೆಯದಾಗಿದೆ."

" ಅವರು ಹೇಗಿರುವರೆಂಬುದನ್ನು ಪೂರ್ಣವಾಗಿ ಅರಿತುಕೊಳ್ಳಲೆಂದೇ ಅವರ ಶಿಷ್ಯತ್ವ ಸ್ವೀಕರಿಸಿದ್ದೇನೆ ಮುಕ್ಕಣ್ಣ. ಈ ಊರಲ್ಲಿ ಕೊನೆಗೆ ಅವರಿಗೆ ಎಂಥ ಸ್ಥಿತಿ ಬರುವುದೋ ನೋಡಬೇಕಾಗಿದೆ. ಅನಂತರ ಅವರ ಸಹವಾಸಕ್ಕೆ ಶರಣು ಹೊಡೆಯುತ್ತೇನೆ."

" ಅದನ್ನೆಲ್ಲ ತಿಳಿದುಕೊಂಡು ಏನು ಮಾಡುವಿರಿ ?" ಮುಕ್ಕಣ್ಣ ಆಶ್ಚರ್ಯ ದಿಂದ ಕೇಳಿದ.

" ಕತೆ ಬರೆಯುತ್ತೇನೆ, ಕಾದಂಬರಿ ಬರೆಯುತ್ತೇನೆ. ನನ್ನಿಂದ ಅದು ಅಶಕ್ಯವಾದರೆ ಕುಟ್ಟೋಶನಿಯಾದರೂ ಬರೆದಾರು."

" ಮುಂದೆ ಸ್ವಾಮಿಗಳೆಂದರೆ ನಿಜಕ್ಕೂ ಹೇಗಿರುವರೆಂಬುದು ಮೊದಲು ನಮ್ಮ ಜನಕ್ಕೆ ಸರಿಯಾಗಿ ತಿಳಿಯಬೇಕಾಗಿದೆ. ಆ ತಿಳಿವು ಮೂಡಿದ ಬಳಿಕ ಸುಧಾರಣೆಯ ಗಾಡಿ ತನ್ನಷ್ಟಕ್ಕೆ ತಾನೇ ಮುಂದುವರಿದೀತು."

" ನೀವೂ ಸ್ವಾಮಿಗಳೇ ಅಲ್ಲವೆ ?"

" ಸ್ವಾಮಿಯೆಂದರೆ ಸಮಾಜಸೇವಕ ಎಂದಾದರೆ ನಾನೂ ಸ್ವಾಮಿಯೆ, ನೀವೂ ಸ್ವಾಮಿಗಳೇ. ಕುಟ್ಟೋಶನಿ, ಕುಟ್ಟಪ್ಪ, ಹರಿಹರ ಇವರೂ ಸ್ವಾಮಿ ಗಳೇ. ಅಲ್ಲವೆ ?"

" ಅ....ಹ....ಹ....ಸರಿ....ಸರಿ," ಎಂದ ಮುಕ್ಕಣ್ಣ.

★

ಒಂದು ವಾರ ಕಳೆದಿರಬಹುದು. ಒಂದು ಬೆಳಗ್ಗೆ ನಾನು ಕೆಳಗಡೆ ಏನೋ ಕೆಲಸದಲ್ಲಿ ತೊಡಗಿದ್ದಾಗ ಮೇಲೆ ಸ್ವಾಮಿಗಳ ಕೊಟಡಿಯಲ್ಲಿ ಖರೇ ಸೆಟ್ಟಿಗೂ ಅವರಿಗೂ ಬಿರುಸಾದ ಮಾತುಕತೆ ನಡೆಯುತ್ತಿದ್ದುದನ್ನು ಕೇಳಿ ಮೆಟ್ಟಿಲುಗಳನ್ನೇರಿ ಬಂದು ಬಾಗಿಲುಹೊರಗಡೆ ನಿಂತುಕೊಂಡು ಒಳಗಡೆ ನಡೆದಿದ್ದ ಸಂಭಾಷಣೆಯನ್ನಾಲಿಸತೊಡಗಿದೆ.

"ಈಗ ಯಾಕೆ ಬೇಕು ಅಷ್ಟೊಂದು ಹಣ?" ಸ್ವಾಮಿಗಳು ಕೇಳುತ್ತಿದ್ದರು.

"ಶೇಂಗಾ ವ್ಯಾಪಾರದಲ್ಲಿ ಒಮ್ಮೆಲೆ ಎರಡು ಲಕ್ಷ ರೂಪಾಯಿ ಹಾನಿಯಾಗಿ ನಾನು ದಿವಾಳಿ ತೆಗೆಯುವ ಸಂದರ್ಭ ಬಂದಿದೆ."

"ಬಂದರೆ ಬಂತು. ಅದಕ್ಕೆ ನಾವೇನು ಮಾಡಬೇಕು?"

"ನಿಮ್ಮನ್ನು ಈ ಪೀಠಕ್ಕೇರಿಸಿದವನು ನಾನು, ನಿಮ್ಮನ್ನು ಜಗದ್ಗುರುವನ್ನಾಗಿ ಮಾಡಿದವನು ನಾನು. ಅದನ್ನೆಲ್ಲ ಇಷ್ಟು ಬೇಗ ಮರೆತುಬಿಟ್ಟಿರಾ?"

"ಅದನ್ನೇಕೆ ಮರೆತೇವು? ಆದರೆ ಇದು ಹಣಕಾಸಿನ ವಿಷಯ. ಮಠದ ಮುತ್ತುರತ್ನಗಳನ್ನು ಯಾರಿಗೂ ತಿಳಿಯದಂತೆ ತೆಗೆಯುವುದೆಂದರೆ ಸಾಮಾನ್ಯ ವಿಚಾರವೇ? ಜನರಿಗೆ ಗೊತ್ತಾದರೆ ನಮ್ಮ ಗತಿಯೇನಾದೀತು?"

"ಹ್ಯಾಗೆ ಗೊತ್ತಾಗುತ್ತದೆ ಸ್ವಾಮಿಜಿ? ನಾವು ಮುತ್ತು ರತ್ನಗಳನ್ನು ಭಂಡಾರದಿಂದ ತೆಗೆಯುವ ಸಂಗತಿ ನನಗೆ ನಿಮಗೆ ಇಬ್ಬರ ವಿನಾ ಇನ್ನಾರಿಗೂ ತಿಳಿಯುವುದಿಲ್ಲ. ಅದೂ ಅಲ್ಲದೆ ಒಂದೆರಡು ತಿಂಗಳಲ್ಲೇ ನಾನು ಅವುಗಳನ್ನು ಇದ್ದಕ್ಕಿದ್ದ ಹಾಗೆ ಹಿಂತಿರುಗಿಸುತ್ತೇನೆ. ಅವುಗಳನ್ನು ಮಾರುವುದೂ ಇಲ್ಲ. ಅಡವಿಟ್ಟು ಸಾಲ ಪಡೆಯುವುದೆಷ್ಟೋ ಅಷ್ಟೆ. ಅಷ್ಟು ಹಣ ನನ್ನ ಕೈಯಲ್ಲಿದೆಯೆಂದು ಜನರಿಗೆ ತಿಳಿದರೆ ಸಾಕು, ಅದರ ನಾಲ್ಕು ಪಟ್ಟು ಹಣ ಸಾಲ ಸಿಗುತ್ತದೆ. ಕೂಡಲೆ ಮುತ್ತು ರತ್ನಗಳನ್ನು ಬಿಡಿಸಿತಂದು ಒಪ್ಪಿಸುತ್ತೇನೆ."

"ಏನೋ ಅಪ್ಪ, ನನಗಂತೂ ಧೈರ್ಯವಾಗಲೊಲ್ಲದು."

"ಹೆಂಗಸರ ಜತೆ ರಮಿಸಲು ಧೈರ್ಯವಾಗುತ್ತದೆ. ಇಂಥ ಚಿಲ್ಲರೆ ಕೆಲಸಕ್ಕೆ ಮಾತ್ರ ಧೈರ್ಯವಿಲ್ಲ," ಎಂದು ಅಣಕದ ಧ್ವನಿಯಲ್ಲಿ ಹೇಳಿದ ಖರೇಸೆಟ್ಟಿ.

ಸ್ವಾಮಿಗಳು ಮುಂದೆ ಮಾತನಾಡಲಿಲ್ಲ. ಕಬ್ಬಿಣ ಪೆಟ್ಟಿಗೆಯ ಬಾಗಿಲು ತೆರೆದ ಸಪ್ಪಳ ಕೇಳಿಬಂದಿತು. ಕೊನೆಗೂ ಗೆದ್ದ ಖರೇಸೆಟ್ಟಿ ಎಂದುಕೊಳ್ಳುತ್ತ ನಾನು ಕೆಳಗಿಳಿದು ಬಂದೆ. ಮಾತು ಕೊಟ್ಟ ಮೇರೆಗೆ ಆತ ಮುತ್ತು ರತ್ನಗಳನ್ನು ಮರಳಿಸಬಹುದೆಂದು ನನಗೇನೂ ಅನ್ನಿಸಲಿಲ್ಲ.

★

ಜಾತ್ರೆಗೆ ಇನ್ನೂ ಒಂದು ವಾರವಿರುವಾಗ ಸ್ವಾಮಿಗಳು ಒಂದು ದಿನ ನನ್ನೊಡನೆ ಮಾತನಾಡುತ್ತ ಹೇಳಿದರು:

" ಈ ಮಠ ಬಿಟ್ಟು ಎಲ್ಲಾದರೂ ಓಡಿಹೋಗಿಬಿಡಬೇಕೆಂದು ಅನ್ನಿಸುತ್ತದೆ ಮರಿ."

" ಮತ್ತೇನು ತೊಂದರೆ ಸ್ವಾಮಿಜಿ ?" ಎಂದು ನಾನು ಕೇಳಿದೆ.

ಅವರು ಹೇಳತೊಡಗಿದರು :

" ನಾಲ್ಕೈದು ದಿನಗಳಿಂದ ಕರಲಿಂಗ ಒಂದೇಸಮನೆ ಗಂಟುಬಿದ್ದಿದ್ದಾನೆ. ಯಾವುದೋ ಒಂದು ಜಮೀನು ಸುಲಭ ಬೆಲೆಗೆ ಮಾರಾಟಕ್ಕಿದೆಯಂತೆ. ಅದನ್ನೀತ ಖರೀದಿ ಮಾಡುವವನಿದ್ದಾನಂತೆ. ಹತ್ತು ಸಾವಿರ ರೂಪಾಯಿ ಬೇಕೆಂದು ಪೀಡಿಸುತ್ತಿದ್ದಾನೆ."

" ಎಲ್ಲಿಂದ ಕೊಡುವಿರಿ ಇಷ್ಟೊಂದು ಹಣ ?"

" ಅದನ್ನೇ ನಾವೂ ಕೇಳುವುದು. ಟ್ರೆಜರಿಯಲ್ಲಿನ ಬಂಗಾರದ ಒಡವೆಗಳನ್ನು ತೆಗೆದುಕೊಡಬೇಕೆಂದೂ ಒಂದು ವರ್ಷದಲ್ಲಿ ಹಿಂತಿರುಗಿಸುವುದಾಗಿಯೂ ಆತ ಹೇಳುತ್ತಿದ್ದಾನೆ. ಅವೇನು ನಮ್ಮ ಸ್ವಂತ ಒಡವೆಗಳೇ ? ಅವುಗಳನ್ನು ಮುಟ್ಟಲು ಸಹ ಅಧಿಕಾರವಿಲ್ಲ ನಮಗೆ. ಹೀಗಾಗಿರುವಾಗ...."

" ಕೊಡುವುದಿಲ್ಲ ಅಂತ ಸ್ಪಷ್ಟವಾಗಿ ಹೇಳಿಬಿಡಿರಲ್ಲ ?"

" ಹಾಗೂ ಹೇಳಲು ಬರುವುದಿಲ್ಲ ಮಹಾರಾಯ. ಮಹಾದೇವಿಗೂ ನಮಗೂ ಇರುವ ಸಂಬಂಧವನ್ನು ಊರಲ್ಲೆಲ್ಲ ಟಾಂ ಟಾಂ ಮಾಡಿಸಿ ನಮ್ಮನ್ನು ಪೀಠದಿಂದ ಓಡಿಸುವುದಾಗಿ ಬೆದರಿಸುತ್ತಿದ್ದಾನೆ ಆ ರಾಕ್ಷಸ...."

ನಿಜಕ್ಕೂ ಇದೊಂದು ಕಠಿಣ ಪ್ರಸಂಗವೇ ಆಗಿತ್ತು. ಅದರಿಂದ ಸ್ವಾಮಿಗಳು ಹೇಗೆ ತಪ್ಪಿಸಿಕೊಳ್ಳುವರೆಂಬುದೇ ನನಗೆ ತಿಳಿಯದಂತಾಯಿತು.

ಒಂದೆರಡು ದಿನಗಳಲ್ಲೇ ಕರಲಿಂಗನಿಗೆ ಒಡವೆಗಳನ್ನು ಕೊಟ್ಟ ವಿಚಾರ ನನಗೆ ಸ್ವಾಮಿಗಳಿಂದ ತಿಳಿದುಬಂದಿತು.

" ಕೊಡದಿದ್ದರೆ ನಡೆಯುವಂತಿರಲಿಲ್ಲ. ಏನು ಮಾಡುವುದು. ನಾವಂತೂ ಎಲ್ಲದಕ್ಕೂ ತಯಾರಾಗಿ ನಿಂತಿದ್ದೇವೆ. ದೇವರು ಹೇಗೆ ಮಾಡುವನೋ ಮಾಡಲಿ," ಎಂದು ಹತಾಶರಾಗಿ ನುಡಿದು ಹಣೆಗೆ ಕೈಯಿಟ್ಟು ಕುಳಿತುಕೊಂಡ ಸ್ವಾಮಿಗಳನ್ನು ಕಂಡು ನನಗೆ ಅಯ್ಯೋ ಪಾಪ! ಎನ್ನಿಸದಿರಲಿಲ್ಲ.

★

" ಅಕ್ಕನ ಬಳಗದ ಅಧ್ಯಕ್ಷತೆಗೆ

ಮಹಾದೇವಮ್ಮನ ರಾಜೀನಾಮೆ

—

ಬಳಗಗಳೆರಡೂ ಒಂದುಗೂಡಿದುವು."

—

ಆ ವಾರದ 'ವೀರಶೈವಾವತಾರ'ದಲ್ಲಿ ಈ ವಾರ್ತೆಯನ್ನೋದುತ್ತಲೂ ಸ್ವಾಮಿಗಳು ನನ್ನ ಕಡೆ ಹೊರಳಿ–"ಕೇಳಿದಿರಾ ಮರಿ? ಅಕ್ಕನ ಬಳಗದ ವಿಷಯ?" ಎಂದರು.

"ಆದುದೆಲ್ಲ ಒಳ್ಳೆಯದೇ ಅಲ್ಲವೆ?"

"ಒಳ್ಳೆಯದೇ. ಆದರೂ ಮಹಾದೇವಿಯ ಬಗ್ಗೆ ನಮಗೆ ಅಯ್ಯೋ ಅನ್ನಿಸುತ್ತದೆ. ಅವಳೇನೋ ಒಂದು ತರಹ ಆಗಿಹೋಗಿದ್ದಾಳೆ. ಮೊನ್ನೆ ಆಕೆಯನ್ನು ಮಾತನಾಡಿಸಲೆಂದು ಮನೆಗೆ ಹೋಗಿದ್ದೆವು. ಅವಳು ಕೋಣೆಯನ್ನು ಬಿಟ್ಟು ಹೊರಗೆ ಬರಲೇ ಇಲ್ಲ, ನಮಗೆ ಮುಖವನ್ನೂ ತೋರಿಸಲಿಲ್ಲ. ನಮ್ಮ ಮೇಲೆ ಸುಮ್ಮಸುಮ್ಮನೆ ಕೋಪಮಾಡಿಕೊಂಡರೆ ನಾವಾದರೂ ಏನು ಮಾಡೋಣ? ನಾವೇನು ಅವಳ ಮೈಮೇಲೆ ಬಿದ್ದು ಸಂಗ ಬೆಳಸಿದ್ದೆವೆ? ವೇಶೀಪಟ್ಟಣದಲ್ಲಿ ತಾನಾಗಿಯೆ ನಮಗೆ ಮರುಳಾಗಿ ಸಂಬಂಧ ಕೂಡಿಸಿಕೊಂಡಿದ್ದಳು. ತಾನಾಗಿಯೆ ಒಲಿದು ಬಂದಾಕೆಯನ್ನು ತಿರಸ್ಕರಿಸಲಾಗುತ್ತದೆಯೇ? ಗಂಡ ಮುದುಕ, ಅವನಿಂದ ಸುಖ ಸಿಕ್ಕಲಿಲ್ಲ, ನಮ್ಮ ಸಹವಾಸದಲ್ಲಾದರೂ ಸ್ವಲ್ಪ ಸುಖ ಸಿಕ್ಕಲಿ ಪಾಪ–ಎಂದು ಉದಾರವಾಗಿ ನಾವು ಅವಳನ್ನು ಹತ್ತಿರ ಸೇರಿಸಿದ್ದೇ ನಮ್ಮ ತಪ್ಪೇ? ಈಗ ನಮ್ಮ ಮೇಲೆ ಸಿಟ್ಟಾಗುವುದೆಂದರೆ ಮೂರ್ಖತನವೇ ಅಲ್ಲವೆ?" ಎಂದರು ಸ್ವಾಮಿಗಳು. ನಾನೇನು ಹೇಳುವುದು ಸುಮ್ಮನಿದ್ದುಬಿಟ್ಟೆ.

ಅನಂತರ ಒಂದೆರಡು ದಿನಗಳಲ್ಲಿಯೆ ಮಹಾದೇವಮ್ಮ ಜರತಾರಿ ನಗರವನ್ನು ತ್ಯಜಿಸಿ, ತನ್ನ ತವರೂರಿಗೆ ಹೊರಟುಹೋದಳೆಂದು ತಿಳಿದುಬಂದಿತು. ನಾನು ಮುಕ್ಕಣ್ಣನಲ್ಲಿಗೆ ಧಾವಿಸಿ ಹೋಗಿ ಮಂಗಲಾದೇವಿಯವರನ್ನು ಕಂಡು ಅವರಿಂದ ಹೆಚ್ಚಿನ ವಿವರಗಳನ್ನು ತಿಳಿದುಕೊಂಡೆ. ಸೆಟ್ಟರು ಹಾಸುಗೆ ಹಿಡಿದು ಮಲಗಿದಾಗಲೇ ಅವರ ಅಂಗಡಿಯೂ ಮುಚ್ಚಿದಂತಾಗಿದ್ದಿತಂತೆ. ಮನೆಯಲ್ಲಿದ್ದ ಸಾಮಾನುಗಳನ್ನು ಲಾರಿಯಲ್ಲಿ ತುಂಬಿಸಿ ಮಹಾದೇವಮ್ಮ ಹೊರಟುಹೋಗಿದ್ದಳಂತೆ.

"ಅವರ ಮನಸ್ಥಿತಿ ಸರಿಯಾಗಿರಲಿಲ್ಲ. ಜೀವಕ್ಕೇನಾದರೂ ಮಾಡಿ ಕೊಂಡರೆ?" ಎಂದು ನಾನು ನನ್ನ ಮನಸ್ಸಿನಲ್ಲಿದ್ದ ಸಂದೇಹವನ್ನು ಆಡಿ ತೋರಿಸಿದೆ.

"ಆ ಬಗ್ಗೆ ಏನೂ ಚಿಂತೆ ಬೇಡ ಮರಿದೇವರೆ. ಸೆಟ್ಟರು ತೀರಿಕೊಂಡ ತರುವಾಯ ಒಂದು ಗಳಿಗೆಯೂ ನಾನು ಅವಳನ್ನು ಬಿಟ್ಟಿರಲಿಲ್ಲ. ಆದದು ಆಗಿಯೋಯ್ತು – ಎಲ್ಲಾ ಮರೆತುಬಿಟ್ಟು ಹೊಸ ಬಾಳು ಸಾಗಿಸಬೇಕು – ಆತ್ಮ ಹತ್ಯೆಯ ವಿಚಾರ ಮಾಡುವುದೂ ಪಾಪ, ಹೇಡಿತನ. ಅದರ ಬದಲು ಹಳ್ಳಿಯಲ್ಲಿದ್ದುಕೊಂಡು ಹೊಲ ಮನೆಯ ಕೆಲಸಗಳಲ್ಲಿ ಮನಸ್ಸು ತೊಡಗಿಸ ಬೇಕು, ಪಟ್ಟಣಗಳಿಗಿಂತ ಹೆಚ್ಚಾಗಿ ಹಳ್ಳಿಗಳಲ್ಲೇ ಅಕ್ಕನ ಬಳಗಗಳಿಂದ ಉಪಯುಕ್ತ ಕಾರ್ಯವಾಗುವುದು, ನಿನ್ನ ಜೀವನವನ್ನೇ ಅದಕ್ಕೇ ಧಾರೆಯೆರೆದು ಹಾಯಾಗಿರು – ಎಂದೆಲ್ಲ ದಿನದಿನವೂ ಹೇಳಿ ಅವಳ ಮನಸ್ಸನ್ನು ಗಟ್ಟಿಮಾಡಿ ದ್ದೇನೆ," ಎಂದು ಮಂಗಲಾದೇವಿ ಹೇಳಿದರು. ನನಗೆ ಎಷ್ಟೋ ಸಮಾಧಾನ ವಾದಂತಾಯಿತು.

★

ಜಾತ್ರೆಗಾರಂಭವಾಯಿತು.

ಮೊದಲನೆಯ ದಿನವೇ ಮಠದ ಅಂಗಳದಲ್ಲಿ 'ಅಕ್ಕನ ಬಳಗ'ದ ಪ್ರಚಂಡ ಸಭೆಯೊಂದು ಜರುಗಿತು. ಎರಡು ಬಳಗಗಳೂ ಮತ್ತೆ ಒಂದಾದ ವಿಚಾರವಾಗಿ ತುಂಬಾ ಹೆಮ್ಮೆಯಿಂದ ಮಾತನಾಡಿದಳು ಪುಷ್ಪಾವತಿ. ಸಭೆಗೆ ಅಧ್ಯಕ್ಷರಾಗಿದ್ದ ಸ್ವಾಮಿಗಳು ಮಹಾದೇವಿಯಕ್ಕನ ವೈರಾಗ್ಯ ಜೀವನವನ್ನು ಕುರಿತು ಒಂದು ಗಂಟೆಯವರೆಗೆ ಏನೇನೋ ಮಾತು ಉರುಳಿಸಿದರು. ಭಾಷಣ ಕೇಳುತ್ತ ಕುಳಿತಿದ್ದ ಪುಷ್ಪಾವತಿಯ ತುಟಿಗಳ ಮೇಲೆ ತುಂಟನಗೆ ಸುಳಿದಾಡು ತ್ತಿದ್ದುದನ್ನು ನಾನು ಕಂಡುಕೊಳ್ಳದಿರಲಿಲ್ಲ.

★

ಜಾತ್ರೆಯ ಕಾಲಕ್ಕೆ ನಡೆದ ಸಭೆಯೆಂದರೆ ಅದೊಂದೇ ಒಂದು. ಪಟ್ಟಾಧಿ ಕಾರದ ಉತ್ಸವಕ್ಕೆ ಪತ್ರಿಕಾಕರ್ತರ ಹಿಂಡನ್ನೇ ಬರಮಾಡಿಕೊಂಡಂತೆ ಜಾತ್ರೆಗೆ ಯಾರನ್ನೂ ಕರೆಯಿಸಲಿಲ್ಲ – "ಹಾರುವರನ್ನು ಕರೆಯಿಸಬೇಡಿ," ಎಂದು

ಸ್ಪಷ್ಟವಾಗಿ ಹೇಳಿದ್ದ ಜಡಿಯಪ್ಪ. ಪತ್ರಿಕೆಯವರನ್ನೆಲ್ಲ ಕರೆಯಿಸಿ ಅವರಿಗೆ ಮಠದ ಹಣ ಸುರಿದು ಕೀರ್ತಿಯ ಡಂಗುರ ಬಾರಿಸುವುದಕ್ಕೆಂದೇನೂ ಜಗದ್ಗುರುಗಳನ್ನಾಗಿ ಮಾಡಿಲ್ಲ ನಿಮ್ಮನ್ನು. ನಿಮ್ಮ ಕೆಲಸವೇನೋ ಅಷ್ಟು ಮಾಡಿಕೊಂಡು ಹೋಗಿ," ಎಂದು ಹೇಳಿದ್ದ ಕರಲಿಂಗ.

ಗಂಗಾಧರಶಾಸ್ತ್ರಿಯೊಬ್ಬನು ತಾನಾಗಿಯೆ ಬರಬಹುದೆಂದು ಸ್ವಾಮಿಗಳು ನಿರೀಕ್ಷಿಸಿಕೊಂಡಿದ್ದರು. ಅವನೂ ಬರಲಿಲ್ಲ.

ಜಾತ್ರೆಯ ಎರಡನೆಯ ದಿವಸ ನರಿರಾಯ ಬಂದಿಳಿದ. ಹಣ ಕಿತ್ತುಕೊಂಡು ಹೋಗಲೆಂದೇ ಆತ ಬಂದಿದ್ದುದು ಸ್ಪಷ್ಟವಿದ್ದಿತು.

ಅವನನ್ನು ಕಾಣುತ್ತಲೂ ಕರಲಿಂಗ ಕಣ್ಣು ಕೆರಳಿಸಿ ಕರ್ಕಶ ಸ್ವರದಲ್ಲಿ ನುಡಿದ: "ನೀವು ಯಾರು? ಯಾತಕ್ಕೆ ಬಂದಿದ್ದೀರಿ?"

ನರಗಳ ದೌರ್ಬಲ್ಯದಿಂದ ಮೊದಲೇ ಜರ್ಜರಿತವಾಗಿದ್ದ ನರಿರಾಯನ ದೇಹ ಗಡಗಡನೆ ನಡುಗತೊಡಗಿತು. "ಸ್ವಾ .... ಸ್ವಾ .... ಸ್ವಾಮಿಗಳನ್ನು ಕಾಣಲು ಬಂದಿದ್ದೇನೆ...." ಎಂದು ಹೇಳುವಷ್ಟರಲ್ಲಿ ಅವನ ನಾಲಗೆಯೂ ನಡುಗತೊಡಗಿತು.

"ಸ್ವಾಮಿಗಳು ಪೀಠದ ಮೇಲೆ ಕೂತಿರುತ್ತಾರೆ. ಜಾತ್ರೆ ಮುಗಿಯುವವರೆಗೆ ಯಾರನ್ನೂ ಕಾಣುವುದಿಲ್ಲ ಅವರು ...." ಎಂದು ಹೇಳಿ ಕರಲಿಂಗ ಅವರನ್ನು ಬೆದರಿಸಿ ಸಾಗಹಾಕುವುದರಲ್ಲಿದ್ದಾಗ ನಾನು ಓಡಿಹೋಗಿ – "ಇರಲಿ ಬಿಡಿರಿ. ಪಾಪ, ಎಷ್ಟು ದೂರ ಬಂದಿದ್ದಾರೆ. ಊಟಗೀಟ ಮಾಡಿಕೊಂಡು ಹೋಗಲಿ," ಎಂದು ಹೇಳಿ ಅವನನ್ನು ನನ್ನ ಕೊಟಡಿಗೆ ಕರೆದು ತಂದೆ.

ಕೈಯಲ್ಲಿದ್ದ ಚೀಲವನ್ನು ದೊಪ್ಪನೆಂದು ಕೆಳಕ್ಕೊಗೆದು ನರಿರಾಯ, ಹೊದೆದುಕೊಂಡಿದ್ದ ಶಾಲಿನಿಂದ ಮುಖದ ಮೇಲಿನ ಬೆವರು ಹನಿಗಳನ್ನೊರೆಸಿ ಐದಾರು ನಿಮಿಷಗಳವರೆಗೆ ಹುಚ್ಚು ಹಿಡಿದವರಂತೆ ಕೊಟಡಿಯಲ್ಲಿ ಓಡಾಡುತ್ತಿದ್ದ. ಪಾಪ, ಪ್ರವಾಸದಲ್ಲಿ ಹಸಿದು ಬಂದಿರಬಹುದು – ಎಂದುಕೊಂಡು ಎಂಟು ಹತ್ತು ಕೊಬ್ಬರಿ ಬಟ್ಟಲು, ಎರಡು ಮುಷ್ಟಿ ಬೆಲ್ಲ, ಎರಡು ಸೇರು ಕಳ್ಳೇಕಾಯಿ ತಂದಿರಿಸಿ "ಕೂತುಕೊಳ್ಳಿರಿ ಸಂಪಾದಕರೇ. ಶಾಂತರಾಗಿರಿ, ತಗೊಳ್ಳಿರಿ ಇದನ್ನೆಲ್ಲಾ...." ಎಂದೆ.

ನರಿರಾಯ ಗೋಡೆಗೊರಗಿ ಕುಳಿತುಕೊಂಡು ಕೊಬ್ಬರಿ ಬಟ್ಟಲುಗಳನ್ನು ಕಂಡೊಡನೆಯೆ ಅವನ ಮುಖದ ಮೇಲೆ ಪ್ರಸನ್ನತೆ ಮೂಡಿಬಂದಿತು.

"ಇಷ್ಟೊಂದು ಕೊಬ್ಬರಿ ಎಲ್ಲಿಯದು ಪುಣ್ಯಾತ್ಮ?" ಎಂದು ಆತ ಕೇಳಿದ.

ಜಾತ್ರೆಗೆ ಬಂದವರು ಒಡೆಸುವ ಕಾಯಿಯಲ್ಲಿ ಅರ್ಧ ಇಟ್ಟುಕೊಳ್ಳುವ ನಿಯಮವಿದೆ. ಕೊಬ್ಬರಿಗೇನು ಕೊರತೆ ಮಠದಲ್ಲಿ....ತಗೊಳ್ಳಿ...."

ನರಿರಾಯ ನಗುನಗುತ್ತಾ ಕೊಬ್ಬರಿ ಬೆಲ್ಲ ಕಳ್ಳೇಕಾಯಿಗಳನ್ನು ನುಂಗ ತೊಡಗಿದ. ಅವುಗಳನ್ನೆಲ್ಲ ತಿಂದು ಮುಗಿಸುವವರೆಗೆ ಆತ ಒಂದು ಮಾತನ್ನೂ ಆಡಲಿಲ್ಲ. ಅನಂತರ ಢರ್ರನೆಂದು ಒಮ್ಮೆ ತೇಗಿ, "ಕುಡಿಯಲು ಏನಾದರೂ ಕೊಡಯ್ಯ," ಎಂದ. ನಾನು ಓಡಿಹೋಗಿ ಒಂದು ತಂಬಿಗೆಯಷ್ಟು ಹಾಲು ತೆಗೆದುಕೊಂಡು ಬಂದೆ. ನಡುಗುವ ಕೈಗಳಿಂದ ಅದನ್ನೆತ್ತಿ ಎಲ್ಲ ಹಾಲನ್ನೂ ಒಂದೇಟಿಗೇ ಕುಡಿದು ಮುಗಿಸಿ ತೃಪ್ತಿಯ ನಗೆ ಬೀರುತ್ತ – "ದೇವರು ನಿಮಗೆ ಕಲ್ಯಾಣ ಮಾಡಲಿ. ಅನ್ನಬ್ರಹ್ಮನನ್ನು ತೃಪ್ತಿಗೊಳಿಸಿದಿರಿ." ಎಂದು ಹೇಳಿದ.

ಮುದುಕನ ತೃಪ್ತಿಯನ್ನು ಕಂಡು ನನಗೂ ಸಂತೋಷವಾಯಿತು.

ಅಂಗಿಯ ಜೇಬಿನಿಂದ ನಸ್ಯದ ಡಬ್ಬಿಯನ್ನು ಹೊರದೆಗೆದು ಒಂದು ಚಟಿಕೆ ನಸ್ಯವನ್ನು ಹೊರಳೆಗಳಿಗೇರಿಸಿ ಮೂಗನ್ನು ಐದಾರು ಬಾರಿ ಚಟಚಟನೆ ಒಡಿದು, ಒರೆಸಿ, ನರಿರಾಯ ಮಾತನಾಡಿದ: "ಏನಾಶ್ಚರ್ಯ! ಮರಿದೇವರೆ, ನಿಮ್ಮ ಜಾತಿಯ ಜನರೆಲ್ಲಾ ನಿಮ್ಮ ಹಾಗೇ ಸುಸಂಸ್ಕೃತರಾಗಿಲ್ಲವಲ್ಲಾ! ಇದೇ ಈಗ ನನ್ನನ್ನು ಕಂಡು ಕಿರಾತನಂತೆ ಆಚರಿಸಿದನಲ್ಲಾ – ಆತ....ಆತ...."

ನಾನು ಮುಗುಳ್ನಗೆಯಿಂದ ಹೇಳಿದೆ: "ಅದು ಅವನ ಸ್ವಭಾವ. ಹೋಗಲಿ ಬಿಡಿ ಸಂಪಾದಕರೇ. ಎಲ್ಲರೂ ಒಂದೇಟಿಗೇ ಸುಸಂಸ್ಕೃತರಾಗ ಬೇಕಾದರೆ ಎಲ್ಲಿ ಸಾಧ್ಯ? ಅದಿರಲಿ. ನೀವೇನು ಬಂದಿದ್ದೀರಿ?"

"ಐದುನೂರು ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದ್ದರಲ್ಲಾ ಜಗದ್ಗುರುಗಳು. ಜಾತ್ರೆಯ ಕಾಲಕ್ಕೆ ಕೊಡುವುದಾಗಿ ಕಳ್ಳೇಕಾಯಿ ನಗರದಲ್ಲಿ ಹೇಳಿದ್ದರು. ಬಂದಿದ್ದೆ."

"ಬರಲು ತಿಳಿಸಿದ್ದರೇನು?"

"ಇಲ್ಲ. ಯಾಕೆ ತಿಳಿಸಲಿಲ್ಲವೊ. ಮರೆತಿದ್ದರೂ ಇರಬಹುದು. ಜಗದ್ಗುರುಗಳೆಂದ ಬಳಿಕ ನೂರೆಂಟು ಜವಾಬ್ದಾರಿಯ ಕೆಲಸಗಳಿರುತ್ತವೆ. ಸರಿ. ನಾನೇ ಬಂದುಬಿಟ್ಟೆ. ಪತ್ರಿಕೆಯೂ ಬಹಳ ತೊಂದರೆಯಲ್ಲಿದೆ. ಪ್ರೆಸ್ಸಿಗೆ ಕೊಡಲು ಹಣವಿಲ್ಲ. ಕಾಗದ ಕೊಳ್ಳಲು ಹಣವಿಲ್ಲ. ಮನೆಯ ಸಂಸಾರದ

ಖರ್ಚು ಬೇರೆ. ಸಾಹಿತಿಗಳ ಗೋಳು ಏನು ಹೇಳುವುದು ಮರಿ ದೇವರೆ! ನಿಮಗೆ ಅದೆಲ್ಲ ಸರಿಯಾಗಿ ಅರ್ಥವಾಗದು."

"ಅರ್ಥವಾಗುತ್ತದೆ ಸಂಪಾದಕರೆ, ಚೆನ್ನಾಗಿ ಅರ್ಥವಾಗುತ್ತದೆ." ಎಂದು ನಾನು ಸಹಾನುಭೂತಿ ಬೆರೆತ ಸ್ವರದಲ್ಲಿ ನುಡಿದೆ.

ನನ್ನ ಮಾತಿನಲ್ಲಿ ವ್ಯಕ್ತವಾದ ಅನುಕಂಪವನ್ನು ಗುರುತಿಸುತ್ತಲೂ ನರಿರಾಯ ಮನಸ್ಸು ಬಿಚ್ಚಿ ಮಾತನಾಡತೊಡಗಿದ: "ಸಾಹಿತಿಗಳ ಗೋಳು....! ಕೂಲಿಗಳ ಕಷ್ಟ ಬೇಕು, ನಮ್ಮದು ಬೇಡ. ಅವರ ದುಡಿತಕ್ಕೆ ಅಷ್ಟಿಷ್ಟಾದರೂ ಹಣ ಸಿಗುತ್ತದೆ. ನಮ್ಮ ದುಡಿತಕ್ಕೂ ಹಣ ಕೊಡಬೇಕಾದುದು ಅವಶ್ಯನೆಂಬ ಅರಿವು ಜನರಿಗಿಲ್ಲ. ಪುಸ್ತಕ, ಪತ್ರಿಕೆಗಳೆಂದರೆ ಪುಕ್ಕಟೆ ಒದುವ ವಸ್ತುಗಳೆಂದೇ ಸಾಮಾನ್ಯವಾಗಿ ಬಹು ಜನರ ಕಲ್ಪನೆ. ನಲವತ್ತು ವರ್ಷಗಳಿಂದ ಕನ್ನಡ ಸಾಹಿತ್ಯದಲ್ಲಿ ದುಡಿಯುತ್ತ ಬಂದೆ. ಕವಿತೆ ಬರೆದೆ, ಕತೆ ಬರೆದೆ, ಕಾದಂಬರಿ ಬರೆದೆ. ಹೊಟ್ಟೆ ತುಂಬಲಿಲ್ಲ. ಸಾಹಿತ್ಯಕ್ಕೇ ಆಯುಷ್ಯವನ್ನೆಲ್ಲ ಮುಡಿಪಾಗಿಟ್ಟು ಈ ಪತ್ರಿಕೆ ಹೊರಡಿಸಿದೆ. ಚಂದಾದಾಗರು ಸಿಕ್ಕಲಿಲ್ಲ. ಸಾಲವಾಯಿತು. ಹಳ್ಳಿಯಲ್ಲಿದ್ದ ಒಂದೇ ಒಂದು ಹೊಲವನ್ನು ಮಾರಿ ಅದರಿಂದ ಬಂದ ಹಣವನ್ನು ಇದಕ್ಕೇ ಸುರಿದು ಇಷ್ಟು ವರ್ಷಗಳವರೆಗೆ ಹೇಗೋ ನಡೆಸಿಕೊಂಡು ಬಂದೆ. ಆ ಹಣವೂ ಕರಗಿಹೋಯಿತು. ಚಂದಾದಾರರ ಸಂಖ್ಯೆ ಬೆಳೆಯಲಿಲ್ಲ. ಪತ್ರಿಕೆಗೆ ಹಾನಿಯಾಗುವುದು ತಪ್ಪಲಿಲ್ಲ. ಒಮ್ಮೆ ಹಿಡಿದ ಕೆಲಸವನ್ನು ಸಾಯುವವರೆಗೂ ಬಿಡಬಾರದು, ಪತ್ರಿಕೆಯನ್ನು ನಿಲ್ಲಿಸಬಾರದೆಂದು ನನ್ನ ಸಂಕಲ್ಪ. ಆದರೆ ಈ ಹಾನಿಯನ್ನೂ ತುಂಬುವುದಕ್ಕೇನು ದಾರಿ? ಎಂದೂ ಯಾರನ್ನೂ ಹಣಕ್ಕಾಗಿ ಯಾಚಿಸದಿದ್ದ ನಾನು ಈ ಪತ್ರಿಕೆಗಾಗಿ ಅವರಿವರ ಹತ್ತಿರ ಬಾಯಿ ತೆರೆಯಬೇಕಾದ ಪ್ರಸಂಗ ಬಂದಿತು. ಮನಸ್ಸಿನಲ್ಲಿಲ್ಲದಿದ್ದರೂ ಅಯೋಗ್ಯರನ್ನು ಹೊಗಳಬೇಕಾಯಿತು, ಅವರ ಫೋಟೋ ಹಾಕಬೇಕಾಯಿತು...."

"ನಮ್ಮ ಸ್ವಾಮಿಗಳ ಫೋಟೋ ಹಾಕಿದ್ದೂ ಹಾಗೆ...."

"ಛೆ....ಛೆ....ಅವರ ಮಾತು ಬೇರೆ....ಅವರು ಯೋಗ್ಯರು....ಪ್ರತಿಭಾಶಾಲಿಗಳು....ಪೂಜ್ಯರು...." ಎಂದು ನರಿರಾಯ ಮಾತು ಹಾರಿಸುತ್ತಿದ್ದ ಹಾಗೆ ನಾನು ಗೊಳ್ಳನೆ ನಕ್ಕು – "ಆ ಪ್ರಶಂಸೆಯೆಲ್ಲಾ ಇರಲಿ ಬಿಡಿ ಸಂಪಾದಕರೆ. ಅವರೆಂಥ ಯೋಗ್ಯರು, ಎಂಥ ಪೂಜ್ಯರು ಎಂಬುದು ನನಗೂ ಗೊತ್ತಿದೆ, ನಿಮಗೂ ಗೊತ್ತಿದೆ, ಕರ್ನಾಟಕಕ್ಕೂ ಗೊತ್ತಾದೀತು ಇಂದಿಲ್ಲ ನಾಳೆ. ಅವರಿಂದ

ದೊರೆಯುವ ಹಣಕ್ಕಾಗಿಯೆ ತಾನೆ ನೀವು ಅವರನ್ನು ಹೊಗಳುತ್ತಿರುವುದು?" ಎಂದು ಹೇಳಿದೆ.

ನರಿರಾಯ ಕೊಂಚ ತಬ್ಬಿಬ್ಬಾಗಿ ಮತ್ತೊಂದು ಸಲ ನಸ್ಯ ಸೇವಿಸಿ ಹೇಳಿದ: "ಹಾಗೆ ನಿಜ ಹೇಳಬೇಕಾದರೆ ನೀವು ಹೇಳುವುದು ಸರಿ. ಆದರೇನು ಮಾಡುವುದು? ಸ್ವಾಮಿಗಳಲ್ಲಿ ಎಷ್ಟು ದುರ್ಗುಣಗಳಿದ್ದರೂ ಇದಾದರೂ ಒಂದು ಸದ್ಗುಣವಿದೆಯಲ್ಲ- ಸಾಹಿತಿಗಳಿಗೂ ಪತ್ರಿಕಾಕರ್ತರಿಗೂ ಸಹಾಯ ಮಾಡುವುದು? ಬೇರೆ ಸ್ವಾಮಿಗಳಲ್ಲಿ ಈ ಗುಣವೂ ಇಲ್ಲ. ನಾವು ಬದುಕಿರುವೆವೇ ಸತ್ತಿರುವೆವೇ ಎಂಬುದನ್ನೂ ವಿಚಾರಿಸುವುದಿಲ್ಲ ಅವರು...."

"ಇರಬಹುದು. ನಮ್ಮ ಸ್ವಾಮಿಗಳು ನಿಮ್ಮಂಥವರಿಗೆ ಹಣ ಕೊಡಲು ಕಾರಣವೇನೆಂಬುದು ನಿಮಗೆ ತಿಳಿಯದೆ?"

"ಅಷ್ಟೂ ತಿಳಿಯುವುದಿಲ್ಲವೇ? ಪ್ರಚಾರಕ್ಕಾಗಿಯೆ ಕೊಡುತ್ತಾರೆ."

"ಮೊದಲೇ ನಮ್ಮದು ಅಜ್ಞಸಮಾಜ. ಸ್ವಾಮಿಗಳೆಂದರೆ ಅಂಥ ಭಕ್ತಿ, ಮರುಳು ನಂಬಿಕೆ. ಇದರ ಜತೆಗೆ ನಿಮ್ಮಂಥ ಸಾಹಿತಿಗಳ ಪ್ರಚಾರವೂ ಸೇರಿತೆಂದರೆ ಎಂಥ ಕೆಟ್ಟ ಪರಿಣಾಮವಾಗಲಿಕ್ಕಿಲ್ಲ? ಸ್ವಾಮಿಗಳ ದುಷ್ಕೃತ್ಯಗಳನ್ನೆಲ್ಲ ಮರೆಮಾಚಲು ನಿಮ್ಮ ಪ್ರಚಾರದಿಂದ ಸಹಾಯವಾಗುವುದಲ್ಲವೆ?"

ನರಿರಾಯ ಒಂದು ನಿಮಿಷ ಸುಮ್ಮನೆ ಕುಳಿತಿದ್ದು ಅನಂತರ ಹೇಳಿದ: "ನೀವು ಹೇಳುವುದು ನಿಜ. ಆದರೇನು ಮಾಡುವುದು? ನಮ್ಮ ಆರ್ಥಿಕ ಪರಿಸ್ಥಿತಿಯೂ ಹೀಗಿದೆ. ಅದರಿಂದ ಪಾರಾಗಬೇಕಾದರೆ ಸ್ವಾಮಿಗಳಿಂದ ಹಣ ಸ್ವೀಕರಿಸಲೇಬೇಕಾಗುವುದು."

"ಅವರಿಂದ ಹಣ ಸಿಗದಿದ್ದರೂ ನಿಮ್ಮ ಸಂಸಾರ ನಡೆಯುವುದು ತಾನೆ?"

"ಅದೇನೋ ನಡೆದೀತು. ಪತ್ರಿಕೆ ಮಾತ್ರ ನಿಂತು ಹೋಗುತ್ತದೆ."

"ನಿಂತುಹೋಯಿದೆಂದೇ ತಿಳಿಯುವಾ. ಅದರಿಂದ ಅಂಥ ಹಾನಿ ಏನಾಗುವುದು ಕರ್ನಾಟಕಕ್ಕೆ?"

"ಹಾನಿ? ಹಾನಿಯೇನಾಗುವುದು ಅನ್ನುತ್ತೀರಾ? ಒಳ್ಳೇ ಮಾತೇ ನೀವು ಹೇಳುವುದು....ಕರ್ನಾಟಕದಲ್ಲೆಲ್ಲ ಉಚ್ಚವರ್ಗದ ಸರ್ವಶ್ರೇಷ್ಠ ಪತ್ರಿಕೆಯಿರುವುದೆಂದರೆ ಇದೊಂದೇ ಒಂದು. ಇದನ್ನು ನಿಲ್ಲಿಸಿದರೆ ಎಂಥ ಹಾನಿಯಾದೀತು ಅನ್ನುತ್ತೀರಲ್ಲಾ? ಮುಂದೆ ಇಂಥ ಪತ್ರಿಕೆ ಹೊರಡಿಸುವ ಯೋಗ್ಯತೆಯಾದರೂ ಯಾರಿಗಿದೆ ಕರ್ನಾಟಕದಲ್ಲಿ? ಹಾ?"

"ಪತ್ರಿಕೆಯ ಸಂಪಾದಕರಾಗಲು ನಿಮ್ಮಲ್ಲಿರುವ ಯೋಗ್ಯತೆಯಾದರೂ ಏನು? ಪತ್ರಿಕಾ ವ್ಯವಸಾಯ ಅಂದರೆ ಅದೊಂದು ವಿಶಿಷ್ಟ ಕಲೆ, ಅದನ್ನೂ ಕಲಿತು ಅಭ್ಯಸಿಸಬೇಕಾಗುತ್ತದೆ. ನಿಮಗೆ ನೋಡಿದರೆ ಇಂಗ್ಲೀಷು ಸಹ ಬರುವುದಿಲ್ಲ...." ಎಂದು ನಾನು ಆಡಿಯೇಬಿಟ್ಟೆ. ಆಡಬಾರದಾಗಿತ್ತೇನೊ! ನರಿರಾಯ ಭಯಂಕರ ಕೋಪದಿಂದ ನಡುಗುತ್ತ ಎದ್ದು ನಿಂತ. "ಇಂಗ್ಲೀಷು.... ಇಂಗ್ಲೀಷು....ಈಗಿನ ಕಾಲದ ಹುಡುಗರಿಗೆ ನಿಮಗೆ ಅದರದೊಂದು ಹುಚ್ಚು. ಆ ಇಂಗ್ಲೀಷಿನ ತಲೆ ಬೋಳಿಸಿತು. ನಮ್ಮ ಪೂರ್ವಜರು ಋಷಿಮುನಿಗಳು ಎಲ್ಲಾ ಇಂಗ್ಲೀಷು ಕಲಿತಿದ್ದರೇನು? ಪತ್ರಿಕಾ ವ್ಯವಸಾಯ ಕಲಿಯಬೇಕಂತೆ! ನನಗೆ....ನಲವತ್ತು ವರ್ಷಗಳಿಂದ ಸಾಹಿತ್ಯಸೇವೆ ಮಾಡುತ್ತ ಬಂದು ಅದರಲ್ಲೇ ಕೂದಲು ಬೆಳ್ಳಗೆ ಮಾಡಿಕೊಂಡ ನನಗೆ-ಬರೆಯುವುದನ್ನು ಕಲಿಸುವ ಕಾಮಣ್ಣಗಳಿವರು...." ಎನ್ನುತ್ತಾ ದೊಪ್ಪನೆ ನೆಲಕ್ಕೆ ಕುಸಿದು ಕುಳಿತ. ಮತ್ತೊಂದು ಡಜನ್ ಕೊಬ್ಬರಿಗಳನ್ನು ತರಲೆಂದು ನಾನು ಗರ್ಭಗುಡಿಯ ಕಡೆ ಓಟಬಿಟ್ಟೆ.

ಮಧ್ಯಾಹ್ನ ಅವನನ್ನು ಕರೆದೊಯ್ದು ಸ್ವಾಮಿಗಳ ಭೆಟ್ಟಿಮಾಡಿಸಿದೆ. ಸುತ್ತಮುತ್ತಲೂ ಭಕ್ತರನೇಕರು ನೆರೆದಿದ್ದರಾದ್ದರಿಂದ ಆತ ಅಲ್ಲಿ ಏನನ್ನು ಮಾತನಾಡುವುದಕ್ಕೂ ಸಾಧ್ಯವಾಗಲಿಲ್ಲ.

ಸಾಯಂಕಾಲದ ರೈಲಿಗೆ ಆತನನ್ನು ಹತ್ತಿಸಿ ಓರೆಕೋರೆ ನಿಲ್ದಾಣಕ್ಕೊಂದು ಟಿಕೆಟ್ಟು ಕೊಡಿಸಿ ಬೀಳ್ಕೊಟ್ಟು ಬಂದೆ. "ಸ್ವಾಮಿಗಳ ಹತ್ತಿರ ಹಣವಿದ್ದಾಗ ಪತ್ರ ಹಾಕಿರಿ. ಬರುತ್ತೇನೆ," ಎಂದು ನನಗೆ ಹೇಳಲು ಮರೆಯಲಿಲ್ಲ ನರಿರಾಯ. ನಾನು ನಗುತ್ತಾ ಸಮ್ಮತಿ ಸೂಚಿಸಿದೆ.

ಮಾರನೆಯ ದಿನವೇ ಕಾಳಹೃದಯಪ್ಪನ ಸವಾರಿ ಆಗಮಿಸಿತು. ಅವನಿಗೂ ಹಣ ದೊರೆಯಲಿಲ್ಲ. ತನ್ನ ಖೋಡಿ ದೈವವನ್ನು ಹಳಿದುಕೊಳ್ಳುತ್ತ ಸಂಜೆಯ ರೈಲಿಗೆ ಹಿಂದಿರುಗಿ ಹೋದ. ಗೊಬ್ಬಣ್ಣನೂ ಬಂದಿದ್ದ. ಅವನಿಗೂ ಅದೇ ಗತಿಯಾಯಿತು. ಧರ್ಮಪುರ, ಓರೆಕೋರೆ ನಗರಗಳ ನಿರುದ್ಯೋಗಣ್ಣಗಳು ಮಾತ್ರ ಹತ್ತಿಪ್ಪತ್ತು ರೂಪಾಯಿ ಕಿತ್ತುಕೊಂಡು ಹೋದರು.

ಜಾತ್ರೆಯಲ್ಲಿ ಮೂರು ದಿನಗಳವರೆಗೂ ಕರಲಿಂಗ ಸ್ವಾಮಿಗಳ ಪೀಠವನ್ನು ಬಿಟ್ಟು ಅತ್ತಿತ್ತ ಕದಲದೆ, ಕಾಣಿಕೆಯ ಹಣವನ್ನೆಲ್ಲ ಗಂಟು ಕಟ್ಟಿಕೊಂಡು ತನ್ನ ಜೇಬಿಗೆ ಸೇರಿಸಿದ.

ಎಂದು ಮುಗಿಯುವುದೋ ಈ ಜಾತ್ರೆ ಎಂದು ಬೇಸರವಾಗಿತ್ತು ನನಗೆ. ಅದು ಮಠದ ಉತ್ಸವವೆಂಬ ಯೋಚನೆಯೇ ಇದ್ದಂತಿರಲಿಲ್ಲ ಯಾರಿಗೂ. ಜಾತ್ರೆಯಲ್ಲೆಲ್ಲ ಎದ್ದು ಕಾಣುತ್ತಿದ್ದುದೆಂದರೆ ಎಲ್ಲಮ್ಮನ ಬಂಡಾರ ಹಚ್ಚುತ್ತ ಗಂಡುಸರನ್ನು ಆಕರ್ಷಿಸುತ್ತಲಿದ್ದ ಸೂಳೆಯರ ಹಿಂಡು. ಹೆಂಗುಸರನ್ನು ನೋಡಲು ಬಂದ ಗಂಡುಸರು; ಗಂಡುಸರನ್ನು ನೋಡಲು ಬಂದ ಹೆಂಗುಸರು. ಮಾನವನ ತುಚ್ಛ ವಿಕಾರಗಳನ್ನೂ ಕಾಮ ಭಾವನನ್ನೂ ಪ್ರಚೋದಿಸುವ ಹೊಲಸು ಬಯಲಾಟಗಳು, ನಾಟಕಗಳು, ಅಶ್ಲೀಲ ಮಾತುಗಳು, ಹಾಡುಗಳು, ಲಾವಣಿಗಳು. ಬಂಡಾರದ ಸೂಳೆಯರು ಮಠದ ಸುತ್ತಲಿನ ಹೊಲಗಳಲ್ಲೇ ತಮ್ಮ ವ್ಯಾಪಾರ ನಡೆಸಿದ್ದರು. ಅವರಿಗೆ ಗಿರಾಕಿಗಳ ಕೊರತೆಯೂ ಇರಲಿಲ್ಲ. ತಿಂಡಿ ಸಾಮಾನು, ಚಹದಂಗಡಿಗಳವರಿಗೂ ಲಾಭವೇ ಲಾಭ. ಜನತೆಗೆ ಮಾತ್ರ ಯಾವ ಲಾಭವೂ ಇರಲಿಲ್ಲ; ಎಲ್ಲವೂ ಹಾನಿಯೇ. ವರ್ಷದಲ್ಲೊಂದು ದಿನ ಜಾತ್ರೆ ಮಾಡಿದರೆ ಸ್ವಲ್ಪವಾದರೂ ಸಂತೋಷವುಂಟಾಗುವುದೆಂದು ಕೆಲವರು ಹೇಳುತ್ತಾರೆ. ಇದೆಂಥ ಜಾತ್ರೆ....ಇದೆಂಥ ಸಂತೋಷ....ಇದೆಂಥ ಭಕ್ತಿ! ನನಗೆ ನಗೆ ಬರುತ್ತಿತ್ತು – ತಿರಸ್ಕಾರಮಿಶ್ರಿತ ನಗೆ.

★

ಒಂದು ದಿನ ಸ್ವಾಮಿಗಳು ಕಾರಿನಲ್ಲಿ ಎಲ್ಲೋ ಹೊರಗಡೆ ಹೋಗಿ ಬಂದವರು ಅತ್ಯಂತ ಅವಸರದಿಂದ ನನ್ನನ್ನು ಕೂಗಿ ಕರೆದು ಹೇಳಿದರು:

"ಇವೊತ್ತು ನಾವು ಪುಷ್ಪಾವತಿಯ ಮನೆಗೆ ಹೋಗಿದ್ದೆವು ಮರಿ. ಅವಳ ತಂದೆ ತಾಯಿಗಳು ನಮ್ಮನ್ನು ಬಹಳ ಆದರದಿಂದ ಸ್ವಾಗತಿಸಿದರು. ಏನು ಶ್ರೀಮಂತಿಕೆಯಪ್ಪ ಅವರದು. ಎರಡು ಲಕ್ಷದವರೆಗೂ ಬ್ಯಾಂಕಿನಲ್ಲಿ ಹಣವಿದೆಯಂತೆ. ಮೂರು ಸಾವಿರ ಎಕರೆ ಜಮೀನು ಇದೆಯಂತೆ. ಅದರಲ್ಲಿ ಒಂದು ಸಾವಿರ ಎಕರೆಗಳನ್ನೂ ಒಂದು ಲಕ್ಷ ರೂಪಾಯಿಗಳನ್ನೂ ಪುಷ್ಪಾವತಿಯ ಹೆಸರಿಗೇ ಬರೆದಿರುವರಂತೆ."

"ಹೌದು, ಸ್ವಾಮಿಜಿ – ಊರಲ್ಲೆಲ್ಲ ಹಾಗೆ ಸುದ್ದಿಯೂ ಇದೆ."

"ಊರ ಸುದ್ದಿಯ ಮಾತೇಕಯ್ಯ? ಅವಳ ತಂದೆಯೇ ಹೇಳಿದರು ನಮ್ಮ ಹತ್ತಿರ. ಮಗಳಿಗೇಕೆ ಮದುವೆ ಮಾಡಲಿಲ್ಲ – ಎಂದು ನಾವು ಬೇಕೆಂತಲೆ

ಪ್ರಶ್ನಿಸಿದಾಗ ಅವರು – ಮೊದಲಿನಿಂದಲೂ ಪುಷ್ಪಾವತಿಗೆ ತಾವು ಸ್ವಾತಂತ್ರ್ಯ ಕೊಟ್ಟಿರುವುದಾಗಿಯೂ ಅವಳು ತನ್ನಿಷ್ಟ ಬಂದಾಗ ತಾನೊಪ್ಪಿದ ವರನನ್ನು ಮದುವೆಯಾಗುವಳೆಂದೂ ಅದಕ್ಕೆ ತಮ್ಮ ಆಕ್ಷೇಪಣೆಯೇನೂ ಇಲ್ಲವೆಂದೂ ಹೇಳಿದರು. ನಿಜ ಹೇಳೋಣವೇ ಮರಿ? ಆ ಮಾತು ಕೇಳುತ್ತಲೂ ನನಗೂ ಆಸೆಯಾಯಿತು. ಈ ನಿರುಪಯುಕ್ತ ಮಠ, ಈ ದರಿದ್ರ ಕಾವೀಬಟ್ಟೆ ಎಲ್ಲಾ ಬಿಟ್ಟು ಪುಷ್ಪಾವತಿಯನ್ನು ಮದುವೆಯಾಗಿಬಿಡೋಣವೇ, ಸುಲಭವಾಗಿ ಅಂಥ ಭಾರಿ ಆಸ್ತಿಯೂ ಸಿಕ್ಕುತ್ತೆ, ಸುಶಿಕ್ಷಿತ ಸುಂದರ ಹೆಣ್ಣೂ ಸಿಕ್ಕುತ್ತೆ – ಅನ್ನಿಸಿತು...."

ನಾನು ಮುಗುಳ್ನಗೆ ನಗುತ್ತ – "ಅವಳು ನಿಮ್ಮನ್ನು ಮದುವೆಯಾಗಲು ಒಪ್ಪಬಹುದೇ ಸ್ವಾಮಿಜಿ?" ಎಂದು ಕೇಳಿದೆ.

"ಏನಯ್ಯ, ಇಂಥ ಹುಚ್ಚು ಪ್ರಶ್ನೆ ಕೇಳುತ್ತೀಯಲ್ಲಾ? ನಾವೊಂದು ಮಾತು ಆಡಿದರೆ ಸಾಕು, ಆಕೆ ನಮ್ಮನ್ನು ವರಿಸಲು ನಿಂತ ಕಾಲಮೇಲೇ ಒಪ್ಪಿಯಾಳು. ಅವಳ ಮನಸ್ಸು ನಮಗೆ ಗೊತ್ತಾಗಿದೆ. ಸಭೆಯ ದಿನ ನಮ್ಮ ಭಾಷಣ ಕೇಳಿ ಹೇಗೆ ಸಂತೋಷದಿಂದ ಕುಲುಕುಲು ನಗುತ್ತಿದ್ದಳು!"

"ಮದುವೆಯಾಗುವ ಮನಸ್ಸಾಗುತ್ತಿದೆಯೇ ಸ್ವಾಮಿಜಿ?"

"ಹದಿನೈದಾಣೆ ಆಗುತ್ತಿದೆ. ಸುಳ್ಳೇಕೆ ಹೇಳಬೇಕು? ಈ ಕಾಡು ಮಠದಲ್ಲೇನಿದೆಯೆಂದು ಇದಕ್ಕಂಟಿಕೊಂಡಿರಬೇಕು? ಟ್ರೆಜರಿಯ ಗತಿ ಬೇರೆ ಹಾಗಾಯಿತು. ಟ್ರಸ್ಟ್ ಕಮಿಟಿಗೆ ಆ ಸಂಗತಿ ಗೊತ್ತಾದಾಗ ಭೂಕಂಪವೇ ಆದೀತು. ಅದನ್ನೆದುರಿಸಿ ನಿಂತು ಉಳಿದುಕೊಳ್ಳುವುದು ಹೇಗೆ?"

"ಒಡವೆಗಳನ್ನೂ ಮುತ್ತುರತ್ನಗಳನ್ನೂ ತಂದುಕೊಡಬೇಕೆಂದು ಅವರಿಬ್ಬರಿಗೂ ಸ್ಪಷ್ಟವಾಗಿ ತಿಳಿಸಿಬಿಟ್ಟರಾಗದೇ?"

"ಹಾಗೆ ಹೇಳಿ ನಾವಿಲ್ಲಿ ಜೀವವುಳಿಸಿಕೊಂಡಿರಲು ಸಾಧ್ಯವೇ? ಇಲ್ಲಿ ನಮ್ಮ ವಿಶ್ವಾಸಪಾತ್ರನೆಂದರೆ ನೀನೊಬ್ಬನೇ ಒಬ್ಬ. ಕಾರಭಾರಿ ಖರೇಸೆಟ್ಟರ ಕಡೆ ಪುಂಡರ ಗ್ಯಾಂಗೇ ಇದೆ. ಜಡಿಯಪ್ಪ ಬೇರೆ ಈಗಾಗಲೇ ನಮ್ಮ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾನೆ."

"ಹೌದು ಸ್ವಾಮಿಜಿ. ಆ ಬಗ್ಗೆ ನಾನೂ ಕೇಳಿದ್ದೇನೆ. ಜಡಿಯಪ್ಪನೇಕೆ ಸಿಟ್ಟಾಗಿದ್ದಾನೆ ನಿಮ್ಮ ಮೇಲೆ?"

"ಅವನ ಪವಿತ್ರಿಯುದೊಂದು ಸಾಲೆಯಿದೆಯಲ್ಲ–ಅದಕ್ಕೊಂದು ಜಮೀನು ಕೊಟ್ಟುಬಿಡಬೇಕೆಂದು ಆತ ಬಹು ದಿನಗಳಿಂದ ಪೀಡಿಸುತ್ತಿದ್ದಾನೆ. ಮಠದ ಜಮೀನನ್ನು ಕೊಡಲು ಸಾಧ್ಯವೆ? ನಾವು ಆಗುವುದಿಲ್ಲವೆನ್ನುತ್ತಲೂ ಕೋಪಿಸಿಕೊಂಡು ನಮ್ಮ ವಿರುದ್ಧ ಊರಲ್ಲೆಲ್ಲ ಶಂಖವಾದ್ಯ ಮಾಡುತ್ತಿರುವನಂತೆ."

"ಮಹಾದೇವಮ್ಮನೊಂದಿಗೆ ನಿಮಗಿದ್ದ ಸಂಬಂಧದ ವಿಷಯವಾಗಿಯೂ ಊರಲ್ಲಿ ಬೊಬ್ಬಾಟವಿದೆಯಂತೆ."

ಸ್ವಾಮಿಗಳು ಹಣೆ ಬಡಿದುಕೊಳ್ಳುತ್ತ ನುಡಿದರು: "ಆಯ್ತು. ಅದೂ ಗೊತ್ತಾಗಿಹೋಯಿತೇ? ಸರಿ. ನಮ್ಮನ್ನು ಈ ಮಠದಲ್ಲಾಗಲಿ ಈ ಊರಲ್ಲಾಗಲಿ ಇರಗೊಡದಂತೆ ಕಾರಸ್ಥಾನ ನಡೆಸಿರಬೇಕು ಈ ದುಷ್ಟರು. ಪುಷ್ಪಾವತಿಯ ಕೈ ಹಿಡಿದು ಅವಳೊಂದಿಗೆ ಎಲ್ಲಿಗಾದರೂ ಹೊರಟುಬಿಡುವುದೇ ಉತ್ತಮ ಉಪಾಯವೆಂದು ತೋರುತ್ತದೆ."

"ಮದುವೆಯಾಗುವುದೇ ಆದರೆ ಮಹಾದೇವಮ್ಮನನ್ನೇ ಆಗಿಬಿಡಬಹುದಲ್ಲ ಸ್ವಾಮಿಜಿ?" ಎಂದು ಬೇಕೆಂತಲೇ ಕೇಳಿದೆ ನಾನು.

"ಹಾ! ಏನೆಂದೆ? ನಾವು .... ಅವಳನ್ನು? ಅಂಥವಳನ್ನು ? ಸರಿ. ನಾವು ಅವಳನ್ನು ಮದುವೆಯಾಗಲು ತಯಾರಾದರೂ ಅವಳೊಂದು ಆಗಬೇಕಲ್ಲ? ನಮಗೊಂದು ಮಾತನ್ನೂ ತಿಳಿಸದೆ ಶರಣಮ್ಮನಾಗಿ ಹಳ್ಳಿಗೆ ಹೋಗಿಬಿಟ್ಟವಳು ಇನ್ನು...."

ಸ್ವಾಮಿಗಳ ಮಾತು ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲೇ ಯಾರೋ ಮೆಟ್ಟಿಲುಗಳನ್ನೇರಿ ಮೇಲೆ ಬಂದರು. ನಾವಿಬ್ಬರೂ ಅತ್ತ ಹೊರಳಿ ನೋಡಿದೆವು. ವಿಠೋಬಾಚಾರಿ ನಮಸ್ಕಾರ ಹೇಳುತ್ತ ಕೊಟಡಿಯಲ್ಲಿ ಅಡಿಯಿರಿಸಿದ.

"ಬನ್ನಿ, ಬನ್ನಿ, ಸಾಹಿತಿಗಳೇ. ಬಹಳ ದಿವಸವಾಯಿತು ನಿಮ್ಮ ಭೆಟ್ಟಿಯಾಗಿ."

"ಗ್ರಂಥಮಾಲೆಗೆ ಚಂದಾದಾರರನ್ನು ಕೂಡಿಸಲು ಪುಣೆ ಮುಂಬಯಿಗಳ ಕಡೆ ಪ್ರವಾಸ ಹೋಗಿದ್ದೆ, ನಿನ್ನೆ ತಾನೆ ಹಿಂದಿರುಗಿ ಬಂದೆ."

"ಸಾಕಷ್ಟು ಚಂದಾದಾರರು ಸಿಕ್ಕರಷ್ಟೇ?"

"ಅಯ್ಯೋ, ಏನು ಹೇಳುವುದು ಸ್ವಾಮಿಜಿ. ಹೆಣ ಹೊರುವ ಕೆಲಸ ಬೇಕು, ಪ್ರಕಾಶಕನ ಕೆಲಸ ಬೇಡ. ಪ್ರವಾಸಕ್ಕೆ ನೂರಿಪ್ಪತ್ತು ರೂಪಾಯಿ

ಖರ್ಚಾಯಿತು, ಹತ್ತು ಜನ ಚಂದಾದಾರರೂ ಸಿಕ್ಕಲಿಲ್ಲ. ಮೂವತ್ತ ರೂಪಾಯಿಗಳೂ ಹುಟ್ಟಲಿಲ್ಲ. ಬಂದ ಹಾದಿಗೆ ಸುಂಕವಿಲ್ಲವೆಂದು...."

"ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡಬೇಕೆಂಬ ತಿಳುವಳಿಕೆ ನಮ್ಮ ಜನಕ್ಕೆ ಎಂದು ಬರುವುದೋ!"

"ಆ ವಿಷಯವಾಗಿ ತಾವೊಂದು ಲೇಖನ ಬರೆದರೆ ಬಡ ಸಾಹಿತಿಗಳ ಮೇಲೆಲ್ಲ ಬಹಳ ಉಪಕಾರವಾಗುತ್ತೆ ಸ್ವಾಮಿಜಿ."

"ಸರಿ. ಸರಿ. ಬರೆಯೋಣ."

"ಒಂದು ಹೊಸ ಸುದ್ದಿ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು, ಸ್ವಾಮಿಜಿ. ನಮ್ಮೂರಲ್ಲಿ ಹಾಳು ಮಠವೊಂದು ಇದೆಯಲ್ಲಾ – ಅದಕ್ಕೊಬ್ಬ ಸ್ವಾಮಿಯನ್ನು ಕರೆದುತಂದು ಪ್ರತಿಷ್ಠಿಸುವರಂತೆ ಜಡಿಯಪ್ಪನವರು. ವೀರಶೈವ ರೆಲ್ಲಾ ಸಹಕರಿಸಬೇಕೆಂದು ಒಂದು ಹಸ್ತಪ್ರತಿಯನ್ನು ಹೊರಡಿಸಿದ್ದಾರೆ. ನೀವೂ ನೋಡಿರಬಹುದು?"

ಸ್ವಾಮಿಗಳು ದಿಗಿಲುಗೊಂಡು ನುಡಿದರು: "ಇಲ್ಲ. ನಾವಿನ್ನೂ ನೋಡಿಲ್ಲ. ಎಂಥ ಸ್ವಾಮಿಯನ್ನಂತೆ ಕರೆತರುವುದು?"

"ಪಂಚಾಚಾರ್ಯ ಪಂಗಡದ ಸ್ವಾಮಿಗಳಂತೆ."

ಸ್ವಾಮಿಗಳು ಕೊಟಡಿಯಲ್ಲಿ ನಡೆದಾಡುತ್ತ –

"ಕಡೆಗೂ ಕೈಕೊಟ್ಟುಬಿಟ್ಟ ಆ ಜಡಿಯ. ನಮ್ಮ ಪ್ರಭಾವವನ್ನು ತಗ್ಗಿಸಲೆಂದೇ ಆತ ಈ ಪಂಚಾಚಾರಿಯನ್ನು ಕರೆಸುತ್ತಿರುವುದು ಸ್ಪಷ್ಟವಿದೆ. ನಮ್ಮ ಈ ಲಿಂಗಾಯತರಂತೂ ಮೊದಲೇ ಮೂಢರು. ಹೊಸಬರೆಂದರೆ ಕೂಡಲೆ ಮರುಳಾಗುತ್ತಾರೆ. ಅದರಲ್ಲೂ ಆಚಾರೀ ಪಂಥದ ಸ್ವಾಮಿಗಳು ಬಹಳ ಧೂರ್ತರು. ಗಡ್ಡ ಮೀಸೆ, ಕೂದಲು ಕಾಯ್ದು, ತಂತ್ರ ಮಂತ್ರಗಳಿಂದ ಜನರನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ಅಕ್ಕನ ಬಳಗದ ಅಕ್ಕಂದಿರನ್ನೂ ಅವರು ತಮ್ಮ ಪಕ್ಷಕ್ಕೆಳೆದುಕೊಂಡರೆ ಮುಗಿದೆ ಹೋಯಿತು. ಈಗಾಗಲೆ ನಮ್ಮ ವಿರುದ್ಧ ಗುಸುಗುಸ ನಡೆದಿದೆಯಂತೆ ಊರಲ್ಲಿ. ಈ ಗಡ್ಡದ ಸ್ವಾಮಿ ಅದನ್ನಿನ್ನೂ ಹೆಚ್ಚಿಸುವುದು ಖಂಡಿತ. ಅಲ್ಲಮಪ್ರಭು ಸಂಪ್ರದಾಯಸ್ಥರಾದ ನಮ್ಮನ್ನು ನಿರ್ಮೂಲಗೊಳಿಸುವುದೇ ಅವರ ಉದ್ದೇಶ. ಇನ್ನು ಏನುಪಾಯ. ಮುಂ?" ಎಂದು ಮೊದಲಾಗಿ ಬಾಯಿಗೆ ಬಂದುದನ್ನೆಲ್ಲ ಒದರಿಬಿಟ್ಟರು

ಸ್ವಾಮಿಗಳು. ಎದುರಿಗೆ ವಿಠೋಬಾಚಾರಿ ಕುಳಿತಿದ್ದುದೂ ಅವರ ಲಕ್ಷ್ಯದಲ್ಲಿ ದ್ದಂತಿರಲಿಲ್ಲ.

"ನಾವೆಲ್ಲಾ ನಿಮ್ಮ ಬೆಂಬಲಕ್ಕಿರುವಾಗ ಅವರಿಂದೇನಾದೀತು ಬಿಡಿ ಸ್ವಾಮಿಜಿ," ಎಂದು ಆತ ಆರಂಭಿಸುತ್ತಲೂ ಅವರು ಚಕಿತರಾಗಿ ಅವನತ್ತ ತಿರುಗಿ – ಓ, ನೀವೇ? ನೀವಿಲ್ಲಿ ಇರುವುದನ್ನೇ ಮರೆತುಬಿಟ್ಟಿದ್ದೆವು ನಾವು.... ಏನೇನೋ ಆಡಿದೆವು. ಏನು ತಪ್ಪು ತಿಳಿದುಕೊಳ್ಳಬೇಡಿರಪ್ಪ – ಹೂಂ ನೀವು ಬಂದ ಉದ್ದೇಶ ಗೊತ್ತಾಯಿತು. ನಿಮ್ಮ ಗ್ರಂಥಮಾಲೆಗೆ ವಾಗ್ದಾನ ಮಾಡಿ ಬಹಳ ದಿನಗಳಾದರೂ ಇನ್ನೂ ಹಣ ಕೊಡಲಾಗಲಿಲ್ಲ – ನಿಜಕ್ಕೂ ನಮಗೆ ಬಹಳ ವಿಷಾದವಾಗುತ್ತೆ. ಆದರೇನು ಮಾಡುವುದು? ಬಹಳ ತೊಂದರೆ.... ಸದ್ಯ ಒಂದು ಕಾಸೂ ಇಲ್ಲ.... ಇನ್ನೊಂದು ತಿಂಗಳು ಹೋದ ಬಳಿಕ ನೋಡೋಣ...." ಎಂದು ಹೇಳಿದರು.

"ಅರ್ಧ ಹಣವನ್ನಾದರೂ ಈಗ ಕೊಟ್ಟರೆ ತುಂಬಾ ಸಹಾಯವಾಗುತ್ತೆ ಸ್ವಾಮಿಜಿ."

ಟ್ರಂಕು ತೆರೆದು ಸ್ವಾಮಿಗಳು ಅದರಲ್ಲಿದ್ದ ಹತ್ತು ರೂಪಾಯಿಗಳದೊಂದು ನೋಟನ್ನು ಅವರಿಗಿತ್ತರು. "ಈಗ ನಮ್ಮ ಬಳಿ ಇರುವುದೆಂದರೆ ಇಷ್ಟೇ. ನಿಮಗೆ ಆಶ್ಚರ್ಯವಾಗಬಹುದು. ಆದರಿದು ಸತ್ಯವಾದ ಮಾತು."

ವಿಠೋಬಾಚಾರಿ ಜೋಲು ಮೋರೆಯಿಂದ ಹೊರಟುಹೋದ.

ಟ್ರಂಕು ಮುಚ್ಚಿ ಬಂದು, ಸೋಫಾದ ಮೇಲೊರಗಿಕೊಳ್ಳುತ್ತ ಸ್ವಾಮಿಗಳು ಸಂತ್ರಸ್ತ ಸ್ವರದಲ್ಲಿ ಹೇಳಿದರು: "ನಮ್ಮ ಸಂಕಟಗಳೇ ನಮಗೆ ಸಾಕಾಗಿವೆ. ಈ ಸಾಹಿತಿಗಳ ಕಾಟ ಬೇರೆ. ಇವರಿಗೆಲ್ಲಾ ಎಲ್ಲಿಂದ ಹಣ ಕೊಡುವುದು? ನಾವೆಂದರೆ ಅಲ್ಲಾವುದ್ದೀನನ ಮಾಯಾದೀಪ ಅಂತ ತಿಳಿದಿದ್ದಾರೋ ಏನೋ. ಈ ಮಠವನ್ನೇ ಬಿಟ್ಟು ಎಲ್ಲಿಗಾದರೂ ಓಡಿಹೋಗಬೇಕೆನ್ನಿಸುತ್ತಿದೆ."

"ಟ್ರಸ್ಟ್ ಕಮಿಟಿ ಮೀಟಿಂಗ್ ಬೇರೆ ಸಮೀಪಕ್ಕೆ ಬಂದಿದೆಯಲ್ಲ ಸ್ವಾಮಿಜಿ?"

"ಹೂಂ. ಅದೂ ಒಂದು ಬಂದಿದೆ, ನಮ್ಮ ಜೀವ ಹಿಂಡಲು. ನಮ್ಮ ಮಹಾವೈರಿಯಾಗಿ ಕುಳಿತ ಈ ಜಡಿಯಪ್ಪನೇನೂ ನಮ್ಮನ್ನು ಹಾಗೇ ಬಿಡುವುದಿಲ್ಲ. ಮೀಟಿಂಗ್ ಕಾಲಕ್ಕೆ ಗುರುಶಾಂತಪ್ಪನಿಗಂತೂ ಮೊದಲಿನಿಂದಲೂ ನಮ್ಮ ಮೇಲೆ ಕೋಪವಿದ್ದೇ ಇದೆ. ಕಳ್ಳೀಕಾಯಿ ನಗರದಲ್ಲಿ ಅವನಿಗೆ ಹಣ ಕೊಡಲಿಲ್ಲ

ವೆಂದು ಗುಂಡಾಡಯ್ಯನೂ ಕೋಪಿಸಿಕೊಂಡಿದ್ದಾನೆ ನಮ್ಮ ಮೇಲೆ. ಇವರೆಲ್ಲಾ ಒಂದಾಗಬಹುದೋ ಏನೊ. ಖರೇಸೆಟ್ಟಿಯೂ ಅವರ ಜತೆಗೇ ಸೇರಲು ಹೇಸುವವನೇನೂ ಅಲ್ಲ. ಟ್ರೆಜರಿ ತೆಗೆದು ನೋಡಬೇಕೆಂದು ಅವರೆಲ್ಲಾ ಕೇಳಿದರೆ ಏನು ಹೇಳುವುದು ? ಈ ಪ್ರಸಂಗದಿಂದ ಹೇಗೆ ಪಾರಾಗುವುದು ?"

"ದುಂಡಪ್ಪನವರೂ ಅವರ ಜತೆಗೇ ಸೇರಬಹುದೇನು ಸ್ವಾಮಿಜಿ ?"

"ಅವನಿಗೊಂದು ಸ್ವತಂತ್ರ ವ್ಯಕ್ತಿತ್ವವಿದೆಯೇ? ಜಡಿಯಪ್ಪ ಹೇಳಿದ ಹಾಗೆ ಹೂಂಗುಟ್ಟುವ ಸಾಂಬನೀತ. ಈ ಪಂಚಾಚಾರಿ ಸ್ವಾಮಿಯನ್ನೂ ಅವರಿಬ್ಬರೂ ಕೂಡಿಯೆ ಕರೆಸಿರಬೇಕು. ಟ್ರಸ್ಟ್ ಕಮಿಟಿ ಮೀಟಿಂಗಿನ ಕಾಲಕ್ಕೆ ನಮ್ಮನ್ನು ಪೂರಾ ಫಜೀತಿ ಮಾಡಬೇಕೆಂದು ಅವರು ಮಸಲತ್ತು ಮಾಡಿಕೊಂಡಿದ್ದರೆ ದೇವರೇ ಗತಿ!" ಎಂದು ನುಡಿದು ಸ್ವಾಮಿಗಳು ಮೊಳಕಾಲುಗಳಲ್ಲಿ ತಲೆ ಹಾಕಿ ಚಿಂತಿಸುತ್ತ ಕುಳಿತರು.

ಈ ಎಲ್ಲ ಪ್ರಸಂಗಗಳಿಂದ ತಾತ್ಕಾಲಿಕವಾಗಿಯಾದರೂ ತಪ್ಪಿಸಿಕೊಳ್ಳಲು ಪ್ರವಾಸ ಹೊರಡುವುದೊಂದೇ ದಾರಿಯೆಂದು ಶೋಚುತ್ತಲೂ ಸ್ವಾಮಿಗಳು ಅದರ ಸಿದ್ಧತೆಗೆ ತೊಡಗಿದರು.

ಈ ಸಲ ನಮ್ಮ ಮೋಟಾರು ಕಾರು ಮೈಸೂರಿನ ಕಡೆ ಹೊರಟಿತು.

★

ಹಿಂದಿನ ಸಲದ ಪ್ರವಾಸದಂತೆಯೆ ಈ ಸಲವೂ ಅಲ್ಲಲ್ಲಿನ ನಿರುದ್ಯೋಗಿಗಳ ಮೂಲಕ ಸಭೆ ಸಮಾರಂಭಗಳು ನಡೆಯತೊಡಗಿದವು. ಅನಂತರ ಧನಿಕ ಭಕ್ತರ ಸಂಪಾದನೆ, ಪಾದಗಾಣಿಕೆ – ಎಲ್ಲವೂ ಯಥಾಪ್ರಕಾರ.

ಈ ಸಲ ನಡೆದ ಒಂದು ವಿಶೇಷ ಸಂಗತಿಯೆಂದರೆ ಸ್ವಾಮಿಗಳು ನನಗೊಂದು 'ಹೆಣ್ಣು' ನೋಡಿದ್ದುದು !

ಮೈಸೂರಿನಲ್ಲಿ ಕಾರಖಾನೆಯೊಂದರ ಒಡೆಯರ ಮನೆಯಲ್ಲಿ ನಾವು ಬಿಡಾರ ಹೂಡಿದ್ದೆವು. ಅವರ ಮಗಳು ಸುನಂದಾ ಹದಿನೇಳು ಹದಿನೆಂಟು ವರ್ಷದ ಯುವತಿ. ಮಹಾರಾಣೀ ಕಾಲೇಜಿನಲ್ಲಿ ಓದುತ್ತಿದ್ದಳು. ಆಧುನಿಕ ಯುವತಿಯರಿಗೆ ಸಹಜವಾದ ರೀತಿಯಲ್ಲಿ ನನ್ನೊಡನೆಯೂ ಸ್ವಾಮಿಗಳೊಡನೆಯೂ ಸಂಕೋಚವಿಲ್ಲದೆ ಮಾತನಾಡುತ್ತಿದ್ದಳು. ಅಷ್ಟಕ್ಕೇ ನಮ್ಮ ಸ್ವಾಮಿಗಳು ಏನು ಕಲ್ಪನೆ ಮಾಡಿಕೊಂಡು ಬಿಟ್ಟರೋ ಏನೊ, ಅವಳೊಡನೆ ಸ್ವಚ್ಛಂದ

ವಾಗಿ ಹರಟೆ ಹೊಡೆಯಲು ತೊಡಗಿದರು. ಸುನಂದಳದು ವಿನೋದದ ಸ್ವಭಾವ. ಸ್ವಾಮಿಗಳು ಎಂಥ ಹುಚ್ಚುಚ್ಚಾರ ಮಾಡಿದರೂ ನಕ್ಕು ಮರೆತುಬಿಡುತ್ತಿದ್ದಳು.

ಒಂದು ದಿನ ಸ್ವಾಮಿ ನಾನು ಇಬ್ಬರೇ ಒಂಟಿಕೊಪ್ಪಲಿನ ಕಡೆ ವಾಕಿಂಗ್ ಹೋಗಿದ್ದಾಗ ಆ ವಿಷಯವನ್ನೆತ್ತಿ ಸ್ವಾಮಿಗಳೆಂದರು:

“ಸುನಂದಾ ಬಲು ಸುಂದರಿಯಲ್ಲವೇ ಮರಿ?”

“ನಾ ಹೇಗೆ ಹೇಳಲಿ ಸ್ವಾಮಿಜಿ?”

“ಕಣ್ಣಿಲ್ಲದ ಕುರುಡನಂತೆ ಮಾತಾಡುತೀಯಲ್ಲಯ್ಯ! ಎಂಥ ಬೆಪ್ಪುತಕ್ಕಡಿ ನೀನು! ಇಪ್ಪತ್ತೈದು ಇಪ್ಪತ್ತಾರು ವರ್ಷದ ತುಂಬು ಪ್ರಾಯ ನಿನಗೆ. ಹುಡುಗಿಯರನ್ನು ಕಂಡರೆ ಏನೂ ಅನ್ನಿಸುವುದಿಲ್ಲವೆ?”

“ಹಾಗೆ ಕಂಡ ಹುಡುಗಿಯರನ್ನೆಲ್ಲ ಬಯಸುತ್ತ ಹೋದರೆ ಹೇಗೆ ಸ್ವಾಮಿಜಿ?”

“ಎಲಾ ಮರುಳಾ!” ಎಂದು ನುಡಿದು ಸ್ವಾಮಿಗಳು ಗಹಗಹಿಸಿ ನಕ್ಕರು. “ಜೀವನದ ಮಜಾ ಇರುವುದೆಂದರೆ ಅದರಲ್ಲೇ ಇರೋದು. ಅದೆಲ್ಲ ನಿನ್ನಂಥವನಿಗೆ ಹೇಗೆ ಗೊತ್ತಾಗಬೇಕು? ಹೋಗಲಿ. ಸಾಯುವವರೆಗೂ ವಿರಕ್ತನಾಗಿಯೆ ಉಳಿದು ಆಯುಷ್ಯವನ್ನು ವ್ಯರ್ಥಗೊಳಿಸುವ ವಿಚಾರವೇನೂ ಇಲ್ಲವಷ್ಟೇ ನಿನಗೆ?”

“ಆ ಬಗ್ಗೆ ನಾನಿನ್ನೂ ನಿರ್ಧರಿಸಿಲ್ಲ ಸ್ವಾಮಿಜಿ.”

“ನಿರ್ಧರಿಸುವ ಕಾಲ ಬಂದಿಲ್ಲವೇ ಇನ್ನೂ? ನೋಡು. ಸುನಂದಾ ಎಷ್ಟು ಸುಂದರಿ. ಕಾಲೇಜಿನಲ್ಲಿ ಓದುತ್ತಿರುವವಳು – ಬಿ.ಎ. ಪಾಸು ಮಾಡಿದ ಬಳಿಕ ಎಲ್ಲಾದರೂ ಮೇಡಂ ಆಗಿ ಸಂಪಾದನೆ ಮಾಡುವವಳು. ಅವಳ ತಂದೆಯ ಆಸ್ತಿಗೂ ಕೊರತೆಯಿಲ್ಲ. ಸರಿಯಾದ ವರ ಸಿಕ್ಕಿಲ್ಲವಾದ್ದರಿಂದ ಇಷ್ಟು ದಿನ ಮದುವೆ ಮಾಡಿಲ್ಲವಂತೆ. ಗಂಡು ಹುಡುಕಿಕೊಡುವ ಕೆಲಸವನ್ನು ನಮಗೇ ಒಪ್ಪಿಸಿದ್ದಾರೆ ಅವರ ತಂದೆ. ಕೇಳು, ನಾವೊಂದು ಮಾತು ಹೇಳುತ್ತೇವೆ. ಸುನಂದೆಯನ್ನು ನೀನೇ ಮದುವೆಯಾಗಿಬಿಡು. ಬೆಂಗಳೂರಿನಲ್ಲಿ ನಿನಗೊಂದು ಬಂಗಲೆ ಕೊಡಿಸಿಕೊಡುತ್ತೇವೆ. ನಿಮ್ಮ ಹೆಸರಿನಲ್ಲಿ ಸ್ವಲ್ಪ ಹಣವನ್ನೂ ಬ್ಯಾಂಕಿನಲ್ಲಿಡುತ್ತೇವೆ. ನೀವಿಬ್ಬರೂ ಸುಖವಾಗಿ ಸಂಸಾರ ಮಾಡುವಿರಂತೆ – ನಾವು ಆಗಾಗ ಬಂದು ಒಂದೆಂಟು ದಿನ ನಿಮ್ಮಲ್ಲಿ ಇದ್ದು ಹೋಗುತ್ತೇವೆ. ಅಷ್ಟೆ....”

"ಒಂದೆಂಟು ದಿನವಾದರೆ ಸಾಕೇ ಸ್ವಾಮಿಜೀ?" ಎಂದು ನಾನು ನಗುತ್ತ ಕೇಳಿದೆ. ಸ್ವಾಮಿಗಳ ಮುಖದ ಮೇಲೆ ತಣ್ಣೀರು ಚೆಲ್ಲಿದಂತಾಯಿತು.

ಆಮೇಲೆ ಅವರೆಂದೂ ನನ್ನ ಹತ್ತಿರ ಮದುವೆಯ ಮಾತು ಎತ್ತಲಿಲ್ಲ. ಹೆಣ್ಣು – ಗಂಡುಗಳ ಏಕೀಕರಣದ ಕಾರ್ಯವನ್ನು ಮಾತ್ರ ಸಾಗಿಸತೊಡಗಿದರು. ಆದೂ ಒಂದು ಲಾಭದಾಯಕ ಉದ್ಯೋಗವೇ ಆಯಿತು ಅವರ ಪಾಲಿಗೆ.

★

ಮೈಸೂರು, ಬೆಂಗಳೂರು, ತುಮಕೂರು, ತಿಪಟೂರು, ಮಂಡ್ಯ, ಕೋಲಾರ, ಅರಸೀಕೆರೆ....ಎಂಟು ತಿಂಗಳವರೆಗೆ ಮೈಸೂರು ಸಂಸ್ಥಾನದಲ್ಲೆಲ್ಲ ಸುತ್ತಿ, ಸಾವಿರಾರು ಜನ ಭಕ್ತರನ್ನು ಸಂಪಾದಿಸಿ, ಎಲ್ಲರನ್ನೂ ಕಳೆದುಕೊಂಡು, ಎಲ್ಲ ಕಡೆಗೂ ಹೆಸರು ಕೆಡಿಸಿಕೊಂಡು ಸ್ವಾಮಿಗಳ ಸವಾರಿ ಧರ್ಮಪುರಕ್ಕೆ ಆಗಮಿಸಿ ಖಡೇರುದ್ರಪ್ಪನಲ್ಲಿ ಬೀಡು ಬಿಟ್ಟಿತು.

ನಾವು ಪ್ರವಾಸದಲ್ಲಿದ್ದಾಗ ಮಠದ ಟ್ರಸ್ಟ್ ಕಮಿಟಿ ಸಭೆ ಸೇರಿ ಲೆಕ್ಕ ಪತ್ರಗಳ ಬಗೆಗೆ ಅಸಮಾಧಾನ ವ್ಯಕ್ತಗೊಳಿಸುವ ನಿರ್ಣಯ ಸ್ವೀಕರಿಸಿದ್ದಿತಂತೆ. 'ವೀರಶೈವಾವತಾರ', 'ಲಿಂಗವೀರ', 'ಏಕಕನ್ನಡ' ಮೊದಲಾದ ಪತ್ರಿಕೆಗಳಲ್ಲೆಲ್ಲ ಆ ವಿಷಯ ಪ್ರಕಟವಾಗಿ ಬಂದಿದ್ದಿತು. ಗುಂಡಾಡಯ್ಯ ಪ್ರತಿವಾರವೂ ಪಂಚಾಚಾರ್ಯ ಸ್ವಾಮಿಯನ್ನು ಪ್ರಶಂಸಿಸಿ ಲೇಖನ ಬರೆಯತೊಡಗಿದ್ದ.

ಪ್ರವಾಸದಿಂದ ತಕ್ಷಣ ಹೊರಟುಬರಬೇಕೆಂದು ಟ್ರಸ್ಟ್ ಕಮಿಟಿಯ ಪರವಾಗಿ ಜಡಿಯಪ್ಪನಿಂದ ಪತ್ರ ಬಂದಿದ್ದಿತಾದರೂ ವಸ್ತು ಒಡವೆಗಳ ದುರ್ಗತಿಯನ್ನು ನೆನೆದುಕೊಂಡು ಸ್ವಾಮಿಗಳು ಜರತಾರಿಗೆ ಹೊರಡುವ ದಿನವನ್ನು ಮುಂದೂಡುತ್ತ ಬಂದಿದ್ದರು.

ನಾವು ಧರ್ಮಪುರಕ್ಕೆ ಬಂದ ತರುವಾಯ ಕೈಸೇರಿದ 'ಲಿಂಗವೀರ'ದ ಹೊಸ ಸಂಚಿಕೆಯಲ್ಲಿನ ವಾರ್ತೆಯೊಂದನ್ನು ನೋಡುತ್ತಲೂ ಸ್ವಾಮಿಗಳು ತರಾತುರಿಯಿಂದ ಜರತಾರಿಗೆ ಹೊರಟು ನಿಂತರು. ಆ ವಾರ್ತೆ ಹೀಗಿತ್ತು :

"ಜರತಾರಿ ಜಗದ್ಗುರು ಮಠದಲ್ಲಿ ಇಪ್ಪತ್ತೈದು ಸಹಸ್ರ ರೂಪಾಯಿ ಅಫರಾತಫರು ಆಗಿದೆಯೆಂದೂ, ಈ ಬಗ್ಗೆ ಟ್ರಸ್ಟ್ ಕಮಿಟಿ ಸಭೆ ಸೇರಿದಾಗ ಅದಕ್ಕೆ ಉಪಸ್ಥಿತರಾಗಬಾರದೆಂದೇ ಸ್ವಾಮಿಗಳು ಮೈಸೂರಿಗೆ ಪ್ರವಾಸ ಹೊರಟು ತಪ್ಪಿಸಿಕೊಂಡರೆಂದೂ ವಿಶ್ವಸನೀಯವಾಗಿ ತಿಳಿದುಬರುತ್ತದೆ. ಇದೀಗ ಟ್ರಸ್ಟ್

ಕಮಿಟಿಯವರು ಸ್ವಾಮಿಗಳಿಗೊಂದು ಅಲ್ಟಿಮೇಟಂ ಕೊಟ್ಟಿದ್ದು ಸ್ವಾಮಿಗಳು ಒಂದು ವಾರದೊಳಗಾಗಿ ಮಠಕ್ಕೆ ಬರದಿದ್ದಲ್ಲಿ ಅವರನ್ನು ಅಧಿಕಾರದಿಂದ ಕಿತ್ತೊಗೆಯಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ."

"ಶಾಸ್ತ್ರಿ ನಮ್ಮ ಬಗ್ಗೆ ಹೀಗೆಲ್ಲಾ ಬರೆಯಬಹುದೆಂದು ನಾವು ಕನಸು ಮನಸಿನಲ್ಲೂ ಭಾವಿಸಿರಲಿಲ್ಲ. ಎಂಥ ಕೃತಘ್ನ! ಹಾಲೆರೆದವರ ಕೈ ಕಚ್ಚುವ ಹಾವು....ಕಾರ್ಕೋಟಕ...." ಎಂದೆಲ್ಲ ಸ್ವಾಮಿಗಳು ಕೂಗಾಡಿ, ಕೋಪವನ್ನು ಕಾರಿಕೊಂಡರು.

"ನರಿರಾಯ ಮೊದಲಾದವರನ್ನು ನಾವು ಹತ್ತಿರ ಸೇರಿಸಿದ್ದೇ ಅವನಿಗೆ ಸರಿಬರಲಿಲ್ಲ. ಎಲ್ಲಾ ಹಣವನ್ನೂ ಅವನಿಗೇ ಕೊಡುತ್ತ ಬಂದಿದ್ದರೆ ನಾವು ಹೇಳಿದ ಹಾಗೆ ಕೇಳಿಕೊಂಡು ನಾಯಿಯ ಹಾಗೆ ಬಿದ್ದಿರುತ್ತಿದ್ದ. ಈಗ...."

"ಇನ್ನೂ ಏನೇನು ಬರೆಯುವನೋ ಯಾರಿಗೆ ಗೊತ್ತು!"

"ಬರೆಯಲಿ, ಬರೆಯಲಿ. ಏನು ಬೇಕಾದ್ದು ಬರೆಯಲಿ. ತನ್ನ ಪತ್ರಿಕೆಯ ಎಂಟು ಪುಟಗಳಲ್ಲೆಲ್ಲಾ ನಮ್ಮ ವಿಷಯವನ್ನೇ ತುಂಬಿಬಿಡಲಿ. ವಾರ ವಾರವೂ ನಮ್ಮ ಚರಿತ್ರೆಯನ್ನೇ ಪ್ರಕಟಿಸಲಿ. ನಾವು ಪಟಿಂಗರು, ವ್ಯಭಿಚಾರಿಗಳು, ಸ್ತ್ರೀಲಂಪಟರು, ಸೆರೆಗುಡುಕರು, ಆಷಾಢಭೂತಿಗಳು – ಇತ್ಯಾದಿ ಇತ್ಯಾದಿ ಎಲ್ಲಾ ಬರೆಯಲಿ. ಅವನೂ ಬರೆಯಲಿ, ಆ ಜನಪದದ ಹರಿಹರನೂ ಬರೆಯಲಿ, ಗುಂಡಾಡಯ್ಯನೂ ಬರೆಯಲಿ, ಗೊಬ್ಬಣ್ಣನೂ ಬರೆಯಲಿ, ನರಿರಾಯನೂ ಬರೆಯಲಿ, ಆ ಕುಟ್ಟೋಶನಿ ಬೇಕಿದ್ದರೆ ಹತ್ತು ಕಾದಂಬರಿಗಳನ್ನೇ ಬರೆಯಲಿ. ಇವರ ಬರವಣಿಗೆಯಿಂದ ನಮಗೇನಾಗ ಬೇಕಾಗಿದೆ? ನಾವು ಎಲ್ಲದಕ್ಕೂ ಎದುರಾಗಿಯೆ ನಿಂತಿದ್ದೇವೆ. ವಿರೋಧಿಗಳ ಸೈನ್ಯವೇ ನುಗ್ಗಿ ಬಂದರೂ ಹಿಂಜರಿಯುವುದಿಲ್ಲ....ಬರಲಿ....ಬರಲಿ...." ಎಂದು ಒಂದು ನಾಟಕೀಯ ಭಾಷಣವನ್ನೇ ಜಡಿದರು ಸ್ವಾಮಿಗಳು.

★

ನಾವು ಮಠಕ್ಕೆ ಹಿಂದಿರುಗಿ ಬಂದು ಒಂದೆರಡು ದಿನ ವಿರಮಿಸಿಕೊಳ್ಳು ವುದರೊಳಗಾಗಿ ಹರಿಹರ, ಕುಟ್ಟೋಶನಿ ಇಬ್ಬರೂ ಜರತಾರಿ ನಗರಕ್ಕೆ ಆಗ ಮಿಸಿದ ವಾರ್ತೆ ಬಂದಿತು.

ಚಳಿಯಿಂದ ನಡುಗುತ್ತಲಿದ್ದವನ ಮೇಲೆ ತಣ್ಣೀರನ್ನೆರಚಿದಂತಾಯಿತು. "ಇವರಿಬ್ಬರೂ ಇಲ್ಲಿಗೇತಕ್ಕೆ ಬಂದರೋ?" ಎಂದು ಸ್ವಾಮಿಗಳು ದಿಗಿಲುಗೊಂಡರು. ಅವರಿಗೆ ಊಟ, ತಿಂಡಿ ಯಾವುದೂ ರುಚಿಸದಂತಾಯಿತು.

ಒಂದು ದಿನ ಬೆಳಗ್ಗೆ, ಸ್ವಾಮಿಗಳು ಪೂಜೆ ಮಾಡುತ್ತಿದ್ದ ವೇಳೆಯಲ್ಲಿ ಹರಿಹರ, ಕುಟ್ಟೋಶನಿ, ಮುಕ್ಕಣ್ಣ ಮೂವರೂ ಮಠಕ್ಕೆ ಬಂದರು.

"ಸ್ವಾಮಿಗಳಿದ್ದಾರೆಯೆ?" ಎಂದು ಕೇಳಿದ ಮುಕ್ಕಣ್ಣ.

"ಪೂಜಾಗೃಹದಲ್ಲಿದ್ದಾರೆ. ಬನ್ನಿ," ಎಂದು ಹೇಳಿ ಅವರನ್ನು ಮಹಡಿಯ ಮೇಲಿನ ಕೊಟಡಿಗೆ ಕರೆತಂದು ಕೂಡ್ರಿಸಿದೆ.

ದಿನವೂ ಐದು ನಿಮಿಷಗಳೊಳಗಾಗಿ ಪೂಜೆ ಮುಗಿಸಿಕೊಂಡು ಹೊರಡುತ್ತಿದ್ದ ಸ್ವಾಮಿಗಳು ಅಂದು ಅರ್ಧತಾಸು ಕಳೆದರೂ ಪೂಜಾಗೃಹದಿಂದ ಬರಲಿಲ್ಲ. ಅವರು ಬಹಳ ಗಾಬರಿಗೊಂಡಿದ್ದುದಂತೂ ಸ್ಪಷ್ಟವಾಗಿತ್ತು. ಬಂದವರನ್ನು ಭೆಟ್ಟಿಯಾಗದೆ ತಪ್ಪಿಸಿಕೊಳ್ಳುವಂತೆಯೂ ಇರಲಿಲ್ಲ.

"ಬನ್ನಿ ಸ್ವಾಮಿಜಿ. ಅವರು ಕಾಯುತ್ತಿದ್ದಾರೆ."

ಕೈಯಲ್ಲಿದ್ದ ಗಂಟೆಯನ್ನು ಭಯಂಕರವಾಗಿ ಬಾರಿಸುತ್ತ ಸ್ವಾಮಿಗಳೆಂದರು :

"ಆ ಶನಿಗಳೆಲ್ಲಾ ಯಾಕೆ ವಕ್ರಿಸಿದವೊ ಶಿವನೇ ಬಲ್ಲ. ನಮಗೇನು ಕಾದಿದೆ ಮರಿ?"

ಗಾಬರಿಯಾಗಬೇಡಿ ಸ್ವಾಮಿಜಿ. ಅಂಥದೇನೂ ಇರಲಿಕ್ಕಿಲ್ಲ ಸುಮ್ಮನೆ ದರ್ಶನಕ್ಕಾಗಿ ಬಂದಿದ್ದರೂ ಬಂದಿದ್ದಾರು, ಬನ್ನಿ. ತಡಮಾಡಬಾರದು."

"ಆ ಮುಕ್ಕಣ್ಣನಂತೂ ಎಂದೂ ಮಠಕ್ಕೆ ಬಂದವನಲ್ಲ, ನಮ್ಮ ದರ್ಶನ ಪಡೆದವನಲ್ಲ. ಇಂದೇ ಯಾಕೆ ಬಂದಿದ್ದಾನು? ಏನೋ ಇರಲೇಬೇಕು."

"ಹರಿಹರ ಕುಟ್ಟೋಶನಿಗಳ ಜತೆ ಸಹಜವಾಗಿ ಬಂದಿದ್ದಾನು, ಬನ್ನಿ. ಬನ್ನಿ."

ಮುಕ್ಕಾಲು ಗಂಟೆಯ ಕಾಲ ಪೂಜಾಗೃಹದಲ್ಲಿಯೇ ಕುಳಿತು ಸ್ವಾಮಿಗಳ ದೇಹವೆಲ್ಲ ಬೆವತುಕೊಂಡಿತ್ತು. ಎಡಗೈಯಲ್ಲಿದ್ದ ಲಿಂಗವನ್ನು ಅವಸರದಿಂದ ಕರಡಿಗೆಗೆ ಸೇರಿಸಿ ಅವರು ಎದ್ದು ಬಂದರು. ಮೆಟ್ಟಲುಗಳನ್ನೇರಬೇಕಾದರೆ ಅವರ ಕಾಲುಗಳೆರಡೂ ಕಂಪಿಸುತ್ತಿದ್ದುವು.

"ನಮಸ್ಕಾರ ಗುರುಗಳೆ...."

"ನಮಸ್ಕಾರ...." "ನಮಸ್ಕಾರ...."

ಮುಖದ ಮೇಲಿನ ಗಾಬರಿಯನ್ನು ಹತ್ತಿಕ್ಕುವ ವ್ಯರ್ಥ ಪ್ರಯತ್ನ ಮಾಡುತ್ತ ಸ್ವಾಮಿಗಳು ವಿರಾಮ ಕುರ್ಚಿಯ ಮೇಲೆ ಶರೀರವನ್ನು ಚೆಲ್ಲಿದರು.

"ಸೌಖ್ಯವೇ ಸ್ವಾಮಿಜಿ?" ಎಂದ ಹರಿಹರ.

"ಏನು ಸೌಖ್ಯವೋ ಬಿಡು ಪುಣ್ಯಾತ್ಮ – ಸಾಕುಸಾಕಾಗಿ ಹೋಯಿತು ಈ ಮಠಗಳ ಸಹವಾಸ. ಇವರು ಯಾರು? ಮುಕ್ಕಣ್ಣ ಏನು?"

"ಹೌದು. ಮುಕ್ಕಣ್ಣ – ಹೆಸರಿಗೆ ಮಾತ್ರ. ಇರುವುದು ಎರಡೇ ಕಣ್ಣು," ಎಂದು ನುಡಿದು ನಕ್ಕ. ಕುಟ್ಟೋಶನಿ. ಸ್ವಾಮಿಗಳೂ ನಗಲು ಯತ್ನಿಸಿ ವಿಫಲರಾದರು.

"ಏನು ಬಂದಿದ್ದಿರಿ?"

"ತಮ್ಮ ಹತ್ತಿರ ಕೆಲವೊಂದು ವಿಷಯ ಮಾತನಾಡಲು ಬಂದಿದ್ದೆವು."

"ಏನು ಮಾತು?"

"ನಂಬರ್ ಒಂದು:" ಎಂದು ಆರಂಭಿಸಿ ಕುಟ್ಟೋಶನಿ ಹೇಳತೊಡಗಿದ: "ಕುಟ್ಟಪ್ಪಾ ಫಂಡಿನ ವಿಚಾರ. ಅದಕ್ಕೆ ತಾವು ಇಪ್ಪತ್ತು ಸಾವಿರದವರೆಗೂ ಕೂಡಿಸಿರಬೇಕು. ಅದನ್ನೆಲ್ಲ ಇನ್ನೂ ಅವರಿಗೇಕೆ ಕಳಿಸಲಿಲ್ಲವೆಂದು ಕೇಳಬೇಕಾಗಿದೆ. ಕುಟ್ಟಪ್ಪನವರು ನಿಮಗೆ ಎಂಟು ಹತ್ತು ಪತ್ರ ಬರೆದರೂ ಉತ್ತರ ಕೊಡದೆ ಸುಮ್ಮನಿದ್ದುಬಿಟ್ಟಿದ್ದೀರಂತೆ. ಆ ಬಗ್ಗೆ ಅವರಿಂದ ನನಗೆ ಕೇಬಲ್ ಗ್ರಾಂ ಬಂದಿದೆ. ನಿಮ್ಮನ್ನು ನಂಬಿಕೊಂಡು ಅವರು ಇಂಗ್ಲೆಂಡಿಗೆ ಹೋಗಿ ಕುಳಿತದ್ದಾಯಿತು. ಅಲ್ಲಿ ಊಟಕ್ಕೂ ಸಹ ಹಣವಿಲ್ಲವಾಗಿದೆಯಂತೆ. ದಿನಕ್ಕೊಂದೇ ಒಂದು ಕಪ್ ಹಾಲಿನ ಮೇಲೆ ಹೇಗೋ ಕಾಲ ತಳ್ಳುತ್ತಿರುವರಂತೆ. ಅವರಿಗಾಗಿ ಇಷ್ಟೊಂದು ಹಣ ಕೂಡಿಸಿದರೂ ಕಳಿಸದೆ ಸುಮ್ಮನಿರುವಿರೇಕೆ?"

ಸ್ವಾಮಿಗಳು ನಿಧಾನವಾಗಿ ಮುಖವೆತ್ತಿ – "ಅವನ ಹೆಸರಲ್ಲಿ ನಾವು ಇಪ್ಪತ್ತು ಸಾವಿರ ಕೂಡಿಸಿರುವೆವೆಂದು ಯಾರು ಹೇಳಿದರು ನಿಮಗೆ?" ಎಂದರು.

"ಯಾರೋ ಹೇಳಿದರು. ಅದೆಲ್ಲಾ ಅನಗತ್ಯ. ಅಂತೂ ಇಪ್ಪತ್ತು ಸಾವಿರಕ್ಕೂ ಮಿಕ್ಕಿ ಹಣ ಕೂಡಿದೆಯೆಂಬುದು ಮಾತ್ರ ಸತ್ಯ ಸಂಗತಿ. ಹೌದೋ ಅಲ್ಲವೋ?"

“ಸುಳ್ಳು, ಕುಟ್ಟೋಶನಿ, ಪೂರಾ ಸುಳ್ಳು. ನಮ್ಮನ್ನು ಕಂಡರಾಗದವರಾರೋ ನಿಮಗೆ ಈ ರೀತಿ ಹೇಳಿರಲು ಸಾಕು.”

“ನಾನು ಅಂಥಿಂಥವರ ಮಾತು ನಂಬುವುದಿಲ್ಲ. ನಿಮಗೆ ಹಣ ಕೊಟ್ಟ ದಾನಿಗಳೇ ಸ್ವತಃ ನನ್ನ ಹತ್ತಿರ ಹೇಳಿದ್ದಾರೆ.”

“ಹಾ?”

“ನೀವು ಪ್ರವಾಸ ಮಾಡಿದಲ್ಲೆಲ್ಲ ನಾನೂ ಪ್ರವಾಸ ಮಾಡಿ ಬಂದಿದ್ದೇನೆ. ನಿಮಗೆ ಹಣ ಕೊಟ್ಟವರ ಪೂರ್ಣಯಾದಿಯೇ ನನ್ನ ಹತ್ತಿರವಿದೆ. ಓದಿ ತೋರಿಸಲೇ?” ಎಂದು ನುಡಿದು ಕುಟ್ಟೋಶನಿ ತನ್ನ ಬಗಲು ಚೀಲದಿಂದ ಚಿಕ್ಕ ವಹಿಯೊಂದನ್ನು ಹೊರದೆಗೆದು ಮೂವತ್ತು ನಲವತ್ತು ಜನರ ಹೆಸರು ವಿಳಾಸಗಳನ್ನೂ ಅವರು ಕೊಟ್ಟ ಹಣದ ಅಂಕಿಗಳನ್ನೂ ಭರಭರನೆ ಓದಿದ. ಸ್ವಾಮಿಗಳು ದಂಗುಬಡಿದವರಂತೆ ಅವನನ್ನೇ ಮಿಕಿ ಮಿಕಿ ನೋಡುತ್ತ ಕುಳಿತಿದ್ದವರು ಆತ ಓದಿ ಮುಗಿಸುತ್ತಲೂ ಹೇಳಿದರು:

“ಈ ಯಾದಿಯೆಲ್ಲಾ ಸುಳ್ಳಿದೆ ಕುಟ್ಟೋಶನಿ. ಇವರಲ್ಲಿ ಒಬ್ಬರಿಂದಲೂ ನಮಗೆ ಹಣ ಬಂದಿಲ್ಲ.”

“ಸುಳ್ಳುಗಿಳ್ಳು ಅಂತ ಹಾರಿಸಿಬಿಟ್ಟು ಈ ಇಪ್ಪತ್ತು ಸಾವಿರವನ್ನು ನೀವು ದಕ್ಕಿಸಿಕೊಳ್ಳಲಾರಿರಿ ಸ್ವಾಮಿಜಿ. ನಮ್ಮ ವೆಚ್ಚದಿಂದ ನಾವು ನಿಮ್ಮನ್ನು ಈ ದಾನಿಗಳೆಲ್ಲರ ಹತ್ತಿರ ಕರೆದುಕೊಂಡು ಹೋಗಲು ಸಿದ್ಧರಿದ್ದೇವೆ. ಅವರಿಂದ ಹಣ ಬಂದಿಲ್ಲವೆಂದು ಅವರೆದುರಿಗೇ ಹೇಳಬಲ್ಲಿರಾ?” ಎಂದು ಹರಿಹರ ಸವಾಲು ಹಾಕಿದ.

“ಅಯ್ಯೋ.... ಹಿಂದೊಮ್ಮೆ ನಮ್ಮನ್ನು ಪೀಡಿಸಿದ್ದು ಸಾಕಾಗಲಿಲ್ಲವೇನಯ್ಯಾ ನಿನಗೆ? ಈಗಲೂ ಜೀವ ಹಿಂಡಲು ಬಂದಿಯಾ!” ಎಂದು ಸ್ವಾಮಿ ಗೋಗರೆಯತೊಡಗಿದರು.

“ಈ ಇಪ್ಪತ್ತು ಸಾವಿರವನ್ನು ನೀವು ಯಾರಿಗೆ ಕೊಟ್ಟಿರುವಿರೆಂಬುದು ಸಹ ನನಗೆ ಗೊತ್ತಿದೆ,” ಎಂದ ಕುಟ್ಟೋಶನಿ.

“ಯಾರಿಗೆ ಮಹಾರಾಯ!”

“ಇನ್ನಾರಿಗೆ? ನಿಮ್ಮ ತಮ್ಮ ಚಿಕ್ಕವೀರಯ್ಯನಿಗೇ.”

“ಸುಳ್ಳು, ಸುಳ್ಳು. ಪೂರಾ ಸುಳ್ಳು. ಯಾರು ಹೇಳಿದರು ನಿಮಗೆ?”

"ನಿಮ್ಮ ಸೋದರ ರತ್ನ ಸಂಗಯ್ಯ...." ಎಂದು ನುಡಿದು ಕುಟ್ಬೋಶನಿ ಖಿ ಖಿ ಖಿ ಎಂದು ನಗತೊಡಗಿದ.

"ಎಲಾ ಚಾಂಡಾಲಾ! ಅವನು ಹೇಳಿದನೇ...."

"ಹೇಳದೆ ಬಿಟ್ಟಾನೇನು? ಅವನಿಗೆ ಒಂದೇ ಒಂದು ಸಾವಿರ ಕೊಟ್ಟು ಚಿಕ್ಕವೀರಯ್ಯನಿಗೇ ಉಳಿದದ್ದನ್ನೆಲ್ಲಾ ಕೊಟ್ಟದ್ದು ಅನ್ಯಾಯವಾಗಲಿಲ್ಲವೇ? ತಮ್ಮಂದಿರೆಂದ ಬಳಿಕ ಇಬ್ಬರ ಮೇಲೂ ಒಂದೇ ತರದ ಮಮತೆಯಿರಬೇಕು...."

ಎರಡೂ ಕೈಗಳಲ್ಲಿ ಮುಖ ಮುಚ್ಚಿಕೊಂಡು ಕುಳಿತಿದ್ದರು ಸ್ವಾಮಿಗಳು. ಕುಟ್ಬೋಶನಿ ಮತ್ತೆ ಹೇಳತೊಡಗಿದ:

"ಇನ್ನೊಂದು ವಾರದೊಳಗಾಗಿ ಕುಟ್ಟಪ್ಪನವರಿಗೆ ಇಪ್ಪತ್ತು ಸಾವಿರವೂ ಮುಟ್ಟಬೇಕು ಸ್ವಾಮಿಜಿ. ಹಣವನ್ನು ಬ್ಯಾಂಕಿಗೆ ಕಟ್ಟಿ ಅದರ ರಸೀದಿಯನ್ನು ನನಗೆ ಕಳಿಸಿರಿ – ಜನಪದ ಪತ್ರಿಕೆಯ ವಿಳಾಸಕ್ಕೆ."

"ಎಲ್ಲಿಂದ ಕಳಿಸುವುದು ಕುಟ್ಬೋಶನಿ?"

"ಚೆನ್ನವೀರಯ್ಯನಿಂದ ತರಿಸಿಕೊಳ್ಳುವುದು. ಇನ್ನೆಲ್ಲಿಂದ?"

"ಸರಿ. ನಂಬರ್ ಎರಡು: ನಿಮಗೊಂದು ಪ್ರಶ್ನೆ ಕೇಳುತ್ತೇನೆ ಸ್ವಾಮಿಜಿ. ಸರಿಯಾಗಿ ಉತ್ತರಿಸಬೇಕು," ಎಂದ ಹರಿಹರ.

"ಮತ್ತೇನು ಪ್ರಶ್ನೆ ಸೂರಾಯ?"

"ನಿಮ್ಮ ಬಗ್ಗೆ, ನಿಮ್ಮ ಮಠದ ಬಗ್ಗೆ ಬಗೆಬಗೆಯ ಸುದ್ದಿ ಹರಡುತ್ತಿವೆ. ಕೆಲವು ಪತ್ರಿಕೆಗಳು ಆ ವಿಷಯ ಪ್ರಕಟಿಸಿಯೂ ಬಿಟ್ಟವೆ. ನಾನಿನ್ನೂ ಏನನ್ನೂ ಬರೆದಿಲ್ಲ. ಬರೆಯುವುದಕ್ಕೆ ಮೊದಲು ನಿಮ್ಮನ್ನು ಮುಖತಃ ಕಂಡು ಕೆಲವೊಂದು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಮಾಡಿಕೊಳ್ಳುವುದು ಒಳ್ಳೆಯದೆಂದು ತಿಳಿದು ಬಂದಿದ್ದೇನೆ. ಕೇಳಲಾ?"

"ಬೇಗ ಮುಗಿಸು."

"ಇಷ್ಟು ಅವಸರ ಮಾಡಿದರೆ ಹೇಗೆ ಸ್ವಾಮಿಜಿ? ನಿಮ್ಮಂಥ ದೊಡ್ಡ ಜಗದ್ಗುರುಗಳು ಈ ರೀತಿ ತಾಳ್ಮೆಗೆಡಬಾರದು. ಹೂಂ. ನಾನು ಕೇಳುವುದೇನೆಂದರೆ – ನೀವು ಮಠವನ್ನು ಬಿಟ್ಟು ಆ ಊರು ಈ ಊರು ತಿರುಗುತ್ತ ಅಲ್ಲಿ ಇಲ್ಲಿ ಭಾಷಣ ಹೊಡೆಯುತ್ತಿದ್ದೀರಲ್ಲಾ – ಅದೆಲ್ಲದರ ಉದ್ದೇಶವೇನು?"

ಸ್ವಾಮಿಗಳು ಕುರ್ಚಿಯಲ್ಲಿ ಸೆಟೆದು ಕುಳಿತುಕೊಂಡು ಹೇಳಿದರು: "ಕನ್ನಡ ಜನಾಂಗದ ಉದ್ಧಾರ. . ಕರ್ನಾಟಕದ ಏಕೀಕರಣ. . ಸರ್ವಧರ್ಮ ಸಮನ್ವಯ.."

"ಉದ್ದೇಶಗಳೇನೋ ಒಳ್ಳೆಯವೆ-- ನಮ್ಮ ಉದ್ದೇಶಗಳೂ ಅವೇ ಆಗಿವೆ. ನಿಜವಾಗಿ ನಮಗೂ ನಿಮಗೂ ಅಂಥ ಭಿನ್ನಾಭಿಪ್ರಾಯವೇನೂ ಇರಲಾರದು. ನಮ್ಮ ವಿಚಾರ ನಿಮ್ಮ ವಿಚಾರ ಎಲ್ಲಾ ಒಂದೇ...."

ಸಂತೋಷದಿಂದ ಸ್ವಾಮಿಗಳ ಮುಖವರಳಿತು. ಅವರೆಂದರು: "ನಾವೂ ಅದನ್ನೇ ಹೇಳುತ್ತಿದ್ದೇವೆ ಹರಿಹರ. ನಾವೆಲ್ಲಾ ಒಂದೇ ವಿಚಾರದವರು. ಎಲ್ಲರೂ ಕೂಡಿಯೇ ಕೆಲಸ ಮಾಡಬೇಕು."

"ಆ ಯೋಚನೆಯಿಟ್ಟುಕೊಂಡೇ ನಾವು ಮೂವರೂ ಇಲ್ಲಿಗೆ ಬಂದದ್ದು. ನೋಡಲು ಕರ್ನಾಟಕ ಏಕೀಕರಣದ ವಿಚಾರ ತೆಗೆದುಕೊಳ್ಳೋಣ. ನಮಗೊಂದು ಸ್ವತಂತ್ರ ಪ್ರಾಂತ ಅವಶ್ಯವೆಂದೇನೋ ಎಲ್ಲರೂ ಭಾಷಣ ಮಾಡುವವರೇ. ಕೇಂದ್ರ ಸರಕಾರಕ್ಕೆ ಮಾತ್ರ ನಮಗೆ ಪ್ರಾಂತ ಕೊಡಲು ಮನಸ್ಸಿಲ್ಲ. ಇಂಥ ಸಂದರ್ಭದಲ್ಲಿ ನಾವಾಗಲಿ ನೀವಾಗಲಿ ಬರೀ ಭಾಷಣ ಮಾಡುತ್ತ ತಿರುಗಿದರೇನು ಪ್ರಯೋಜನ?"

"ಮತ್ತೇನು ಮಾಡಬೇಕು ಹರಿಹರ?"

"ಪ್ರತ್ಯಕ್ಷ ಕೃತಿಗಿಳಿಯಬೇಕು. ಆ ಕಾಲವಿಂದು ಬಂದಿದೆ. ಸಾಮೂಹಿಕ ಚಳವಳಿಯೋ ಸತ್ಯಾಗ್ರಹವೋ ಆಗದಿದ್ದರೆ ಪ್ರಾಂತ ಸಿಕ್ಕಲಾರದು. ಅಂತೆಯೆ, ಏಕೀಕರಣ ಏಕೀಕರಣ ಎಂದು ಭಾಷಣ ಬಿಗಿಯುವವರೆಲ್ಲಾ ಇಂದು ಸತ್ಯಾಗ್ರಹ ಮಾಡಲು ಸಿದ್ಧರಾಗಬೇಕಾಗಿದೆ."

"ಸತ್ಯಾಗ್ರಹ!"

"ಹೌದು, ಸತ್ಯಾಗ್ರಹ." ಮುಕ್ಕಣ್ಣ ಮಾತನಾಡತೊಡಗಿದ. "ಸತ್ಯಾಗ್ರಹದ ನೇತೃತ್ವ ವಹಿಸಲು ನೀವು ಸಿದ್ಧರಿದ್ದರೆ ಹೇಳಿ, ಮೊದಲನೆಯ ಸ್ವಯಂಸೇವಕ ನಾನು, ಎರಡನೆಯವರು ಕುಟ್ರೋಶನಿ, ಮೂರನೆಯವರು ಹರಿಹರ...."

ಕೈಗಳೆರಡನ್ನೂ ರಭಸದಿಂದ ಅಲುಗಾಡಿಸುತ್ತ ಸ್ವಾಮಿಗಳು ಹೇಳಿದರು:

"ನಾವು ರಾಜಕಾರಣಕ್ಕಿಳಿಯಲು ಬರುವುದಿಲ್ಲ ಮುಕ್ಕಣ್ಣ."

"ಬರುವುದಿಲ್ಲವೇ? ಯಾಕೆ?"

"ನಾವೇನು ನಿಮ್ಮಂತೆ ಲೌಕಿಕರಲ್ಲ. ನಾವು ವಿರಕ್ತರು, ಮಠಾಧಿಕಾರಿಗಳು, ಅದರಲ್ಲೂ ಇಂಥ ಭಾರಿ ಮಠದ ಜಗದ್ಗುರುಗಳು....ನಾವು ರಾಜಕಾರಣಕ್ಕಿಳಿದು ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋಗುವುದುಂಟೇ ಎಲ್ಲಾದರೂ?"

"ಏಕೀಕರಣವೇ ನಮ್ಮ ಮಂತ್ರ.... ನಮ್ಮ ಪೂಜೆ.... ಎಂದೆಲ್ಲಾ ಜಿಗಿ ಜಿಗಿದು ಭಾಷಣ ಕೊಟ್ಟಿದ್ದಿರಲ್ಲಾ ಸ್ವಾಮಿಜಿ? ಆ ಮಂತ್ರವೆಲ್ಲಾ ಎಲ್ಲಿ ಮಾಯ ವಾಯಿತು?"

ಕುಟ್ಟೋಶನಿ ನಗುತ್ತ ನುಡಿದ: "ಮಂತ್ರ ಅಂದರೆ ಬಾಯಲ್ಲಿ ಹೇಳು ವುದಕ್ಕೆ ಮಾತ್ರ ಅಲ್ಲವೇನ್ರೀ ಮುಕ್ಕಣ್ಣ?"

"ನಮ್ಮನ್ನು ಬರೀ ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳಿರಿ," ಎಂದರು ಸ್ವಾಮಿಗಳು.

"ಅಂದರೆ? ಇದರರ್ಥವೇನು? ಏಕೀಕರಣದ ಚಳವಳಿ ಅಂದರೆ ರಾಜ ಕಾರಣ ಎಂದೊಮ್ಮೆ ಹೇಳುತ್ತೀರಿ, ಪ್ರಚಾರಕ್ಕಾಗಿ ನಿಮ್ಮನ್ನು ಉಪಯೋಗಿಸಿ ಕೊಳ್ಳಬಹುದೆಂದು ಇನ್ನೊಮ್ಮೆ ಹೇಳುತ್ತೀರಿ. ಪ್ರಚಾರವೂ ರಾಜಕಾರಣದಲ್ಲಿ ಬರುವುದಿಲ್ಲವೇನು? ಎಂದ ಹರಿಹರ.

"ಭಾಷಣ ಹೊಡೆಯುತ್ತ ಮೆರವಣಿಗೆ ಮಾಡಿಸಿಕೊಳ್ಳುತ್ತ, ಆ ನೆವದಲ್ಲಿ ಭಕ್ತರನ್ನು ದೊರಕಿಸಿಕೊಂಡು ಕಾಣಿಕೆ ಎತ್ತುವುದು ಎಂಥ ರಾಜಕಾರಣ ಹರಿಹರ?" ಎಂದ ಕುಟ್ಟೋಶನಿ.

ಮೂವರೂ ನಗತೊಡಗಿದರು.

"ಇನ್ನು ನಂಬರ್ ಮೂರು: ಸರ್ವಧರ್ಮ ಸಮನ್ವಯ. ನಿಮಗೆ ನಿಜ ವಾಗಿಯೂ ಸರ್ವಧರ್ಮ ಸಮನ್ವಯ ಸಾಧಿಸುವ ಮನಸ್ಸಿದೆಯೇ ಸ್ವಾಮಿಜಿ?" ಹರಿಹರ ಕೇಳಿದ.

"ಅಂದರೆ ನಮ್ಮನ್ನೇನು ಕಪಟಿಗಳೆಂದು ತಿಳಿದಿದ್ದೀರಾ?"

"ಛೆ. ಛೆ. ಹಾಗೇಕೆ ತಿಳಿಯಲಿ? ನಿಮ್ಮಂಥ ನಿಷ್ಕಪಟಿ ಹುಟ್ಟಿಯೇ ಇರಲಿಲ್ಲ ಇದುವರೆಗೆ ಈ ಪ್ರಪಂಚದಲ್ಲಿ. ಸರಿ. ನಾವೂ ಸಹ ಸರ್ವಧರ್ಮ ಸಮನ್ವಯ ಸಾಧಿಸಬೇಕೆಂದೇ 'ಬಯಸುತ್ತೇವೆ. ಆದರೆ – ಅಲ್ಲಿ ಇಲ್ಲಿ ಭಾಷಣ ಹೊಡೆಯುತ್ತ ತಿರುಗಿದರೆ ಅದು ಸಾಧಿಸುವುದಿಲ್ಲ. ಮೊದಲು ನಾವು ನಮ್ಮ ಆಚರಣೆಯಲ್ಲಿ ಅದನ್ನು ಸಾಧಿಸಬೇಕಾಗುತ್ತದೆ."

"ಅಂದರೆ?"

"ಸಮನ್ವಯವನ್ನು ಸಾಧಿಸುವುದಕ್ಕೆ ದೊಡ್ಡ ಆತಂಕಗಳೆಂದರೆ ಎರಡು: ಒಂದು ಲಿಂಗ, ಇನ್ನೊಂದು ಜನಿವಾರ. ಧರ್ಮದ ಒಳತಿರುಳನ್ನು ಮರೆತು ಜನ ಈ ಹೊರಗಿನ ಪರಟೆಗಳಿಗಾಗಿ ಬಡಿದಾಡುತ್ತಿದೆ. ಅಂತೆಯೆ ಮೊದಲು

ಬಾಹ್ಯ ಕುರುಹುಗಳನ್ನು ನಿರ್ಮೂಲಗೊಳಿಸಬೇಕೆಂದು ನಮ್ಮ ವಿಚಾರ. ನಾವು ಲಿಂಗವನ್ನು ತೆಗೆದುಹಾಕೋಣ. ಬ್ರಾಹ್ಮಣರು ಜನಿವಾರವನ್ನು ತೆಗೆದುಬಿಡಲಿ. ಪರಸ್ಪರರಲ್ಲಿ ಊಟ ಉಪಚಾರ ನಡೆಯಲಿ. ಆಗ ಜಾತಿಯ ಜಗಳ ತಾನಾಗಿಯೇ ಹೋಗುವುದು. ಸಮನ್ವಯ ಸಾಧಿಸುವುದು. ಏನೆನ್ನುವಿರಿ?"

"ಎಂಥ ತಲೆತಿರುಕ ವಿಚಾರ ನಿನ್ನವು ಹರಿಹರ! ಲಿಂಗ ತೆಗೆದೊಗೆಯ ಬೇಕೇ! ಅಬ್ಬ! ಅಬ್ಬಬ್ಬ! ನಾವಿಂದು ಈ ಮಾತು ಹೇಳಹೊರಟರೆ ಜನ ನಮ್ಮನ್ನು ಕಲ್ಲಿನಿಂದ ಹೊಡೆದು ಕೊಂದುಬಿಟ್ಟಾರು...."

"ಅದಕ್ಕೂ ಸಿದ್ಧವಾಗಿಯೆ ಈ ಕೆಲಸಕ್ಕೆ ನಿಲ್ಲಬೇಕು. ಸುಧಾರಣೆಯೆಂದರೆ ಸಾಮಾನ್ಯವೆಂದು ತಿಳಿದಿದ್ದೀರಾ ಸ್ವಾಮಿಜಿ? ಯೇಸೂಕ್ರಿಸ್ತ, ಬುದ್ಧ, ಬಸವಣ್ಣ, ಲೂಥರ್, ಲೆನಿನ್, ಗಾಂಧಿ ಇವರೆಲ್ಲಾ ಎಷ್ಟು ಕಷ್ಟಪಟ್ಟಿದ್ದಾರೆ...."

"ಎಲ್ಲರೂ ಅವರ ಹಾಗಾಗಲು ಸಾಧ್ಯವೇ ಹರಿಹರ?"

"ಅವರಂತೆಯೇ ಆಗುವುದಕ್ಕೂ ಹೋಗಬಾರದು. ನಮ್ಮದೇ ಒಂದು ದಾರಿ ಮಾಡಿಕೊಂಡು, ಸ್ವತಂತ್ರ ವ್ಯಕ್ತಿತ್ವವನ್ನೂ ರೂಪಿಸಿಕೊಂಡು ಪ್ರಾಮಾಣಿಕತನದಿಂದ ಕೆಲಸ ಮಾಡಬೇಕು. ಅಷ್ಟಾದರೆ ಸಾಕು."

"ಏನು ಪ್ರಾಮಾಣಿಕತನವ್ರೋ, ಏನು ವ್ಯಕ್ತಿತ್ವವ್ರೋ – ನೀವೆಲ್ಲಾ ಕ್ರಾಂತಿಕಾರರು, ಕಮ್ಯೂನಿಸ್ಟರು. ಧರ್ಮ ಜಾತಿ ಮತ ಆಚಾರಗಳನ್ನೆಲ್ಲ ನಾಶಮಾಡಲು ಪಂಥ ತೊಟ್ಟವರು. ನಿಮ್ಮ ಹತ್ತಿರ ಏನು ಚರ್ಚೆ!" ಎಂದು ಸ್ವಲ್ಪ ಬಿರುಸಾಗಿಯೇ ನುಡಿದರು ಸ್ವಾಮಿಗಳು.

ಬಗಲುಚೀಲವನ್ನು ಹೆಗಲಿಗೇರಿಸಿಕೊಂಡು ಕುಟ್ಟೋಲನಿ ಎದ್ದು ನಿಂತು ಹೇಳಿದ:

ಚರ್ಚೆ ಮುಗಿದಂತೇ ಆಯ್ತು. ನಾವು ಹೊರಟೆವು. ಕಡೆಯದಾಗಿ ಒಂದೇ ಮಾತು. ನಾವು ಕಮ್ಯೂನಿಸ್ಟರೂ ಅಲ್ಲ, ಧರ್ಮ ಆಚಾರಗಳನ್ನು ನಾಶ ಮಾಡುವವರೂ ಅಲ್ಲ. ನಮಗೂ ಒಂದು ಧರ್ಮದಲ್ಲಿ ನಂಬಿಕೆಯಿದೆ. ಅದು ಮಾನವ ಧರ್ಮ. ಆ ಧರ್ಮದಲ್ಲಿ ಉಚ್ಚ ನೀಚ, ಉಳ್ಳವ ಇಲ್ಲದವ ಇತ್ಯಾದಿ ಯಾವ ಭೇದಭಾವಗಳಿಗೂ ಎಡೆಯಿಲ್ಲ. ಮಾನವನನ್ನು ಪಶುವನ್ನಾಗಿ ಮಾಡಿರುವ ಇಂದಿನ ಸಂಕುಚಿತ ಜಾತಿ ಮತಗಳನ್ನು ಮಾತ್ರ ನಾವು ನಿರ್ಮೂಲ ಮಾಡತಕ್ಕವರೇ. ನಾವು ಮಾಡುವೆವೆನ್ನುವುದಕ್ಕಿಂತ ಜನರೇ ಮಾಡುವರೆಂದು ಹೇಳುವುದು ಹೆಚ್ಚು ಉಚಿತವಾದೀತು. ಈ ಸಂದರ್ಭದಲ್ಲಿ ನೀವು ಯಾರ

ಕಡೆಗೆ? ಬಡವರ ಕತ್ತು ಮುರಿದು ಸಂಪಾದಿಸುವ ಹಣದಲ್ಲಿ ನೂರಿನ್ನೂರನ್ನು ನಿಮ್ಮ ಕಾಲಿಗೆಸೆಯುವ ಶ್ರೀಮಂತರು ಮತ್ತು ಸ್ವಾರ್ಥಿಗಳ ಕಡೆಗೋ? ಹೊಸ ಜೀವನಕ್ಕಾಗಿ ಹೋರಾಡುತ್ತಿರುವ ನಮ್ಮಂಥ ಪುರೋಗಾಮಿಗಳ ಕಡೆಗೋ?"

"ನಮಗೇನು ಮಾಡೆನ್ನುತ್ತೀರಿ ನೀವು?"

"ಬಣ್ಣದ ಮಾತು, ಆಷಾಢಭೂತಿತನ, ಮೋಸಗಾರಿಕೆ ಎಲ್ಲಾ ಬಿಟ್ಟು ಕೊಟ್ಟು ನಮ್ಮ ಜತೆ ಕೂಡಿ ಕೆಲಸ ಮಾಡಲು ಸಿದ್ಧರಿರುವಿರೋ ಹೇಗೆ? ನಿಮಗೊಂದು ಹೆಣ್ಣು ನೋಡಿ ಮದುವೆಯನ್ನೂ ಮಾಡಿಸಿಬಿಡುತ್ತೇವೆ."

"ಮದುವೆ!"

"ಜಗದ್ಗುರುವಿನ ಸೋಗು ಹಾಕಿಕೊಂಡು ಸೂಳೆಯರ ಓಣಿ ತಿರುಗುವುದಕ್ಕಿಂತ ಮದುವೆಯಾಗಿ ಸಂಸಾರಿಯಾಗುವುದು ಮೇಲಲ್ಲವೇ ಸ್ವಾಮಿಜಿ?"

"ಸಾಕು, ಸಾಕು, ಕುಟ್ಟೋಶನಿ. ಬಹಳ ಪೀಡಿಸಬಾರದು ಸ್ವಾಮಿಗಳನ್ನು," ಎನ್ನುತ್ತಾ ಹರಿಹರನೂ ಎದ್ದು ನಿಂತ. "ಇನ್ನೊಂದೇ ಒಂದು ವಾರ ಸ್ವಾಮಿಜಿ. ಮರೆಯಬೇಡಿ. ಬ್ಯಾಂಕಿಗೆ ಹಣ ತುಂಬಿ ಬಿಡಿ. ಇಲ್ಲವಾದರೆ...."

"ಇಲ್ಲವಾದರೆ ಸತ್ಯಸಂಗತಿಗಳನ್ನೆಲ್ಲ ನಾವು ಪ್ರಕಟಿಸಬೇಕಾಗುವುದು." ಎಂದು ನುಡಿದವನೆ ಕುಟ್ಟೋಶನಿ ಹೊರಟುಬಿಟ್ಟ. ಮುಕ್ಕಣ್ಣ ಹರಿಹರರೂ ಅವನ ಹಿಂದೆ ನಡೆದರು.

"ಇನ್ನೇನು ಗತಿ ಮರಿ?" ಎನ್ನುತ್ತ ಸ್ವಾಮಿಗಳು ಎದೆ ಬಡಿದುಕೊಳ್ಳತೊಡಗಿದರು.

★

ಇಪ್ಪತ್ತುಸಾವಿರ ರೂಪಾಯಿ ತೆಗೆದುಕೊಂಡು ಕೂಡಲೆ ಹೊರಟು ಬರಬೇಕೆಂಬುದಾಗಿ ಚಿಕ್ಕವೀರಯ್ಯನಿಗೆ ಆ ದಿನವೇ ತಂತಿ ಹೋಯಿತು.

ಒಂದು ಹಗಲು ಒಂದು ಇರುಳು ಕಳೆಯಿತು.

ಚಿಕ್ಕವೀರಯ್ಯ ಬರಲಿಲ್ಲ.

ಇನ್ನೆರಡು ದಿನಗಳ ಅನಂತರ ಅವನಿಂದ ಒಂದು ಕಾರ್ಡು ಬಂತು. ಆತ ಸ್ವಲ್ಪದರಲ್ಲಿ ಬರೆದಿದ್ದ:

"ನೀವು ಹೀಗೆಲ್ಲಾ ತಾರಿನಿಂದ ರೂಪಾಯಿ ಕೇಳಿದರೆ ನಾನೆಲ್ಲಿಂದ ತಂದು ಕೊಡಲಿ? ನಾನೇನು ಕುಬೇರನ ಮಗಳನ್ನು ಮದುವೆಯಾಗಿದ್ದೇನೆಯೆ? ನಿಮ್ಮನ್ನು ನಂಬಿಕೊಂಡು ಎಲ್ಲವನ್ನೂ ಏಜನ್ಸಿಯಲ್ಲಿ ಇನ್ವೆಸ್ಟ್ ಮಾಡಿದ್ದಾಯಿತು. ಇನ್ನು ಎರಡು ವರ್ಷಗಳವರೆಗೆ ನನ್ನಿಂದ ಒಂದು ಕಾಸನ್ನೂ ಅಪೇಕ್ಷಿಸಬೇಡಿ."

ಕಾರ್ಡನ್ನು ನೆಲಕ್ಕೆಸೆದು ಸ್ವಾಮಿಗಳು ಹಾಸುಗೆಯಮೇಲೆ ಬಿದ್ದುಕೊಂಡು ಚಿಂತಿಸತೊಡಗಿದರು. ಅಂದು ಅವರು ಊಟಕ್ಕೂ ಏಳಲಿಲ್ಲ.

ಸಾಯಂಕಾಲ ಕರಲಿಂಗನನ್ನು ಬರಮಾಡಿಕೊಂಡು ಹತ್ತುಸಾವಿರ ರೂಪಾಯಿ ಕೈಗಡ ಕೇಳಿದರು. ಆತ ವಿಕಟ ನಗೆ ನಗುತ್ತ ಹೇಳಿದ: "ಹತ್ತು ಸಾವಿರ? ನಿಮಗೇನು ಹುಚ್ಚೇ ಸ್ವಾಮಿಜಿ? ನಾನೆಂದರೆ ಮಾರವಾಡಿಯೇ, ಇಂಪೀರಿಯಲ್ ಬ್ಯಾಂಕೇ?"

"ನಿನ್ನ ಕಷ್ಟಕಾಲಕ್ಕೆ ನಾವು ನೆರವಾಗಲಿಲ್ಲವೇನಯ್ಯ? ಈಗ ನಾವೂ ಅಂಥದೊಂದು ಪ್ರಸಂಗದಲ್ಲಿ ಸಿಕ್ಕಿಬಿದ್ದಿದ್ದೇವೆ. ಏನಾದರೂ ಪ್ರಯತ್ನಪಟ್ಟು ಹಣವೊದಗಿಸು."

"ಅದೇನು ಅಂಥ ಪ್ರಸಂಗ ಸ್ವಾಮಿಜಿ? ಯಾರ ಹೆಂಡತಿಯನ್ನಾದರೂ ಹಾರಿಸಿದ್ದೀರಾ?"

"ನಮ್ಮದೇ ನಮಗೆ ಸಾಕಾಗಿದೆ. ಇನ್ನು ಹೆಣ್ಣು ಹಾರಿಸುವ ಸುದ್ದಿ ಯಾಕೆ ಮಾರಾಯಾ. ನಮ್ಮ ಒಡವೆಗಳನ್ನಾದರೂ ತಂದುಕೊಡು."

"ಆಗಲಿ. ನಿಮ್ಮ ಹಂಗೇಕೆ ನನಗೆ? ನಾಳೆಯೇ ಬಿಡಿಸಿ ತಂದು ಕೊಡುತ್ತೇನೆ," ಎಂದು ಹೇಳಿ ಕರಲಿಂಗ ಎದ್ದು ಹೋದ.

ಮಧ್ಯಾಹ್ನದ ಅಂಚೆಗೆ ಮೂರು ಕಾಗದ ಕೈಸೇರಿದ್ದುವು. ಒಂದು ನರಿರಾಯನದು, ಇನ್ನೊಂದು ನಿರುದ್ಯೋಗಿಯದು, ಮತ್ತೊಂದು ಗೊಬ್ಬಣ್ಣನದು.

ಐದು ನೂರು ರೂಪಾಯಿಗಳನ್ನು ಕೂಡಲೆ ಕಳಿಸಬೇಕೆಂದು ನರಿರಾಯ, ಸ್ಟೇಶನರಿ ಅಂಗಡಿ ಹಾಕಬೇಕಾಗಿದೆಯಾದ್ದರಿಂದ ಸಾವಿರ ರೂಪಾಯಿಗಳ ಚೆಕ್ ಕಳಿಸಬೇಕೆಂದು ನಿರುದ್ಯೋಗಿ, ಎರಡು ನೂರನ್ನಾದರೂ ತಕ್ಷಣ ಕಳಿಸಬೇಕೆಂದು ಗೊಬ್ಬಣ್ಣ ಬಿನ್ನವಿಸಿಕೊಂಡಿದ್ದರು.

ಕೋಪದಿಂದ ಕುದಿಯುತ್ತ ಆ ಕಾಗದಗಳನ್ನು ಹರಿದು ಚೂರು ಚೂರು ಮಾಡಿ, ಸ್ವಾಮಿಗಳೆಂದರು:

"ಯಾರಾದರೂ ಹಣ ಕೊಡುವವರಿದ್ದರೆ ನಮ್ಮ ಮೈಯನ್ನೂ ಮಾರಾಟ ಮಾಡಲು ತಯಾರಾಗಬೇಕಾದ ಪ್ರಸಂಗ ಬಂದಿದೆ. ಈ ಸೂಳೇಮಕ್ಕಳಿಗೆ ಕೂಡಲೇ ರೂಪಾಯಿ ಕಳಿಸಬೇಕಂತೆ! ಆ ಮಗ ನಿರುದ್ಯೋಗಿ ಒಂದು ಸ್ಟೇಷನರಿ ಅಂಗಡಿ ತೆಗೆಯುವನಂತೆ. ಅದರಲ್ಲಿ ನಮ್ಮನ್ನೇ ಮಾರಾಟಕ್ಕಿರಿಸೆಂದು ಹೇಳ ಬೇಕು ಅವನಿಗೆ. ಉಣ್ಣಿಗಳಂಥ ಭಂಡರು! ಇನ್ನೊಮ್ಮೆ ಇವರಾರನ್ನೂ ಹತ್ತಿರ ಸಹ ಸೇರಿಸಬಾರದು.

ರಾತ್ರೆ ಒಂಭತ್ತು ಗಂಟೆಯ ವೇಳೆಗೆ ಖರೇಸೆಟ್ಟಿಯ ಬಂಗಲೆಗೆ ಹೋದೆವು. ತನ್ನ ಪ್ರೇಯಸಿಯ ಜತೆಯಲ್ಲಿ ಕುಳಿತು ತಾಂಬೂಲ ಸೇವಿಸುತ್ತಿದ್ದ ಸೆಟ್ಟಿ ಸ್ವಾಮಿಗಳನ್ನು ನೋಡಿದರೂ ನೋಡದಂತೆ ಸುಮ್ಮನೆ ಕುಳಿತಿದ್ದ. ಆತ ಸೋಫಾದಿಂದ ಏಳಲೂ ಇಲ್ಲ, ಸ್ವಾಮಿಗಳಿಗೆ ನಮಸ್ಕಾರವನ್ನೂ ಮಾಡಲಿಲ್ಲ, "ಬನ್ನಿ, ಕೂತುಕೊಳ್ಳಿ," ಎಂದೂ ಹೇಳಲಿಲ್ಲ.

ಅವನೆದುರಿಗಿದ್ದ ಸೋಫಾದ ಮೇಲೆ ಕುಕ್ಕರಿಸುತ್ತ ಸ್ವಾಮಿಗಳೆಂದರು:

"ಬಹಳ ದಿನಗಳಿಂದ ಮಠಕ್ಕೆ ಬರಲೇ ಇಲ್ಲವಲ್ಲಾ ಸೆಟ್ಟರೆ?"

ಆತ ತನ್ನ ಪ್ರೇಯಸಿಯ ಕಡೆ ಹೊರಳಿ ಕಣ್ಣು ಮಿಟುಕಿಸಿದ. ಅವಳು ತುಟಿಗಳಲ್ಲೇ ನಗುತ್ತ ಎದ್ದು ತನ್ನ ಕೊಟಡಿಯ ಕಡೆ ನಡೆದಳು.

"ವ್ಯಾಪಾರದ ಗದ್ದಲದಲ್ಲಿ ಪುರಸತ್ತೇ ಸಿಕ್ಕುವುದಿಲ್ಲ," ಎಂದ ಸೆಟ್ಟಿ.

"ಈಗ ಲಾಭದಾಯಕವಾಗಿ ನಡೆದಿದೆ ತಾನೆ?"

ಟೀಪಾಯ್ ಮೇಲಿದ್ದ ಡಬ್ಬಿಯಿಂದ ಒಂದು ಸಿಗರೇಟು ತೆಗೆದು ಸ್ವಾಮಿ ಗಳಿಗೊಂದು ಕೊಟ್ಟು, ತಾನೊಂದನ್ನು ಹಿಡಿದು, ಅವುಗಳನ್ನು ಹೊತ್ತಿಸುತ್ತ ಖರೇಸೆಟ್ಟಿ ಹೇಳಿದ:

"ಏನು ವ್ಯಾಪಾರವೋ.... ಏನು ಲಾಭವೋ.... ಎಲ್ಲಾ ತಲೆಕೆಳಗಾಗಿ ಹೋಗುತ್ತಿದೆ – ಈ ಗಾಂಧಿ ಟೋಪಿಯವರ ರಾಜ್ಯ ಬಂದು."

"ಪಾಪ.... ಪಾಪ.... ಹೀಗಿದೆಯೆ! ದೇವರೇ ಕಾಪಾಡಬೇಕು, ನಮಗೂ ಒಂದು ಸಂಕಟ ಬಂದಿದೆ ಸೆಟ್ಟರೆ. ಈಗಿಂದೀಗ ಇಪ್ಪತ್ತು ಸಾವಿರ ರೂಪಾಯಿ ಬೇಕಾಗಿದೆ."

ಮೂಗಿನ ಹೊರಳೆಗಳಿಂದ ಸಿಗರೇಟು ಹೊಗೆಯನ್ನು ನಿಧಾನವಾಗಿ ಹೊರಹಾಕುತ್ತ ಖರೇಸೆಟ್ಟಿ ಅಣಕದ ಧ್ವನಿಯಲ್ಲಿ ಕೇಳಿದ: "ಈಗಿಂದೀಗ ಬೇಕೇಂದಿರಾ? ಅದೇನ್ರೀ ಅಂಥ ಅವಸರ? ಯಾವ ಸುಂದರಿಗೆ ಕೊಡ ಬೇಕಾಗಿದೆ?"

"ಅಂಥದೇನೂ ಇಲ್ಲ ಸೆಟ್ಟರೆ. ಒಂದು ಭಯಂಕರ ಪ್ರಸಂಗದಿಂದ ಉಳಿದುಕೊಳ್ಳಬೇಕಾಗಿದೆ."

"ಸರಿ. ನನ್ನ ಹತ್ತಿರವಾದರೂ ಎಲ್ಲಿದೆ ಹಣ? ನಿಮ್ಮ ಮುತ್ತು ರತ್ನ ಗಳು ಬೇಕಿದ್ದರೆ ಹೇಳಿ. ನಾಳೆ ಸಂಜೆಯೊಳಗಾಗಿ ಹಿಂದಿರುಗಿಸಿಬಿಡುತ್ತೇನೆ," ಎಂದು ನುಡಿದವನೆ ಖರೇಸೆಟ್ಟಿ ಎದ್ದು ತನ್ನ ಪ್ರೇಯಸಿಯ ಕೊಟಡಿಗೆ ಹೋಗಿ ಬಾಗಿಲು ಮುಚ್ಚಿಕೊಂಡ.

★

ಅನಂತರ, ಎರಡು ದಿನಗಳ ಬಳಿಕ ಟ್ರಸ್ಟ್ ಕಮಿಟಿಯ ಸಭೆ ಸೇರಿತು. ಅಷ್ಟರೊಳಗಾಗಿ ಕರಲಿಂಗನೂ ಖರೇಸೆಟ್ಟಿಯೂ ತಾವು ತೆಗೆದುಕೊಂಡು ಹೋಗಿದ್ದ ವಸ್ತುಗಳನ್ನು ತಂದೊಪ್ಪಿಸಿದ್ದರಂತೆ. ಅದೊಂದು ಗಂಡಾಂತರ ದಿಂದಲಾದರೂ ಪಾರಾದ ಹಾಗಾಯಿತೆಂದು ಸ್ವಾಮಿಗಳು ಸ್ವಲ್ಪ ಸಮಾಧಾನ ಮಾಡಿಕೊಂಡಿದ್ದರು.

ಸಾಯಂಕಾಲ ಸಭೆಗಾರಂಭವಾಗುತ್ತಲೂ ಅವರ ಆ ಸಮಾಧಾನ ಬಿಸಿಲಿಗೆ ಸಿಕ್ಕ ಮಂಜಿನ ಗಡ್ಡೆಯಂತೆ ಕರಗಿಹೋಯಿತು. ಕರಲಿಂಗ ಒಂದು ಲೆಕ್ಕವನ್ನೂ ಕ್ರಮುಬದ್ಧವಾಗಿ ಇಟ್ಟಿರಲಿಲ್ಲ. ಖರೇಸೆಟ್ಟಿ, ಜಡಿಯಪ್ಪ, ದುಂಡಪ್ಪ, ಗುಂಡಾಡಯ್ಯ, ಗುರುಶಾಂತಪ್ಪ – ಐದು ಜನರೂ ಸ್ವಾಮಿಗಳನ್ನು ಆಕ್ಷೇಪಿಸತೊಡಗಿದರು. ಕರಡೆಪ್ಪಸೆಟ್ಟರ ಸ್ಥಾನದಲ್ಲಿ ಖರೇಸೆಟ್ಟಿಯನ್ನು ಕಮಿಟಿಗೆ ಸೇರಿಸಲಾಗಿದ್ದಿತು.

"ಲೆಕ್ಕವಿಡುವುದು ಕಾರಭಾರಿಯ ಕೆಲಸ. ನಾವೇನು ಮಾಡೋಣ?" ಎಂದರು ಸ್ವಾಮಿಗಳು.

"ಸ್ವಾಮಿಗಳು ಲೆಕ್ಕವನ್ನೇ ಕೊಡದಿದ್ದರೆ ನಾನಾದರೂ ಏನು ಬರೆಯಲಿ ನನ್ನ ತಲೆ?" ಎಂದು ಗುಡುಗಿದ, ಕರಲಿಂಗ.

"ನೀವು ಸ್ವಾಮಿಗಳು. ಇದೆಲ್ಲಾ ನಿಮ್ಮ ಜವಾಬ್ದಾರಿಯೇ." ಗುರು ಶಾಂತಪ್ಪ ಹೇಳಿದರು: "ಉತ್ಸವದ ಕಾಲಕ್ಕೆ ಉಳಿದ ನಗದು ಹಣ ಎಲ್ಲಿದೆ?"

"ಅದೆಲ್ಲಾ ಖರೇಸೆಟ್ಟರಿಗೇ ಗೊತ್ತು," ಸ್ವಾಮಿಗಳೆಂದರು.

"ನನಗೇನು ಗೊತ್ತು! ಹಣವೆಲ್ಲಾ ಇದ್ದುದು ನಿಮ್ಮ ಹತ್ತಿರ. ಖರ್ಚಿಗೆ ಬೇಕಾದಾಗ ಚಿಲ್ಲರೆ ರೂಪಾಯಿ ತೆಗೆದುಕೊಳ್ಳುತ್ತಿದ್ದೆನಷ್ಟೆ. ಅದಕ್ಕೆಲ್ಲ ವಿವರ ವಾಗಿ ಯಾದಿ ಒಪ್ಪಿಸಿದ್ದೇನೆ." ಖರೇಸೆಟ್ಟಿ ಹೇಳಿದ.

ಕೋಪ ಅಸಹನೆಗಳಿಂದಾಗಿ ಸ್ವಾಮಿಗಳ ದೇಹಾದ್ಯಂತವೂ ನಡುಗ ತೊಡಗಿತು. "ಎಲ್ಲಾ ಹಣ ನಿಮ್ಮ ಹತ್ತಿರವೇ ಇಟ್ಟುಕೊಂಡು ಈಗ ಮತ್ತೆ ನಮ್ಮ ಮೇಲೆ ಹಾಕುತ್ತೀರಾ ಸೆಟ್ಟರೆ?"

ಗುರುಶಾಂತಪ್ಪ ಕೇಳಿದರು: "ಒಟ್ಟು ಶಿಲ್ಲಕು ಉಳಿದ ಹಣವೆಷ್ಟು ಸೆಟ್ಟರೆ?"

"ಇಪ್ಪತ್ತೆರಡು ಸಾವಿರವಾದರೂ ಉಳಿದಿತ್ತು."

"ಜಾತ್ರೆಯಲ್ಲಿ ಕಾಣಿಕೆ ಬಂದದ್ದು?"

"ಸುಮಾರು ಹತ್ತು ಸಾವಿರ."

"ಟ್ರೆಜರಿ ತೆಗೆಯಿರಿ ಸ್ವಾಮಿಗಳೆ. ಶಿಲ್ಕು ನೋಡೋಣ," ಎಂದು ಶಾಂತ ಗಂಭೀರ ಸ್ವರದಲ್ಲಿ ನುಡಿದರು ಗುರುಶಾಂತಪ್ಪ.

"ನಾವು ಹೇಳುತ್ತೇವೆ. ನಗದು ಹಣ ನಮ್ಮ ಕೈಗೆ ಬಂದೇ ಇಲ್ಲ. ಇಪ್ಪತ್ತೆರಡು ಸಾವಿರವೂ ಖರೇಸೆಟ್ಟರ ಬಳಿ ಇತ್ತು. ಜಾತ್ರೆಯಲ್ಲಿ ಕಾಣಿಕೆ ಬಂದದ್ದು ಕಾರಭಾರಿಯ ಬಳಿ ಇತ್ತು."

"ಪ್ರತಿದಿನವೂ ಕಾಣಿಕೆ ಬಂದದ್ದನ್ನೆಲ್ಲ ಅಂದೇ ಎಣಿಸಿ ಟ್ರೆಜರಿಗೆ ಹಾಕಿ ದ್ದೀರಲ್ಲಾ ಸ್ವಾಮಿಜಿ?" ಎಂದ ಕರಲಿಂಗ.

"ಪೆಟ್ಟಿಗೆಯನ್ನಾದರೂ ತೆಗೆಯಿರಿ ಸ್ವಾಮಿಜಿ. ಆಭರಣಗಳಾದರೂ ಉಳಿದಿವೆಯೊ ಇಲ್ಲವೊ...." ಎಂದರು ಗುರುಶಾಂತಪ್ಪ.

ಶಿವದಾರಕ್ಕೆ ಬಿಗಿದಿದ್ದ ಬೀಗದ ಕೈಯನ್ನು ನಡುಗುವ ಕೈಗಳಿಂದ ಬಿಚ್ಚಿ ಸ್ವಾಮಿಗಳು ಕಬ್ಬಿಣ ಪೆಟ್ಟಿಗೆಯ ಬಾಗಿಲು ತೆಗೆದರು.

ಪೆಟ್ಟಿಗೆಯಲ್ಲಿ ಕೈಹಾಕಿ ಗುರುಶಾಂತಪ್ಪನವರು ಒಳಗಿನ ಸಾಮಾನು ಗಳನ್ನು ಹೊರತೆಗೆಯತೊಡಗಿದರು. ನಾನು ಅದೆಲ್ಲವನ್ನೂ ನೋಡುತ್ತ ಬಾಗಿಲಲ್ಲಿ ಕುಳಿತಿದ್ದೆ.

" ಹಣವಂತೂ ಇಲ್ಲ."

" ಅಷ್ಟೊಂದು ಹಣ ಏನಾಯಿತು ?" ದುಂಡಪ್ಪನವರ ಪ್ರಶ್ನೆ.

ಸ್ವಾಮಿಗಳ ಕಣ್ಣುಗಳಲ್ಲಿ ನೀರೂರಿತು. ಗದಗದ ನಡುಗುವ ಕಂಠದಿಂದ ಅವರೆಂದರು: " ಶಿವನ ಆಣೆ ದುಂಡಪ್ಪನವರೇ. ಹಣ ನಮ್ಮ ಹತ್ತಿರ ಇರಲಿಲ್ಲ. ಎಲ್ಲಾ ಖರೇಸೆಟ್ಟರ ಹತ್ತಿರ ಇತ್ತು."

" ಅ....ಅ....ಅದಕ್ಕೆ ಆ....ಆ....ಆಧಾರವೇನು ?" ಎಂದು ತೊದಲಿದ ಗುಂಡಾಡಯ್ಯ.

" ಆಧಾರವೆಂದರೇನು ? ನಾವು ಅವರನ್ನು ಸಂಪೂರ್ಣವಾಗಿ ನಂಬಿದ್ದೆವು. ಹೀಗೆ ಅವರು ಮೋಸಮಾಡುವರೆಂದು ತಿಳಿದಿರಲಿಲ್ಲ...." ಎಂದು ಸ್ವಾಮಿಗಳು ನಡುಗುವ ಧ್ವನಿಯಲ್ಲಿ ನುಡಿದರು.

ಅವರ ಕಡೆ ದೃಷ್ಟಿಯನ್ನೂ ಹೊರಳಿಸದೆ ಗುರುಶಾಂತಪ್ಪ ಒಡವೆಗಳನ್ನೂ ಮುತ್ತುರತ್ನಗಳನ್ನೂ ಒಂದೊಂದಾಗಿ ಕೈಗೆ ತೆಗೆದುಕೊಂಡು ಬೆಳಕಿಗೆ ಹಿಡಿದು ನೋಡಿದರು. ಅವರ ತುಟಿಗಳ ಮೂಲೆಗಳಲ್ಲಿ ವಿಲಕ್ಷಣ ನಗೆ ಸುಳಿಯತೊಡಗಿತು.

" ಈ ಮುತ್ತುರತ್ನಗಳೂ ಆಭರಣಗಳೂ ಗಿಲೀಟಿನವಾಗಿ ಕಾಣುತ್ತವೆ. ಮೊದಲು ಟ್ರೆಜರಿಯಲ್ಲಿದ್ದ ವಸ್ತುಗಳಲ್ಲ ಇವು. ಅವುಗಳನ್ನು ಹಾರಿಸಿ ಅವುಗಳಿಗೆ ಬದಲಾಗಿ ಅವುಗಳ ಹಾಗೇ ಕಾಣುವ ನಕಲೀ ಮಾಲು ಮಾಡಿಸಿ ಇಟ್ಟದ್ದು ಸ್ಪಷ್ಟವಿದೆ. ಇಲ್ಲಿ ನೋಡಿರಿ ಜಡಿಯಪ್ಪಣ್ಣ," ಎಂದು ನುಡಿದು ಗುರುಶಾಂತಪ್ಪ ಒಡವೆಗಳನ್ನು ಅವರ ಕೈಗೆ ಕೊಟ್ಟರು.

" ನಕಲೀಮಾಲು " ಎಂಬ ಶಬ್ದ ಕಿವಿಗೆ ಬೀಳುತ್ತಲೂ ಸ್ವಾಮಿಗಳು ಒಂದು ಸಲ ಮುಖವೆತ್ತಿ ಆ ಒಡವೆಗಳನ್ನೇ ದಿಟ್ಟಿಸಿ ನೋಡಿದರು. ಮರು ಕ್ಷಣವೇ ಅವರಿಗೆ ಸ್ಮೃತಿ ತಪ್ಪಿದಂತಾಗಿ ಅವರ ಶರೀರ ಸೋಫಾದಿಂದುರುಳಿ ಕೆಳಗೆ ಬಿತ್ತು. ನಾನು ಓಡುತ್ತ ಹೋಗಿ ಅವರನ್ನೆತ್ತಿ ಮಂಚದ ಮೇಲೆ ಮಲಗಿಸಿ ಗಾಳಿ ಹಾಕತೊಡಗಿದೆ. ಅವು ನಕಲೀಮಾಲೆಂಬುದು ತಿಳಿಯುತ್ತಲೂ ನನಗೂ ಆಘಾತವಾದಂತಾಗಿದ್ದಿತು. ಖರೇಸೆಟ್ಟಿಯೂ ಕರಲಿಂಗನೂ ಒಂದುಗೂಡಿ ಮಾತನಾಡಿಕೊಂಡು ಸ್ವಾಮಿಗಳನ್ನು ಮೋಸಗೊಳಿಸಿದ್ದುದು ಸ್ಪಷ್ಟವಿದ್ದಿತು.

ಹುಡುಗನೊಬ್ಬನನ್ನು ಓಡಿಸಿ ಅಕ್ಕಸಾಲಿಗನೊಬ್ಬನನ್ನು ಕರೆಯಿಸಿ ಕೊಂಡು ಗುರುಶಾಂತಪ್ಪ ಆತನ ಕೈಗೆ ಒಡವೆಗಳನ್ನು ಕೊಟ್ಟು ಅವು ಕೃತ್ರಿಮ

ಮಾಲೆಂಬುದನ್ನು ಮನವರಿಕೆ ಮಾಡಿಕೊಂಡರು. ಈ ವಿಷಯವನ್ನು ಈಗಲೇ ಎಲ್ಲಿಯೂ ಒಡೆಯದಂತೆ ಎಚ್ಚರಿಕೆ ಕೊಟ್ಟು ಆತನನ್ನು ಕಳುಹಿಸಿಕೊಟ್ಟರು.

ಈ ವೇಳೆಗಾಗಲೇ ಸ್ವಾಮಿಗಳಿಗೆ ಎಚ್ಚರವಾಗಿದ್ದಿತು.

"ಆದುದಾಯಿತು ಸ್ವಾಮಿಜಿ. ಹೇಗೂ ಪೀಠದ ಮರ್ಯಾದೆಯನ್ನುಳಿಸ ಬೇಕಲ್ಲ? ನಿಮಗೆ ಒಂದು ವಾರ ವೇಳೆ ಕೊಡುತ್ತೇನೆ. ಅಷ್ಟರೊಳಗಾಗಿ ಮಠದ ಮಾಲನ್ನೆಲ್ಲ ತರಿಸಿ ಇಟ್ಟುಬಿಡಿ," ಎಂದು ನುಡಿದು ಗುರುಶಾಂತಪ್ಪ ಎದ್ದು ಬಿಟ್ಟರು.

"ನಮ್ಮ ತಾಯಿಯ ಆಣೆ.... ತಂದೆಯ ಆಣೆ....ಲಿಂಗದೇವರ ಆಣೆ. ನಿಜಕ್ಕೂ ಈ ವಿಷಯ ನಮಗೇನೂ ತಿಳಿಯದು. ಒಡವೆಗಳನ್ನು ತೆಗೆದುಕೊಂಡು ಹೋದವನು ಕರಲಿಂಗ. ಮುತ್ತು ರತ್ನಗಳನ್ನೊಯ್ದವನು ಖರೇಸೆಟ್ಟಿ. ನಿನ್ನೆ ಯಷ್ಟೆ ಈ ಸಾಮಾನುಗಳನ್ನು ತಂದುಕೊಟ್ಟರು. ನಾವು ಸರಿಯಾಗಿ ಪರೀಕ್ಷಿಸಿ ನೋಡದಿದ್ದುದೇ ನಮ್ಮ ತಪ್ಪಾಯಿತು. ಅಯ್ಯೋ .... ಘಾತ....ಮೋಸ.... ಮೋಸ....ಭಯಂಕರ ಮೋಸ....ನಾವು ಸತ್ತೆವು....ಹಾಳಾದೆವು...." ಎಂದು ಸ್ವಾಮಿಗಳು ಎದೆ ಬಡಿದುಕೊಳ್ಳತೊಡಗಿದರು.

"ಈ ನಾಟಕವೆಲ್ಲ ನಮ್ಮ ಮುಂದೆ ನಡೆಯುವಂತಿಲ್ಲ. ಸಾಕುಮಾಡಿರಿ ಸೋಗನ್ನು," ಎಂದು ತೀಕ್ಷ್ಣ ಸ್ವರದಲ್ಲಿ ನುಡಿದ ಖರೇಸೆಟ್ಟಿ. ಎಲ್ಲರೂ ಎದ್ದು ಹೊರಟುಹೋದರು.

ಹತ್ತು ಹನ್ನೆರಡು ನಿಮಿಷಗಳವರೆಗೆ ಕಲ್ಲಿನಂತೆ ಕುಳಿತಿದ್ದು ಅನಂತರ ತಲೆಯೆತ್ತಿ ಸ್ವಾಮಿಗಳು ಕೇಳಿದರು: "ಆ ಹರಿಹರ ಕುಟ್ಮೋಶನಿ ಇನ್ನೂ ಈ ಊರಲ್ಲೇ ಇರುವರೋ ಏನು ಹೋದರೋ?"

"ಇಲ್ಲೇ ಇದ್ದಂತಿದೆ. ಬೆಳಿಗ್ಗೆ ವಾಚನಾಲಯಕ್ಕೆ ಹೋಗಿದ್ದಾಗ ಅಲ್ಲಿ ಅವರಿಬ್ಬರನ್ನೂ ಕಂಡಿದ್ದೆ."

"ಹಾಳಾದೆವು....ಹಾಳಾದೆವು....ಅವರಿಗೂ ಈ ಸುದ್ದಿಯೆಲ್ಲ ಗೊತ್ತಾಗು ವುದು. ಶಾಸ್ತ್ರಿಗೂ ಗೊತ್ತಾಗುವುದು. ಗುಂಡಾಡಯ್ಯ ಇದೇ ವಾರ ಈ ಸಂಗತಿ ಯನ್ನೆಲ್ಲ ಪ್ರಕಟಿಸಿದರೂ ಪ್ರಕಟಿಸಬಹುದು. ಆಮೇಲೆ 'ಜನಪದ'–'ಲಿಂಗ ವೀರ'– ಮುಂದೆ ಕರ್ನಾಟಕಕ್ಕೆಲ್ಲಾ ತಿಳಿಯುವುದು. ಓರೆಕೋರೆ, ಗೊಬ್ಬೂರು, ಕಳ್ಳೀಕಾಯಿ, ಕೋಡಂಗಿಪುರ, ರಾಜಾಪುರಿ, ಧರ್ಮಪುರ, ಬೆಂಗಳೂರು, ಮೈಸೂರು–ಬಳ್ಳಾರಿ ಎಲ್ಲ ಕಡೆಗೂ ಡಂಗುರವಾಗುವುದು. ನಾವಿನ್ನು ಎಲ್ಲಿಯೂ

ಮುಖ ತೋರಿಸುವಂತಿಲ್ಲ. ಅಳಿಸಲಾಗದಂಥ ಕಲಂಕ ಹತ್ತುವುದು. ಸಾವಿರಾರು ರೂಪಾಯಿ ಹಾಳುಮಾಡಿ ಗಳಿಸಿದ ಕೀರ್ತಿಯೆಲ್ಲ ಒಂದು ದಿನದಲ್ಲೇ ಅಳಿಸಿ ಹೋಗುವುದು. ಇತ್ತ ಈ ಇಪ್ಪತ್ತೆರಡು ಸಾವಿರ ರೂಪಾಯಿ ಬೇರೆ ತುಂಬ ಬೇಕು, ಅತ್ತ ಆ ಕುಟ್ಟಪ್ಪನಿಗೆ ಇಪ್ಪತ್ತು ಸಾವಿರ ಕಳಿಸಬೇಕು, ಈ ಒಡವೆ ಗಳನ್ನೂ ಮುತ್ತು ರತ್ನಗಳನ್ನೂ ದೊರಕಿಸಬೇಕು. ಎಂಥಾ ಪ್ರಸಂಗ ಬಂತು.... ಇದರಿಂದ ಹೇಗೆ ಪಾರಾಗುವುದು? ಯಾರಿಗೆ ಶರಣು ಹೋಗುವುದು?...." ಎನ್ನುತ್ತಾ ಸ್ವಾಮಿಗಳು ಹುಚ್ಚು ಹಿಡಿದವರ ಹಾಗೆ ಕೊಟಡಿಯಲ್ಲಿ ಓಡಾಡ ತೊಡಗಿದರು. ಅವರಿಗೆ ನಿಜಕ್ಕೂ ಹುಚ್ಚು ಹಿಡಿಯಿತೇನೊ ಎಂದು ನನಗೆ ಗಾಬರಿಯಾಗದಿರಲಿಲ್ಲ. ಎಂಥವರಿಗಾದರೂ ಹುಚ್ಚು ಹಿಡಿಸುವಂಥ ಪ್ರಸಂಗವೇ ಅದು! ಅದರಿಂದ ಉಳಿದುಕೊಳ್ಳಲು ಯಾವ ದಾರಿಯೂ ಇದ್ದಂತಿರಲಿಲ್ಲ. ಇದ್ದುದೆಂದರೆ ಒಂದೇ ದಾರಿ....ಆತ್ಮಹತ್ಯೆ....

ಆ ರಾತ್ರಿಯೆಲ್ಲ ನಾನು ಎಚ್ಚರವಾಗಿಯೇ ಇದ್ದು ಸ್ವಾಮಿಗಳನ್ನು ಕಾಯುತ್ತಿದ್ದೆ. ನಿತ್ಯದಂತೆಯೆ ಅವರು ತಮ್ಮ ಕೊಟಡಿಯಲ್ಲಿ ಸುಖವಾಗಿ ನಿದ್ರೆ ಹೋದುದನ್ನು ಕಂಡಾಗ ಆಶ್ಚರ್ಯವಾಗದಿರಲಿಲ್ಲ.

★

ಬೆಳಗಾಗುತ್ತಲೂ ಸ್ವಾಮಿಗಳು ಡ್ರೈವರನ್ನು ಕೂಗಿ ಕಾರನ್ನು ಸಿದ್ಧ ಗೊಳಿಸಲು ಹೇಳಿದರು.

"ಯಾವ ಕಡೆಗೆ ಸ್ವಾಮಿಜಿ?" ಎಂದು ನಾನು ಕೇಳಿದೆ.

"ಇಲ್ಲೇ ಒಂದು ಕಡೆ ಹೋಗಿ ಬರುವುದಿದೆ."

"ನಾನೂ ಬರಲೆ?"

"ಬೇಡ. ಈಗ ಬಂದುಬಿಡುತ್ತೇವೆ."

ನನಗೆ ಪುನಃ ಸಂದೇಹ ಬರದಿರಲಿಲ್ಲ. ಸ್ವಾಮಿಗಳು ಎಲ್ಲಿಗೆ ಹೊರಟರೂ ಅವರ ಜತೆಗೆ ನಾನು ಹೋಗುವುದು ಪದ್ಧತಿಯಾಗಿದ್ದಿತು. ಒಂದು ಸಲವೂ ಅವರು ನನಗೆ 'ಬೇಡ'ವೆಂದಿರಲಿಲ್ಲ. ಮಠವನ್ನು ಬಿಟ್ಟು ಸ್ವಾಮಿಗಳು ಎಲ್ಲಿ ಗಾದರೂ ಹೊರಟುಹೋಗಿ ಜೀವಕ್ಕೆ ಅಪಾಯ ಮಾಡಿಕೊಳ್ಳಬಹುದೆಂದೇ ನನಗನ್ನಿಸಿತು. ಎರಡು ವರ್ಷಗಳ ಹಿಂದೆ 'ಜನಪದ'ದಲ್ಲಿ ಅವರ ಬಗೆಗೆ ಜಾಹೀರಾತು ಪ್ರಕಟವಾದಾಗ ಯಾರಿಗೂ ಸುದ್ದಿ ತಿಳಿಸದೆ ಕಾರು ತೆಗೆದು

ಕೊಂಡು ನಾಯವಾಗಿಬಿಟ್ಟಿದ್ದರಲ್ಲವೆ? ಈಗಲೂ ಅಂಥದೇ – ಅದಕ್ಕಿಂತಲೂ ಭೀಕರವಾದ – ಸಂದರ್ಭ ಬಂದಿದೆ. ಈ ಸಲ ಅವರು ತಲೆ ತಪ್ಪಿಸಿಕೊಂಡರೂ ಸಹ ಈ ಪ್ರಸಂಗದಿಂದ ಉಳಿದುಕೊಳ್ಳುವಂತಿಲ್ಲ. ಟ್ರಸ್ಟ್ ಕಮಿಟಿಯವರು ಅವರ ಮೇಲೆ ಮೊಕದ್ದಮೆ ಹೂಡುವರು, ಅವರ ಬಂಧನಕ್ಕಾಗಿ ವಾರಂಟ್ ಹೊರಡುವುದು, ಸ್ವಾಮಿಗಳು ಎಲ್ಲಿ ಅಡಗಿದರೂ ಪೋಲೀಸರು ಅವರನ್ನು ಹುಡುಕಿ ತೆಗೆಯುವರು.... ಅನಂತರ ವಿಚಾರಣೆ.... ಪತ್ರಿಕೆಗಳಲ್ಲಿ ವರದಿ.... ಅವಹೇಳನ.... ಅಪಕೀರ್ತಿ.... ಶಿಕ್ಷೆ.... ಸೆರೆಮನೆ.... ಈ ಎಲ್ಲ ಪ್ರಸಂಗಗಳಿಂದ ಪಾರಾಗಲೆಂದು ಸ್ವಾಮಿಗಳು....

"ನಾನೂ ಬರುತ್ತೇನೆ ಸ್ವಾಮಿಜಿ."

ನನ್ನ ಮನಸ್ಸಿನಲ್ಲಿ ಮೂಡಿದ್ದ ಸಂದೇಹವನ್ನು ಅವರು ಅರ್ಥ ಮಾಡಿಕೊಂಡರೇನೊ, ಮೃದು ಸ್ವರದಲ್ಲಿ ಹೇಳಿದರು: "ಚಿಂತಿಸಬೇಡ ಮರೀ. ನಾವೆಲ್ಲಿಗೂ ಹೋಗುವುದಿಲ್ಲ. ಇಲ್ಲೇ ಪುಷ್ಪಾವತಿಯಲ್ಲಿಗೆ ಹೋಗಿ ಬರುತ್ತೇವೆ."

"ಪುಷ್ಪಾವತಿ?" ನಾನು ಬೆಚ್ಚಿಬಿದ್ದು ಕೇಳಿದೆ.

"ಅವಳನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ. ಉಳಿಸಿದರೆ ಅವಳೇ ನಮ್ಮನ್ನುಳಿಸಬೇಕು ಈ ವಿಪತ್ತಿನಿಂದ. ಅದೇ ಕೊನೆಯ ಪ್ರಯತ್ನ," ಎನ್ನುತ್ತಾ ಸ್ವಾಮಿಗಳು ಹೊರಟುಹೋದರು.

ಎರಡು ಗಂಟೆಗಳ ತರುವಾಯ ಅವರು ಹಿಂದಿರುಗಿ ಬಂದಾಗ ಅವರ ಮುಖದ ಮೇಲೆ ಹೆಣದ ಕಳೆ ಹರಡಿದ್ದುದು ಕಾಣುತ್ತಿತ್ತು.

"ಏನಾಯಿತು ಸ್ವಾಮಿಜಿ? ಪುಷ್ಪಾವತಿ ನಿಮ್ಮನ್ನು ಮದುವೆಯಾಗಲು ಒಪ್ಪಿದಳೇ?" ಎಂದು ಕೇಳಿದೆ.

ತಲೆಯಮೇಲಿನ ಜರತಾರೀ ಪೇಟವನ್ನು ತೆಗೆದು ಸೋಫಾದ ಮೇಲೆ ಎಸೆದು ಸ್ವಾಮಿಗಳು ಹೇಳಿದರು:

"ಎಲ್ಲಿಯ ಮದುವೆ ಮಾರಾಯ. ಅವಳು ನಮ್ಮನ್ನು ಮದುವೆಯಾಗಬಹುದೆಂಬ ವಿಚಾರವಾದರೂ ನಮ್ಮ ತಲೆಯಲ್ಲಿ ಯಾವ ಕುಮೂರ್ತದಲ್ಲಿ ಸೇರಿತೋ ಏನೊ. ಎಂಥ ಮೂರ್ಖತನ ನಮ್ಮದು! ನಾವಾಗಿಯೇ ಹೋಗಿ ಆ ತುಂಟ ಹುಡುಗಿಯಿಂದ ಫಜೀತಿಯಾಗಿ ಬಂದೆವಲ್ಲಾ!"

"ಏನೆಂದಳು ಸ್ವಾಮಿಜಿ ಆಕೆ?"

" ನಮ್ಮನ್ನು ಹುಚ್ಚರಾಸ್ಪತ್ರೆಗೆ ಕಳಿಸಬೇಕೆಂದು ಹೇಳಿ ಪಿಸಿಪಿಸಿ ನಕ್ಕಳು, ಮಾರಾಯ. ಅವಳ ಮದುವೆ ನಿಶ್ಚಯವಾಗಿದೆಯಂತೆ ಈಗಾಗಲೆ."

" ಯಾರ ಜತೆಗೆ?"

" ಅದೇ ಆ ಕಿಡಿಗೇಡಿ ಮುಕ್ಕಣ್ಣನ ಜತೆಗೆ," ಎಂದು ಹೇಳಿ ಸ್ವಾಮಿಗಳು ಹಾಸುಗೆಯ ಮೇಲೆ ಬಿದ್ದುಕೊಂಡರು.

" ನೀವೂ ಸಹ ಬಹಳ ದೂರ ಹೋಗಬಾರದಿತ್ತು ಸ್ವಾಮಿಜಿ. ಇಷ್ಟೊಂದು ಹೆಣ್ಣಿನ ಹುಚ್ಚು ಇರಬಾರದು."

ತಲೆದಿಂಬಿಗೆ ಗಲ್ಲವನ್ನು ತಿಕ್ಕುತ್ತ ಸ್ವಾಮಿಗಳೆಂದರು :

" ಇರಬಾರದು. ಸರಿ. ಇರಬಾರದು. ನಾವಾದರೂ ಏನು ಮಾಡೋಣ ಮರಿ? ಹೆಣ್ಣಿನ ಹುಚ್ಚು ನಮ್ಮ ಮನೆತನದ ರಕ್ತದಲ್ಲೇ ಬಂದುಬಿಟ್ಟಿದೆ. ನಮ್ಮಪ್ಪ ಹಾಗಿದ್ದ, ಅವರಪ್ಪ ಹಾಗಿದ್ದ, ಅವರಜ್ಜ ಹಾಗಿದ್ದ. ನಾವೂ ಅವರ ಹಾಗೆ ಆದೆವು...."

" ನೀವು ಮದುವೆಯಾಗಿಬಿಡುವುದೇ ಒಳ್ಳೆಯದು ನೋಡಿ ಸ್ವಾಮಿಜಿ. ಒಂದು ವರ್ಷದೊಳಗಾಗಿ ಈ ಹುಚ್ಚೆಲ್ಲಾ ಇಳಿದು ಹೋದೀತು."

" ಇನ್ನೆಲ್ಲಿಯ ಮದುವೆ ಮರಿ!" ಎಂದು ನುಡಿದು ಸ್ವಾಮಿಗಳು ತಲೆ ದಿಂಬಿಗೆ ಕೆನ್ನೆಗಳನ್ನು ತಿಕ್ಕತೊಡಗಿದರು.

" ನಿಮ್ಮ ಸ್ವಭಾವ ಒಮ್ಮೊಮ್ಮೆ ನನಗೆ ಅರ್ಥವೇ ಆಗುವುದಿಲ್ಲ ನೋಡಿರಿ."

" ನಮಗೇ ಆಗುವುದಿಲ್ಲವಂತೆ. ಇನ್ನು ನಿನಗಾದರೂ ಹೇಗಾದೀತು? ನಮ್ಮಂಥ ವಿಲಕ್ಷಣ ಮನುಷ್ಯರನ್ನು ನೀನು ಬೇರೆಲ್ಲೂ ನೋಡಿರಲಿಕ್ಕಿಲ್ಲ, ಅಲ್ಲವೇ ಮರಿ?"

" ಏನೋ ಒಂದು ಸಮಸ್ಯೆಯಂತಿದ್ದೀರಿ ನೀವು."

ತಲೆದಿಂಬಿನ ಮೇಲೆ ಎಡಗೈ ಊರಿ ಸ್ವಾಮಿಗಳು ವಿಚಿತ್ರವಾಗಿ ನಗುತ್ತ ನುಡಿದರು :

" ಸಮಸ್ಯೆ! ಇದೇನಯ್ಯ, ನೀನೂ ಕತೆಗಾರ ಕಾದಂಬರಿಕಾರರ ಹಾಗೇ ಮಾತಾಡತೊಡಗಿದೆಯಲ್ಲಾ? ಒಬ್ಬ ಮನುಷ್ಯನ ಸ್ವಭಾವವನ್ನು ಸಂಪೂರ್ಣ ವಾಗಿ ಅರಿತುಕೊಂಡು ಪಾತ್ರ ಚಿತ್ರಣ ಮಾಡಬಲ್ಲೆವೆಂದು ಜಂಬ ಕೊಚ್ಚು ತ್ತಿರುತ್ತಾರೆ ಸಾಹಿತಿಗಳು. ತಮ್ಮ ಸ್ವಭಾವವನ್ನಾದರೂ ಸರಿಯಾಗಿ ತಿಳಿದು ಕೊಂಡಿರುತ್ತಾರೋ ಇಲ್ಲವೋ ಅವರು. ಇನ್ನು ಬೇರೆಯವರ ಸ್ವಭಾವ?

ಅವರ ತಲೆ, ಎಂಥ ಬೃಹಸ್ಪತಿಗೂ ಅನ್ಯರ ಚಾರಿತ್ರ್ಯ ಪೂರ್ಣವಾಗಿ ಅರ್ಥವಾಗಲಾರದು. ಈಗ ನಮ್ಮನ್ನೇ ತೆಗೆದುಕೊಳ್ಳೋಣ. ನಮ್ಮ ಸ್ವಭಾವವನ್ನು ಅರ್ಥ ಮಾಡಿಕೊಂಡು ನಮ್ಮ ಮೇಲೇ ಒಂದು ಕಾದಂಬರಿ ಬರೆಯುವ ಪ್ರತಿಭಾಶಾಲಿ ಯಾರಾದರೂ ಇರಬಹುದೇ ?"

"ನಾನೇ ಬರೆಯುತ್ತೇನೆ ಸ್ವಾಮಿಜಿ."

"ಹಾ? ನೀನು? ನೀನು ಬರೆಯುತ್ತೀಯಾ ?" ಎಂದು ಹೇಳುತ್ತಾ ಸ್ವಾಮಿಗಳು ಎದ್ದು ಕುಳಿತರು. "ನಾವು ತಮಾಷೆಗೆಂದು ಹೇಳಿದರೆ ನೀನು ನಿಜಕ್ಕೂ ಬರೆದುಬಿಡುವವನೋ ಏನು? ಈ ಪ್ರಪಂಚದಲ್ಲಿ ನಾವು ಯಾರನ್ನೂ ನಂಬದಂತೆ ಆಯಿತು. ಈ ಕುಟ್ಟೋಶನಿಯೇ ನಿನ್ನನ್ನು ಇಲ್ಲಿಗೆ ಕಳಿಸಿದರೂ ಕಳಿಸಿರಬಹುದು. ನಮ್ಮ ಕೈಲಿ ಅಧಿಕಾರವಿದ್ದಿದ್ದರೆ ಈ ಕಾದಂಬರಿಕಾರರನ್ನೆಲ್ಲ ಅಂದಮಾನ್ ದ್ವೀಪಗಳಿಗೆ ಗಡೀಪಾರು ಮಾಡುತ್ತಿದ್ದೆವು. ಇನ್ನು ನೂರು ವರ್ಷಗಳವರೆಗಾದರೂ ಕಾದಂಬರಿಗಳನ್ನು ಯಾರೂ ಬರೆಯಕೂಡದೆಂದು ಶಾಸನ ವಿಧಿಸುತ್ತಿದ್ದೆವು. ಕಾದಂಬರಿ....ಕಾದಂಬರಿ...." ಎನ್ನುತ್ತಾ ಅವರು ಮಂಚದಿಂದ ಜಿಗಿದು ನನ್ನ ಕಡೆ ನುಗ್ಗಿದರು. ಅವರ ಮುಖದಲ್ಲಿ, ಕಣ್ಣುಗಳಲ್ಲಿ ಹುಚ್ಚಿನ ಕಳೆ ಕುಣಿಯುತ್ತಿದ್ದುದನ್ನು ಕಂಡು ನನಗೆ ಕೊಂಚ ಭಯವಾಗದಿರಲಿಲ್ಲ.

"ಕಾದಂಬರಿ ಬರೆಯುತ್ತೀಯಾ ಕಳ್ಳ ಭಡವಾ...." ಎಂದು ಕೂಗುತ್ತ ಸ್ವಾಮಿಗಳು ನನ್ನನ್ನು ಹೊಡೆಯಲು ಕೈಯೆತ್ತಿದರು.

ಅಂಥ ಸಂದರ್ಭದಲ್ಲಿ ಜಾಣರಾದವರು ಏನು ಮಾಡುವರೋ ಅದನ್ನೇ ನಾನೂ ಮಾಡಿದೆ.

ಆ ಕೊಟಡಿಯಿಂದ ಜಾರಿಕೊಂಡು, ಮೆಟ್ಟಿಲುಗಳ ಮೇಲೆ ಹಾರಿ ನನ್ನ ಕೊಟಡಿಗೆ ಬಂದು ನನ್ನ ಬಟ್ಟೆ ಬರೆ ಹಾಸಿಗೆ ಹೊದ್ದಿಕೆಗಳನ್ನೆಲ್ಲ ಹೊತ್ತುಕೊಂಡು ಮಠದಿಂದ ಪಲಾಯನ ಹೇಳಿಸಿದೆ. ಮುಕ್ಕಣ್ಣನ ಮನೆಯನ್ನು ಮುಟ್ಟುವವರೆಗೆ ದಾರಿಯಲ್ಲಿ ಎಲ್ಲೂ ನಿಲ್ಲಲಿಲ್ಲ.

★

ಜೂಜಿನ ಕುದುರೆಯಂತೆ ತೇಕುತ್ತ ಬಂದ ನನ್ನನ್ನು ಕಂಡೊಡನೆಯೆ ಮುಕ್ಕಣ್ಣ, ಮಂಗಲಾದೇವಿ, ಕುಟ್ಟೋಶನಿ ಎಲ್ಲರಿಗೂ ಆಶ್ಚರ್ಯವಾಗದಿರಲಿಲ್ಲ.

"ಬೆಂಕಿ ಬಿದ್ದ ಮನೆಯಿಂದ ಓಡಿಬಂದವರಂತೆ ಹೀಗೇಕೆ ಓಡಿಬಂದಿರಿ? ಏನಾಯಿತು?" ಎಂದು ಪ್ರಶ್ನಿಸಿದ ಕುಟ್ಟ್ರೋಶನಿ.

ಮಂಗಲಾದೇವಿಯವರು ತಂದುಕೊಟ್ಟ ಒಂದು ತಂಬಿಗೆ ನೀರನ್ನು ಗಟಗಟನೆ ಕುಡಿದು, ಸ್ವಲ್ಪ ದಣಿವಾರಿಸಿಕೊಂಡ ಬಳಿಕ ನಾನು ಮಠದಲ್ಲಿ ನಡೆದುದೆಲ್ಲವನ್ನೂ ವಿಶದವಾಗಿ ತಿಳಿಸಿದೆ.

"ಹುಚ್ಚು ಹಿಡಿಯುವಂಥ ಪ್ರಸಂಗವೇ ಸರಿ. ಪಾಪ....ಪಾಪ...." ಎಂದು ಅನುಕಂಪವನ್ನು ಸೂಚಿಸಿದರು ಮಂಗಲಾದೇವಿ.

"ಏನಮ್ಮಾ, ಅಂಥವನಿಗೆ ಹಾಗೇ ಆಗಬೇಕು. ಪಾಪ ಪಾಪ ಅನ್ನುತ್ತೀಯಲ್ಲಾ?" ಎಂದ ಮುಕ್ಕಣ್ಣ.

"ಅವರ ತಪ್ಪುಗಳ ಬಗ್ಗೆ ತೀರ್ಪು ಕೊಡಲು ನಾವು ಯಾರು ಮಗೂ? ನಾನು ಹೇಳುವುದು ನಿನಗೀಗಲೇ ಅರ್ಥವಾಗಲಿಕ್ಕಿಲ್ಲ. ನೀನೂ ನನ್ನ ವಯಸ್ಸಿನವನಾದಾಗ ಆದೀತು," ಎಂದು ನುಡಿದು ಮಂಗಲಾದೇವಿ ತಂಬಿಗೆಯನ್ನೆತ್ತಿಕೊಂಡು ಒಳಗೆ ಹೋದರು.

★

ಮಾರನೆಯ ದಿನ ಬೆಳಗ್ಗೆ ಹೊರಟ "ವೀರಶೈವಾವತಾರ"ದಲ್ಲಿ ಸ್ವಾಮಿಗಳ ಬಗೆಗೆ ಉದ್ದವಾದ ಲೇಖನವೊಂದು ಪ್ರಕಟವಾಗಿ ಬಂದಿತು.

ಮಠದ ಆಭರಣಗಳನ್ನು ಹಾರಿಸಿ ಅವುಗಳ ಬದಲು ನಕಲೀ ಮಾಲು ತಂದಿರಿಸಿದ್ದು, ಮೂವತ್ತು ಸಾವಿರ ರೂಪಾಯಿ ಮಾಯ ಮಾಡಿದ್ದು, ಕುಟ್ಟಪ್ಪಾ ಫಂಡಿನ ಹಣ ಹಾರಿಸಿದ್ದು, ಏಕೀಕರಣ ಸರ್ವಧರ್ಮ ಸಮನ್ವಯಗಳ ನೆಪದಿಂದ ಅಲ್ಲಿ ಇಲ್ಲಿ ಅಲೆಯುತ್ತ ಎಲ್ಲ ಕಡೆಗಳಲ್ಲೂ ಸೂಳೆಯನ್ನಿಟ್ಟುಕೊಂಡದ್ದು – ಇವೇ ಮೊದಲಾದ ವಿಷಯಗಳನ್ನೆಲ್ಲ ಹೊರಗೆಡವಿದ್ದ ಗುಂಡಾಡಯ್ಯ. ಪೀಠದ ಪಾವಿತ್ರ್ಯವನ್ನೆಲ್ಲ ಹಾಳು ಮಾಡಿದ ಈ ಸ್ವಾಮಿಯನ್ನು ತೆಗೆದುಹಾಕಿ ಬೇರೊಬ್ಬರನ್ನು ನಿಯಮಿಸಲು ಟ್ರಸ್ಟ್ ಕಮಿಟಿ ನಿರ್ಧರಿಸಿರುವ ವಿಚಾರವನ್ನೂ ಪ್ರಕಟಿಸಿದ್ದ.

"ಇವನ್ನೋದುತ್ತಲೂ ನಿಮ್ಮ ಸ್ವಾಮಿಗಳು ನೂರಕ್ಕೆ ನೂರರಷ್ಟು ಹುಚ್ಚರಾಗಿ ಹೋಗುವರೇನೋ," ಎಂದ ಮುಕ್ಕಣ್ಣ.

" ಹಾಗೆಲ್ಲ ಹುಚ್ಚು ಹತ್ತಿಸಿಕೊಳ್ಳುವ ಆಸಾಮಿಯಲ್ಲ ಅದು. ಎಂಥ ಪ್ರಸಂಗ ಬಂದರೂ ಅದರಿಂದ ಪಾರಾಗುವ ದಾರಿ ಹುಡುಕುತ್ತಿರುತ್ತದೆ," ಎಂದ ಕುಟ್ರ್ಯೋಶನಿ.

ಅರದು ರಾತ್ರಿ ಊಟ ಮಾಡಿದ ಬಳಿಕ ನಾವು ಮೂವರೂ ಮನೆ ಯೆದುರಿನ ಕಟ್ಟೆಯ ಮೇಲೆ ಮಾತನಾಡುತ್ತ ಕುಳಿತಿದ್ದ ಹಾಗೆ ದೂರದಿಂದ ನೂರಾರು ಜನರು ಓಡುತ್ತ ಬರುವುದನ್ನು ಕಂಡು ಚಕಿತರಾಗಿ ಎದ್ದು ನಿಂತೆವು.

ಆ ಜನರಲ್ಲೊಬ್ಬನನ್ನು ತಡೆದು ನಿಲ್ಲಿಸಿ ಮುಕ್ಕಣ್ಣ ಕೇಳಿದ: " ಏನು ಸಮಾಚಾರ? ನೀವೆಲ್ಲಾ ಎತ್ತ ಓಡುತ್ತಿದ್ದೀರಿ?"

" ಮಠಕ್ಕೆ ನಮ್ಮ ಜಗದ್ಗುರು ಪೀಠವನ್ನೆಲ್ಲಾ ಹಾಳುಮಾಡಿ ಹೊಲಗೇರಿ ಮಾಡಿದ ಈ ಢೋಂಗೀ ಸ್ವಾಮಿಯನ್ನು ಹೊರಗೆ ಹಾಕಿ ಮತ್ತೆ ನಮ್ಮ ಮರಿ ಸ್ವಾಮಿಗಳನ್ನು ಪಟ್ಟಕ್ಕೇರಿಸುವವರಿದ್ದಾರೆ ಗುರುಶಾಂತಣ್ಣನವರು...."

" ಯಾವ ಮರಿಸ್ವಾಮಿ ?"

" ಈ ಕಳ್ಳಕೊರಮ ಬರುವುದಕ್ಕೆ ಮೊದಲು ಇದ್ದರಲ್ಲಾ – ಅವರೇ. ಅವರನ್ನು ಅನ್ಯಾಯವಾಗಿ ಹೊರಗೆ ಹಾಕಿ ನಮ್ಮನ್ನೆಲ್ಲ ಬಡಿದು ರಕ್ತ ತೆಗೆದು ಅವಮಾನಗೊಳಿಸಿದ್ದರಲ್ಲಾ ಆ ಖರೇಸೆಟ್ಟಿ ಪಾರ್ಟಿಯವರು! ಅದನ್ನು ನೆನೆದು ಕೊಂಡರೇ ಮೈ ಉರೀತದೆ. ಬರಲಿ ಕಾಲ ಅಂತ ಸುಮ್ಮನಿದ್ದರು ನಮ್ಮ ಗುರುಶಾಂತಣ್ಣ. ಈಗ ನೋಡಿರಿ, ಹೇಗಾಯಿತು....ಆ ಖರೇಸೆಟ್ಟಿ ಕರಲಿಂಗ ಇಬ್ಬರನ್ನೂ ಅರೆಸ್ಟ್ ಮಾಡಿಸಿ ಪೋಲೀಸರ ಕೈಗೆ ಕೊಡಿಸಿದ್ದಾರೆ. ಸ್ವಾಮಿ ಇವರು ಕೂಡಿ ವಸಲತ್ತು ಮಾಡಿಕೊಂಡೇ ಮಠದ ಆಭರಣ ದುಡ್ಡು ಎಲ್ಲಾ ಹಾರಿಸಿದ್ದಾರಂತೆ. ಸ್ವಾಮಿಯೇ ಜವಾಬು ಕೊಟ್ಟಿದ್ದಾನಂತೆ ಪೋಲೀಸ ರೆದುರಿಗೆ...." ಎಂದು ಹೇಳಿದವನೆ ಆತ ಮತ್ತೆ ಓಟ ಬಿಟ್ಟ.

" ಅಂತೂ ಗುರುಶಾಂತಪ್ಪ ಚೆನ್ನಾಗಿ ಸೇಡು ತೀರಿಸಿಕೊಂಡ," ಎಂದು ನಾನು ಮನಸ್ಸಿನಲ್ಲಿ ಹೇಳಿಕೊಂಡೆ.

ಮಠದಲ್ಲಿ ನಡೆಯುವದನ್ನೆಲ್ಲ ಕಣ್ಣಾರ ಕಾಣುವ ಕುತೂಹಲದಿಂದ ನಾವು ಮೂವರೂ ಅಲ್ಲಿಗೆ ಹೊರಟೆವು.

ಮಠದ ವಿಶಾಲವಾದ ಅಂಗಳದಲ್ಲಿ ಜನಜಂಗುಳಿ ಬಗೆ ಬಗೆಯಾಗಿ ಕೂಗುತ್ತ ನಿಂತುಕೊಂಡಿದ್ದಿತು. ಮುಕ್ಕಣ್ಣ ಅವರಲ್ಲೊಬ್ಬನನ್ನು ಪ್ರಶ್ನಿಸಿದ:

" ಬಡಿದಾಟವೇನೂ ಆಗಲಿಲ್ಲವಷ್ಟೆ ?"

"ಬಡಿದಾಟ? ನಮ್ಮ ವಿರುದ್ಧ ಬಡಿದಾಡಲು ಮಂದಿಯಾದರೂ ಎಲ್ಲಿದ್ದಾರೆ ಅವರ ಕಡೆಗೆ?

"ಸ್ವಾಮಿಗಳೆಲ್ಲಿದ್ದಾರೆ?"

"ಮರಿಸ್ವಾಮಿಗಳನ್ನು ಕರೆದುಕೊಂಡು ನಾವೆಲ್ಲಾ ಬಂದದ್ದು ಗೊತ್ತಾಗುತ್ತಲೂ ಇನ್ನು ತನ್ನ ಜೀವವೇ ಉಳಿಯುವುದಿಲ್ಲವೆಂದು ಅವನಿಗೆನ್ನಿಸಿತೋ ಏನೊ – ಕಾವಿ ಬಟ್ಟೆ ತೆಗೆದು ಸೀರೆಯುಟ್ಟುಕೊಂಡು ಹಿಂದಿನ ಬಾಗಿಲಿನಿಂದ ತಪ್ಪಿಸಿಕೊಂಡು ಹೊರಟಿದ್ದನಂತೆ...." ಎಂದು ನುಡಿದು ಆ ಗೃಹಸ್ಥ ನಗತೊಡಗಿದ.

"ತಪ್ಪಿಸಿಕೊಂಡೇ ಬಿಟ್ಟರೆ?"

"ತಪ್ಪಿಸಿಕೊಳ್ಳಲು ಬಿಟ್ಟಾರೇನ್ರೀ ನಮ್ಮ ಗುರುಶಾಂತಣ್ಣ? ಸ್ವಾಮಿ ಓಡಿಹೋಗಬಹುದೆಂದು ಅವರಿಗೆ ಮೊದಲೇ ಸಂಶಯವಿದ್ದಿತಂತೆ. ಅದಕ್ಕಾಗಿ ಹಿಂದಿನ ಬಾಗಿಲಿಗೂ ಜನರನ್ನಿಟ್ಟು ಯಾರನ್ನೂ ಹೊರಗೆ ಬಿಡಬಾರದೆಂದು ಹೇಳಿದ್ದರಂತೆ. ಸೀರೆಯುಟ್ಟುಕೊಂಡ ಸ್ವಾಮಕ್ಕನ ಸವಾರಿ ಸುಲಭವಾಗಿ ಸಿಕ್ಕಿತು ಅವರ ಕೈಯೊಳಗೆ."

"ಈಗ ಎಲ್ಲಿದ್ದಾರೆ ಅವರು?"

"ಇನ್ನೆಲ್ಲಿ ಇರಬೇಕು? ಖರೇಸೆಟ್ಟಿ ಕರಲಿಂಗರ ಜೊತೆಯಲ್ಲೇ ಇದ್ದಾರೆ...." ಎಂದು ಹೇಳಿ ಆತ ಗಟ್ಟಿಯಾಗಿ ನಗತೊಡಗಿದ. ಅವನ ಸುತ್ತಲಿದ್ದ ಜನರೂ ನಗತೊಡಗಿದರು.

ನಮಗೆ ಮಾತ್ರ ನಗೆ ಬರಲಿಲ್ಲ.

ಮೌನವಾಗಿ ಮಠದ ಅಂಗಳವನ್ನು ತ್ಯಜಿಸಿ, ಮೆಲ್ಲ ಮೆಲ್ಲನೆ ಹೆಜ್ಜೆ ಹಾಕುತ್ತ ನಾವು ಮನೆಯ ಕಡೆ ಸಾಗಿದೆವು.

——

ಶಾರದಾ ಪ್ರಕಟನಾಲಯದ ಪ್ರಕಟನೆಗಳು

					ಬೆಲೆ	
೧.	ಕಾರವಾನ್ (ದ್ವಿತೀಯ ಮುದ್ರಣ)	....	....	೧	೪	೦
೨.	ಸ್ವಾತಂತ್ರ್ಯದೆಡೆಗೆ (ದ್ವಿತೀಯ ಮುದ್ರಣ)	....	....	೨	೪	೦
೩.	ಜೀವನ – ಕಲೆ *	....	....	೧	೦	೦
೪.	ಮುಗುಳುನಗೆ *	....	....	೧	೪	೦
೫.	ಸ್ವಪ್ನಸುಂದರಿ (ದ್ವಿತೀಯ ಮುದ್ರಣ)	....	....	೧	೪	೦
೬.	ಆಲದ ಹೂ	....	....	೧	೧೨	೦
೭.	ಹುಡುಗಾಟ	....	....	೧	೪	೦
೮.	ಶವದ ಮನೆ	....	....	೧	೪	೦
೯.	ಎದಿರೇಟು	....	....	೧	೮	೦
೧೦.	ಸರ್ವಮಂಗಳಾ (ದ್ವಿತೀಯ ಮುದ್ರಣ)	....	....	೩	೮	೦
೧೧.	ಕೇಡಿಗನ ಕಿಡಿಗಳು	....	....	೧	೦	೦
೧೨.	ದೇವತೆಗಳು ನಕ್ಕಾಗ	....	....	೧	೪	೦
೧೩.	ಜ್ವಾಲಾಮುಖಿಯ ಮೇಲೆ	....	....	೪	೦	೦
೧೪.	ನನ್ನ ರಸಿಕ ಮತ್ತು ಬಂಗಾರದ ಗೆಜ್ಜೆ	....	....	೧	೮	೦
೧೫.	ಹಾಳು – ಮೂಳು	....	....	೧	೦	೦
೧೬.	ನಾಡಿಗೇರರ ನಗೆಬರಹಗಳು ೧	....	....	೧	೪	೦
೧೭.	ಮೋಹದ ಬಲೆಯಲ್ಲಿ	....	....	೫	೧೨	೦
೧೮.	ಸಾವಿನೊಂದಿಗೆ ಸರಸ	....	....	೧	೪	೦
೧೯.	ಅನುರಾಗ	....	....	೧	೪	೦
೨೦.	ಬಿಡುಗಡೆಯ ಬೇಡಿ *	....	....	೩	೪	೦
೨೧.	ಜೋಳದ ಬೆಳೆಯ ನಡುವೆ	....	....	೧	೪	೦
೨೨.	ಜರತಾರಿ ಜಗದ್ಗುರು	....	....	೧	೮	೦
೨೩.	ಕಾನ್ವೆಂಟ್ ಗರ್ಲ್ *	....	....	೧	೦	೦
೨೪.	ಖಾನಾವಳಿಯ ನೀಲಾ *	....	....	೧	೦	೦
೨೫.	ರಂಗನಾಯಕಿ	....	....	೨	೦	೦

* ಪ್ರತಿಗಳು ಮುಗಿದಿವೆ.

೨೬.	ಮದುವೆ ಮಾಡಿ ನೋಡು	....	....	೧	೦	೦
೨೭.	ಕಲ್ಯಾಣಿ (ದ್ವಿತೀಯ ಮುದ್ರಣ)	....	....	೧	೮	೦
೨೮.	ನೀ ನನ್ನ ಮುಟ್ಟಬೇಡ	....	....	೧	೮	೦
೨೯.	ನನ್ನ ದೇವರು ('ಕುವೆಂಪು' ರವರ ಕಥಾಸಂಕಲನ)		....	೧	೪	೦
೩೦.	ಕಾಮಿನಿ – ಕಾಂಚನ (ದ್ವಿತೀಯ ಮುದ್ರಣ)....		....	೧	೮	೦
೩೧.	ಜನಿವಾರ ಮತ್ತು ಶಿವದಾರ (ದ್ವಿತೀಯ ಮುದ್ರಣ)		....	೧	೮	೦
೩೨.	ಮಲ್ಲಿ	....	....	೧	೮	೦
೩೩.	ಆನಂದ ಲಹರಿ	....	....	೦	೧೨	೦
೩೪.	ಸೀತಾ – ರತ್ನ	....	....	೦	೧೨	೦
*೩೫.	ನಾಡಿಗೇರರ ನಗೆಬರಹಗಳು ೨	....	....	೧	೮	೦
೩೬.	ನಾನು ಪೋಲೀಸನಾಗಿದ್ದೆ	....	....	೧	೮	೦
೩೭.	ರಾಗಿಣಿ	....	....	೧	೮	೦
೩೮.	ಮಧುಚಂದ್ರ	....	....	೦	೧೨	೦
೩೯.	ಬಂಗಾರದ ಜಿಂಕೆಯ ಹಿಂದೆ	....	....	೧	೮	೦
೪೦.	ಬಣ್ಣದ ಮಾಲಿಂಗ	....	....	೧	೮	೦
೪೧.	ಗೋವಾದೇವಿ	....	....	೧	೮	೦
೪೨.	ಪಟ್ಟಣದ ಹುಡುಗಿ (ನಾಟಕ)	....	....	೧	೪	೦
೪೩.	ಪಾಪಕೂಪ	....	....	೧	೮	೦
೪೪.	ಪಾತರಗಿತ್ತಿ	....	....	೧	೮	೦
೪೫.	ರೂಪಸರ್ಪಿಣಿ	....	....	೧	೮	೦
೪೬.	ಕಾಂಚನ – ಗಂಗಾ	....	....	೧	೮	೦

---

* ಪ್ರತಿಗಳು ಮುಗಿದಿವೆ.

ಕನ್ನಡ ಸಮಾಜದಲ್ಲಿ ಬಿರುಗಾಳಿಯೆಬ್ಬಿಸಿದ ಕಾದಂಬರಿ

ಜರತಾರಿ ಜಗದ್ಗುರು

★

"ಸಮಾಜದಲ್ಲಿನ ಅನ್ಯಾಯ ದುರಾಚಾರಗಳನ್ನು ಇದ್ದುದಿದ್ದಂತೆಯೇ ನಿರ್ದಾಕ್ಷಿಣ್ಯವಾಗಿ ಚಮತ್ಕಾರಿಕವಾಗಿ ಬಹಿರಂಗ ಪಡಿಸುವ ಕಾದಂಬರಿಗಳ ರಚನೆಯಲ್ಲಿ ಹೆಸರಾಂತ ಶ್ರೀ ಬಸವರಾಜ ಕಟ್ಟೀಮನಿಯವರು ಇದೀಗ ಮಠಗಳ ಗದ್ದುಗೆಗಳ ಮರೆಯಲ್ಲಿ ಧರ್ಮದ ಮುಸುಕಿನ ಹಿಂದೆ ನಡೆಯುವ ಅತ್ಯಾಚಾರವನ್ನು "ಜರತಾರಿ ಜಗದ್ಗುರು" ಕಾದಂಬರಿಯಲ್ಲಿ ಬಣ್ಣಿಸಿದ್ದಾರೆ. ಈಗಾಗಲೇ, ಹೆಸರುವಾಸಿಯಾಗಿರುವ ಅವರ 'ಮೋಹದ ಬಲೆಯಲ್ಲಿ' ಕಾದಂಬರಿಯ ಮುಂದಿನ ಭಾಗದಂತೆ ಇದನ್ನು ಬೆಳೆಸಿಕೊಂಡಿದೆಯಾದರೂ ಇದಿಷ್ಟನ್ನೇ ಪ್ರತ್ಯೇಕ ಸ್ವತಂತ್ರ ಕಾದಂಬರಿಯಾಗಿ ಓದಬಹುದಾಗಿದೆ.

"ಈ ಕಾದಂಬರಿಯನ್ನು ರಚಿಸುವಾಗ ಶ್ರೀ ಕಟ್ಟೀಮನಿಯವರು ಸಂಕುಚಿತ ಭಾವನಾದೂರವಾದ, ಮತೀಯ ಅಂಧಶ್ರದ್ಧೆಯಿಂದ ನಿರ್ಲಿಪ್ತವಾದ, ನಿಷ್ಪಕ್ಷಪಾತ ನಿರ್ಭೀತ ದೃಷ್ಟಿಕೋನವನ್ನು ಬೀರಿರುವುದನ್ನು ಸಮಾಜ ಸುಧಾರಣಾ ಪ್ರೇಮಿಗಳೆಲ್ಲರೂ ನ್ಯಾಯನಿಷ್ಠರೆಲ್ಲರೂ ಅಭಿನಂದಿಸುವುದಷ್ಟೇ ಅಲ್ಲ, ಸ್ವಾಗತಿಸಿ ಅನುಸರಿಸಬೇಕಾಗಿದೆ."

— ತಾಯಿನಾಡು.

★

ಬಸವರಾಜ ಕಟ್ಟೀಮನಿಯವರ ಪ್ರಗತಿಶೀಲ ಕಾದಂಬರಿಯ

ಜನಪ್ರಿಯ ಆವೃತ್ತಿ